ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾ ನಿರ್ಣಯ — ವರ್ಷ ೧ಕ್ಕೆ ರೂ 1-4-0 ಟಪ್ಪಾಲು ಹಾಸಲು ಶೇರಿ ರೂ. 2 1 0

ಪುಸ್ತಕ 4 | ಮಂಗಳೂರು, ತಾರೀಕು 6ನೇ ಶುಕ್ರವಾರ ಮೇ 1910 | ಸಂಚಿಕೆ 18.

Amrutanjan Depot Fort Bombay.

ಅಮೃತಾಂಜನ

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು. ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯ ಪಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು. ಬಾಟ್ಲಿ ೧ರ ಕಿಮ್ಮತು 8 ಆಣೆ.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿ ೧ರ ಕಿಮ್ಮತು 6 ಆಣೆ. ೧೨ ಡಬ್ಬಿ ರೂ 4.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು ೨ ಆಣೆ.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪ್ರುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮಿಯಿಸ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1.

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ಹಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳೆಯುವವು. ಇದಕ್ಕೆ ಮನೋಹರವಾದ ಪರಿಮಳ ಸಹ ಇದೆ. ಬಾಟ್ಲಿ ಒಂದರ ಕಿಮ್ಮತು ರೂ 1

ಸುಂದರಿ ತೈಲ.

ಇದನ್ನು ಮೋರೆಗೆ ಹಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು. ಬಾಟ್ಲಿ ಒಂದರ ಕಿಮ್ಮತು 8 ಆಣೆ

ಖಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತು 3 ಆಣೆ

ಜುಲಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತು 8 ಆಣೆ.

ವಿಳಾಸ:—ಅಮೃತಾಂಜನ ಡಿಪೊ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ವಿಳಾಸ:—ಅಮೃತಾಂಜನ್, ಮುಂಬಯಿ.

ಸುಗಂಧ ದ್ರವ್ಯಗಳು.

ನಮ್ಮ ಸ್ವಂತ ಪರಮಾಯಿಷಿಯಾಗಿ ತಯ್ಯಾರು ಮಾಡಿ ವಿಕ್ರಯಕ್ಕೆ ಸಿದ್ಧವಾಗಿರುವ ಸುಗಂಧ ದ್ರವ್ಯಗಳು.

ತರಹೇವಾರಿ ಊದುಬತ್ತಿ 24 ರೂ. ತೂಕದ ಶೇರು 1ಕ್ಕೆ

	ರೂ ಆ ಪೈ	ರೂ ಆ ಪೈ
1 ಖಾಸಾ ಅಂಬರ್ ಬತ್ತಿ	6—0—0	5—0—0
2 ಕೇಸರಿ ಬತ್ತಿ	4—0—0	3—8—0
3 ಜವ್ವಾಜಿ ಕಸ್ತೂರಿ ಬತ್ತಿ	3—0—0	2—8—0
4 ಪುನಗು ಬತ್ತಿ	1—8—0	1—0—0
5 ಪನ್ನೀರು ಬತ್ತಿ	0—10—0	0—8—0
6 ಉತ್ತಮವಾದ ದಶಾಂಗ	0—12—0	

ಗಂಧದ ಬಿಲ್ಲೆಗಳು.

	1 ತೊಲೆ	1 ತೊಲೆ	1 ತೊಲೆ
1 ಪುದುಕೋಟೆ ಬಿಲ್ಲೆ	3-0-0	1—8—0	0-12-0
2 ಕಸ್ತೂರಿ ಬಿಲ್ಲೆಗಳು.	1-8-0	0-12-0	0-6-0
3 } 1 ಕೇಸರಿ ಬಿಲ್ಲೆ	0-8-0	0-4-0	0-2-0
2 ಡಿಟ್ಟೊ	0-4-0	0-2-0	0-1-0

ಕಾಲು ತೊಲೆ ತೂಕ ಉಳ್ಳ ಕೇಸರಿ ಬಿಲ್ಲೆ 100ಕ್ಕೆ 10 ರೂ -5ರೂ.

4 ಅವಲ್ ಪಸಂ ಬಿಲ್ಲೆ	0-8-0	0-4-0	0-2-0
ಎರಡನೇ ರಕಂ	0-4-0	0-2-0	0-1-0

ಕಾಲು ತೊಲೆ ತೂಕ ಉಳ್ಳ ಪಸಂ ಬಿಲ್ಲೆ 100ಕ್ಕೆ 8ರೂ 5ರೂ

5 ಅರಗಜ ಅಥವಾ ಜವ್ವಾಜಿ ಗಂಧ ತೊಲಾ 1ಕ್ಕೆ 1 0-0

ಪರಸ್ಥಳದವರಿಗೆ ಟಪ್ಪಾಲ್ ಖರ್ಚು ಮತ್ತು ಪ್ಯಾಕಿಂಗ್ ಖರ್ಚು ಅಲಾಯಿದಾ ಬೀಳುತ್ತೆ. ಪೇಟ್ರನ್ಸ್ ಸಾಮಾನುಗಳನ್ನು ಈ ಸಮಾಚಾರದಿಂದ ಪ್ರೋತ್ಸಾಹಿಸುವಿರೆಂದು ಕೋರುತ್ತೇನೆ

ಯಂ ನರಸಿಹ್ಮ ಶಾಸ್ತ್ರಿ, ಸುಗಂಧಕಾರಿ,
ಶಂಕರಪುರ ಬೆಂಗಳೂರು ಸಿಟಿ

ಮುಖತ್ತು ೧೯೧೦ನೇ ವರುಷದ ಕ್ಯಾಲೆಂಡರು ಮುಖತ್ತು

ಕಾನಪೂರ್ ಜಮಖಾನ ಚೌಕಗಳು.

ಸೈಜು 40×40. ಪಚ್ಚೆ, ಗುಲಾಬಿ ಊದ, ಹಸರು, ಕರಿಂದು, ಕೇಸರಿ, ಬಿಳುಪು, ಚಾಕಲೆಟ್ ಮತ್ತು ಇತರ ರಂಗುಗಳಲ್ಲಿಯೂ 1ಕ್ಕೆ ರೂ 1—4—0

ರೇಷ್ಮೆ ಅಂಚು ಕಟ್ಟಿ ಹೊಲಿದುದಕ್ಕೆ 1ಕ್ಕೆ ಕಿಮ್ಮತ್ತು 0—1—0

ಶತರಂಜಿಗಳು.

ಉದ್ದ 6 ಮೊಳ ಅಗಲ 3 ಮೊಳ ಎಲ್ಲಾ ರಂಗುಗಳಲ್ಲಿಯೂ 1ನೇ ನಂಬರು 1ಕ್ಕೆ ರೂ 1-4-0 2ನೇ ನಂಬರು 0—12—0 3ನೇ ನಂಬರು 3—8—0

ರೇಷ್ಮೆ ಅಂಚು ಕಟ್ಟಿ ಹೊಲಿದುದಕ್ಕೆ 1ಕ್ಕೆ ಕಿಮ್ಮತ್ತು 0-4—0

ಸಾಚಾ ಬೆಳ್ಳೀ ಕಲಾವತ್ತು "ಜರಿ"

	ಕಾಲು ಇಂಚು,	ಅರ್ಧ ಇಂಚು,	ಮುಕ್ಕಾಲು ಇಂಚು,
1ನೇ ನಂಬರು	0—10—0	1—1—0	
2ನೇ ನಂಬರು	0—14—0,	1—8—0,	2—4—0

ರೇಷ್ಮೆ ನೆಮಕಟ್ಟುಗಳು.

ಕೆಂಪು, ಪೊಪಟ, ಹಳದಿ, ನೀಲಿ, ಹಸರು, ಮೊದಲಾದ ರಂಗುಗಳಲ್ಲಿ ಸೈಜು ಉದ್ದ 5-6 ಮೊಳ, ಅಗಲ 3 ಇಂಚು, 1ಕ್ಕೆ ರೂ 1-4-0, 1-8-0, 2-4-0, 2-8-0, 3-0-0

ಚಿತ್ರಾಸನ 3-0-0, 4-0-0, 5-0-0, 6-0-0

ಡಿಟ್ಟೊ, ಗಜ 1ಕ್ಕೆ 1-8-0

ರೇಷ್ಮೆ ಅಂಚುಗಳು ಗಜ 1ಕ್ಕೆ ಆಣೆ 2, 3, 4, 5

ಮಕ್‌ಮಲ್ ಅಂಚು ಗಜ 1ಕ್ಕೆ ಆಣೆ 4, 5, 6

ದೇವರುಗಳಿಗೆ ಉಪಯೋಗಿಸುವ ರೇಷ್ಮೆ ಗುಲಾಬಿ ಕೆಂಪು, ಊದ, ಹಸರು ರಂಗುಗಳಲ್ಲಿ ಗಜ 1ಕ್ಕೆ ರೂ 1-6-0, 2-8-0, 3-0-0

ದಾರದ ಬನೀನುಗಳು 1ಕ್ಕೆ ಆಣೆ 4, 5, 6, 7, 8

ಉಲನ್ ಬನೀನುಗಳು 1ಕ್ಕೆ ರೂ. 2-4-0, 2-8-0, 3-0-0, 3-8-0.

ಫಿಲ್ಟ ಕ್ಯಾಪ್‌ಗಳೂ ಕ್ರಿಸ್ಟಿಸ್ 1ಕ್ಕೆ ರೂ. 1-12-0, 2-4-0, 2-8-0 2-12-0

ಇಟಲಿ ಕ್ಯಾಪ್‌ಗಳು 1ಕ್ಕೆ ರೂ 0-12-0, 1-0-0, 1-4-0, 1-8-0.

ಹಾಸನದ ಬೋಪಿಗಳು ಡಜನ್ 1ಕ್ಕೆ ರೂ 4-0-0, 4-4-0, 4-8-0, 5-8-0, 6-0-0, 7-0-0, 8-0-0, 9-0-0, 10-0-0, 12-0-0,

ಪೇಟ ಕಟ್ಟುವ ತರಹೆವಾರಿ ರಂಗುಗಳ ಬಟ್ಟೆ ಗಜ 1ಕ್ಕೆ 0-6-0, 0-8-0, 0-10-0, 0-12-0.

ಕುಪ್ಪಸಕ್ಕೆ ಮತ್ತು ಪರಕಾರಕ್ಕೆ ಉಪಯೋಗಿಸುವ ಚೀಟುಗಳು ಗಜ 1ಕ್ಕೆ ಆಣೆ 6, 8, 10, 12.

ಕೇಶರಂಜನ ತೈಲ ಬಾಟ್ಲು	1ಕ್ಕೆ	ರೂ.	0—11—0.
ಕುಂತಳ ಕೌಮುದಿ ತೈಲ	,,	,,	0—12—0.
ಕಮೋನಿಯಾ ಓಯಿಲ್	,,	,,	1—0—0.
ಭೃಂಗಾಮಲಕ ತೈಲ ಸೀಸೆ	,,	,,	0—4—0, 0-8-0, 1-0-0
ಕಸ್ತೂರಿ ಮಾತ್ರೆ ಸೀಸೆ		,,	0—4—0.

ಎಲ್. ಎ. ಶೋರುವಾಲ್

ನರ್ಸರಿ ...

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ... ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ... ಗಳು, ಶೇಬು, ಕಿತ್ತಳೆ ವಗೈರೆ ಹಣ್ಣುಗಳು, ಇಂಗ್ಲೀಷು ಮತ್ತು ... ಪಲ್ಯಗಳೂ, ತುರಾಯಿ, ಹಾರಾ ವಗೈರೆ ಹುವ್ವುಗಳು, ಬೇಕಾದವರು ... ಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕ್ರಯವು ತಿಳಿಸುತ್ತೇವೆ.

ಹೆಚ್. ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು.

"ವಿದ್ಯಾನಂದ" ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

" ರಘುವಂಶ ಮಹಾಕಾವ್ಯ "

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ಗ ಪ್ರಿಂಟಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

ಹೆಚ್ಚು ಟಿಪ್ಪಣಿಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಇರುತ್ತದೆ ಬೆಲೆ 0—4—0

ವಿಳಾಸ:— ಮ್ಯಾನೇಜರ್,
ವಿದ್ಯಾನಂದ ಆಫೀಸು,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಮೆನ್‌ಶಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಪದ್ಮಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಿದ್ದಾರೆ

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನವಾದ ನಂತರವೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತ ಉಪಯುಕ್ತವಾದದ್ದು. ಇದರಲ್ಲಿ ಆಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರೆಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ್.,
216 ಕಾರನ್‌ವಾಲಸ್ ಬೀದಿ. ಕಲ್ಕತ್ತಾ

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. ಶೋರುವಾಲ್ ಎಂಡ್ ...

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 6ನೇ ಮೇ 1910

ಅಮೇರಿಕದ ಸಾಂಪತ್ತಿಕ ಅಭಿವೃದ್ಧಿಯು.

ಹಿಂದೂಸ್ಥಾನದಲ್ಲಿ ದೇಶ ಸಮೃದ್ಧಿಯ ಪ್ರಯತ್ನಗಳು ನಡೆಯುತ್ತಿರುವಾಗ ಇತರ ದೇಶಗಳಲ್ಲಿ ಇದು ಹ್ಯಾಗೆ ಸಾಧ್ಯವಾಯಿತೆಂಬುವುದನ್ನು ತಿಳುಕೊಳ್ಳುವುದುಪಯುಕ್ತ ಹೆಚ್ಚು ಕಡಿಮೆ ೨೫೦ ವರುಷಗಳ ಹಿಂದೆ ಕಾಡುಜನರಿಂದಾಗಿ ಕಾಡುನಿವಾಸಿಗಳಿಂದ ನಿವಾಸಿಸಲ್ಪಟ್ಟಿದ್ದ ಅಮೇರಿಕದ ಸಂಯುಕ್ತ ಸಂಸ್ಥಾನವು ಜಗತ್ತಿನಲ್ಲಿ ಈಗ ಕೈಗಾರಿಕೆಗಳಲ್ಲಿ ಒಂದನೇ ಸ್ಥಾನವನ್ನು ಪಡಕೊಂಡಿರುವುದು. ಬ್ರಿಟಿಷ ದ್ವೀಪಗಳಿಂದ ೨೫೦ ವರುಷಗಳ ಹಿಂದೆ ಈ ದೇಶಕ್ಕೆ ಹೋಗಿ ಅಲ್ಲಿ ಉಳಕೊಂಡು ನವೀನ ವಸಾಹತಿಗಳನ್ನು ಸ್ಥಾಪಿಸಿದ ನಿವಾಸಿಕರು ಪಶ್ಚಾತ್ಯ ಇತರ ದೇಶಗಳಿಂದ ಹೊರಟು ಬಂದ ನಿವಾಸಿಗಳಿಂದ ಕೂಡಿಕೊಂಡು ಸ್ವಾತಂತ್ರಿಕವಾದ ಜನಾಂಗವಾಗಿ ಪರಿಣಮಿಸಿ ಅಮೇರಿಕದ ಸಂಯುಕ್ತ ಸಂಸ್ಥಾನಗಳೆಂಬ ದೊಡ್ಡ ರಾಜ್ಯವನ್ನು ಸ್ಥಾಪಿಸಿರುವರು. ಇವರ ಅಭಿವೃದ್ಧಿಯು ಇತರ ಪ್ರಯತ್ನಗಳಿಗಿಂತ ಸಾಂಪತ್ತಿಕ ಅಭಿವೃದ್ಧಿಯ ಪ್ರಯತ್ನಗಳು ಪರಿಶೀಲನಾಯೋಗ್ಯವಾಗಿವೆ.

ಉತ್ತರ ಅಮೇರಿಕದಲ್ಲಿ ಬ್ರಿಟಿಷ್ ನಿವಾಸಿಕರು ಬಂದು ವಾಸಿಸಿದ ಹಲವು ವರುಷಗಳ ವರೆಗೆ ತಮ್ಮ ಹೊಸ ಸ್ಥಾನಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವರೆ ಈ ನಿವಾಸಿಕರನ್ನು ಬ್ರಿಟಿಷರು ಪ್ರೋತ್ಸಾಹಗೊಳಿಸಲಿಲ್ಲವೆಂತ ತೋರಿಬರುತ್ತದೆ. ಹೀಗೆ ಈ ಹೊಸ ನಿವಾಸಿಕರ ಜೀವನವೃತ್ತಿಯು ಪ್ರಥಮದಲ್ಲಿ ವ್ಯವಸಾಯವೇ ಆಗಿತ್ತು. ಆದರೆ ಬ್ರಿಟಿಷ್ ಅಧೀನತೆಯಿಂದ ತಮ್ಮ ಸ್ವತಂತ್ರವನ್ನು ಪಡೆದ ನಂತರ ಈ ಪಾಶ್ಚಾತ್ಯ ಬಲವಂತ ನವ ಜನಾಂಗವು ಕೈಗಾರಿಕೆಗಳನ್ನು ತಮ್ಮ ದೇಶದಲ್ಲಿ ದೃಢಮೂಲವಾಗಿ ಸ್ಥಾಪಿಸುವರೆ ಪ್ರಯತ್ನಗೊಂಡಿತು. ೧೭೭೬ನೇ ಇಸವಿಯ ಮೊದಲು ಅಮೇರಿಕಾದೇಶಕ್ಕೆ ಬೇಕಾದ ಸಾಮಾನ್ಯ ಉಡುಪುಗಳನ್ನು ಸಹಾ ಇಂಗ್ಲಾಂಡದಿಂದಲೇ ತರಿಸಬೇಕಾಗಿತ್ತು. ಆದರೆ ೧೭೭೬ನೇಯಿಂದ ೧೮೭೦ರ ವರೆಗೆ ಅಮೇರಿಕಾ ದೇಶಕ್ಕೆ ಬೇಕಾದ ಉಡುಪುಗಳನ್ನು ಅಲ್ಲಿಯೇ ತಯ್ಯಾರಿಸಲು ಅಗತ್ಯವುಳ್ಳ ಕೈಗಾರಿಕೆ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿದ್ದರೂ ೧೮೭೦ರ ವರೇಗೆ ಕೈಗಾರಿಕೆಗಳ ವೃತ್ತಿಗಳಿಗಿಂತ ವ್ಯವಸಾಯವೇ ಇಲ್ಲಿ ಪ್ರಾಮುಖ್ಯವಾಗಿತ್ತು. ಹತ್ತು ವರುಷಗಳಲ್ಲಿ ಅಂದರೆ ೧೮೮೦ರಲ್ಲಿ ಇತರ ಪಾಶ್ಚಾತ್ಯ ಜನಾಂಗಗಳೊಡನೆ ಕೈಗಾರಿಕೆಗಳಲ್ಲಿ ಶ್ರೇಷ್ಠವಾದದ್ದೆಂಬದಾಗಿ ಖ್ಯಾತಿಗೊಂಡಿತು.

೧೮೬೧ನೇ ಇಸವಿಯ ಮೊದಲು ಅಮೇರಿಕದ ಸಂಯುಕ್ತ ಸಂಸ್ಥಾನದ ರೈಲ್ ಮಾರ್ಗಗಳೂ ಕೈಗಾರಿಕೆ ಶಾಲೆಗಳೂ ಪಡೆಯಲ್ಕರಿಗೆ ಮುಖ್ಯವಾಗಿ ಬ್ರಿಟಿಷರಿಗೆ ಅಡವಾಗಿದ್ದವು. ಆದರೆ ೧೮೬೧ನೇ ವರುಷದ ನಂತರ ಬ್ರಿಟಿಷರು ತಮ್ಮ ಬಂಡವಾಳವನ್ನು ಅಮೇರಿಕದಿಂದ ಹಿಂತೆಗದರು. ಇದರಿಂದ ಅಮೇರಿಕನರ ಕೈಗಾರಿಕೆ ವೃದ್ಧಿಗೆ ವಿಶೇಷ ಸಂದುಕಟ್ಟಿನ ಸಮಯವು ಒಂದು ಪ್ರಾಪ್ತವಾಯಿತು. ಆದರೆ ಅಲ್ಲಿಯ ಶ್ರೀಮಂತರೂ ಕಲಾವಿದ್ಯಾವಿಶಾರದರೂ ಒಟ್ಟುಕೂಡಿ ಬಹಳ ಯತ್ನಪಟ್ಟು ನವೀನ ರೀತಿಗಳಲ್ಲಿ ತಮ್ಮ ಕೈಗಾರಿಕೆಗಳನ್ನು ಭಂಡವಾಳವು ತಕ್ಕುದಾಗಿ ಸಂಗ್ರಹಿಸಲ್ಪಡುವ ರೀತಿಗಳಲ್ಲಿ ವ್ಯವಸ್ಥೆ ಪಡಿಸಿದರು. ಈ ನವೀನ ವ್ಯವಸ್ಥಾಕ್ರಮದಿಂದ ವಿಪರೀತ ಭಂಡವಾಳವು ಸಂಗ್ರಹಿಸಲ್ಪಟ್ಟಿದ್ದಲ್ಲದೆ ದೇಶದ ಖರ್ಚಿಗೆ ಮಿಕ್ಕಿ ಸಾವಿರಕಲ್ಗಳಲ್ಲಿ ಉಡುಪುಗಳೂ ತಯ್ಯಾರುಮಾಡಲ್ಪಟ್ಟವು. ಇದರಿಂದ ಇತರ ದೇಶಗಳೊಂದಿಗೆ ಕೈಗಾರಿಕೆಗಳಲ್ಲಿ ಅಮೇರಿಕಕ್ಕೆ ಹೋರಾಡುವಂತಾಯಿತು. ೧೮೯೪ನೇಯಿಂದ ಭೂಲೋಕದ ಎಲ್ಲಾ ಕಡೆಗಳಲ್ಲಿಯೂ, ತನ್ನಲ್ಲಿ ತಯ್ಯಾರಾದ ಉಡುಪುಗಳನ್ನು ಕಳುಹಿಸುವರೆ ಅಮೇರಿಕಾದೇಶಕ್ಕೆ ಸಾಧ್ಯವಾಯಿತು.

ಹೀಗೆ ೧೮೯೪ನೇ ವರುಷದಿಂದ ಅಮೇರಿಕವು ಕೈಗಾರಿಕೆಗಳಲ್ಲಿ ಎಲ್ಲಾ ಜನಾಂಗಗಳಲ್ಲಿ ಪ್ರಥಮಸ್ಥಾನವನ್ನೈದಿರುವುದು. ಅಂಗ್ಲಾಂಡವು ಕೈಗಾರಿಕೆಗಳಲ್ಲಿ ಇದಕ್ಕೆ ಎರಡನೇದಾಗಿಯೂ ಜರ್ಮನಿಯು ಮೂರನೇದಾಗಿಯೂ ಫ್ರಾನ್ಸು ನಾಲ್ಕನೇದಾಗಿಯೂ ಇರುತ್ತವೆ. ೧೮೭೦ನೇ ವರುಷದಲ್ಲಿ ಅಂಗ್ಲಾಂಡವು ಪ್ರಥಮ ಸ್ಥಾನದಲ್ಲಿಯೂ, ಫ್ರಾನ್ಸು ದ್ವಿತೀಯ ಸ್ಥಾನದಲ್ಲಿಯೂ ಅನಂತರ ಜರ್ಮನಿಯೂ ಕಡೇಸ್ಥಾನದಲ್ಲಿಯೂ ಅಮೇರಿಕದ ಸಂಯುಕ್ತ ಸಂಸ್ಥಾನಗಳೂ ಇದ್ದವು. ೩೦ ವರುಷಗಳಲ್ಲಿ ಅಮೇರಿಕದ ಈ ರೀತಿಯ ಅಭಿವೃದ್ಧಿಯು ಸರ್ವರಲ್ಲಿಯೂ ಆಶ್ಚರ್ಯವನ್ನುಂಟುಮಾಡದಿರದು. ಬ್ರಿಟಿಷ್ [illegible]

[illegible] ಕದ ಇತರ ಎಲ್ಲಾ ಕಡೆಗಳಲ್ಲಿ ಯಂತ್ರಗಳಲ್ಲಿ ನೇಯಲ್ಪಟ್ಟು ಅರುವೆಕ್ಕಿಂತ ಹೆಚ್ಚು ಅರುವೆಯನ್ನು ಅಮೇರಿಕದ ಯಂತ್ರಗಳಲ್ಲಿ ನೇಯುತ್ತಿರುವರು. ಎಲ್ಲಾ ಜನಾಂಗಗಳಿಗಿಂತ ಅಮೇರಿಕನರು ಜಮಖಾನ ರತ್ನಕಂಬಳಿ ಮೊದಲಾದವುಗಳನ್ನು ಹೆಚ್ಚಾಗಿ ತಯ್ಯಾರಿಸುವರು. ಭೂಲೋಕದಲ್ಲಿ ಬೆಳಿಯುವ ರೇಶ್ಮೆಯಲ್ಲಿ ಮೂರರಲ್ಲಿ ಒಂದು ಪಾಲಷ್ಟು ದರಗು ರೇಶ್ಮೆಯು ಸಂಯುಕ್ತ ಸಂಸ್ಥಾನದ ರೇಶ್ಮೆ ಕಾರ್ಖಾನೆಗಳಿಗೆ ಬೇಕಾಗಿರುವುದು. ಭೂಲೋಕದಲ್ಲಿ ತಯ್ಯಾರಾಗುವ ಸಮ ಅರೆವಾಸಿ ಅಂದರೆ ೮,೦೦೦,೦೦೦ ಟನ್ ಕಾಗದವು ಅಮೇರಿಕದಲ್ಲಿ ತಯ್ಯಾರಾಗುತ್ತದೆ. ಕಬ್ಬಿಣದ ಕೈಗಾರಿಕೆಗಳಲ್ಲಿ ಎಂತೂ ಅದು ಒಂದನೇದಾಗಿರುವುದು. ಚರ್ಮ, ತಾಂಬ್ರ ಮೊದಲಾದವುಗಳಿಂದ ತಯ್ಯಾರು ಮಾಡಲ್ಪಡುವ ವಸ್ತುಗಳು ಅಮೇರಿಕದಲ್ಲಿ ತಯ್ಯಾರಾಗುವಷ್ಟು ಎಲ್ಲಿಯೂ ಆಗುವುದಿಲ್ಲ.

ಈ ಎಲ್ಲ ವೃತ್ತಾಂತದಿಂದ ಅಮೇರಿಕದ ಸಂಯುಕ್ತಸಂಸ್ಥಾನಕ್ಕೆ ಕೈಗಾರಿಕೆಗಳಲ್ಲಿ ಉಚ್ಚಸ್ಥಿತಿಯು ಪ್ರಾಪ್ತವಾಗಲು ಆಧಾರಗಳು ಯಾವವಿರುವವೆಂಬದನ್ನು ವಿಚಾರಿಸಿದರೆ—ವ್ಯವಸಾಯ ಸೌಕರ್ಯಗಳು, ಖನಿಜಗಳ ಬಾಹುಳ್ಯ, ವಯ್ಯೋಣ ಅನುಕೂಲತೆಗಳು, ಎಲ್ಲಾ ಕಡೆಗಳಲ್ಲಿಯೂ ಇರುವ ವ್ಯಾಪಾರ ಸ್ವಾತಂತ್ರ, ಹೊಸರೀತಿಗಳನ್ನು ಶೋಧಿಸಿ ಅವುಗಳನ್ನನುಸರಿಸುವ ಆಸಕ್ತಿ ಈ ಐದು ಕಾರಣಗಳು ಅಮೇರಿಕದ ಸಾಂಪತ್ತಿಕ ಅಭಿವೃದ್ಧಿಯ ಮೂಲಗಳಾಗಿರುವವೆಂಬದಾಗಿ ತಿಳಿಯುತ್ತೇವೆ.

ವ್ಯವಸಾಯದಿಂದ ತಯ್ಯಾರಾಗುವ ದವಸಧಾನ್ಯಗಳೇ ಮೊದಲಾದ ಆಹಾರ ಸಾಮಾಗ್ರಿಗಳೂ ಇವುಗಳಿಂದ ತಯ್ಯಾರುಮಾಡಲ್ಪಡುವ ಇತರ ಉಡುಪುಗಳೂ ಇವಕ್ಕೆ ಬೇಕಾದ ಯಂತ್ರಸಾಹಿತ್ಯ ಮೊದಲಾದವುಗಳೂ ಬಹಳ ಅಗ್ಗವಾದ ದರದಲ್ಲಿ ಇಲ್ಲಿ ದೊರಕುವವು. ಇಡೀ ಭೂಲೋಕದಲ್ಲಿ ಬೆಳೆಯುವ ನೇಕಡಾ ಅರವತ್ತು ಹತ್ತಿಯೂ ನೇಕಡಾ ಸಿರಿಷ್ಟು ಹೊಗೆಸೊಪ್ಪು, ನೇಕಡಾ ಎಪ್ಪತ್ತು ಧಾನ್ಯಗಳೂ, ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಬೆಳೆಸೋಲ್ಪಡುವವು. ದವಸಧಾನ್ಯಗಳು ಹೀಗೆ ಹೆಚ್ಚಾಗಿ ಬೆಳೆಸಲ್ಪಡುವುದರಿಂದ ದನಕರುಗಳನ್ನು ಸಾಕರಕ್ಕೆ ಸಹಾ ಇಲ್ಲಿ ಅವುಗಳನ್ನೇ ಬಹುವಾಗಿ ಉಪಯೋಗಿಸುವರು. ವೃಷ್ಟಿಯಾದ ದನಕರುಗಳು ಇಲ್ಲಿ ಧಾರಾಳವಾಗಿರುವವು. ಕುರಿಜಾತಿಯೊಂದಲ್ಲದೆ ಬಾಕಿ ಎಲ್ಲಾ ವಿಧದ ಜಾನುವಾರುಗಳು ಇಲ್ಲಿ ಅವೆ. ಚರ್ಮದ ಕೈಗಾರಿಕೆಗೆ ಇಲ್ಲಿಯೇ ಹೆಚ್ಚು ಚರ್ಮ ದೊರಕುತ್ತದೆ.

ಕಬ್ಬಿಣ, ತಾಂಬ್ರ, ಸೀಸ, ಬೆಳ್ಳಿ, ಕಲ್ಲಿದ್ದಲು ಚಿನ್ನ ಅಲ್ಯೂಮಿನಿಯಮ್ ಇವುಗಳು ಅಮೇರಿಕದಲ್ಲಿ ಧಾರಾಳವಾಗಿ ದೊರಕುತ್ತಿವೆ. ಕಬ್ಬಿಣದ ಕೈಗಾರಿಕೆಗೆ ಬೇಕಾದ ಇಲ್ಲಿ ದೊರಕುವ ಕಬ್ಬಿಣದ ಕಲ್ಲು ಬಹಳ ಉತ್ಕೃಷ್ಟವಾಗಿರುವುದಲ್ಲದೆ ಈ ಕೈಗಾರಿಕೆಗೆ ಆಗತ್ಯವುಳ್ಳ ಇತರ ಖನಿಜ ವಸ್ತುಗಳು ಈ ದೇಶದಲ್ಲಿ ಒಂದೇ ಕಡೆಯಲ್ಲಿ ದೊರಕುವವು. ಇಂಥಾ ಖನಿಜಗಳು ಒಂದೇ ಕಡೆಯಲ್ಲಿ ದೊರಕುವರೆ ಸಾಧ್ಯವಿಲ್ಲದಲ್ಲಿ ಸರೋವರ ನದೀ ಮಾರ್ಗವಾಗಿ ಬಹಳ ಅಗ್ಗವಾದ ದರಗಳಲ್ಲಿ ಇವುಗಳನ್ನು ಒಯ್ಯಬಹುದಾದ್ದರಿಂದ ಕಬ್ಬಿಣದ ಕೈಗಾರಿಗೆಯಲ್ಲಿ ಯಾವ ಜನಾಂಗದವರ ಮೇಲಾಟವಾದರೂ ಇವರೊಂದಿಗೆ ಅಸಾಧ್ಯ. ಅಂಗ್ಲಾಂಡದಲ್ಲಿ ಕಬ್ಬಿಣಕಲ್ಲು ಸ್ಪೇಯಿನ, ಸ್ವೀಡನ್, ಮತ್ತು ಗ್ರೀಸ್ ಮೊದಲಾದ ದೇಶಗಳಿಂದ ತರಿಸಬೇಕಾಗುವುದರಿಂದಲೂ ಜರ್ಮನಿಯಲ್ಲಿ ಅಮೇರಿಕದಷ್ಟು ಒಳ್ಳೇದಾದ ಕಬ್ಬಿಣಕಲ್ಲು ದೊರಕುವುದಿಲ್ಲವಾದ್ದರಿಂದಲೂ ಕೈಗಾರಿಕೆಗಳಲ್ಲಿ ಮುಖ್ಯವಾದ ಕಬ್ಬಿಣದ ಕೈಗಾರಿಕೆಯಲ್ಲಿ ಅಮೇರಿಕದೊಂದಿಗೆ ಈ ಎರಡು ದೇಶದವರಿಗೂ ಸಹಾ ಮೇಲಾಟವು ಅಸಾಧ್ಯ. ಹಿಂದೂಸ್ಥಾನದಲ್ಲಿ ಕಬ್ಬಿಣದ ಕೈಗಾರಿಕೆಗೆ ಬೇಕಾದ ಖನಿಜ ಮೊದಲಾದವುಗಳು ಒಂದೇ ಕಡೆಯಲ್ಲಿ ದೊರಿಯುವುದಿಲ್ಲವಾದ್ದರಿಂದ ಕಬ್ಬಿಣದ ಕೈಗಾರಿಕೆಯ ಅಭಿವೃದ್ಧಿಗೆ ಇದೊಂದು ತೊಡಕಾಗಿರುವುದು.

ದೇಶದ ಎಲ್ಲಾ ಕಡೆಗಳಲ್ಲಿಯೂ ವಯ್ಯೋಣದ ಸೌಕರ್ಯಗಳು ಅಮೇರಿಕದಲ್ಲಿ ಇರುವಂತೆ ಬೇರೆ ಯಾವ ದೇಶದಲ್ಲಿಯೂ ಇರುವುದಿಲ್ಲ. ಸ್ವಭಾವಿಕವಾಗಿ ಅಲ್ಲಿರುವಂಥಾ ನದಿಗಳೂ ಸರೋವರಗಳೂ ಈ ಸೌಕರ್ಯಗಳನ್ನು ಇನ್ನಷ್ಟು ಹೆಚ್ಚಿಸಿರುವವು. ನದಿ ಮತ್ತು ಸರೋವರಗಳ ಒಟ್ಟಿಗೆ 19450 ವಿಸ್ತೀರ್ಣವುಳ್ಳ ನೀರುಮಾರ್ಗಗಳೂ, 200.000ಗಳಷ್ಟು ಮೈಲು ರೈಲಿನ ಭೂಮಾರ್ಗವೂ ಇರುವವು. ಯುರೋಪ ದೇಶದ ಎಲ್ಲಾ ಕಡೆಗಳಲ್ಲಿರುವ ರೈಲುಮಾರ್ಗಕ್ಕಿಂತ ಅಮೇರಿಕ ದೇಶದ ರೈಲುಮಾರ್ಗವು ವಿಸ್ತೀರ್ಣದಲ್ಲಿ ಹೆಚ್ಚಾಗಿದ್ದು ಇಡೀ ಭೂಲೋಕದ ಸಿರಷ್ಟು ಇರುವುದು. ಇಲ್ಲಿ ಸಾಮಾನುಗಳನ್ನು ರೈಲು ಬಂಡಿಗಳಲ್ಲಿ ವೈಯ್ಯುವ ದರವು ಪ್ರಯಾಣಿಕರನ್ನು ವೈಯ್ಯುವ ದರಗಳಿಗಿಂತ ಕಡಿಮೆಯಾಗಿರುವುದು. ಸರೋವರಗಳನ್ನು ಕೂಡಿರುವ ನೀರುಮಾರ್ಗದಷ್ಟು ವಿಸ್ತೀರ್ಣವುಳ್ಳ ಇಲ್ಲಿಯ ನೀರುಮಾರ್ಗವು ಇಡೀ ಭೂಲೋಕದಲ್ಲೆಲ್ಲಿಯೂ ಇಲ್ಲ. ವಯ್ಯೋಣ ಸೌಕರ್ಯಗಳು ಈರೀತಿ ಇರುವುದರಿಂದ ಅಂಗ್ಲಾಂಡಿನ ಲೀವರ್‌ಪೂಲ್ ಬಂದರಿಗೆ ರಫ್ತಾಗುವ ಅರ್ಜಂಟೀನಾ, ರುಷ್ಯ ಮತ್ತು ಹಿಂದೂಸ್ಥಾನದ ಗೋಧಿ ದರಗಳಲ್ಲಿಯೇ, ಕೂಲಿ ಕೆಲಸದ ದರವು ಅಮೇರಿಕದಲ್ಲಿ ವಿಶೇಷವಿದ್ದರೂ, ಗೋಧಿ ದರವನ್ನು ಹೆಚ್ಚಿಸದೆ ಅಮೇರಿಕದ ಗೋಧಿಯನ್ನು ವಿಕ್ರಿತ ಮಾಡಲು ಸಾಧ್ಯವಾಗಿರುವದು. ಸೀಮೆಎಣ್ಣೆಯನ್ನು ಗಣಿಯಿಂದ ತೆಗೆದು ಅದನ್ನು ಶುದ್ಧಪಡಿಸುವರೆ ಕಾರ್ಖಾನೆಗಳಿಗೆ [illegible]

ಅಮೇರಿಕದ ಸಾಮಾನ್ಯ ನಿವಾಸಿಗಳ ಕೂಡ ಸಹಾ ತಕ್ಕಮಟ್ಟಿನ ದ್ರವ್ಯಾನುಕೂಲತೆಯು ಇರುವುದರಿಂದ ಕೈಗಾರಿಕೆ ಕಾರ್ಖಾನೆಗಳಲ್ಲಿ ಸಿದ್ಧವಾಗುವ ಬಡವೆಗಳನ್ನು ನಿವಾಸಿಕರೆಲ್ಲರೂ ಉಪಯೋಗಿಸಲು ಶಕ್ತರಾಗಿದ್ದು ದೇಶದಲ್ಲಿಯ ಖರ್ಚಿನಿಂದ ಕೈಗಾರಿಕೆಗಳಿಗೆ ಪ್ರೋತ್ಸಾಹ ದೊರಕಿ ಅವುಗಳು ಅಭಿವೃದ್ಧಿಸಲು ಕಾರಣವಾಯಿತು.

ಪಾಶ್ಚಾತ್ಯ ದೇಶಗಳಲ್ಲಿ ಕೈಗಾರಿಕೆಗಳು ಯಂತ್ರಸಾಹಿತ್ಯಗಳಿಂದ ನಡಿಸಲ್ಪಡುವ ನವೀನ ರೀತಿಗಳನ್ನು ಪರಿಶೋಧಿಸಿದೊಡನೆ ಅವುಗಳನ್ನನುಸರಿಸುವದೆ ಪಾಶ್ಚಾತ್ಯರಲ್ಲಿ [illegible]ಹಳೆ ಸಮಯದವರೆಗೆ ದುರಾಗ್ರಹವಿತ್ತು. ಫ್ರಾನ್ಸ್ ದೇಶದಲ್ಲಿ ಈ ದುರಾಗ್ರಹ ಭಾವನೆಯು ಈಗಲೂ ಇರುತ್ತದೆ. ಅಮೇರಿಕದವರಾದರೋ ನವೀನ ರೀತಿಗಳನ್ನು ಪರಿಶೋಧಿಸಿದೊಡನೆ ಅವುಗಳನ್ನು ಆತುರದಿಂದಲೂ ಆಸಕ್ತಿಯಿಂದಲೂ ಅನುಸರಿಸುವರು. [illegible] ವಿಂಗಡವಾದ ಅಂಗಗಳಿದ್ದು ಹಾಳಾದಾಗ ಅಂಥಾ ಅಂಗಗಳನ್ನು ಮಾತ್ರ ಬದಲಾಯಿಸಲು ಬಾಯವುಳ್ಳ ಮೇಲಾದ ಯಂತ್ರಗಳಿಂದಲೂ ಸಹಕಾರಯುಕ್ತವಾದ ಕಾರ್ಯನಾದನೆಯ ಸುವ್ಯವಸ್ಥೆಗಳಿಂದಲೂ ಅಮೇರಿಕದ ಕೈಗಾರಿಕೆಯನ್ನು ಅಭಿವೃದ್ಧಿಸಲು ಶೀಘ್ರದಲ್ಲಿ ಸಾಧ್ಯವಾಯಿತು. [illegible] ಮತ್ತು ವಿದ್ಯಾ ಅನುಕೂಲತೆಗಳ ಸಹ ಈ ದೇಶದವರಿಗೆ ಬೇಕಾದ ರೀತಿಯಲ್ಲಿರುವವು. ಅಮೇರಿಕನವರ ಸಹಕಾರ ಬುದ್ಧಿಯು ಇತರ ಎಲ್ಲಾ ಜನಾಂಗಗಳಿಗಿಂತ ಉತ್ತಮ ತರದ್ದಾಗಿದೆ. ಈ ದೇಶದಲ್ಲಿ ಕೈಗಾರಿಕೆಯು ಅಭಿವೃದ್ಧಿಸಿದಂತೆ ಕಾರ್ಖಾನೆ ಕಂಪನಿಗಳ ಸಂಖ್ಯೆಯು ಹೆಚ್ಚಾಗಿಲ್ಲ. ಅದರ ಕಂಪನಿಗಳಲ್ಲಿ ಪಾಲುಗಳ ಸಂಖ್ಯೆಯು ಅಧಿಕವಾಗಿ ಬಂಡವಾಳವು ಹೆಚ್ಚಿರುವುದು. ಕಾರ್ಖಾನೆಗಳಲ್ಲಿ ಕೂಲಿಗಳ ದರವು ಸಹಾ ಹೆಚ್ಚಿರುತ್ತದೆ. ಕಾರ್ಖಾನೆಗಳಲ್ಲಿ ಬಂಡವಾಳವು ಹೆಚ್ಚಿರುವುದರಿಂದ ಅದನ್ನು ಕಡಿಮೆದರಗಳಲ್ಲಿ ಬಡವೆಗಳನ್ನು ತಯಾರಿಸಲು ಸಾಧ್ಯವಾಗಿ ಮೇಲಾಟವಿದ್ದಾಗ ಸಹಾ ಬಡವೆಗಳನ್ನು ಅಗ್ಗವಾದ ಧಾರಣೆಗಳಲ್ಲಿ ಮಾರಲು ಅನುಕೂಲವಾಗುತ್ತದೆ. ಮೆ[illegible] ಕಾರ್ನಿಗಿ, ರಾಕ್‌ಫೆಲರ್ ಮೊದಲಾದ ಕೋಟ್ಯಾಧೀಶರು ಕೈಗಾರಿಕೆಗಳ ನಾಯಕರಾಗಿರುವುದರಿಂದ ಕೈಗಾರಿಕೆಗಳು [illegible] ವ್ಯವಸಾಯ ಮತ್ತು ಕೈಗಾರಿಕೆಗಳ ಅಭಿವೃದ್ಧಿಯು [illegible] ಅಮೇರಿಕದಲ್ಲಿ ಮುಂದುವರಿದು ಇದಕ್ಕಿಂತಲೂ [illegible] ಇತರ ದೇಶಗಳನ್ನು ಅಮೇರಿಕದ ಸಾಂಪತ್ತಿಕ ಅಭಿವೃದ್ಧಿಯು ತಲ್ಲಣಗೊಳಿಸಿರುವುದು. ಇಷ್ಟೆಲ್ಲ [illegible] ಅಮೇರಿಕಕ್ಕೆ [illegible] ಸೂಚಿಸಿದಂತೆ [illegible] ದಿನಗಳಲ್ಲಿಯೇ ಪ್ರಾಪ್ತಿಸಿರುತ್ತದೆ.

ಭೂಕಂದಾಯದ ಸೆಟ್ಲುಮೆಂಟುಗಳು

ಮದ್ರಾಸು ಸಂಸ್ಥಾನದ [illegible] ಜಿಲ್ಲೆಗಳಲ್ಲಿ ಜಗುಗುತ್ತಿರುವ ಸೆಟ್ಲುಮೆಂಟುಗಳನ್ನು ವಿಷಯಿಸಿ [illegible] ದಿವಾನ್ ಬಹದ್ದೂರ್ ರಘುನಾಥರಾಯರು [illegible] ಪತ್ರಿಕೆಗೆ ಬರೆದಿರುವ ಲೇಖನಗಳನ್ನು ಓದಿದವರು [illegible] ಜಿಲ್ಲೆಗಳಲ್ಲಿ [illegible] ಕೆಲವು ಕಡೆಗಳಲ್ಲಿ [illegible] ದಿವಾನ್ ಬಹದ್ದೂರರವರ ಅಭಿಪ್ರಾಯವನ್ನು [illegible] ಮದ್ರಾಸು ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟಿಸಿರುವ ಲೇಖನಗಳಿಗೆ ಪ್ರತ್ಯುತ್ತರವಾಗಿ ರಘುನಾಥರಾಯರು ಈ ಲೇಖನಗಳನ್ನು ಬರೆದಿರುತ್ತಾರೆ. ರಘುನಾಥರಾಯರವರು ಬರೆದಿರುವ ಲೇಖನಗಳು ಮುಖ್ಯವಾಗಿ ತಂಜಾವೂರು ಜಿಲ್ಲೆಯ ಸೆಟ್ಲುಮೆಂಟು ಸಂಬಂಧವಾಗಿದ್ದರೂ ಅವರು ಈ ಲೇಖನಗಳಲ್ಲಿ ರುಜುಪಡಿಸಿದ ಸಿದ್ಧಾಂತಗಳು ಇದೇ ಸಂಸ್ಥಾನದ [illegible] ಜಿಲ್ಲೆಗಳಿಗೆ ಲಗಾವಾಗುವಂಥವುಗಳೇ.

ಈ ಸಂದರ್ಭದಲ್ಲಿ ಪುನಃ ಪುನಃ ಆಗುವ ಸೆಟ್ಲುಮೆಂಟು ವಿಚಾರಣೆಗಳ ಕ್ರಮಗಳನ್ನು ಪರ್ಯಾಲೋಚಿಸಿ ಅವುಗಳನ್ನು ನಿರ್ಧರಿಸುವದೆ ತಕ್ಕ ನಿಬಂಧನೆಗಳನ್ನು ಮಾಡುವುದುಚಿತವೆಂತ ಕೆಲವರಿಂದ ಸೂಚಿಸಲ್ಪಟ್ಟಿರುವುದು. 'ಡಿಸೆಂಟ್ರಲೈಸೇಶನ್ ಕಮಿಶನ್' ಎಂಬ ಸರಕಾರದ ಅಧಿಕಾರ ವಿಭಾಗದ ವಿಷಯವನ್ನು ಪರ್ಯಾಲೋಚಿಸುವದೆ ನೇಮಕಪಟ್ಟ ಕಮಿಟಿಯವರ ವರಧಿಯು ಪ್ರಕೃತ ಸ್ಟೇಟ್ ಸೆಕ್ರೆಟರಿಗಳ ಮುಂದಿರುವುದು. ಆಗಿಂದಾಗ್ಯೆ ಸೆಟ್ಲುಮೆಂಟುಗಳಿಂದ ವಿಧಿಸಲ್ಪಡುವ ತೀರ್ವೆಗಳಿಗೆ ಒಂದು ಮಿತಿಯನ್ನು ನಿರ್ಣಯಿಸಬೇಕೆಂತಲೂ ಕಂದಾಯಭಾಗವು ಭೂಉತ್ಪತ್ತಿಯ ಯಾವ ಸರಾಸರಿಯಲ್ಲಿರಬೇಕೆಂಬುವುದನ್ನೂ ಸೆಟ್ಲುಮೆಂಟುಗಳು ಎಷ್ಟು ವರುಷಗಳಿಗೊಮ್ಮೆ ಏರ್ಪಡಿಸಬೇಕೆಂಬುವುದನ್ನೂ ಪ್ರಕೃತ ಇರುವ ಕ್ರಮದ ಪ್ರಕಾರ ಕಾರ್ಯನಿರ್ವಾಹಕ ಸರಕಾರದವರು ನಿರ್ಣಯಿಸುವುದರ ಬದಲಾಗಿ ನ್ಯಾಯವಿಧಾಯಕ ಸಭೆಯಲ್ಲಿ ಇದನ್ನು ನಿಶ್ಚಯಿಸಬೇಕೆಂತಲೂ ಈ ಕಮಿಟಿಯವರು ತಮ್ಮ ವರಧಿಯಲ್ಲಿ ಸೂಚಿಸಿರುವರು. ಇಂಡಿಯಾ ಗವರ್ನಮೆಂಟಿನವರು ಈ ಸೂಚನೆಗಳಿಗನುಗುಣವಾಗಿ ರೈತರಿಗೂ ಕಂದಾಯ[illegible]ರುವಂಥವರಿಗೂ ಸಮಾಧಾನಕರವಾದ ರೀತಿಯಲ್ಲಿ ಈ ವಿಷಯದಲ್ಲಿ ತಕ್ಕದಾದ [illegible]ಗಳನ್ನು ಮಾಡುವುದು ಸಮುಚಿತವಾಗಿರುತ್ತದೆ.

ಆಯುರ್ವೇದ ಪುನರುಜ್ಜೀವನ.

—o—

ಆಯುರ್ವೇದದ ಇತಿಹಾಸ.

ಕಾಕಸ್ಯ ಕತಿದಂತಾಃ ಕಾಗೆಗೆ ಹಲ್ಲುಗಳೆಷ್ಟು ಎಂಬ ವಿಚಾರದಂತೆ ಆಯುರ್ವೇದದ ಇತಿಹಾಸ ವಿಚಾರವು ನಿಷ್ಪ್ರಯೋಜಕವಾಗಿದೆಂಬದಾಗಿ ಕೆಲವರು ಹೇಳಬಹುದು. ವಿದ್ವಾಂಸರಾದವರೋ ಹಾಗೆ ವಿಚಾರಮಾಡಲಾರರು. ಕಾರಣ, ಒಂದು ವಿಷಯವನ್ನು ಪೂರ್ಣವಾಗಿ ತಿಳಿದಂತೆ ಆಗಬೇಕಾದರೆ ಅದನ್ನು ಸರ್ವಾಂಶದಿಂದಲೂ ತಿಳಕೊಳ್ಳಬೇಕು, ಅನ್ಯಥಾ ಅದು ಅಪೂರ್ಣಜ್ಞಾನವೆಂದು ಹೇಳಲ್ಪಡುವದು. ಈ ರೀತಿ ಬಲ್ಲವರ ತಿಳುವಳಿಕೆಗೆ ಅನುಕೂಲವಾದ ಒಂದು ವಸ್ತುವನ್ನು ದೃಷ್ಟಾಂತವಾಗಿ ತಕ್ಕೊಳ್ಳುವ. ಆ ವಸ್ತುವು ನೀರು ಎಂದು ಭಾವಿಸೋಣ. ಈ ನೀರು ಎಂಬ ವಸ್ತುವನ್ನು ಸರ್ವಾಂಶದಿಂದ ತಿಳಕೊಳ್ಳಬೇಕಾದರೆ ಅದರ (Chemical) ರಸಾಯನವಿದ್ಯಾ ಸಂಬಂಧ (Physical) ಪದಾರ್ಥ ವಿಜ್ಞಾನಸಂಬಂಧ (Biological) ಪ್ರಾಣಿ ಧರ್ಮಶಾಸ್ತ್ರ ಸಂಬಂಧ (Historical) ಇತಿಹಾಸ ಸಂಬಂಧ ಮೊದಲಾದ ವಿಷಯಗಳನ್ನು ಚನ್ನಾಗಿ ತಿಳಕೊಂಡರೆ ಅದು ಸರ್ವಾಂಶದಿಂದ ತಿಳಿದಂತಾಗುವದು. ಯಾಕಂದರೆ ಅವುಗಳೆಲ್ಲಾ ಒಂದೇ ವಿಷಯವನ್ನು ಬಿನ್ನಬಿನ್ನವಾಗಿ ತೋರಿಸುತ್ತವೆ. ಅವುಗಳಲ್ಲಿ ರಸಾಯನವಿದ್ಯಾ ಸಂಬಂಧದಿಂದ ಯಾವಯಾವ ಮೂಲ ವಸ್ತುಗಳು ಸೇರಿ ನೀರು ಉಂಟಾಯಿತು, ಮತ್ತು ಆ ಮೂಲವಸ್ತುಗಳು, ಮಾತ್ರವೇ ಸೇರಿ ಉಂಟಾದ ನೀರಿನಲ್ಲಿಯೂ, ಕೆರೆ, ಕುಂಟೆ, ಮಳೆ, ಹೊಳೆ, ಸಮುದ್ರ ಮೊದಲಾದವುಗಳ ನೀರಿನಲ್ಲಿಯೂ ಇರುವ ದ್ರವ್ಯಕೂಟದ ಭೇದವೇನು, ಎಂಬೀ ಮೊದಲಾದ ಜ್ಞಾನವು ಉಂಟಾಗುವುದು. ಅದರ ಪ್ರಯೋಜನ, ದೇಶ ಮತ್ತು ಕಾಲಭೇದಗಳಲ್ಲಿ ದೊರಕುವ ನೀರುಗಳಲ್ಲಿ ವಿದವಿಧವಾದ ಸ್ಪರ್ಶ, ರೂಪ, ರಸ, ಗಂಧಗಳಿಗೆ ಕಾರಣವಾದಂಥಾ ದ್ರವ್ಯಸಂಯೋಗವೂ ಗೊತ್ತಾಗುವದು. ಇಂಥಾ ದ್ರವ್ಯಸಂಯೋಗ ಜ್ಞಾನವು ನೀರಿನ ಗುಣಾವಗುಣಗಳನ್ನು ತಿಳಕೊಳ್ಳಲಿಕ್ಕೆ ಸಹಾಯ ಮಾಡುವದು. ಅದೇ ರೀತಿ ಪದಾರ್ಥ ವಿಜ್ಞಾನ ಸಂಬಂಧದಿಂದ ನೀರು ಹ್ಯಾಗೆ ಹರಿಯುತ್ತದೆ ಹ್ಯಾಗೆ ವೃಷ್ಟಿಯಾಗುತ್ತದೆ, ಅದಕ್ಕೆ ಕೆಳಗೆ ತಳ್ಳುವ ಶಕ್ತಿ ಹ್ಯಾಗೆ ಮತ್ತು ಎಷ್ಟರ ಮಟ್ಟಿಗಿದೆ, ಎಷ್ಟು [illegible] ಮೇಲಕ್ಕೇರುವದು ಅದು ಸಮಪ್ರಮಾಣದಲ್ಲಿ ಯಾಕೆ ನಿಲ್ಲುತ್ತದೆ, ಎಂಬೀ ಮೊದಲಾದ ಜ್ಞಾನವು ಇಂಥಾ ವಿಚಾರದಿಂದ ಲಭಿಸುವುದು. ಅದರ ಪ್ರಯೋಜನ—ನೀರಿನಲ್ಲಿ [illegible], ಹಡಗು ಮೊದಲಾದವುಗಳನ್ನು ನಡಿಸುವದು, ನೀರುಕೊಳವೆಗಳಿಂದ ನೀರನ್ನು ನಡಿಸುವದು ಆಹಾರ ಪ್ರಯುಕ್ತ ಇದರ ಉಪಯೋಗ ಇವೇ ಮೊದಲಾದವುಗಳು. ಪ್ರಾಣಿ ಧರ್ಮಶಾಸ್ತ್ರ ಸಂಬಂಧದಿಂದ ಅನೇಕ ಕೆಟ್ಟ ನೀರುಗಳಲ್ಲಿರುವ ಕ್ಷುದ್ರ ಜೀವರಾಶಿಗಳ ಜ್ಞಾನ ಉಂಟಾಗಿ, ಅದರಿಂದ ಅತಿಸಾರ, ವಿಷಮಜ್ವರ, ಶ್ಲೀಪದ, ಗಂಡಮಾಲಾ, ನಾಡೀವ್ರಣ, ಇವೇ ಮೊದಲಾದ ವ್ಯಾಧಿಗಳಿಗೆ ಕಾರಣವಾದ ನೀರಿನಲ್ಲಿರುವ ಕ್ಷುದ್ರ ಕ್ರಿಮಿಗಳಿಂದ ಶರೀರವು ರಕ್ಷಿಸಲ್ಪಡಬೇಕೆಂದು ತಿಳಿಯುತ್ತೇವೆ. ಇತಿಹಾಸಸಂಬಂಧ ಜ್ಞಾನದಿಂದ ಸೃಷ್ಟಿಯ ಆರಂಭದಿಂದ ಈ ವರೇಗೆ ನೀರಿನಿಂದ ಏನೇನು ಹಾನಿಗಳು ಮತ್ತು ಲಾಭಗಳು ಸಂಭವಿಸಿದವು, ಅದರಲ್ಲಿಯೂ ಸಮುದ್ರದ ನೀರು ಯಾವ ಕಾಲದಲ್ಲಿ ಯಾವ ಪೃಥ್ವೀ ಭಾಗವನ್ನು ಮುಚ್ಚಿಕೊಂಡಿತ್ತು ಯಾವದನ್ನು ತೆರಕೊಂಡಿತು ಅದು ಯಾವ ಕಾಲದಲ್ಲಿ ಸೀ ಆಗಿತ್ತು ಯಾವ ಕಾಲದಿಂದ ಉಪ್ಪಾಗುತ್ತಾ ಬಂತು ಎಂಬೀ ಮೊದಲಾದ ಅನುಭವವು ಉಂಟಾಗುವದು. ಇನ್ನೂ ಈ ನೀರಿಗೆ ಸಂಬಂಧಪಟ್ಟ ವಿದ್ಯೆಗಳಿಂದ ನೀರಿನ ವಿವಿಧ ವಿಷಯಗಳನ್ನು ಬಲ್ಲವರಿರುವರು. ಹೀಗಿರುತ್ತಾ ಇವುಗಳೊಂದನ್ನು ತಿಳಕೊಂಡರೆ ಅದನ್ನು ಸರ್ವಾಂಶದಿಂದ ತಿಳಕೊಂಡಂತೆ ಆಗಲಾರದು.

ಈ ನೀರಿನ ದೃಷ್ಟಾಂತವನ್ನು ಆಯುರ್ವೇದಕ್ಕೆ ಸಾದೃಶ್ಯವಾಗಿ ತಕ್ಕೊಳ್ಳಬಹುದು. ನೀರಿಗೆ ಕಾರಣವಾದ ವಸ್ತುಸಂಯೋಗ ಮಾತ್ರದಿಂದ ಹ್ಯಾಗೆ ನೀರಾಗುತ್ತದೋ ಅದೇ ರೀತಿ ಆಯುರ್ವೇದ ವಿಷಯವನ್ನು ಪ್ರತಿಪಾದನೆಮಾಡುವ ವಾಕ್ಯಗಳ ರಚನಾ ಮಾತ್ರದಿಂದ ಆಯುರ್ವೇದ ಶಾಸ್ತ್ರವು ಉಂಟಾಗುವದು. ನೀರಿನಲ್ಲಿ ಬೇರೆ ದ್ರವ್ಯಗಳು ಒಂದು ಹ್ಯಾಗೆ ಕಲೆತುಕೊಂಡಿವೆಯೋ ಅದೇ ರೀತಿ ಆಯುರ್ವೇದದಲ್ಲಿ ಬೇರೆ ವಿಷಯ ಪ್ರತಿಪಾದನೆಮಾಡುವ ವಾಕ್ಯಗಳು ಕಲೆತುಕೊಂಡಿವೆ. ನೀರಿನಲ್ಲಿ ಹ್ಯಾಗೆ ಅಪಾಯಗಳನ್ನು ತರುವ ಕ್ಷುದ್ರ ಕ್ರಿಮಿಗಳೋ ಹಾಗೆ ಆಯುರ್ವೇದದಲ್ಲಿ ಅವಿದ್ವಾಂಸರು ಸೇರಿಸಿದ ಕ್ಷುದ್ರ ವಾಕ್ಯಗಳು. ನೀರಿನಲ್ಲಿ ತಳ್ಳುವದು, ಹರಿವುದು, ಹಾರುವದು, ಮೊದಲಾದ ಶಕ್ತಿಗಳು ಹ್ಯಾಗೆಯೋ ಹಾಗೆ ಆಯುರ್ವೇದದಲ್ಲಿ ವಸ್ತುಗ್ರಾಹಕ, ಆರೋಗ್ಯಕರಣ, ಬಲವರ್ಧನ ಮೊದಲಾದ ಶಕ್ತಿಗಳು. ನೀರಿನಲ್ಲಿ ಕೆಲವು ಕಾಲ ಕೆಲವು ಭೂಭಾಗವನ್ನು ಮುಚ್ಚುವದು, ಕೆಲವನ್ನು ಬಿಡುವದು ಮೊದಲಾದ ಪ್ರಸಂಗ ಹ್ಯಾಗೆಯೋ ಹಾಗೆಯೇ ಆಯುರ್ವೇದದಲ್ಲಿ ಕೆಲವು ಕಾಲ ಕೆಲವು ದೇಶದ ಜನಗಳು ಪ್ರಕಾಶಕ್ಕೆ ಬರುವದು ಕೆಲವು ಕಾಲ ಅಂಧಕಾರದಲ್ಲಿ ಬೀಳುವದು. ನೀರು ಹ್ಯಾಗೆ ಒಂದು ಅಂಶದಿಂದ ತಿಳಿಯಲ್ಪಟ್ಟರೆ ಸರ್ವಾಂಶದಿಂದ ತಿಳಿಯಲ್ಪಟ್ಟಂತೆ ಆಗುವದಿಲ್ಲವೋ ಹಾಗೆನೇ ಆಯುರ್ವೇದವು ಒಂದು ಅಂಶದಿಂದ ತಿಳಿಯಲ್ಪಟ್ಟರೆ ಸರ್ವಾಂಶದಿಂದ ತಿಳಿಯಲ್ಪಟ್ಟಂತೆ ಆಗಲಾರದು. ಆದ್ದರಿಂದ [illegible]

ಆಯುರ್ವೇದ ವಿದ್ಯೆಯು ಅನೇಕ ಶತಮಾನಗಳಿಗಿಂತಲೂ ಪೂರ್ವದಲ್ಲಿಯೇ ಬಹಳ ಪ್ರಕಾಶಕ್ಕೆ ಬಂದಿತ್ತೆಂದು ಹೇಳೋಣ ಈಗ ಈ ಹೇಳುವಿಕೆಯನ್ನು ಸ್ಥಿರ ಪಡಿಸಬೇಕಾದರೆ ಅನೇಕ ಪ್ರಮಾಣಗಳ ಅವಶ್ಯಕತೆಯು ಬೇಕಾಗಿರುವದು ಆ ಉದ್ದೇಶಕ್ಕೆ ಪ್ರಕೃತ ಆಯುರ್ವೇದ ವಿದ್ಯೆಯನ್ನು ಕುರಿತು ಅನ್ಯದೇಶದ ಪೂರ್ವ ನಿವಾಸಿಗಳೂ ಈಗಿನ ನಿವಾಸಿಗಳೂ ಕೂಡ ಏನೇನು ಹೇಳಿದ್ದಾರೆಂದು ವಿಮರ್ಶಿಸುವ ಇತಿಹಾಸಮೂಲವಾಗಿ ಅವರುಗಳ ಮಾತುಗಳು ಕೂಡ ಆಯುರ್ವೇದ ವಿದ್ಯೆಯ ಪ್ರಾಚೀನತ್ವವನ್ನು ತೋರಿಸುವದಕ್ಕೆ ಪ್ರಮಾಣಭೂತವಾಗಿವೆ ನಮ್ಮ ಜನಗಳ ಮಾತಿನಿಂದ ಆಯುರ್ವೇದಕ್ಕೆ ಪ್ರಾಚೀನತ್ವವನ್ನೂ ಮತ್ತು ಪ್ರಪಂಚದ ಇತರ ವೈದ್ಯಶಾಸ್ತ್ರಗಳಿಗೆ ಮೂಲಕಾರಣತ್ವವನ್ನೂ ಕೂಡ ಸಾಧಿಸುವದಕ್ಕಿಂತ ನಾವು ಅನ್ಯದೇಶದ ಜನಗಳ ಮಾತಿನಿಂದಲೇ ಸಾಧಿಸುವದರಲ್ಲಿ ಗೌರವವೂ ಅಭಿರುಚಿಯೂ ಹೆಚ್ಚಾಗಿರುವುದು ಆದ್ದರಿಂದ ನಾವು ಸದ್ಯಕ್ಕೆ ಆ ಪಕ್ಷವನ್ನು ತಕ್ಕೊಳ್ಳೋಣ ಅವುಗಳೊಳಗೆ—೧ ಅಯನುಲ ಆಮಲ್, ೨ ಕಾತೂನ್, ೩ ಕ್ಯಕೂನ್, ೪ ಒತವಾ ಎಂಬ ಯುನಾನಿ ಪುಸ್ತಕಗಳನ್ನು ನೋಡಿದ್ದೇಯಾದರೆ—ಸುಮಾರು ಹಿಜರಿ ೮೦೦ರಲ್ಲಿ ಭರತಖಂಡದಿಂದ ಆಯುರ್ವೇದ ವಿದ್ವಾಂಸರು ಬಗದಾದ್ ದೇಶಕ್ಕೆ ಹೋಗುತ್ತಿದ್ದರು ಬಗದಾದ್ ದೇಶಕ್ಕೆ ಚಕ್ರವರ್ತಿಯಾಗಿದ್ದ ಹಾರೂನ್‌ರಷೀದ ಎಂಬವರು ಆ ವಿದ್ವಾಂಸರಿಗೆ ಬಹಳ ಸನ್ಮಾನ ಮಾಡುತ್ತಿದ್ದರು ಅಷ್ಟುಮಾತ್ರವಲ್ಲದೆ ಆಯುರ್ವೇದವನ್ನು ಬಲ್ಲ ನಾಲ್ಕು ಜನ ಪಂಡಿತರನ್ನು ತನ್ನ ಆಸ್ಥಾನ ಚಿಕಿತ್ಸಕರನ್ನಾಗಿ ಇಟ್ಟುಕೊಂಡಿದ್ದರು ಎಂಬದಾಗಿ ಪಂಡಿತ ಲಾಲಾ ಶಾಲಿಗ್ರಾಮ ವೈಶ್ಯಜೀ ಎಂಬವರ ಧನ್ವಂತರಿ ಭೂಮಿಕೆಯಲ್ಲಿ ತಿಳಿದುಬರುತ್ತದೆ ಜಾಲೀನೂಸ್ ಎಂಬ ಒಬ್ಬ ಆರಬಿ ಪಂಡಿತನು ಬರೆದಿರುವ ಚರಿತ್ರೆಯಿಂದ ಆಯುರ್ವೇದ ವಿದ್ಯೆಯು ಪ್ರಥಮದಲ್ಲಿ ಭರತಖಂಡದಿಂದ ಮಿಶ್ರದೇಶಕ್ಕೂ ಮಿಶ್ರದೇಶದಿಂದ ಯುನಾನಿಗೂ ಯುನಾನಿನಿಂದ ಆರಬಿಗೂ ಹೋಗಿದೆ ಎಂದು ತಿಳಿದುಬರುತ್ತದೆ ಅವನು ಆದೇ ಚರಿತ್ರೆಯಲ್ಲಿ—ನನ್ನ ಗುರು ಅಫ್ಲಾತೂನ್ ಎಂಬವನು ಹಿಂದುಸ್ಥಾನಕ್ಕೆ ಹೋಗಿ ಕಾಲಜ್ಞಾನದ ಅನೇಕ ಲಕ್ಷಣಗಳನ್ನೂ ಬೇರೆ ಕೆಲವು ವಿದ್ಯೆಗಳನ್ನೂ ಕಲಿತುಕೊಂಡು ಬಂದಿದ್ದನು ನಾನು ಕೆಲವು ಕಾಲ ಅವನ ಶಿಷ್ಯನಾಗಿ ತರುವಾಯ ಭರತಖಂಡದಿಂದ ಆಯುರ್ವೇದವನ್ನು ಕಲಿತುಕೊಂಡು ಒಂದು ನಮ್ಮ ದೇಶದಲ್ಲಿ ಪ್ರಖ್ಯಾತಿಯನ್ನು ಹೊಂದಿದನು ಆ ಮೇಲೆ ನನ್ನ ಸತೀರ್ಥರೊಳಗೆ ಅರಸ್ತೂ ಮೊದಲಾದವರು ಹಿಂದುಸ್ಥಾನಕ್ಕೆ ಹೋಗಿ ಆಯುರ್ವೇದವನ್ನು ಅಭ್ಯಾಸಮಾಡಿಕೊಂಡು ಬಂದು ಅವುಗಳನ್ನು ಸ್ವಭಾಷೆಯಲ್ಲಿ ತರ್ಜುಮೆ ಮಾಡಿದರು—ಎಂಬದಾಗಿ ಬರೆದಿರುವನು ಪ್ರೊಫೆಸರ್ ಜಿ ಯಫ್ ರಾಯಲ್, ಡಿ ಆರ್ ಯಲ್ ಯಸ್ ಜಿ ಸಿ ಬಂಗಾಲ ಮಿಲಿಟರಿ ಡಾಕ್ಟರ್ ಎಂಬವರ ವ್ಯಾಖ್ಯಾನದಿಂದ ಅರೆಬಿಸ್ ಮತ್ತು ಯುನಾನಿ ವೈದ್ಯಗಳಿಗಿಂತ ಎಷ್ಟೋ ಪೂರ್ವಕಾಲದಲ್ಲಿ ಆಯುರ್ವೇದ ವೈದ್ಯವು ಬಹಳ ಪ್ರಬಲವಾಗಿತ್ತು ಎಂದು ತಿಳಿದುಬರುತ್ತದೆ ಪ್ರೊಫೆಸರ್ ಹೋರಸ್ ಹೆಮೆನ್‌ವಿಲ್ಸನ್ ಎಂಬವರು ಪ್ರಾಚೀನ ಆರ್ಯಜನರ ಆಯುರ್ವೇದ ವಿದ್ಯತ್ವವನ್ನು ವರ್ಣನೆ ಮಾಡಿದ್ದು ನೋಡಿದ್ದೆಯಾದರೆ ನಮ್ಮ ಮನಸ್ಸಿಗೆ ಎಷ್ಟೋ ತೃಪ್ತಿಯಾದೀತು ಅವರು ಪ್ರಾಚೀನಕಾಲದ ಆರ್ಯ ವೈದ್ಯರು ಆಯುರ್ವೇದದಲ್ಲಿ ಚನ್ನಾಗಿ ಪಾಂಡಿತ್ಯವನ್ನು ಸಂಪಾದಿಸಿ ರೋಗಗಳ ಕಾರಣಗಳನ್ನು ಮತ್ತು ಜೀವಿತ ಮರಣಗಳ ನೆಲೆಯನ್ನು ಬಹಳ ಅದ್ಭುತವಾಗಿ ಕಂಡುಹಿಡಿಯುತ್ತಿದ್ದರು ಎಂಬದಾಗಿ ಬರೆದಿರುವರು ಡಾಕ್ಟರ್ ಓಜಾ ಜಿ ಎಂಬವರು—ಆಯುರ್ವೇದದಲ್ಲಿ ಸ್ವತಃ ಚನ್ನಾಗಿ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಬಹ ವೇದ ವ್ಯಾಸಪೀಠ ಪ್ರಪಂಚದ ಎಲ್ಲಾ ವೈದ್ಯಶಾಸ್ತ್ರಗಳು ಜನ್ಮವೆತ್ತಿದ್ದವು, ವೈದ್ಯವಿದ್ಯೆಯಲ್ಲಿ ಇತರ ಎಲ್ಲಾ ದೇಶಗಳು ಭರತ ಖಂಡಕ್ಕೆ ಋಣಿಗಳಾಗಿವೆ ಎಂದು ತಿಳಿಸಿದ್ದಾರೆ

ಗಣೇಶ ಕೃಷ್ಣಗರ್ದೆ ಯಲ್ ಯಮ್ ಮತ್ತು ಯಸ್ ಎಂಬವರು ಅಷ್ಟಾಂಗ ಮರಾಠಿ ಭಾಷಾಂತರ ಪ್ರಥಮ ಭಾಗದ ಉಪೋದ್ಘಾತದಲ್ಲಿ—ಅಶ್ಮರೀಹರಣ, ಶುಕ್ತಿಚ್ಛೇದನ, ಗ್ರಂಥಿನಿಷ್ಕಾಸನ, ಜಲೋದರವೇದನಾ, ಕೃತಿಮ ನಾಸಿಕಾಕರಣ ಮೊದಲಾದ ಶಸ್ತ್ರಕ್ರಿಯೆಗಳನ್ನು ಬಹಳ ಹುಶಾರತನದಿಂದ ನಮ್ಮ ಪ್ರಾಚೀನ ವೈದ್ಯರು ಮಾಡುತ್ತಿದ್ದರು ಈ ಕ್ರಿಯೆಗಳು ಭರತಖಂಡದಿಂದಲೇ ಯೂರೋಪ್‌ಖಂಡಕ್ಕೆ ಹೋಗಿವೆ ಎಂಬದಾಗಿ (The Indian Empire by W W Hunter P 161ರಲ್ಲಿ) ತಿಳಿದು ಬರುತ್ತದೆ ಎಂದು ನಿರೂಪಿಸಿದ್ದಾರೆ ಅದಲ್ಲದೆ ೮ನೇ ಶತಾಬ್ದದಲ್ಲಿ ಬಗದಾದ್ ಚಕ್ರವರ್ತಿಯು ಚರಕ ಮತ್ತು ಸುಶ್ರುತ ಗ್ರಂಥಗಳನ್ನು ಆರಬಿ ಭಾಷೆಯಲ್ಲಿ ತರ್ಜುಮೆ ಮಾಡಿಸಿದನೆಂತಲೂ ಅದೇ ಸಹಾಯದಿಂದ ಯೂರೋಪಿಯನ್ ವೈದ್ಯರು ಕೂಡ 1700ನೇ ಇಸವಿ ವರೇಗೆ ತಮ್ಮ ವೈದ್ಯಶಾಸ್ತ್ರವನ್ನು ನಡಿಸುತ್ತಿದ್ದರೆಂತಲೂ ಇತಿಹಾಸಜ್ಞರ ಅಭಿಪ್ರಾಯವನ್ನು ತೋರಿಸಿರುವರು. ಈ ರೀತಿ ಅನ್ಯದೇಶದ ಇತಿಹಾಸಜ್ಞ ಮತ್ತು ವೈದ್ಯರುಗಳ ಅಭಿಪ್ರಾಯವಿರುವದರಿಂದ ಪ್ರಾಚೀನಕಾಲದಲ್ಲಿ ಪ್ರಥಮ ಯಾವ ವೈದ್ಯವಿದ್ಯೆ ಇತ್ತು, ಪ್ರಪಂಚದಲ್ಲೆಲ್ಲಾ ಹಬ್ಬಿಕೊಂಡಿರುವ ವೈದ್ಯವಿದ್ಯೆಯು ಯಾವದರಿಂದ ಹೊರಡಿತು, ಅನ್ಯದೇಶದ ವಿದ್ವಾಂಸರೇ ನಿಜವಾಗಿ ಆಯುರ್ವೇದದಲ್ಲಿ ಎಷ್ಟು ಅಭಿಮಾನವನ್ನು ಇಟ್ಟಿದ್ದರು, ಎಂಬ ಎಲ್ಲಾ ವಿಷಯಗಳು ಈಗ ನಮ್ಮಗಳ ಅನುಭವಕ್ಕೆ ಚನ್ನಾಗಿ ಬರುತ್ತವೆ.

ನಮ್ಮ ದೇಶದ ಆಧುನಿಕ ಇತಿಹಾಸಜ್ಞರು ಮತ್ತು ಚಿಕಿತ್ಸಕರು ಆಯುರ್ವೇದ [illegible]

ಇದನ್ನು ಓದಿದರೆ ತಿಳಿಯುತ್ತೆ!! ತರಿಸಿದರೆ ಸಿಕ್ಕುತ್ತೆ

ಸಮಸ್ತರಿಗೂ ಅನುಕೂಲವಾದ, ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರೂ ದೊಡ್ಡವರೂ ನೋಡತಕ್ಕ, ತ್ರಯವಿಚಾರ, (ಬೆಳ್ಳಿ, ಭಂಗಾರ, ರತ್ನಗಳ) ಪರೀಕ್ಷೆ, ಲನೆ, ಕಟವಾಯು, ಜ್ವರ, ವಾತಪಿತ್ತವಿಚಾರ, ನಾಡೀಜ್ಞಾನ ಮತ್ತು ಚಿಕಿತ್ಸೆ

ಲಾಭವನ್ನು ಸಂಪಾದಿಸುವ ಬಗ್ಗೆ ಕಾಗದ, ಸೀಸದಕಡ್ಡಿ ಇಂಕರಿ [illegible] ಮೊದಲಾದ ಅನೇಕ ವಿಷಯಗಳು, ತನುಮನೋಲ್ಲಾಸವನ್ನೀಯುವ ತೈಲ, [illegible] ಸೋಪು, ಅತ್ತರ್, ಪನ್ನೀರು, ಪರ್ಬತ್, ಗುಲ್‌ಕನ್, ಕುಸುಮಗಳ ವಿವೇಚನೆ, [illegible] ತ್ತಾ ನೋಟಕರಿಗೆ ಆನಂದವನ್ನೀಯುವ ಗಿಲೀಟ್, ವಾಲೀಷ್ ವಾರ್ನೀಷ್, ಮುಂ[illegible] ಬಣ್ಣದ ವಿಷಯಗಳು

ಗಣನೆಗೆ ಮಿಗಿಲಾದ ಆಕಾಶಮಾನ ಮೊದಲಾದ ಅನೇಕ ವಿಷಯಗಳು ಮೊದಲನೇ ಭಾಗದಲ್ಲಿಯೇ ವಾಚಕರ ಹಸ್ತಗತವಾಗುವುದಕ್ಕಿರುವ ಪುಸ್ತಕವು ಯಾವುದು? "ಸಚಿತ್ರಕಲಾತರಂಗ" ಹಾಗಾದರೆ ಬೇಗನೆ ಬರೆದು ತರಿಸಿಕೊಳ್ಳಿರಿ! ಕ್ರಯ ಪ್ರತಿ ೧ಕ್ಕೆ ೧—೪—೦ ವಿ ಪಿ ಮೂಲಕ ೧—೬—೦

(೧) ವಿಳಾಸ—ಮ್ಯಾನೇಜರ್ ಯಸ್ ಜಿ ಯನ್ ಪ್ರೆಸ್
೧೭೮ ಅರಳೆಪೇಟೆ, ಬೆಂಗಳೂರು ಸಿಟಿ.

ಅಥವಾ

ಏಜಂಟರು—(೨) ದಿ ಊಲ್ಫನ್ ಮಾರ್ಟ್,
ನಂ ೧ ಮಂಗಳೂರು (ದ ಕ)

ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ

ಕಳ್ಳರನ್ನು ಹಿಡಿಯುವ ನಾಯಿ

ತನ್ನನ್ನು ಸಾಕಿದ ಯಜಮಾನನಿಗಾಗಿ ತನ್ನ ಪ್ರಾಣವನ್ನಾದರೂ ಸಮರ್ಪಿಸುವ ಪ್ರಾಣಿ ಯಾವುದೆಂದರೆ ನಾಯಿಯೇ ಸರಿ ಆದರೆ ನಮ್ಮ ದೇಶದಲ್ಲಿ ಈಗ ಅಷ್ಟು ಪ್ರಶಸ್ತವಾದ ಗುಣವುಳ್ಳವುಗಳು ವಿರಳ ಬಹುದಿನಗಳಿಂದಲೇ ನಮ್ಮ ದೇಶದ ರಾಜರು ಮೊದಲಾದ ಶ್ರೀಮಂತರುಗಳು ಶ್ರೇಷ್ಠವಾದ ಗುಣವುಳ್ಳ ಉತ್ತಮ ಜಾತಿಯ ನಾಯಿಗಳನ್ನು ಸಾವಿರಾರು ರೂಪಾಯಿಗಳ ಬೆಲೆಗೆ ಅನ್ಯದೇಶಗಳಿಂದ ತರಿಸಿಕೊಳ್ಳುತ್ತಿರುವರು ಈ ನಾಯಿ ಜಾತಿಯ ಬುದ್ಧಿ ಕುಶಲತೆಯನ್ನು ವಿವರಿಸುವ ಕಥೆಗಳು ಅನೇಕವಾಗಿರುವವು ಅವುಗಳಲ್ಲಿ ಸದ್ಯ ರುಶ್ಯಾದೇಶದಲ್ಲಿ ಕಳ್ಳರನ್ನು ಕಂಡು ಹಿಡಿಯುವುದಕ್ಕೆ ಕಲಿಸಲ್ಪಟ್ಟಿರುವ ಒಂದು ನಾಯಿಯ ಚರಿತ್ರವು ಅತ್ಯಂತ ವಿಚಿತ್ರವಾಗಿರುವುದು ಹೇಗೆಂದರೆ—ರುಷ್ಯಾದೇಶದ ಮಾಸ್ಕೊ ಪಟ್ಟಣದಲ್ಲಿರುವ ಒಬ್ಬ ದೊಡ್ಡ ಮನುಷ್ಯನ ಮನೆಗೆ ಒಂದು ದಿವಸ ಕಳ್ಳರು ಬಿದ್ದು ಬೆಲೆಬಾಳುವ ಕೆಲ ವಸ್ತುಗಳನ್ನೂ ಬ್ಯಾಂಕು ನೋಟುಗಳನ್ನೂ ಅಪಹರಿಸಿಕೊಂಡು ಹೋದರು ಆ ಕಳ್ಳರನ್ನು ಗೊತ್ತುಮಾಡುವುದಕ್ಕಾಗಿ, ಆ ಶಿಕ್ಷಣವನ್ನು ಪಡದಿದ್ದ "ಟ್ರಪ್" ಎಂಬ ನಾಯಿಯನ್ನು ಆ ಮನೆಗೆ ತಂದು ಬಿಟ್ಟರು ಅದು ಆ ಮನೆಯ ವಸ್ತುಗಳನ್ನೆಲ್ಲಾ ಮೂಸಿ ಮೂಸಿ ನೋಡಿಕೊಂಡು, ಬಳಿಕ ಅಲ್ಲಿಂದ ಹೊರಟು, ಕಳುವಾದ ವಸ್ತುಗಳನ್ನು ಹುಡುಕಲಾರಂಭಿಸಿತು ಪಟ್ಟಣವನ್ನೆಲ್ಲಾ ಸುತ್ತಿತು ಕಡೆಗೆ ಪ್ರಯಾಣಿಕರು ರಾತ್ರಿಯ ಹೊತ್ತು ವಿಶ್ರಮಿಸಿಕೊಳ್ಳುವ ಒಂದು ಸತ್ರಕ್ಕೆ ಹೋಗಿ, ಅಲ್ಲಿ ತಗುಲಿಹಾಕಿದ್ದ ಒಂದು ಹೊಸ ನಿಲುವಂಗಿಯನ್ನು ಮೂಸಿ ನೋಡಿತು ಅದು ಮನೆಗಳಿಗೆ ಬಣ್ಣವನ್ನು ಬಳಿಯುವ ಅಲೆಗ್ಸಾಂಡರ್ ಎಂಬುವನದು ಅದರ ಜೇಬಿನೊಳಗೆ ಕಳುವಾಗಿದ್ದ ನೋಟುಗಳು ಇಡಲ್ಪಟ್ಟಿದ್ದುವು. ತನ್ನಿಮಿತ್ತ ಪೋಲೀಸರು ಅದನ್ನು ಗೊತ್ತುಮಾಡಿಕೊಂಡರು ಬಳಿಕ ಅದು ಹಾಗೆಯೇ ಸುತ್ತಿಕೊಂಡು ಬಟ್ಟೆಗಳನ್ನು ಮಾರುವ ಒಂದಂಗಡಿಗೆ ಹೋಯಿತು ಅಲ್ಲೂ ಕೂಡ ಅದು ಮೂಸಿನೋಡಿ ಕಳುವಿನ ಸೊತ್ತುಗಳು ಇರುವುವೆಂಬುದನ್ನು ಸೂಚಿಸಿತು ಅದರ ಮೇಲೆ ಶೋಧನೆ ಮಾಡಲಾಗಿ, ಕಳುವಾಗಿದ್ದ ಬೆಳ್ಳಿಯ ಸಾಮಾನು ಮೊದಲಾದುವುಗಳು ದೊರೆದುವು ಅಷ್ಟರಲ್ಲಿ ಒಬ್ಬ ಬಂಡಿಯವನು ತನ್ನ ಎರಡು ಅಂಗಿಗಳನ್ನು ಯಾರೋ ಕದ್ದರೆಂದು ಮೊರೆಯಿಟ್ಟುಕೊಂಡನು ಕಳುವಾದ ಸ್ಥಳಕ್ಕೆ ಆ ನಾಯಿಯನ್ನು ಕರದುಕೊಂಡು ಹೋಗಿ, ಅಲ್ಲಿಂದ ಬಿಟ್ಟುಬಿಟ್ಟರು ಆ ವಿಚಿತ್ರವಾದ ಮೇಧೆಯುಳ್ಳ ನಾಯಿಯು ಅಲ್ಲಿಂದ ವಾಸನೆಯನ್ನು ಹಿಡಿಯುತ್ತ ಹೊರಟು, ಸ್ವಲ್ಪ ದೂರ ಸುತ್ತಿ ಕೆಲಸಿಮಿಷಗಳೊಳಗಾಗಿ ಸಮೀಪದಲ್ಲಿದ್ದ ಒಂದು ಮನೆಗೆ ನುಗ್ಗಿ, ಅದರೊಳಗೆ ತಗುಲ್ಹಿ ಹಾಕಿದ್ದ ಕೋಟುಗಳನ್ನು ತೋರಿಸಿಕೊಟ್ಟಿತು ಈ ವಿಚಿತ್ರವನ್ನು ಕಣ್ಣಾರ ಕಂಡ ಜನರು ಅತ್ಯಾಶ್ಚರ್ಯದಲ್ಲಿ ಮುಳುಗಿದರು ಈ ನಾಯಿಯನ್ನು ಆ ದೇಶದ ಕಳ್ಳ[illegible]ಕರು ಅಮಾನುಷ ಶಕ್ತಿಯುಳ್ಳ ಅದ್ಭುತ ಪ್ರಾಣಿ ಎಂದು ತಿಳಿದಿರುವರಂತೆ. [illegible] ಗುಣವುಳ್ಳ ನಾಯಿಯು [illegible]

ನೋಟೀಸು.

ತೀರ್ಥಹಳ್ಳಿ ತಾಲೂಕು ಮುಂಡಗಾರು ಮಾಗಣೆ ಹೇರಂಬಾಪುರ ಗ್ರಾಮದ ದಿ॥ ಶೇಷಭಟ್ಟರ ಮಗ ಪದ್ಮನಾಭಭಟ್ಟನು ಸಮಸ್ತ ಜನರಿಗೆ ಈ ಮೂಲಕ ತಿಳಿಸುವದೇನೆಂದರೆ:—

ಉಡುಪಿ ತಾಲೂಕು ಹೆಬ್ರಿ ಕಸಬಾ ಗ್ರಾಮದ ನಂಬ್ರ [illegible] ಪಟ್ಟೆಗೆ ಒಳ್ಪದ ಸರ್ವೆ ನಂಬ್ರ ೩೦ರಲ್ಲಿ ೧ [illegible] ನೆ ಸಬ್ ಡಿವಿಜನ್‌ಗಳ ಆಸ್ತಿಯನ್ನು ನಾನು ಹೆಬ್ರಿ ಕಸಬಾ ಗ್ರಾಮದಲ್ಲಿರುವ ಎರ್ಮಾಳ ರಾಮಚಂದ್ರಶಾನಭೋಗರ ಮಗ ದೇವೇಂದ್ರಶಾನಭೋಗರಿಗೆ ರೂ ೪೦೦—೦—೦ಕ್ಕೆ ರಿಜಿಸ್ಟ್ರಿ ಸಿಶಿಂ ತಾ [illegible]—[illegible]ರಲ್ಲಿ ಒಂದು ಕ್ರಯ ಸಾಧನ ಬರಕೊಟ್ಟಿದ್ದೇನೆ. ಅದರ ಪ್ರತಿಫಲ ನನಗೆ ಬರಲಿಲ್ಲ. ಆ ಪೈಕಿ ರೂ. ೩೫೦—೦—೦ಕ್ಕೆ ಅದೇ ದಿವಸ ಸದರಿ ದೇವೇಂದ್ರಶಾನಭೋಗರು ನನಗೆ ರಿಜಿಸ್ಟ್ರಿ ನಿಶಿಂ ಪ್ರೊಮಿಸರಿ ನೋಟು ಬರಕೊಟ್ಟಿರುತ್ತಾರೆ. ನನಗೆ ಸದರಿ ಕ್ರಯ ಸಾಧನದ ಪ್ರತಿಫಲ ಸಲ್ಲದ ಕಾರಣ ಅವರಿಗೆ ಅದನ್ನು ಯಾವ ವಿಧದಿಂದಲೂ ಪರಭಾರೆ ಮಾಡುವ ಹಕ್ಕಿಲ್ಲ. ಅವರು ಈ [illegible] ವೊಕದ್ದಮೆ [illegible] ಸಮಯದಲ್ಲಿ ಪರಭಾರೆ ಮಾಡುವದರಲ್ಲಿ ಇದ್ದುದಾಗಿ ನಾನು ತಿಳಿದುಬಂದುದರಿಂದ ಈ ಮೂಲಕ ಸಮಸ್ತರೂ ತಿಳಿಯರು ಮಾಡುವ ಅಗತ್ಯಬಿದ್ದಿದೆ. ಹಾಗೆ ಅವರು ಕರಾರಿನ [illegible] ಉಂಟು ನನ್ನ ವಿರೋಧಕ್ಕೆ ಎಷ್ಟು ಮಾತ್ರಕ್ಕೂ ತಿಂದಾಗಲಿಕ್ಕೆ ಇಲ್ಲ [illegible] ಈ ಮೂಲಕ ತಿಳಿಸಿದ್ದೇನೆ.

ಮೊಕ್ಕಾಂ ಕಾರ್ಕಳ
ತಾ ೩೦—೪—೧೯೧೦

ಪದ್ಮನಾಭ ಬಟ್ಟನ ರುಜು

ಪತ್ರವ್ಯವಹಾರ

[illegible]

ಅಯ್ಯಾ ಸ್ವದೇಶಾಭಿಮಾನಿ ಪ್ರಕಾಶಕರೇ,

ಕಳೆದ ಏಪ್ರಿಲ್ [illegible]ನೇ ತಾರೀಖಿನ ತಮ್ಮ ಪತ್ರಮೂಲಕ "ತುಳುನಾಡಿನ ಬಂಟರು" ಎಂಬ ತಮ್ಮ ಮಿತ್ರರೊಬ್ಬರು ಪ್ರಕಟಿಸಿದ "ಅಳಿಯಸಂತಾನದ ಕಟ್ಟು" [illegible] ಪತ್ರವನ್ನು [illegible] ನೋಡಿ [illegible]

ಸ್ವಾಭಾವಿಕವಾದ ಧರ್ಮಕ್ಕೆ ವಿರೋಧವಾಗಿ ಸದರಿ ಕಟ್ಟಿನಂತೆಯೇ ನಡಕೊಳ್ಳಬೇಕೆಂದು [illegible] ಒಳಪಟ್ಟ ನಂತರ [illegible] ಬಂದಿರುವ [illegible] ಎಷ್ಟು ಕಷ್ಟ, ನಷ್ಟ [illegible] ಮತ್ತು ಈ ಕಟ್ಟಿನ [illegible]ವಾಗಿ ಜೈನರ ಅಭಿಪ್ರಾಯ [illegible] ತಮ್ಮ ಪತ್ರದಲ್ಲಿ ಪ್ರಕಟಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

[illegible] ಪೈಶಾಚಿಕವಾದ [illegible] ಸುಮಾರು ಒಂದು ಸಾವಿರ ವರುಷ [illegible] ಕಟ್ಟು [illegible] ಹೇಳಲ್ಪಟ್ಟ ಅಳಿಯಸಂತಾನದ ಕಟ್ಟು [illegible] ಧರ್ಮದವನೋ [illegible] ಸ್ವಭಾವಕ್ಕೆ ವಿರೋಧವಾದ ಈತನ ಶಾಸನವನ್ನು ಜನರು [illegible] ಅನುಸರಿಸಿರಬೇಕೆಂದು ಊಹಿಸಬೇಕಾಗಿರುತ್ತದೆ. ಜೈನರೆಂತೂ ಈ ನೂತನವಾದ ಕಟ್ಟಿಗೆ ಒಡಂಬಟ್ಟು ಅದನ್ನು ಶಿರಸಾವಹಿಸಿಕೊಂಡದ್ದು [illegible] ಈ ಕಟ್ಟು ಜಿನಶಾಸ್ತ್ರಕ್ಕೂ, ನೀತಿಗೂ, ಪದ್ಧತಿಗೂ ಪೂರ್ಣ ವಿರೋಧವಾಗಿದೆ. ಈ [illegible] ಇಂಥಾ ಸಮಯದಲ್ಲಿಯೇ ಉತ್ಪನ್ನವಾಗಲಿಕ್ಕೆ ಸಾಕೆಂದು [illegible] ಸಮಯಕ್ಕಿಂತ ಅತಿ ಪೂರ್ವದಲ್ಲಿಯೇ ಜೈನರು [illegible] ಉತ್ಕೃಷ್ಟ ಸ್ಥಿತಿಯಲ್ಲಿದ್ದರೆಂದೂ ಅವರ ಶಾಸ್ತ್ರ, ನೀತಿ ಮತ್ತು ನಡವಳಿಕೆಯು [illegible] ದವಾದ ಸಂಗತಿಯಾಗಿದೆ. ಅಲ್ಲದೆ ಈ ಭೂತಾಳಪಾಂಡ್ಯನ [illegible] ಕೂಡಾ ಜಿನ ಸಂಘವು [illegible] ಉನ್ನತ ಸ್ಥಿತಿಯಲ್ಲಿತ್ತೆಂದು [illegible] ಕಟ್ಟಿನಿಂದಲೇ ಸಮಾಧಾನವಾಗುತ್ತದೆ. ಜೈನರು ಈ ಪೈಶಾಚಿಕ ಧರ್ಮಕ್ಕೆ ಒಡಂಬಟ್ಟರೂ ಪೂರ್ಣವಾಗಿ ಆತನ ಬಲೆಯಲ್ಲಿ ಶಿಕ್ಕಿಬೀಳಲಿಲ್ಲವೆಂದು ಅವರ ಶಾಸ್ತ್ರಕ್ಕನುಸಾರವಾಗಿ ಅವರು ಈಗಲೂ ಆಚರಿಸುವ ಕೆಲವು ನಡವಳಿಕೆಗಳಿಂದ ಸಮಾಧಾನವಾಗುತ್ತದೆ. ಈಗಲಾದರೂ ಜೈನರಲ್ಲಿ ಒಂದು ಭಾಗದವರು ಆತನ ಕಟ್ಟನ್ನು ಯಾವ ವಿಧದಲ್ಲಿಯೂ ಮಾನಿಸುವದಿಲ್ಲ. ಮತ್ತೊಂದು ಭಾಗದವರು ದಾಯವಾದಿ ತನದಲ್ಲಿ ಭೂತಾಳಪಾಂಡ್ಯನ ಶಾಸನವನ್ನು ಅನುಸರಿಸುತ್ತಾರಾದರೂ ಲಗ್ನಾದಿಕಾರ್ಯಗಳಲ್ಲಿಯೂ ಸೂತಿಕಾದಿ ಆಚರಣೆಯಲ್ಲಿಯೂ ಅವರ ಪೂರ್ವ ಶಾಸ್ತ್ರಕ್ಕನುಸಾರವಾಗಿ ನಡಿಯುತ್ತಾರೆ. ಆದರೆ ಮೂರನೆಯದಾದ ಇನ್ನೊಂದು ಭಾಗದವರು ಆತನ ಕಟ್ಟಿನಂತೆಯೇ ಸಾಧಾರಣವಾಗಿ ಸರ್ವ ವಿಧದಲ್ಲಿಯೂ ನಡಕೊಳ್ಳುತ್ತಾರೆ. ಕ್ರೂರವಾದ ರಾಜನ ಶಾಸನಕ್ಕೆ ಒಮ್ಮೆಲೇ ಜೈನರು ಒಪ್ಪಿಕೊಳ್ಳದೆ ಸಂದರ್ಭಾನುಸಾರವಾಗಿ ನಡಕೊಂಡರೆಂದು ಇದರಿಂದ ಸಮಾಧಾನವಾಗುತ್ತದೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಜೈನರು ಅಳಿದುಕೊಂಡು ಬರಲಿಕ್ಕೆ ಈ ಅಳಿಯಸಂತಾನದ ಕಟ್ಟೇ ಮೂಲಕಾರಣವಾಗಿದೆ ಎಂದರೆ ಅದೊಂದು ಅತಿಶಯೋಕ್ತಿ ಎಷ್ಟು ಮಾತ್ರಕ್ಕೂ ಆಗಲಿಕ್ಕಿಲ್ಲ. [illegible] ಸ್ಥಾಪಿಸಿ ಅದನ್ನು ನಡಿಸುವ [illegible] ಸಂತನ [illegible] ದರೋ ಇಡೀ ಊರಿನವರಿಗೆ ಒಟ್ಟಿಗೆ ಕೂಡಿ ಕೂಡಾ ಒಂದು ಜೈನಾಲಯವನ್ನು [illegible]ವರೆ ಅಸಾಧ್ಯ ಕಾಣುತ್ತದೆ. ಇದು ಎಂಥಾ ದುರಾದೃಷ್ಟವೆಂದು [illegible] ಆಲೋಚಿಸಿರಿ. ಒಮ್ಮೆ ದಯಮಾಡಿ ಹಜೂರಿನ ಹಳೇ ರಿಕಾರ್ಡನ್ನು ನೋಡಿದರೆ ಇತ್ತಲಾಗೆ ಸುಮಾರು ನೂರು ವರುಷಗಳ ಹಿಂದೆ ಯಾವ್ಯಾವ ಗ್ರಾಮಗಳಲ್ಲಿ ಜೈನಮತದವರಿಗೆ ಎಷ್ಟೆಷ್ಟು ಆಸ್ತಿಪಾಸ್ತಿಗಳಿದ್ದವು, ಈಗ ಪ್ರಕೃತದಲ್ಲಿ ಎಷ್ಟಿರುವವೆಂದು ಸಮಾಧಾನವಾಗುವದು. ಎಷ್ಟೋ ಆಸ್ತಿಪಾಸ್ತಿಗಳು ದಿಕ್ಕಾಪಾಲಾದವು. ಅನೇಕ ಆಸ್ತಿಪಾಸ್ತಿಗಳು ಸರಕಾರ ಪಾಲಾದವು. ಸುಮಾರು ನೂರು ವರುಷ ಸಮಯದಲ್ಲಿಯೇ ಇಷ್ಟು ಅಧೋಗತಿಯಾಗಿದ್ದ ಮೇಲೆ ಸಾವಿರ ವರುಷಗಳ ಮುಂದಿನ ಸ್ಥಿತಿಯನ್ನೂ ಈಗಿನ ಗತಿಯನ್ನೂ ತಾವೇ ಆಲೋಚಿಸಿಕೊಳ್ಳಿರಿ. ಒಮ್ಮೆ ಸ್ಟರಕ್ ದೊರೆಯವರು ರಚಿಸಿದ "ಕೆನರಾ ಗೈಡ್" ಎಂಬ ಪುಸ್ತಕವನ್ನು ಬೇಕಾದರೆ ಓದಿನೋಡಿರಿ. ಆಗ ತುಸಮಟ್ಟಿಗೆ ಸಮಾಧಾನ ಆಗಬಹುದು.

ತುಳುನಾಡಿನ ಬಂಟರು ಪ್ರಸ್ತಾಪಿಸಿದಂತೆ ೧[illegible]ಲನೇ ಇಸವಿಯಲ್ಲಿ ಗವರ್ನರ್ ದೊರೆಗಳ ಮುಂದಿನವರೆ ಈ ಜಿಲ್ಲೆಯ ಕಲೆಕ್ಟರ್ ದೊರೆಯವರ ಮುಖಾಂತರ ಬಿನ್ನವತ್ತಲೆಯನ್ನು ಬರಕೊಂಡದ್ದು ಜೈನರಿಗೆ ಆಗಿರುತ್ತದೆ. ಜಿನಸಂಘದಲ್ಲಿ ಬರಬರುತ್ತಾ ವಿದ್ಯೆಯು ನಾಶವಾಗಿ ತಮ್ಮ ಬಂಧು ಸಂಘದಲ್ಲಾದರೂ ಒಗ್ಗಟ್ಟಿನಿಂದ ಕಾರ್ಯ ಸಾಧಿಸಿಕೊಳ್ಳಲಿಕ್ಕೆ ತಕ್ಕ ಬುದ್ಧಿಯೂ ಕಾರ್ಯಸಾಧನದ ಯುಕ್ತಿಯೂ ಬೇಕಾದಷ್ಟು ಇಲ್ಲದೆ ಹೋದ್ದರಿಂದ ಬಿನ್ನವತ್ತಲೆಯು ಬೆನ್ನ ಹಿಂದೆ ಬಿದ್ದುಹೋಯಿತು. ಈಗ ಇತ್ತಲಾಗೆ ಇದೇ ವರುಷ ಪುನಹ ಅಳಿಯಸಂತಾನದ ಕಟ್ಟನ್ನು ಜೈನರು ಅಳಿಸಿಬಿಡಲಿಕ್ಕೆ ಆಲೋಚಿಸಿರುವರು.

ಹ್ಯಾಗೆ 'ಹಿಂದುಲಾ' 'ಮಹಮ್ಮದಿಲಾ' ಎಂಬ ಕಾನೂನುಗಳು ಆಯಾ ಮತಾನುಯಾಯಿಗಳಿಗಿರುವವೋ ಹಾಗೆಯೇ ಜೈನ ಮತಾನುಯಾಯಿಗಳಿಗೆ ಅವರ ಶಾಸ್ತ್ರಸಮ್ಮತವಾದ ಕಾನೂನುಗಳನ್ನು ರಚಿಸಬೇಕೆಂದು ಸರಕಾರಕ್ಕೆ ಮನವಿಮಾಡಿಕೊಳ್ಳುವರೆ ಮೊನ್ನೆ ಕ್ರಮವಾಗಿ ಬೆಳಗಾವಿಯಲ್ಲಿ ಜೈನ ಮಹಾಸಭೆಯು ಒಂದು ಕಮಿಟಿಯನ್ನು ಏರ್ಪಡಿಸಿರುತ್ತದೆ. ಅದೇ ಸಮಯದಲ್ಲಿ ಕನ್ನಡಜಿಲ್ಲೆಯ ಜೈನರು ಅಳಿಯಸಂತಾನದ ಕಟ್ಟಿಗೆ ತುತ್ತಾಗಿರುವವನ್ನು ತಪ್ಪಿಸುವ ಪ್ರಯತ್ನ ತೆಗೆದುಕೊಳ್ಳಬೇಕೆಂದು ಆಲೋಚಿಸಿ ಕನ್ನಡ ಜಿಲ್ಲೆಯ ಜೈನ ಮುಖಂಡರ ಒಂದು ಉಪ ಕಮಿಟಿಯನ್ನು ಮೇಲ್ಕಂಡ ಕಮಿಟಿಗೆ ಅಳಿಯಸಂತಾನದ ಕಟ್ಟಿನ ವಿಷಯವಾಗಿ ಅಭಿಪ್ರಾಯ ವರದಿ ಕೊಡುವರೆ ಏರ್ಪಡಿಸಿರುತ್ತಾರೆ. ಕನ್ನಡಜಿಲ್ಲೆಯ ಜೈನರ ಉಪಕಮಿಟಿಗೆ ಅಳಿಯಸಂತಾನದ ಕಟ್ಟಿನ ನಿರ್ಬಂಧನೆಗೆ ಒಳಗಾಗಿರುವ ಅನ್ಯ ಸಂಘದವರು ಸಹಾಯಕೊಟ್ಟು ಅವರು ಕೂಡಾ, ತಮ್ಮನ್ನು ಅಳಿಸಲಿಕ್ಕೆ ಕಾರಣಭೂತವಾದ ಕಟ್ಟನ್ನೇ ಅಳಿಸಿಬಿಡಲಿಕ್ಕೆ ಒಳ್ಳೇ ಸಂದರ್ಭ ಬಂದದೆ. ನಮ್ಮ ಗವರ್ನರ ದೊರೆಗಳ ಸಭೆಯಲ್ಲಿ ಬಹುಮಾನವಂತ ಕೃಷ್ಣನಾಯರರವರೂ ವಾಸುದೇವರಾಜರರವರೂ ಈ ಕಾನೂನನ್ನು ತಿದ್ದಲು ಪ್ರಯತ್ನಿಸುತ್ತಿರುವಾಗ ನಮ್ಮ ಜಿಲ್ಲೆಯವರಾಗಿಯೂ ಅವರಿಗೆ ತಕ್ಕದಾದ ಸಹಕಾರವನ್ನು ಕೊಡಲು ಯತ್ನಿಸಬೇಕು. ಯಾಕಂದರೆ ಈ ಸಂದರ್ಭವು ತಪ್ಪಿಹೋದಲ್ಲಿ ನಮ್ಮ ಜಿಲ್ಲೆಯ ಈ ಪೈಶಾಚಿಕ ಅಧರ್ಮದಿಂದ ವಿಮೋಚನೆಯು ಸದ್ಯದಲ್ಲಿ ದೊರಕುವುದು ಅಸದಳ.

ಜೈನಮತಾಭಿಮಾನಿ.

BERNA WATCH COMPANY
ಬರ್ನಾ ವಾಚು ಕಂಪೆನಿ

ಕಿಸೆ ಗಡಿಯಾರುಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿರುವುದು. ಗೊರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಗ್ಗವಾದ ಬೆಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿಕೊಡುವವು.



ನಮ್ಮ 'ಮೆಕ್ಸಿಮ್' ವಾಚನ್ನು ಬರವಸೆಯಿಂದ ಕೊಂಡುಕೊಳ್ಳಿರಿ
ನಿಕಲ್ ಕೇಸಿನಲ್ಲಿ ರೂ. ೧೦-೦-೦
ಬೆಳ್ಳಿ ಕೇಸಿನಲ್ಲಿ ರೂ ೧೪-೮-೦
ನಮ್ಮ 'ನ್ಯೂ. ಡಿ. ಪಿ' ನಿಕಲ್ ಕೇಸಿನಲ್ಲಿ ರೂ. ೧೪-೦-೦
ಬೆಳ್ಳಿ ಕೇಸಿನಲ್ಲಿ ರೂ. ೧೮-೮-೦.
ಕೆಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು.

ನಮ್ಮ 'ಚಾರ್ಮರ್' ನಿಕಲ್ ಕೇಸಿನಲ್ಲಿ ರೂ. ೧೬-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೧-೦-೦
ನಮ್ಮ 'ವರ್ಡಲಿ.' ನಿಕಲ್ ಕೇಸಿನಲ್ಲಿ ರೂ. ೧೨-೦-೦
ಸಿಲ್ವರ್ ಕೇಸಿನಲ್ಲಿ ರೂ. ೨೩-೦-೦
ನಮ್ಮ 'ಬೆಸ್ಟ್' ನಿಕಲ್ ಕೇಸಿನಲ್ಲಿ ರೂ. [illegible]-೦-೦
ಬೆಳ್ಳಿ ಕೇಸಿನಲ್ಲಿ ರೂ. [illegible]-೦-೦

ಎಲ್ಲಾ ಗಡಿಯಾರುಗಳು ಜಂಟ್ಸ್ ಸ್ಯಾಜಿನಲ್ಲಿರುವವು. ವಾಚುಗಳನ್ನು [illegible] ಹಳ್ಳಿಗೆ ಖರ್ಚಿನಲ್ಲಿ ವಿ. ಪಿ. ಮಾಡಿ ಕಳುಹಿಸುವೆವು. ನಮ್ಮ [illegible] ಕೋರ್ಟ್ ಮುಂಬಯಿ ಆಫೀಸಿನಲ್ಲಿಯೂ ಮತ್ತು [illegible]

[illegible]

ಟ್ರಾನ್ಸಿಟ ಪ್ರಯಾಣ.

[illegible] ಮಂಗಳೂರಿಂದ ಕುಂದಾಪುರ ಪರಿಯಂತ ಎರಡು ಟ್ರಾನ್ಸಿಟುಗಳು ಪುತ್ತೂ [illegible] ಒಂದು ಪ್ರತಿ ದಿನ ನಡಿಯುವದರಿಂದ ಪ್ರಯಾಣಸ್ಥರಿಗೆ ದೊರಕುವ ಸೌಲಭ್ಯಗಳು ಶ್ಲಾಘನೀಯವೇ. ಕೊಂಚ ಸಮಯದಲ್ಲಿ ಹೆಚ್ಚು ದೂರ ಹೋಗಲು ಸೌಕರ್ಯಗಳು ದೊರಕುವದರಿಂದ ಹೆಚ್ಚು ದುಡ್ಡು ವೆಚ್ಚವಾಗುವದಿಲ್ಲ. ಈ ಕಾರಣದಿಂದ ಆದಾಯವು ಹೆಚ್ಚುವುದು. ಕಾರ್ಯತಃ ಇಂತಹ ವಾಹನಗಳನ್ನು ಒದಗಿಸಿಕೊಟ್ಟು ಅವುಗಳ ಚಲನದ ಪರಾಮರಿಕೆಯನ್ನು ನೋಡುವ ಗೃಹಸ್ಥರು ಲೋಕೋಪಕಾರಿಗಳೆಂಬ ಸುನಾಮಾರ್ಹರಾಗಿರುತ್ತಾರೆ. ಪ್ರಕಾಶಮಯನಾದ ದಿನಕರನು ಸರ್ವ ಚರಾಚರವನ್ನು ಆಹ್ಲಾದ ಶರಧಿಯಲ್ಲಿ ಓಲಾಡಿಸುವ ಸುಖವು ನಿಶಾಪತಿಯು ಜೋಡಿಸುವ ಕಗ್ಗತ್ತಲೆಯಿಂದ ನಿರ್ಗತವಾಗುವಂತೆ ಟ್ರಾನ್ಸಿಟ್ ಪರ್ಯಟನಾಧಿಕಾರಿಗಳು ಜನರ ಅನುಕೂಲ್ಯಕ್ಕೆ ಕೊಡುವ ತಾತ್ಪರ್ಯವು ಈ ರಥಗಳ ಸಾರಥಿಗಳ ಮೌಢ್ಯಕ್ಕೂ ಮೌರ್ಖ್ಯಕ್ಕೂ ಆಹುತಿಯಾಗಿ ನಿಷ್ಫಲವಾಗುತ್ತದೆಂಬ ಜನಜನಿತವಾದ ವಿದ್ಯಮಾನವು ಪರಿಗಣನೀಯವಾದದ್ದು. ಒಂದು ಸಣ್ಣ ದೃಷ್ಟಾಂತವನ್ನು ವಿವರಿಸಿಬಿಡುತ್ತೇನೆ. ಕೆಲವು ತಿಂಗಳ ಹಿಂದೆ ಒಂದು [illegible] ಹೋಗುವ ಸಮಯದಲ್ಲಿ [illegible] ವೈಶೇಷ್ಯಗಳ್ಯಾವದೂ ಕಂಡುಬರಲಿಲ್ಲ. ಕುದುರೆಗಳನ್ನು ನಡಿಸುವವರನ್ನು ಹಯವಾನರೆಂಬ ಮಾತಿನಿಂದ ಕರಿಯುವದು ಅಪಾರ್ಥವಲ್ಲವಾದರೆ ಈ ಪುಣ್ಯಪುರುಷರು ಆ ಜೀವಿಗಳ ಬೆನ್ನಿನ ಮೇಲೆ ಕೊಡುವ ಏಟುಗಳೂ ಆ ಏಟುಗಳಿಂದ ಅವುಗಳ ಕರಳುಗಳು ಸಹ ವೇಧನೆ ಹೊಂದುವದೆಂಬ ತಾತ್ಪರ್ಯಸೂಚಕ ಅಂಗಸ್ಫುರಣಗಳೂ ಭೂತದಯೆ ಪಶ್ಚಾತ್ತಾಪ ಲವಷ್ಟಾದರೂ ಉಳ್ಳ ನರದೇಹಿಗಳ ಮನಸ್ಸುಗಳನ್ನು ಕರಗಿಸದಿರಲಾರವೆನ್ನುವದು ಯಥೋಚಿತವಾದ ಅಭಿಪ್ರಾಯವೆಂದು ಯಾರ ಚಿತ್ತಕ್ಕೂ ಸಮಾಧಾನವಾಗುವದು. ಈ ತತ್ವವಿಚಾರ ಪ್ರಯಾಣಸ್ಥರಿಗೇಕೆ ಆತ್ಮವಿಹೀನವಾದ ತಟ್ಟುಗಳಿಗೆ ಚಬುಕಿನಿಂದ ಹೊಡದರೇನು, ವನಿಕೆಗಳಿಂದ ಕುಟ್ಟಿದರೇನು? ಅಷ್ಟು ಪಾಪಪುಣ್ಯ ನೋಡುವವರು ಮನೆಯಲ್ಲಿ ಕೂತುಕೊಳ್ಳಲಿ ಇಲ್ಲವೆ ನಡಕೊಂಡು ಪ್ರಯಾಣ ಮಾಡಲಿ ಅಥವಾ ಹಣವಿದ್ದರೆ ಆನೆಯ ಮೇಲೆ ಅಂಬಾರಿ ಹಾಕಿ ಸಂಚರಿಸಲಿ ಎಂಬ ನಿಂದಾಸ್ಪದವಾದ ದುರ್ನುಡಿಗಳು ಪರಪಕ್ಷದವರ ಬಾಯಿಯಿಂದ ಬರಬಹುದು. ಈ ಸಂಗತಿಯು ಹಾಗಿರಲಿ, ಮುಂದಿನ ಪ್ರಸಂಗ ಇನ್ನೊಂದು ಸಂಚಿಕೆಯಲ್ಲಿ ಸೂಚಿಸುವೆನು.

ವಿದೇಶ ವೃತ್ತಾಂತ.

ಹಿಂದೂಸ್ಥಾನದ ಮಾಜಿ ಸರ್ವಸೇನಾಧಿಪತಿಯಾಗಿದ್ದ ಕಿಚ್ನರ್ ಪ್ರಭುಗಳು ಅಂಗ್ಲಾಂಡಕ್ಕೆ ಒಂದು ತಲ್ಪಿರುವರು

ಮೊರ್ಲೆ ಪ್ರಭುಗಳವರಿಗೆ ಬ್ರಿಟಿಷ್ ಪಾರ್ಲಿಮೆಂಟ್ ಮೆಂಬರರಾದ ಮಿ| ಮೆಕರ್ನೆಸ್ ಎಂಬವರು ಹಿಂದೂಸ್ಥಾನದಲ್ಲಿ ಇತ್ತಲಾಗೆ ಜಾರಿಗೆ ಬಂದ ವರ್ತಮಾನಪತ್ರಗಳ ಮತ್ತು ಮುದ್ರಣಾಲಯಗಳ ಶಾಸನಗಳ ಕಾಠಿಣ್ಯದ ವಿಷಯವಾಗಿ ಬರೆದ ಮನವಿಗೆ ಉತ್ತರವು ದೊರಕಿರುವುದು. ಈ ಹೊಸ ಕಾನೂನು ಮಸೂದೆಯು ವೈಸರಾಯ ಪ್ರಭುಗಳ ನ್ಯಾಯವಿಧಾಯಕ ಸಭೆಯು ಮುಂದಿಡುವ ಮೊದಲು ಇದರ ಸಾರಾಂಶವನ್ನು ತಾನು ತಿಳಕೊಂಡು ಪರ್ಯಾಲೋಚಿಸಿ ಇದಕ್ಕೆ ತನ್ನ ಸಮ್ಮತವನ್ನು ಕೊಟ್ಟಿರುವೆನೆಂತಲೂ, ಕಾನೂನು ಮಸೂದೆಯು ಸಭೆಯಲ್ಲಿ ಪೂರ್ಣವಾಗಿ ವಾದಿಸಲ್ಪಟ್ಟಿರುವುದೆಂತಲೂ, ಜಾರಿಗೆ ಬಂದ ಆಕ್ಟನ್ನು ತಾನು ಪರಿಶೋಧಿಸಿ ನೋಡಿರುವೆನೆಂತಲೂ, ಅದನ್ನು ಜಾರಿಗೆ ತಾರದೆ ಇರಲಿಕ್ಕೆ ಕಾರಣವೇನೂ ಇಲ್ಲವೆಂಬದಾಗಿಯೂ ಮೊರ್ಲೆ ಪ್ರಭುಗಳು ಉತ್ತರಕೊಟ್ಟಿರುವರು.

ಅಮೇರಿಕದಲ್ಲಿಯ ಹತ್ತಿ ಬೆಳೆಯು ಬಿರುಗಾಳಿಯಿಂದ ಬಹಳ ಹಾಳಾಗಿರುವುದು. ಸರಾಸರಿ ಅರೆವಾಸಿ ಬೆಳೆಯು ಹೀಗೆ ಹಾಳಾಗಿ ಹೋಗಲಿಕ್ಕೆ ಸಾಕೆಂಬದಾಗಿ ಅಂದಾಜು ಮಾಡಿರುತ್ತದೆ. ಹತ್ತಿಬೀಜವು ಸಹ ಇಲ್ಲದಿರುವುದರಿಂದ ಪುನಹ ಹತ್ತಿ ಬೆಳಿಸುವುದು ಅಸಾಧ್ಯ. ಹತ್ತಿ ಬೀಜದ ಕ್ರಯವು ಸಹಾ ಟನ್ ಒಂದಕ್ಕೆ 50 ರಿಂದ 150 ಡೊಲ್ಲರಿಗೆ ಏರಿರುವುದು, ಅಮೇರಿಕದಲ್ಲಿ ಬೆಳಿಯುವ ಹತ್ತಿಯು ವಿಶೇಷವಾಗಿ ಭೂಲೋಕದ ಇತರ ಪ್ರಾಂತ್ಯಗಳಲ್ಲಿರುವ ವಸ್ತ್ರಕಾರ್ಖಾನೆಗಳಲ್ಲಿ ಉಪಯೋಗಿಸಲ್ಪಡುವುದರಿಂದ ವಸ್ತ್ರದ ಕ್ರಯವು ಈ ನಿಮಿತ್ತ ಜಾಸ್ತಿಯಾಗಲಿಕ್ಕೆ ಸಾಕೆಂದು ಹಲವರು ಅಭಿಪ್ರಾಯಪಡುತ್ತಾರೆ.

[illegible]ಕರ ಸಂಯುಕ್ತ ಸಂಸ್ಥಾನದ ಮಾಜಿ ಪ್ರೆಸಿಡೆಂಟರಾದ ಮಿ| ರುಸ್‌ವೆಲ್ಟರವರು ಫ್ರಾನ್ಸ್ ದೇಶದ ಪ್ಯಾರಿಸ್ ನಗರಕ್ಕೆ ಬಂದು ತಲಪಿರುವರು. ಪ್ಯಾರಿಸ್ ಮುನಿಸಿಪಾಲಿಟಿಯವರು ಇವರನ್ನು ಬಹಳ ಸಂಭ್ರಮದಿಂದ [illegible]ರು.

[illegible]ಯಲ್ಲಿಯ ಬಯಿಕೊಯಿರಿಬೋ ಎಂಬ ಹಳ್ಳಿ[illegible] ಎಂಬ ನರ್ತನಾಲಯಕ್ಕೆ ಬೆಂಕಿ ಬಿದ್ದು ನೂರಾರು ಜನರು ಮೃತಪಟ್ಟರೆಂದು ಹಿಂದಿನ ಒಂದು ಸಂಚಿಕೆಯಲ್ಲಿ ತಿಳಿಸಿದ್ದೆವಲ್ಲ ಈ ದುಃಖಸಮಾಚಾರ ಪೂರ್ಣ ವಿವರವು ಇತ್ತಲಾಗೆ ಪ್ರಕಟಿಸಲ್ಪಟ್ಟಿರುವುದು

ಬಯಿಕೊಯಿರಿಬೋ ಹಳ್ಳಿಯಲ್ಲಿ ಒಂದು ದೇವಾಲಯವನ್ನು ಕಟ್ಟಿಸುವ ಸಹಾಯಾರ್ಥವಾಗಿ ಒಂದು ವರ್ತನ ನಾಟಕವು ಏರ್ಪಡಿಸಲ್ಪಟ್ಟಿತ್ತು ಕಾಕಪೋಕ ಜನರನ್ನು ನರ್ತನಾಲಯದೊಳಗೆ ಪ್ರವೇಶಿಸಲು ಬಿಡದಂತೆ ಈ ನರ್ತನಾಲಯದ ಬಾಗಿಲನ್ನು ಒಬ್ಬೊಬ್ಬನೇ ಪ್ರವೇಶಿಸಬಹುದಾದ ರೀತಿಯಲ್ಲಿ ಇಕ್ಕಟ್ಟಾಗಿ ಮಾಡಿದ್ದರು. ಆಲಯವೆಲ್ಲವೂ ಪೂರ್ಣ ಮರದಿಂದಲೇ ಸಿದ್ಧಪಡಿಸಲ್ಪಟ್ಟು ಬೆಂಕಿಯು ಸುಲಭವಾಗಿ ಹತ್ತುವ ಒಡವೆಗಳಿಂದ ಅಲಂಕರಿಸಲ್ಪಟ್ಟಿತ್ತು. ನಾಟ್ಯಶಾಲೆಯದಲ್ಲಿ ಅಲಂಕಾರಕ್ಕಾಗಿ ತೂಗಾಡಿಸಿದ್ದ ಒಣಗಲು ಸೊಪ್ಪುಗಳಿಗೆ ಬೆಂಕಿ ಹತ್ತಿ ತತಕ್ಷಣದಲ್ಲಿ ಇದು ಇಡೀ ಕೋಣೆಯನ್ನು ಆವರಿಸಿಕೊಂಡಿತು ಉರಿಯುವ ಕೋಣೆಯಿಂದ ಹೊರಗೆ ಹೋಗಲು ಇಕ್ಕಟ್ಟಾದ ಒಂದೇ ಬಾಗಿಲು ಇದ್ದದ್ದರಿಂದ ನೂರಾರು ಜನರು ತಪ್ಪಿಸಿಕೊಳ್ಳಲು ಬಾಗಿಲಿನ ಹತ್ತಿರ ಬಂದು ಒದ್ದಾಡಿಕೊಳ್ಳುತ್ತಿರುವಷ್ಟರಲ್ಲಿ ಮಾಡಿಗೆ ಸಹಾ ಬೆಂಕಿ ಬಿದ್ದು ಉರಿಯುತ್ತಿರುವ ಮಾಡು ಇವರ ಮೇಲೆ ಬಿತ್ತು. ಅನೇಕ ಮಂದಿ ತಪ್ಪಿಸಿಕೊಂಡರೂ ಪ್ರಾಣಹಾನಿಯು ಬಹಳ ವಿಶೇಷವಾಗಿತ್ತು. ಬಾಗಿಲಿನ ಹತ್ತಿರ ಒಬ್ಬರಮೇಲೊಬ್ಬರು ಬಿದ್ದು ಕೆಲವರು ಘಾಯಪಟ್ಟರು. ಇನ್ನು ಕೆಲವರು ಬೆಂಕಿಯಲ್ಲಿ ಉರುಳಿಬಿದ್ದರು. ನಾಶವಾದವರ ಸಂಖ್ಯೆಯು ೩೦೫ ಆಗಿರುವುದೆಂದೂ, ಜಖಂ ಪಡದವರು ೧೫೦ ಮಂದಿ ಆಗಿರುವರೆಂದೂ ತಿಳಿದುಬರುತ್ತದೆ. ಬಯಿಕೊಯಿರಿಬೋ ಹಳ್ಳಿಯಲ್ಲಿ ೧೫೦೦ ನಿವಾಸಿಕರೂ ೩೭೦ ಮನೆಗಳೂ ಇರುತ್ತವೆ.

ಲಂಡನ್ ಪಟ್ಟಣದಲ್ಲಿ ಕೂಲಿಯಾಳುಗಳ ದಿನಾಚಾರಣೆಯು ಬಹಳ ಸಂಭ್ರಮದಿಂದಾಯಿತು. ಈ ದಿನವನ್ನಾಚರಿಸಲಿಕ್ಕೆ ೪೦,೦೦೦ ಜನರ ಸಭೆಯು ನೆರೆದಿತ್ತು. ಸಭೆಯಲ್ಲಿ ಅನೇಕ ಭಾಷಣಗಳಾಗಿ ನಿರ್ಣಯಗಳು ಮಂಜೂರು ಮಾಡಲ್ಪಟ್ಟವು.

ಆಕಾಶ ಮಂಡಲದಲ್ಲಿ ಹಾರ್ಯಾಟದ ಪಂಥದ ಓಟದಲ್ಲಿ ಗೆದ್ದ ಮಿ| ಪೋಲ್‌ಹನ್ ಎಂಬವರಿಗೆ 'ಡೈಲಿ ಮೈಲ್' ಎಂಬ ವರ್ತಮಾನ ಪತ್ರದ ೧೦,೦೦೦ ಪವನುಗಳ ಇನಾಮು ದೊರಕಿರುವದು.

ಉತ್ತರ ಹಿಂದುಸ್ಥಾನ.

ಮುಂಬಯಿಯಲ್ಲಿಯ ವರ್ತಕರನೇಕರು ರಬ್ಬರಿಗೂ ಅಫೀಮಿಗೂ ಕ್ರಯವೇರಿರುವುದರಿಂದ ವಿಶೇಷ ಮುನಾಫೆಯನ್ನು ಪಡದಿರುವರಾಗಿ ಕೇಳುತ್ತೇವೆ. ರಬ್ಬರು ಕಂಪೆನಿಗಳಲ್ಲಿ ಈ ಮೊದಲೇ ತಾತಾ ಬ್ರದರ್ಸ್ ಎಂಬ ಕಂಪೆನಿಗಳವರು ಅನೇಕ ಪಾಲುಗಳನ್ನು ಪಡಕೊಂಡಿದ್ದರು. ರಬ್ಬರಿಗೆ ಕ್ರಯವೇರಿದ ಸಮಯದಲ್ಲಿ ರಬ್ಬರಿನ ಪಾಲುಗಳನ್ನು ಮಾರಿದ್ದರಿಂದ ಅವರಿಗೆ ವಿಶೇಷ ಲಭ್ಯವು ದೊರಕಿರುವುದು. ರಸ್ತೋಮಜಿ ತಾತಾರವರು ಈ ರೀತಿ ೪೦ ಯಾ ೫೦ ಲಕ್ಷಗಳ ಮುನಾಫೆಯನ್ನು ಪಡದಿರುವರಂತೆ. ಸರ್ ದೊರೇಬ ಟಾಟಾರವರು ೧೦ ಯಾ ೧೨ ಲಕ್ಷ ರೂಪಾಯಿಗಳನ್ನೂ ಇವರ ಕಾರ್ಯದರ್ಶಿಯವರು ಒಂದು ಲಕ್ಷ ರೂಪಾಯಿಗಳನ್ನೂ ಮುನಾಫೆಯಾಗಿ ಪಡದಿರುವರು. ಅಫೀಮು ವ್ಯಾಪಾರದಲ್ಲಿ ಸರ್ ಸಾಸೂನ್ ಜೆ. ಡೇವಿಡ್‌ರವರಿಗೆ ೫೦ ಯಾ ೬೦ ಲಕ್ಷ, ಸರ್ ಕರೀಮ್‌ಭಾಯಿ ಇಬ್ರಾಹಿಮ್‌ರವರಿಗೆ ೨೦ಲಕ್ಷ ಈ ರೀತಿ ನಫೆಯು ದೊರಕಿರುವುದು.

ಬಡ್ವಾನಿನ ಮಹಾರಾಣಿಯವರ ಹೆಸರಲ್ಲಿ ಲಾಹೋರಿನಲ್ಲಿ ಹಿಂದೂ ಬಾಲಿಕೆಯರ ಬಗ್ಗೆ ಒಂದು ಶಾಲೆಯನ್ನು ಸ್ಥಾಪಿಸಬೇಕೆಂದು ಪಂಜಾಬಿನ ಹಿಂದೂ ಸಭೆಯವರನ್ನು ವಿಜ್ಞಾಪಿಸಿಕೊಂಡಿರುವರು. ಮಹಾರಾಜರವರು ಈ ಶಾಲೆಗೆ ತಿಂಗಳು ಒಂದಕ್ಕೆ ರೂ. ೩೫೦ನ್ನು ದ್ರವ್ಯಸಹಾಯವಾಗಿ ಕೊಡುವರು. ಶಾಲೆಯು ಇತ್ತಲಾಗೆನೇ ತೆರಿಯಲ್ಪಟ್ಟಿರುವುದು.

ಹಿಂದೂ ಮುಸಲ್ಮಾನರೊಳಗೆ ಪರಸ್ಪರ ಪ್ರೀತಿಗೆ ಆಸ್ಪದವಾಗುವಂತೆ ಲಾಹೋರಿನಲ್ಲಿ ಹಿಂದೂ ಮುಸಲ್ಮಾನರ ಒಂದು ವಿನೋದ ಪಾರ್ಟಿಯು ಏರ್ಪಡಿಸಲ್ಪಡುವುದು.

ಯುನೈಟೆಡ್ ಪ್ರೊವಿನ್ಸ್‌ಗಳ ಲೆಪ್ಟನೆಂಟ್ ಗವರ್ನರರಾದ ಸರ್ ಜೋನ್ ಹ್ಯೂವೆಟರವರು ವಿಲಾಯತಿಗೆ ರಜೆ ಮೇಲೆ ಹೋಗಿರುವುದರಿಂದ ಮಿ| ಲೆಸ್ಲಿ [illegible] ಆಕ್ಟಿಂಗ್ ಲೆಪ್ಟನೆಂಟ್ ಗವರ್ನರರಾಗಿರುವರು.

ಪುಣೆಯಲ್ಲಿ ಪ್ರಕಟವಾಗುತ್ತಿರುವ ವಂದೇ ಮಾತರಂ ಎಂಬ ಪತ್ರದ ಸಂಪಾದಕರಾದ ರಾ| ಹರಿರಘುನಾಥ ಭಾಗವಂತ ಎಂಬವರನ್ನು ಪುನಾ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ವಾರಾಂಟಿನ ಮೇಲೆ ಕೈದುಮಾಡಿರುವರು. ರಾಜದ್ರೋಹ ತಪ್ಪಿನಾರೋಪಣೆಯ ಮೇಲೆ ಇವರನ್ನು [illegible]

ಕಳೆದ ಸರ್ತಿ ನ್ಯಾಯವಿಧಾಯಕ ಸಭೆಯಲ್ಲಿ ವಾಪಿಸಲ್ಪಟ್ಟ ಪ್ರಶ್ನೆಗಳನ್ನು ಇಂಡಿಯಾ ಗವರ್ನಮೆಂಟಿನವರು ಸಿಮ್ಲದಲ್ಲಿ ಪರ್ಯಾಲೋಚಿಸುತ್ತಿರುವರಂತೆ. ಪರ್ಯಾಲೋಚನೆಯನಂತರ ತಮಗೆ ಉಚಿತ ಕಂಡಲ್ಲಿ ಪ್ರಶ್ನೆಗಳಲ್ಲಿ ಸೂಚಿಸಲ್ಪಟ್ಟ ವಿಷಯವನ್ನು ಕಾರ್ಯತಃ ಜಾರಿಗೆ ತರುವ ಏರ್ಪಾಡನ್ನು ಮಾಡಲು ಸಾಧ್ಯವಾಗುವುದು.

ಇಂಡಿಯನ್ ಪಿನಲ್‌ಕೋಡನ್ನು ತಿದ್ದಲಿಕ್ಕೆ ಇಂಡಿಯಾ ಗವರ್ನಮೆಂಟಿನವರುಪಕ್ರಮಿಸಿರುವರಾಗಿ ಕೇಳುತ್ತೇವೆ.

ಬಿಹಾರಿನಲ್ಲಿಯ ಹಾಜಿಪೂರ ಎಂಬಲ್ಲಿಯ ಮೇಜಿಸ್ಟ್ರೇಟರವರು ಕೋರ್ಟು ಬೇದಪಿನ ಮೇಲೆ ಒಬ್ಬ ವಕೀಲರಿಗೆ ೫೦ ರೂಪಾಯಿ ಜುಲುಮಾನೆಯನ್ನು ಇನ್ನೊಬ್ಬ ಮೊಕ್ತ್ಯಾರಿ ವಕೀಲರಿಗೆ ೨೦ ರೂಪಾಯಿ ಜುಲುಮಾನೆಯನ್ನೂ ವಿಧಿಸಿರುವರು. ಒಬ್ಬ ಸಾಕ್ಷಿದಾರನನ್ನು ಅಡ್ಡ ವಿಚಾರಣೆ ಮಾಡಲು ಒಪ್ಪಣೆಕೊಡಬೇಕೆಂದು ಈ ಇಬ್ಬರು ವಕೀಲರು ಬೇಡಿಕೊಂಡಿದ್ದರು. ವಕೀಲರು ಅರ್ಜಿ ಮಾಡುವ ಮೊದಲೇ ಮೆಜಿಸ್ಟ್ರೇಟರು ಇವರಿಗೆ ಒಪ್ಪಣೆ ದೊರಕದೆಂದು ಆಜ್ಞಾಪಿಸಿದ್ದುದರಿಂದ ಎರಡನೇ ಸರ್ತಿ ಮಾಡಿದ ಅರ್ಜಿಯು ಕೋರ್ಟು ಬೇದಪಿಗೆ ಕಾರಣವಾಯಿತು. ಅರ್ಜಿಯನ್ನು ಬರೆದ ಮೊಕ್ತ್ಯಾರಿ ವಕೀಲರಿಗೆ ಸಹಾ ೩೦ ರೂಪಾಯಿ ಜುಲುಮಾನೆ ವಿಧಿಸಲ್ಪಟ್ಟಿತು.

ದಯಾನಂದ ಸಿಸ್ಟರ್ ಎಂಬವರ ದೇವಸ್ಥಾನವೂ ಅವರ ಒಬ್ಬ ಶಿಷ್ಯನ ಮನೆಯೂ ಸಹಾ ಬಂಗಾಳದಲ್ಲಿ ಪೋಲೀಸಿನವರಿಂದ ಶೋಧಿಸಲ್ಪಟ್ಟಿತು. ಅನೇಕ ಮತ ಪುಸ್ತಕಗಳನ್ನೂ ಬಾಬು ಅರವಿಂದ ಘೋಷರವರಿಂದ ಪ್ರಕಟಿಸಲ್ಪಡುತ್ತಿದ್ದ ಕರ್ಮಯೋಗಿನಿ ಮತ್ತು ಧರ್ಮ ಎಂಬೆರಡು ಪತ್ರಿಕೆಗಳ ಪ್ರತಿಗಳನ್ನೂ ಪೋಲೀಸಿನವರು ಹಿಡಿದಿರುವರು.

ಮುಜಾಫರಪೂರ ಎಂಬಲ್ಲಿಯ ಸೀತಾಮುಡಾರಿ ಸಬ್ ಡಿವಿಜನಿನ ಹಳ್ಳಿಯವರಲ್ಲಿ ತಮ್ಮ ಮಕ್ಕಳನ್ನು ಹಿಡಿದು ತಕೊಂಡು ಹೋಗಿ ಗಂಗಾ ನದಿಯ ಸೇತುವನ್ನು ಕಟ್ಟಲಿಕ್ಕೆ ಪ್ರಯತ್ನಿಸಲಾಗುತ್ತಿದೆ ಎಂಬ ಪ್ರವಾದದಿಂದ ದಿಗಿಲು ಹುಟ್ಟಿರುವದು. ಈ ದಿಗಿಲಿನಿಂದ ತಮ್ಮ ಮಕ್ಕಳ ಕೂಡೆ ದೂರದಲ್ಲಿ ಪಾತಾಡುತ್ತಿದ್ದ ಮೂರು ಜನ ಸನ್ಯಾಸಿಗಳನ್ನು ಅಲ್ಲಿಯವರು ಕೊಂದುಬಿಟ್ಟಿರುವರು. ಊರೂರಿನಲ್ಲಿರುವ ನಾದುಗಳು ಹೆದರಿಕೆಯಿಂದ ಓಡುತ್ತಿರುವರು. ದಿಗಿಲುಪಟ್ಟ ಹಳ್ಳಿಯವರಿಗೆ ಮಕ್ಕಳನ್ನು ಬಲಿಕೊಡುವರೆಂಬ ವರ್ತಮಾನವು ಸುಳ್ಳು ಎಂದು ತಿಳಿಯ ಹೇಳಿ ಅವರನ್ನು ಸಮಾಧಾನ ಮಾಡಲು ಪ್ರಯತ್ನಿಸುತ್ತಿರುವರು.

ಅಗ್ನಿ ಆರಾಧಕರಾದ ಪಾರ್ಸಿ ಮತಸ್ಥರ ಸಭೆಯು ಇತ್ತಲಾಗೆ ಮುಂಬಯಿಯಲ್ಲಿ ಕೂಡಿತು. ಪುಣೆಯ ಸರದಾರ ದಸ್ತೂರ್ ಕೈಕಾಬಾದರವರು ಅಧ್ಯಕ್ಷರಾಗಿದ್ದರು.

ಸಿಮ್ಲದಲ್ಲಿಯ ಸೈಂಟ್‌ಬೀಡ್ಸ್ ಕೋಲೇಜಿನಲ್ಲಿ ಎಫ್. ಎ. ಪರೀಕ್ಷೆ ಪಾಸಾದವರಲ್ಲಿ ಒಬ್ಬ ಕ್ರೈಸ್ತ ಹುಡುಗಿಯು ಒಂದನೇ ಸ್ಥಾನವನ್ನು ಪಡೆದಿರುವಳು.

ವಿವಾಹ ಸಂದರ್ಭದಲ್ಲಿಯೂ ಉತ್ತರಕ್ರಿಯೆಗಳ ಗೋಸ್ಕರವಾಗಿಯೂ ಹಿಂದುಗಳು ಅನಾವಶ್ಯಕವಾಗಿ ವಿಶೇಷ ಹಣವನ್ನು ವ್ಯಯಮಾಡುತ್ತಿರುವುದರಿಂದ ಇಂಥಾ ದುರ್ವ್ಯಯವು ನಡುತರದವರಿಗೆ ಬಹಳ ಅಸಹ್ಯವಾಗಿ ಪರಿಣಮಿಸುವುದರಿಂದ ಇದನ್ನು ನಿಲ್ಲಿಸುವ ... ಉಪಾಯಗಳನ್ನು ಏರ್ಪಡಿಸಬೇಕಾಗಿ ಉತ್ತರದಲ್ಲಿರುವ ಹಿಂದುಗಳನ್ನು ಲಾಹೋರು ಹಿಂದೂ ಸಭೆಯವರು ಬೇಡಿಗೊಂಡಿರುವರು.

ಕಳೆದ ವಾರದಲ್ಲಿ ಬಂಗಾಳ ಸರಕಾರದವರು ೬ ದೇಶಭಾಷಾ ಪತ್ರಗಳನ್ನು ನಿಷೇಧಿಸಿದ್ದರು. ಈ ವಾರದ ಕಲ್ಕತ್ತೆಯ ಗಜೇಟಿನಲ್ಲಿ ಇನ್ನೂ ೮ ಪತ್ರಗಳನ್ನೂ ೨ ಭಾವ ಚಿತ್ರಗಳನ್ನೂ ಬಂಗಾಳದಲ್ಲಿರಬಾರದೆಂಬದಾಗಿ ನಿಷೇಧಿಸಿರುತ್ತಾರೆ. ಎರಡು ಭಾವಚಿತ್ರಗಳು ನಾನಾಫಡ್ನವಿಸರ ಮತ್ತು ಶ್ಯಾಮಾಜಿ ಕೃಷ್ಣವರ್ಮರದ್ದಾಗಿರುತ್ತವೆ.

ವ್ಯಾಸರಾಯ ಪ್ರಭುಗಳ ಕಾರ್ಯನಿರ್ವಾಹಕ ಸಭೆಯ ಮೆಂಬರಾಗಿದ್ದ ಸರ್ ಹಾರ್ವೆ ಆಡಾಮ್‌ಸನರವರ ಸ್ಥಾನದಲ್ಲಿ ಮುಂಬಯಿಯ ಬಹುಮಾನಪಟ್ಟ ಮಿ. ಜೆಂಕಿನ್ಸರವರನ್ನು ನೇಮಿಸಿರುವರು.

ಹುಬ್ಬಳ್ಳಿ ಮತ್ತು ಇಂದೋರು ಇಲ್ಲಿ ಹತ್ತಿಯ ಗೋದಾಮುಗಳಿಗೆ ಬೆಂಕಿ ಬಿದ್ದು ೧ ಲಕ್ಷ ರೂಪಾಯಿಗಳ ಮೌಲ್ಯದ ಹತ್ತಿಯು ನಾಶವಾಗಿರುವುದು.

ಮುಂಬಯಿಯ ಮಲಬಾರ ಹಿಲ್ ಎಂಬಲ್ಲಿ ದಾವೋದರ ಒಕ್ಕಿದಾಸರವರ ವಿಧವೆಯನ್ನು ಕೊಂದ ಅಪರಾಧಿಗಳನ್ನು ಮುಂಬಯಿ ಪೋಲೀಸಿನವರು ಪತ್ತೆಮಾಡಿರುವರು. ಕೊಲೆಪಾತಕಿಗಳು ದ್ರವ್ಯಾಪೇಕ್ಷೆಯಿಂದ ಈ ಕೊಲೆಯನ್ನು ಮಾಡಿದ್ದರೆಂತ ತಿಳಿದುಬರುತ್ತದೆ.

ಮುಂಬಯಿಯ ಎಲ್ಫಿನ್‌ಸ್ಟನ್ ಮತ್ತು ಪ್ರಸಿದ್ಧ ದಕ್ಷಿಣ ಕೋಲೇಜುಗಳಲ್ಲಿ ಪಂಡಿತರಾಗಿದ್ದ ಮಿ. ಇ. ಎ. ವೂಡಹೌಸ್ ಎಂಬವರು ಬೆನಾರಿಸಿನ ಸೆಂಟ್ರಲ್ ಹಿಂದೂ ಕೋಲೇಜಿನ ಪ್ರಿನ್ಸಿಪಾಲ್ ಕೆಲಸವನ್ನು ಕೈಕೊಂಡಿರುವರು. ಈ ಕೋಲೇಜಿನಲ್ಲಿ ಇವರನ್ನು ಇಂಗ್ಲಿಷ ಭಾಷಾ ಪಂಡಿತರನ್ನಾಗಿ ನೇಮಿಸಿರುತ್ತಾರೆ.

ದಕ್ಷಿಣ ಹಿಂದುಸ್ಥಾನ

ತಿರುವಾಂಕೋಡಿನಲ್ಲಿ ಪೋಲೀಸು ಸುಪರಿಂಟೆಂಡೆಂಟರಾಗಿದ್ದ ಮಿ. ಪಿಳ್ಳೆಯವರು ಪೆನ್‌ಶನ ಪಡಕೊಳ್ಳುವದರಿಂದ ಇವರ ಸ್ಮಾರಕಾರ್ಥವಾಗಿ ಏರ್ಪಡಿಸಿದ ಪಲವು ... ಅನ್ಯಾಯವಾಗಿ ವ್ಯವಹರಣೆಗಳಿಗೆ ... ಪೋಲೀಸು ಅಧಿಕಾರಿಗಳ ... ವಾಗಿ ಬೇರೆ ... ಫಂಡನ್ನು ಸಂಗ್ರಹಿಸಬೇಕಾಗಿ ಯೋಚಿಸಿರುತ್ತವೆ. ಪೋಲೀಸು ಪೈಗಳಿಂದ ಎಲ್ಲಾ ಪೋಲೀಸು ಅಧಿಕಾರರು ಈ ಸಂಗತಿಗೆ ಯಥೋಚಿತವಾಗಿ ತಮ್ಮ ಸಂಬಳಗಳ ಪ್ರಕಾರ ಚಂದಾ ಕೊಡಬೇಕಾಗಿ ಹುಕುಮು ಹೊರಟಿರುವುದು.

ತಿರುವಾಂಕೋಡು ಸಂಸ್ಥಾನದ ಲಾಕಾಲೇಜು ಇಷ್ಟರ ತನಕ ಅಲ್ಲಿಯ ವಿದ್ಯಾಖಾತೆಯ ಡಿರೆಕ್ಟರರವರ ಕೈಕೆಳಗೆ ಇತ್ತು. ಈಗ ಈ ಕಾಲೇಜನ್ನು ಅಲ್ಲಿಯ ಹ್ಯಾಕೋರ್ಟಿನವರ ಅಧಿಕಾರಕ್ಕೆ ಒಳಪಡಿಸಿರುವರು.

ಬರುವ ಮಂಗಳವಾರ ತಿರುವಾಂಕೋಡು ಮತ್ತು ಕೊಚ್ಚಿ ಸಂಸ್ಥಾನದ ಕ್ರೈಸ್ತರ ಮಹಾಸಭೆಯು ಕೋಟ್ಟ್ಯಾ ಎಂಬಲ್ಲಿ ಜರಗುವುದು. ತಿರುವಾಂಕೋಡು ಸಂಸ್ಥಾನದಲ್ಲಿಯ ಹ್ಯಾಕೋರ್ಟು ವಕೀಲರಾದ ಮೆ| ಇ. ಜೆ. ಜೋನ್ ಎಂಬವರು ಈ ಸಭಾಧ್ಯಕ್ಷರಾಗಿರುವರು.

... ಕರ್ನೂಲಿನಲ್ಲಿ ಜೂನ್ ... ರಲ್ಲಿ ಜರಗುವದೆಂತ ನಿಶ್ಚಯಿಸಿರುವದು ... ಆಮಂತ್ರಣ ಸಭೆಯ ಸೆಕ್ರಿಟರಿಗಳ ... ಕೆ| ಇಕ್ಕಾಂಬರ ಅಯ್ಯರ್, ಬಿ. ಎ. ಬಿ. ಎಲ್. ಎಂಬವರು ಸಂಸ್ಥಾನದ ಪ್ರತಿ ಜಿಲ್ಲೆ ತಾಲೂಕು ಕೊಂಗ್ರೆಸ್ ಕಮಿಟಿಗಳಿಂದ ಕನಿಷ್ಟಪಕ್ಷದಲ್ಲಿ ಇಬ್ಬರಿಬ್ಬರು ಪ್ರತಿನಿಧಿಗಳನ್ನು ಕಳುಹಿಸಿಕೊಡಬೇಕೆಂತ ಒಂದು ಲೇಖನ ಮುಖಾಂತರ ಸಂಸ್ಥಾನದಲ್ಲಿಯ ಸರ್ವರನ್ನೂ ಕೇಳಿಕೊಂಡಿರುವರು. ಈ ಲೇಖನವು ಇಂಗ್ಲೀಷ್ ವರ್ತಮಾನಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಈ ಲೇಖನ ಕಡೇ ಭಾಗದಲ್ಲಿ ಇವರು ಬರೆದಿರುವ ವಿಷಯಕ್ಕೆ ನಮ್ಮ ಜಿಲ್ಲೆಯವರು ವಿಶೇಷ ಲಕ್ಷ್ಯಕೊಡಬೇಕಾಗಿರುವುದು. ದಕ್ಷಿಣ ಕನ್ನಡ ಮತ್ತು ಮಲಬಾರ ಜಿಲ್ಲೆಗಳಲ್ಲಿ ರಾಜಕೀಯ ವಿಷಯಗಳಲ್ಲಿ ಜನರಿಗಿರುವ ಅಭಾವವು ತಕ್ಕುದಲ್ಲವೆಂತ ಅಯ್ಯರವರು ಸೂಚಿಸಿರುವರು. ಅಯ್ಯರರವರ ಈ ಅಭಿಪ್ರಾಯವನ್ನು ಅಲ್ಲಗಳೆಯುವುದಕ್ಕೆ ನಮ್ಮಲ್ಲಿಂದ ಎಷ್ಟು ಜನ ಪ್ರತಿನಿಧಿಗಳು ಈ ಸರ್ತಿಯ ಪ್ರಾಂತಿಕ ಸಭೆಗೆ ಹೋಗುವರೆಂಬದನ್ನು ನೋಡಲಿಕ್ಕಿದೆ.

ಮದ್ರಾಸಿನ ಡಾಕ್ಟರ್ ಟಿ. ಎಮ್. ನಾಯರರವರನ್ನು ಮದ್ರಾಸು ಯುನಿವರ್ಸಿಟಿಯ 'ಫೆಲ್ಲೊ'ರಾಗಿ ನೇಮಿಸಿರುತ್ತಾರೆ.

ನಮ್ಮ ಸಂಸ್ಥಾನದ ಗವರ್ನರ ದೊರೆಗಳವರ ಕೆಲಸದ ಅವಧಿಯು ಮುಗಿಯುತ್ತಾ ಬರುತ್ತಿರುವುದರಿಂದ ಲೋಲಿ ದೊರೆಗಳವರು ತಮ್ಮ ಕೆಲಸದವಧಿಯಲ್ಲಿ ಸಂಸ್ಥಾನದಲ್ಲಿ ಅನೇಕ ವಿಧಾನಗಳಲ್ಲಿ ಪ್ರಜಾಹಿತವನ್ನು ಸಾಧಿಸಿರುವುದರಿಂದ ಇವರ ಬಹುಮಾನಾರ್ಥವಾಗಿ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದಾಗಿ ಬಹುಮಾನಪಟ್ಟ ಕುರುಪಂ ರಾಜರವರು ಸೂಚಿಸಿರುತ್ತಾರೆ. ಸರ್ ಆರ್ಥರ್ ಲೋಲೆಯವರ ಒಂದು ಕಂಚಿನ ಪ್ರತಿಮೆಯನ್ನು ಸದರಿಯವರ ಬಹುಮಾನಾರ್ಥವಾಗಿ ಸ್ಥಾಪಿಸಬಹುದೆಂದು ಕುರುಪಂ ರಾಜರವರ ಸೂಚನೆಯಾಗಿರುತ್ತದೆ.

ಕಲಾಡಿ ಜಗದ್ಗುರುಗಳ ಸಂದರ್ಶಣೆ ಬಗ್ಗೆ ಹೋದ ಮೈಸೂರು ಮಹಾರಾಜರವರು ಜಗದ್ಗುರುಗಳ ಮಠದಲ್ಲಿ ಶ್ರೀ ಶಾರದಾಂಬಾ ದೇವತೆಗೆ ಒಂದು ವಜ್ರದ ಹಾರವನ್ನು ಕಾಣಿಕೆವಾಗಿ ಕೊಟ್ಟಿರುವರು.

ಕರ್ನೂಲಿನಲ್ಲಿ ಜೂನು ೧೫ ಲಿಕ್ಕೆ ಕೂಡುವ ಪ್ರಾಂತಿಕ ಔದ್ಯೋಗಿಕ ಪರಿಷದಿಗೆ ರಾವ್ ಬಹದೂರ್ ಎಮ್. ಆದಿನಾರಾಯಣಯ್ಯರವರು ಅಧ್ಯಕ್ಷರಾಗುವರೆ ಸಮ್ಮತಿಸಿರುವರು.

ಬರಹಂಪುರದಲ್ಲಿ ಗ್ರಾಜುಯೇಟ್ಸ್ ಎಸೋಸ್ಯೇಶನ್ ಎಂಬ ವಿದ್ಯಾನಿಲಯಗಳಲ್ಲಿ ಬಿ. ಎ. ಮೊದಲಾದ ಪರೀಕ್ಷೆಗಳನ್ನು ಪಾಸಾಗಿ ಪ್ರೌಢ ವಿದ್ಯಾಭ್ಯಾಸವನ್ನು ಪಡೆದವರ ಸಂಘವು ಸ್ಥಾಪಿಸಲ್ಪಟ್ಟಿರುವುದು. ವಿದ್ಯೆಯನ್ನು ಪಸರಿಸುವುದೇ ಈ ಸಂಘದವರ ಮುಖ್ಯ ಉದ್ದೇಶ್ಯವಾಗಿರುತ್ತದೆ. ಪ್ರೌಢ ವಿದ್ಯಾಭ್ಯಾಸದ ಅನುಕೂಲತೆಗಳು ದೇಶದಲ್ಲಿ ಕ್ಷಯಿಸುತ್ತಾ ಬರುತ್ತಿರುವಾಗ ಈ ಘನ ಉದ್ದೇಶ್ಯವುಳ್ಳ ವಿದ್ವಾಂಸರ ಸಂಘಗಳು ದೇಶದ ಎಲ್ಲಾ ಕಡೆಗಳಲ್ಲಿಯೂ ... ವಂಥಾದ್ದು ಅಪೇಕ್ಷಣೀಯವಾಗಿರುತ್ತದೆ.

ಮದ್ರಾಸು ಮಹಾಜನ ಸಭೆಯವರ ವಾರ್ಷಿಕ ಸಭೆಯು ...

[illegible] ತೀಯನ್ನು [illegible] ತೆರಿಗೆ ಗಡಿಪಾರು ಮಾಡಿದ ವಿಷಯ ಪ್ರತಿಪಾದನೆಗಳು ಮಾಡಲ್ಪಟ್ಟವು

~~~~~

ಮೈಸೂರಿನ ಹೊಸ ಅರಮನೆಗೆ ಸಂಸ್ಥಾನದ ಖಜಾನೆಯಿಂದ ರೂ. ೩೭೮,೭,೦೦೦ ತಗಲಿರುವುದಂತೆ. ಉದಕಮಂಡಲದಲ್ಲಿರುವ ಮಹಾರಾಜರವರ ಅರಮನೆಗೆ ದುರುಸ್ತಿಬಗ್ಗೆ ಮಾತ್ರ ರೂ. ೨೦,೦೦೦ ಬೇಕಾಗುತ್ತದಂತೆ

~~~~~

ಕಾವೇರಿ ನದಿಯಲ್ಲಿ ಕೆಲಸ ನಡಿಸುತ್ತಿರುವಾಗ ನದಿಗೆ ಬಿದ್ದು ಮೃತ ಪಟ್ಟ ಕೆಪ್ಟನ್ ಡೋಸರವರ ಮಕ್ಕಳಿಗೆ ೭ ವರುಷಗಳ ತನಕ ವರುಷಾವದಿಗೆ ೧೦೦ ಪವನುಗಳ ಮೇರೆಗೆ ಮೈಸೂರು ಸಂಸ್ಥಾನದಿಂದ ಪೆನಶನು ಸಲ್ಲುತ್ತಿರುವುದಂತೆ. ಏಳು ವರುಷಗಳ ನಂತರ ಇವರ ಮಕ್ಕಳು ಪ್ರಾಯಭರಿತರಾಗುವುದರಿಂದ ನಂತರದಲ್ಲಿ ಇವರಿಗೆ ಮೈಸೂರು ಸಂಸ್ಥಾನದಲ್ಲಿಯೇ ಕೆಲಸ ದೊರಕುವುದೆಂಬದಾಗಿ ಕೋರಲ್ಪಟ್ಟಿರುವುದು

~~~~~

ತಿರುವಾಂಕೋಡು ಸಂಸ್ಥಾನದಲ್ಲಿ ಹೊಗೆಸೊಪ್ಪಿನ ಮೇಲಿರುವ ಸುಂಕವು ಖಂಡಿಗೆ ರೂ. ೯೦ ರಿಂದ ರೂಪಾಯಿ ೯೦೦ಕ್ಕೆ ಹೆಚ್ಚಿಸಲ್ಪಟ್ಟಿರುವುದಂತೆ. ಇದರಿಂದ ಅಲ್ಲಿಯ ವ್ಯಾಪಾರಸ್ಥರನೇಕರು ಬಹಳ ನಷ್ಟಪಡುವುದರಿಂದ ತಮ್ಮ ಸಂಕಷ್ಟಗಳನ್ನು ಕುರಿತು ಮಹಾರಾಜರವರಿಗೆ ವಿಜ್ಞಾಪನೆಯನ್ನು ಬರಕೊಂಡಿರುವರು

~~~~~

ದಕ್ಷಿಣ ಕನ್ನಡ

~~~~~

ಬಿಳಗಿ ರಾಜವೈದ್ಯ ಮತ್ತು ಕಂಪೆನಿಯವರ ಕರ್ನಾಟಕ ಔಷಧಾಲಯದ ಔಷದಿಗಳ ಪ್ರಕಟನಾಪತ್ರವನ್ನು ಈ ಸಂಚಿಕೆಯೊಂದಿಗೆ ವಾಚಕರ ಅವಗಾಹನೆ ಬಗ್ಗೆ ಕಳುಹಿಸಿಕೊಟ್ಟಿರುವೆವು

~~~~~

ಮಂಗಳೂರು ಇಲ್ಲಿಯ ಕೆನರಾ ಗರ್ಲ್ಸ್ ಸ್ಕೂಲ್ ಎಂಬ ಬಾಲಿಕಾಪಾಠಶಾಲೆಗೆ ಕೊಳ್ಳರೆ ಭಾಗೀರಥಿ ಅಮ್ಮನವರು ರೂ. ೧೦೦೦ವನ್ನೂ ಕೊಳ್ಳರೆ ರಾಮನ್ನಾಯಕರ ವಿದವೆ ತುಳಸಮ್ಮನವರು ರೂ. ೫೦೦ನ್ನೂ ದ್ರವ್ಯಸಹಾಯವಾಗಿ ಕೊಡುವರೆಂಬದನ್ನು ತಿಳಿಸಲಿಕ್ಕೆ ಸಂತೋಷಪಡುತ್ತೇವೆ. ಕೆನರಾ ಬಾಲಿಕಾಪಾಠಶಾಲೆಯಲ್ಲಿ ಬಾಲಿಕೆಯರೆಲ್ಲರಿಗೂ ಉಚಿತವಾಗಿ ಶಿಕ್ಷಣವು ದೊರಕುವುದು. ಇಂಥಾ ಶಾಲೆಯು ಚಿರಕಾಲ ಬಾಳುವಂತೆ ವಿಶೇಷ ದ್ರವ್ಯಸಹಾಯವು ಬೇಕಾಗಿರುವುದರಿಂದ ಈ ಉದಾರಚಿತ್ತದ ಸ್ತ್ರೀಸಂಪನ್ನೆಯವರು ಇತರರೂ ಸಹಾ ಈ ಧರ್ಮ ಸಂಸ್ಥೆಗೆ ತಕ್ಕ ರೀತಿಯಲ್ಲಿ ದ್ರವ್ಯಸಹಾಯವನ್ನು ಕೊಡಬೇಕೆಂದು ಕೋರಿರುವರು. ಇವರ ಕೋರಿಕೆಯು ಸಫಲಗೊಳಲೆಂದು ಅಪೇಕ್ಷಿಸುತ್ತೇವೆ

ಇದೇ ಕಳೆದ ವಾರದಲ್ಲಿ ಮುನಿಸಿಪಾಲಿಟಿಯಲ್ಲಿ ೬ ಪ್ಲೇಗು ಮರಣಗಳೂ ೧೭ ಸಿಡುಬುರೋಗದ ಮರಣಗಳೂ ಇದ್ದವು.

ಕಳೆದ ತಿಂಗಳಲ್ಲಿ ಒಟ್ಟು ಮರಣಗಳ ಸಂಖ್ಯೆಯು ೧೩೬ ಅದರಲ್ಲಿ ೭೦ ಮಂದಿ ಗಂಡಸರು ೬೬ ಮಂದಿ ಹೆಂಗಸರು. ಇದೇ ತಿಂಗಳಲ್ಲಿ ಪ್ಲೇಗುರೋಗ ತಗಲಿ ಮರಣಪಟ್ಟವರ ಸಂಖ್ಯೆಯು ೧೭ ಮತ್ತು ಸಿಡುಬುರೋಗ ತಗಲಿ ಮೃತರ ಸಂಖ್ಯೆಯು ೬೮ ಆಗಿರುತ್ತದೆ

[illegible] ಮಾಡಿ ಕಳವು ಮಾಡುತ್ತಿದ್ದ [illegible] ನಾಲ್ಕು ಕನ್ನಕಳವಿನ ಮೊಕದ್ದಮೆ [illegible]

[illegible] ಯಾಗಿರುವ [illegible] ಕಾಲು ಎತ್ತಿ ತೆಗೆಕೊಂಡು ತಲೆದಿಂಬಿನಲ್ಲಿ ಅಡಗಿಸಿಟ್ಟ ವೆಂಕಮ್ಮನೆಂಬ ಒಂದು ಮುದುಕಿಗೆ ಟೌನ್ ಮೇಜಿಸ್ಟ್ರೇಟರವರು ೨ ಹಪ್ತೆಗಳ ಕಠಿಣ ಸಜೆಯನ್ನು ವಿಧಿಸಿದರು.

ಡೊಂಗರಕೇರಿಯಲ್ಲಿ ಹಿಡಿದ ಜುಗಾರಿ ನಂಬ್ರದಲ್ಲಿ ಮುದ್ದೈಲರ ಮೇಲೆ ಚಾರ್ಜು ಆಗಿದೆ

ಬೋಳಾರ ಮಾರಿಪೂಜೆ ದಿವಸ ಜೇಬಿನಲ್ಲಿ ಕೈಹಾಕಿ ಕಳವು ಮಾಡಿದ ಕೇಡಿ ರೈಮಂತ ಸೋಜನಿಗೆ ನಿನ್ನೆ ದಿವಸ ಹೆಡ್‌ಕ್ವಾರ್ಟರ್ಸ್ ಡಿಪ್ಯೂಟಿ ಕಲೆಕ್ಟರರವರು ೯ ತಿಂಗಳ ಸಜೆಯನ್ನು ವಿಧಿಸಿದರು

ಪೋಲೀಸು ಇನ್ಸಪೆಕ್ಟರ್ ಜನರಲರವರು ಇಲ್ಲಿಯ ಪೋಲೀಸು ಸ್ಟೇಶನುಗಳನ್ನು ಸಂದರ್ಶಿಸಿ ಮಲಬಾರ ಅತ್ತ ಕಡೆ ತೆರಳಿರುತ್ತಾರೆ

ಕಳೆದ ಮೊಹರಮ್ [illegible] ಸಮಯ ತಮಾಷೆಗಾಗಿ ಹಣದ [illegible] ಕಂಡು [illegible] ಸಾಹುಕಾರರಿಂದ ಹಣ [illegible] ಮಾಡಿದ ಕೇಡಿ [illegible] ಇಬ್ರಾಹಿಮನಿಗೆ ಒಂದು ವರ್ಷದ ಜಾಮೀನು [illegible] ಆಯಿತು

[illegible] ಪ್ರಜರಾದ ಮ. ರಾ. ರಾ. [illegible] ದಕಾರರವರು [illegible] ತಿಂಗಳ ಹಕ್ಕಿನ ರಜೆ ಪಡಕೊಂಡಿರುವುದರಿಂದ ಕಾಸರಗೋಡು ತಾಲೂಕು [illegible] ಸಿರಸ್ತೆದಾರರಾದ ಮ. ರಾ. ಕೆ. ಸು[illegible]ರಾವ್‌ರವರು ಎರಡು ತಿಂಗಳ ವರೆಗೆ ಈ ಕೆಲಸಕ್ಕೆ ನೇಮಕಪಟ್ಟಿರುವರು. ಮ. ರಾ. [illegible] ರಾಮನ್ನಾಯಕರವರು ಕಾಸರಗೋಡು [illegible] ಸ್ತೆದಾರರ [illegible] ಕೆಲಸ ನೋಡುವರು

ಇಲ್ಲಿಗೆ ಡಿಸ್ಟ್ರಿಕ್ಟ್ [illegible] ಗಾಗಿ ಮಿ. [illegible] ಐ. ಸಿ. ಎಸ್‌ರವರು ನೇಮಕಪಟ್ಟಿರುವರಾಗಿ ಕೇಳುತ್ತೇವೆ. ಇವರು ಸದ್ಯದಲ್ಲಿ [illegible] ರುವರಂತೆ

ಕಳೆದ ತಿಂಗಳ [illegible] ರಲ್ಲಿ ಇಲ್ಲಿಯ [illegible] ಡಿಪ್ಯುಟಿ ಕಲೆಕ್ಟರರಾಗಿದ್ದ ಮ. ರಾ. ರಾ. ಧಾರೇಶ್ವರ ಅನಂತಯ್ಯನವರು ದೊಡ್ಡ ಕುರದ ವ್ಯಾದಿಯಿಂದ ತಮ್ಮ [illegible] ವಯಸ್ಸಿನಲ್ಲಿ ಕಾಲವಾದರೆಂದನ್ನು ತಿಳಿಸಲು ವಿಷಾದಪಡುತ್ತೇವೆ. ಇಲ್ಲಿಯ ಹಜೂರು ಆಪೀಸಿನ ಮುದ್ರಣಾಲಯದ ಇಲಾಖೆಯಲ್ಲಿ ಪ್ರಥಮದಲ್ಲಿ ಚಿಕ್ಕದೊಂದು ಉದ್ಯೋಗವನ್ನು ಪಡೆದು ಕ್ರಮೇಣ ರೂ. ೭೦೦ ತಲವಿನ ಡಿಪ್ಯುಟಿ ಕಲೆಕ್ಟರಿ ಪದವಿಯನ್ನಲಂಕರಿಸಿ ಎಳೆಂಟು ವರುಷಗಳ ಮೊದಲು ಸರಕಾರಿ ಉದ್ಯೋಗದಿಂದ ಇವರು ಪೆನಶನು ಪಡಕೊಂಡಿದ್ದರು. ಅನಂತಯ್ಯನವರು ಕುಂದಾಪುರ ತಾಲೂಕು ಸಿರಸ್ತೆದಾರರಾಗಿದ್ದು ನಂತರದಲ್ಲಿ ಹೊಸದುರ್ಗದ ಸಬ್‌ಮೇಜಿಸ್ಟ್ರೇಟ ಕೆಲಸಕ್ಕೆ ನೇಮಕಪಟ್ಟು, ಉಪ್ಪಿನಂಗಡಿ ತಹಸೀಲದಾರರಾದ ನಂತ್ರ ಬಳ್ಳಾರಿಜಿಲ್ಲೆಗೆ ಡಿಪ್ಯುಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟಿದ್ದರು. ಬಳ್ಳಾರಿಯಿಂದ ಆದೋನಿ ಡಿಪ್ಯುಟಿ ಕಲೆಕ್ಟರರಾಗಿ ಕಡೆಗೆ ಮಂಗಳೂರಿಗನೇ ಡಿಪ್ಯುಟಿ ಕಲೆಕ್ಟರರಾಗಿ ವರ್ಗಾಯಿಸಲ್ಪಟರು. ಇವರ ಪುತ್ರರಾದ ಮ. ರಾ. ರಾ. ಧಾರೇಶ್ವರ ಸದಾಶಿವರಾಯರು ಮದ್ರಾಸಿನಲ್ಲಿ ಪಾಲ್ಘಾಟ್ ಕಂಪೆನಿಯ ದುಬಾಸಿಗಳೂ ದೊಡ್ಡ ವರ್ತಕರೂ ಆಗಿರುತ್ತಾರೆ

ಸುಬ್ಬರಾವ್ ಮೆಮೊರಿಯಲ್ ಫಂಡ್ ಈ ಫಂಡಿಗೆ ಚಂದಾಹಣವನ್ನು ಕೊಡುವರೆ ಪ್ರಾರ್ಥಿಸಿ ಮಾಡಿದವರ ಹೆಸರುಗಳನ್ನೂ ಅವರವರ ಚಂದಾಹಣಗಳ ಮೊಬಲಗುಗಳನ್ನೂ ಇನ್ನೊಂದು ಕಡೆಯಲ್ಲಿ ಪ್ರಕಟಿಸುವರ ಸಂತೋಷಪಡುತ್ತೇವೆ. ಈಗಿನ ವಿದ್ಯಮಾನಗಳಲ್ಲಿ ಸ್ವಲ್ಪ ಸಮಯದಲ್ಲಿಯೇ ಫಂಡುಗಳನ್ನು ಏರ್ಪಡಿಸುವುದೂ ಚಂದಾದಾರರನ್ನು ಸಂಗ್ರಹಿಸುವುದೂ ಬಹಳ ಶ್ರಮಸಾಧ್ಯ ಆಗಿರುವುದು. ಆದರೆ ನಿರಂತರ ಪ್ರಯತ್ನಗಳಿಂದ ಎಲ್ಲಾ ಕಾರ್ಯಗಳೂ ಕ್ರಮೇಣ ಸಾಧ್ಯವಾಗುವುದರಿಂದ ಈಗ ಪುನಃ ಪ್ರಾರಂಭಿಸಿರುವ ಈ ಸತ್ಕಾರ್ಯವನ್ನು ಅದು ನೆರವೇರುವ ತನಕ ವಿಳಂಬವಿಲ್ಲದೆ ಸಾಧಿಸಬೇಕಾಗಿ ನಮ್ಮ ಆದರಪೂರ್ವಕ ವಿಜ್ಞಾಪನೆಯಾಗಿರುತ್ತದೆ.

[illegible] ರಾವ್ ಬಹದ್ದೂರ್ ವಿ. ಪಿ. [illegible] ದಾಸರವರು [illegible] ಸಿರಸ್ತೆದಾರರಾಗಿ ಎರಡು ತಿಂಗಳ ವರೆಗೆ ನೇಮಕಪಟ್ಟಿರುವುದರಿಂದ ಕಾಸರಗೋಡಿನಲ್ಲಿ ಆಕ್ಟಿಂಗ್ ತಹಸಿಲ್‌ದಾರರಾಗಿದ್ದ ಮಿ. ಅಲ್ಬುಕರ್ಕರವರು ಉಪ್ಪಿನಂಗಡಿ ತಹಸೀಲ್‌ದಾರರ ಚಾರ್ಜನ್ನು ಫೆರ್ನಾಂದೀಸರವರಿಂದ ಕಳೆದ ತಿಂಗಳ [illegible] ರಲ್ಲಿ ವಹಿಸಿಕೊಂಡರು

ಇಲ್ಲಿಯ ಡಿವಿಜನ್ ಡಿಪ್ಯುಟಿ ಕಲೆಕ್ಟರರವರ ಆಫೀಸಿನ ಹೆಡ್‌ಕ್ಲಾರ್ಕರಾದ ಶಂಕರರಾಯರು ವರ್ಗಾಯಿಸಲ್ಪಟ್ಟಿರುವುದರಿಂದ ಈ ಕೆಲಸಕ್ಕೆ ಮಿ. [illegible] ಪ್ಯಾಸರವರು ನೇಮಕಪಟ್ಟಿರುವರು

ಇಲ್ಲಿಯ ಮುನ್ಸಿಫ್ ಕೋರ್ಟಿನಲ್ಲಿ ಒಂದು ವ್ಯಾಜ್ಯಕ್ಕೆ ಸಮ್ಮಂದಪಟ್ಟ ಸಕ್ಷಿಯು [illegible] ಗಿರುವುದಂತೆ

~~~~~

ಮುಲ್ಕಿ [illegible] ಕಲೆಕ್ಟರ್ ದೋಲೇಶವರು ತಮ್ಮ ಕುಟುಂಬ [illegible] ರಲ್ಲಿ ತಲುಪಿ ಈ ತಿಂಗಳ [illegible] ರಲ್ಲಿ ಇಲ್ಲಿ [illegible] ಹೊರಟುಹೋಗುವವರಾದರು

ಈ ಪುರುಷ ಆಕ್ಕಿ [illegible] ಧಾರಣೆಯು [illegible] ತಗ್ಗಿರುವುದರಿಂದಲೂ [illegible] ಇಲ್ಲಿಯ ಅಕ್ಕಿ [illegible] ಧಾರಣೆ [illegible] ದರದ [illegible] ವ್ಯಾಪಾರವು ಈ ವರ [illegible]

ಮುಲ್ಕಿ [illegible] ಕ್ಕಿಯುಷ್ಟು ನಿಕೃಷ್ಟವಾದ ಆಕ್ಕಿಯು [illegible] ದೊರೆ[illegible] ವುದೋ [illegible] ಇಲ್ಲಿಯ ಕೆಲವು [illegible]

[illegible] ಮತ್ತು [illegible] ವ್ಯಾಪಾರಗಳನ್ನು ನಡೆಸುವರ [illegible] ಉಚಿತ ತೋರ[illegible] ಸಾಧನೆ [illegible] ಅತ್ಯಲ್ಪ ಬೆಲೆ [illegible] ಗದ್ದೆ ಈ ವ್ಯಕ್ತಿ [illegible] ತನ್ನ ಕುಟುಂಬ [illegible] ಹಿಡಿಕೊಂಡು ಪ್ರಕೃತ [illegible] ಬೆಲೆಯುಳ್ಳ ಆಸ್ತಿಯನ್ನು [illegible] ಇಲ್ಲಿಯ [illegible] ದೊಡ್ಡ ಸಾಹುಕಾರರಲ್ಲಿ [illegible] ಪೂಜೆಯು ಇದೇ [illegible] ನೆರವೇರುವುದಾಗಿ ತಿಳಿದು [illegible] ದಲ್ಲಿ [illegible] ಯೋಜನೆಗಳಿಂದ ಬಾರು [illegible] ಕಟ್ಟಡಗಳನ್ನು ಲಕ್ಷ್ಮೀದೇವಿ ಪ್ರತಿಮೆಯ [illegible] ಪೂಜಾಗಂಸ್ಕಾರಗಳನ್ನು ಮಾಡಿ [illegible] ಲಕ್ಷ್ಮೀಸಂಪತ್ತಿ [illegible] ಪೂಜಾ [illegible] ಫಲವು ಏಕಕಾಲದಲ್ಲಿ ಒಂದೇ [illegible] ದೊರಕಿ ಈ ಸಾಹುಕಾರರ ಕೀರ್ತಿಯು ಚಿರಕಾಲ ಉಳಿಯುವುದರಲ್ಲಿ ಸಂದೇಹವಿಲ್ಲ

~~~~~

ವಿವಿಧ ವಿಷಯಗಳು

~~~~~

ಕಾಲು ಒಡೆಯುವುದು ಪಾದಗಳ ಸಿಡಿತ ಮೊದಲಾದವುಗಳು ರಾತ್ರಿಕಾಲದಲ್ಲಿ ಹಲವು ಜನರನ್ನು ಬಂಗಪಡಿಸುವವು. ಸೇವಕರಿದ್ದವರು ಇವರಿಂದ ಕಾಲುಗಳನ್ನು ಚನ್ನಾಗಿ ಒತ್ತಿಸಿಕೊಂಡು ಈ ಬಾಧೆಯನ್ನು ಶಮನಿಸಿಕೊಂಡು ರಾತ್ರಿಕಾಲ ಅಲ್ಪಸ್ವಲ್ಪ ನಿದ್ರೆ ಬರುವ ಹಾಗೆ ಮಾಡಿಕೊಳ್ಳುವರು. ಆದರೆ ಇಡೀ ರಾತ್ರಿ ಸೇವಕನ ಕೈ ಇಂಥವರ ಕಾಲಿನಮೇಲೆಯೇ ಇರಬೇಕಾಗುತ್ತದೆ. [illegible]
~~~~~

ಇಂಥಾ ಬಾಧೆಗೆ ಕಾರಣವಾಗುತ್ತದೆ. ಕಾಲಿನ ಪಾದಗಳಿಗೆ ತಕ್ಕ ಉಪಶಮನವನ್ನು ಇಂಥಾ ಸಂದರ್ಭಗಳಲ್ಲಿ ಮಾಡಲಿಕ್ಕೆ ತಪ್ಪಿದರೆ ಇದರಿಂದ ವಾತರೋಗವೂ ಕಾಲಿನ ಪಾದದ ಅಧಿ ಭಾಗದಲ್ಲಿ ತೂತುಗಳು ಬೀಳುವ ದತ್ತು ರೋಗವೂ ಪ್ರಾಪ್ತವಾಗುವುದು.

ಕಾಲಿಗೆ ಯಾವಾಗಲೂ ಪಾದರಕ್ಷೆಗಳನ್ನು ಉಪಯೋಗಿಸುವವರು ಎರಡು ಯಾ ಮೂರು ವಿಧದ ಪಾದರಕ್ಷೆಗಳನ್ನು ಆಗಿಂದಾಗ್ಯೆ ಬದಲಾಯಿಸಿಕೊಂಡು ಉಪಯೋಗಿಸಿದರೆ ಕಾಲು ಬಚ್ಚುವುದನ್ನು ತಕ್ಕಮಟ್ಟಿಗೆ ನಿಲ್ಲಿಸಬಹುದು. ಆಗಿಂದಾಗ್ಯೆ ಮತ್ತು ರಾತ್ರೆ ಸಮಯದಲ್ಲಿ ಮಲಗಿಕೊಳ್ಳುವಾಗ ಪಾದಗಳನ್ನು ಚನ್ನಾಗಿ ತಣ್ಣೀರಿನಿಂದ ತೊಳಕೊಂಡರೆ ಕಾಲುಗಳಿಗೆ ಯಾವ ಬಾಧೆಯೂ ತಗಲುವುದು ಕಡಿಮೆ. ಪಾದಗಳ ಸಿಡಿತ ಮೊದಲಾದವುಗಳು ಹೀಗೆ ತಣ್ಣೀರಿನಿಂದ ಅವುಗಳನ್ನು ತೊಳೆಯುವುದರಿಂದ ಬೇಗನೇ ಅದೃಶ್ಯವಾಗುವವು. ಅಲ್ಲಲ್ಲಿ ಕೆಲಸದ ಬಗ್ಗೆ ಕೂತುಕೊಳ್ಳುವಾಗ ಕಾಲುಗಳು ವಿರಾಮಪಡುವಂತೆ ಅವುಗಳನ್ನಿಡುವುದು ಅಗತ್ಯ.

~~~~~~

ಪಶುಕ್ಲೇಶ ನಿವಾರಿಣಿ ಸಂಸ್ಥೆಯು. ಈ ಸಂಸ್ಥೆಯ ವಾರ್ಷಿಕ ಸಭೆಯು ಮುಂಬಯಿಯ ಗವರ್ನರ್‌ಧೊರೆಗಳವರ ಅಧ್ಯಕ್ಷತೆಯಿಂದ ನೆರವೇರಿತು. ಬಹು ಕಾಲದಿಂದ ಸ್ಥಾಪಿಸಲ್ಪಟ್ಟಿದ್ದ ಈ ಸಂಸ್ಥೆಯ ಬಂಡವಾಳವು ೪ ಲಕ್ಷರೂಪಾಯಿಗಳಿವೆ. ಇಲ್ಲಿಯ ಶ್ರೀಮಂತ ಕಾರಖಾನೆಯವರೂ ಇತರ ದೊಡ್ಡ ವ್ಯಾಪಾರಿಗಳೂ ಕೂಡಿದ ಸಂಸ್ಥೆಯಾದುದರಿಂದ ಹೊರೆ ಹೇರುವ ಜಾನುವಾರುಗಳ ವಿಶೇಷತಃ ಎಂದಿ ಎತ್ತುಗಳ ಕ್ಲೇಶ ಕೊಡುವವರನ್ನೂ ನ್ಯಾಯಕ್ಕೆ ಗುರಿಪಡಿಸುವದೂ ರೋಗಪೀಡಿತ ಪಶುಗಳನ್ನು ಸಂಸ್ಥೆಯ ಸ್ವಂತ ಆಸ್ಪತ್ರೆಯಲ್ಲಿಟ್ಟುಕೊಂಡು ಔಷಧೋಪಚಾರದಿಂದ ಆರೈಕೆ ಮಾಡುವದೇ ಮೊದಲಾದ ಕಾರ್ಯಗಳನ್ನು ಮೂಲಧನದಿಂದಲೂ ವರ್ಷಂಪ್ರತಿ ಕೂಡುವ ಹುಟ್ಟುವಳಿಯಿಂದಲೂ ಸಾಗಿಸುತ್ತಾರೆ. "ಹಿಂಸೆಯೇ ಪರಮಧರ್ಮ"ವೆಂಬ ತತ್ವಕ್ಕೆ ಸಾಕ್ಷ್ಯವಾಗಿ ಇಂಥ ಧರ್ಮಕಾರ್ಯಕ್ಕೆ ಸಹಾಯ ಮತ್ತು ಸಹಾನುಭೂತಿ ದೊರೆಯಲೇಬೇಕು.

ಆದರೆ ಈ ಅಹಿಂಸೆಯು ಉತ್ತಮ ಧರ್ಮವಿಲ್ಲವು ಎಂಬ ವಿಚಾರದ ಕುರಿತು ಆಲೋಚಿಸಲಾಗಿ ಹಿಂದು ಮತದವರ "ಭೂತದಯೆ" "ಯುರೋಪ್ಯರ" "ಹ್ಯೂಮೆನಿಟಿ" (Humanity) ಇವೆರಡಕ್ಕೂ ಕೊಂಚ ಭೇದವಿದೆ ಎಂಬಂತೆ ಕಾಣುತ್ತದೆ. ಅವರ "ಹ್ಯೂಮೆನಿಟಿ"ಯು ಆದ್ಯಾಪಿ ಬಹುದ ಮನುಷ್ಯ ಪ್ರಾಣಿಗಳ (Human being) ತನಕ ಮುಟ್ಟಿಯದೆ ಹಿಂದುಗಳ ಭೂತದಯೆಯು ಸಮಸ್ತ ಪ್ರಾಣಿ ಮಾತ್ರಪರ್ಯಂತ ಮುಟ್ಟಿರುವದೆಂಬದೇ ಭೇದವೆನ್ನಬಹುದು. ಹಿಂಸೆಯಲ್ಲಿ ಹತ್ಯೆಯೊಡನೆ ಕ್ಲೇಶದ ಅಂತರ್ಭಾವ ಮಾಡಿ ಅಹಿಂಸೆಯೇ ಪರಮಧರ್ಮವೆಂಬ ಮಾರ್ಗವನ್ನನುಸರಿಸುವ ದೇಶದಲ್ಲಿ ಪಶುಗಳು ಕಷ್ಟಕ್ಲೇಶಗಳನ್ನೂ ಸಹನಮಾಡಬೇಕೆಂತಲೂ ಗವರ್ನರ ಧೊರೆಗಳವರು ಅಪ್ಪಣೆಕೊಡಿಸಿದಂತೆ ಇಂಥ ಕ್ಲೇಶದ ಕಾರಣವು ಮನುಷ್ಯರ ದುಷ್ಟತನದಿಂದಲ್ಲದೆ ಅಜ್ಞಾನದಿಂದೆಂಬಂತೆ ಆದರೂ ಬಹುತರ ದಾರಿದ್ರ್ಯಾವಸ್ಥೆಯಿಂದಲೇ ಎಂತ ಹೇಳಬೇಕಾಗಿದೆ. ಹಿಂದುಸ್ಥಾನದಲ್ಲಿ ಜನರು ಅನೇಕ ಕಾರಣಗಳಿಂದ ಜೀವನೋಪಾಯಕ್ಕಾಗಿ ಕಡುಕಷ್ಟಪಡುವಾಗ ಪಶುಗಳು ಕೂಡ ಅಂಶತಃ ಕಷ್ಟಪಡುತ್ತವೆಂದರೆ ಅತಿಶಯೋಕ್ತಿಯಾಗಲಾರದು. ಪಶುಗಳು ಕಷ್ಟಸಹಿಸಿ ಮನುಷ್ಯರ ಅನಾಥ ಚಾಕರಿಯವರಂತೆಯೂ ಸ್ನೇಹಿತರಂತೆಯೂ ಇರುವದರಿಂದ ಅವುಗಳಿಗೆ ಅನಾವಶ್ಯಕ ಕಷ್ಟಕೊಡದೆ ಮಮತೆಯಿಂದ ನೋಡಿ ಕ್ಲೇಶಕಾರಣದಿಂದ ಮುಕ್ತ ಪಡಿಸಬೇಕಾಗಿ ಗವರ್ನರ್‌ಧೊರೆಗಳವರು ಅಪ್ಪಣೆ ಕೊಡಿಸಿದರು.

ಪಶುಗಳಿಗೆ ಮನುಷ್ಯರಂತೆ [illegible] ವೆಂಬದೇ ಭೂತದಯೆಗೆ ಸಾಕಷ್ಟು ಕಾರಣವೆಂದು ಹಿಂದುಗಳು ತಿಳಕೊಳ್ಳುತ್ತಾರೆ. ಯುರೋಪ್ಯರ ಭಾವವು ಉಪಯುಕ್ತತೆಯ ಕಡೆಗೂ ಹಿಂದುಗಳ ಭಾವವು ಧರ್ಮತತ್ವದ ಕಡೆಗೂ ಒಲಿಯುತ್ತದೆ. ವಿಪರೀತ ಭಾರದ ಬಂಡಿಗೆ ಕಟ್ಟಿದ ಬಡಸಂದ ಎತ್ತುಗಳು ಎಳೆಯಲಾರದೆ ತಿನುಕುತ್ತಿರುವಾಗ ಶಕಟಕಾರನು ಕೋರಡೆಯಿಂದ ಹೊಡೆದ ಕಾಯಿಸುವದು ನೋಡಿ ಸಾತ್ವಿಕ ಯುರೋಪೀಯರಿಗೂ ಹಿಂದುವಿಗೂ ವಂದೇಸವನೇ ಕನಿಕರ ಹುಟ್ಟುವದು ಸಹಜವಲ್ಲವೇ. ಆದರೆ ಅದೇ ಯುರೋಪ್ಯರು ಕಸಾಯಿಖಾನೆಯ ಕ್ರೂರಹತ್ಯದ ನೆನವಾಗದೆ ಆ ಮಾಂಸವನ್ನು ರುಚಿಯಿಂದ ಚಪ್ಪಳಿಸಿ ತಿನ್ನುವಾಗ ಪಶುಕ್ಲೇಶ ನಿವಾರಣೆಯಂತೆ ಪಶುಹತ್ಯ ನಿವಾರಣೆಯ ವಿಚಾರಗಳು ಅವರ ಮನಸ್ಸಿನಲ್ಲಿ ಯಾಕೆ ಬರಬಾರದು ಎಂದು ಅಹಿಂಸಾವಾದಿಯಾದ ಹಿಂದುಗಳಿಗೆ ಕಂಡರೂ ಅದು ಆವಶ್ಯಕ ಕ್ಲೇಶದಲ್ಲಿ ಕೂಡುತ್ತದಾದದರಿಂದ ಉಪಾಯವಿಲ್ಲವಂತೆ. ಏವಂಚ ಪಶುಕ್ಲೇಶ ನಿವಾರಣೆಯಂತೆ ಪಶುಹತ್ಯ ನಿವಾರಣೆಗಾಗಿ ಈ ಸಂಸ್ಥೆಯವರೂ ಇತರ ಎಲ್ಲಾ ಊರಿನವರು ಕೈಲಾದ ಮಟ್ಟಿಗೆ ವಿಚಾರ ಮಾಡುವದು ಅಗತ್ಯವಾಗಿದೆ. B S R

~~~~~~

ಜೋರ್ಜ್ ಚಕ್ರವರ್ತಿಯವರು ತನ್ನ ೪೫ನೇ ವರುಷದಲ್ಲಿ ಅಂದರೆ ಮಾಜಿ ಚಕ್ರವರ್ತಿಗಳು ಪಟ್ಟವನ್ನೇರಿದ ಪ್ರಾಯಕ್ಕಿಂತಲೂ ಸಣ್ಣ ಪ್ರಾಯದಲ್ಲಿ ರಾಜ್ಯಪಾಲನೆಯನ್ನು ಕೈಕೊಂಡವರಾದರೂ ತನ್ನ ಸರಿಪ್ರಾಯದವರಾದ ಇತರ ಹಲವು ಯೂರೋಪಿಯ [illegible] ಪ್ರವೀಣರೂ ವಿವೇಕ ಶಾಲಿಗಳೂ ಆಗಿರುವರು. ಚಿಕ್ಕ [illegible] ಅವರಿಗೆ [illegible] ನೌಕಾ ಸೈನ್ಯದಲ್ಲಿಯ ಅಂಚಿಗನಾಗಿ ತರಬೇತಿಯನ್ನು ಪಡೆದರು. ರಾಜ್ಯಾಡಳಿತಕ್ಕೆ ಬೇಕಾದ ಏಕಾಂತ ವಾಸವು ಇವರಿಗೆ ಅಗತ್ಯವಿಲ್ಲದ್ದರಿಂದ ಸರ್ವಸಾಮಾನ್ಯರಲ್ಲಿ ಸಮಾನತ್ವದಿಂದ ಸಂಪರ್ಕ ಬೆಳೆಸುವ ಸಂದರ್ಭಗಳು ಈಗಿನ ಚಕ್ರವರ್ತಿಗಳಿಗಿದ್ದವು. ೧೯೦೧ನೇ ವರುಷದಲ್ಲಿ ಪ್ರಿನ್ಸ್ ಒಫ್ ವೇಲ್ಸರವರ ಪದವಿಯು ವಿಧಿವಶಾತ್ ಇವರಿಗೆ ದೊರಕಿತು. ಸಾಮ್ರಾಜ್ಯದ ಎಲ್ಲಾ ದೇಶಗಳನ್ನು ಸಂದರ್ಶಿಸಿ ಎಲ್ಲಾ ಕಡೆಗಳ ಮಾಹಿತಿಯನ್ನು ಪೂರ್ಣವಾಗಿ ಪಡೆದಿರುವರು. ಹಿಂದುಸ್ಥಾನವನ್ನು ಸಂದರ್ಶಿಸಿದ ನಂತರ ಇವರು ಮಾಡಿದ ಭಾಷಣವು ಇಂಥಾ ಮಾಹಿತಿಯ ನಿದರ್ಶನವಾಗಿರುವುದು.

ಮಾಜಿ ಚಕ್ರವರ್ತಿಗಳ ದ್ವಿತೀಯ ಪುತ್ರ ಚಕ್ರವರ್ತಿ ಐದನೇ ಜೋರ್ಜರವರು ೧೮೬೫ನೇ ಇಸವಿ ಜೂನ್ ೩ನೇ ತಾರೀಕಿನಲ್ಲಿ ಜನಿಸಿದರು. ಇವರ ಅಣ್ಣ ಡ್ಯೂಕ್ ಒಫ್ ಕ್ಲೇರನ್ಸರಕ್ಕಿಂತ ಇವರು ಪ್ರಾಯದಲ್ಲಿ ೧೭ ತಿಂಗಳಿಗೆ ಚಿಕ್ಕವರಾಗಿರುವರು. ವಾಡಿಕೆ ಮೇರೆಗೆ ಬ್ರಿಟಿಷ್ ರಾಜರ ಮಗ ಪ್ರಿನ್ಸ್ ಒಫ್ ವೇಲ್ಸರ ಹೊರತು ಇತರ ಮಗಂದಿರು ನೌಕಾ ಸೈನ್ಯದಲ್ಲಿ ಅಧಿಕಾರವನ್ನು ವಹಿಸಿಕೊಳ್ಳುವರ ತರಬೇತಿಯನ್ನು ತಮ್ಮ ಚಿಕ್ಕ ವಯಸ್ಸಿನಲ್ಲಿ ಪಡೆಯುವರು. ಮೇಲೆ ಸೂಚಿಸಿದಂತೆ ಚಕ್ರವರ್ತಿಯವರಿಗೆ ಚಿಕ್ಕ ವಯಸ್ಸಿನಲ್ಲಿ ನೌಕಾಸೈನ್ಯದ ಅಂಚಿಗನ ಶಿಕ್ಷಣವು ತನ್ನ ಹಿರೆ ಅಣ್ಣನವರೊಂದಿಗೆ ದೊರಕಿತು. ಎರಡು ವರುಷಗಳ ತನಕ ಬ್ರಿಟಾನ್ನಿಯಾ ಎಂಬ ನಾವೆಯಲ್ಲಿ ಬೇಕಾದ ತರಬೇತಿಯನ್ನು ಪಡೆದರು. ಈ ಎರಡು ವರುಷಗಳ ಅಂತ್ಯಕಾಲದಲ್ಲಿ ಬಕಾಂಟ ಎಂಬ ನಾವೆಯಲ್ಲಿ ಭೂಲೋಕದ ಸುತ್ತಲೂ ಸಮುದ್ರ ಸಂಚಾರಕ್ಕೆ ಇಬ್ಬರೂ ಹೊರಟರು. ಮೂರು ವರುಷಗಳ ತನಕ ಸಮುದ್ರ ಸಂಚಾರವನ್ನು ಮಾಡುವವರಾದರು. ಸಮುದ್ರ ಸಂಚಾರವು ಮುಗಿದ ಕೂಡಲೇ ಚಕ್ರವರ್ತಿಯವರನ್ನು ಉತ್ತರ ಅಮೇರಿಕದ ಕರಾವಳಿಯಲ್ಲಿದ್ದ ಕೆನಡಾ ಎಂಬ ಹಡಗಿನ ಮಿಡ್‌ಶಿಪ್‌ಮೇನ್ ಎಂಬ ಹುದ್ದೆಗೆ ನೇಮಿಸಿದರು. ೧೮೮೪ರಲ್ಲಿ ಲೆಫ್ಟಿನೆಂಟ್ ಎಂಬ ಹಡಗಿನ ಉಪನಾಯಕ ಹುದ್ದೆಗೆ ಏರಿಸಲಾಯಿತು. ಹಡಗುನಾಯಕರ ಹುದ್ದೆಗೆ ಏರುವದಕ್ಕೆ ಬೇಕಾದ ಪರೀಕ್ಷೆಗಳನ್ನು [illegible] ಸ್ಟೇಶನ್ ಎಂಬಲ್ಲಿಯ [illegible] ನಾವೆಯ ಸ್ವತಂತ್ರ ಅಧಿಕಾರವು ಚಕ್ರವರ್ತಿಯವರಿಗೆ ದೊರಕಿತು. ಆ ನಾವೆಯ ಅಧಿಕಾರಿಗಳು ಆ ನೌಕಾಸೈನ್ಯದ [illegible] ತೆರೆಯಲ್ಪಟ್ಟಿತು. ೧೮೯೧ನೇ ಇಸವಿಯಲ್ಲಿ [illegible] ಹಡಗಿನ 'ಕಮಾಂಡರ' ಪದವಿಯು ಕೊಡಲ್ಪಟ್ಟಿತು. ಆ ವರುಷದಲ್ಲಿಯೇ [illegible] ತನ್ನ ಅಣ್ಣ ಡ್ಯೂಕ್ ಒಫ್ ಕ್ಲೇರೆನ್ಸರವರನ್ನು [illegible] ವನ್ನು ಸಂದರ್ಶಿಸಿದರು. ಈ ಸಂದರ್ಭದಲ್ಲಿ ಡ್ಯೂಕ್ ಒಫ್ ಕ್ಲೇರೆನ್ಸರವರಿಗೆ ವಿಶೇಷ ತರದ ಜ್ವರ ಕಾಹಿಲೆಯು ಸಂಭವಿಸಿದ್ದರೂ [illegible] ಬೇಗನೆ ಗುಣ ಹೊಂದಿದರು. ೧೮೯೨ನೇ ವರುಷದಲ್ಲಿ ಡ್ಯೂಕ್ ಒಫ್ ಕ್ಲೇರೆನ್ಸರವರಿಗೆ ನ್ಯುಮೋನಿಯಾ ಎಂಬ ಶ್ವಾಸಕೋಶಕ್ಕೆ ಸಂಬಂಧದ ಜ್ವರ ಕಾಹಿಲೆಯು ಪುನಹಾ ತಗಲಿತು. ವಿಧಿವಶಾತ್ ಡ್ಯೂಕ್ ಒಫ್ ಕ್ಲೇರೆನ್ಸರವರು ಈ ಕಾಹಿಲೆಯಿಂದಲೇ ಸ್ವರ್ಗಸ್ಥರಾದರು. ಇವರ ಸ್ಮರಣೆಯು ಸಾಮ್ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಇರುವುದು. [illegible]ದಿಂದ ತನ್ನ ಅಣ್ಣನನ್ನು ಪ್ರೀತಿಸುತ್ತಿದ್ದ ಈಗಿನ ಚಕ್ರವರ್ತಿಗಳಿಗೆ ಸಹಾ ಇದರಿಂದ ಅತಿರೇಕ ಶೋಕಕ್ಕೆ ಕಾರಣವಾಯಿತು. ಈ ಸಮಯದಲ್ಲಿ ಜೋರ್ಜ್ ಚಕ್ರವರ್ತಿಯವರು ಡ್ಯೂಕ್ ಒಫ್ ಯೋರ್ಕ್ ಎಂಬ ಪ್ರಭು ಪದವಿಯನ್ನು ತಾಳಿ ಪಾರ್ಲಿಮೆಂಟ್ ಸಭೆಯ ಪ್ರಭುಸದನ ಸದಸ್ಯರಾದರು. ೧೮೯೩ರಲ್ಲಿ ತನ್ನ ಸ್ವರ್ಗಸ್ಥ ಅಣ್ಣನವರು ಮೊದಲೇ ಮದುವೆಯಾಗಬೇಕೆಂದು ನಿಶ್ಚಯಮಾಡಿದ್ದ ಪ್ರಿನ್ಸೆಸ್ ಮೇರಿ ಒಫ್ ಟೆಕ್ ಎಂಬ ರಾಜಕುವರಿಯನ್ನು ಮದುವೆಯಾಗುವರೆಂತ ನಿಶ್ಚಯಿಸಲ್ಪಟ್ಟು ಆ ವರುಷದಲ್ಲಿಯೇ ಆ ರಾಜಕುವರಿಯೊಡನೆ ವಿವಾಹಿತರಾದರು. ೧೮೯೪ನೇ ಜೂನ್ ೨೩ನೇ ತಾರೀಕಿನಲ್ಲಿ ಪ್ರಿನ್ಸ್ ಎಡ್ವರ್ಡ್ ಆಲ್ಬರ್ಟ್ ಎಂಬ ಕುಮಾರನು ಇವರಲ್ಲಿ ಜನಿಸಿದನು. ೧೮೯೫ನೇ ದಶಂಬರ ತಿಂಗಳಲ್ಲಿ ಪ್ರಿನ್ಸ್ [illegible] ಎಂಬ ದ್ವಿತೀಯ ಕುಮಾರರ ಜನನವಾಯಿತು. ಚಕ್ರವರ್ತಿಯವರಿಗೆ ಪ್ರಕೃತ ಐದು ಜನ ಪುತ್ರರೂ ಒಬ್ಬ ಕುಮಾರಿಯೂ ಇರುವರು. ೧೯೦೧ರಲ್ಲಿ ರಿಯರ್ ಎಡ್ಮಿರಲ್ ಎಂಬ ನೌಕಾಸೈನ್ಯದ ಹುದ್ದೆಯೂ ಹಡಗುಪಡೆಯ ಕರ್ನಲ್-ಇನ್ ಚೀಫ್ ಎಂಬ ಪದವಿಯೂ ಸಾರ್ವಭೌಮ್ಯರಿಗೆ ದೊರಕಿತು. ವಿಕ್ಟೋರಿಯಾ ಮಹಾರಾಣಿಯವರು ಸ್ವರ್ಗಸ್ಥರಾದ ಮೇಲೆ ತಮ್ಮ ಪಿತವರ್ಯರ ಕೋರ್ನವೋಲ್ ಪ್ರಭುಪದವಿಯನ್ನು ಸ್ವೀಕರಿಸಿ ಔಸ್ಟ್ರೇಲ್ಯದ ಪ್ರಥಮ ಪಾರ್ಲಿಮೆಂಟ್ ಸಭೆಯನ್ನು ತೆರೆಯುವರೆ ಅಲ್ಲಿಗೆ ಕಳುಹಿಸಲ್ಪಡುವವರಾದರು. ಅಲ್ಲಿಂದ ಬಂದೊಡನೆ ಅರ್ಲ ಒಫ್ ಚೆಸ್ಟರ್ ಎಂಬ ಬಿರುದು ಸಹಾ ಕೊಡೋಣವಾಗಿ 1902ನೇ ಇಸವಿಯಲ್ಲಿ ಮಹಾಪ್ರಭುಗಳನ್ನು ಜನರಲರನ್ನಾಗಿ ಮಾಡಿದರು. ವಸ್ತು ಪ್ರದರ್ಶನಗಳಿಗೆ ತಂದೆ ಅಜ್ಜಂದಿಯರಂತೆಯೇ ಜೋರ್ಜ್ ಚಕ್ರವರ್ತಿಗಳು ಸಹಾ ತಮ್ಮಿಂದಾಗುವ ಆದರಣೆಯನ್ನು ಕೊಡುತ್ತಿದ್ದರು. ಸೆಂಟ್ ಲುಯಿಸ್ ಎಕ್ಸಿಬಿಷನ್ ಎಂಬ ವಸ್ತು ಸಂದರ್ಶನವನ್ನು ಏರ್ಪಡಿಸಿದ ಬ್ರಿಟಿಷ್ ಕಮಿಶನಿನ ಅಧ್ಯಕ್ಷರಾಗಿದ್ದರು. 1904ನೇ ಇಸವಿಯಲ್ಲಿ ಔಸ್ಟ್ರಿಯದ ಚಕ್ರವರ್ತಿಯವರಿಗೂ ಆಗ್ಯೆ ಪ್ರಿನ್ಸ್ ಒಫ್ ವೇಲ್ಸರಾಗಿದ್ದ ಈಗಿನ ಚಕ್ರವರ್ತಿಗಳಿಗೂ ಭೇಟಿಯಾಯಿತು. ಇದೇ ವರುಷದಲ್ಲಿ ಭರತಖಂಡವನ್ನು ಸಹಾ ಸಂದರ್ಶಿಸಿ ಬರಬೇಕೆಂತ ನಿರ್ಣಯಿಸಲ್ಪಟ್ಟಿತು.

ಚಕ್ರವರ್ತಿಗಳವರ [illegible]

ಜ್ಞಾನಿಗಳಾದ್ದರಿಂದ ತನ್ನ ವಿವೇಕದಿಂದಲೂ, ಸಹಾನುಭೂತಿಪರರೂ ಉದಾರಚಿತ್ತರವರೂ ಆದ್ದರಿಂದ ತನ್ನ ಮಮಕಾರದಿಂದಲೂ ಸರ್ವ ಸಾಮ್ರಾಜ್ಯದ ಅಭಿವೃದ್ಧಿಯನ್ನು ಸಾಧಿಸ್ಯಾರೆಂಬದಕ್ಕೆ ಯಾರೇನು ಶಂಕೆ ಪಡಿಯುವರು? ಮಹಾರಾಣಿ ವಿಕ್ಟೋರಿಯಾ ಮಾತೆಯವರು 'ಶುಭದಾಯಿನಿ' ಎಂತ ಖ್ಯಾತಿಹೊಂದಿದರು, ಎಡ್ವರ್ಡ ಮಹಾಪ್ರಭುಗಳು 'ಶಾಂತದಾಯಕ'ರೆಂತಾದರು, ಸುಖ, ಶಾಂತತೆ ಇವೆರಡುಗಳನ್ನು ಸಾಮ್ರಾಜ್ಯದಲ್ಲಿ ಮಾತ್ರವಲ್ಲ, ಇಡೀ ಲೋಕದಲ್ಲಿ ಸ್ಥಿರಗೊಳಿಸಿ ಜೋರ್ಜ ಚಕ್ರವರ್ತಿಗಳು ಸಮೃದ್ಧಿಯನ್ನುಂಟುಮಾಡುವವರಾಗಲೆಂದು ಸದಾ ಶ್ರೀ[illegible]ಯನ್ನು ಪ್ರಾರ್ಥಿಸುತ್ತಿರುವೆವು.

~~~~~~

ಸಂಯುಕ್ತ ಗೌಡಸಾರಸ್ವತ ಪರಿಷದ

~~~~~~

ಕಳೆದ [illegible]ನೇ ಇಸವಿ ಡಿಸೆಂಬರ ಅಂತ್ಯದಲ್ಲಿ ಮಂಗಳೂರಿನಲ್ಲಿ ನೆರೆದ ಸಂಯುಕ್ತ ಪರಿಷದವನ್ನು ಬೆಳಗಾಂವ ಶಾಪುರಕಾರರು ಬೆಳಗಾಂವಕ್ಕೆ ಆಮಂತ್ರಿಸಿದರಷ್ಟೆ. ಆ ಆಮಂತ್ರಣವು ಸ್ವೀಕರಿಸಲ್ಪಟ್ಟಿತು. [illegible] ಸಭೆಯು ಕಳೆದ ತಿಂಗಳಲ್ಲಿ ಬೆಳಗಾಂವದಲ್ಲಿ ಕೂಡಿತು. ಆ ಸಭೆಯಲ್ಲಿ ನಡೆದ ಕೆಲಸ [illegible] ಕೇಳುವಾಗ ಪರಿಷದವನ್ನು ಅಲ್ಲಿಗೆ ಆಮಂತ್ರಿಸಿದ ಪರಿಣಾಮವಾಗಿ ಮಂಗಳೂರಿನವರ ತೇಲಂಗ [illegible] ಮಾತುಗಳು ಸ್ಮರಣೆಗೆ ಬರುವವು. ಇವರು ಮಂಗಳೂರು [illegible] ಸಭಿಕರನ್ನುದ್ದೇಶಿಸಿ ಹೇಳಿದ್ದೇನಂದರೆ "ನೀವು [illegible] ವರುಷ ಪರಿಯಂತ ತಪಸ್ಸು ಮಾಡಿ ಪಡೆದ ಕನ್ನಿಕೆಯನ್ನು ನಮ್ಮ ವಶಕೊಡಲಿಕ್ಕುಂಟು. ಸಹಜ [illegible] ಕನ್ನಿಕೆಯ ಸಂರಕ್ಷಣೆಯನ್ನು ಕುರಿತು ಚಿಂತಿಸಬೇಕು. ನಾವು ವಿಶೇಷ [illegible] ಪೋಷಿಸುವೆವು." ಬೆಳಗಾಂವದಲ್ಲಿ ನಡೆದ [illegible] ಇಲ್ಲಿಯವರು [illegible] ನಡೆದವು. ಇಲ್ಲಿ ಉತ್ಪತ್ತಿಯಾದ ಕನ್ನಿಕೆಯು ತತ್ಕಾಲಕ್ಕೆ ಅಂತರ್ಧಾನವಾಗಬೇಕಾಯಿತು. —

[illegible]ಕಾರರು, [illegible]ಕಾರರು ಮೊದಲಾದ ಗೌಡಸಾರಸ್ವತ ಬ್ರಾಹ್ಮಣ ಜಾತಿಯ [illegible] ಸಮುದಾಯಗಳನ್ನು ಈ ಪರಿಷದದೊಳಕ್ಕೆ ಸೇರಿಕೊಳ್ಳಬೇಕೆಂದು [illegible] ಪರಿಷದಕ್ಕೆ ದೀರ್ಘಕಾಲ [illegible] ಅದು ಸದ್ಯ [illegible] ಯುಕ್ತವಲ್ಲವೆಂದು [illegible]ಯಿತು. ಈ ವಿವಾದವನ್ನು [illegible] ತೇಲಂಗರು ತಾವು ಈ ಉದ್ದೇಶ್ಯ ಇನ್ನು ಹತ್ತಲ್ಲ ಇಪ್ಪತ್ತು ವರುಷ ಕಾದು ಇದನ್ನು ಸಾಧಿಸುವೆವೆಂದು ಹೇಳಿದರು. ಇವರು ಕೊಟ್ಟ ವಚನವನ್ನು [illegible], ಇನ್ನು ಮುಂದೆ ವಿವಾದ ಬಾರದಂತೆಯೂ, ಪರಿಷದ [illegible] ಈ ಪರಿಷದ ಸಭಿಕರಾಗಲು [illegible] ಇತರರು ಅರ್ಹರಲ್ಲವೆಂದೊಂದು [illegible]. ಈ ನಿಯಮಗಳು ತದುದ್ದೇಶ್ಯ [illegible] ಸಲ್ಪಟ್ಟ ಕಮಿಟಿಯವರ [illegible] ಪರಿಷದವು [illegible] ಮಾತ್ರವಲ್ಲದೆ ಪರ ಪಕ್ಷದವರು [illegible] ಪರಿಷದವು [illegible] ನಂತರ [illegible] ಪರಿಷದದ [illegible] ದಿತ್ತೋ [illegible] ಪ್ರತ್ಯೇಕ [illegible] ಸಂಯುಕ್ತ ಗೌಡಸಾರಸ್ವತ ಬ್ರಾಹ್ಮಣ ಪರಿಷ[illegible].

ಗೌಡಸಾರಸ್ವತ ಬ್ರಾಹ್ಮಣ [illegible] ಅವರು ಮಾಡಿದ ನಿರ್ಣಯವು ಅನುಚಿತವೆಂದು ನಾವು ತಿರಸ್ಕರಿಸುವದಿಲ್ಲ. ಇವಕ್ಕೆ [illegible] ಭೇದಗಳು ಆದಷ್ಟು ಕಡಿಮೆಯಾಗಿ [illegible] ಪ್ರತಿಯೊಬ್ಬ ದೇಶಹಿತೈಷಿಯು [illegible] ಇತರ [illegible] ಸಹೊಂದಿಗ ಒಂದು ಶುಭ ಪರಿಣಾಮ[illegible] [illegible] ಜಾತಿ[illegible] ಅಸಹ್ಯಪಟ್ಟ ಗೃಹಸ್ಥನೊಬ್ಬನು [illegible] ತನ್ನ [illegible] ನೆರವೇರಿಸುವದು ಸಾಧ್ಯವಾಯಿತು. ಪರಿಷದದ [illegible] ತೋರಿ ಕೊಟ್ಟ ಪಥವನ್ನು [illegible] ಅನುಸರಿಸುವದು [illegible]ವಾಯಿತು.

ಆದರೆ ಒಂದು ಕಾರ್ಯವು ಎಷ್ಟೊ ಆಪೇಕ್ಷಣೀಯವಾಗಲಿ ಪ್ರಯೋಜನಕರವಾಗಲಿ, ವಿವೇಕಿಯಾದವನು ದೇಶಕಾಲ ವಿದ್ಯಮಾನಗಳನ್ನು ನೋಡಿ ಅದಕ್ಕೆ ಕೈ ಹಾಕಬೇಕು. ಯಾಕಂದರೆ ನಾವು ದೇಶಕಾಲ ವಿದ್ಯಮಾನ ಬಾಧಿತರಾಗಿ ಲೋಕದಲ್ಲಿ ವ್ಯವಹರಿಸುವೆವು. ರಾಷ್ಟ್ರೀಯ ವಿಷಯಗಳಲ್ಲಿಯೂ, ಸಾಮಾಜಿಕ ವಿಷಯಗಳಲ್ಲಿಯೂ, ಜನರನ್ನು ಉನ್ನತಿ ಪಥದಲ್ಲಿ ನಡಿಸುವ ನಾಯಕನ ಲಕ್ಷಣಗಳು ಯಾವವು? ಅವನು ಸಾಧಾರಣ ಜನರ ಮುಂದೆ ನಡೆದು ದಾರಿ ತೋರಿಸಬೇಕು. ಅವರು ತನ್ನನ್ನು ಹಿಂಬಾಲಿಸುವಂತೆ ಅವರಲ್ಲಿ ವಿಶ್ವಾಸವನ್ನು ಹುಟ್ಟಿಸಬೇಕು. ಅವರು ಹಿಂಬಾಲಿಸ ತೀರದಷ್ಟು ವೇಗದಲ್ಲಿ ಓಡಕೂಡದು. ಒಬ್ಬ ಗೃಹಸ್ಥನು ಜಾತಿ ಭೇದಗಳ ಮೇಲೆ ಅಸಹ್ಯಪಟ್ಟು ಒಬ್ಬನೇ ಬೇರೆಯಾದರೆ ತನ್ನ ಉದ್ದೇಶ್ಯವನ್ನು ನೆರವೇರಿಸಲಾರನು. ಸ್ವೇಚ್ಛಾಶಿಯುಳ್ಳಿದ್ದು ಅವನಿಗೆ ಸಹಕಾರಮಾಡುವ ಸಂದರ್ಭ [illegible] ವಸ್ತುಸ್ಥಿತಿಯು [illegible] ತರವಿರುವದು. [illegible] ಸಮುದಾಯಕ್ಕೆ ಉತ್ಕರ್ಷಿಸುವ ಶಕ್ತಿ ವ ಮನಸ್ಸು ಇರುವ ಗೃಹಸ್ಥರು ಅವರ ಅಭಿವೃದ್ಧಿಗೆ ಸಹಕಾರಿಗಳಾದ ಸಂಸ್ಥೆ ಮೊದಲಾದವುಗಳನ್ನು ಊರ್ಜಿತವಿಟ್ಟು ವ ಇತರ ನಿರಾಕ್ಷೇಪಕರ ವಿಧಿಯಿಂದ ಸ್ವಧು ಜನರ ವಿಶ್ವಾಸಕ್ಕೆ ಪಾತ್ರನಾಗತಕ್ಕದ್ದು. ಈ ಬಗ್ಯೆ ಪರಿಷದದೊಂದಿಗೆ ಜಿಲ್ಲೆಗೊಂದು ಉಪಸಭೆ ಸ್ಥಾಪಿತವಾಗುವದು ಯುಕ್ತತೋರುವದು. ಯಾಕಂದರೆ ಒಂದೊಂದು ಜಿಲ್ಲೆಯ ಜನರು ವಿದ್ಯಾಭ್ಯಾಸ ವಗೈರೆಯ ಒಂದೊಂದು ಸೋಪಾನದಲ್ಲಿರುವರು. ಇಡೀ ಜಾತಿಯ ಪರಿಷದವು ಅವಶ್ಯಕವೇ ಆದರೂ ಮಹಾ ಸಭೆಯಲ್ಲಿ ಪ್ರತಿಯೊಂದು ಜಿಲ್ಲೆಯ ಕುಂದುಕೊರತೆಗೆ ಲಕ್ಷ್ಯಕೊಡ ಸಾಧ್ಯವಲ್ಲ.

ಬೆಳಗಾಂವ ಅತ್ತಕಡೆಯ ವಸ್ತುಸ್ಥಿತಿಯು ಎಂತಹದೆಂದು ನಾವು ಪರಿಶೀಲಿಸಿಲ್ಲ. ಆದಕಾರಣ ಸಂಯುಕ್ತ ಪರಿಷದದ ಕೃತ್ಯವನ್ನು ಕುರಿತು ಟೀಕುಮಾಡ ಸಾಧ್ಯವಲ್ಲ. ಆದರೂ ಅವರ ಇರಾದೆಯು [illegible]ವಾದ್ದರಿಂದ ಅವರಿಗೆ ಉತ್ತರೋತ್ತರ ಅಭಿವೃದ್ಧಿಯನ್ನು ಬಯಸುವೆವು. ಪರಿಷದದ ಮುಂದಿನ ವೃತ್ತಾಂತವನ್ನೂ ನಿರ್ಣಯಗಳನ್ನೂ ನಮ್ಮ ಅಭಿಪ್ರಾಯಗಳೊಂದಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

~~~~~~

ಸಜೀವ ಹುಗಿಯುವದು

— —

ಇಂಗ್ಲಾಂಡಿನಲ್ಲಿ [illegible] ಯಾನೆ ದಹನ ಸುಧಾರಕವೆಂಬ ವರ್ತಮಾನಪತ್ರ ಪ್ರಚುರವಾಗುತ್ತದೆ. ಈ ವರ್ತಮಾನಪತ್ರದಿಂದ ೧೯೦೫ನೇ ಇಸವಿಯಿಂದ ಕಳೆದ ಇಸವಿ ಆಖೈರು ವರೆಗೆ ಮನುಷ್ಯರಿಗೆ ಜೀವ ಇರುವಾಗಲೇ ಅವಸಾನವಾಯಿತೆಂತ ಬಾವಿಸಿ ಹೊಂಡದಲ್ಲಿ ಹಾಕಿದ ದೃಷ್ಟಾಂತಗಳು [illegible], ಉತ್ತರಕ್ರಿಯೆ ಬಗ್ಯೆ ಸಾಹಿತ್ಯ ಸಿದ್ಧಪಡಿಸಿ ಹೊಂಡದಲ್ಲಿ ಹಾಕುವದಕ್ಕೆ ಉಪಕ್ರಮಿಸುವಷ್ಟರಲ್ಲಿ ಪ್ರಾಣವುಂಟೆಂತ ಕಂಡು ಬಂದ ದೃಷ್ಟಾಂತಗಳು [illegible] ತೋರುತ್ತವೆ. [illegible]ನೇ ಇಸವಿ ನವಂಬರ [illegible]ನೇ ಶುಕ್ರವಾರ ದಿನ ಒಬ್ಬಳು ಸ್ತ್ರೀಯು ಮರಣ ಪಟ್ಟಳು ಎಂತ ಎಲ್ಲರೂ ನಿರ್ಣಯಿಸಿ ಕ್ರೈಸ್ತರ ಆಚರಣೆ ಅನುಸಾರವಾಗಿ ಸಂಬಂಧಿಕರು ಹೆಣವನ್ನು ಅಲಂಕರಿಸಿ ಪೆಟ್ಟಿಗೆಯಲ್ಲಿ ಇಟ್ಟರು. ಆಕೆಯ ಮಗಂದಿರಲ್ಲಿ ಒಬ್ಬನು [illegible] ಹೆಣವಿದ್ದ ಕೋಣೆಗೆ ಹೋಗುತ್ತಾ ಬರುತ್ತಾ ಇದ್ದನು. ತನ್ನ ತಾಯಿ ಸಾಯಲಿಲ್ಲವೆಂತ ಅನುಮಾನವಿಟ್ಟು ದಾಕ್ತಾರರಿಗೆ ಕರೆ ಕಳುಹಿಸಿದನು. ದಾಕ್ತಾರರು ಬಂದು ಪ್ರಾಣವಿಲ್ಲ ಎಂತ ದೃಢಪಡಿಸಿದರು. ಮರುದಿನ ಇನ್ನೊಬ್ಬ ದಾಕ್ತಾರರಿಗೆ ಕರಿಸಿ ಶಸ್ತ್ರಪ್ರಯೋಗದಿಂದ ಘಾಯಮಾಡಿದರೂ ರಕ್ತ ಬರಲಿಲ್ಲ. ಆದರೂ ಮಗನು ತಾಯಿಯ ಮುಖ ನೋಡಿ ತಾಯಿಗೆ ಜೀವವುಂಟೆಂತಲೇ ಹಟಮಾಡಿದನು. [illegible] ದಿವಸ ಹೆಟ್ಟಿಗೆ ಇಡಲ್ಪಟ್ಟಿತು, ಮೂರನೇ ದಿನವೂ ದಾಕ್ತಾರರು ಬಂದು ಪರೀಕ್ಷಿಸಿದ್ದಲ್ಲಿ ಮೂರು ದಿವಸಗಳು ಕಳದಾಗ್ಯೂ ಶರೀರದಲ್ಲಿ ಯಾವ ಕಡೆಯಲ್ಲಿಯೂ ಮಾಂಸ ಕೊಳೆತ ಚಿನ್ಹೆ ಕಂಡುಬಾರದ್ದರಿಂದ ಜೀವವುಂಟೆಂತ ನಿರ್ಣಯಿಸಿದರು. [illegible] ಸಾಸಿವೆಯ ಪೊಲ್ಟೀಸು ಮೊದಲಾದ ಚಿಕಿತ್ಸೆಯಿಂದ [illegible] ಸಕ್ಕೆ ಬಂದು ಕಡೆಗೆ ಬೃಹಸ್ಪತಿವಾರ ದಿವಸ ಆಕೆ ಮರಣಪಟ್ಟಳು.

ಅಷ್ಟರ [illegible] ಜೇಮ್ಸ್ [illegible] ವಿಲಿಯಮ್ಸ್‌ನ್ ಧೊರೆಯು ಇಂತಹ ದೃಷ್ಟಾಂತಗಳು ಕಳೆದ ಎಪ್ರಿಲ್ [illegible] ತಾರೀಕಿನ ಯುನಿಟೇರಿಯನ್ ಹೆರೋಲ್ಡ [illegible] ವರ್ತಮಾನಪತ್ರದಲ್ಲಿ ಪ್ರಕಟಿಸಿ ಉತ್ತರಕ್ರಿಯೆ ಮಾಡುವ ಅವಸರದಿಂದ ಜನರು [illegible] ಎಷ್ಟು ಪ್ರಾಣಹಾನಿ ಮಾಡುತ್ತಾರಪ್ಪಾ! ಎಂತ ವಿಷಾದಪಡುತ್ತಾರೆ.

ನಮ್ಮ ದೇಶದಲ್ಲಿ [illegible] ಮನುಷ್ಯ ಹೆಣ ಇಟ್ಟರೆ ಭೂಮಿಗೆ ಭಾರವಾಗುತ್ತದೆಂತಲೂ, ಹೆಣ [illegible] ಮೊದಲು ಅನ್ನಪಾನ ಮಾಡುವುದು ಅಶುದ್ಧವೆಂತಲೂ ನಂಬಿಕೆ ಇರುವದರಿಂದ ದಹನಕ್ಕೆ ಅವಸರ ಪಡುವುದು ಲೋಕಪದ್ಧತಿಯೇ ಆಗಿರುವದರಿಂದ ಎಷ್ಟು [illegible] ಸಜೀವ ದಹನವಾಗುತ್ತವೋ ದೇವರೇ ಬಲ್ಲ.

ಮಂಗಳೂರಿನಲ್ಲಿ [illegible] ಮೃತವಾಯಿತೆಂತ ನಂಬಿ ವಸ್ತ್ರದಲ್ಲಿ ಮುದಚಿ ಸ್ಮಶಾನಕ್ಕೆ ತೆಗದುಕೊಂಡು ಹೋದರು. ದಾರಿಯಲ್ಲಿ ಮಗು ಮೂತ್ರವಿಸರ್ಜನೆ ಮಾಡಿತು. ಹೊತ್ತುಕೊಂಡು ಹೋಗುವವನು ಮೂತ್ರ ನೋಡಿ ಮಗು ಕೈ ಅಲ್ಲಾಡಿಸುವುದು ಸಹ ನೋಡಿ ಜೀವವುಂಟೆಂತ ಮಗುವನ್ನು ವಾಪಸು ತಂದನು. ಒಂದಾವರ್ತಿ ಹೊರಗೆ ತೆಗದುಕೊಂಡುಹೋದ ಹೆಣವನ್ನು ಪುನಃ ಮನೆ ಒಳಗೆ ತರುವದು ಕುಟುಂಬ ವೃದ್ಧಿಗೆ ಹಾನಿಕರವೆಂತ ಆ ಮಗುವಿನ ಹೆಣವನ್ನು ಅಂಗಳದಲ್ಲಿ ತುಳಸಿ ಕಟ್ಟೆಯ ಹತ್ತರ ಇಟ್ಟರು. ಜೀವ ಉಂಟೆಂತ ದೃಢವಾಗುತ್ತಲೇ ಮಗುವನ್ನು ಮನೆ ಒಳಗೆ ತಂದರು. ಆ ಮಗು ಕಾಲಕ್ರಮದಲ್ಲಿ ಜಿಲ್ಲಾ ಕೋರ್ಟಿ ಶಿರಸ್ತೆ ಉದ್ಯೋಗ ಹೊಂದಿ ಅದರ ಮಕ್ಕಳು ಮತ್ತು ಮೊಮ್ಮಕ್ಕಳು ಮಂಗಳೂರು ಮುಂಬಯಿ ಕಲ್ಕತ್ತ ಪಟ್ಟಣಗಳಲ್ಲಿ ಕುಟುಂಬಸ್ಥರಾಗಿ ಈಗಲೂ ಇರುತ್ತಾರೆ.

ದಹನ-ದಫನಕ್ಕೆ ಅವಸರ ಮಾಡಬೇಡಿರಿ.
~~~~~~

ಆಯುರ್ವೇದ ಪುನರುಜ್ಜೀವನ

ಯಾವುದೋ ಒಂದು ಒಳ್ಳೇ ಸಮಯ. ಆ ಸಮಯದಲ್ಲಿ ಅನೇಕ ಮಹಾತ್ಮರು ಈ ಪ್ರಪಂಚದಲ್ಲಿ ರೋಗಾಗ್ನಿಯೊಳಗೆ ದಹಿಸುತ್ತಿರುವ ಪ್ರಾಣಿಗಳನ್ನು ನೋಡಿದರು. ಕೂಡಲೇ ದಯಾರ್ದ್ರೀಭೂತ ಹೃದಯವುಳ್ಳವರಾಗಿ ಪ್ರಾಣಿಗಳಿಗೆ ಅತ್ಯಂತ ದುಃಖಕ್ಕೆ ಕಾರಣವಾದ ವ್ಯಾಧಿಗಳನ್ನು ಹೋಗಲಾಡಿಸದಿದ್ದರೆ ಪ್ರಾಣಿ ಸಂಹಾರವು ನಿರ್ಮೂಲವನ್ನೈದುವದು ಎಂಬ ಯೋಚನೆಯು ಇವರಲ್ಲಿ ಉಂಟಾಯಿತು. ಅವರು ಆಗಲೇ ಹಿಮವತ್ಪರ್ವತದ ಪ್ರಾಂತ್ಯದಲ್ಲಿ ಒಂದು ದೊಡ್ಡ ಸಭೆಯನ್ನು ಕೂಡಿಸಿದರು. ಅದರೊಳಗೆ ಸೇರಿದವರಾದ ಅಂಗಿರಾ, ಜಮದಗ್ನಿ, ವಸಿಷ್ಠ, ಕಾಶ್ಯಪ, ಭೃಗು, ಆತ್ರೇಯ, ಗೌತಮ, ಸಾಂಖ್ಯ, ಪುಲಸ್ತ್ಯ, ನಾರದ, ಅಸಿತ, ಅಗಸ್ತ್ಯ, ವಾಮದೇವ, ಮಾರ್ಕಂಡೇಯ, ಆಶ್ವಲಾಯನ, ಪರೀಕ್ಷಿ, ಭಿಕ್ಷು, ಆತ್ರೇಯ, ಭರದ್ವಾಜ, ಇನ್ನೂ ವೈಖಾನಸರು, ವಾಲಖಿಲ್ಯರು, ಮೊದಲಾದವರುಗಳು ಇಂಥಾ ದುಷ್ಟ ವ್ಯಾಧಿಗಳನ್ನು ಹೋಗಲಾಡಿಸುವದು ಹ್ಯಾಗೆ ಎಂದು ಪರಸ್ಪರ ವಿಚಾರ ಮಾಡುತ್ತಿರುವಾಗ ಅವರುಗಳಿಗೆ ಒಂದು ಸಮಾಧಾನವು ಸಿಕ್ಕಿತು. ತ್ರಿವಿಷ್ಟಪ ಎಂಬ ದೇಶದಲ್ಲಿ ಇಂದ್ರನು ಎಂಬುವನು ಅಶ್ವಿನೀ ಕುಮಾರರುಗಳಿಂದ ಆಯುರ್ವೇದವೆಂಬ ವಿದ್ಯೆಯನ್ನು ಕಲಿತುಕೊಂಡು ಇರುವನು. ಯಾವ ವಿದ್ಯೆಯಿಂದ ವ್ಯಾಧಿಗ್ರಸ್ತರಾದ ಸಕಲರನ್ನು ವ್ಯಾಧಿಯಿಂದ ಬಿಡಿಸಬಹುದೋ ಆ ವಿದ್ಯೆಯು ಆಯುರ್ವೇದದಲ್ಲಿರುವದಂತೆ. ಆದ್ದರಿಂದ ನಾವು ಯಾರನ್ನಾದರೂ ಒಬ್ಬನನ್ನು ತ್ರಿವಿಷ್ಟಪಕ್ಕೆ ಕಳುಹಿಸೋಣ ಎಂದು ಮಾತಾಡಿದರು. ಅವರಲ್ಲಿ ಭರದ್ವಾಜ ಎಂಬುವನು ಎದ್ದು ನಿಂತು ನಾನು ಆ ವಿದ್ಯೆಯನ್ನು ಕಲಿತುಕೊಂಡು ಬರುವೆನೆಂದು ಹೇಳಿದನು. ಅವನ ಪ್ರಾರ್ಥನೆ ಮೇರೆಗೆ ಅವನನ್ನು ಇಂದ್ರನ ಹತ್ತರ ಕಳುಹಿಸಿದರು. ಅವನು ಕೆಲವು ವರುಷದೊಳಗೆ ಆ ವಿದ್ಯೆಯನ್ನು ಕಲಿತುಕೊಂಡು ಬಂದು ಪ್ರಥಮದಲ್ಲಿ ತನ್ನನ್ನು ಇಂದ್ರನ ಹತ್ತರ ಕಳುಹಿಸಿಕೊಟ್ಟ ಅಂಗಿರಾ ಮೊದಲಾದ ಋಷಿಗಳಿಗೆ ವ್ಯಾಖ್ಯಾನ ಮೂಲವಾಗಿ ತಿಳಿಸಿದನು. ಅನಂತರ ಪುನರ್ವಸು ಆತ್ರೇಯನು ಆ ವಿದ್ಯೆಯನ್ನು ಅಗ್ನಿವೇಶ, ಭೇಲ, ಜತೂಕರ್ಣ, ಪರಾಶರ, ಕ್ಷಾರಪಾಣಿ, ಹಾರೀತ ಎಂಬ ಆರು ಜನ ವಿದ್ಯಾರ್ಥಿಗಳಿಗೆ ಹೇಳಿಕೊಟ್ಟರು. ಆ ಮೇಲೆ ಕ್ರಮಶಃ ಹಿಮವತ್ಪರ್ವತದ ದಕ್ಷಿಣ ಭೂಭಾಗದಲ್ಲಿಯೂ ಈ ಆಯುರ್ವೇದ ವಿದ್ಯೆಯು ಪ್ರಚಾರಕ್ಕೆ ಬಂತು ಎಂಬ ಇತಿಹಾಸವು ಚರಕ ಸೂತ್ರಸ್ಥಾನ ಪ್ರಥಮ ಅಧ್ಯಾಯದಲ್ಲಿ ತಿಳಿದುಬರುತ್ತದೆ. ಚರಕ ಚಿಕಿತ್ಸಿತಸ್ಥಾನ ಒಂದನೇ ಅಧ್ಯಾಯ ಆಯುರ್ವೇದ ಸಮುತ್ಥಾನೀಯವೆಂಬ ಚತುರ್ಥ ರಸಾಯನಪಾದದಲ್ಲಿ ಸಹಾ ತೋರಿಬರುವ ಈ ಇತಿಹಾಸ ವಿಷಯವನ್ನು ತಿಳಕೊಳ್ಳಬಹುದು. ಭೃಗು, ಅಂಗಿರಾ, ಅತ್ರಿ, ವಸಿಷ್ಠ, ಕಶ್ಯಪ, ಅಗಸ್ತ್ಯ, ಪುಲಸ್ತ್ಯ, ವಾಮದೇವ, ಅಸಿತ, ಗೌತಮ ಎಂಬವರುಗಳೂ ಇನ್ನೂ ಕೆಲವರೂ ಅರಣ್ಯವಾಸವನ್ನು ಬಿಟ್ಟರು. ಇವರು ಕೆಲವು ವರುಷ ಗ್ರಾಮವಾಸವನ್ನು ಮಾಡಿದರು. ಇದರಿಂದ ಇವರುಗಳಿಗೆ ಬುದ್ಧಿವೈಕಲ್ಯ, ಜಾಡ್ಯ ಮೊದಲಾದ ವ್ಯಾಧಿಗಳು ಉಂಟಾದವು. ಇವರು ತಮಗಾದ ಈ ಅವಸ್ಥೆಗಳನ್ನು ತ್ರಿವಿಷ್ಟಪದಲ್ಲಿರುವ ಇಂದ್ರನಿಗೆ ತಿಳಿಸಿದರು. ಅವನು ಆ ವ್ಯಾಧಿಗಳಿಗೆ ಕಾರಣವಾದ ಗ್ರಾಮವಾಸವನ್ನು ಬಿಡಿಸಿ ಅವರುಗಳಿಗೆ ಪ್ರಧಾನವಾಗಿ ರಸಾಯನ ವಿದ್ಯೆಯನ್ನೂ ಆಯುರ್ವೇದ ವಿದ್ಯೆಯನ್ನೂ ತಿಳಿಸಿದನು. ಈಗ ಈ ಎರಡು ಇತಿಹಾಸಗಳಿಂದ ನಮಗೆ ತಿಳಿದುಬರುವದೇನಂದರೆ, ಭೃಗ್ವಾದಿಗಳು ಪ್ರಥಮದಲ್ಲಿ ಇಂದ್ರನಿಂದ ಕೆಲವು ಆರೋಗ್ಯಕ್ಕೆ ಅನುಕೂಲವಾದ ಸಂಗತಿಗಳನ್ನು ಮಾತ್ರ ತಿಳಕೊಂಡಿದ್ದರಲ್ಲದೆ ಪೂರ್ಣವಾಗಿ ಆಯುರ್ವೇದ ವಿದ್ಯೆಯನ್ನು ತಿಳಿದಿರಲಿಲ್ಲ. ಎರಡನೇ ಸಲ ಹಿಮವತ್ಪರ್ವತದ ಬಳಿಯಲ್ಲಿ ಸಭೆ ಕೂಡಿದಾಗ ಇಂದ್ರನಿಗೆ ಈ ವಿದ್ಯೆ ಗೊತ್ತಿದೆ ಎಂಬ ಸಂಗತಿ ಅವರು ಮೊದಲೇ ತಿಳಕೊಂಡದ್ದರಿಂದ ಭರದ್ವಾಜನನ್ನು ಅವನ ಹತ್ತರ ಪೂರ್ಣವಾಗಿ ಆಯುರ್ವೇದವನ್ನು ಕಲಿತುಕೊಂಡು ಬರಲಿಕ್ಕೆ ಕಳುಹಿಸಿದರು. ಈ ಕಾಲವು ಯಾವದು, ಎಷ್ಟು ಸಾವಿರ ವರುಷಗಳ ಹಿಂದೆ ಈ ಸಭೆಯು ನಡೆದಿತ್ತು ಎಂದು ನಿಶ್ಚಯವಾಗಿ ಹೇಳಲಿಕ್ಕೆ ಆಗುವದಿಲ್ಲ. ಯದ್ಯಪಿ ಇಂದ್ರನಿಂದ ಆಯುರ್ವೇದ ವಿದ್ಯೆಯನ್ನು ಪೂರ್ಣವಾಗಿ ಕಲಿತುಕೊಂಡು ಭರದ್ವಾಜನು ಬೇರೆಯವರಿಗೆ ಕಲಿಸಿಕೊಟ್ಟನೆಂದು ಹೇಳಿದರೂ ಅನಂತರ ಇವರುಗಳೇ ಎಷ್ಟೋ ವಿಷಯಗಳನ್ನು ಹೊಸದಾಗಿ ಕಂಡುಹಿಡಿದು ಆಗಿಂದಾಗ್ಯೆ ಸಭೆಗಳನ್ನು ನೆರವೇರಿಸಿ ಆ ಸಭೆಗಳಲ್ಲಿ ನಾನಾ ದೇಶದ ಚಿಕಿತ್ಸಕರುಗಳೂ ಸೇರಿ ಅವರವರುಗಳ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಅವುಗಳಲ್ಲಿ ನಿಶ್ಚಯವಾದ ಸಂಗತಿಗಳನ್ನು ಪಕ್ಷಪಾತವಿಲ್ಲದೆ ಎಲ್ಲರೂ ಒಪ್ಪಿಕೊಂಡು ಅದನ್ನು ಪ್ರಚಾರಕ್ಕೆ ತರುತ್ತಿದ್ದರೆಂಬುದಾಗಿ ಚರಕದಲ್ಲಿ ಎಷ್ಟೋ ಕಡೆಗಳಲ್ಲಿ ತಿಳಿದುಬರುತ್ತದೆ. ಇದಕ್ಕೆ ದೃಷ್ಟಾಂತವಾಗಿ, ಚ. ಸೂ ಸ್ಥಾನದ ವಾತಕಲಾಕಲೀಯ ಎಂಬ ಅಧ್ಯಾಯವನ್ನು ನೋಡಿದರೆ ಸಾಂಕೃತ್ಯಾಯನ—ಕೃಷ, ಕುಮಾರಶಿರಾ—ಭರದ್ವಾಜ, ಬಾಹ್ಲೀಕಭಿಷಕ್—ಕಾಂಕಾಯನ, ಧಾಮಾರ್ಗವ—ಬಡಿಶ, ವಾಯೋರ್ವಿದರಾಜರ್ಷಿ, ಮಾರೀಚಿ, ಕಾಶ್ಯಪ, ಆತ್ರೇಯ ಎಂಬ ಋಷಿಗಳು ಸೇರಿ ವಾಯು ಮೊದಲಾದ ಮೂರು ದೋಷಗಳಿಂದಲೇ ಶರೀರಕ್ಕೆ ಸ್ವಾಸ್ಥ್ಯವೂ ಅಸ್ವಾಸ್ಥ್ಯವೂ ಉಂಟಾಗುವದು, ಈ ಮೂರು ದೋಷಗಳ ಕೆಲಸವನ್ನು ಚೆನ್ನಾಗಿ ತಿಳಕೊಂಡರೆ ಶರೀರ ಸ್ಥಿತಿಯನ್ನು ಚನ್ನಾಗಿ ಕಾಪಾಡಿಕೊಳ್ಳಬಹುದು ಎಂಬುದಾಗಿ ನಿಶ್ಚಯಿಸಿದರೆಂದು ತಿಳಿದುಬರುತ್ತದೆ. ಚ. ಸೂ. ಆತ್ರೇಯ [illegible]

[illegible] ಹಿರಣ್ಯಾಕ್ಷ, ಕೌಶಿಕ, ಭರದ್ವಾಜ, [illegible], ವೈದೇಹ ನಿಮಿ, ಬಡಿಶ, ಬಾಹ್ಲೀಕಭಿಷಕ್, ಕಾಂಕಾಯನ ಎಂಬ ಚಿಕಿತ್ಸಕರು ಚೈತ್ರರಥವೆಂಬ ರಮ್ಯವಾದ ವನದಲ್ಲಿ ಒಂದು ಸಭೆಯನ್ನು ನಡಿಸಿ ಆ ಸಭೆಯೊಳಗೆ ರಸನಿಶ್ಚಯವನ್ನು ಮಾಡಿದ್ದರು ಎಂದು ಗೊತ್ತಾಗುವದು. ಚ. ಶಾರೀರಸ್ಥಾನ ಶರೀರ ವಿಚಯವೆಂಬ ಅಧ್ಯಾಯದಲ್ಲಿ ಭರದ್ವಾಜ, ಕಾಂಕಾಯನ, ಭದ್ರಕಾಪ್ಯ, ಭದ್ರಶೌನಕ, ಬಡಿಶ, ಜನಕ, ಕಾಪ್ಯ, ಧನ್ವಂತರಿ ಇವರುಗಳೆಲ್ಲಾ ಸೇರಿ ಗರ್ಭದಲ್ಲಿ ಪ್ರಥಮ ಯಾವ ಅವಯವವು ಅಭಿವ್ಯಕ್ತತೆಯನ್ನು ಹೊಂದುತ್ತದೆಂಬುದಾಗಿ ನಿಶ್ಚೈಸಿದ್ದರೆಂದು ತಿಳಿದುಬರುತ್ತದೆ. ಈಗಿನ ಕಾಲಗಳಲ್ಲಿ ಪಾಶ್ಚಾತ್ಯ ವೈದ್ಯರು ಮೆಡಿಕಲ್ ಕೊಂಗ್ರೆಸು, ಮೊದಲಾದ ವೈದ್ಯಕ ಸಭೆಗಳನ್ನು ಏರ್ಪಡಿಸಿ ಪಾಶ್ಚಾತ್ಯ ವೈದ್ಯ ಶಾಸ್ತ್ರವನ್ನು ಹ್ಯಾಗೆ ಅಭಿವೃದ್ಧಿಸಲು ಪ್ರಯತ್ನಿಸುತ್ತಿರುವರೋ ಹಾಗೆಯೇ ಪ್ರಾಚೀನ ಕಾಲದಲ್ಲಿ ಆರ್ಯರ ನಾಗರೀಕತೆಯ ಪ್ರಭಾವವು ದೇಶದಲ್ಲಿ ಉಜ್ವಲಿಸುತ್ತಿರುವಾಗ ಆಯುರ್ವೇದ ಶಾಸ್ತ್ರಜ್ಞರು ಸಹ ಕೂಡಿ ಎಲ್ಲಾ ಕಡೆಗಳಿಂದಲೂ ಪಂಡಿತ ಮಹನೀಯರನ್ನು ಬರಮಾಡಿ ನವೀನ ವೈದ್ಯಕೀಯ ವಿಷಯಗಳನ್ನು ಪರಿಶೋಧಿಸಿ ವೈದ್ಯಶಾಸ್ತ್ರ ಪ್ರವೀಣತೆಯನ್ನು ಪಡೆದಿದ್ದರೆಂಬುದನ್ನು ಸಹಾ ಈ ಇತಿಹಾಸ ಮೂಲಕ ತಿಳಕೊಳ್ಳಬಹುದು.

ಎಡ್ವರ್ಡ್ ಸಾರ್ವಭೌಮರವರ ಮರಣವಾರ್ತೆಯಿಂದಾದ ಸಂತಾಪ ಸೂಚನೆ

(ಕಂದಗಳು)

ಪರಮೋತ್ಕೃಷ್ಟಂ ಬರುವ
ಭರತ ಮಹಾ ದೇಶ ಸಿರಿಯ ದಣಿಸಿ ತಳೆಯೊಳಾ
ದರದಿ ಮೆರೆಯುತ್ತಲಿದೆ ಸು
ಕರುಣಾಕರ ಸಾರ್ವಭೌಮರಳಿಸಿ ನಾಡೊಳ್ ॥ ೧ ॥
ಪರಲೋಕ ರಾಜ್ಯದ ನಸುಕಿಸು
ದ ಗರ ಮಾಡದು ಬುದ್ಧಿ ಮಲನೇತ್ರಂತಾ
ನಗಲಿದ ಕಾರಣದಿಂದಂ
ಮಿಗಲಿದು ದುರ್ದಿನದೋಳೆಸಲಕ್ಕುಂ ನ್ಯಾಯಂ ॥ ೨ ॥
ಸಚ್ಚರಿತಾಂಗ ಪ್ರಭುವರ
ರಚ್ಯುತ ಬುಧರಾಗಿ ಲೋಕಪಾಲನೆಯಿಂ ಮೇ
ಗಾಣಿ ಸಾವನದೋಳ್ಬಂದ ಹ
ನಿಚ್ಚ ಪ್ರತಿಬಿಂಬಿಸಿರ್ಪರಾತ್ಮ ಪ್ರಥೆಯೋಳ್ ॥ ೩ ॥
ಪರಕೈದಿದ ಎಡ್ವರ್ಡರ
ಪರಮಾತ್ಮಕ್ಕೆಸಿಕಮಳ ಸುಖ ಸಂಪದಮಂ
ಕರುಣಿಸಿ ಸಂಸಾರಕ್ಕುರು
ತರ ಮೆನಿಸಾರೋಗ್ಯ ಮೀಯುತೀಶನು ಮುದದಿಂ ॥ ೪ ॥
ಯುವ ಸಾರ್ವಭೌಮರೀಗಳ್
ಭುವನದ ಕೀರ್ತಿಪಾತ್ರರೈದ ಜಾರ್ಜಿಂ
ನವನಾನುಭೋಗದಿಂದಂ
ತವೆ ರಾಜಿಸುತಿರಲಿ ಸಂತತಂ ಸುಖವಾಂತುಂ ॥ ೫ ॥

ಶ್ರೀ ವೇಣೀವಿಲಾಸ ವಾಚಕಶಾಲ, ಅಜ್ಜಂಪುರ, ತಾಲೂಕ ಚಿತ್ರದುರ್ಗ — ಇಂತು ವಿಧೇಯ, ಬಿ. ಭೀಮರಾಜು, ಸೆಕ್ರೆಟರಿ.

ಸ್ವೇಚ್ಛಾವ್ಯಾಯಾಮಿಯ ಟೀಕೆಗಳು.

ಟ್ರಾನ್ಸಿಟ್ ಪ್ರಯಾಣ

ಜೀವಜಂತುಗಳಿಗೆ ತೋರಿಸಲ್ಪಡುವ ಕ್ರೌರ್ಯವು ಶಿಕ್ಷಾರ್ಹವಾದ್ದೆಂದು ಪೋಲೀಸ್ ಶಾಸನದಲ್ಲಿ ನಿರ್ದೇಶಿಸಲ್ಪಟ್ಟಿದೆ. ಅಂತಹ ನಿಬಂಧನೆಯ ಪ್ರವರ್ತನೆಯು ಸದುದ್ದೇಶವಾಗಿರುವ ಕಾರಣ ಯಾರೂ ಅದನ್ನು ಯೋಚಿಸದೆ ಇರಲು ಹೇತು ಏನಿರುವದೆಂದು ತಿಳಿಯುವದು ಪ್ರಯಾಸವಾಗಿರುತ್ತದೆ. ಯಮನ ಪಟ್ಟಣದಲ್ಲಿ ಮರಣದ ನಂತರ ಅವರವರ ಪಾಪಕೃತ್ಯಗಳಿಗೆ ಅನುರೂಪವಾದ ಶಿಕ್ಷೆಯನ್ನು ಹೊಂದುವ ಪ್ರಾಣಿಗಳಲ್ಲಿ ಹಯವಾನರು ಎಷ್ಟನೆಯ ಸ್ಥಾನದಲ್ಲಿ ಸೇರಿಸಲ್ಪಡುವರು ಅವರಿಗೆ ವಿಧಿಸಲ್ಪಡಲಿರುವ ಯಾತನೆಯು ಯಾವ ತರದ್ದು ಎಂಬ ಅನುಭವ [illegible]

ಪ್ರಯತ್ನವಾದರೂ ದರ್ಶನಕೊಟ್ಟು ನಿರೂಪಿಸಿದರೆ ಆಗಬಹುದಿತ್ತು. ಆ ಬಿಷ ದ್ವೀಪಗಳ ಹಟ್ಟಿಯಲ್ಲಿ ಹ್ಯಾಗೆ ವಿಧಾತೃನು ಬರೆದಿರುವನೋ ಯಾರಿಗೆ ಗೊತ್ತು! ಈ ಸಂಶಯ ನಿವಾರಣೆ ಹಾಗಿರಲಿ—ಟ್ರಾನ್ಸಿಟ್ ವಹಿವಾಟು ಸರಾಗವಾಗಿ ನಡಿಯುವದರಿಂದ ಬರುವ ದ್ರವ್ಯಾನುಕೂಲವು ಅದರ ಯಜಮಾನರ ಪೇಟಿಕೆಗೆ ದಾಖಿಲಿಯುವದೆಂಬ ವಿಷ್ಯವಾ ಸತ್ಯ ನಿರನುಮಾನವಷ್ಟೇ. ಹಾಗಾದ ಮೇಲೆ ಯಮಾನರು ಮೂಕಪ್ರಾಣಿಗಳಿಗೆ ನಡಿಸುವ ಹಿಂಸಾ ಕರ್ಮದ ಪಾಪವು ಆ ಯಜಮಾನರಿಗೂ ತಗಲದೆ ಹೋಗದೆನ್ನಬೇಕು—ಪರಂತು ಪಾಪಭಯ ಅವರಲ್ಲಿ ಹುಟ್ಟಿ ಯಮಾನರ ಹೃದಯಗಳು ಮೆತ್ತಗಾಗಿ ಕುದುರೆಗಳ ಕ್ಷೇಮವಿಚಾರವು ಶ್ಲಾಘನೀಯವಾಗುವದು ಯಾವ ಯುಗದಲ್ಲಿಯೋ ಪರಮಾತ್ಮನೇ ಬಲ್ಲ—ಆದಕಾರಣ ಐಹಿಕ ವಿಚಾರದಲ್ಲಿಯೇ ಮನಸಿಡಬೇಕಾಯಿತು. ಇದು ಸುಲಭಸಾಧ್ಯವಾದದ್ದೇ—ಪ್ರಾಣಿಗಳ ಹಿಂಸೆಯನ್ನು ತಡೆಪಡಿಸುವದ್ದೋಸ್ಕರ ಈಗ ಊರ್ಜಿತವಾಗಿರುವ ಶಾಸನದ ನಿಬಂಧನೆಯನ್ನು ಟ್ರಾನ್ಸಿಟಿನ ಓಟಕ್ಕೆ ಸಮ್ಮಂಧಿಸುವ ಊರುಗಳಲ್ಲಿ ಪ್ರಚಲಿತವಾಗುವಂತೆ ಸಮ್ಮಂಧಪಟ್ಟ ಅಧಿಕಾರಸ್ಥರಿಗೆ ಮನವಿಯನ್ನು ಮಾಡಿಕೊಳ್ಳುವದು ನಿಜವಾಗಿಯೂ ಸತ್ಕರ್ತವ್ಯವಾದುದರಿಂದ ಇದೀ ಜಿಲ್ಲೆಗೆ ಮುಖ್ಯ ಪಟ್ಟಣವಾದ ಮಂಗಳೂರಿನ ಕರುಣಾಳುಗಳಾದ ಪ್ರಧಾನ ಗೃಹಸ್ಥರು ಒಂದು ಸಭೆಯಾಗಿ ಕೂಡಿ ಈಗ ಈ ಲೇಖನದಲ್ಲಿ ಪ್ರಸ್ತಾಪಿಸೋಣಾದ ಮಾದರಿಯ ಚೂತರಯ ಪಶ್ಚಾತ್ತಾಪ ಪ್ರದರ್ಶನೆಯ ಮೂಲಕ ಮೂಕಸೃಷ್ಟಿಯ ಕ್ಷೇಮಚಿಂತನೆಯನ್ನು ಅಮರಿಕೊಳ್ಳುವದು ನಮ್ಮ ಇದೀ ಜಿಲ್ಲೆಗೆ ಒಂದು ದೊಡ್ಡ ಬಹುಮಾನವನ್ನು ತರುವ ಯೋಗ್ಯತೆಯುಳ್ಳ ಪುಣ್ಯಸಂಗ್ರಹಾನುಕೂಲ್ಯವೆಂದು ಯಾರೂ ಒಪ್ಪತಕ್ಕದ್ದೇ ಸರಿ—ಈ ಕುರಿತು ಸಚ್ಚರಿತರು ಇನ್ನಾದರೂ ತಾಮಸವಾಗದಿಡಬೇಕು ಕೋರೋಣ. ಮುಂದಿನ ಸಂಚಿಕೆಯಲ್ಲಿ ಈ ವಿಷಯದ ಇತರ ಪ್ರಸ್ತಾಪ ಮಾಡಬಹುದು.

ಪತ್ರವ್ಯವಹಾರ

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ)

"ಸ್ವದೇಶಾಭಿಮಾನಿ" ಪತ್ರಸಂಪಾದಕರ ಸಮಕ್ಷಮಕ್ಕೆ —

ಸ್ವಾಮಿ,

ಜಾತಿಯ ನಿಯಮಗಳಿಗೆ ವಿರೋಧವಾದ ಒಂದು ಕೃತ್ಯವನ್ನು ಮಾಡಿದ ದೆಸೆಯಿಂದ ಜಾತಿಯವರ ಸಂಪರ್ಕ ಸಂಸರ್ಗಗಳಿಗೆ ಅಯೋಗ್ಯನಾದ ಅ[illegible]ಯನೊಬ್ಬನು ಗುರುವಿನಿಂದ ಪ್ರಾಯಶ್ಚಿತ್ತವನ್ನು ಪಡೆದು ಪುನೀತನಾಗದೆ ಇನ್ನೂ ಪತಿತನಾಗಿಯೇ ಇರುತ್ತಿದ್ದಾಗ ಅವನಿಗೆ ನಡೆದ ಉಪನಯನ ಅಥವಾ ವಿವಾಹ ಅಥವಾ ಬೇರೆ ಯಾವ ಸಂಸ್ಕಾರವಾದರೂ ಶಾಸ್ತ್ರೀಯ ಮತ್ತು ಸಾಧುವಾದುದೆಂದೆನ್ನಿಸುವದೇ?

ಈ ಪ್ರಶ್ನೆಗೆ ತಾವು ಅಥವಾ ತಮ್ಮ ವಾಚಕಮಹಾಶಯರಲ್ಲಿ ಯಾರಾದರೂ ತಮ್ಮ ಪತ್ರಿಕೆಯ ದ್ವಾರಾ ಉತ್ತರಕೊಟ್ಟರೆ ತುಂಬಾ ಉಪಕೃತನಾಗುವೆನು.

ಜವಾಬಿಯಕ್ಕಾಭಿಲಾಷಿ,

ಅ

೨.

ಮಂಗಳೂರು ತಾ. [illegible] –೧೯೨೦

ಪ್ರಿಯ ಸ್ವದೇಶಾಭಿಮಾನಿ ಪ್ರಕಾಶಕರೆ,

(೧) ಕಳೆದ ಫೆಬ್ರವರಿ ೨೨ನೇ ತಾರೀಕಿನ ತಮ್ಮ ಪತ್ರಿಕೆಯ ನಿರ್ಗಮದಲ್ಲಿ ಪ್ರಕಟಿಸಲ್ಪಟ್ಟ ನಿಷ್ಪಕ್ಷಪಾತಿಗಳ ಬುತ್ತಿಗೆ ಉತ್ತರವಾಗಿ ಎಪ್ರಿಲ್ ೧ನೇ ತಾರೀಕಿನ "ಸ್ವದೇಶಾಭಿಮಾನಿ"ಯಲ್ಲಿ ಹೊರಟಿರುವ ಉಡುಪಿಯ "ವಿಮರ್ಶೆಯು," ಪ್ರಸ್ತುತ "ಅಧ್ಯಾತ್ಮವಿಚಾರ" ಗ್ರಂಥಕರ್ತನು ಛಾಂದೋಗ್ಯದಲ್ಲಿರುವ ತತ್ತ್ವಮಸಿ, ಅಹಂಬ್ರಹ್ಮಾಸ್ಮಿ, ಇತ್ಯಾದಿ ವಾಕ್ಯಗಳಿಗೆ ಕೆಲವರು (ಶ್ರೀ ಮಚ್ಛಂಕರಾಚಾರ್ಯರು ಮೊದಲಾದವರು) ಮಾಡಿದ ಅದ್ವೈತ ಪರವಾದ ಭಾಷ್ಯಗಳನ್ನು ಮನಸಿನಲ್ಲಿರಿಸಿಕೊಂಡು, ಜೀವ ಬ್ರಹ್ಮಾದ್ವೈತವೇ ಈ ಛಾಂದೋಗ್ಯದ ಮುಖ್ಯ ಸಿದ್ಧಾಂತವಾಗಿರುವದೆಂತ ಗ್ರಂಥದ I II XIನೇ ಪಾಠಗಳಲ್ಲಿ ವಿವರಿಸುವವರಾಗಿ ಉಪೋದ್ಘಾತದ XIನೇ ಪುಟದಲ್ಲಿ ಬರದ್ದಾಗಿ ಕಾಣುತ್ತದೆ ಎಂದೆಂದುಕೊಂಡು, ಪ್ರವರ್ತಿಸುತ್ತದೆ. ಉಪೋದ್ಘಾತದ XIನೇ ಪುಟದಲ್ಲಿ ಹಾಗಿಲ್ಲ. ಅದರಲ್ಲಿ "ಪ್ರತಿ ಶರೀರದಲ್ಲಿಯೂ ಜೀವರೂಪದಿಂದ ಅಡಗಿಕೊಂಡು, ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಅವಸ್ಥಾತ್ರಯಕ್ಕೆ ಯಾವ ಒಳಪಟ್ಟಿರುತ್ತಾನೋ; ಅವನೇ (ಆತ್ಮನೇ) × × × ಬ್ರಹ್ಮ ಎಂದು ಛಾಂದೋಗ್ಯದ ಮುಖ್ಯ ಸಿದ್ಧಾಂತ"ವಾಗಿರುತ್ತದೆಂದು ಬರೆದಿರುತ್ತದೆ. ಈ ವ್ಯತ್ಯಾಸವು ಅಮುಖ್ಯವಾದದಲ್ಲ; ಉಡುಪಿಯ ಸಭೆಯವರಿಗೂ, ಅಧ್ಯಾತ್ಮವಿಚಾರ ಗ್ರಂಥಕರ್ತರಿಗೂ ತಮ್ಮೊಳಗೆ ಉಂಟಾಗಿರುವ ಎಲ್ಲ ವಿವಾದವು ಈ ಗ್ರಹಿಕೆ ವ್ಯತ್ಯಾಸದ ಮೇಲೆ ಹೊಂದಿಕೊಂಡುಂಟು. ಈ ಸಂಗತಿ [illegible] ಗೆ ವ್ಯಕ್ತವಾದೀತು. ಅದು ಹೇಗಿದ್ದರೂ ಪ್ರಸ್ತುತ ಮೇಲೆ ಹೇಳಿದ ವಿಮರ್ಶೆಯಲ್ಲಿ [illegible] ಗ್ರಂಥಕರ್ತನು [illegible] ಗೆ [illegible] ರು" ಮಾಡಿದ ಭಾಷ್ಯಗಳನ್ನು [illegible]

[illegible] ರುತ್ತಾನೆಂದು ಹೇಳುವದರಿಂದ ಅವರ [illegible] ಗ್ರಂಥಸಮ್ಮತಿಯೂ ಇದೆ ಎಂದು ಸಭೆಯವರು ಒಪ್ಪಿದಹಾಗಿ [illegible] ಹೀಗಿರುತ್ತಾ ಅವರು ಆ ಕೆಲವರು ಮಾಡಿದ ಎಷ್ಟು ಗ್ರಂಥ [illegible] ಒಂದು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವಂತೆ [illegible] ರುವ "ಅಧ್ಯಾತ್ಮವಿಚಾರ"ವೇ ಮುಖ್ಯವಾದ ಗ್ರಂಥ, ಇದನ್ನು ಖಂಡಿಸದಿದ್ದರೆ ತಮ್ಮ ಅಮೌಲ್ಯವಾದ ದ್ವೈತದರ್ಶನ (Philosophy)ವು ಈ ಭೂತಳದಿಂದ ಅಳಿಸಿಹೋಗುತ್ತದೆಂದು ಭಯಪಟ್ಟು ಇವರಿಗರ್ಪಿಸದಿದ್ದ ಆ ಗ್ರಂಥವನ್ನು ಒಬ್ಬರು ಗೃಹಸ್ಥರಿಂದ [illegible] ವಾಗಿ ತಕ್ಕೊಂಡು ಧಿಕ್ಕರಿಸಿದು ಮಾತ್ರವಲ್ಲದೆ, ಅದಕ್ಕೆ ಖಂಡನೆಯಾಗಿ ಪ್ರತ್ಯೇಕ ಒಂದು ಗ್ರಂಥವನ್ನು ಕೂಡಾ ರಚಿಸುತ್ತೇವೆಂದು ಗಂಭೀರವಾಗಿ ಪ್ರತಿಜ್ಞೆಯನ್ನು ಮಾಡಿದ್ದಕ್ಕೆ "ಅಧ್ಯಾತ್ಮವಿಚಾರ" ಗ್ರಂಥಕರ್ತನು ಬಹಳ ಕೃತಜ್ಞನಾಗಿರುತ್ತಾನೆ, ಯಾಕೆಂದರೆ ಅವರು ಹಾಗೆ ಮಾಡದೇ ಇರುತ್ತಿದ್ದರೆ ಅವನ ಪುಸ್ತಕವು ಇಷ್ಟು ಬೇಗನೆ ಪ್ರಸಿದ್ಧಿಗೆ ಬಾರದೆ ಇರುತ್ತಿದ್ದದ್ದು ಮಾತ್ರವಲ್ಲದೆ, ಆ ಗ್ರಂಥದ ಉಪೋದ್ಘಾತದಲ್ಲಿ ಸೂಚಿಸಿದಂತೆ ಉಡುಪಿ ಸಭೆಯವರು ನೂತನವಾಗಿ ರಚಿಸುತ್ತೇವೆಂದು ಹೇಳುವ ಗ್ರಂಥದ ಪರಿಣಾಮವಾಗಿ ಅವರಿಗೂ ಮೇಲೆ ಹೇಳಿದ "ಕೆಲವರ" ಅನುಯಾಯಿಗಳಿಗೂ ತಮ್ಮೊಳಗೆ ಚರ್ಚೆಗಳು ಹುಟ್ಟಿ, ಈ ಉಭಯಪಕ್ಷದವರೊಳಗೂ ದೀರ್ಘಕಾಲದಿಂದ ಬೆಳೆಕೊಂಡು ಬಂದಿರುವ ಮತದ್ವೇಷವು ಹೋಗಿ, ನಮ್ಮ ದೇಶಕ್ಕೆ ಶ್ರೇಯಸ್ಸುಂಟಾಗುವ ಸಂಭವವು ಬರಗುತ್ತಿರಲಿಲ್ಲ. ಆದರೆ ಹೀಗೆ ಹೇಳುವಾಗಲೇ "ಅಧ್ಯಾತ್ಮವಿಚಾರ"ವನ್ನು ಖಂಡಿಸುವ ಅಗತ್ಯವಿದ್ದ ಪಕ್ಷದಲ್ಲಿ ಉಡುಪಿ ಶ್ರೀ ಪಾದಂಗಳವರು ಮತ್ತು ಮಹಜನಂಗಳು ಕೂಡಾ ಉತ್ಸಾವಳಿಗೆ ಮನಸುಕೊಡದೆ, ಒಬ್ಬ ವಿದ್ವಾಂಸರಿಂದ ಅದಕ್ಕೆ ಪ್ರತಿಯಾಗಿ ಒಂದು ಪುಸ್ತಕವನ್ನು ಬರೆಯಿಸಿ ಪ್ರಕಟಿಸುವದರ ಬದಲಾಗಿ, ಪರ್ಯಾಯದ ಉತ್ಸವಗಳನ್ನು ನೋಡಲಿಕ್ಕೆ ಬಂದಿದ್ದ ಸಾವಿರಾರು ಮಂದಿಯ ಸಮಕ್ಷಮದಲ್ಲಿ ಎಲ್ಲರೂ ಒಟ್ಟು ಸೇರಿ, ಮೇಲೆ ಹೇಳಿದಂತೆ ವ್ಯವಹರಿಸಿದ್ದು ಬರೀ ಗ್ರಾಮ್ಯವಾಗಿರುವದು ಮಾತ್ರವಲ್ಲದೆ, ಅಪಾಯಕರ ಕೂಡಾ ಆಗಿರುತ್ತದೆ. ಯಾಕಂದರೆ ಅವನ ಪುಸ್ತಕವು ಖಂಡನೆಯಾದ ಪಕ್ಷದಲ್ಲಿ ಅದರಿಂದ ಆ ಗ್ರಂಥಕರ್ತನಿಗೆ ಉಂಟಾಗಬಹುದಾದ ನಷ್ಟವು ಏನಾದರೂ ಇದ್ದರೆ ಅದಕ್ಕಿಂತಲೂ, ಖಂಡನೆಯಾಗದಿದ್ದ ಪಕ್ಷದಲ್ಲಿ ಉಡುಪಿಯವರಿಗೆ ಸಂಭವಿಸುವ ಅಪಯಶಸ್ಸು ಭಾರೀಯಾಗಿರುವದರಿಂದ, ಮೇಲೆ ಹೇಳಿದ ಇವರ ಕೃತ್ಯವು ಅಶ್ಲಾಘ್ಯವಾದದ್ದೆಂದು ಹೇಳಲಿಕ್ಕೆ "ಅಧ್ಯಾತ್ಮವಿಚಾರ" ಗ್ರಂಥಕರ್ತನು ಅಗತ್ಯಪಟ್ಟಿರುತ್ತಾನೆ.

(೨) ಈಗ ಛಾಂದೋಗ್ಯದ ಮುಖ್ಯ ಸಿದ್ಧಾಂತವು ಫಲಾಣೇದೆಂಬ ವಿಷಯದಲ್ಲಿ ಅವನ ಉಪೋದ್ಘಾತದ XIನೇ ಪುಟದಲ್ಲಿ ಕಾಣಿಸಿದ ಅಭಿಪ್ರಾಯಕ್ಕೆ ಉಡುಪಿ ಸಭೆಯವರು ತಪ್ಪಾರ್ಥ ಮಾಡಿರುತ್ತಾರೆಂದು ಮೇಲೆ ಹೇಳೋಣಾಯಿತು. ಆ ತಪ್ಪು ಅಕಸ್ಮಾತ್ತಾಗಿ ಅವರ ಚಿತ್ತವ್ಯಗ್ರತೆಯಿಂದುಂಟಾದದ್ದಲ್ಲ, ಪರಂತು ಅವರ ದ್ವೈತವಾದವನ್ನು ಬೇರೆಯವರಿಗೆ ತಿಳಿಸುವ ಆಸಕ್ತಿಯುಳ್ಳದ್ದಾಗಿರುತ್ತದೆ. ಅಲ್ಲವಾದರೆ ಅಧ್ಯಾತ್ಮವಿಚಾರದ I IV XIನೇ ಪಾಠಗಳಲ್ಲಿ ಜೀವಬ್ರಹ್ಮಾದ್ವೈತವಿಚಾರವೆಲ್ಲಿದೆ? ಅದರಲ್ಲಿರುವ ವಿಚಾರವು, ಮೇಲೆ ಹೇಳಿದ ಪ್ರಕಾರ, ಆತ್ಮಬ್ರಹ್ಮಾದ್ವೈತವಿಷಯವಾಗಿರುತ್ತದೆ. ಈ ಸಂಗತಿ ಆ ಪಾಠಗಳಿಂದ ಸ್ಪಷ್ಟವಾಗುತ್ತದೆ, ಹೇಗೆಂದರೆ —

Iನೇ ಪಾಠದಲ್ಲಿ ಹೇಳಿದ ಸತ್ ನ (ಬ್ರಹ್ಮದ) ಜೀವರೂಪವು ಮಾಧ್ವರು ಹೇಳುವ ಅನೇಕ ಭಗವದ್ರೂಪಗಳಲ್ಲಿ ಒಂದಾದ ಅನಿರುದ್ಧರೂಪವಾಗಿರುತ್ತದೆ. ಅವರು ಹೇಳುವ ಜೀವವಲ್ಲ —(ಅಧ್ಯಾತ್ಮವಿಚಾರ ಪುಟ ೭—೧೯)

IIನೇ ಪಾಠವು ನಮ್ಮ ಆತ್ಮ ಮತ್ತು ಬ್ರಹ್ಮ ಸಹ ಒಂದೇಯೋ ಬೇರೆ ಬೇರೆಯೋ ಎಂಬ ಸಂಗತಿಯನ್ನು ಇತ್ಯರ್ಥಪಡಿಸುವದಕ್ಕಾಗಿಯೇ ಪ್ರವೃತ್ತವಾದದ್ದು— (ಉಪೋದ್ಘಾತ ಪುಟ VIII) ಮಿಕ್ಕ —

XIನೇ ಪಾಠವು ಆ ನಮ್ಮ ಆತ್ಮನನ್ನು ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಅವಸ್ಥಾತ್ರಯದಿಂದ ವಿವಿಕ್ತಪಡಿಸಿ (ಪ್ರತ್ಯೇಕಿಸಿ) ಅವನೇ ಸಾವಿಲ್ಲದವನು, ಭಯವಿಲ್ಲದವನು, ಅವನೇ ಬ್ರಹ್ಮ ಎಂದು ತಿಳಿಸಿಕೊಡುವ ಬಗ್ಗೆ ಪ್ರವೃತ್ತವಾದದ್ದು.

ಅಷ್ಟುಮಾತ್ರವಲ್ಲ ಆ ಆತ್ಮನ ಸಂಗಡ ಅವನಿಂದ ಭಿನ್ನವಾಗಿರುವ ಜೀವವೆಂಬ ಒಂದು ವಸ್ತುವನ್ನು ಕಲ್ಪಿಸಿಕೊಂಡು, ಅದಕ್ಕೂ ಬ್ರಹ್ಮಕ್ಕೂ ಭೇದ ಹೇಳುವದು ಮಾಧ್ವರಲ್ಲದೆ ಛಾಂದೋಗ್ಯವಲ್ಲ. ಅದರಲ್ಲಿ ಆ ಸಂಗತಿಯಿಲ್ಲ. ಉಂಟೆಂತ ತೋರಿಸಲಿಕ್ಕೆ ಪ್ರಸ್ತುತ ವಿಮರ್ಶೆಯಲ್ಲಿ ಪ್ರಸ್ತಾಪಿಸುವ "ಸಕಲವೇದ ತದಿತರ ಶಾಸ್ತ್ರಗಳನ್ನು" ಅಧ್ಯಾತ್ಮವಿಚಾರ ಗ್ರಂಥಕರ್ತನೆಂತೂ ತಿಳದವನಲ್ಲಷ್ಟೆ, ಉಡುಪಿ ಸಭೆಯವರು ಕೂಡಾ [illegible] ದ್ದಾರೆಂಬದು ಸಂಶಯರಹಿತವಾದ ಸಂಗತಿಯಲ್ಲ. ಇದುಹೊರತು ಆ ವಿಮರ್ಶೆಯಲ್ಲಿ ಅವುಗಳ ಯಾವದೊಂದು ವಚನವೂ ಉದಹರಿಸಲ್ಪಟ್ಟಿರುವದಿಲ್ಲ. ಈ ಶಾಸ್ತ್ರ [illegible] ಗಳನ್ನು ಕುರಿತು ವಿಚಾರಮಾಡಲಿಕ್ಕೆ ಸಾಧ್ಯವೂ ಇಲ್ಲ, ಸಭೆಯವರು ವಿಮರ್ಶೆಯಲ್ಲಿ ವಿಶೇಷವಾಗಿ ಕಾಣಿಸಿದ ಗ್ರಂಥಗಳು ಎರಡು ಮಾತ್ರ ಆಗಿರುತ್ತವೆ. ಒಂದು [illegible] ಗೀತೆ, ಇನ್ನೊಂದು ಭಾಗವತ. ಈ ಎರಡು ಗ್ರಂಥಗಳು ಅವರು [illegible] "ಕೆಲವರು" (ಶಂಕರಾಚಾರ್ಯರು ಮೊದಲಾದವರು) [illegible]

ಶಬ್ದಗಳನ್ನು ಅದರಲ್ಲಿ ತೇರಿಸಿ ಮಾಧ್ವರು ಕಲ್ಪಿಸಿದ ಮತಭೇದವನ್ನು ದೃಢಪಡಿಸಲಿಕ್ಕೆ ಸಾಕಾದವುಗಳಲ್ಲ.

ಅಧ್ಯಾತ್ಮವಿಚಾರದ ಉಪೋದ್ಘಾತದಲ್ಲಿ ಪ್ರಸ್ತಾಪಿಸಿದ XIನೇ ಪಾರದ ೧೬ನೇ ಶ್ರುತಿಗೆ ಜೀವನು ದೇಹದಂತೆ ನಾಶಕ್ಕೆ ಗುರಿಯಾದವನೆಂದು ಮಾಧ್ವರು ಮಾಡಿದ ವ್ಯಾಖ್ಯಾನಾಂಶಕ್ಕೆ ಪ್ರಸ್ತುತ ವಿಮರ್ಶೆಯಲ್ಲಿಯೂ, ಎಪ್ರಿಲ್ ೮ನೇ ತಾರೀಕಿನ ಸ್ವದೇಶಾಭಿಮಾನಿಯಲ್ಲಿಯೂ, ಸಭೆಯವರ ಕಡೆಯಿಂದ ಹೇಳುವ ಅರ್ಥವನ್ನು ಕುರಿತು, ಎಪ್ರಿಲ್ ೨೯ನೇ ತಾರೀಕಿನ ನಿರ್ಗಮದಲ್ಲಿರುವ ಬಾತ್ಮೀಯಲ್ಲಿ ಸಾಕಷ್ಟು ಹೇಳೋಣಾಗಿರುತ್ತದೆ

(೩). ಇನ್ನು ಪ್ರಸ್ತುತ ವಿಮರ್ಶೆಯಲ್ಲಿ, ಮೇಲ ೧ನೇ ಕಲಮಿನಲ್ಲಿ ಪ್ರಸ್ತಾಪಿಸಿದ, "ತತ್ವಮಸಿ, ಅಹಂಬ್ರಹ್ಮಾಸ್ಮಿ" ಎಂಬೀ ಮಹಾ ವಾಕ್ಯಗಳಿಗೆ ಅನೇಕಾರ್ಥಗಳಿವೆ, ಆ ಪೈಕಿ "ಒಬ್ಬ ಕ್ರೂರ ಮನುಷ್ಯನನ್ನು ಕುರಿತು × × (ಅವನು) ಪುರುಷಸಿಂಹ, ಪುರುಷವ್ಯಾಘ್ರ ಎಂತ ಪದಗಳನ್ನು" ಪ್ರಯೋಗಿಸಿದರೆ ಹೇಗೋ ಹಾಗಯೇ ಅವು ಬರೀ "ಕ್ರೂರತ್ವ ನಿಶ್ಚಯಿಸುವ"ದಕ್ಕೆ ಉಪಯುಕ್ತವಾದವುಗಳು "ಪಂಡಿತ ಮಾನ್ಯವಾ"ದ ಆ ವಾಕ್ಯಗಳ ಅರ್ಥವು, "ನೀನು ಬ್ರಹ್ಮನಂತೆ ನಿತ್ಯನಾಗಿರುವಿ; ನಾನು ನಿತ್ಯನಾಗಿರುವೆನು" ಎಂದು ಆಗಿರುತ್ತದೆಂದು ಹೇಳೋಣಾಗುತ್ತದೆ. ಇಲ್ಲಿ ನಮ್ಮ ಸಭೆಯವರಿಗೆ ಸ್ವಲ್ಪ ವಿಸ್ಮೃತಿ ಒಂದ ಹಾಗೆ ತೋರುತ್ತದೆ (೧ನೇ) ಮಾಧ್ವರ ಪಾಠವು "ತತ್ವಮಸಿ" ಎಂತ ಅಲ್ಲ "ಅತತ್ವಮಸಿ" ಎಂತ ಆಗಿರುತ್ತದೆ ಅವರು "ಅತತ್ವಮಿತಿ, ತತ್ವಮಿತಿ" ಎಂದು ಪದಗಳನ್ನು ವಿಂಗಡಿಸಿಕೊಂಡು, "ತತ್ವಂತತ್ತ್ವಂ ಅತದಸಿ" (ನಿಜವಾಗಿ ನೀನು ಅವನಲ್ಲ) ಎಂದು ವ್ಯಾಖ್ಯಾನ ಮಾಡಿರುತ್ತಾರೆ (ಅಧ್ಯಾತ್ಮವಿಚಾರ ೧೩೭ನೇಪುಟ). ಅದ್ವೈತರ ಪಾಠವು ಅದಕ್ಕೆ ಸರಿವಿರೋಧವಾಗಿ "ತತ್ವಮಸಿ" ಎಂತ ಆಗಿರುತ್ತದೆ. ಹಾಗಾದ ಮೇಲೆ ಆ ವಾಕ್ಯಕ್ಕೆ ಅವರು ಮಾಡಿದ ಭಾಷ್ಯವು ಸರಿಯಲ್ಲೆಂದು ಹೇಳಲಿಕ್ಕೆ ಈ ಉಡುಪಿ ಸಭೆಯವರಿಗೇನು ಸಮ್ಮಂಧ?

(ಮುಂದೆ ಸಾಗುವದು)

H Krishna Rau

ವಿದೇಶ ವೃತ್ತಾಂತ

ಮೆ। ರುಸ್‌ವೆಲ್ಟರವರು ತಮ್ಮ ಕುಟುಂಬ ಸಮೇತ ಅಂಗ್ಲಾಳಕ್ಕೆ ಒಂದು ತಲ್ಪಿರುವರು ಚಕ್ರವರ್ತಿಗಳವರ ಕಡೆಯಿಂದ ಡಂಡಿನೊಲ್ಡ್ ಪ್ರಭುಗಳು ಇವರನ್ನು ಎದುರ್ಗೊಳ್ಳುವವರಾದರು ಮೆ। ರೊಸವೆಲ್ಟರವರಿಗೂ ಜೋರ್ಜ್ ಚಕ್ರವರ್ತಿಯವರಿಗೂ ಅದೇ ದಿನ ಭೇಟಿಯಾಯಿತು

ಕೊನ್ಸಟೆಂಟಿನೋಪಲನಿಂದ ಸುಲ್ತಾನರ ಪರವಾಗಿ ಎಡ್ವರ್ಡ್ ಚಕ್ರವರ್ತಿಗಳವರ ದಪನ ಸಂಸ್ಕಾರದ ಒಗ್ಯೆ ಕೆಲವು ಪ್ರತಿನಿಧಿಗಳು ಅಂಗ್ಲಾಳಕ್ಕೆ ಯುವರಾಜರ ಸಮೇತ ಬಂದಿರುವರು'

ಎಡ್ವರ್ಡ್ ಚಕ್ರವರ್ತಿಗಳವರ ದಪನ ಸಂಸ್ಕಾರಕ್ಕೋಸ್ಕರ ೩೦ ಜನ ಅರಸರುಗಳೂ ಮಹಾರಾಣಿಯವರೂ ಬಂದಿದ್ದರೆಂಬದಾಗಿ ತಿಳಿಯುತ್ತೇವೆ

ಎಡ್ವರ್ಡ್ ಚಕ್ರವರ್ತಿಗಳ ಕಳೇಬರವನ್ನಿಟ್ಟಿದ್ದ ಪೆಟ್ಟಿಗೆಯನ್ನು ಅಲಂಕರಿಸುವ ಒಗ್ಯೆ ಆಯಾ ಅರಸುಗಳು ಹೂಮಾಲೆಗಳನ್ನು ಕಳುಹಿಸಿಕೊಟ್ಟಿರುವರು ಕೆಲವು ೧೫೦ ಗಿನಿಗಳಷ್ಟು ಮೌಲ್ಯವುಳ್ಳವುಗಳಾಗಿ ತಿಳಿಯುತ್ತೇವೆ ಆಗಾಖಾನರವರು ಕಳುಹಿಸಿಕೊಟ್ಟಿರುವ ಹೂ ಮಾಲೆಯು ಬಹಳ ಹೆಚ್ಚಿನ ಮೌಲ್ಯವುಳ್ಳದ್ದಾಗಿರುವುದಂತೆ

ವ್ಹಾಟ್‌ಹೆವನ್ ಎಂಬಲ್ಲಿಯ ಗನಿಗಳಲ್ಲಿ ಕೆಲಸ ನಡಿಯುತ್ತಿರುವಾಗ ಗನಿಯು ಅದರಲ್ಲುಂಟಾದ ಉತ್ಪಾತ ಧ್ವನಿಯಿಂದ ಕೊರದು ಬಿದ್ದು ಹಲವು ಕೂಲಿಯವರು ಅದರಲ್ಲಿಯೇ ಮುಚ್ಚಲ್ಪಟ್ಟಿರುವರು ಗನಿಯಲ್ಲಿ ಮುಚ್ಚಲ್ಪಟ್ಟ ೮೮ ಜನರಿಗೆ ವಿವಾಹವಾಗಿತ್ತು ಹೀಗೆ ಗನಿಯಲ್ಲಿ ಸಿಲುಕಿ ಬಿದ್ದವರನ್ನು ತೆಗಿಯುವುದು ಅಸಾಧ್ಯವೆಂತ ತೋರಿ ಬಂದಿರುವುದು ಜೋರ್ಜ್ ಚಕ್ರವರ್ತಿಗಳವರು ಇದರಲ್ಲಿ ಮೃತಪಟ್ಟವರ ಕುಟುಂಬ ಪೋಷಣೆ ಫಂಡಿಗ ೧೫೦ ಗಿನಿಗಳನ್ನೂ ಮಹಾರಾಣಿ ಮೇರಿಯವರು ೫೦ ಗಿನಿಗಳನ್ನೂ ದ್ರವ್ಯಸಹಾಯವಾಗಿ ಕೊಟ್ಟಿರುವರು

ಅಂಗ್ಲಾಳಕ್ಕೆ ಹೋಗಿದ್ದ ಮಹಾರಾಜ ಹೋಲ್ಕರರವರು ಹಿಂದೂಸ್ಥಾನದ ಸ್ಟೇಟ್ ಸೆಕ್ರಿಟರಿಗಳಾದ ಮೋರ್ಲೆ ಪ್ರಭುಗಳ ಭೇಟಿಯನ್ನು ಪಡಿಯುವವರಾದರು

ಜಪಾನೀಯ ವಸ್ತುಪ್ರದರ್ಶನವು ಕಳದ ಶನಿವಾರ ತೆರಿಯಲ್ಪಟ್ಟಿತು.

ಜೋರ್ಜ್ ಚಕ್ರವರ್ತಿಗಳವರು ಮರದ ಕೆಲಸದಲ್ಲಿ [illegible]ರಾಗಿರುವರು. ತಮ್ಮ ಚಿಕ್ಕ ಪ್ರಾಯದಲ್ಲಿ [illegible]

ಇತ್ತಲಾಗ ಪ್ರಕಟಿಸಲ್ಪಟ್ಟಿರುವುದು ಸ್ವರ್ಗಸ್ಥ ಡ್ಯೂಕ್ ಒವ್ ಕ್ಲರೆನ್ಸರವರು ತನ್ನ ತಮ್ಮ ರಾಜಕುಮಾರನಾದ ಆಗಿ ಜೋರ್ಜರವರನ್ನು ತಾನು ಪ್ರವೇಶಿಸುವರೆ ಒಹಳವಾಗಿ ಅಪೇಕ್ಷಿಸಿದ ಒಂದು ಕೋಣೆಯಲ್ಲಿ ಹಾಕಿ ಬೀಗ ಹಾಕಿದರು ಬಾಗಿಲನ್ನು ತಕ್ಷಣವೇ ತೆರಿಯದಿದ್ದರೆ ಬಾಗಿಲಿನ ಹಲಿಗೆಯ ಎಡೆಯಿಂದ ಕಾಲನ್ನು ಹಾಕಿ ಒಡದುಬಿಡುವೆನೆಂದು ದಾಗಿ ಇವರ ಬೆದರಿಸಿದರು ಆದರೆ ಇವರ ಈ ಬೆದರಿಕೆಗ ಲಕ್ಷ್ಯಗೊಡದೆ ಬಾಗಿಲನ್ನು ಡ್ಯೂಕ್ ಒವ್ ಕ್ಲೆರೆನ್ಸರವರು ತೆರಿಯಲಿಲ್ಲ ಉತ್ತರಕ್ಷಣದಲ್ಲಿಯೇ ಬಾಗಿಲಿನ ಹಲಿಗೆ ಎಡೆಗಳಲ್ಲಿ ಕಾಲುಹಾಕಿ ಹಲಿಗೆಯನ್ನು ಮುರಿಯುವವರಾದರು ಹೀಗೆ ಬಾಗಿಲಿನ ಹಲಿಗೆಯ ತುಂಡನ್ನು ಮುರಿದ್ದನ್ನು ನೋಡಿ ವ್ಯಸನಪಟ್ಟು ಮುರಿದುಹೋದ ತುಂಡಿಗೆ ಸರಿಯಾದ ತುಂಡನ್ನು ತಾನೇ ಸ್ವತಹಾ ತಯ್ಯಾರಿಸಿ ಬಾಗಿಲಿನಿಂದ ಒಡದುಹೋದ ತುಂಡನ್ನು ತೆಗೆದು ತಾನು ತಯ್ಯಾರಿಸಿದ ತುಂಡನ್ನು ಇಟ್ಟುಬಿಟ್ಟರು ಹೀಗೆ ತುಂಡಿಟ್ಟಿದ್ದನ್ನು ನೋಡಿದ್ದಲ್ಲಿ ಹೊಸ ತುಂಡು ಇಟ್ಟದ್ದ ಭೇದವು ರವಷ್ಟಾದರೂ ತೋರುತ್ತಿರಲಿಲ್ಲ

ಲಂಡನ್ ಕೌಂಟಿ ಕೌನ್ಸಿಲಿನವರು ಸತ್ತಿರ ಚಕ್ರವರ್ತಿಗಳ ದಪನ ಸಂಸ್ಕಾರದಿನ ತಮ್ಮ ರಾಜಭಕ್ತಿ ಪ್ರದರ್ಶನಕ್ಕಾಗಿ ೨೦ ಮಿನಿಟುಗಳ ತನಕ ಟ್ರಮ್‌ಗಾಡಿಗಳನ್ನು ಅತ್ತಿತ್ತ ಚಲಿಸದೆ ನಿಲ್ಲಿಸಿಬಿಡುವರು

ಎಡ್ವರ್ಡ್ ಚಕ್ರವರ್ತಿಗಳವರ ದಪನ ಸಮಯದಲ್ಲಿ ೩೦ ಜನ ಹಿಂದೂಸ್ಥಾನದ ಸೇನೆಯ ಬ್ರಿಟಿಷ ಆಪೀಸರರವರೂ, ಚಕ್ರವರ್ತಿಗಳವರ ಭಾರತೀಯ ಒರ್ಡರ್ಲಿಗಳವರೂ, ಹೋಲ್ಕರ್, ಮತ್ತು ಬರತಪುರದ ಮಹಾರಾಜರುಗಳೂ ಆಗಾಖಾನರವರೂ ಹಿಂದೂಸ್ಥಾನದ ಪರವಾಗಿ ಪ್ರತಿನಿಧಿಗಳಾಗಿ ಹೋಗುವರೆಂತ ನಿರೀಕ್ಷಿಸಲ್ಪಟ್ಟಿರುತ್ತದೆ

ಚಕ್ರವರ್ತಿಗಳವರ ಮರಣದಿಂದುಂಟಾದ ಭಾರತೀಯ ಸಂತಾಪವನ್ನು ವ್ಯಕ್ತಪಡಿಸಲಿಕ್ಕೆ ಸರ್ ಎಮ್ ಎಮ್ ಭೌನಾಗ್ರಿ ಮೆ। ಅಮೀರ್ ಅಲಿ ಮತ್ತು ಮೆ। ಗುಪ್ತರವರು ತಕ್ಕ ನಿರ್ವಾಹವನ್ನು ಪರ್ಯಾಲೋಚಿಸುತ್ತಿರುವರು

ನಾಸಿಕದಲ್ಲಿ ಕೊಲ್ಲಲ್ಪಟ್ಟ ಕಲೆಕ್ಟರ್ ಮೆ। ಎ ಟಿ ಎಮ್ ಜಕಸನರವರ ವಿಧವೆಗೆ ಅವರು ವಿಧವೆರಾಗಿರುವ ತನಕ ವರುಷಾವಧಿಗೆ ೧೬೦ ಪವನುಗಳ ಪೆನಶನು ಕೊಡುವಂತೆ ಅಪ್ಪಣೆಕೊಟ್ಟಿರುವುದು ಈ ೧೬೦ ಪವನುಗಳ ಹೊರತು ಇಂಡಿಯನ್ ಸಿವಿಲ್ ಸರ್ವಿಸ್ ಫೆಮಿಲಿ ಪೆನಶನು ಕ್ರಮಗಳ ಪ್ರಕಾರ ೩೦೦ ಪವನುಗಳು ವರುಷಂಪ್ರತಿ ಪೆನ್ಶನಾಗಿ ಇವರ ವಿಧವೆಯರಿಗೆ ದೊರಕುವುದು ಜೆಕಸನರವರ ತಾಯಿಗೆ ವರುಷ ಒಂದಕ್ಕೆ ೨೫೦ ಪವನುಗಳ ಪೆನಶನು ಕೊಡೋಣಾಗುವಂತೆ ಸಹಾ ಮೋರ್ಲೆ ಪ್ರಭುಗಳು ಅಪ್ಪಣೆ ಕೊಟ್ಟಿರುವರು.

ಉತ್ತರ ಹಿಂದುಸ್ಥಾನ.

ಈ ತಿಂಗಳ ತಾರೀಕು ೧೫ರಲ್ಲಿ ಮುಂಬಯಿಯಲ್ಲಿಯ ಮೆಕಿನನ್ ಮೆಕಂಜಿ ಮತ್ತು ಕಂಪೆನಿಯವರಿಗ ಅವರ ಕೊಲಂಬೊ ಎಜಂಟರವರಿಂದ ಕೊಲೊಂಬದಲ್ಲಿ ಮಳೆಯು ಬರುತ್ತಲಿದೆ ಎಂತ ತಂತೀ ವರ್ತಮಾನವು ಬಂದಿರುವುದು

ಕಳದ ಶುಕ್ರವಾರ ದಿನವು ಗತಿಸಿದ ಚಕ್ರವರ್ತಿಗಳವರ ದಪನ ಸಂಸ್ಕಾರದಿನವಾಗಿ ಸಾಮ್ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಆಚರಿಸಲ್ಪಟ್ಟಿತು ಆದಿತ್ಯವಾರದಂತೆಯೇ ಎಲ್ಲಾ ಆಪೀಸುಗಳೂ ವ್ಯಾಪಾರ ಬಂಡಸಾಲೆ ಮೊದಲಾದವುಗಳೆಲ್ಲವೂ ಮುಚ್ಚಲ್ಪಟ್ಟಿದ್ದವು

ಸಿಂಕೋನಾ ಎಂಬ ಮರದಿಂದ ತಯ್ಯಾರಾಗುವ ಕ್ವಿನೀನು ಮೊದಲಾದ ಎಲ್ಲಾ ಔಷದಿಗಳ ಮೇಲ ಅವುಗಳ ದಪ್ತರುಪಾನ ವಿದಿಸೋಣಾಗುವ ಸುಂಕವನ್ನು ವಜಾ ಮಾಡುವರ ಇಂಡಿಯಾ ಸರಕಾರದವರು ನಿರ್ಣಯಿಸಿರುವರು ಸಿಂಕೋನಾದಿಂದ ತಯ್ಯಾರಾಗುವ ಇಂಥಾ ಔಷದಿಗಳು ಮಾತ್ರ ಇತರ ಔಷದಿಗಳೊಡನೆ ಮಿಶ್ರವಾಗಿರಕೂಡದು

ಮಿದ್ನಾಪರದ ಬೊಂಬ ಮೊಕದಮೆಯ ಸಂದರ್ಭದಲ್ಲಿ ಸುರೇಂದ್ರನಾಥ ಬೆನರ್ಜಿಯವರ 'ಬಂಗಾಳಿ' ಎಂಬ ಪತ್ರಿಕಯಲ್ಲಿ ಬ್ಯಾರಿಷ್ಟರ್ ಎನ್ ಮಿತ್ರರವರ ಮೇಲೆ ಕೆಲವು ಆರೋಪಣೆಗಳನ್ನು ಮಾಡಿದ್ದರಿಂದ ಈ ಪತ್ರ ಸಂಪಾದಕರ ಮೇಲ ಮಾನನಷ್ಟದ ದಾವೆಯು ದಾಕಲಾಗಿತ್ತು. ಆದರೆ ಪಂಚಾಯತಿಯಲ್ಲಿ ಈ ಮೊಕದಮೆಯನ್ನು ತೀರ್ಮಾನಗೊಳಿಸುವುದೆಂದು ನಿಶ್ಚಯಿಸಿರುವುದರಿಂದ ಪತ್ರಸಂಪಾದಕರು ದಾವೆಗೋಸ್ಕರ ಖರ್ಚಾದ ೫೦೦ ರೂಪಾಯಿಗಳನ್ನು ವಾದಿಯರಿಗೆ ಕೊಟ್ಟು ಪ್ರಕಟಿಸಿದ ಆರೋಪಣೆಗಳ ಒಗ್ಯೆ ತಮ್ಮ ವಿಷಾದವನ್ನು ಪತ್ರದಲ್ಲಿಯೇ ಪ್ರಕಟಿಸಬೇಕೆಂದು ತೀರ್ಮಾನವಾಯಿತು ಆದರೆ ಪ್ರತಿವಾದಿಯರು ಈ ತೀರ್ಮಾನಕ್ಕೆ ಒಪ್ಪದ್ದರಿಂದ ಮೇಜಿಸ್ಟ್ರೇಟರ ಮುಂದೆ ದಾಖಲಾದ ಈ ದಾವೆಯು ಇನ್ನು ಕೋರ್ಟಿನಲ್ಲಿಯೇ ತೀರ್ಮಾನಿಸಲ್ಪಡುವುದು

ಹೌರಾದಿಂದ ಅಸಾನ್ ಸೊಲ ಎಂಬ ರೈಲ್ವೆ ನಿಲ್ದಾಣಕ್ಕೆ ವಯ್ಯಲ್ಪಟ್ಟ ಕೋವಿಮದ್ದಿನ ಪೆಟ್ಟಿಗೆಗಳಲ್ಲಿ ಒಂದು ಪೆಟ್ಟಿಗೆಯು ಕಾಣೆಯಾಗಿರುವುದಂತೆ. ರೈಲ್ವೆ ಪೋಲೀಸಿನವರು ಈ ವಿಷಯ ತನಖಿ ನಡಿಸುತ್ತಿರುವರು.

ಮುಂಬಯಿ [illegible]

ಪಡಿಸುವರು. ಮುನಿಸಿಪಲ್ ಆಡಳಿತೆ ಕಾರ್ಯನಿರ್ವಾಹಕಗಳನ್ನು ಯೋಗ್ಯವಾಗಿ ಮಾಡದಿದ್ದದ್ದರಿಂದ ಮುನಿಸಿಪಲ್ ಸಭೆಯನ್ನು ಈ ರೀತಿ ಅವಮಾನಕ್ಕೆ ಪಡಿಸಿರುವರು

ಈಗಿನ ಚಕ್ರವರ್ತಿಗಳಾಗಿರುವ ಐದನೇ ಜೋರ್ಜ್ ಚಕ್ರವರ್ತಿಯವರು ಪ್ರಿನ್ಸ್ ಒಪ್ ವೇಲ್ಸರಾಗಿ ಹಿಂದೂಸ್ಥಾನಕ್ಕೆ ಬಂದಾಗ ಅಮೃತ ಬಜಾರ ಪತ್ರಿಕೆಯ ಮಾಲಿಕರಿಗೆ ಯುವರಾಜರವರ ಭೇಟಿಯನ್ನು ಮಾಡುವದೆ ಅಪ್ಪಣೆಯು ದೊರಕಿತ್ತು ಈ ಪತ್ರದ ಸಂಪಾದಕರು ಯುವರಾಜರವರ ಎದುರಿಗೆ ಬಂದಾಗ ಯುವರಾಜರು ವಂದನಾಪೂರ್ವಕವಾಗಿ ಪತ್ರಸಂಪಾದಕರಿಗೆ ಕೈಕೊಡಲಿಕ್ಕೆ ತಮ್ಮ ಕೈಯನ್ನು ಚಾಚಿದರು ಆದರೆ ಪತ್ರಿಕಾಕರ್ತರು ಭಾರತೀಯರು ತಮ್ಮ ರಾಜರವರನ್ನು ವಂದಿಸುವ ರೀತಿಯು ಅದಲ್ಲವಾದ್ದರಿಂದ ತಮ್ಮ ಕೈಯನ್ನು ಎದೆಗೆ [illegible] ಯುವರಾಜರ ಮುಂದೆ [illegible] ತಮ್ಮ ಎರಡು ಕೈಗಳನ್ನು ಜೋಡಿಸಿ ಯುವರಾಜರವರನ್ನು ದೈನ್ಯಭಾವದಿಂದ ಈ ರೀತಿ ಬೆಸಗೊಂಡರು –"ಈ ವಂದನವೇ [illegible] ನನ್ನಂಥವನಿಗೆ ತಮ್ಮ ಭೇಟಿಯನ್ನು ಕೊಟ್ಟು ವಿಶೇಷವಾಗಿ ಮನ್ನಿಸಿದಿರಿ ಸದಾಸರ್ವದಾ ತಮ್ಮ ಈ ದರ್ಶನವನ್ನು ಕೃತಜ್ಞತಾಪೂರ್ವಕ ಸ್ಮರಿಸುತ್ತಿರುವೆನು ನಮ್ಮ [illegible] ರಾಜರವರ ಸನ್ನಿಧಿಯಲ್ಲಿ ನಾನ ಪ್ರಕೃತ ಇರುವುದರಿಂದ ಹಿಂದುಸ್ಥಾನವು ಬಹಳ ದೀನದೆಸೆಯಲ್ಲಿದೆ [illegible] ನನ್ನ ಅರಿಕೆಮಾಡಿಕೊಳ್ಳುತ್ತಿರುವೆನು ತಮ್ಮ [illegible] ಈ ಭಾರತ [illegible] ಬೇಕಾಗಿರುವುದು, ಯಾಕಂದರೆ ತಾವು ನಮ್ಮ [illegible] ಅಂಗ್ಲಾಳದ ಪ್ರಜೆಗಳಂತೆ [illegible] ತಮ್ಮ ಪ್ರಜೆಗಳೇ ಆಗಿರುವುದರಿಂದ [illegible] ಭಾರತೀಯರನ್ನು ಮರೆತುಬಿಡಬಾರದಾಗಿ ಬೇಡಿಕೊಳ್ಳುವೆನು ಭಾರತೀಯರಿಗೆ ಅಣ್ಣರ ಸಹಾನುಭೂತಿಯೇ ಮುಖ್ಯವಾಗಿ ಬೇಕಾಗಿರುವುದು" ಅಮೃತಬಜಾರ ಪತ್ರಿಕೆಯ ಮಾಲಿಕರವರು ಈ ವಿಧವಾಗಿ ಅತಿದೈನ್ಯಭಾವದಿಂದ [illegible] ಕಣ್ಣೀರು ತುಂಬಿ ಯುವರಾಜರವರನ್ನು [illegible] ಸುವವರಾದರು

ಯುವರಾಜರವರ [illegible] ಕೇಳಿ ಮನಕರಗಿ [illegible] ನಿಂತಿದ್ದ ಪತ್ರಸಂಪಾದಕರನ್ನು [illegible] ಕರುಣಾ ಧ್ವನಿಯಿಂದ ಅಪ್ಪಣೆಕೊಟ್ಟು ಪತ್ರಸಂಪಾದಕರ ಪ್ರಾರ್ಥನೆಗೆ ಈ ರೀತಿ ಉತ್ತರ ದಯಪಾಲಿಸಿದರು "ನಿಮ್ಮನ್ನು ಕಂಡಿದ್ದಕ್ಕೆ ಬಹಳ ಆನಂದಪಟ್ಟಿರುವೆನು ಭಾರತೀಯರನ್ನು ಮರೆತುಬಿಡುವದಿಲ್ಲವೆಂಬದಕ್ಕೆ ನಿಮಗೆ ನನ್ನ ಬರವಸೆಬೇಕಾಗಿರುವುದು ಭಾರತೀಯರನ್ನು ಮರೆತು ಬಿಡಲೊಲ್ಲೆನು, ಅವರನ್ನು ಮರೆತುಬಿಡಲಾರೆನು, ಯಾವಾಗಲೂ ಅವರ ಜ್ಞಾಪಕವು ನನ್ನಲ್ಲಿರುವುದು ನನ್ನನ್ನು ಬಹಳ ವೈಭವಗಳಿಂದಲೂ ಔದಾರ್ಯದಿಂದಲೂ ನಿಮ್ಮ ಜನರೆಲ್ಲರು ಉಪಚರಿಸಿದ ಸಮಾಚಾರವನ್ನು ಪಿತವರ್ಯರಾದ ಚಕ್ರವರ್ತಿಗಳಿಗೆ ತಿಳಿಸುವೆನು ನಿಮಗೆಲ್ಲರಿಗೂ ಹೆಚ್ಚಿನ ಸಹಾನುಭೂತಿಯೇ ಬೇಕಾಗಿರುವುದೆಂಬದನ್ನು ತಂದೆಯವರಿಗೆ ತಿಳಿಸುವುದು ನನ್ನ ಬಹಳ ಸಂತೋಷಕರ ಕರ್ತವ್ಯವಾಗಿರುವುದು ಹಿಂದೂಸ್ಥಾನದಪರವಾಗಿ ಆನಂದ ಮಯುಸ್ಮರಣೆಯು ನನ್ನನ್ನೊಡಗೊಂಡಿರುವುದು" ಪತ್ರ ಸಂಪಾದಕರ ಮನಸ್ಸು ಕರಗಿಸುವ ರೀತಿಯಲ್ಲಿ ಈಗಿನ ಚಕ್ರವರ್ತಿಗಳಾದ ಯುವರಾಜರವರು ವರಪ್ರಧಾನವನ್ನು ಕೊಡುವವರಾದರು

ಕಲಿಕತ್ತೆಯಲ್ಲಿ ಎಡ್ವರ್ಡ್ ಚಕ್ರವರ್ತಿಯವರ ಕಳೇಬರ ನಿಕ್ಷೇಪ ದಿನಾಚರಣೆಯನ್ನು ಮಾಡಲಿಕ್ಕೆ ಬಹಳ ಏರ್ಪಾಡುಗಳು ಮಾಡಲ್ಪಟ್ಟಿದ್ದವು. ಎಲ್ಲಾ [illegible] ಸಾಲೆ ಅಂಗಡಿ ಮೊದಲಾದವುಗಳು ಮುಚ್ಚಲ್ಪಟ್ಟು [illegible] ಸಾರ ವ್ಯಾಪಾರ ಪೂರ್ಣವಾಗಿ ನಿನ್ನೆ ದಿನ ನಿಲ್ಲಿಸಿದ್ದರು. ಕಲಿಕತ್ತೆಯ ಮೈದಾನವನ್ನು ಎರಡು ಭಾಗಗಳನ್ನಾಗಿ ಮಾಡಿ ಅಲ್ಲಿ ೨೦ ಸಾವಿರಕ್ಕಿಂತ ಹೆಚ್ಚು ಜನ ಬಡಬಗ್ಗರಿಗೆ ಊಟ ಬಡಿಸಲಾಯಿತು

ಮುದ್ರಣಾಲಯಗಳ ನವಿನ ಶಾಸನವನ್ನು ಮಂಜೂರು ಮಾಡುವಾಗ ಆ ಮೊದಲೇ ಇರುತ್ತಿದ್ದ ಮುದ್ರಣಾಲಯಗಳಿಂದ ಅವರು ತಮ್ಮ ಪ್ರಮಾಣ ಮುಚ್ಚಳಿಕೆಗಳನ್ನು ಬದಲಾಯಿಸುವಾಗ ಜವಾಬ್ದಾರಿಯಾಗಿ ಹಣ ಠೇವಣಾತಿಯನ್ನು ಕೇಳಲಿಕ್ಕಿಲ್ಲವೆಂತ ಸರ್ ಹರ್ಬರ್ಟ್ಸ್ ರ‍್ಯಾಸೆಯವರೂ ಮಿ। ಎಸ್ ಪಿ ಸಿಂಹರವರೂ ಬರವಸೆ ಕೊಟ್ಟಿದ್ದರು ಆದರೆ ಮೇಜಿಸ್ಟ್ರೇಟರವರು ಈ ವಿಷಯಗಳಲ್ಲಿಯೂ ಸಹಾ ಜವಾಬ್ದಾರಿಯನ್ನು ಕೇಳುತ್ತಿರುವುದರಿಂದ ಸ್ಥಾನಿಕ ಸರಕಾರದವರ ಮೇಜಿಸ್ಟ್ರೇಟರುಗಳ ಲಕ್ಷ್ಯಕ್ಕೆ ಹೀಗೆ ಬರವಸೆಕೊಟ್ಟಿರುವುದನ್ನು ತರಬೇಕೆಂದು ಮಿ ಗೋಖಲೆಯವರು ಸೂಚಿಸಿರುವರು [illegible] ಮುದ್ರಣಾಲಯಗಳ ಮಾಲಿಕರವರು ಒಟ್ಟು ಕೂಡಿ ಈ ವಿಷಯವಾಗಿ [illegible] ಗವರ್ನರರವರಿಗೆ ಮನವಿಮಾಡಿಕೊಳ್ಳುವರಾಗಿ ತಿಳಿಯುತ್ತೇವೆ

ಪಂಜಾಬಿನ [illegible] ಎಂಬಲ್ಲಿ ಈ ತಿಂಗಳ ತಾ ೧೦ರಲ್ಲಿ ಒಂದು ಅತೀ ದೊಡ್ಡ ಹಿಮ ರಾಶಿಯು ಜರಿದು ಬಿದ್ದು ಬಹಳ ಹಾನಿಯುಂಟಾಗಿರುವುದು ಹೆಚ್ಚು ಕಡಿಮೆ [illegible] ಜನರು ಈ ಹಿಮ ರಾಶಿಯ ಕೆಳಗೆ ಬಿದ್ದಿರುವರು ಅನೇಕ ದನಕರುಗಳು ನಾಶವಾಗಿ ಹೋಗಿರುವವು ಹಿಮ ರಾಶಿಯಿಂದ [illegible] ಜನರನ್ನು ಸಜೀವವಾಗಿ [illegible] ತೆಗೆದಿರುವರು ಬಾಕಿಯವರನ್ನು ಜೀವಸಹಿತ ತೆಗೆಯುವುದು ಅಸಾಧ್ಯವಾಯಿತು

ವಿದ್ಯಾ ಇಲಾಖೆಯ ಡಿರೆಕ್ಟರ್ ಜನರಲರಾದ ಮಿ [illegible] ಒರೆಂಜರವರು ಅಂಗ್ಲಾಳದಲ್ಲಿಯ ಎಲಿಮೆಂಟರಿ ಶಾಲೆಗಳ ಮುಖ್ಯ ಇನ್ಸ್‌ಪೆಕ್ಟರರವರ ಕೆಲಸಕ್ಕೆ ನೇಮಿಸಲ್ಪಟ್ಟಿರುವುದರಿಂದ ಇವರು ಇದೇ ಬರುವ ಜುಲಾಯಿ ತಿಂಗಳಲ್ಲಿ ಹಿಂದುಸ್ಥಾನದಿಂದ ಅಂಗ್ಲಾಳಕ್ಕೆ ಹೊರಡುವರು

ಈ ತಿಂಗಳ ತಾ ೧೪ರಲ್ಲಿ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದುಸ್ಥಾನದಲ್ಲಿ ೧ [illegible] ಪ್ಲೇಗ್ [illegible] ಗಳಾಗಿವೆ

[illegible] ನೆವಿಗೇಶನ್ ಕಂಪನಿಯವರ ಗೋದಾವರಿ [illegible] ಸ್ಟೀಮರು ಇತ್ತಲಾಗೆ [illegible] ಎಂಬಲ್ಲಿ [illegible] ತಾಗಿ ಒಡೆದು ಹೋಯಿತು [illegible] ಸ್ಟೀಮರಿನಲ್ಲಿರುವವರಿಗಾಗಲಿ ಏನೂ [illegible] ಉಂಟಾಗಲಿಲ್ಲ ಸ್ಟೀಮರಿನಲ್ಲಿಯೇ ಇರುವ ದೋಣಿಗಳ ಮೇಲೆ ಹಡಗಿನ ಮೇಲಿರುವ ಜನರು ಕರೆಯನ್ನು ಸಾರಿ ಪ್ರಾಣವನ್ನುಳಿಸಿಕೊಳ್ಳುವವರಾದರು

ಕಲ್ಕತ್ತೆಯ ಟಂಕಸಾಲೆಯಲ್ಲಿ ಚಲಾವಣೆ [illegible] ನಾಣ್ಯಗಳನ್ನು ಮುದ್ರಿಸುವುದಕ್ಕೋಸ್ಕರ ಗತಿಸಿದ ಚಕ್ರವರ್ತಿಗಳವರ ಬಿಂಬವು ತಯ್ಯಾರಿಸಲ್ಪಟ್ಟಿತ್ತು ಇದು ರಾಜರವರ ಮಂಜೂರಾತಿ ಒಪ್ಪಿಗೆ ಕಳುಹಿಸಿಕೊಡುವದೆ ಮಾತ್ರ ಬಾಕಿ ಇತ್ತು ಎಡ್ವರ್ಡ್ ಚಕ್ರವರ್ತಿಗಳವರ ಈ ಹೊಸ ಪ್ರತಿಮೆಯುಳ್ಳ ನಾಣ್ಯಗಳು ತಯ್ಯಾರು ಮಾಡಲ್ಪಡುವ ಸಂದರ್ಭವು ಚಕ್ರವರ್ತಿಗಳವರ ವಿಷಾದಕರ ಮರಣದಿಂದ ಕಳೆದುಹೋಯಿತು ಹೊಸ ಚಕ್ರವರ್ತಿಗಳವರ ನಾಣ್ಯಗಳ ಮೇಲಿನ ಬಿಂಬವನ್ನು ಸಿದ್ಧಪಡಿಸುವರೆ ಅಪ್ಪಣೆಯು ಕೊಡಲ್ಪಟ್ಟಿರುತ್ತದೆ. ಈ ಬಿಂಬವು ಚಕ್ರವರ್ತಿಗಳ ಮಂಜೂರಾತಿಗೆ [illegible] ಹೊಸ [illegible]

ಮಹಾರಾಜ ಚಕ್ರವರ್ತಿಗಳವರ ನಮನ ದಿನಾಚರಣೆಯ ಬಗ್ಗೆ ಎಲ್ಲಾ ಕಡೆಗಳಲ್ಲಿ ಓಡ್ಯಾಡುತ್ತಿರುವ ರೈಲ್ವೆ ಗಾಡಿಗಳನ್ನು ಕಾಲುತಾಸಿನ ತನಕ ನಿನ್ನೆ ಮಧ್ಯಾನ್ಹ [illegible] ಯಕ್ಕೆ ನಿಲ್ಲಿಸಿ ರೈಲ್ವೆ ಸಂಬಂಧಿ ಸಿಪಾಯಿಗಳೆಲ್ಲವರ ಕವಾತನ್ನು ಮಾಡಿಸಬೇಕೆಂದು ಹಿಂದುಸ್ಥಾನದ ರೈಲ್ವೆ ಬೋರ್ಡಿನವರು ಅಪ್ಪಣೆ ಕೊಟ್ಟಿದ್ದರು

ಮಿಡ್ನಾಪುರದ ನಾರಾಯಣ ಘರ್ ಎಂಬಲ್ಲಿ ೧೯೦೭ನೇ ಇಸವಿಯಲ್ಲಿ ಆರು ಜನ ಕೂಲಿ ಕೆಲಸದವರು ಲೆಫ್ಟಿನೆಂಟ ಗವರ್ನರರವರು ಇದ್ದ ರೈಲ್ವೆ ಬಂಡಿಯನ್ನು ನಾಶಪಡಿಸುವರೆ ಪ್ರಯತ್ನಿಸಿ ಈ ಬಗ್ಗೆ ಟಾಪು ಶಿಕ್ಷೆ ಮೊದಲಾದವುಗಳನ್ನು ಹೊಂದಿದ್ದರು ಈ ಅಪರಾಧಿಗಳನ್ನು ಸರ್ ಎಡ್ವರ್ಡ ಬೇಕರರವರು ಶಿಕ್ಷೆಯಿಂದ ವಿಮೋಚನೆ ಪಡಿಸಿರುವರಾಗಿ ಕೇಳುತ್ತೇವೆ

ಮಿಂಟೋ ಪ್ರಭುಗಳ ನಂತರ ಹಿಂದೂಸ್ಥಾನದ ವ್ಯಾಸರಾಯ ಪ್ರಭುಗಳಾಗಿ ಯಾರು ನೇಮಿಸಲ್ಪಡುವರೆಂಬದು ಇನ್ನೂ ಪ್ರಕಟಿಸಲ್ಪಡಲಿಲ್ಲ ಆದರೆ ಈ ಪದವಿಯು ಯಾರಿಗೆ ಕೊಡಲ್ಪಡುವುದೆಂಬುವುದರ ವಿಷಯ ಇನ್ನೂ ವಿಧವಿಧವಾದ ಊಹನೆಗಳಾಗುತ್ತಿರುವವು ಯುನೈಟೆಡ್ ಪ್ರೊವಿನ್ಸಿಗಳ ಲೆಪ್ಟಿನೆಂಟ ಗವರ್ನರರಾಗಿ ಪ್ರಕೃತ ರಜೆ ಮೇಲೆ ವಿಲಾಯತಿಗೆ ಹೋಗಿದ್ದ ಸರ್ ಜೋನ್ ಹ್ಯೂವೆಟರವರೂ ಅಮೇರಿಕದ ಕೆನಡಾ ದೇಶಕ್ಕೆ ಗವರ್ನರರಾಗಿದ್ದ ಗ್ರೇ ಪ್ರಭುಗಳೂ ಹಿಂದೂಸ್ಥಾನದ ವ್ಯಾಸರಾಯ ಪ್ರಭುತ್ವಕ್ಕೆ ಅರ್ಹರಾಗಿರುವರೆಂಬ ಸೂಚನೆಯು ಕೆಲವು ಆಂಗ್ಲೇಯ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿರುವುದು

ಮುಂಬಯಿಯ ಟಂಕಶಾಲೆಯಲ್ಲಿ ೧೦ ಲಕ್ಷ ರೂಪಾಯಿಗಳೂ ಕಲಿಕತ್ತೆಯದರಲ್ಲಿ ಒಂಭತ್ತು ಲಕ್ಷ ರೂಪಾಯಿಗಳೂ ತಯ್ಯಾರಿಸಲ್ಪಟ್ಟವೆಂಬದಾಗಿ ತಿಳಿದುಬರುವುದು

ಪೆನಶನುಗಳ ಮೊಬಲಗು ಬಹಳ ಅಧಿಕವಾಗಿ ಬಂದಿರುವುದರಿಂದ ಈ ವಿಷಯವನ್ನು ಪರ್ಯಾಲೋಚಿಸುವರೆ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬುವ ವಿಷಯವನ್ನು ತತ್ಕಾಲಕ್ಕೆ ಬಿಟ್ಟುಬಿಡಬೇಕೆಂದಾಗಿ ನಿರ್ಣಯಿಸಲ್ಪಟ್ಟಿರುವುದಂತೆ

ಕಲ್ಕತ್ತೆಯ ಪೋಲೀಸಿನವರು ಸುರೇಂದ್ರನಾಥ ಮುಕರ್ಜಿ ಎಂಬ ಒಬ್ಬ ಬಂಗಾಳಿಯನ್ನು ಕೋವಿ ಮದ್ದನ್ನು ಮಾರಿದ ತಪ್ಪಿನ ಆರೋಪಣೆಯ ಮೇಲೆ ಕೈದು ಮಾಡಿರುವರು ಈ ಮುದ್ದೆಯಾಲೆಯನ್ನು ಹಿಡಿಯಲಿಕ್ಕೆ ಗುಪ್ತ ಪೋಲೀಸಿನವನೊಬ್ಬನು ಗುರುತು ಮಾಡಲ್ಪಟ್ಟ ಕೆಲವು ನಾಣ್ಯಗಳನ್ನು ಕೋವಿ ಮದ್ದಿನ ಕ್ರಯವಾಗಿ ಕೊಟ್ಟನು ಅರ್ಧ ರಾತ್ರಿಕ್ಕಿಂತ ಸ್ವಲ್ಪ ಜಾಸ್ತಿ ಕೋವಿ ಮದ್ದನ್ನು ಏನೂ ಅನುಮಾನವಿಲ್ಲದೆ ಸುರೇಂದ್ರನಾಥನು ಈ ಪೋಲೀಸಿನವನಿಗೆ ಕೊಟ್ಟುಬಿಟ್ಟನು ಹೀಗೆ ಕೋವಿ ಮದ್ದನ್ನು ಪಡೆದಾದ ನಂತರ ಪೋಲೀಸಿನವರು ಈತನನ್ನು ಕೈದು ಮಾಡಿ ಆತನ ಮನೆ ಜಪ್ತಿ ಮಾಡಿದ್ದಲ್ಲಿ ಈ ಗುರುತು ಮಾಡಲ್ಪಟ್ಟ ನಾಣ್ಯಗಳು ಸಿಕ್ಕಿದವು

ಸರ್ ಎಡ್ವರ್ಡ್ ಬೇಕರರವರು ಪರೀಕ್ಷಾರ್ಥವಾಗಿ ನಾಲ್ಕು ಮುನಿಸಿಪಾಲಿಟಿಗಳವರಿಗೆ ತಮ್ಮ ಆದಾಯ ವೆಚ್ಚದ ಅಂದಾಜು ಪಟ್ಟಿಯನ್ನು ಕೆಲವು ಶರ್ತಗಳಿಗೊಳಗಾಗಿ ತಯ್ಯಾರಿಸುವ ಸ್ವಾತಂತ್ರವನ್ನು ಕೊಟ್ಟಿರುವರು.

ಪ್ರೊಫೆಸರ್ ರಾಮ ಮೂರ್ತಿಯವರು ತಮ್ಮ ಸರ್ಕಸ್ ಪಾರ್ಟಿಯೊಂದಿಗೆ ಡಕ್ಕಾ ಪಟ್ಟಣಕ್ಕೆ ಬರುತ್ತಿರುವಾಗ ಚಂದಪುರ ರೈಲ್ವೆ ಸ್ಟೇಶನಿನ ರೈಲ್ವೆ [illegible]

...ಕೇಟೆನ ವಿಚಾರವನ್ನು ತನ್ನ ಮೆನೇಜರರ ಕೂಡ ಕೇಳ ಬೇಕೆಂದು ಹೇಳಿದರೂ ಈ ರೈಲ್ವೆ ಆಫೀಸರನು ಆಕೆಯ ಕೈಬಿಡಲಿಲ್ಲವಂತೆ. ಆ ಮೇಲೆ ರಾಮ ಮೂರ್ತಿಯವರು ಈ ಆಫೀಸರರ ಕೈಹಿಡಿತದಿಂದ ಸ್ತ್ರೀಯಳ ಕೈಯನ್ನು ಎಳೆದು ಬಿಡಿಸುವವರಾದರು ರೈಲ್ವೆ ಕಾನೂನುಗಳ ಪ್ರಕಾರ ರಾಮ ಮೂರ್ತಿಯವರನ್ನು ಕೈದುಮಾಡಿರುವರಂತೆಯೂ ಪ್ರೊಫೆಸರ್ ರಾಮ ಮೂರ್ತಿಯವರು ಈ ರೈಲ್ವೆ ಆಫೀಸರನ ಮೇಲೆ ಫಿರ್ಯಾದು ದಾಖಿಲುಮಾಡಿರುವರೆಂಬದಾಗಿಯೂ ಕೇಳುತ್ತೇವೆ

~~~~~~

ಮುಂಬಯಿಯಲ್ಲಿ ಎಡ್ವರ್ಡ ಚಕ್ರವರ್ತಿಗಳವರ ಕಳೇಬರ ನಿಕ್ಷೇಪ ದಿನಾಚರಣೆಯನ್ನು ಮಾಡಲಿಕ್ಕೆ ಎಲ್ಲಾ ಜಾತಿಯವರೂ ತಂತಮಗೆ ಯುಕ್ತವಾದ ಏರ್ಪಾಡುಗಳನ್ನು ಮಾಡಿದ್ದರು ಇಡೀ ಬಜಾರು ವ್ಯಾಪಾರ ವೈವಾಟುಗಳೇನಾದರು ಮಾಡದೆ ಮುಚ್ಚಲ್ಪಟ್ಟಿತ್ತು ಟ್ರಾಮ್ ಗಾಡಿಗಳು ೧೫ ಮಿನಿಟುಗಳ ತನಕ ನಿಲ್ಲಿಸಲ್ಪಟ್ಟಿದ್ದವು ಬಂದರಿನಲ್ಲಿದ್ದ ಹಡಗ ಮೊದಲಾದವುಗಳು ಚಲಿಸದೆ ಸ್ತಬ್ಧವಾಗಿ ನಿಂತುಕೊಂಡಿದ್ದವು ಕ್ರೈಸ್ತ, ಹಿಂದೂ, ಪಾರ್ಸಿ ದೇವಾಲಯಗಳಲ್ಲಿ ಪ್ರಾರ್ಥನೆಗಳು ನಡದವು

—o—

ದಕ್ಷಿಣ ಹಿಂದುಸ್ಥಾನ

~~~~~~

ಮದ್ರಾಸು ಹೈ ಕೋರ್ಟ ವಕೀಲರುಗಳಲ್ಲಿ ಚುನಾಯಿಸಿ ತೆಗದವರನ್ನು ಸಬ್ ಜಡ್ಜರನ್ನಾಗಿ ಮದ್ರಾಸು ಸರಕಾರದವರು ನೇಮಿಸುವರೆಂಬ ವಾರ್ತೆಯು ಆಧಾರವಿಲ್ಲದ್ದಾಗಿ ಮದ್ರಾಸು ಟೈಮ್ಸ್ ಪತ್ರಿಕೆಯಿಂದ ತಿಳಿದು ಬರುತ್ತದೆ ಮುನ್ಸೀಫರೇ ಬಡ್ತಿ ಹೊಂದಿ ಸಬ್ ಜಡ್ಜಿಯನ್ನು ಎಂದಿನಂತೆಯೇ ಪಡಿಯುವರು

~~~~~~

ಕಲಾಡಿಯಲ್ಲಿ ಕೆಲವು ಸಮಯಗಳವರೆಗಿದ್ದ ಶ್ರಿಂಗೇರಿ ಜಗದ್ಗುರುಗಳವರು ಇತ್ತಲಾಗೆ ಕಲಾಡಿಯಿಂದ ಹೊರಟು ತಿಚ್ಚಿ ಕೋಟೆ ಪಾಲಘಾಟು ಮಾರ್ಗವಾಗಿ ಸೇಲಂ ಅತ್ತ ಕಡೆಗಾಗಿ ಶೃಂಗೇರಿಗೆ ಹೋಗುವರು

~~~~~~

ಮೈಸೂರಿನ ರೆಸಿಡೆಂಟರಾದ ಬಹುಮಾನವಂತ ಮಿ ಎಸ್ ಎಮ್ ಫ್ರೇಜರರವರು ರಜೆ ಮೇಲೆ ವಿಲಾಯತಿಗೆ ಹೋಗುವರಾಗಿ ತಿಳಿಯುತ್ತೇವೆ

~~~~~~

ಸೇಲಂನಲ್ಲಿ ಒಂದು ಆಶ್ಚರ್ಯಕರವಾದ ಕ್ರಿಮಿನಲ್ ಮೊಕದಮೆಯು ಇತ್ತಲಾಗ ನಡಿಯಿತು ಸೇಲಂನಲ್ಲಿಯ ನೀರು ಸರಪರಾಜು ಕಂಟ್ರಾಕ್ಟರಾದ ಮಿ ಸಿ ವ್ಯಾಟ್ ಎಂಬವರು ನೀರು ಹರಿಯೋಣದ ಕೊಳವಿಗಳನ್ನಿಡುವ ಬಗ್ಗೆ ಜಬಲಪುರದಿಂದ ಬಿಹಾರಿಲಾಲ್ ಎಂಬ ಒಬ್ಬ ಮೇಸ್ತ್ರಿಯನ್ನು ತಿಂಗಳು ಒಂದಕ್ಕೆ ರೂಪಾಯಿ ನಾಲ್ವತ್ತರಂತೆ ಸಂಬಳ ಮೊಕ್ರೂರು ಮಾಡಿ ತರಿಸಿದ್ದರು ಕಳೆದ ದಶಂಬರ ತಿಂಗಳ ಮಧ್ಯಕಾಲದಲ್ಲಿ ಕಂಟ್ರಾಕ್ಟರರವರು ಬೆಂಗಳೂರಿನಲ್ಲಿರುವಾಗ ಈ ಬಿಹಾರಿಲಾಲ್ ಎಂಬವನು ಉತ್ತರದೇಶದಿಂದ ಈ ಕೆಲಸ ನಿಮಿತ್ತವಾಗಿ ಬಂದ ಇತರರೊಡನೆ ತನ್ನ ದೇಶಕ್ಕೆ ತೆರಳಿಹೋಗಿದ್ದನಂತೆ ಸಮನಾಗಿ ಸಂಬಳ ಸಿಕ್ಕದಿರುವುದೂ ಅಯೋಗ್ಯವಾದ ರೀತಿಯಲ್ಲಿ ಕೆಲಸದವರನ್ನು ನಡಿಸುವುದೂ ಮೊದಲಾದ ಕಾರಣಗಳಿಂದ ಈ ಉತ್ತರ ದೇಶದವರು ಹೀಗೆ ಬಿಟ್ಟುಹೋಗಿದ್ದರಂತೆ ಬಿಹಾರಿಲಾಲನು ಜಬಲಪುರಕ್ಕೆ ಹೋಗುತ್ತಿರುವಾಗ ಧಾರವಾರದಲ್ಲಿ ಪೋಲೀಸಿನವರು ಈತನನ್ನು ಕೈದುಮಾಡಿದರು. ಟೌನ್ ಮೇಜಿಸ್ಟ್ರೇಟರರಲ್ಲಿ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ [illegible] ವಶ ಕೊಟ್ಟಿದ್ದ ಕೆಲ [illegible] ಸಾಮಾನುಗಳ [illegible] ... ಗಳನ್ನು ಈತನ ವಶ ಕೊಟ್ಟ ರಶೀದಿ ಮೊದಲಾದ ದಾಖಲೆಗಳ್ಯಾವವೂ ಇರಲಿಲ್ಲವಂತೆ. ಮೇಜಿಸ್ಟ್ರೇಟರವರು ಕಂಟ್ರಾಕ್ಟುದಾರರ ಸಾಕ್ಷಿಯನ್ನು ಅವರ ಗೌರವ ನಿಮಿತ್ತ ನಂಬಿ ಬಿಹಾರಿಲಾಲ್‌ನಿಗೆ ಎರಡು ತಿಂಗಳ ಕಠಿಣ ಸಜೆಯನ್ನು ವಿಧಿಸುವವರಾದರು ಈ ತೀರ್ಮಾನದ ಮೇಲೆ ಸೇಲಂ ಡಿವಿಜನ್ ಆಫೀಸರರಲ್ಲಿ ಅಪೀಲು ಮಾಡೋಣಾಯಿತು ಮೊಕದಮೆಯ ವಿಚಾರಣೆಯು ಮುದ್ದೈಯಾಳಿಗೆ ತಿಳಿಯದಿರುವ ಭಾಷೆಯಲ್ಲಿ ಮಾಡೋಣಾದ್ದರಿಂದಲೂ, ಕ್ರಮವಾಗಿ ನೇಮಿಸಲ್ಪಟ್ಟ ಭಾಷಾಂತರ ಮಾಡುವವನಿಲ್ಲದೆ ಈ ಮೊಕದಮೆಯು ನಡಿಸೋಣಾದ್ದರಿಂದಲೂ ಎರಡನೇ ತನಿಖೆ ಬಗ್ಗೆ ಈ ಮೊಕದಮೆಯನ್ನು ಆ ಟೌನ್ ಮೇಜಿಸ್ಟ್ರೇಟರವರಲ್ಲಿಯೇ ಕಳುಹಿಸುವವರಾದರು ಎರಡನೇ ವಿಚಾರಣೆಯಲ್ಲಿ ಆ ಮೇಜಿಸ್ಟ್ರೇಟರವರೇ ಬಿಹಾರಿಲಾಲನಿಗೆ ಎರಡು ತಿಂಗಳ ಕಠಿಣಕಾಮಗಿರಿ ಸಜೆಯನ್ನೂ, ೧೦೦ ರೂಪಾಯಿಗಳ ಜುರುಮಾನೆಯನ್ನೂ ವಿಧಿಸಿ ಜುರುಮಾನೆ ಕೊಡಲಿಕ್ಕೆ ತಪ್ಪಿದ್ದಲ್ಲಿ ಅದರ ಬದಲಾಗಿ ಒರು ತಿಂಗಳ ಸಜೆಯನ್ನು ಅನುಭವಿಸಬೇಕೆಂತ ಸಹಾ ತೀರ್ಮಾನಿಸಲ್ಪಟ್ಟಿತ್ತು ಈ ತೀರ್ಮಾನದ ಮೇಲೆ ಇನ್ನೊಮ್ಮೆ ಸೇಲಮಿನ ಡಿಸ್ಟ್ರಿಕ್ಟ್ ಜಡ್ಜರವರಿಗೆ ಅಪೀಲು ಮಾಡೋಣಾಯಿತು ಸೆಶನ್ಸ್ ಜಡ್ಜರವರು ಕೆಳಕೋರ್ಟಿನ ಮೊಕದಮೆಯ ತೀರ್ಮಾನವನ್ನು ಚನ್ನಾಗಿ ಪರಿಗ್ರಹಿಸಿ ಅಪರಾಧಿಯನ್ನು ಪೂರ್ಣವಾಗಿ ಎಲ್ಲಾ ತರದ ಶಿಕ್ಷೆಯಿಂದ ವಿಮೋಚನೆ ಪಡಿಸಿದರು ಈ ಟೌನ್ ಮೇಜಿಸ್ಟ್ರೇಟರವರ ತೀರ್ಮಾನದ ವಿಷಯ ಸೆಶನ್ಸ್ ಜಡ್ಜರವರು ಬರೆದಿರುವ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವುದು ಆಗತ್ಯವೋ?

~~~~~~

ತಿರುವಾಂಕೋಡಿನಲ್ಲಿ ಸ್ಥಳಿಕ ಕೆಲವು ಮಾನ್ಯ ಗೃಹಸ್ಥರು ಕೂಡಿ ರಬ್ಬರಿನ ವ್ಯವಸಾಯವನ್ನು ಮಾಡುವ ಬಗ್ಗೆ ಒಂದು ಸ್ವದೇಶಿ ಕಂಪೆನಿಯನ್ನು ಏರ್ಪಡಿಸಿರುವರು ಈ ವರೇಗೆ ಗವರ್ನಮೆಂಟಿನಿಂದಲೂ, ಖಾಸಗಿ ಜನರಿಂದಲೂ ಕೆಲವು ಯುರೋಪಿಯರು ರಬ್ಬರಿನ ವ್ಯವಸಾಯದ ಬಗ್ಗೆ ಜಮೀನುಗಳನ್ನು ಪಡಕೊಂಡು ಈ ವ್ಯವಸಾಯವನ್ನು ಕೈಕೊಂಡಿದ್ದರು ರಬ್ಬರಿನ ವ್ಯವಸಾಯವು ಬಹಳ ಲಾಭಯುಕರವಾಗಿರುವುದನ್ನು ದೇಶೀಯರು ತಿಳಕೊಂಡು ಒಂದು ಕಂಪೆನಿಯನ್ನು ಸ್ಥಾಪಿಸಿ ಈ ವ್ಯವಸಾಯ ಮಾಹಿತಿಯನ್ನು ಕಲಿತು ಬರುವರೆ ಸಿಲೋನಿಗ ಕೆಲವರನ್ನು ಕಳುಹಿಸಿಕೊಟ್ಟಿರುವರು ಕಂಪೆನಿಯ ನಿಯಮಿತ ಬಂಡವಾಳವು ೪ ಲಕ್ಷ ರೂಪಾಯಿಗಳಾಗಿರುವುದು ಈ ಬಂಡವಾಳವನ್ನು ರೂ ೩೦ರ ಮೌಲ್ಯದ ೧೫೦೦೦ ಪಾಲುಗಳನ್ನಾಗಿ ವಿಭಾಗಿಸಿರುವರು 'ಮಲೆಯಾಳ ಮನೋರಮಾ' ಎಂಬ ಪತ್ರದ ಸಂಪಾದಕರು ಈ ಕಂಪೆನಿಯ ಕಾರ್ಯದರ್ಶಿಗಳೂ ಇನ್ನು ಕೆಲವು ವಿದ್ಯಾವಂತ ಗೃಹಸ್ಥರು ಕಂಪೆನಿಯ ಡಿರೆಕ್ಟರುಗಳೂ ಆಗಿರುವರು

~~~~~~

ಕಳದ ಮಂಗಳವಾರ ಮದ್ರಾಸಿನ ಪುರಜನರ ಸಭೆಯು ಎಡ್ವರ್ಡ್ ಚಕ್ರವರ್ತಿಗಳ ಮರಣದಿಂದುಂಟಾದ ಸಂತಾಪ ಪ್ರದರ್ಶನಾರ್ಥವಾಗಿ ಕೂಡಿತ್ತು ಗವರ್ನರ್ ದೊರೆಗಳ ದೇಹ ಜಾಡ್ಯದ ಸಮ್ಮಂಧ ಇವರ ಬದಲಾಗಿ ಬಹುಮಾನಪಟ್ಟ ಮಿ। ಹೆಮಿಕರವರು ಉದಕಮಂಡಲಿನಿಂದ ಬಂದು ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು ಎಲ್ಲಾ ಜಾತಿಯ ಮತ್ತು ವಿವಿಧ ತರಗತಿಯ ಜನರೆಲ್ಲರೂ ಈ ಸಭೆಗ ಬಂದಿದ್ದರು ಸಭೆಯಲ್ಲಿ ಸಹಸಂತಾಪಸೂಚಕ ನಿರ್ಣಯವನ್ನು ಸರ್ವರೂ ನಿಂತುಕೊಂಡು ಮಂಜೂರು ಮಾಡಿದ್ದಲ್ಲದೆ ಎಡ್ವರ್ಡ್ ಚಕ್ರವರ್ತಿಗಳ ಸ್ಮರಣಾರ್ಥವಾಗಿ ತಕ್ಕ ಏರ್ಪಾಡನ್ನು ಮಾಡಲಿಕ್ಕೆ ಒಂದು ಕಮಿಟಿಯು ಸಹಾ ಚುನಾಯಿಸಲ್ಪಟ್ಟಿತು. ಗವರ್ನರ ದೊರೆಗಳವರೇ ದ ಸರ್. [illegible] ಕಮಿಟಿಯ [illegible] ...ಧ್ಯಕ್ಷರೂ, ಬಹುಮಾನಪಟ್ಟ ಮಿ. ಟಿ. ರಿಚಮಂಡ್, ದಿವಾನ್ ಬಹದೂರ್ ಎಸ್. ವೆಂಕಟರಮಣ ದಾಸನ್ನಾಯ್ಡು, ಮತ್ತು ಖಾನ್‌ಬಹದೂರ್ ಸಫ್ದರ್ ಹುಸೇನ್ ಸಾಹೇಬ್ ಈ ಮೂರು ಜನರು ಕಮಿಟಿಯ ಕಾರ್ಯದರ್ಶಿಗಳೂ ಆಗಿರುವರು ಯಾವ ರೀತಿಯಲ್ಲಿ ಚಕ್ರವರ್ತಿಗಳವರ ಸ್ಮಾರಕವನ್ನು ಏರ್ಪಡಿಸಬೇಕೆಂಬದು ನಿಶ್ಚಯಿಸಲ್ಪಟ್ಟಿಲ್ಲ

~~~~~~

ದಕ್ಷಿಣ ಕನ್ನಡ

~~~~~~

ಎಡ್ವರ್ಡ್ ಚಕ್ರವರ್ತಿಗಳವರ ದಹನ ದಿನಾಚರಣೆಯ ಸಲುವಾಗಿ ನಿನ್ನೆ ಸ್ವದೇಶಾಭಿಮಾನಿ ಆಫೀಸಿಗೆ ರಜೆ ಇದ್ದದ್ದರಿಂದ ನಿನ್ನೆ ಪ್ರಕಟಿಸಬೇಕಾದ ಸ್ವದೇಶಾಭಿಮಾನಿ ಈ ಸಂಚಿಕೆಯನ್ನು ಈ ದಿನ ಪ್ರಕಟಿಸಿರುವೆವು

~~~~~~

ಮಂಗಳೂರು ಕಳೆದ ವಾರ ಮುನಿಸಿಪಾಲಿಟಿಯ ಲ್ಲಿ ೩ ಪ್ಲೇಗು ಮರಣಗಳೂ ೪ ಸಿಡುಬು ರೋಗದ ಮರಣಗಳೂ ಇದ್ದವು

ಇದೇ ತಿಂಗಳ ತಾ ೧೩ನೇ ಶುಕ್ರವಾರ ಸಾಯಂಕಾಲ ೭ ಘಂಟೆ ಸಮಯ ಮುನ್ಸಿಫ್ ಕೋರ್ಟ ಪ್ಯಾದೆ ದೇವಪ್ಪನು ತನ್ನ ತಂಗಿ ಗಂಡ ನಾರಾಯಣಗೆ ಚೂರಿ ಹಾಕಿದನಂತೆ ಪೋಲೀಸಿನವರು ಈತನನ್ನು ಕೈದುಮಾಡಿರುತ್ತಾರೆ

ಇಂದಿಗೆ ಸುಮಾರು ಆರೇಳು ದಿವಸಗಳಾದವು, ಗುಡುಗು ಮಿಂಚು ಜೋರಾಗಿ ಕೇಳಿಸುತಿದ್ದು ಆಕಾಶವೆಲ್ಲಾ ಬರಗಾಲ ಮೋಡಗಳಿಂದ ಕವಿದಿದ್ದು ಹೆಚ್ಚಾದ ಶೆಖೆಯಿಂದ ಜನರು ಪೀಡಿತರಾಗುತ್ತಿರುವರು ಜನರೆಲ್ಲರು ಮಳೆಯ ನಿರೀಕ್ಷಣೆಯಲ್ಲಿರುವರು

ಆಯುರ್ವೇದಿಕ ಪಂಡಿತ ಎಮ್ ವಿ ಶಾಸ್ತ್ರಿಗಳವರು ಆಯುರ್ವೇದ ಔಷದಿಗಳನ್ನೇ ಉಪಯೋಗಿಸುವ ಅಭಿಮಾನವು ಭಾರತೀಯರಲ್ಲಿ ಹಲವು ಕಾರಣಗಳಿಂದ ನೈಸರ್ಗಿಕವಾಗಿರುವುದು ಆದರೆ ನಮ್ಮ ಈ ಪುರಾತನ ಅಮೂಲ್ಯ ವೈದ್ಯ ವಿದ್ಯೆಯನ್ನು ಶಾಸ್ತ್ರರೀತ್ಯಾ ಪಂಡಿತರು ಕಲಿಯದಿದ್ದರಿಂದ ಶಂಕೆಯಿಲ್ಲದೆ ಈ ಔಷಧಿಗಳನ್ನು ಸೇವಿಸುವರೆ ರೋಗಿಗಳು ಅನುಮಾನಿಸುತ್ತಿರುವರು ಆಯುರ್ವೇದ ಚಿಕಿತ್ಸಾಕ್ರಮ ಪಸರಣೆಗಿರುವ ಈ ಕುಂದಕವನ್ನು ನಮ್ಮ ಪಟ್ಟಣದಲ್ಲಿ ಹೋಗಲಾಡಿಸುವರೆ ಎಮ್ ವಿ ಶಾಸ್ತ್ರಿಗಳೆಂಬ ಆಯುರ್ವೇದ ಪಂಡಿತರು ಇಲ್ಲಿ ನಿಂತು ತಮ್ಮ ವೈದ್ಯ ವೃತ್ತಿಯನ್ನು ನಡಿಸುತ್ತಿರುವರು ಇವರು ಮೈಸೂರು ಸಂಸ್ಕೃತ ಪಾಠಶಾಲೆಯಲ್ಲಿ ಎರಡು ವರುಷಗಳ ತನಕ ಸಂಸ್ಕೃತವನ್ನು ಕಲಿತು ಅಲ್ಲಿ ಹೊಂದಿದ ಸಂಸ್ಕೃತ ಭಾಷಾ ಜ್ಞಾನದಿಂದ ತೃಪ್ತಿಹೊಂದದೆ ಕಾಶೀ ಕ್ಷೇತ್ರಕ್ಕೆ ಹೋಗಿ ಅಲ್ಲಿ ಅನಿಬೆಸೆಂಟರವರಿಂದ ಸ್ಥಾಪಿತವಾದ ಸೆಂಟ್ರಲ್ ಹಿಂದೂ ಕೋಲೇಜಿನಲ್ಲಿಯ ಸಂಸ್ಕೃತ ಪಾಠಶಾಲೆಗಳ ಎರಡನೇ ತರಗತಿಯ ಪರೀಕ್ಷೆಯಲ್ಲಿ ಉತ್ತೀರ್ಣರಾದರು ಬನಾರಿಸಿನಲ್ಲಿಯ ವ್ಯಾಕರಣ ಮಧ್ಯಮ ಎಂಬ ಪರೀಕ್ಷೆಯಲ್ಲಿಯೂ ಸಹಾ ಇವರು ಪಾಸಾಗಿರುವರು ಹೀಗೆ ಸಂಸ್ಕೃತ ಭಾಷಾ ಪಾಂಡಿತ್ಯವನ್ನು ಪಡದನಂತರ ಮದ್ರಾಸಿನಲ್ಲಿ ಸ್ಥಾಪಿತವಾದ ಪಂಡಿತ ಡಿ ಗೋಪಾಲಾಚಾರ್ಯರವರ ಆಯುರ್ವೇದ ಕೋಲೇಜಿನಲ್ಲಿಯೂ ಚಿಕಿತ್ಸಾಲಯದಲ್ಲಿಯೂ ಕ್ರಮಪ್ರಕಾರ ಶಾಸ್ತ್ರರೀತ್ಯಾ ವೈದ್ಯಶಾಸ್ತ್ರ ಶಿಕ್ಷಣವನ್ನು ನಾಲ್ಕು ವರುಷಗಳಲ್ಲಿ ಪಡದು ಆ ಕೋಲೇಜಿನ ಪರೀಕ್ಷೆಗಳೆಲ್ಲವುಗಳನ್ನು ಪಾಸಾಗಿರುವರು. ಆಯುರ್ವೇದ ಪುನರುಜ್ಜೀವನದ ಬಗ್ಗೆ ಈ ರೀತಿ ಶ್ರಮಸಾಹಸಪಟ್ಟ ಶಾಸ್ತ್ರಿಗಳವರಿಗೆ ನಮ್ಮ ಪುರಜನರು ಅಭಿಮಾನ[illegible] ಅವರ ಪಾಂಡಿತ್ಯವನ್ನರಿತುಕೊಂಡು [illegible] [illegible]

ಗತಿಸಿದ ಚಕ್ರವರ್ತಿ ಎಡ್ವರ್ಡ್ ಮಹಾಪ್ರಭುಗಳ ದಫನ ಸಂಸ್ಕಾರ ದಿನವು ಇಲ್ಲಿ ಬಹಳ ಗಾಂಭೀರ್ಯದಿಂದ ಆಚರಿಸಲ್ಪಟ್ಟಿತು. ವೆಬ್ಸ್ಟರ್ ಮಾರ್ಕೆಟ್, ಹೂವಿನ ಮಾರ್ಕೆಟ್ ಮೊದಲಾದವುಗಳೆಲ್ಲವೂ, ಪ್ರತಿ ಅಂಗಡಿ ಪ್ರತಿ ಬಂಡಸಾಲೆ, ಖಾಸಗಿ ಸರಕಾರಿ ಆಫೀಸುಗಳೆಲ್ಲವೂ ಮುಚ್ಚಲ್ಪಟ್ಟಿದ್ದವು. ಬೆಳಗ್ಗೆ ಈ ಆಚರಣೆಗಾಗಿ ಕಂಕನಾಡಿ ಸೆಮಿನರಿಯ ಬ್ಯಾಂಡವಾದ್ಯದ ಸಮೇತ ರಿಜರ್ವ್ ಪೋಲೀಸಿನವರ ಕವಾತು ಆಗಿ, ತೋಪುಗಳು ಹಾರಿಸಲ್ಪಟ್ಟವು. ದೇವಾಲಯ ದೇವಸ್ಥಾನಗಳಲ್ಲಿ ಕೀರ್ತಿಶೇಷರ ಆತ್ಮಕ್ಕೆ ಶಾಂತಿಯು ಪ್ರಾಪ್ತವಾಗುವಂತೆ ಪ್ರಾರ್ಥನೆಗಳು ನಡೆದವು.

ಕಳೆದ ವಾರದಲ್ಲಿ ಹಂಪನಕಟ್ಟೆಯಲ್ಲಿರುವ ಪಂಗಳೂರು ಟ್ರಾನ್ಸಿಟು ಕಂಪೆನಿಯ ಕುದುರೆಲಾಯಕ್ಕೆ ಬೆಂಕಿ ಬಿದ್ದು ಕುದುರೆಲಾಯವೆಲ್ಲವೂ ಮತ್ತು ಲಕ್ಷಾಂತರ ದೀನಾರನು ಮಾಡಿಟ್ಟ ಸುಮಾರು ೨೦೦ ರೂಪಾಯಿಗಳ ಮೌಲ್ಯದ ಮುಳಿಹುಲ್ಲೂ ಸುಟ್ಟುಹೋದ್ದಲ್ಲದೆ ಲಾಯದಲ್ಲಿದ್ದ ಎರಡುಮೂರು ಕುದುರೆಗಳು ಸಹ ಬೆಂದುಹೋಗಿದ್ದವು. ತಕ್ಕಕಾಲದಲ್ಲಿ ಜನ ಸಹಾಯ ದೊರಕಿದ್ದರಿಂದ ಬಾಕಿ ಕುದುರೆಗಳು ಅಪಾಯದಿಂದ ರಕ್ಷಿಸಲ್ಪಟ್ಟವು. ಬೆಂಕಿ ಬಿದ್ದ ಸ್ಥಳವನ್ನು ನೋಡಿದ್ದಲ್ಲಿಯೂ ಇತರ ಎಲ್ಲಾ ಸಮಾಚಾರವನ್ನು ಕಂಪೆನಿಯವರ ಕೂಡೆ ವಿಚಾರಿಸಿದ್ದರಿಂದಲೂ ಬೆಂಕಿಯು ಅಕಸ್ಮಾತ್ತಾಗಿ ಬಿದ್ದಿತೆಂತ ನಿಶ್ಚಯಿಸುವದು ಅಸ್ಪದವಿಲ್ಲ. ಯಾರೋ ದ್ವೇಷದಿಂದಲೇ ಕೊಳ್ಳಿಯಿಟ್ಟಿರಬೇಕೆಂದಾಗಿ ಅಭಿಪ್ರಾಯ ಪಡಬೇಕಾಗಿದೆ. ಪೋಲೀಸು ನಿಗಾವನೆಯು ಕಡಿಮೆಯಾಗಿರುವ ಈ ಊರಲ್ಲಿ ದ್ವೇಷ ಸಾಧನೆಯು ಈ ರೀತಿ ಮಾಡಲಿಕ್ಕೆ ಇಂಬು ದೊರಕಿದ್ದು ಬಹಳ ಆಶ್ಚರ್ಯಕರವೇ ಸರಿ. ರಾತ್ರಿ ಬೀಟು ಪೋಲೀಸಿನವರು ಅತ್ತಿತ್ತ ಹೋಗುತ್ತಿದ್ದು ಕಾಯಲ್ಪಡುವ ನಾಲ್ಕು ಮಾರ್ಗಗಳು ಕೂಡಿದ್ದ ಸ್ಥಳದಲ್ಲಿ ಇದ್ದ ಈ ಲಾಯಕ್ಕೆ ಬೆಂಕಿ ಇಡಲಿಕ್ಕೆ ಯಾವ ದುರಾತ್ಮನಿಗೆ ಹ್ಯಾಗೆ ಸಾಧ್ಯವಾಯಿತೆಂಬದನ್ನು ಊಹಿಸುವುದು ಸಹಾ ದುಸ್ಸಾಧ್ಯ. ಪೋಲೀಸು ಅಧಿಕಾರಿಗಳು ಈ ಅಕೃತ್ಯವು ದ್ವೇಷದಿಂದ ಒದಗಿದ್ದೆಂದಾಗಿ ಸಮಾವ ನಪ್ಪಿದರೆ ಈ ದ್ವೇಷ ಮೂಲವನ್ನು ಪರಿಶೋಧಿಸಿ ಇಂಥಾ ದ್ವೇಷಪೂರಿತ ಕ್ರೂರಕೃತ್ಯವನ್ನು ಮಾಡಿದವನ್ಯಾರೆಂಬುದನ್ನು ಕಂಡು ಹಿಡಿಯಲು ಪ್ರಯತ್ನಿಸುವರಾಗಿ ಆಶಿಸುತ್ತೇವೆ. ಪ್ರಜೆಗಳೂ ಇಂಥಾ ಪಾತಕಿಗಳನ್ನು ಗೊತ್ತುಮಾಡುವದರಲ್ಲಿ ಬೇಕಾದ ಸಹಕಾರವನ್ನು ಕೊಡತಕ್ಕದ್ದು.

ವಿವಿಧ ವಿಷಯಗಳು

ಕ್ಷೀಣಿಸುತ್ತಿರುವ ಕ್ರೈಸ್ತ ಮಿಶನರಿಗಳ ಮತ ಉಲ್ಲಾಸವು :- ಸ್ಟಾರ್ ಎಂಬ ವರ್ತಮಾನ ಪತ್ರಿಕೆಗೆ ಲಂಡನ್ ಪಟ್ಟಣದ ಒಬ್ಬ ಬಾತ್ಮೀದಾರನು ಆಂಗ್ಲೇಯ ಕ್ರೈಸ್ತ ಮಿಶನುಗಳ ವರ್ತಮಾನದ ವಿಷಯ ಈ ರೀತಿ ಬರೆದಿರುವನು. ನೂರಾರು ವರುಷಗಳ ಹಿಂದೆ ಅಜ್ಞಾನಾಂಧಕಾರದಲ್ಲಿರುವ ಪಾಮರರನ್ನು ಬೆಳಕಿಗೆ ತರುವ ಸದುದ್ದೇಶದಿಂದ ಮಿಶನ್ ಸಂಸ್ಥೆಗಳು ಆಯಾ ಕಡೆಗಳಲ್ಲಿ ಕ್ರೈಸ್ತ ಸುವಾರ್ತೆಗಳನ್ನು ಸಾರಲೂ ಕ್ರೈಸ್ತ ಬ್ರಾತೃತ್ವವನ್ನು ಎಲ್ಲಾ ಕಡೆಗಳಲ್ಲಿ ಬೀರಲೂ ಮಿಶನರಿಗಳನ್ನು ಹಿಂದುಸ್ಥಾನ ಮೊದಲಾದ ದೇಶಗಳಿಗೆ ಕಳುಹಿಸಿಕೊಡುವವರಾದರು. ಆದರೆ ಇತ್ತಲಾಗೆ ಇಂಥಾ ಸಂಸ್ಥೆಗಳನ್ನು ಏರ್ಪಡಿಸಲಿಕ್ಕೆ ಕಾರಣ ಭೂತರಾದ ಕೆಲವರು ಸುವಾರ್ತಿಕ ವಿಷಯಗಳಲ್ಲಿ ಈ ಸಂಸ್ಥೆಗಳ ಮೂಲಕ ಮಾಡುತ್ತಿರುವ ಪ್ರಯತ್ನ ಫಲಗಳ ವಿಷಯ ಅನುಮಾನ ಪಡುತ್ತಿರುವರು. ಹೀಗಾಗಿ ಈ ವರುಷ ಕೂಡಿದ್ದ ಈ ಸಂಸ್ಥೆಗಳ ವಾರ್ಷಿಕ ಸಭೆಗಳ ವೃತ್ತಾಂತಗಳಲ್ಲಿ ಮಿಶನರಿ ಫಂಡುಗಳ ಖಜಾನೆಯು ಬರಿದಾಗಿ ಬರುತ್ತಿರುವ ವಿಷಯವೂ [illegible] ಕಾಂತರಗೊಳಿಸುವ ಆಸಕ್ತಿಯ ಬರಬರುತ್ತಾ ಕುಂದುತ್ತಿರುವ ಅಭಾವವೂ ಕಂಡುಬರುತ್ತಿರುವುದು.

ಈ ಮಿಶನರಿ ಸಂಘದವರು ತಮ್ಮ ಖಜಾನೆಯು ಕ್ಷಯಿಸುತ್ತ ಬರುವುದನ್ನು ನೋಡಿ ವಿಷಾದಪಟ್ಟು ಅವುಗಳಲ್ಲಿ ಕೆಲವರು ತಮ್ಮ ಈ ಸುವಾರ್ತೆ ಸಾಧನೆಯನ್ನು ಹಿಂದೂಸ್ಥಾನದಲ್ಲಿಯೂ ಇತರ ಕಡೆಗಳಲ್ಲಿಯೂ ಕಡಿಮೆ ಮಾಡಲು ನಿಶ್ಚಯಿಸಿರುವರು. ಆಂಗ್ಲಾಳದ ಚರ್ಚ ಮಿಶನು ಸಂಘದವರು ತಮ್ಮ ಬರಿದಾದ ಖಜಾನೆಯೊಡನೆ ಕೆಲವು ವರುಷಗಳಿಂದ ಹೋರಾಡುತ್ತಿರುವರು. ಅತಿ ದೊಡ್ಡದಾದ ಮಿಶನ ಸಂಘಗಳ ಪೈಕಿ ಒಂದಾದ ಲಂಡನ್ ಮಿಶನರಿ ಸಂಘದವರು ತಮ್ಮ ಸಿಬ್ಬಂದಿಯನ್ನೂ ಮಿಶನರಿ ಉದ್ಯೋಗಗಳನ್ನೂ ಕಡಿಮೆ ಮಾಡಲು ಪ್ರಾರಂಭಿಸಿರುವರು. ಬೆಪ್ಟಿಸ್ಟ್ ಮಿಶನರಿ ಸಂಘದವರ ವೃತ್ತಾಂತವು ಸಹಾ ಇದೇ ರೀತಿಯಾಗಿರುವುದು. ಈ ಸಂಘದವರು ಪಡದ ದ್ರವ್ಯಸಹಾಯವು ಗತವರುಷಕ್ಕಿಂತ ಈ ವರುಷ ೧೦,೦೦೦ ಪವನುಗಳಷ್ಟು ಕಡಿಮೆಯಾಗಿರುವುದು.

ಇತರ ಮತಗಳಿಗಿಂತ ಕ್ರೈಸ್ತ ಮತವು ಇವುಗಳಲ್ಲಿ ಅತಿ ಶ್ರೇಷ್ಠ ಮತವಾಗಿರುವದೆಂದು ಬಹಳವಾಗಿ ಕೊಂಡಾಡುವ ಕ್ರೈಸ್ತಮತಾಭಿಮಾನಿಗಳು ಈ ಬಗ್ಗೆ ಖೇದಪಡುತ್ತಿರುವರು. ಇವರಲ್ಲಿ ಕೆಲವರು ಮಿಶನರಿಗಳು ತಪ್ಪು ರೀತಿಗಳನ್ನು ಕೈಕೊಂಡಿರುವುದೆಂದೆನ್ನುವರು. ಮೊದಲಿನಂತೆಯೇ ಎಲ್ಲ ರೀತಿಗಳಲ್ಲಿ ಮಿಶನರಿಗಳು ಕ್ರೈಸ್ತ ಧರ್ಮಪ್ರಸಂಗವನ್ನು ಮಾಡುವಂತೆ ಸಾಧಿಸಬೇಕೆನ್ನುವರು. ಈ ರೀತಿ ಕ್ರೈಸ್ತಧರ್ಮಪ್ರಸಂಗ ಹಬ್ಬದಿದ್ದದಕ್ಕೆ ಕಾರಣ ಕೊಡುವದರಲ್ಲಿ ಭಿನ್ನಾಭಿಪ್ರಾಯವುಳ್ಳವರಾದರೂ ಮಿಶನರಿಗಳ ಮತಉಲ್ಲಾಸವು ಕ್ಷಯಿಸುವುದೆಂಬುದರ ವಿಷಯವಾಗಿ ಇವರೆಲ್ಲರ ಅಭಿಪ್ರಾಯವು ಒಂದೇ ರೀತಿಯಾಗಿರುವುದು.

ಆದರೆ ಸರ್ವ ಮತ ವಿಷಯಗಳನ್ನು ಚನ್ನಾಗಿ ಕಲಿತುಕೊಂಡ ವಿವೇಕ ಶಾಲಿಗಳು ಸಮಯೋಚಿತ ರೀತಿಗಳಲ್ಲಿಯೇ ಈ ಸ್ಥಿತ್ಯಂತರಕ್ಕೆ ಕಾರಣಗಳನ್ನು ಕೊಡುತ್ತಿರುವರು. ಕ್ರೈಸ್ತ ಧರ್ಮದ ಬೆಳಕಿಲ್ಲದೆ ಭೂಲೋಕದ ಅನೇಕ ಕಡೆಗಳಲ್ಲಿ ಮಾನವ ಜಾತಿಯು ಅಧೋಗತಿಗಿಳಿದು ನರಕಭಾಜನರಾಗುತ್ತಿರುವರೆಂತ ಬಹಳ ಸೊಗಸಾದ ರೀತಿಗಳಲ್ಲಿ ಕ್ರೈಸ್ತ ಸಮುದಾಯಗಳಿಗೆ ಪ್ರಸಂಗಗಳನ್ನು ಮಾಡಿ ಅವರಿಂದ ಮಿಶನ್ ಫಂಡುಗಳ ಬಗ್ಗೆ ದ್ರವ್ಯವನ್ನು ಶೇಖರಿಸುವ ದಿನಗಳು ಸಂದುಹೋಗಿಯವೆ. ಹಿಂದೂ ಧರ್ಮ ಮೊದಲಾದ ಇತರ ಮತಕುಂದುಕಗಳನ್ನು ವರ್ಣಿಸಿ ಕೊಡೋಣಾಗುವ ಇಂಥಾ ಪ್ರಸಂಗಗಳು ಪ್ರಕೃತ ಜನರಾಶಿಯನ್ನು ಆಕರ್ಷಿಸಲಾರವು. ಸರ್ವರಲ್ಲಿಯೂ ಮತಐಕ್ಯದ ಭಾವನೆಯು ಪಸರಿ ಮತದೂಷಣೆಗಳಿಗೆ ಯಾರೂ ಕಿವಿಗೊಡಲಾರರು. • • • • • • • • • • •

ಜಾಪಾನಿಯ ಪೋಲೀಸಿನವರು ಲೋಕದಲ್ಲಿ ಆದರಶೀಲರೆಂದೀಗ ಖ್ಯಾತಿ ಪಡೆದಿರುವರು. ಆದರೂ ಜಪಾನಿಯ ಸರಕಾರವು ಇಂಥಾ ಪೋಲೀಸಿನವರಿಂದ ತೃಪ್ತಿ ಹೊಂದದೆ ಇನ್ನೂ ಅವರ ಶಿಕ್ಷಣವನ್ನು ಪೂರ್ಣಗೊಳಿಸಲಿಕ್ಕೆ ಸ್ಕೋಟಲೆಂಡಲ್ಲಿಯ ಪೋಲೀಸ್ ಮಾಹಿತಿಯನ್ನು ಪಡೆದು ಬರುವರೆ ತಮ್ಮಲ್ಲಿಯ ಒಬ್ಬ ಆಫೀಸರರನ್ನು ಕಳುಹಿಸಿಕೊಟ್ಟಿರುವರು. ಕುಲೀನ ಗೃಹಸ್ಥರೇ ಪೋಲೀಸು ಫೌಜುಗಳಿಗೆ ಸೇರಿರುವುದರಿಂದ ಈ ರೀತಿ ಅಲ್ಲಿಯ ಪೋಲೀಸಿನವರು ಆದರಶೀಲತೆಯುಳ್ಳವರಾಗಿರುವರು. ಜಪಾನಿನಲ್ಲಿ ಮೊದಲು ಕುಲೀನ ಕುಟುಂಬಸ್ಥರೆಲ್ಲರೂ ಖಡ್ಗಗಳನ್ನು ಧಾರಣೆ ಮಾಡುವ ಹಿಂದು ಪದ್ಧತಿಯು ಇತ್ತು. ಹೀಗೆ ಆಯುಧಗಳನ್ನು ಇವರು ಧರಿಸಬಾರದೆಂದು ಜಪಾನ ಚಕ್ರವರ್ತಿಯವರು ಅಪ್ಪಣೆಕೊಟ್ಟದ್ದರಿಂದ ಈ ಆಯುಧಗಳನ್ನು ಧರಿಸುವ ಅಭ್ಯಾಸವುಳ್ಳ ಘನವಂತ ಶ್ರೀಮಂತ ಕುಲೀನರಲ್ಲಿ [illegible]

[illegible] ಸನ್ನಾಹವುಳ್ಳವರಾದರು. [illegible] ಪೋಲೀಸಿನವರ ಆದರಶೀಲತೆಗೆ ಇದೊಂದು ಮುಖ್ಯ ಕಾರಣವಾಗಿರುತ್ತದೆ.

'ಗ್ಲಾಸು ಪೇಪರ' ಮತ್ತು 'ಸೆಂಡ್ ಪೇಪರ'. ಮರದ ಸಾಮಾಗ್ರಿ ಮೊದಲಾದವುಗಳನ್ನು [illegible] ಡಿನಿಂದ ಉಜ್ಜಿದ ನಂತರ ಅವುಗಳನ್ನು ಇನ್ನಷ್ಟು ನುಣ್ಣಗಾಗಿ ಮಾಡಲಿಕ್ಕೆ 'ಗ್ಲಾಸುಪೇಪರ್' ಯಾ 'ಸೆಂಡ್ ಪೇಪರು'ಗಳೆಂಬ ದೊರಗು ಕಲ್ಲಿನ ಯಾ ಗ್ಲಾಸಿನ ಹುಡಿ ಅಂಟಿಸಿಯಳ್ಳ ಕಾಗದವು ಈ ದೇಶದಲ್ಲಿ ಬಹಳವಾಗಿ ಉಪಯೋಗಿಸಲ್ಪಡುವುದು. ಇಂಥಾ ಸುಲಭ ವಸ್ತುವನ್ನು ಸಹಾ ಇಲ್ಲಿಯೇ ತಯ್ಯಾರಿಸಲು ಪ್ರಯತ್ನಿಸದಿದ್ದದ್ದು ಶೋಚನೀಯವೆಂತ ಮಿ ಎನ್ ಕೆ ಜೋಸಿ ಎಂಬವರು ಬರೆದು ಇವುಗಳನ್ನು ಸಿದ್ಧಪಡಿಸುವ ವಿಧಾನವನ್ನು ಸೂಚಿಸಿರುವರು.

ಒಂದು ಪಾತ್ರೆಯಲ್ಲಿ ಒಂದಿಷ್ಟು ವಜ್ರಸರಿಗೆಯನ್ನು ನೀರಿನೊಂದಿಗೆ ಮಿಶ್ರಮಾಡಿ ಅದನ್ನು ಚನ್ನಾಗಿ ಕುದಿಸಿದೊಡನೆಯೇ ದಪ್ಪನಾದ ಕಾಗದವೊಂದನ್ನು ನುಣುಪಾದ ಹಲಗೆಯ ಮೇಲಿಟ್ಟು ವಜ್ರಸರಿ ಅಂಟನ್ನು ಅದರಮೇಲೆ ಸರಿಯಾಗಿ ಲೇಪಿಸುವುದು. ಹೀಗೆ ಕಾಗದಕ್ಕೆ ವಜ್ರಸರಿ ಅಂಟನ್ನು ಲೇಪಿಸ್ಯಾದ ಕೂಡಲೇ ಗ್ಲಾಸಿನ ಹುಡಿ ಅಥವಾ ಹೊಯಿಗೆಯನ್ನು ಅದರಮೇಲೆ ಒಂದೇ ಪ್ರಕಾರವಾಗಿ ಚಿಮುಕಿಸುವುದು. ಇದಾದ ನಂತರ ಈರೀತಿ ತಯ್ಯಾರಿಸಿದ ಕಾಗದಗಳನ್ನು ರಾಶಿರಾಶಿಯಾಗಿ ಬಿಸಿಲಲ್ಲಿ ಒಣಗಿಸಬೇಕು. ಸಾಧಾರಣ ಅರ್ಧ ಗಂಟೆ ತನಕ ಈ ಕಾಗದಗಳನ್ನು ಬಿಸಿಲಿನಲ್ಲಿ ಒಣಗಿಸಿದ ಮೇಲೆ ಮರದ ಪ್ರೆಸ್ಸುಗಳಲ್ಲಿ ಅವುಗಳನ್ನು ಒತ್ತಿಟ್ಟು ನಂತರ ಬೇಕಾದ ಪರಿಮಾಣಗಳಲ್ಲಿ ತುಂಡುಮಾಡಿ ವಿಕ್ರಯಿಸಬಹುದು.

ಜೀನಸುಗಳ ಧಾರಣೆ, ಮಂಗಳೂರು

ಕೊಳೂರು ಮಸ್ಸತಿ ಅಕ್ಕಿ , , , , , ,	4—6—0
ಗುಡ್ಡು ಮಸ್ಸತಿ , , , , , , ,	4—1—0
ಮಸ್ಸತಿ , , , , , , , , , , , , ,	3—14—0
ವಕ್ಕಲ ಸುಗ್ಗಿ , , , , , , , , ,	3—15—0
ಸುಗ್ಗಿ , , , , , , ,	3—12—0
ಮಸ್ಸತಿ ಬೆಳ್ತಿಗೆ , , , , , , , , ,	4—11—0
ರಂಗೂನ್ ಬೆಳ್ತಿಗೆ ಗೋಣಿ , , ,	7—12—0
ಹುರುಳಿ ಗೋಣಿ ೧ ಮುಡಿ ೨೮ , ,	5—12—0
ಉಪ್ಪು ಗೋಣಿ ೧೮ , , , , , , ,	3—8—0
ಕೊಪ್ರಿ ಖಂಡಿ ೧೮ , , , , , , ,	105—0—0
ಕೊಪ್ರಿ ಎಣ್ಣೆ ಮಣ , , , , , , ,	7—7—0
ಕಾಪಿ ಖಂಡಿ ೧೮ , , , , ,	175—0—0
ಕಾಳು ಮೆಣಸು ಖಂಡಿ , , , , ,	118—0—0
ಹೊಸ ಚಿಳಿ ಗೋಟು ಅಡಿಕೆ , , ,	80—0—0
ಕರಿ ಗೋಟು , , , , , , , , , ,	65—0—0
ಏಲಕ್ಕಿ ಮಣ ೧೮ , , , , , ,	28—0—0

ಅಬಲಾ ಸಂಜೀವಿನಿ ಗುಳಿಗೆಗಳು.

ಇದು ಸ್ತ್ರೀ ಯರ ಮಾಸಿಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮ ಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ. ಮಾಸಿಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದರೂ ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ. ಗರ್ಭಕೋಶದ ರೋಗಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ. ದೇಹದಲ್ಲಿ ಯಾವದೊಂದು ಅಕ್ರಮ ಗುರುತು ಕಂಡುಬಂದಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ [illegible] ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು [illegible] ಇರಗೊಡಿಸಬೇಕು. ಉಪಯೋಗಿಸಿದವರು [illegible] ಶಿಫಾರಸು ಮಾಡಿರುವದರಿಂದ ಅವುಗಳ [illegible] ಮಿತವಾಗಿದೆ. ವಿಶೇಷ ಮಾಹಿತಿಯು [illegible] [illegible]

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಎಣ್ಣೆ. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ.

ಬಾಟ್ಲಿ ಒಂದರ 8 ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ

ಬಾಟ್ಲಿ ಒಂದರ 8 ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ರೆಬೀಳುವದು

ಬಾಟ್ಲಿ ಒಂದರ 6 ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ. ಇದರಿಂದ ಮೆದುಳು ತಂಪಾಗುವದು ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ.

ಬಾಟ್ಲಿ ಒಂದರ 6 ಆಣೆ

ಮಾಲತಿ ಅತ್ತರು.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು ಇದರ ಪರಿಮಳವು ಹೆಚ್ಚು ದಿವಸಗಳ ವರೇಗೆ ಹೋಗುವದಿಲ್ಲ ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಎಲ್ಲಾ ಅತ್ತರುಗಳಿಗಿಂತ ಇದು ಉತ್ತಮ ಬಾಟ್ಲಿ ಒಂದರ ಕಿಮ್ಮತು 0—12—0

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕೆ

ಜಿ. ಗೋಪಾಲ್ ರಾವ್

ನಂಬ್ರ 3 ಕಂಟ್ರಾಕ್ಟರ್ ಬಿಲ್ಡಿಂಗ್ ಗಿರಗಾಂವ ಮುಂಬಯಿ

ಇದನ್ನು ಓದಿವರೆ ತಿಳಿಯುತ್ತೆ! ತರಿಸಿದರೆ ಸಿಕ್ಕುತ್ತೆ

ಸಮಸ್ತರಿಗೂ ಅನುಕೂಲವಾದ, ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರೂ ದೊಡ್ಡವರೂ ನೋಡತಕ್ಕ, ಕ್ರಯವಿಚಾರ, (ಬೆಳ್ಳಿ, ಬಂಗಾರ, ರತ್ನಗಳ) ಪರಿಶೀಲನೆ, ಕಟಿವಾಯು, ಜ್ವರ, ವಾತಪಿತ್ತವಿಚಾರ, ನಾಡೀಜ್ಞಾನ ಮತ್ತು ಚಿಕಿತ್ಸೆ

ಲಾಭವನ್ನು ಸಂಪಾದಿಸುವ ಬಗ್ಗೆ ಕಾಗದ, ಸೀಸದಕಡ್ಡಿ ಇಂಕರಿ ಬೆಂಕಿಪೆಟ್ಟಿಗ ಮೊದಲಾದ ಅನೇಕ ವಿಷಯಗಳು, ತನುಮನೋಲ್ಲಾಸವನ್ನೀಯುವ ತೈಲ, ಲೆವೆಂಡರ್ ಸೋಪು, ಅತ್ತರ್, ಪನ್ನೀರು, ಷರ್ಬತ್, ಗುಲ್‌ಕನ್, ಕುಸುಮಗಳ ವಿವೇಚನೆ, ರಂಜಿಸುತ್ತಾ ನೋಟಕರಿಗೆ ಆನಂದವನ್ನೀಯುವ ಗಿಲೀಟ್, ಪಾಲೀಷ್ ವಾರ್ನೀಷ್ ಮುಂತಾದ ಬಣ್ಣದ ವಿಷಯಗಳು

ಗಣನೆಗೆ ಮಿಗಿಲಾದ ಆಕಾಶವಾಣಿ ಮೊದಲಾದ ಅನೇಕ ವಿಷಯಗಳು ಮೊದಲನೇ ಭಾಗದಲ್ಲಿಯೇ ವಾಚಕರ ಹಸ್ತಗತವಾಗುವುದಕ್ಕಿರುವ ಪುಸ್ತಕವು ಯಾವುದು? "ಸಚಿತ್ರಕಲಾತರಂಗ" ಹಾಗಾದರೆ ಬೇಗನೆ ಬರೆದು ತರಿಸಿಕೊಳ್ಳಿರಿ! ಕ್ರಯ ಪ್ರತಿ ೧ಕ್ಕೆ ೧—೪—೦ ವಿ ಪಿ ಮೂಲಕ ೧—೬—೦

(೧) ವಿಳಾಸ—ಮ್ಯಾನೇಜರ್ ಯಸ್ ಜಿ ಯನ್ ಪ್ರೆಸ್
೧೭೮ ಅರಳೆಪೇಟೆ, ಬೆಂಗಳೂರು ಸಿಟಿ

ಅಥವಾ

ಏಜಂಟರು —(೨) ದಿ. ಊಲನ್ ಮಾರ್ಟ್,
ನಂ|| ೧, ಮಂಗಳೂರು (ದ. ಕ)

ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ

BERNA WATCH COMPANY.

ಬರ್ನಾ ವಾಚು ಕಂಪೆನಿ.

ಕರೆ ಗಡಿಯಾರುಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ತಾನದಲ್ಲಿರುವದು ಗೋರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಗ್ಗವಾದ ಬೆಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿ ಕೊಡುವವು

ನಮ್ಮ 'ಮೆಕ್ಸಿಮ್' ವಾಚನ್ನು ಜಂಪಸಿಯಿಂದ ಕೊಂಡುಕೊಳ್ಳಿರಿ
ನಿಕಲ್ ಕೇಸಿನಲ್ಲಿ ರೂ ೧೦-೦-೦
ಬೆಳ್ಳಿ ಕೇಸಿನಲ್ಲಿ ರೂ ೧೪ ೮ ೦
ನಮ್ಮ 'ನ್ಯೂ ಡಿ ಪಿ'
ನಿಕಲ್ ಕೇಸಿನಲ್ಲಿ ರೂ ೧೪ ೦ ೦
ಬೆಳ್ಳಿ ಕೇಸಿನಲ್ಲಿ ರೂ ೧೬ ೮-೦
ಕೆಟಲಾಗನ್ನು ಉಚಿತವಾಗಿ ಕಳುಹಿಸಿ ಕೊಡುವೆವು



ನಮ್ಮ 'ಚಾರ್ಟರ್'
ನಿಕಲ್ ಕೇಸಿನಲ್ಲಿ ರೂ ೧೭-೦ ೦.
ಬೆಳ್ಳಿ ಕೇಸಿನಲ್ಲಿ ರೂ ೨೧-೦ ೦.
ನಮ್ಮ 'ವರ್ಡಲಿ.'
ನಿಕಲ್ ಕೇಸಿನಲ್ಲಿ ರೂ ೧೬-೦ ೦.
ಸಿಲ್ವರ್ ಕೇಸಿನಲ್ಲಿ ರೂ. ೨೩ ೮-೦.
ನಮ್ಮ 'ಬೆಸ್ಟ್'
ನಿಕಲ್ ಕೇಸಿನಲ್ಲಿ ರೂ. ೨೧-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೭-೦-೦.

ಎಲ್ಲಾ ಗಡಿಯಾರುಗಳು ಜಂಟ್ಸ್ ಸ್ಯಾಜಿನಲ್ಲಿರುವವು ವಾಚುಗಳನ್ನು ೪ ಆಣೆ ಚ್ಚಿಗೆ ಖರ್ಚಿನಲ್ಲಿ ವಿ ಪಿ ಮಾಡಿ ಕಳುಹಿಸುವೆವು. ನಂಬ್ರ 59 ಎಸ್‌ಪ್ಲೆನೇಡ್ ರೋಡ್ ಮುಂಬಯಿ ಆಫೀಸಿನಲ್ಲಿಯೂ ಮತ್ತು ಹಿಂದೂಸ್ಥಾನದಲ್ಲಿರುವ ಎಲ್ಲಾ ವಾಚು ವ್ಯಾಪಾರಿಗಳಲ್ಲಿಯೂ ಕ್ರಯಕ್ಕೆ ದೊರಕುವವು

ಅನುಪಾನಪತ್ರ ಬಾಟ್ಲಿಯೊಂದಿಗಿರುವುದು. { **ಸಿದ್ಧಲಕ್ಷ್ಮೀ ವಿಲಾಸ.** } ಕ್ರಯ ಬಾಟ ೧ಕ್ಕೆ 12 ಆಣೆ.

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ. ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು. (ಆಸನದಲ್ಲಿ) ಗುದದ್ವಾರದ ಹತ್ತರ ದೀಳು ವೆಂಥಾ ಕ್ರಿಮಿಗಳೂ, ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವೃಷಾವಿ ಬಾವುಗಳೂ, ಖಜ್ಜಿ ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. ರಕ್ತಶುದ್ಧಿಗೆ ಇದು ದಿವ್ಯ ಔಷಧವಾಗಿರುವದು.

ಈ ಔಷಧಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು. ಮುಲ್ಕಿ [illegible] ಮಂಗಳೂರು. [illegible] ಇವರಲ್ಲಿ ದೊರಕುವದು.

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು. ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು. ಲೇಂಬು, ಕಿತ್ತಳೆ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟೀವ್ ಕಾಯಿಪಲ್ಯಗಳೂ (ತರಕಾರಿ) ಕುಂಡಾಯ್ಲು, ಹಾರಾ ವಗೈರೆ ಹುವ್ವುಗಳು. ಬೇಕಾದವರು ಬರೆದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಎಮ್. ದ್ವಾವಪ್ಪ ಅಂಡ್ ಸನ್ಸ್,
[illegible]

ಅನುಭವಸಿದ್ಧವಾದ ವನೌಷಧಗಳು

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಅಣೆ.

೨. ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟುವಿಕೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ

೫ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು ಪೌಷ್ಟಿಕವಾಗಿದೆ. ರಾತಲಿಗೆ ೨ ರೂ

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗೆಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ ೮ ಅಣೆ

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಅಣೆ

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮೊದಲಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

ಕಳೆದ ಆದಿತ್ಯವಾರ ಈ ಉದ್ದಿಶ್ಯದಿಂದ ಕಲ್ಕತ್ತೆಯ ಹಿಂದೂ ಪ್ರಮುಖರು ಹೆಚ್ಚುಕಡಿಮೆ ೫೦,೦೦೦ [illegible] ರಿಗೆ ವಿಶೇಷ [illegible] ಕೂಡಿರುವ [illegible]ವನ್ನು ಮಾಡಿಸಿದ್ದಲ್ಲದೆ ಪ್ರತಿಯೊಬ್ಬನಿಗೆ ಒಂದೊಂದು ವಸ್ತ್ರವನ್ನು ಕೊಡುವವರಾದರು. ಕಲ್ಕತ್ತ ಹ್ಯಾಕೋರ್ಟಿನ ಚೀಫ್ ಜಸ್ಟಿಸ್ ಮಾನವಂತ ಸರ್ ಲೊರೆನ್ಸ್ ಜೆಂಕಿನ್ಸ್, ಹ್ಯಾಕೋರ್ಟ್ ಜಡ್ಜ್ ಫ್ಲೆಚ್ಚರ್ ಮೊದಲಾದ ಯುರೋಪಿಯರು ಈ [illegible]ವನ್ನು ನೋಡಿ ಬಹಳ ಆನಂದಪಟ್ಟರು. [illegible] ವ್ಯವಸ್ಥಾಕ್ರಮವೆಲ್ಲವೂ ದರ್ಭಂಗದ ಮಹಾರಾಜರವರಿಂದ ಏರ್ಪಡಿಸಲ್ಪಟ್ಟಿತು. [illegible] ಮೊದಲಾದ್ದರ ಖರ್ಚು ೪೦ ಯಾ ೬೦ ಸಾವಿರಕ್ಕೂ ಮಿಕ್ಕಿರುವುದಂತೆ.

ಮುಂಬಯಿ ಮೊದಲಾದ ಹಿಂದೂಸ್ಥಾನದ ಪ್ರಮುಖ ಪಟ್ಟಣಗಳಲ್ಲಿಯೂ ಹಳ್ಳಿ ಊರುಗಳಲ್ಲಿ ಸಹಾ ಈ ದಿನವು ಆಚರಿಸಲ್ಪಟ್ಟಿತು.

~~~~~~

ಸಂಯುಕ್ತ ಗೌಡಸಾರಸ್ವತ ಪರಿಷದದಲ್ಲಿ ಮಂಜೂರಾದ ನಿರ್ಣಯಗಳ ಸಾರಾಂಶ ಇತ್ಯಾದಿ. ಪರಿಷದವು ಕೂಡಿದ ಪ್ರಥಮ ದಿನ ಅಧ್ಯಕ್ಷರಾದ ರಾ। ಎಸ್। ಟಿ ಬೆಂಡಾರಿಗಳವರ ಭಾಷಣದ ನಂತರ ದಕ್ಷಿಣ ಮಹಾರಾಷ್ಟ್ರದಲ್ಲಿ ಆದ ರಾಜದ್ರೋಹಕರ ಕ್ರೂರಕೃತ್ಯಗಳನ್ನು ತುಚ್ಛೀಕರಿಸಿ ಆ ವಿಷಯ ಒಂದು ನಿರ್ಣಯವು ಸಭೆಯಲ್ಲಿ ಮಂಜೂರಾಯಿತು.

ಮರುದಿನದ ಸಭೆಯಲ್ಲಿ ಪರಿಷದಿನ ವ್ಯವಸ್ಥಾಕ್ರಮಗಳನ್ನು ಸೂಚಿಸುವ ನಿರ್ಣಯವನ್ನು ಮುಂಬಯಿಯ ರಾ। [illegible] ದಾಭೋಲಕಾರರವರು ಸಭೆಯ ಮುಂದಿಟ್ಟರು. [illegible]

[illegible] ಗೌಡಸಾರಸ್ವತ [illegible] ಸಾರಸ್ವತ ಸಮಾಜದ [illegible] ಕೂಡಿಸಿಕೊಂಡು ಪರಸ್ಪರ ಸಂಪರ್ಕ ಸಮ್ಮಂಧ [illegible] ಮುಂತಾದವುಗಳನ್ನು ಮಾಡುವುದರಲ್ಲಿ [illegible]ವಿಲ್ಲದವರನ್ನು ಮಾತ್ರ ಈ ಪರಿಷದಿಗೆ ಸೇರಿಸಿ[illegible]. ಇವೇ ಮೊದಲಾದ ಇನ್ನು ಕೆಲವು ಪರಿಷದಿನ ವ್ಯವಸ್ಥಾಕ್ರಮಗಳು ಈ ನಿರ್ಣಯವನ್ನೊಳಕೊಂಡಿದ್ದವು. ಸಾರಸ್ವತ ಸಮಾಜದ ಆಯಾ ಶಾಖೆಗಳ ೬೦ ಜನ ಪ್ರತಿನಿಧಿಗಳಿಂದ ಈ ನಿರ್ಣಯವು ಮಂಜೂರುಮಾಡಲ್ಪಟ್ಟಿತು.

ಶನಿವಾರ ದಿನ ಹೆಚ್ಚುಕಡಿಮೆ ೫೦೦ ಜನ ಪರಿಷದಿಗೆ ಬಂದಿರುವ ಸಾರಸ್ವತ ಸಮಾಜದ ಆಯಾ ಶಾಖೆಗಳ ಪ್ರತಿನಿಧಿಗಳಿಗೂ ಪ್ರೇಕ್ಷಕರಿಗೂ ಬಹಳ ವೈಭವದಿಂದ ಸಹಪಂಕ್ತಿ ಭೋಜನವಾಯಿತು. ಭೋಜನ ನಂತರ ಸಭಾಕಾರ್ಯವು ಪ್ರಾರಂಭಿಸಿತು. ಈ ದಿನ ಗೋವೆಯ ವ್ಯಾಕೌಂಟ್ [illegible]ತ್ಮಾರಾಮ್ ವಾಸುದೇವ ಪ್ರಭುದೆಸೈಗಳವರು ಸಭೆಗೆ ದಯಮಾಡುವವರಾದರು. ಗೌಡಸಾರಸ್ವತ ಬ್ರಾಹ್ಮಣ ಸಮಾಜದಲ್ಲಿ ಎಲ್ಲಾ ಶಾಖೆಗಳ ಪರಸ್ಪರ ಸಂಪರ್ಕದಿಂದ ಐಕ್ಯವನ್ನುಂಟುಮಾಡಬೇಕೆಂಬ ಮತ್ತು ಈ ಬಗ್ಗೆ ಸಮಾಜದ ಸರ್ವ ಸಾಮಾನ್ಯರಲ್ಲಿ ತಕ್ಕ ಶಿಕ್ಷಣವನ್ನು ಪಸರಿಸಬೇಕೆಂಬುವ ನಿರ್ಣಯವನ್ನು ಪ್ರಭುದೆಸೈಗಳವರು ಸಭೆಯಲ್ಲಿ ಸೂಚಿಸಿದರು. ಈ ನಿರ್ಣಯವು ಕ್ರಮಪ್ರಕಾರ ಮಂಜೂರು ಮಾಡಲ್ಪಟ್ಟಿತು.

ಈ ಪರಿಷದದ ಮುಖ್ಯ ಉದ್ದಿಶ್ಯಗಳನ್ನು ನೆರವೇರಿಸುವ ಉಪಸಭೆಗಳನ್ನು ಸಾರಸ್ವತ ಸಮಾಜದವರು ಇರುವ ಎಲ್ಲಾ ಕಡೆಗಳಲ್ಲಿ ಸ್ಥಾಪಿಸಬೇಕೆಂಬ ನಿರ್ಣಯವು ಮುಂಬಯಿಯ [illegible]ವರಿಂದ ಸೂಚಿಸೋಣಾಗಿ ಸಭೆಯಲ್ಲಿ ಸರ್ವಸಮ್ಮತವಾಯಿತು.

ಸಮಾಜದ ಹುಡುಗ ಹುಡುಗಿಯರು ಆರೋಗ್ಯದೃಢಕಾಯರಾಗುವಂತೆ [illegible] ಮಕ್ಕಳ ವ್ಯಾಯಾಮ ಶಿಕ್ಷಣಕ್ಕೆ ತಕ್ಕ [illegible]ಕೊಡಬೇಕೆಂತಲೂ, ಪುರೋಹಿತರ ಮತ ಶಿಕ್ಷಣದ ಬಗ್ಗೆ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಬೇಕೆಂತಲೂ, ಜಾತಿಯ ಹುಡುಗ ಹುಡುಗಿಯರೆಲ್ಲರಿಗೂ ಪ್ರಾಥಮಿಕ ಮತ್ತು ಧಾರ್ಮಿಕ ಶಿಕ್ಷಣಗಳೂ ಬಾಲಿಕೆಯರಿಗೆ ಗೃಹಕೃತ್ಯಗಳನ್ನು ನಡಿಸಲು ಬೇಕಾದ ಶಿಕ್ಷಣವೂ ದೊರಕುವಂತೆ ಏರ್ಪಡಿಸಬೇಕೆಂದೂ ನಿರ್ಣಯಗಳು ಸಭೆಯ [illegible]ದವು. ಸಾರಸ್ವತರಲ್ಲಿ ಬಡವರಾದವರಿಗೆ ತಮ್ಮ ಮಕ್ಕಳ ಶಿಕ್ಷಣ ಸಹಾಯಾರ್ಥವಾಗಿಯೂ ಅನಾಥವಿತಂತುಗಳ ಶಿಕ್ಷಣದ ಬಗ್ಗೆಯೂ ಒಂದು ದ್ರವ್ಯಸಹಾಯ ನಿಧಿಯನ್ನು ಸ್ಥಾಪಿಸಬೇಕೆಂಬ ನಿರ್ಣಯವು ಪುನೆಯಲ್ಲಿಯ ರಾ। ಶಿರೋಡ್ಕರ ಎಂಬವರಿಂದ ಸಭೆಯ ಮುಂದಿಡಲ್ಪಟ್ಟು ಸಭೆಯಲ್ಲಿ ಸರ್ವಸಮ್ಮತವಾಯಿತು. ಈ ಸಂದರ್ಭದಲ್ಲಿ ರಾ। ದಾಭೋಲಕಾರರವರು ತಮ್ಮ ಕುಟುಂಬದವರಿಂದ ಜಾತಿ ಅಭಿವೃದ್ಧಿ ಸಾಧನೆಗಾಗಿ ಪ್ರತ್ಯೇಕಿಸಿಟ್ಟ ರೂಪಾಯಿ ೬೦,೦೦೦ಕ್ಕೆ ಇನ್ನು ೪೦,೦೦೦ ಕೂಡಿಸಿರುವೆನೆಂದು ಸಭೆಯಲ್ಲಿ ಅಪ್ಪಣೆ ಕೊಡುವವರಾದರು. ಹುಡುಗ ಹುಡುಗಿಯರ ವಿವಾಹ ಪ್ರಾಯವನ್ನು ನಿರ್ಣಯಿಸುವುದರಲ್ಲಿ ಬಹಳ ಅಭಿಪ್ರಾಯ ಭೇದವಿದ್ದದ್ದರಿಂದ ಈ ಸಮ್ಮಂಧವಾದ ನಿರ್ಣಯವನ್ನು ಇತ್ಯರ್ಥಿಸದೆ ಮುಂದಿನ ಸಭೆಗಾಗಿ ಬಾಕಿ ಇಟ್ಟಿರುವರು. ಮದಿವೆ ಉಪನಯನಾದಿಗಳ ಬಗ್ಗೆ ಮಾಡುವ ವೆಚ್ಚಗಳನ್ನು ಕಡಿಮೆ ಮಾಡುವ ಬಗ್ಗೆ ಮತ್ತು ಗೌಡ ಸಾರಸ್ವತ ಸಮಾಜದವರ ಚರಿತ್ರೆಯನ್ನು ಬರೆಯಲಿಕ್ಕೆ ತಕ್ಕ ಸಂಗ್ರಹವನ್ನು ಮಾಡಬೇಕೆಂಬುವ ನಿರ್ಣಯಗಳು ಸಭೆಯಲ್ಲಿ ಮಂಜೂರು ಮಾಡಲ್ಪಟ್ಟು [illegible] ಸಭೆಯು ಮುಕ್ತಾಯವಾಯಿತು.

ಆದಿತ್ಯವಾರದ [illegible]
~~~~~~

[illegible] ದ್ಧ ಶ್ರೀ ಅನಂತರಾಯ [illegible] ಕಮಿಟಿಯ ಕಾರ್ಯದರ್ಶಿಗಳಾಗಿರುವರು.

[illegible] ಆತ್ಮಾರಾಮ ವಾಸುದೇವ ಪ್ರಭುದೇಸ್ಸಾ ಯರವರ [illegible] ಮೇರೆಗೆ ಸಂಯುಕ್ತ ಗೌಡಸಾರಸ್ವತ [illegible] ಗೋಷ್ಠಿಯಲ್ಲಿ ಬರುವ ವರುಷ ಕೂಡುವುದು

ವಿದೇಶ ವೃತ್ತಾಂತ.

ಟ್ರಾನ್ಸ್ವಾಲಿನಿಂದ ಭಾರತೀಯರನ್ನು ಬಹಳ ಹೆಚ್ಚಾಗಿ ಹಿಂದುಸ್ಥಾನಕ್ಕೆ ಗಡಿಪಾರುಮಾಡುತ್ತಿರುವರಾಗಿ ಕೇಳುತ್ತೇವೆ.

ಕೀರ್ತಿಶೇಷ ಚಕ್ರವರ್ತಿಗಳವರ ದಫನಸಂಸ್ಕಾರವು ತೀರಿದ ನಂತರ ಹಿಂದುಸ್ಥಾನದ ಮಾಜಿ ಸರ್ವಸೇನಾಧಿಪತಿಗಳಾದ ಕಿಚ್ನರ್ ಪ್ರಭುಗಳಿಗೂ ಜರ್ಮನಿಯ ಕೈಸರರವರಿಗೂ ಬಕಿಂಗ್ಹಮ್ ಅರಮನೆಯಲ್ಲಿ ಪರಸ್ಪರ ಸಂದರ್ಶನೆಯಾಯಿತು.

ಜೋರ್ಜ್ ಚಕ್ರವರ್ತಿಗಳವರು ರಾಜ್ಯಪರಿಪಾಲನೆಯನ್ನು ವಹಿಸಿದ ಗೌರವಾರ್ಥಕ್ಕಾಗಿ ಬ್ರಿಟಿಷ್ ನೌಕಾಘಟೆಯ ಅಧಿಕಾರಿಗಳು ನೌಕಾಖಾತೆಯ ಒಂದಿವಾನದಲ್ಲಿ ಮೇ 23ನೇ ತಾರೀಕಿನಲ್ಲಿ 3 ತಿಂಗಳುಗಳಿಗಿಂತ ಹೆಚ್ಚಿನ ಸಜೆ ಪಡೆಯುವಿದ್ದವರನ್ನು ಅವರ ಶಿಕ್ಷೆಗಳಿಂದ ವಿಮೋಚನ ಪಡಿಸುವರೆಂಬುದಾಗಿ ಕೇಳುತ್ತೇವೆ

ಜೋರ್ಜ್ ಚಕ್ರವರ್ತಿಗಳವರು ಸಿವಿಲಿಯನ್ ಕೈದಿಗಳ ಒಂದು ಹಪ್ತೆಯಿಂದ ಮೂರು ತಿಂಗಳುಗಳ ವರೆಗಿನ ಶಿಕ್ಷೆಗಳನ್ನು ವಜಾಪಡಿಸಿರುವರು

ಜೋರ್ಜ್ ಚಕ್ರವರ್ತಿಗಳವರು ತಮ್ಮ ಪಿತವರ್ಯರ ಮರಣದಲ್ಲಿ ಬಹಳ ಸಂತಾಪವನ್ನೂ ದುಃಖವನ್ನೂ ತಾಳಿ ರಾಜಕುಟುಂಬಕ್ಕೆ ಸಹಸಂತಾಪ ಸೂಚನೆಯನ್ನು ಕಳುಹಿಸಿಕೊಟ್ಟು ಎಡ್ವರ್ಡ್ ಚಕ್ರವರ್ತಿಗಳ ದಫನ ಸಂಸ್ಕಾರ ದಿನವನ್ನು ಬಹಳ ದುಃಖಾತಿಶಯಗಳಿಂದ ಆಚರಿಸಿದ ಸಲುವಾಗಿ ಇಂಗ್ಲಾಂಡಿನಲ್ಲಿಯೂ ಸಾಮ್ರಾಜ್ಯದ ಇತರ ಕಡೆಗಳಲ್ಲಿಯೂ ಇರುವ ಪ್ರಜಾವರ್ಗಗಳೆಲ್ಲರಿಗೂ ಪ್ರೀತಿ ಪೂರ್ವಕ ನಿರೂಪಣೆಗಳನ್ನು ಬರೆದು ಕಳುಹಿಸಿರುವರು

ದಕ್ಷಿಣ ಆಫ್ರಿಕದ ಯುನಿಯನ್ ಪಾರ್ಲಿಮೆಂಟ್ ಸಭೆಯನ್ನು ತೆರೆಯುವರೆ ಡ್ಯೂಕ್ ಒಫ್ ಕನೊಟರವರು ಹೋಗುವರಂತೆ.

ಅಮೇರಿಕದ ಸಂಯುಕ್ತ ಸಂಸ್ಥಾನದ ನ್ಯೂಯೋರ್ಕ್ ಪಟ್ಟಣದಲ್ಲಿ ಒಬ್ಬನು ಹಿಂದೂ ಯೋಗಿ ಎಂದೆನ್ನಿಸಿಕೊಂಡು ರಾಜಯೋಗವನ್ನು ಕಲಿಸಲಿಕ್ಕೆ ಒಂದು ಶಾಲೆಯನ್ನು ಏರ್ಪಡಿಸಿಕೊಂಡಿದ್ದನು. ಅೀ ಪವನುಗಳಂತೆ ಈತನಿಗೆ ವೇತನ ಕೊಡುವ ೧೫೦ ಮಂದಿ ಶಿಷ್ಯರಿದ್ದರು. ಈತನು ದುರಾಚಾರಿಯಾಗಿರುವದೆಂಬ ವರ್ತಮಾನವನ್ನು ಕೆಲಿಫೋರ್ನಿಯಾದಲ್ಲಿಯ ಒಬ್ಬ ಶ್ರೀಮಂತ ಕುಲದ ವಿದ್ಯಾರ್ಥಿನಿಯು ಪೋಲೀಸಿನವರಿಗೆ ತಿಳಿಸಿದಳು. ಈತನು ತನ್ನನ್ನು 'ಹಿಪ್ನೊಟಿಕ್' ಎಂಬ ಕಣ್ಣು ಕಟ್ಟುವ ಮಾಯಾವಿದ್ಯೆಯಿಂದ ಆತನ ವಶತೆಯಲ್ಲಿ ಇರುವಂತೆ ಬಲತ್ಕಾರಪಡಿಸಿದನೆಂದು ಪೋಲೀಸಿನವ[illegible] ಈಕೆಯು ಹೇಳುವವಳಾದಳು. ಈ [illegible]ವನ್ನು ತಿಳಿದು ಪೋಲೀಸಿನವರು ಈತನ ಶಾಲೆ [illegible] ನೋಡಿದ್ದ[illegible]ಅಲ್ಲಿ ಕೆಲವು ಮಂದಿ [illegible] ಒಂದೊಂದು ಅತಿ ಕಿಳ್ಳಗಾದ ಅರುವೆ [illegible]

[illegible] ತುಕೊಂಡು ಮಂತ್ರಹಾಕುತ್ತಿದ್ದನು. [illegible]ಯ ಮಧ್ಯಭಾಗದಲ್ಲಿರುವ ಒಂದು ವಿದ್ಯುಚ್ಛಕ್ತಿಯ ಯಂತ್ರದಿಂದ ವಿದ್ಯುಲ್ಲತೆಯ ಕಿಟಿಗಳು ಆಗ್ಗಾಗ್ಗೆ ಹಾರಿಸಲ್ಪಟ್ಟು ಹುಡುಗಿಯರೆಲ್ಲರೂ ಸ್ಮೃತಿ ಇಲ್ಲದೆ ಅಲ್ಲಲ್ಲಿ ಅವನ ಇಷ್ಟಾನುಸಾರ ವರ್ತಿಸುವಂತೆ ಮಾಯಾವಿದ್ಯೆಯನ್ನು ನಡಿಸುತ್ತಿದ್ದನು ಈತನನ್ನು ವಿಚಾರಿಸಿದ್ದಲ್ಲಿ ತಾನೊಬ್ಬ ವೇದಾಂತಿಯಾಗಿರುವೆನೆಂದು ಹೇಳುತ್ತಿದ್ದನು. ಪೋಲೀಸಿನವರು ಈತನನ್ನು ಪೂರ್ಣವಾಗಿ ಪರೀಕ್ಷಿಸಿ ಈತನು ಹಳೆ ಅಪರಾಧಿ ಪಿರೆರಾ ಬರ್ನಾರ್ಡನಾಗಿರುವನೆಂದು ಗುರುತಿಸಿ ಈತನನ್ನು ಕೈದುಮಾಡಿ ಮೆಜಿಸ್ಟ್ರೇಟರ ಮುಂದೆ ಹಾಜರು ಪಡಿಸಿರುವರು

ಉತ್ತರ ಹಿಂದುಸ್ಥಾನ.

ಹಿಂದೂಸ್ಥಾನದಲ್ಲಿ ರೈತರುಗಳ ವ್ಯಾಪಾರವನ್ನು ಮಾಡುವ [illegible]ವನ್ನು [illegible] ಸರಕಾರದವರು ಪರ್ಯಾಲೋಚಿಸುತ್ತಿರುವರು

ಇಡೀ ಹಿಂದೂಸ್ಥಾನದಲ್ಲಿ ಸರಕಾರ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಗತವರ್ಷದಲ್ಲಿ [illegible] ಹೆಚ್ಚಾಗಿ ಸರ್ಕಾರಿಯಾಗಿಟ್ಟ ಹಣವು ೭ ಕೋಟಿ ರೂಪಾಯಿಗಳಾಗಿರುವುದು ಇದಕ್ಕಿಂತ ಮೊದಲಿನ ವರುಷದಲ್ಲಿ ಇದು ೫ ಕೋಟಿಯಾಗಿತ್ತು

ಬೇಸಿಗೆಯ ಬಿಸಿಯೊಡನೆ ಪ್ಲೇಗು ಮರಣಗಳು ಹಿಂದೂಸ್ಥಾನದಲ್ಲಿ ಕಡಿಮೆಯಾಗುತ್ತಿರುವವು ಈ ತಿಂಗಳ ತಾ ೭ಕ್ಕೆ ಅಂತ್ಯವಾಗುವ ವಾರದಲ್ಲಿ ೧೧,೫೪೮ ಪ್ಲೇಗು ಮರಣಗಳಿದ್ದವು. ಇದಕ್ಕೆ ಮುಂಚಿನ ವಾರ ಈ ಸಂಖ್ಯೆಯು ೧೪,೦೭೭ ಆಗಿತ್ತು

ಬರ್ದವಾನದ ಮಹಾರಾಜರವರು ಕಲಿಕತ್ತೆಯ ಮೈದಾನಿನಲ್ಲಿ ಗತಿಸಿದ ಚಕ್ರವರ್ತಿಗಳ ಅಶ್ವಾರೂಢ ಪ್ರತಿಮೆಯನ್ನು ಚಕ್ರವರ್ತಿಗಳ ಸ್ಮರಣಾರ್ಥವಾಗಿ ಪ್ರತಿಷ್ಠಿಸುವರೆ ವ್ಹಾಯಿಸರಾಯ ಪ್ರಭುಗಳ ಕೂಡೆ ಅಪ್ಪಣೆ ಕೇಳಿರುವರಂತೆ.

ಕಲಿಕತ್ತೆಯಲ್ಲಿ ಮುನಿಸಿಪಾಲಿಟಿಯ ತೋಟಿಗಳು ಮೊದಲಾದ ಕೀಳು ಕೆಲಸದವರು ತಮಗೆ ಸಿಕ್ಕುವ ಮುಂಗಾಯಿ ಬತ್ತೆಯನ್ನು ಮುನಿಸಿಪಾಲಿಟಿಯವರು ನಿಲ್ಲಿಸಿ ಬಿಟ್ಟದ್ದರಿಂದ ಯಾರೂ ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು ಕಲಿಕತ್ತೆ ಮುನಿಸಿಪಾಲಿಟಿಯ ಈ ಕೀಳು ನೌಕರರ ಸಂಖ್ಯೆಯು ೬೦೦೦ ವಾಗಿರುವುದು ಇವರು ಕೆಲಸಕ್ಕೆ ಹೀಗೆ ಬಾರದೆ ನಿಂತದ್ದರಿಂದ ಪಟ್ಟಣವು ಕಸ ಮುಂತಾದ ಕೊಳೆಯಿಂದ ತುಂಬಿರುವುದಂತೆ. ತಾ ೨೩ರ ವರೆಗೆ ಇವರು ಕೆಲಸಕ್ಕೆ ಬರಲಿಲ್ಲ ಕೊಳೆಯಿಂದ ಅಂಟು ರೋಗಗಳು ತಲೆದೋರಲಿಕ್ಕೆ ಸಾಕೆಂತ ಪಟ್ಟಣ ನಿವಾಸಿಗಳು ಶಂಕೆಪಡುತ್ತಿರುವರು.

ರಾಜದ್ರೋಹಪರವಾದ 'ಗಣಪತಿ ಹಾಡನ್ನು' ಪ್ರಕಟಿಸಿದ ಅಪರಾಧಿಗಳೆಲ್ಲರೂ ತಮ್ಮ ತಪ್ಪನ್ನು ಒಪ್ಪಿ ಕೋರ್ಟಿನ ರಿಯಾಯತಿಯನ್ನು ಕೇಳಿದರು ಮೇಜಿಸ್ಟ್ರೇಟರು ಮೂರು ಜನರನ್ನೂ ಅಪರಾಧಿಗಳಾಗಿರುವರೆಂದು ತೀರ್ಮಾನಿಸಿ ಒಂದನೇ ಮೂರನೇ ಅಪರಾಧಿಗಳಿಗೆ ಎರಡು ತಿಂಗಳ ಸಾಧಾರಣ ಸಜೆಯನ್ನೂ ಎರಡನೇ ಅಪರಾಧಿಗೆ ಒಂದು ತಿಂಗಳ ಸಾಧಾರಣ ಸಜೆಯನ್ನೂ ವಿಧಿಸಿರುವರು.

ಕಲಿಕತ್ತೆಯ ಹಿಂದುಗಳು ಗತಿಸಿದ ಚಕ್ರವರ್ತಿಗಳವರ ದಫನ ಸಂಸ್ಕಾರ ದಿನವನ್ನು ಬಹಳ [illegible]

[illegible] ಸಿಸಿ ಬರುತ್ತಿರುವ ಒಂದು ಲೇಖನವನ್ನು [illegible]

ದಕ್ಷಿಣ ಹಿಂದುಸ್ಥಾನ.

ಬೆಂಗಳೂರಿನಲ್ಲಿರುವ ಸರಕಾರಿ ಆಫೀಸುಗಳನ್ನು ಮೈಸೂರು ಪಟ್ಟಣಕ್ಕೆ ವಯ್ಯುವ ವಿಷಯವನ್ನು ಮಹಾರಾಜರವರ ಸರಕಾರದವರು ಕೆಲವು ಕಾಲದಿಂದ ಪರ್ಯಾಲೋಚಿಸುತ್ತಿರುವರು ಚೀಫ್ ಕೋರ್ಟು ಹೊರತು ಬಾಕಿ ಎಲ್ಲಾ ಆಫೀಸುಗಳನ್ನು ಮೈಸೂರಿಗೆ ವರ್ಗಾಯಿಸಲಿಕ್ಕೆ ಪ್ರಜೆಗಳ ಆಕ್ಷೇಪವಿಲ್ಲವೆಂತ ತೋರುತ್ತದೆ ಬೆಂಗಳೂರಿನಲ್ಲಿ ಚೀಫ್ ಕೋರ್ಟು ಹೊರತು ಬಾಕಿ ಎಲ್ಲಾ ಸರಕಾರಿ ಆಫೀಸುಗಳು ಬಾಡಿಗೆಯ ಕಟ್ಟೋಣಗಳಲ್ಲಿರುವವೆಂಬದಾಗಿ ತೋರುತ್ತದೆ ಮೈಸೂರು ಸಂಸ್ಥಾನಕ್ಕೆ ರಾಜಧಾನಿಯಾಗಿರುವ ಮೈಸೂರ ಪಟ್ಟಣದ ವಿಶೇಷತ್ವವನ್ನು ಅಧಿಕಪಡಿಸುವರೆ ಈ ಏರ್ಪಾಡು ಪರ್ಯಾಲೋಚಿಸಲ್ಪಟ್ಟಿರುವುದು. ೩೦ ಲಕ್ಷ ರೂಪಾಯಿಗಳ ವೆಚ್ಚದಿಂದ ಮಹಾರಾಜರ ಅರಮನೆಯು ಮೈಸೂರಲ್ಲಿ ಸಿದ್ಧವಾಗುತ್ತಿರುವುದು ಇಂಥಾ ಕಟ್ಟಡದೊಂದಿಗೆ ಸರಕಾರಿ ಆಫೀಸುಗಳು ಸಹಾ ಒಂದೇ ಕಡೆಯಲ್ಲಿರುವುದುಪಯುಕ್ತ

ಚೀಫ್ ಕೋರ್ಟನ್ನು ಮೈಸೂರಿಗೆ ವಯ್ಯುವುದರ ವಿಷಯವಾಗಿ ಪ್ರಜಾಭಿಪ್ರಾಯವನ್ನು ತಿಳಕೊಳ್ಳುವರೆ ಮೈಸೂರಿನ ಚೀಫ್ ಜಡ್ಜರವರಿಗೆ ಮೈಸೂರು ಸರಕಾರದವರು ತಿಳಿಸಿದ್ದರು ಚೀಫ್ ಕೋರ್ಟಿನ ರಿಜಿಸ್ಟ್ರಾರರವರಿಂದ ತಮ್ಮ ಅಭಿಪ್ರಾಯವನ್ನು ತಿಳಿಸೋಣವಾಗಲಿಕ್ಕೆ ಬೆಂಗಳೂರಿನ ವಕೀಲರ ಸಂಘಕ್ಕೆ ಸೂಚನೆಯಾಯಿತು ಇವರು ಸಭೆ ಕೂಡಿ ಚೀಫ್ ಕೋರ್ಟನ್ನು ಬೆಂಗಳೂರಿನಿಂದ ತೆಗಿಯುವುದು ಉಪಯುಕ್ತವಲ್ಲವೆಂತ ತಾವು ಮಾಡಿದ ನಿರ್ಣಯವನ್ನು ಚೀಫ್ ಜಡ್ಜರವರಿಗೆ ತಿಳಿಸಿರುವರು

ಮೈಸೂರು, ಶಿವಮೊಗ್ಗದಲ್ಲಿಯೂ ಸಹಾ ವಕೀಲರು ಸಭೆ ಕೂಡಿ ಬೆಂಗಳೂರಿನಿಂದ ಚೀಫ್ ಕೋರ್ಟನ್ನು ತೆಗಿಯಬಾರದೆಂಬ ನಿರ್ಣಯಗಳನ್ನು ಮಾಡಿರುವರು

ಮೈಸೂರು ಗವರ್ನಮೆಂಟಿನವರು ಕಾಂತರಾಜ ಅರಸರವರ ವಿಶಾಲವಾದ ಮೈಸೂರಿನಲ್ಲಿರುವ ಅರಮನೆಯನ್ನು ತಕ್ಕೊಂಡು ಈ ಮನೆಯಲ್ಲಿ ಸರಕಾರಿ ಆಫೀಸುಗಳನ್ನು ಏರ್ಪಡಿಸುವರೆ ನಿಶ್ಚಯಿಸಿರುವರಂತೆ.

ಮೈಸೂರಿನ ವಿಶೇಷತ್ವವನ್ನು ಅಧಿಕಪಡಿಸಲಿಕ್ಕೆ ಮೈಸೂರಿನಿಂದ ಇರೋಡಿಗೂ, ಮೈಸೂರಿನಿಂದ ಹಾಸನ್ ಚಿಕ್ಕಮಂಗಳೂರು ಮಾರ್ಗವಾಗಿ ಮಂಗಳೂರಿಗೆ ರೈಲ್ವೆ ಮಾರ್ಗವನ್ನು ಅನುಗೊಳಿಸುವುದು ಅವಶ್ಯಕರವೆಂತ ಬೆಂಗಳೂರಿನ ಒಬ್ಬ ಬಾತ್ಮೀದಾರರು ಬರದಿರುವರು ಎಸ್ ಐ. ಆರ್. ರೈಲ್ವೆ ಕಂಪೆನಿಯ ಅದಿಕಾರಿಗಳು ಪ್ರಕೃತ ಈ ಎರಡು ರೈಲ್ವೆ ಮಾರ್ಗಗಳ ವಿಷಯವನ್ನು ಮೈಸೂರು ಸರಕಾರದವರೊಂದಿಗೆ ಪರ್ಯಾಲೋಚಿಸುವರಂತೆ ಪರ್ಯಾಲೋಚನೆಯ ಫಲವನ್ನು ಮೈಸೂರು ಸಂಸ್ಥಾನದವರೂ ದಕ್ಷಿಣ ಕನ್ನಡದವರೂ ಬಹಳ ಕಾಂಕ್ಷೆಯಿಂದ ನಿರೀಕ್ಷಿಸುತ್ತಿರುವರು.

ಮೈಸೂರು ಮಹಾರಾಜರವರು ಉದಕಮಂಡಲದಿಂದ ಮೈಸೂರಿಗೆ ಈ ತಿಂಗಳ ತಾ. ೨೯ಕ್ಕೆ ಬಂದು ತಲಪುವರಂತೆ.

ಮೈಸೂರು ಮಹಾರಾಜರವರ ಸರಕಾರದವರು ಆಲ್ಲಿಪುರದಲ್ಲಿರುವ ಮಹಮ್ಮದೀಯರ [illegible] ತಿಂಗಳು ಒಂದಕ್ಕೆ [illegible] ರೂಪಾಯಿಗಳ ೭ ವಿದ್ಯಾರ್ಥಿವೇತನಗಳನ್ನು [illegible]

[illegible] ಯುವರಾಜರವರ ವಿವಾಹದ [illegible] ತಿಂಗಳ [illegible] ನಡೆಗುವುದು. ಅರಮನೆಯಿಂದ ಆಮಂತ್ರಣವನ್ನು ಪಡಿಯಲು ಅರ್ಹರಾದವರ ಹೆಸರುಗಳನ್ನು ಸೂಚಿಸಬೇಕೆಂತ ಡಿಪ್ಯುಟಿ ಕಮಿಶನರುಗಳಿಗೆ ತಾಕೀತಾಗಿಯದೆ.

ದಕ್ಷಿಣ ಕನ್ನಡ

ಮಂಗಳೂರು ಪರವಶ್ಯೈದಿದ ಚಕ್ರವರ್ತಿ ಏಳನೇ ಎಡ್ವರ್ಡರ ಅಕಾಲಮೃತ್ಯುಗೋಸ್ಕರ ದುಃಖಪ್ರದರ್ಶನಾರ್ಥ ಕಳೆದ ೨೫ನೇ ಬುಧವಾರ ೪ ಗಂಟೆ ಸಮಯಕ್ಕೆ ಮಂಗ್ಳೂರು ಗವರ್ನಮೆಂಟ್ ಕೊಲೇಜ್ ಮಂದಿರದಲ್ಲಿ ಪಟ್ಟಣ ನಿವಾಸಿಕರ ಸಭೆ ಕೂಡಿತು

ಸಭಾರಂಭದಲ್ಲಿ ಮುನ್ಸಿಪಲ್ ಕೌನ್ಸಿಲು ಅಧ್ಯಕ್ಷರಾದ ರಾವಸಾಹೇಬ [illegible] ಸುಬ್ರಾಯರವರು ನಡೆಸಿಕೊಟ್ಟ [illegible] ಸಭೆಯ ಉದ್ದೇಶ್ಯವನ್ನು ಸೂಚಿಸಿದರು [illegible] ವಾಸುದೇವ [illegible] ಸೂಚನೆ [illegible] ಮೂರಳಿದ) ಜಿಲ್ಲಾ ಕಲೆಕ್ಟರ [illegible] ಅಮಿದ್ದೀನ್ [illegible] ದ್ದೂರವರು [illegible] ಅಧ್ಯಕ್ಷರಾದರು [illegible] ವರು ಉಚಿತ [illegible] ಸಭೆ ಕೂಡಿದ ಉದ್ದೇಶ್ಯವನ್ನು ವಿವರಿಸಿ ರಾವ್‌ಸಾಹೇಬ [illegible] ಮೊದಲನೇ ನಿರ್ಣಯವನ್ನು ಸಭೆಯ ಮುಂದಿಟ್ಟರು [illegible] ಏಳನೇ ಎಡ್ವರ್ಡ್ ಚಕ್ರವರ್ತಿಯವರು [illegible] ಕುಟುಂಬದೊಡನೆ [illegible] ಪ್ರದರ್ಶಿಸುವ ಈ ನಿರ್ಣಯವನ್ನು [illegible] ವರು ತಮ್ಮ [illegible] ಉಪಕಾರ ಕೃತ್ಯಗಳನ್ನು [illegible] ಹೆಸರುಗಳ [illegible] ಅನುಮೋದನಾರ್ಥ [illegible] ನಾಥಯ್ಯ [illegible] ರಾ| [illegible] ಕನ್ನೂ ಹಿಂದುಸ್ಥಾನಕ್ಕೆ [illegible] ಕೊಟ್ಟ [illegible] ತೀರಾ ಸಭೆ [illegible] ಮಾಡಿದರು [illegible] ಅಮ್ಮೆಂಬಿ ಶ್ರೀನಿವಾಸ [illegible] ಸಭೆಯ [illegible] ಪಟ್ಟವನ್ನೇರಿದ [illegible] ಜೋರ್ಜ ಚಕ್ರವರ್ತಿ [illegible] ರೋತ್ತರ ಅಭಿವೃದ್ಧಿ [illegible] ರಿಗೆ ಪರಮಪದವನ್ನು [illegible] ಸಾರಾಂಶವ [illegible] ಚಕ್ರವರ್ತಿ [illegible] ರವರು ಯುವರಾಜರು [illegible] ಯತ್ನಗಳಿಂದ [illegible] ತೃಡಯಾಥಾವ [illegible] ಗಳು [illegible] ವರು ತೋರಿದ [illegible] ಸಂಸ್ಥಾನವರ ಆಳಿಕೆಯಲ್ಲಿ ಈ ಜಿಲ್ಲೆ [illegible] ನಮ್ಮ [illegible] ವೃದ್ಧಿಯು ಇನ್ನಷ್ಟು ಹೆಚ್ಚುವದೆಂದು ಹೇಳಿದರು. ಈ ಎರಡು ನಿರ್ಣಯಗಳನ್ನು ಮದ್ರಾಸು ಗವರ್ನ [illegible] ಮೂಲಕ ಚಕ್ರವರ್ತಿಗೆ ಅರ್ಪಿಸಬೇಕೆಂಬದೇ ಮೂರನೇ ನಿರ್ಣಯವಾಗಿತ್ತು ಇದು ರಿಟೈರ್ಡ್ ತಹಸೀಲದಾರರು [illegible] ಮುನ್ಸಿಪಲ್ ಕೌನ್ಸಿಲರು ಮ| ರಾ| ರಾ| ಬೋಳಾರ [illegible] ಯರಿಂದ ಸೂಚಿಸಲ್ಪಟ್ಟು ಇತರ ಎರಡು ನಿರ್ಣಯಗಳಂತೆ ಸರ್ವಾನುಮತಿಯಿಂದ ಮಂಜೂರಾಯಿತು

ಈ ಎಲ್ಲಾ ವೃತ್ತಾಂತ ಇಂಗ್ಲಿಷ್ ಭಾಷೆಯಲ್ಲಿ ನಡದ್ದರಿಂದ ಸಭೆಯವರ ಮುಂದೆ ಇದರ ಸಾರಾಂಶವನ್ನು ಇಂಗ್ಲಿಷು ತಿಳಿಯದ ಜನರು ಅರಿಯುವಂತೆ ಹೈಕೋರ್ಟು ವಕೀಲರು ಮ|ರಾ|ರಾ| ಯು. ಸಿ. ಕೃಷ್ಣ ಭಟ್ಟರವರು ಅಧ್ಯಕ್ಷರ ಅಪೇಕ್ಷೆ ಪ್ರಕಾರ ಕನ್ನಡದಲ್ಲಿ [illegible]

[illegible] ರಣವು [illegible] ಬುಬೋನಿಕ್ ರೋಗದ ಮರಣಗಳೂ ಇದ್ದವು.

ಮಂಗಳೂರು ಸ್ಟೇಶನರಿ ಮೇಜಿಸ್ಟ್ರೇಟರಾಗಿದ್ದ ಮ| ರಾ| ರಾ| ಡಿ ಆನಂದರಾಯರು ೧೯ ದಿವಸಗಳ ಪ್ರಿವಿಲೆಜು ರಜೆಯಮೇಲೆ ಹೋಗುವದರಿಂದ ಟೌನ್ ಮೇಜಿಸ್ಟ್ರೇಟರಾದ ಮ| ರಾ| ರಾ| ಪಿ ಎನ್ ಕೃಷ್ಣರಾಯರೇ ಸದ್ಯಕ್ಕೆ ಸ್ಟೇಶನರಿ ಮೇಜಿಸ್ಟ್ರೇಟರ ಚಾರ್ಜನ್ನು ಸಹಾ ವಹಿಸಿಕೊಳ್ಳುವರು

ಸರ್ಕೀಟಿನ ಮೇಲೆ ಹೋಗಿರುವ ಇಲ್ಲಿಯ ಜಿಲ್ಲಾ ಕಲೆಕ್ಟರ್ ಥೊರ್ನವರು ತಮ್ಮ ಪ್ರೊಗ್ರೆಮನ್ನು ಬದಲಾಯಿಸಿರುವದರಿಂದ ಇದೇ ತಿಂಗಳ [illegible] ಇಲ್ಲಿಗೆ [illegible] ಉಡುಪಿ ಅತ್ತಕಡೆ [illegible] ಜೂನ್ ತಿಂಗಳ [illegible] ಇತ್ತಕಡೆ [illegible] ರಂತೆ

ಇಲ್ಲಿಯ ಸ್ಪೆಶಲ್ [illegible] ರಿಕೊರ್ಡ್ಸ [illegible] ಈ ತಿಂಗಳ [illegible]

ಇಲ್ಲಿಯ ತಾಲೂಕು ಶಿರಸ್ತೇದಾರರಾಗಿದ್ದ ಮ| ರಾ| ರಾ| ಉಪ್ಪಿಲ ಸುಬ್ರಾಯರವರಿಗೆ ಬರುವ [illegible] ತಿಂಗಳಿಂದ ರೂಪಾಯಿ [illegible] ಆಗುವದಂತೆ

ಕಾಸರಗೋಡು ಪ್ರೋವಿನ್ಸ್ ಕೊನ್ಸ್ಟೇಬಲರ ವಸತಿಗೃಹ [illegible] ಕಟ್ಟಿಸಿದ [illegible] ಮಾರ್ಚಿ ಕಟ್ಟಿಸಿದ ೧೦ ಮನೆಗಳಲ್ಲಿ [illegible] ಇಲ್ಲಿಯ ಪೊಲೀಸ್ ಕನ್ಸ್ಟೇಬಲರು ಪ್ರವೇಶವಾದರು

ದಿವಂಗತ ನಮ್ಮ ಮಹಾರಾಜ ಎಡ್ವರ್ಡ್ ಸಾರ್ವಭೌಮರ ಶವಸಂಸ್ಕಾರದ [illegible] ಇದೇ ಕಳೆದ ಶುಕ್ರವಾರ ತಾ| ೨೦ನೆಂಗೆ ಇಲ್ಲಿಯ [illegible] ವೊಲೀಸ್ [illegible]

ಇದೇ ಕಳೆದ [illegible] ಮಧ್ಯಾಹ್ನ [illegible] ಇಲ್ಲಿಯ [illegible] ನಿಂದ [illegible] ತತ್ ಕ್ಷಣವೇ ಆಸ್ಪತ್ರೆ [illegible] ವೈದ್ಯ ಉದ್ಯೋಗ [illegible] ಮೃತಪಟ್ಟ [illegible]

ಪುತ್ತೂರು [illegible] 1ನೆಲ್ಲು ರಾತ್ರಿ ಇಲ್ಲಿಯ [illegible] ರಾಮಪ್ಪ [illegible] ಸುಮಾರು ರೂ [illegible] ಕ್ರಯದ [illegible] ಕೊಂಡ [illegible] ಇನ್ನೂ [illegible]

[illegible] ಚಕ್ರವರ್ತಿ [illegible] ಪ್ರಭುಗಳವರ ದಹನದ [illegible] ತಾ 20 [illegible] ದಿವಸವು [illegible] ಅಂಗಡಿಗಳಲ್ಲದೆ ಇತರ ವ್ಯಾಪಾರದ ಅಂಗಡಿಗಳು, ಕಾಪಿ ಹೊಟೆಲುಗಳು, ಸರಕಾರಿ ಆಪೀಸುಗಳು ಸಹಾ ಮುಚ್ಚಲ್ಪಟ್ಟಿದ್ದವು

ಡಿವಿಜನ್ ಡಿಪ್ಯುಟಿ ಮೆಜಿಸ್ಟ್ರೇಟರಲ್ಲಿ ತನಿಕೆ ನಡಿಯುತ್ತಿದ್ದ [illegible] ರಾಮಚಂದ್ರನಿಗೆ [illegible] ಮಾಡಿದ [illegible] ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟದಾಗಿ ಕೇಳುತ್ತೇವೆ

ಕಾಸರಗೋಡು ಅತ್ತಕಡೆ ಸರ್ಕೀಟಿಗೆ ಹೋದ ನಮ್ಮ ಡಿವಿಜನ್ ಡಿಪ್ಯುಟಿ ಕಲೆಕ್ಟರರವರು ತಾ 23ರಲ್ಲು ಇಲ್ಲಿಗೆ ತಲಪಿರುವರು

ಶಿಡುಬು ರೋಗದ ಹಾವಳಿಯು ದಿನದಿನ ಅಲ್ಲಲ್ಲಿ ತಲೆದೋರುತ್ತಾ ಉಂಟು

ಟಪ್ಪಾಲು ಇಲಾಖೆಯ ಸುಪರಿಂಟೆಂಡೆಂಟ್ ಥೊರೆಗಳವರು ಇಲ್ಲಿಗೆ ಬಂದು ಪೋಸ್ಟ್ ಆಫೀಸು ತನಿಕೆ ನಡಿಸಿ ಮಂಗಳೂರಿಗೆ ಹೋಗಿರುವರು.

[illegible] ವರೆ ವಾಗ್ದತ್ತ [illegible] ದವರ [illegible] ಮೊಬಲಗುಗಳು.

ತಾರೀಕು 6ನೇ ಮೇ ಸಂಚಿಕೆಯಲ್ಲಿ ಪ್ರಕಟಿಸಿದ

ಜುಮುಲಾ ರೂ. [illegible]

ಮ|ರಾ|ರಾ| ಪಾಂಗಾಳ ಹರಿನಾಯ್ಕರವರು (ಕಟ್ಟಪಾಡಿ ನಾಯ್ಕರವರ ಕುಟುಂಬದ ಪರವಾಗಿ)		೧೫೦೦-೧-೦
,,	ಕೊಚ್ಚಿಕಾರ ರಾಮಚಂದ್ರ ಪೈಗಳವರು (ಬ್ರಹ್ಮಾವರ ಕೊಚ್ಚಿಕಾರ ಪೈಗಳವರ ಕುಟುಂಬದ ಪರವಾಗಿ)	೫೦೫-೦-೦
,,	ಹಳೆಯಂಗಡಿ ಶ್ರೀನಿವಾಸ ಕಾಮತರವರು ಬಸ್ರೂರು	೨೦೧-೦-೦
	ಕೇಶವ ಉಪೇಂದ್ರ ಕುಡ್ವರವರು ಉಡುಪಿ	೧೨೫ ೦ ೦
	ಅಂಕೋಲ್ ವಿಠೋಬ ಕಾಮತರವರು ಉಡುಪಿ	೨೦೫-೦ ೦
,	ಶ್ರೀನಿವಾಸ ಬಂಗಾರಿ ಮತ್ತ ಸಹೋದರರು ಕುಂದಾಪುರ	೧೨೫-೦-೦
,,	ಉಡುಪಿ ಸುಬ್ರಾಯ ನಾಯ್ಕರವರು ಕುಂದಾಪುರ	೧೦೧-೦ ೦

(ಮುಂದೆಸಾಗುವದು)

ಜೀವಸುಗಳ ಧಾರಣೆ ಮಂಗಳೂರು

ಕೂಳೂರು ಮಸ್ತ್ತಿ ಅಕ್ಕಿ ,,,,,,	4—8—0
ಸುಚ್ಚ ಮಸ್ತ್ತಿ, ,,,,,,,,,,,	4—2—0
ಮಸ್ತ್ತಿ ದುಯಂ ,,,,,,,,,,,	3-15—0
ವಕ್ಲ ಸುಗ್ಗಿ ,,,,,,,,,,,,,,,	4—0—0
ಸುಗ್ಗಿ ದುಯಂ ,,,,,, ,,,,,,	3-12—0
ಮಸ್ತ್ತಿ ಬೆಳ್ತಿಗ ,,,,,,,,,,,,	4-14—0
ರಂಗೂನ್ ಬೆಳ್ತಿಗೆ ಗೋಣಿ ,,,	7 13—0
ಹುರುಳಿ ಗೋಣಿ ೧ ಮುಡಿ 2ರ ,,	5-15—0
ಉಪ್ಪು ಗೋಣಿ ೧ರ ,,,,,,,,	3-8—0
ಕೊಪ್ರಿ ಖಂಡಿ ೧ರ ,,,,,,,,	105—0—0
ಕೊಪ್ರಿ ಎಣ್ಣೆ ಮುಡಿ ,,,,,,,,,	7—5—0
ಕಾಫಿ ಖಂಡಿ ೧ರ ,,,,,,,,	175—0—0
ಕಾಳು ಮೆಣಸು ಖಂಡಿ, ,,,,,	118—0—0
ಹೊಸ ಬಿಳಿ ಗೋಟು ಅಡಿಕೆ ,,,	80—0—0
ಕರಿ ಗೋಟು ,,,,,, ,,,,,,	65—0—0
ಏಲಕ್ಕಿ ಮುಡಿ ೧ರ ,, ,,	28—0—0

ಅಬಲಾ ಸಂಜೀವಿನಿ ಗುಳಿಗಗಳು.

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮಪರಿಹಾರಕ ಸ್ವದೇಶೀಔಷದವಾಗಿ ಕಂಡುಬಂದಿದೆ ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ, ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ ಗರ್ಭಕೋಶದ ರೋಗರುಜೆಗಳಲ್ಲಿ ಈ ಔಷದವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟದೆ ದೇಹದಲ್ಲಿ ಯಾವದೊಂದು ಅಕ್ರಮ ಗುರ್ತು ಕಂಡುಬಂದಾಗ್ಯೂ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಾಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ [illegible] ಇರಗೊಡಿಸದೇಕು ಉಪಯೋಗಿಸಿದವರು [illegible] ಶಿಫಾರಸು ಮಾಡಿರುವದರಿಂದ ಅವುಗಳ [illegible] ಮಿತವಾಗಿದೆ. ವಿಶೇಷ [illegible] ವಾಗಿ ಕಳುಹಿಸುತೇವೆ. [illegible] ಕ್ರಯ [illegible]

[illegible]

[illegible]

1. [illegible] ಹಿಂದೂ ಮೊಹಮುದೀ ಲಾಗಳು, ೩೯ [illegible] ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳು [illegible] ಮುದ್ರಾಸ್ [illegible] ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ [illegible] ಪುಸ್ತಕ ಕ್ರಯ ವಿ. ಪಿ ಸೇರಿ ೧ ರೂಪಾಯಿ ೧೨ ಆಣೆ

2. [illegible] ಲಾ ರಿಪೋರ್ಟ್—ಮಾಸಪತ್ರಿಕೆ, ಪ್ರಿವಿಕೌಂಸಿಲ್, ಹೈಕೋರ್ಟ್ [illegible] ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ [illegible] ಇದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ, ಯಾ ವಿ. ಪಿ ಬಿಡಿಪತ್ರಿಕೆ ೧ಕ್ಕೆ ೨ ಆಣೆ

3. [illegible] ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ ವಿ ಪಿ. ಸೇರಿ 10 ಆಣೆ, [illegible] ಅಪೇಕ್ಷಿಸುವವರು ಎಂ ಮಲ್ಲಾರಾಧ್ಯ ಫಸ್ಟ್ ಗ್ರೇಡ್ ಪ್ಲೀಡರ್, [illegible] ಪೇಟೆ, ಬೆಂಗಳೂರು ಸಿಟಿ, ಈ ವಿಳಾಸಕ್ಕೆ ಬರೆಯುವದು.

THE HINDU SOAP MANUFACTURING CO,

ಹಿಂದೂ ಸೋಪ್ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ ಖರಬಿ ವಿರಹಿತವಾದದ್ದು. ವ್ಯಾಪಾರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುತ್ತವೆ, ವ್ಯಾಪಾರಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು.

ಬಿ ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಬಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು ಜಿಪಿಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-೩-0

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ ೭—೩—0

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ ವಿ ಪಿ. ಖರ್ಚು ಪ್ರತ್ಯೇಕ.

ಟಿ. ಬಾಬುರಾಯರ
ಆಯುರ್ವೇದಿಕ್ ಔಷಧಾಲಯ,
ವೆಬಸ್ಟರ್ ಮಾರ್ಕೆಟ್ ರಸ್ತೆ, ಮಂಗಳೂರು, ದ ಕ.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಪು ಉತ್ತರ ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಸಿದಲ್ಲಿ ಖಾತ್ರಿಯಾಗುತ್ತದೆ

ವಿಳಾಸ— ರಂಗಪ್ಪಾ ರಾಮಕೃಷ್ಣ ಕವಿ.
ವ ಸೋಹರ ಬಿಲ್ಡಿಂಗ್ ಲಾಲಬಾಲಿ, ಮುಂಬಯಿ,

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,
ಮಂಗಳೂರು ದ ಕ

ನಮ್ಮಲ್ಲಿ ಎಲ್ಲಾ ತರದ ಬೀಟು [illegible] ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೆರ, ಬೆಯುಲಮೆನ ಸ್ಟೋರ್ಸ್ ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮನೆಗಾಲಕ್ಕೆ ಉಪಯೋಗವಾಗುವ ಪ್ಲೆನೆಲು, ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

ಡಾಕ್ಟರ್ ವಾಮನ ಗೋಪಾಲರವರ
ಬಯೊಡ್ಯಾಯಿಡಿನಿಂದ ಕೂಡಿರುವ

ಸರ್ಸಪರಿಲ್ಲಾ.

ರಕ್ತಶುದ್ಧಿ ಬಗ್ಗೆ ಅತ್ಯುತ್ಕೃಷ್ಟವಾದ ಔಷಧಿಯು ಸಾವಿರಾರು ಜನರು ಇದನ್ನು ಸೇವಿಸಿದ ಅನುಭವದಿಂದ ಅತ್ಯಂತ ಗುಣಕಾರಿಯೆಂದು ಕಂಡುಕೊಂಡಿರುವರು ಬಹುಕಾಲದ ವಾತ, ಚರ್ಮರೋಗಗಳು, ಗಂಟುವಾತ, ಪಕ್ಷವಾತ, ಅಶುದ್ಧರಕ್ತದಿಂದ ಉಂಟಾಗಬಹುದಾದ ಇತರ ರೋಗಗಳು, ಬಲಹೀನತೆ [illegible] ರೋಗಗಳಿಗೆ ಖಾತ್ರಿಯಾದ ಔಷಧಿಯೆಂದು ಕಳೆದ **ಐವತ್ತು ವರುಷಗಳಿಂದ** ಎಲ್ಲಾ [illegible] ಔಷಧಿಗಳಲ್ಲಿ ಶ್ರೇಷ್ಠವಾದುದೆಂತ ಭೂಲೋಕದಲ್ಲೆಲ್ಲಾ ಕೀರ್ತಿಗೊಂಡಿರುವುದು. ಧಾತು [illegible] ದಿಂದ ಇದರ ಪ್ರತಿನಿತ್ಯದ ಸೇವನೆಯು ಆಲೋಚನಾಶಕ್ತಿಯನ್ನು ಬಲಗೊಳಿಸಿ [illegible] ಉಂಟುಮಾಡುವುದು.

[illegible] ಒಂದಕ್ಕೆ ರೂ. [illegible] ೪, ವಿನಹಾ ಟಪ್ಪಾಲು ದಸ್ತೂರಿ ೫ ಆಣೆ.

[illegible] ಆಣೆ. ಟೂತ್ ಪೌಡರ್ ಆಣೆ ೨.

[illegible]

(ಊದು)ಬತ್ತಿಗಳು ಪೆಟ್ಟಿಗೆ ೧ಕ್ಕೆ ರೂ. [illegible] ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು [illegible] ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ [illegible] ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಘಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ.-ಎಲ್. ಉಪಾಧ್ಯಾಯ, ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ — ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೆಗಿನ ಪೊಲಿಸಿಗಳಿಗೆ ಜೀವವಿಮೆ ಅತಿ ಕಮ್ಮಿಯಾದರೂ ಬದ್ಧವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊ[illegible]

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವ[illegible]ಯಾಗಿಟ್ಟಿರುವದು

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ —ಪ್ರಖ್ಯಾತಿಗೊಂಡ ಶ್ರೀಕೃಷ್ಣ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು ಅಲ್ಪ ಮೋಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜಂಟ್, ಮಂಗಳೂರು, ದ ಕನ್ನಡ.

ಅತಿ ಉತ್ತಮವಾದ ಬೀಜಗಳು—ಗಿಡಗಳು—ಹೂವು ವಗೈರೆ

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟಿವ್ ತರಕಾರಿ ಬೀಜಗಳೂ, ಹೂವಿನ ಬೀಜಗಳೂ, ಬೇಸಿಗೆಗೂ ಮತ್ತು ಕಾಪಿ ಗಿಡಗಳ ನೆರಳಿಗೆ ಅನುಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ ಇವೂ ಅಲ್ಲದೆ ಉತ್ತಮವಾದ ಕಟ್ಟಿದ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ, ಗುಲಾಬೀ ಗಿಡಗಳೂ, ಎಲೆ ಜಾತಿಯ ಗಿಡಗಳೂ, ವಗೈರೆ ಬಹಳ ಕಮ್ಮಿ ದರಗಳಿಗೆ ಬೇಕಾದಲ್ಲಿ ರವಾನಿಸಲ್ಪಡುವುದಲ್ಲದೆ ಕೆಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸುವೆವು ತರಕಾರಿ ಮತ್ತು ಹಣ್ಣುಗಳು ಸಹಾ ಕಳುಹಿಸಲ್ಪಡುವವು ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಬಿ ಎಲ್. ಬೈಯಣ್ಣ ಬ್ರದರ್ಸ್,
67 ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ.

The Peoples Watch

UNEQUALLED FOR

CHEAPNESS ACCURACY

ಬಹುಕಾಲಗಳಿಂದ ನಮ್ಮ ಗ್ರಹಕರು ಹೊಸ ಗಡಿಯಾರಗಳನ್ನು ಕೇಳು[illegible]ರಿಂದ ಈಗಲೇ ಸೀಮೆಯಿಂದ ಕೆಲವು ವಾಚುಗಳನ್ನು ತರಿಸಿ ಬಿಕರಿಗೆ ಇಟ್ಟಿದ್ದೇವೆ.



ಪೀಪಲ್ಸ್ ಓಪನ್‌ಫೇಸ್ ನಿಕ್ಕಲ್ ಸಿಲ್ವರ್ [illegible]ಸ್ ಕೀಲೆಸ್ ಲಿವರ್ ಗಡಿಯಾರವು ಸರಪಣಿ ಗ್ಲಾಸ್ ಸ್ಪ್ರಿಂಗ್ ಸಹಿತ ಕ್ರಯ ೩—2—0 ರೂಪಾಯಿ ಎರಡು ಆಣೆ ಈ ಗಡಿಯಾರಗಳು [illegible]ಲ್ಲಿಯೂ ಕರೀದಿಯಲ್ಲಿಯೂ ಬಾಳಿಕೆಯಲ್ಲಿಯೂ ಬೂತಿನಲ್ಲಿಯೂ ಶ್ರೇಷ್ಟವಾದವೆಂದು ದೃಢ[illegible]ತ್ತೇವೆ. ನಕಾಶಿ ಕೆಲಸಮಾಡಿದ ಸ್ವದೇಶಿ [illegible]ಗಳು ಅನೇಕ ತರದ್ದು ಬಂದಿದೆ.

ವಿಳಾಸ.—

ದಿ. ಊಲನ್ ಮಾರ್ಟ್,
ಅಶ್ವತ್ಥಿ

SMALL-POX BALM

ಸಿಡುಬು ರೋಗಕ್ಕೆ ಮುಲಾಮು.

ಅತ್ಯಲ್ಪ ಕಾಲದಲ್ಲಿಯೇ ಹಲವರಿಂದ ಉಪಯೋಗಿಸಲ್ಪಟ್ಟು ವಿಶೇಷ ಗುಣಕಾರಿ ಎಂದು ಹೆಸರು ಪಡೆದಿರುವುದು

ಸಿಡುಬು ರೋಗದ [illegible] ಸುವ ವಿವಿಧ ವೈದ್ಯರಿಂದ [illegible] ಔಷಧಿ ಎಂದು ಮನ್ನಿಸ[illegible].

ಮೈಯಲ್ಲಿ ಕೀವು ತುಂಬುತ್ತಿರುವಾಗ ಬರುವ ಜ್ವರವನ್ನು ಶಮನಿಸುವದು.

ಸಿಡುಬುರೋಗದ ಅಂಟುವ ಸ್ವಭಾವವು ಎಲ್ಲರಿಗೂ ತಿಳಿದಿರುವ ಪ್ರತ್ಯಕ್ಷಪ್ರಮಾಣ. ಸಿಡುಬು ಶರೀರದಲ್ಲಿ ಕಾಣಿಸಿಕೊಂಡ ನಂತರ ಇದರ ಸೋಂಕು ಇನ್ನಷ್ಟು ಪ್ರಬಲವಾಗುವುದು. ರೋಗಿಗೆ ಒಂದು ಸ್ನಾನದ ನಂತರ ಕೀವು ತುಂಬಿರುವ ಮೈಲೆಯು ಒಣಗುತ್ತ ಬಂದು ಪೊರೆಪೊರೆಯುಳ್ಳದ್ದಾಗುವುದು. ಈ ಪೊರೆಗಳು ರೋಗಿಯು ಅತ್ತಿತ್ತ ಚಲಿಸುತ್ತಿರುವಾಗ್ಯೆ ಅಲ್ಲಲ್ಲಿ ಬಿದ್ದು ಗಾಳಿಯಿಂದ ಸರ್ವ ಕಡೆಗಳಲ್ಲಿಯೂ ಪ್ರಸರಿಸಲ್ಪಟ್ಟು ಪೊರೆಗಳಲ್ಲಿರುವ ರೋಗ ಅಣುಗಳಿಂದ ರೋಗದ ಸೋಂಕು ಸರ್ವತ್ರ ಹಬ್ಬುವುದು.

ಮೈಲೆಯ ದುರ್ವಾಸನೆಯನ್ನು ಹೋಗಗೊಳಿಸಿ, ಬಿಜಿಯ ಕಲೆಗಳು ವಿಕಾರ ಹೊಂದದಂತೆ ಮಾಡಿ, ಖಜ್ಜಿಯಿಂದ ಶರೀರದಲ್ಲಿ ಉಂಟಾಗುವ ತುರಿಸುವಿಕೆಯನ್ನು ನಿಲ್ಲಿಸಿ ರೋಗಜನಿತವಾದ ಹುಣ್ಣುಗಳು ಯಾವರೀತಿಯಲ್ಲಿಯಾದರೂ ವಿಶೇಷ ಪರಿಣಾಮ ಹೊಂದದಂತೆ ಈ ಮುಲಾಮಿನ ಲೇಪನದಿಂದ ಸಾಧ್ಯವಾಗುವುದು. ರೋಗದ ಸೋಂಕನ್ನು ಸಹಾ ಇದರ ಲೇಪನವು ತಡೆಕಟ್ಟುವುದರಿಂದ ರೋಗ ತಗಲಿದ ಸರ್ವರೂ ಇದನ್ನು ಪರೀಕ್ಷಾರ್ಥ ಉಪಯೋಗಿಸಬಹುದು.

ಹೋಮಿಯೋಪತಿಕ್, ಟಿಬ್ಬುರೆಮಿಡಿನ್, ಆಯುರ್ವೇದಿಕ್ ಅಥವಾ ಎಲೋಪತಿಕ್ ಈ ಎಲ್ಲಾ ವಿಧಾನಗಳಿಂದ ಚಿಕಿತ್ಸೆ ಹೊಂದುವ ರೋಗಿಗಳಿಗೆ ಈ ಮುಲಾಮಿನ ಲೇಪನವು ಏಕ ರೀತಿಯಲ್ಲಿ ಗುಣಕಾರಿಯಾಗಿರುವುದರಿಂದ ಎಂಥಾ ಚಿಕಿತ್ಸೆಯಲ್ಲಿಯಾದರೂ ಇದರ ಲೇಪನವು ಆಕ್ಷೇಪಕರವಲ್ಲ.

ಮುಲಾಮನ್ನು ರೋಗತಗಲಿದ ೬ನೇ ದಿನದಿಂದ ಹಚ್ಚಲು ಪ್ರಾರಂಭಿಸಬಹುದು, ಹಚ್ಚುವ ಕ್ರಮ ಮುಂತಾದವುಗಳು ಕರಡಿಗೆಯ ಲೇಬಲಿನಲ್ಲಿರುವವು.

ಸರ್ವರಿಗೂ ಇದನ್ನು ಕ್ರಯಕ್ಕೆ ಪಡಕೊಳ್ಳುವರೆ ಸಾಧ್ಯವಾಗುವಂತೆ ಮುಲಾಮಿಗೆ ಹೆಚ್ಚು ಕ್ರಯದ ಔಷಧಗಳು ಬಿದ್ದಿದ್ದರೂ ಕ್ರಯವನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆಯಾಗಿಟ್ಟಿರುವೆವು.

ಕ್ರಯ ಡಬ್ಬಿ ಒಂದಕ್ಕೆ ಸಣ್ಣ ಸೈಜು ೫ ಆಣೆ. ದೊಡ್ಡದು ೮ ಆಣೆ.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ (ಮಂಗಳೂರು ವ್ಯಾಪಾರ ಸಂಘ)
ರಥಬೀದಿ, ಮಂಗಳೂರು ಇವರಲ್ಲಿ ದೊರೆಯುವುದು.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್	ಹಾಫ್‌ಬೈಂಡ್	ಫುಲ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ)	(ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು

3 × 8¼, 3 × 5¼", 8¼" × 6", 6 × 4 ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ಗದಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಪಾತ್ರಿಯಾಗಿದ್ದು

ಬಹಳ ಸಮಯದ ವರೇಗೆ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ
ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸೈಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ. ಮೆನೇಜರ್,
ಶಾರದಾ ಮುದ್ರಾಲಯ, ಮಂಗಳೂರು.

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.
ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸೈಜುಗಳಲ್ಲಿ ಅಚ್ಚು ಹಾಕುವುದು.
ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.
ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರೆಯುವ ವಿಳಾಸ:—
ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು.

Printed by V. S. Kamath, at the Mangalore Trading Association's Sharada Press, [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾ ನಿರ್ಣಯ — ವರ್ಷ ೧ಕ್ಕೆ ರೂ. 1 4-0 ಟಪ್ಪಾಲು ಹಾಸಲು ಸೇರಿ ರೂ 2-1-0

ಸಂಪುಟ 4. ಮಂಗಳೂರು, ತಾರೀಕು 3ನೇ ಶುಕ್ರವಾರ ಜೂನ್ 1910 ಸಂಚಿಕೆ 22.

Amrutanjan Depot Fort Bombay.

ಅಮೃತಾಂಜನ ಗಜಕರ್ಣದ ಮುಲಾಮು.

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು ಗಂಟ್ಲು ನೋವು ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹದು ನಾಗಪುರ ಮಹಾ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರವಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು ಬಾಟ್ಲಿ ೧ರ ಕಿಮ್ಮತು 8 ಆಣೆ

ಕಿಮ್ಮತು ಆರು ಆಣೆ ೬ ನಮೂನೆ ಡಬ್ಬಿ

ಕಿಮ್ಮತು ಆರು ಆಣೆ ೬ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಬಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿ ರೂ 4

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ೧ರ ಕಿಮ್ಮತು ೨ ಆಣೆ

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ ನಿರ್ಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆಮಿಯಿನ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1.

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ತಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳೆಯುವವು ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ. ಬಾಟ್ಲಿ ಒಂದರ ಕಿಮ್ಮತು ರೂ. 1

ಸುಂದರಿ ತೈಲ.

ಇದನ್ನು ಮೋರೆಗೆ ತಾಗಿಸುವದರಿಂದ ಮುದ್ದೆಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು ಬಾಟ್ಲಿ ಒಂದರ ಕಿಮ್ಮತು 8 ಆಣೆ

ಖಜ್ಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತು 3 ಆಣೆ

ಗುಲಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತು 8 ಆಣೆ.

ವಿಳಾಸ: — ಅಮೃತಾಂಜನ ಡಿಪೊ, ಫೋರ್ಟು, ಮುಂಬಯಿ.

ತಂತಿ ವಿಳಾಸ: — "ಅಮೃತಾಂಜನ್", ಮುಂಬಯಿ.

ಸುಗಂಧ ದ್ರವ್ಯಗಳು.

ನಮ್ಮ ಸ್ವಂತ ಪರಿಶ್ರಮದಿಂದ ತಯಾರು ಮಾಡಿ ಬಿಕರಿಗೆ ಸಿದ್ಧವಾಗಿರುವ ಸುಗಂಧ ದ್ರವ್ಯಗಳು.

ತರಹೇವಾರಿ ಊದುಬತ್ತಿ 24 ರೂ ತೂಕದ ಶೇರು 1ಕ್ಕೆ

	ರೂ ಆ ಪೈ	ರೂ ಆ ಪೈ
1 ಖಾಸಾ ಅಂಬರ್ ಬತ್ತಿ	6—0—0	5—0—0
2 ಕೇಸರಿ ಬತ್ತಿ	4—0—0	3—8—0
3 ಜವ್ವಾಜಿ ಕಸ್ತೂರಿ ಬತ್ತಿ	3—0—0	2—8—0
4 ಪುನಗು ಬತ್ತಿ	1—8—0	1—0—0
5 ಪನ್ನೀರು ಬತ್ತಿ	0—10—0	0—8—0
6 ಉತ್ತಮವಾದ ದಶಾಂಗ	0—12—0	

ಗಂಧದ ಬಿಲ್ಲೆಗಳು

	1 ತೊಲೆ	1 ತೊಲೆ	1 ತೊಲೆ
1 ಪುದುಕೋಟೆ ಬಿಲ್ಲೆ	3 0 0	1 8 0	0 12 0
2 ಕಸ್ತೂರಿ ಬಿಲ್ಲೆಗಳು	1 8 0	0 12 0	0 6 0
3 1 ಕೇಸರಿ ಬಿಲ್ಲೆ	0 8 0	0 4 0	0 2 0
2 ಡಿಟ್ಟೋ	0 4 0	0 2 0	0 1 0

ಕಾಲು ತೊಲೆ ತೂಕ [illegible] ಬಿಲ್ಲೆ 100ಕ್ಕೆ 10 ರೂ 5ರೂ

4 ಅವಲ್ ಪಸುಂ ಬಿಲ್ಲೆ	0 8 0	0 4 0	0 2 0
ಎರಡನೇ ರಕಂ	0 4 0	0 2 0	0 1 0

ಕಾಲು ತೊಲೆ ತೂಕ [illegible] ಬಿಲ್ಲೆ 100ಕ್ಕೆ 8ರೂ [illegible]

5 ಅರಗಜ [illegible] 1ಕ್ಕೆ 1 0 0

ಪರವೂರಿನವರಿಗೆ [illegible] ಮುಂಗಡವಾಗಿ [illegible] ದೀಕ್ಷಿತ್ತೇವೆ [illegible] ರೆಂದು ಕೋರುತ್ತೇವೆ

ಯ ಂ ನರಸಿಂಹ ಶಾಸ್ತ್ರಿ ಸುಗಂಧಕಾರಿ,
ಬಂಗಳೂರು ಸಿಟಿ

ಮುಖತ್ತ್ರ [illegible] ಮುಖತ್ತ್ರ

ಕಾನಪೂರಾ [illegible] ಚೌಕಗಳು.

[illegible] 40 ⅓ [illegible] ಕೆಂಪು, ಕೇಸರಿ, ಬಿಳುಪು, [illegible] 1ಕ್ಕೆ ರೂ 1—4—0
ರೇಷ್ಮೆ ಅಂಚು [illegible] 1ಕ್ಕೆ ಹೆಚ್ಚು 0—4—0

ಶಲ್ಯಗಳು.

ಉದ್ದ 6 ಮೊ [illegible] 1ನೇ ನಂಬರು 1ಕ್ಕೆ ರೂ 4 4—0 2ನೇ [illegible] —12—0 3ನೇ ನಂಬರು 3—8—0
ರೇಷ್ಮೆ ಅಂಚು ಕಟಿಸುವುದಕ್ಕೆ 1ಕ್ಕೆ ಹೆಚ್ಚು 0—4—0
[illegible] ಕಲಾಪತ್ತು [illegible]
[illegible] ಅಂಚು
1ನೇ ನಂಬರು 0—10—0 1—1—0
2ನೇ ನಂಬರು 0—14—0 1—8—0 2—4—0

ರೇಷ್ಮೆ ವಸ್ತ್ರಗಳು.

ಕೆಂಪು, [illegible] ರಂಗುಗಳಲ್ಲಿ ಸೈಜು ಉದ್ದ 5-6 ಮೊಳ, [illegible] 1ಕ್ಕೆ [illegible] 1 4-0 1 8-0, 2-4 0, 2-8-0, 3 0 0
ಚಿತ್ತಾರದ 3 0-0 4 0 0 [illegible]-0-0, 6 0 0
ಡಿಟ್ಟೋ ಗಜ 1ಕ್ಕೆ 1 8-0
ರೇಷ್ಮೆ ಅಂಚುಗಳು [illegible] 1ಕ್ಕೆ ಆ 2 [illegible] 1
ಮುಖ್ಮಲ್ ಅಂಚು ಗಜ 1ಕ್ಕೆ ಆ 1 [illegible]
ದೇವರುಗಳಿಗೆ ಉಪಯೋಗಿಸುವ [illegible] ಕೆಂಪು, ಊದಾ, ಹಸರು ರಂಗುಗಳಲ್ಲಿ ಗಜ 1ಕ್ಕೆ ರೂ 1-6 0, 2 8 0 [illegible]
ದಾರದ ಬನೀನುಗಳು 1ಕ್ಕೆ ಆ [illegible] 6, 8
ಉಲನ್ ಬನೀನುಗಳು 1ಕ್ಕೆ ರೂ 2 4 0, 2 8 0 3-0 0, 3 8 0
ಫಿಲ್ಸ್ ಕ್ಯಾಪ್‌ಗಳೂ ಕ್ರಿಸ್ಟಿನ್ 1ಕ್ಕೆ ರೂ 1 1[illegible] 0 2 1 0, 2 8-0 2-12-0
ಇಟಲಿ ಕ್ಯಾಪ್‌ಗಳು 1ಕ್ಕೆ ರೂ 0 12 0 1 [illegible], 1 4 0, 1-8 0.
ಹಾಸನದ ಬೋಪಿಗಳು ಡಜನ್ 1ಕ್ಕೆ ರೂ 4 0 0 4-4 0, 4 8-0, 5-8-0, 6-0 0, 7 0 0 8 0 0, 9 0 0, 10 0 0, 12 0-0,
[illegible] ಪೇಟೆ ಕಟ್ಟುವ ತರಹೇವಾರಿ ರಂಗುಗಳ ಬಟ್ಟೆ ಗಜ 1ಕ್ಕೆ 0 6-0, 0 8-0, 0 10-0, 0 12 0
ಕುಪ್ಪಸಕ್ಕೆ ಮತ್ತು ಪರಕಾರಕ್ಕೆ ಉಪಯೋಗಿಸುವ ಬಟ್ಟೆಗಳು ಗಜ 1ಕ್ಕೆ ಆ 6, 8, 10, 12

ಕೇಶರಂಜನ ತೈಲ ಬಾಟ್ಲಿ	1ಕ್ಕೆ ರೂ	0—11—0
ಕುಂತಳ ಕೌಮುದಿ ತೈಲ	,, ,,	0—12—0
ಕರ್ನೋನಿಯಾ ಓಯಿಲ್	,, ,,	1—0—0.
ಭೃಂಗಾಮಲಕ ತೈಲ ಸೀಸೆ	,, ,,	0—4—0, 0-8-0, 1-0-0
ಕಸ್ತೂರಿ ಮಾತ್ರೆ, ಸೀಸೆ	,,	0—4—0.

[illegible] ಎಲ್ ಎ. [illegible]
[illegible] ಬೆಂಗಳೂರು ಸಿಟಿ

[illegible] ಹಣ್ಣು, ಹುವ್ವು ಮತ್ತು [illegible]

ಮಾವಿನ ಗಿಡಗಳು ವಗೈರೆ ಸಕಲ [illegible] ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ [illegible] ಬೀಜಗಳು, ಶೀಬು, ಕಿತ್ತಳೆ ವಗೈರೆ ಹಣ್ಣುಗಳು, ಇಂಗ್ಲೀಷು ಮತ್ತು [illegible] ಕಾಯಿ ಪಲ್ಯಗಳೂ, ತುರಾಯಿ, ಹಾರಾ ವಗೈರೆ ಹುವ್ವುಗಳು, ಬೇಕಾದವರು ಬರೆದು ತರಿಸಿಕೊಳ್ಳಬಹುದು ಅಪೇಕ್ಷಿಸಿದಲ್ಲಿ ಕ್ರಯವು ತಿಳಿಸುತ್ತೇವೆ.

ಹೆಚ್ ಎನ್ ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು.

"ವಿದ್ಯಾನಂದ" ಗ್ರಂಥಮಾಲಾ

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ಕಾನಾಗಿಲೇ (ಸ ರ್ಗ) ಸಂಸ್ಕೃತವನ್ನು ಕಲಿತ ಕೊಳ್ಳುವವರಿಗಾಗಿ ಸಂಸ್ಕೃತ [illegible] ಶ್ಲೋಕ, ಪದ, ಶಬ್ದ, ಅನ್ವಯ [illegible] ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ [illegible] ವಿವರಗಳೊಂದಿಗೆ ಮೊದಲನೆ ಸರ್ತಿ ಪ್ರಿಂಟಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

[illegible] ಪ್ರತಿ ಪದ ಅರ್ಥ, ಅನುವಾದ, ತಾತ್ಪರ್ಯ [illegible] ಬೆಲೆ 0—4—0

ವಿಳಾಸ ಮ್ಯಾನೇಜರ್

ವಿದ್ಯಾನಂದ ಆಫೀಸು,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ.

ಕೂಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಮೆನ್‌ಸಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಿದ್ದಾರೆ.

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ ಸರ್ವರೂ ಇದನ್ನು ಉಪಯೋಗಿಸಬಹುದು.

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವುದಕ್ಕೂ ಅತ್ಯಂತ ಉಪಯುಕ್ತವಾದದ್ದು. ಇದರಲ್ಲಿ ಆಶ್ಚರ್ಯಕರವಾಗಿ ಕೂದಲನ್ನು ಬೆಳೆಸುವ ಗುಣಗಳಿರುವುದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ. ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರೆಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. [illegible] ಸೀಸೆ ಒಂದಕ್ಕೆ 12 ಆಣೆಗಳು.

ಕವಿರಾಜ ಆರ್ ಸಿ ಸೇನ್, ಎಲ್. ಎಮ್. ಎಸ್.,
216 ಕಾರನ್‌ವಾಲಿಸ್ ಬೀದಿ, ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—[illegible]
[illegible] ಬೆಂಗಳೂರು.

ಬೆಂಗಳೂರಿಗೆ ಏಜಂಟರು:—[illegible]
[illegible]

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು ೩ನೇ ಜೂನ್ 1910

ಹಿಂದೂ ಸಮಾಜ ರಚನಾ ಉದ್ದೇಶ್ಯವು

ಪ್ರಕೃತ ಹಿಂದೂ ಸಮಾಜದ ಅಭಿವೃದ್ಧಿಯನ್ನು ಬಂಧಿಸುವ ಅರಿಷ್ಟಗಳನ್ನು ವರ್ಣಿಸಬೇಕೆಂತಿಲ್ಲ. ನಮ್ಮ ಮನೆಗಳಲ್ಲಿಯೂ ವೃತ್ತಿ ಉದ್ಯೋಗಗಳಲ್ಲಿಯೂ ಜೀವನದ ಪ್ರತಿಯೊಂದು ಭಾಗದಲ್ಲಿಯೂ ಈ ಅರಿಷ್ಟಗಳ ಬೇಗೆಯನ್ನು ಅನುಭವಿಸುತ್ತಿರುವೆವು ಧನವಂತ ಬಡವರೆಂಬ ಭೇದಗಳಿಲ್ಲದೆ ಸರ್ವರೂ ತಾರತಮ್ಯಾನುಸಾರ ಈ ದುಃಖವೇದನೆಯ ಸಮಭಾಗಿಗಳಾಗಿರುವರು. ಸಮಾಜವತ್ಸಲರಾದ ಮಹನೀಯರು ಈ ಕಡಕುಗಳನ್ನು ಹ್ಯಾಗೆ ಹೋಗಗೊಡಿಸಬಹುದೆಂಬುದನ್ನು ಕುರಿತು ಪರ್ಯಾಲೋಚಿಸುತ್ತಾ ನಮ್ಮ ಪೂರ್ವಾಚಾರಗಳನ್ನು ಇತಿಹಾಸ ಮುಖೇನ ತಿಳಕೊಂಡು ಅವನ್ನು ತಪ್ಪಿ ನಡದ್ದರಿಂದ ಇಂಥ ದುರ್ದಶೆಯು ತಮಗೆ ಪ್ರಾಪ್ತವಾಯಿತೆಂತ ಹೇಳುತ್ತಿರುವರು ಈ ತಪ್ಪಿತಗಳನ್ನು ತಿದ್ದಿ ಕಾಲಕ್ಕನುಗುಣವಾಗಿ ನಡೆಯಬೇಕೆಂದು ಬೋಧಿಸುತ್ತಿರುವರು ಪಾಶ್ಚಾತ್ಯ ನಾಗರೀಕತೆಯ ಮಹತ್ವವನ್ನು ಅರಿತ ಇನ್ನು ಕೆಲವರು ಪಾಶ್ಚಾತ್ಯ ಪದ್ಧತಿಗಳನ್ನು ಪೂರ್ಣವಾಗಿ ಅನುಸರಿಸದೆ ನಾವು ಈ ದೀನದಶೆಯಿಂದ ಪಾರಾಗೆವೆಂದು ಅಭಿಪ್ರಾಯಪಟ್ಟಿರುವರು ಯಾವ ತಿದ್ದುಪಾಟಿನ್ನಾಗಲಿ ಮಾರ್ಪಾಟಿನ್ನಾಗಲಿ ಸಮಾಜ ವಿಷಯಗಳಲ್ಲಿ ಭಾವಿಸುವದು ಸಹ ಮತವಿರೋಧವೆಂತ ಯಥಾರ್ಥವಾಗಿ ತಿಳಕೊಳ್ಳುವ ಬಲವಾದ ಸಮಾಜವು ಇನ್ನೊಂದು ಪಂಗಡವಿರುವುದು ಹೀಗೆ ಸಮಾಜವು ನಾನಾ ಅಭಿಪ್ರಾಯ ಭೇದಗಳಿಂದ ಸೀರ್ಣವಾಗಿರುವುದು

ಹಿಂದೂ ಪ್ರಾಚೀನ ನಾಗರೀಕತೆಯೊಡನೆ ಪಾಶ್ಚಾತ್ಯ ನವನಾಗರೀಕತೆಯು ಸಂಘಟನೆಯೇ ಈ ಎಲ್ಲಾ ಭೇದಗಳಿಗೆ ಕಾರಣವಾಗಿರವುದು ಚರಿತ್ರಕರ್ತರಿಗೆ ನಿರ್ಧರಿಸಲು ದುಸಾಧ್ಯವಾದ ಅತಿ ಪ್ರಾಚೀನ ಕಾಲದಿಂದ ಒಂದೇ ಸಮನೆ [illegible] ಸದವಳಿಕೆಯಾಗಿ ಬಂದ್ದ, ಪುರಾತನ ನಾಗರೀಕತೆಯಿಂದ ಸಿತವಾದ ಸಂಪ್ರದಾಯ ಮತ ವಸ್ತು ನೀತಿ ವಿಷಯಕವಾದ ಎಲ್ಲಾ ಶಿಷ್ಟಾಚಾರಗಳು ಈ ಊ ಭಾರತೀಯ ಸಮಾಜ ವ್ಯವಸ್ಥಾ ಕ್ರಮಗಳ ಜೀವಕಲೆಯಾಗಿರುವವು ಭಾರತೀಯರ ಜೀವಿತವೂ ಇವರ ನಿತ್ಯದ ಕೆಲಸ ಸಾಧನವೂ ಈ ಶಿಷ್ಟಾಚಾರಗಳಿಂದ ಪ್ರೇರಿತವಾಗಿರುವುದು.

ವ್ಯಾಪಾರ, ಕಲಾಶಾಸ್ತ್ರಗಳ ಅಭಿವೃದ್ಧಿಯಿಂದ ವಿಶೇಷ ಸಂಪತ್ತನ್ನೂ ಅಧಿಕಾರವನ್ನೂ ಹೊಂದಿರುವ ನವನಾಗರೀಕತೆಯು ಭಾರತೀಯ ಪುರಾತನ ನಾಗರೀಕತೆಯ ಅಂಕಿತವನ್ನು ಹಿಂದೂಸ್ಥಾನದಲ್ಲಿ ಅಳಿಸಿ ಬಿಡಲು ಪ್ರಯತ್ನಿಸುವುದು ಈ ಪಾಶ್ಚಾತ್ಯ ನಾಗರೀಕತೆಯು ಪಾಶ್ಚಾತ್ಯ ದೇಶಗಳಲ್ಲಿ ಒಳ್ಳೆಯನ್ನುಂಟುಮಾಡಿರುವದಾದರೂ ಸಾಮಾಜಿಕ ವಿಷಯಗಳಲ್ಲಿ ಪಾಂಡಿತ್ಯವನ್ನು ಪಡದ ಕೆಲವು ವಿದ್ವಾಂಸರು ಈ ಸುಧಾರಣೆಯಿಂದ ವ್ಯಕ್ತವಾಗುವ ಒಳ್ಳಿತಕ್ಕಿಂತ ಹೆಚ್ಚು ಅನರ್ಥವು ಉಂಟಾಗಬಹುದೆಂದು ಅಭಿಪ್ರಾಯಪಡುತ್ತಾರೆ ಯುರೋಪ ಖಂಡದಲ್ಲಿ ಉಜ್ವಲವಾಗಿರುವ ಈ ನವ ಸುಧಾರಣೆಯು ಹಿಂದೂಸ್ಥಾನದ ಸರ್ವ ಕಡೆಗಳಲ್ಲಿಯೂ ಪಸರಿಸಿ ನಾವು ಈ ಮೊದಲು ಸೂಚಿಸಿದ ತೆ ಭಾರತೀಯರ ಪ್ರಾಚೀನ ಸುಧಾರಣೆಯೊಂದಿಗೆ ಹೋರಾಡುವುದು ಈ ಹೋರಾಟದ ದೆಸೆಯಿಂದ, ನಮ್ಮ ಪ್ರಾಚೀನ ಸುಧಾರಣೆಯನ್ನು ಇದ್ದಂತೆ ಇರಗೊಡಿಸುವುದಾಗಲೀ ನವೀನ ಸುಧಾರಣೆಯನ್ನು ಪೂರ್ಣವಾಗಿ ತ್ಯಜಿಸುವುದಾಗಲೀ ಕಾರ್ಯತಃ ಸಾಧ್ಯವಲ್ಲ ಎರಡು ಸುಧಾರಣೆಗಳ ಸಮ್ಮಿಶ್ರದಿಂದ ಸಮಾಜಕ್ಕೆ ಸಮತಾಳವುಳ್ಳ ನವೀನ ಒಂದು ಸುಧಾರಣೆಯು ಜನಿತವಾಗುವುದೆಂಬುವುದನ್ನು ಈ ಮೊದಲು ಆಗಿಹೋದ ಇಂಥಾ ಲೋಕ ಚರಿತ್ರೆಯಿಂದ ತಿಳಕೊಳ್ಳಬಹುದು ಇಂಥಾ ಸಮತಾಳವುಳ್ಳ ಸುಧಾರಣೆಯುಂಟಾಗುವಂತೆ ಸಮಾಜದಲ್ಲಿ ಆಗುವಂಥಾ ಮಾರ್ಪಾಟಗಳಿಗೆ ಸಹಾಯಕರಾಗಿ ಸಂಘಸಂಸ್ಕಾರವನ್ನು ಕೈಕೊಂಡ ಪ್ರಜಾವತ್ಸಲರು ವರ್ತಿಸಬೇಕಾಗಿರುವುದು

ಹಿಂದೂ ಸಮಾಜದಲ್ಲಿ ಈ ರೀತಿ ಸಂಘ ಸಂಸ್ಕಾರದ ಕಾರ್ಯವು ಬಹಳ ಪ್ರಯಾಸವಾಗಿ [illegible] ಸಮುದಾಯದಲ್ಲಿ ತಾವು ಎಂತೆಂತ ಮಾರ್ಗಗಳನ್ನನುಸರಿಸಿ ಪ್ರಾಚೀನ [illegible] ಯನ್ನು [illegible] ವುದರ ವಿಷಯ ಇರುವ ಅಜ್ಞಾನ ಮೊದಲಾದ [illegible] ಹೊರ [illegible] ಜಾಗ್ರರೂಕತೆಯಿಂದ ತಿದ್ದಿಕೊಳ್ಳಬೇಕಾ [illegible] ಯಾವ ಮಾರ್ಪಾಟಗಳಾಗಲಿ ಜನರಲ್ಲಿ [illegible]

[illegible] ಪ್ರಯತ್ನಗಳಿಯನ್ನು [illegible] ಪುರಾತನ ವಿಚಾರಗಳನ್ನೆಲ್ಲಾ ಬಿಟ್ಟು ಪಾಶ್ಚಾತ್ಯ ಸುಧಾರಣೆ ಕ್ರಮವನ್ನೇ ಕ್ರಮವಾಗಿ ಅನುಸರಿಸುವುದೇ ತಕ್ಕ ಉಪಾಯವೆಂತ ಇಂಥವರು ಅಭಿಪ್ರಾಯಪಟ್ಟು ನಮ್ಮ ಪುರಾತನ ಸುಧಾರಣೆಯಿಂದ ಸೂಚಿತವಾದ ಮಾರ್ಗವನ್ನು ಸಮಾಜವು ಹೊಂದುತ್ತಿರುವ ವಿಕಾಸದಿರದ ತಿದ್ದುವುದು ಬರಿಯ ಹುಚ್ಚುತನವೆಂತ ಭಾವಿಸಬಹುದು ಆದರೆ ತಮ್ಮ ಪ್ರಯತ್ನಗಳು ಶೀಘ್ರದಲ್ಲಿ ಫಲಹೊಂದಲಿಲ್ಲವೆಂತ ಹೀಗೆ ಪರವಶರಾಗುವ ಮೊದಲು ಹಿಂದೂ ಸುಧಾರಣೆಯು ಎಷ್ಟು ಸಹಸ್ರ ವರುಷಗಳಿಂದ ನಡುವಳಿಕೆಯಾಗಿ ಬಂದಿರುವುದೆಂಬದನ್ನು ತಿಳಕೊಳ್ಳತಕ್ಕದ್ದು ಇದರಲ್ಲಿ ಅಂತರ್ಗತವಾಗಿರುವ ಯಾವ ಉದಾತ್ತ ಕಲ್ಪನೆಯು ಇದನ್ನು ಇಷ್ಟರ ವರೇಗೆ ಅನೇಕ ಅವಾಂತರಗಳಿಗೆ ಗುರಿಯಾದರೂ ಉರ್ಜಿತವಿಡಿಸಿರುವುದೆಂಬದನ್ನು ವಿಚಾರಿಸಿಕೊಳ್ಳಬೇಕು ಜೈನ್ಯ, ಬೌದ್ಧ ಮೊದಲಾದ ಮತಾನುಯಾಯಿಗಳ ಎದುರಾಟವನ್ನು ತಾಳಿಕೊಂಡು ಕೆಲವು ಪಾಷಂಡಿ ಮಹಮ್ಮದೀಯರ ಕ್ರೌರ್ಯವನ್ನು ಅನುಭವಿಸಿ ಪ್ರಕೃತ ಕ್ರೈಸ್ತ ಮಿಶನರಿಗಳ ತುಚ್ಛೀಕಾರವನ್ನು ಸಹ ಪರಿಗಣಿಸದೆ ಪಾಶ್ಚಾತ್ಯ ಶಿಕ್ಷಣಕ್ರಮಾವಲಂಬನದಿಂದಲೂ ಕೆಲವು ಅತಿ ಉಗ್ರ ಸಂಘಸಂಸ್ಕಾರದವರ ಪ್ರತಿಕೂಲ ಪ್ರಯತ್ನಗಳಿಂದಲೂ ಹೇಸದಿರುವ ಆರ್ಯರ ಪ್ರಾಚೀನ ಸುಧಾರಣೆಯು ಮಹತ್ವಿಕೆಯನ್ನು ಪೂರ್ಣವಾಗಿ ಅರಿತುಕೊಳ್ಳಬೇಕು ಹಿಂದೂ ಸಮಾಜದಲ್ಲಿ ಈ ಸುಧಾರಣೆಯ ವಿಕಸತೆಯು ಇನ್ನೂ ನೂಂದಿಹೋಗಿರುವುದಿಲ್ಲ ಇದನ್ನು ಪೂರ್ಣವಾಗಿ ನೊಂದಿಸಿ ಬಿಟ್ಟು ನವೀನವಾದದ್ದನ್ನೂ ಸಮಾಜದ ಸ್ವಭಾವ ವಿರೋಧವಾದದ್ದನ್ನೂ ಸೂಚಿಸುವ ಕಲ್ಪನೆಗಳುಳ್ಳ ಸುಧಾರಣೆಯನ್ನವಲಂಬಿಸಲು ಪ್ರಯತ್ನಿಸಿದರೆ ಸಮಾಜದ ಬಾಳು ಏನಾಗುವುದು? ಇದಕ್ಕೆಲ್ಲಾ ಗಮನಕೊಟ್ಟು ಭಾರತೀಯರು ತಮ್ಮ ಪುರಾತನ ನಾಗರೀಕತೆಯ ವಿಕಾಸದಿಂದ ಸಮಾಜದ ಅಭಿವೃದ್ಧಿಗೆ ಬೇಕಾದಂಶಗಳನ್ನು ನವ ಸುಧಾರಣೆಯಿಂದ ಸಂಗ್ರಹಿಸಿ ಭಾರತ ಭೂಮಿಯನ್ನು ಉದ್ಧರಿಸಲು ಪ್ರಯತ್ನಿಸಬೇಕಾಗಿರುವುದು

(ಮುಗಿಯಲಿಲ್ಲ / ಮುಂದೆ ಬರುವುದು)

ಬಂಟ್ವಾಳ ಡಿಪ್ಯುಟಿ ತಹಸೀಲದಾರರ ಆಫೀಸು

ಮೂಡಬಿದ್ರೆಯಲ್ಲಿ ಒಂದು ತಾಲೂಕು ಆಫೀಸು ಸಧ್ಯದಲ್ಲಿಯೇ ಸ್ಥಾಪಿಸಲ್ಪಡುವುದೆಂದು ವಾಚಕರಿಗೆ ತಿಳಿದಿರುವುದಷ್ಟೆ ಹೀಗೆ ಸ್ಥಾಪಿಸಲ್ಪಡುವ ತಾಲೂಕು ಆಫೀಸಿನೊಂದಿಗೆ ಒಂದು ಸಬ್ ಮೇಜಿಸ್ಟ್ರೇಟರವರ ಆಫೀಸು ಸಹಾ ಇರಗೊಡಿಸಬೇಕಾದ್ದರಿಂದ ಬಂಟ್ವಾಳದಲ್ಲಿಯ ಡಿಪ್ಯುಟಿ ತಹಸೀಲದಾರರವರ ಆಫೀಸನ್ನು ತೆಗೆದು ಮೂಡಬಿದ್ರೆಯಲ್ಲಿ ಅದನ್ನು ಸಬ್ ಮೇಜಿಸ್ಟ್ರೇಟರವರ ಆಫೀಸನ್ನಾಗಿ ಸ್ಥಾಪಿಸ ಬೇಕೆ ಯೋಚಿಸಿರುವರೆಂಬದಾಗಿ ಕೇಳುತ್ತೇವೆ ಬಂಟವಾಳ ಪಟ್ಟಣವು ಕೆಲವು ವರುಷಗಳ ಹಿಂದೆ ಒಂದು ತಾಲೂಕು ಪಟ್ಟಣವಾಗಿದ್ದು ತಹಸೀಲದಾರ ಮೇಜಿಸ್ಟ್ರೇಟರವರ ಆಫೀಸೂ ಡಿಸ್ಟ್ರಿಕ್ ಮುನ್ಸಿಫ್ ಕೋರ್ಟೂ ಇಲ್ಲಿ ಇದ್ದವು ತಹಸೀಲದಾರರವರ ಕೈಕೆಳಗಿರುವ ತಾಲೂಕುಗಳ ವಿಸ್ತೀರ್ಣವನ್ನು ಹೆಚ್ಚಿಸಿ ಜಿಲ್ಲೆಯು ತಾಲೂಕು ತಾಲೂಕುಗಳಾಗಿ ತಿರಿಗೂಮ್ಮೆ ವಿಭಾಗಿಸಲ್ಪಟ್ಟಾಗ ಇಲ್ಲಿಂದ ತಾಲೂಕು ಆಫೀಸು ತೆಗದುಹಾಕಲ್ಪಟ್ಟಿತು ಇದರೊಂದಿಗೆ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು ಸಹಾ ಇಲ್ಲಿಂದ ಹೋಯಿತು ಈಗ ಇಲ್ಲಿರುವ ಡಿಪ್ಯುಟಿ ತಹಸೀಲದಾರರ ಆಫೀಸನ್ನು ಸಹಾ ತೆಗದುಬಿಟ್ಟರೆ ಬಂಟವಾಳದಲ್ಲಿಯ ನಿವಾಸಿಕರು ಹೆಚ್ಚಿನ ಕಷ್ಟ ನಷ್ಟಗಳಿಗೆ ಗುರಿಯಾಗುವರೆಂಬುವುದರಲ್ಲಿ ಸಂದೇಹವಿಲ್ಲ

ಸರಕಾರಿ ಆಫೀಸುಗಳು ಇದ್ದಲ್ಲಿ ಕ್ರಮೇಣ ನಾಡು ಬೆಳದು ಪಟ್ಟಣವಾಗುವುದು ಇದರಿಂದ ವ್ಯಾಪಾರ ವೈವಾಟಗಳು ಹೆಚ್ಚಾಗಿ ತಮ್ಮ ಉದರ ಪೋಷಣೆ ನಿಮಿತ್ತ ಊರಿನ ಅಜುಬಾಜುಗಳಿಂದ ಜನರು ಬಂದು ಸೇರಿ ನಿವಾಸಿಕರ ಸಂಖ್ಯೆಯು ಹೆಚ್ಚುವುದು ಇದಕ್ಕನುಗುಣವಾಗಿ ಆಸ್ಪತ್ರೆ ಶಾಲೆಗಳು ಮೊದಲಾದ ಸರ್ವ ಜನಪ್ರಯೋಜನಾರ್ಥಕ ಸಂಸ್ಥೆಗಳು ಏರ್ಪಡಿಸಲ್ಪಡುವವು ಈ ರೀತಿಯ ಅಭಿವೃದ್ಧಿಯನ್ನು ಪಡದು ಬಂಟವಾಳವು ಒಂದು ಪಟ್ಟಣವಾಗಿ ಬೆಳದು ಹೋದ್ದರಿಂದ ಇಲ್ಲಿ ಈಗ ಉಳಿದಿರುವ ಸ್ವಲ್ಪವಾದರೂ ವಿಶೇಷತ್ವವುಳ್ಳ ಒಂದೇ ಒಂದು ಸರಕಾರಿ ಆಫೀಸಾದ ಡಿಪ್ಯುಟಿ ತಹಸೀಲದಾರರವರ ಆಫೀಸನ್ನು ತೆಗದು ಹಾಕಿದ್ದಲ್ಲಿ ಪಟ್ಟಣಕ್ಕೂ ಅದರ ನಿವಾಸಿಕರಿಗೂ ಉಂಟಾಗುವ ನಷ್ಟವು ತೊಂದರೆಯೂ ಎಷ್ಟೆಂದು ಭಾವಿಸಬಹುದು

ಇದಲ್ಲದೆ ಮಂಗಳೂರು ಬಂದರಿಗೆ ಘಟ್ಟಗಳಿಂದ ಆಮದಾಗುವ ಸರಕೆಲ್ಲವೂ ಹಯ್ಯೋಣವಾಗುವ ಮಾರ್ಗಗಳು ಇಲ್ಲಿ ಒಟ್ಟು ಕೂಡುವವು ಅಜುಬಾಜುಗಳಲ್ಲಿರುವ ಅನೇಕ ಹಳ್ಳಿಗಳ ಪೈರಿನಿಂದ ಉತ್ಪತ್ತಿ ಎಲ್ಲವೂ ಈ ಊರಲ್ಲಿ ಜಮೆಯಾಗಿ ಇಲ್ಲಿಂದ ನೇತ್ರಾವತೀ ಮಾರ್ಗವಾಗಿ ಮಂಗಳೂರಿಗೆ ಸಾಗಿಸಲ್ಪಡುತ್ತದೆ ಹೀಗೆ ಬಳನಾಡು ಪ್ರಾಂತ್ಯಗಳಿಗೆ ಇದೇ ವ್ಯಾಪಾರದ ಮಧ್ಯಸ್ಥಳವಾಗಿರುತ್ತದೆ. ಇಂಥಾ ಸ್ಥಳದಲ್ಲಿ ಶಾಂತತೆಯೂ ನೆಮ್ಮದಿಯೂ ಹೆಚ್ಚಾಗಿದ್ದು ಜನರಿಗೆ ವ್ಯಾಪಾರ ವೈವಾಟಗಳಲ್ಲಿ ಭದ್ರತೆಯೂ ಭರವಸೆಯೂ ಹೆಚ್ಚಾಗುವಂತೆ ಒಂದು ಡಿಪ್ಯುಟಿ ತಹಸೀಲದಾರರವರ ಆಫೀಸಾದರೂ ಇರಗೊಡಿಸುವುದು ಅಗತ್ಯ ಒಂದುವೇಳೆ ಮೈಸೂರು ಪ್ರಾಂತ್ಯಕ್ಕೂ ಮಂಗಳೂರಿಗೂ ರೈಲ್ವೆ ಮಾರ್ಗಗಳ ಅನುಕೂಲತೆ ಇದ್ದು ಅಂಥಾ ರೈಲ್ವೆ ಈ ಊರಿನ ಪ್ರಾಂತ್ಯದಿಂದ ಮಂಗಳೂರಿಗೆ [illegible] ಆಫೀಸು ವ್ಯಾಪಾರ [illegible] ಹೇಳಬಹುದಿತ್ತು. ಆದ [illegible]

[illegible] ಮಾರ್ಗವು ಸ್ಥಾಪಿಸಲ್ಪಡುವಾಗ ಇನ್ನು ಸ್ವಲ್ಪ ವರುಷಗಳು ಅವಕಾಶವಿದ್ದು [illegible] ನಿರ್ಣಯಿಸುವುದು ಅಸಾಧ್ಯವಾದ್ದರಿಂದ ಈಗ ಡಿಪ್ಯುಟಿ ತಹಸೀಲದಾರ ಮೇಜಿಸ್ಟ್ರೀಟರ ಆಫೀಸನ್ನು ಇಲ್ಲಿಂದ ತೆಗೆದು ಬಿಡುವುದು ಯುಕ್ತವಲ್ಲ.

ಸರಕಾರದವರು ಬಂಟವಾಳದಿಂದ ಡಿಪ್ಯುಟಿ ತಹಸೀಲದಾರರವರ ಆಫೀಸನ್ನು ತೆಗೆದು ಹಾಕುವ ಮುಂಚೆ ಈ ವಿಷಯಗಳಿಗೆಲ್ಲಾ ಗಮನ ಕೊಟ್ಟು ಬಂಟವಾಳ ಪಟ್ಟಣದ ಅಭಿವೃದ್ಧಿಗೆ ಹಾನಿಯುಂಟಾಗದಂತೆ ಇಲ್ಲಿಯೇ ಈ ಆಫೀಸನ್ನು ಇರಗೊಡಿಸಬೇಕಾಗಿ ಅಪೇಕ್ಷಿಸುತ್ತೇವೆ

~~~~~~

ಅಲ್ಲಾವುದ್ದಿನ್ ಖಿಲಜಿಯ ಕಾಯಿದೆಗಳು.

(ಪ್ರೊಫೆಸರ್ ಜೊಗಿಂದ್ರನಾಥ ಸಮಾದ್ದಾರರಿಂದ)

~~~~~~

"ಅಲ್ಲಾವುದ್ದಿನ್ ಖಿಲಜಿಯು ತಂದೆಗೆ ಸಮಾನವಾದ ತನ್ನ ಚಿಕ್ಕಪ್ಪನನ್ನು ಕೊಂದು ೧೨೯೬ನೇ ಇಸವಿಯಲ್ಲಿ ಡಿಲ್ಲಿಯ ಸಿಂಹಾಸನವನ್ನೇರಿದನು. ಆತನ ಆಳ್ವಿಕೆಯ ಹೆಚ್ಚಿನ ಕಾಲವು ಯುದ್ಧಗಳಲ್ಲಿಯೇ ಕಳೆಯಿತಾದರೂ "ತಾರಿಖ್-ಇ ಫಿರೋಜಶಾಹಿ" ಎಂಬ ಚರಿತ್ರೆಯಲ್ಲಿ ನೋಡಿದರೆ ಹಿಂದುಸ್ಥಾನದ ಚರಿತ್ರೆಯಲ್ಲಿ ಆತನ ಹೆಸರು ಹೆಚ್ಚಿನ ಪ್ರಖ್ಯಾತಿಗೆ ಬರಲು ಕಾರಣವಾದ ಎರಡೇ ಕಾಯಿದೆಗಳು ಕಾಣುತ್ತವೆ.

ಆ ಎರಡು ಕಾಯಿದೆಗಳಲ್ಲಿ ಮೊದಲನೆಯದು ಮದ್ಯಪಾನದ ಕಠಿಣ ಪ್ರತಿಷೇಧವು. ಅಲ್ಲಾವುದ್ದಿನನು ಚಿಕ್ಕ ಪ್ರಾಯದಲ್ಲಿ ಮದ್ಯವನ್ನು ಪ್ರಾಶನ ಮಾಡುತ್ತಿದ್ದನಾದರೂ ಅದರ ಅವಗುಣಗಳನ್ನು ತಿಳಿದು ತಾನು ಸ್ವತಃ ಅದರ ಅಭ್ಯಾಸವನ್ನು ಬಿಟ್ಟದ್ದಲ್ಲದೇ ಅದನ್ನು ಸರ್ವತ್ರ ನಿಲ್ಲಿಸುವ ಸಲುವಾಗಿ ಕಾಯಿದೆಯನ್ನೇರ್ಪಡಿಸಿದನು. ಯಾರೊಬ್ಬರೂ ಸಾರಾಯಿಯನ್ನು ಕುಡಿಯಲೂ ಮಾರಲೂ ಆಗದು, ಮಾದಕ ಔಷಧಗಳನ್ನು ಮಾಡುವುದೂ ಸಹ ನಿಲ್ಲಿಸಿದನು. ಅದೇ ಸಮಯ ಜೂಗಾರಾಟವನ್ನು ಆಡಕೂಡದೆಂದು ಕಟ್ಟುಮಾಡಿದನು. ಈ ಕಾಯಿದೆಯು ಸರಿಯಾಗಿ ನಡಿಯುತ್ತದೊ ಇಲ್ಲವೊ ಎಂಬದನ್ನು ಚನ್ನಾಗಿ ನೋಡಿಕೊಳ್ಳುತ್ತಿದ್ದನು. ಬೋಧನೆಗಿಂತ ಉದಾಹರಣೆಯೇ ಸರಿಯಾದ್ದೆಂದು ಕಂಡು ಬಾದಶಹನು ಎಲ್ಲ ಕುಡಿಯುವ ಪಾತ್ರೆಗಳನ್ನು ಒಡೆಯಿಸಿ ಹೆಚ್ಚಿನ ಮೌಲ್ಯದ ಸಾರಾಯಿಯನ್ನು ಅರಮನೆಯ ಕೋಠಿ ವಗೈರೆ ಸ್ಥಳಗಳಿಂದ ಹೊರತರಿಸಿ ಬೀದಿಗಳಲ್ಲಿ ಚೆಲ್ಲಿ ಬಿಡುಮ ಮಾಡಿಸಿ ಕಾವುದಾದರೂ ಕುಡಿಯಬಾರದೆಂದು ಕಠಿಣವಾದ ಹುಕುಂ ಕೊಟ್ಟನು. ಕಾಯಿದೆಯನ್ನು ಡಂಗುರ ಸಾರಿಸುವದರ ಮೂಲಕ ತಿಳಿಯಗೊಡಿಸಿದ್ದಲ್ಲದೆ ವಿರೋಧವಾಗಿ ನಡೆದವರನ್ನು ಶಿಕ್ಷಿಸಿದನು. ತನ್ನ ಕಾಯಿದೆಗನುಸಾರವಾಗಿ ನಡಿಯುತ್ತಾದೊ ಇಲ್ಲವೊ ಎಂಬದನ್ನು ತಿಳಕೊಳ್ಳುವ ಉದ್ದಿಶ್ಯ ಗುಪ್ತಚಾರಕರನ್ನು ಕೂಡ ನೇಮಿಸಿದನು.

ಇನ್ನೊಂದು ಕಾಯಿದೆಯು [illegible] ನಿಲ್ಲಿಸುವ ವಿಷಯದಲ್ಲಾಗಿದ್ದಿತು. ಎಲ್ಲಾ ಧಾನ್ಯಗಳ ಬೆಲೆಯು [illegible] ನಿರ್ಣಯಿಸಲ್ಪಟ್ಟು ಧಾರಣೆಯು ರಾಜ್ಯದಲ್ಲೆಲ್ಲಾ ಏಕಪ್ರಕಾರವಾಗಿರಬೇಕೆಂದೂ [illegible] ಮಾಡಿಸಿದನು. ಈ ಧಾರಣೆಗೆ ವಿರೋಧವಾಗಿ ಕ್ರಯವಿಕ್ರಯ ಮಾಡುವವರ [illegible] ಆಲೋಚಿಸುವೆನೆಂದು ಹುಕುಂ ಕೊಟ್ಟನು. ಬೆಲೆಯು ಧಾರಣೆಯನ್ನು ಹೆಚ್ಚು ಕಡಿಮೆ ಆಗದಂತೆ ಮಾಡುವದಕ್ಕಾಗಿ ಒಬ್ಬ ಉದ್ಯೋಗಸ್ಥನನ್ನು ನೇಮಿಸಿದನು.

ರಾಜನು ತನ್ನ ರಾಜ್ಯವಲ್ಲೆಲ್ಲ ಗೋಲಗಳನ್ನು ಸ್ಥಾಪಿಸಬೇಕೆಂದು ಸರಿಯಾದ ಏರ್ಪಾಟು ಮಾಡಿದನು. ಅದನ್ನು ಪ್ರಾಕಾರಕ್ಕೆ ತರುವ ಬಗ್ಯಾಗಿ ಕಂದಾಯಕ್ಕೆ ಬದಲು ಧಾನ್ಯವನ್ನೆ ಪಂಜಾಬು ವಗೈರೆ ಪ್ರಾಂತ್ಯಗಳಿಂದ ವಸೂಲು ಮಾಡಿ ಆ ಧಾನ್ಯಗಳನ್ನು ದೊಡ್ಡ ಭಂಡಿಗಳಲ್ಲಿ ತುಂಬಿಸಿ ರಾಜಧಾನಿಗೂ ಇತರ ಗೋಲಗಳಿಗೂ ಸಾಗಿಸುವಂತೆ ಮಾಡಿದುದರಿಂದ ಈ ಉಗ್ರಾಣಗಳು ಯಾವಾಗಲೂ ತುಂಬಿಯೇ ಇರುತ್ತಿದ್ದವು. ಮಳೆಯು ಕಡಿಮೆಯಾಗಿ ಅಥವಾ ಹೆಚ್ಚಾಗಿ ಬೆಳೆಬಾರದ ಪ್ರದೇಶಗಳಲ್ಲಿ ಈ ಗೋಲಗಳ ಧಾನ್ಯವನ್ನು ರಾಜನಿಂದ ನಿಯಮಿಸಲ್ಪಟ್ಟು, ಎಲ್ಲಾ ಕಡೆಯಲ್ಲಿಯೂ ಒಂದೇ ಸಮನಾಗಿರುವ ಧಾರಣೆಯಿಂದ ಬರಗಾಲವಿದ್ದರೂ ಇಲ್ಲದಿದ್ದರೂ ಮಾರಿಸಿದನು. ಈ ಧಾರಣೆಯು ಎಂದೂ ಹೆಚ್ಚಿಸಲ್ಪಡಲಿಲ್ಲ.

ಯಾವ ಸಂತೆಗಳಲ್ಲ್ಯಾದರೂ ವ್ಯಾಪಾರಿಕರು ಬರಗಾಲದಲ್ಲಿ ಹೆಚ್ಚಿನ ಧಾರಣೆಯಿಂದ ಧಾನ್ಯಗಳನ್ನು ಮಾರಕೂಡದೆಂದೂ ತನ್ನ ಆಜ್ಞೆಯು ಅಕ್ಷರಶಃ ನಡಿಯುತ್ತದೊ ಇಲ್ಲವೊ ಎಂಬದ್ದನ್ನು ವಿಚಾರಿಸುವದಕ್ಕೋಸ್ಕರ ಉದ್ಯೋಗಸ್ಥರನ್ನು ಅಲ್ಲಲ್ಲಿ ಇಟ್ಟನು. ಮಹಾಜನಗಳು ಧಾನ್ಯವನ್ನು ದಾಸ್ತಾನು ಇಡಲಾಗದೆಂತಾಯಿತು. ಯಾವನಾದರೊಬ್ಬ ಮನುಷ್ಯನು ಅರ್ಧ ಮಣ ಧಾನ್ಯವನ್ನು ಮಾರಿಗರೂ ಅಲ್ಪ ಕ್ರಯಕ್ಕೆ ಪಡಕೊಂಡು ಲಾಭದಿಂದ ಮಾರಿದರೂ ಶಿಕ್ಷಿಸಲ್ಪಟ್ಟಾರೆಂದು ಹುಕುಂ ಕೊಟ್ಟನು. ರಖಮು ವ್ಯಾಪಾರಸ್ಥರು ಈ ರೀತಿ ಮಾಡಿದರೆ ಅವರ ಧಾನ್ಯಗಳೆಲ್ಲ ಸರಕಾರಕ್ಕೆ ಜಪ್ತಿಮಾಡಿಸಲ್ಪಡುತ್ತಿತ್ತು. ಆಯಾ ಪ್ರಾಂತ್ಯದ ಸುಭೆದಾರರು ಹೆಚ್ಚು ಕಡಿಮೆ ಕ್ರಯದ ಮಾರಾಟದ ಕುರಿತು ಯಾವ ತರದ ತಹಾಮ್ಮಾಡಲಾಗದು.

ಬೆಳೆಯು ಕಟಾವಾಗಿ ಸೈದಾಸ್ತು ಆಗುವ ಮುಂಚೆ ಮುಂಗಡ ಸರಕೊಂಡು ಸಾಟೆ ಮಾಡಬಾರದು. ರೈತರು ಮಾರುವುದೂ [illegible]

[illegible] ವನ್ನು ಉಲ್ಲಂಘಿಸಿ ಕ್ರಯವಿಕ್ರಯ ಮಾಡುವವರೂ [illegible] ಸಲ್ಪಡುತ್ತಿರುವರು.

ಈ ಕಾಯಿದೆಯಿಂದ ೨ ಪರಿಣಾಮಗಳಾದವು. ದೇಶದಲ್ಲಿ ಸೈದಾಸ್ತಾದ ಧಾನ್ಯಗಳು ದೇಶದಲ್ಲೇ ಉಳಿದವು. ಬರಗಾಲದ ಸಂಭವವೂ ಕಡಿಮೆಯಾಯಿತು. ಬರಗಾಲದ ಧಾರಣೆಯು ನಿರ್ಣಯಿಸಲ್ಪಟ್ಟಿರುವದರಿಂದ ಬಡಜನಗಳಿಗೆ ಹೆಚ್ಚಿನ ಉಪಯೋಗವಾಯಿತು. ಎಂಥ ಬರಗಾಲದಲ್ಲಿಯೂ ಈ ಧಾರಣೆಯು ಏಕಪ್ರಕಾರವಿದ್ದಿರುತ್ತಿದ್ದುದರಿಂದ ಸರ್ವರಿಗೂ ಸಮಾನವಾದ ಪ್ರಯೋಜನ ಶಿಕ್ಕಿತು. ಅಕ್ಕಿಯ ಕೊರತೆಯೇ ಇರಲಿಲ್ಲ. ಈಗಿನ ದಿನಗಳಲ್ಲಿ ದಾಸ್ತಾನು ಭಂಡಸಾಲೆಗಳು ಧಾನ್ಯಗಳಿಂದ ತುಂಬಿದ್ದು, ಬರಗಾಲವು ಹತ್ತರವಿರುತ್ತದಾದರೂ ಮಿತಿಮೀರಿದ ಬೆಲೆಸಿಕ್ಕದ ಹೊರತು ಸಾವಕಾರರು ಮಾರುವದಿಲ್ಲ. ಆದರೆ ಆ ಕಾಲದಲ್ಲಿ ಆ ರೀತಿಯಾಗಬೇ ಒಳಮಾರಾಟವಾಗಲೀ ಇರಲಿಲ್ಲ.

ರಾಯಸ್ ಸಾರ್ಪತಿ ಶಂಕರ ಚೌಧುರಿಯವರ ವಿಖ್ಯಾತವಾದ ಧರ್ಮಗೋಲದ ಸಿದ್ಧಾಂತದ ಮೇರೆಗೆ ಈಗೀಗ ಕೆಲವರು ಧಾನ್ಯದ ಬ್ಯಾಂಕುಗಳನ್ನು ಸ್ಥಾಪಿಸಲು ಪ್ರಯತ್ನಿಸುತ್ತಾರೆ. ಬಂಗಾಳ ಸೈನ್ಯ ಮೂಲಕ ದರ್ಭಂಗದ ಮಹಾರಾಜರ ಅಧ್ಯಕ್ಷತೆಯಿಂದ "ಅನ್ನರಕ್ಷಿಣಿ ಸಭೆ" ಎಂಬ ಸಂಸ್ಥೆಯೊಂದು ಸ್ಥಾಪಿಸಲ್ಪಟ್ಟಿದೆ. ಅದರ ಉದ್ದೇಶಗಳು ಸ್ತುತ್ಯವಾಗಿರುತ್ತದಾದ್ದರಿಂದ ಪರಸ್ಪರ ಸಹಕಾರ ಸಹಾನುಭೂತಿ ಸಿಕ್ಕಿಯದೆ. ಆ ಸಭೆಯ ಸ್ಥಾಪಕರಾದ ಬಾಬು ದುರ್ಗಾದಾಸಲಾಹಿರಿಯವರ ಪ್ರಯತ್ನಗಳು ಸಫಲವಾಗಿರುವದರಿಂದ ಅವರು ವಿಶೇಷ ಸ್ತುತಿಗೆ ಪಾತ್ರರಾಗಿರುತ್ತಾರೆ. ಇಂಥ ಸಂಸ್ಥೆಯ ಸಂಗತಿಗಳನ್ನು ತಿಳಿದು ಗವರ್ನಮೆಂಟಿನವರು ಧಾರಣೆ ಹೆಚ್ಚುವ ಕಾರಣಗಳನ್ನು ತನಿಖಿ ಮಾಡುವಂತೆ ನಿರ್ಣಯಿಸಲ್ಪಟ್ಟಿದೆ.

ಅಲ್ಲಾವುದ್ದಿನ್ ಖಿಲಜಿಯ ಕಾಯಿದೆಯ ಸಂಗತಿ "ತಾರಿಖಿ ಫಿರೋಜಶಾಹಿ"ಯಲ್ಲಿ ಮಾತ್ರವಲ್ಲ, ಈ-ಬಾನ್-ಬಟೂಟಾ ಎಂಬವನ ಸಂಚರಣೆಯ ಚರಿತ್ರೆಯಲ್ಲೂ ಕಾಣುತ್ತದೆ. ಧಾನ್ಯಗಳಿಗೆ ವಿಪರೀತ ಕ್ರಯವೇರಿದಾಗ ರಾಜನು ಸರಕಾರದ ದಾಸ್ತಾನು ಗೋಲಗಳನ್ನು ತೆರದು ಬೆಲೆ ಕಡಿಮೆಯಾಗುವ ತನಕ ಮಾರುತ್ತಿದ್ದನು. ಒಮ್ಮೆ ಹೀಗೆ ಬೆಲೆ ಏರಿದ ಸಮಯ ರಾಜನು ತಾನು ನಿಗದಿ ಮಾಡಿದ ಧಾರಣೆಗೆ ಮಾರಬೇಕೆಂತ ವ್ಯಾಪಾರಿಗಳಿಗೆ ವಿಧಿಸಲು ಅವರು ಒಪ್ಪಲಿಲ್ಲ. ಆಗ್ಯೆ ರಾಜನು ಜನರಿಗೆ ತನ್ನ ಗೋಲಗಳಿಂದಲ್ಲದೇ ಬೇರೆ ವ್ಯಾಪಾರಿಗಳಿಂದ ಧಾನ್ಯ ಕೊಳ್ಳಬಾರದೆಂತ ಕಟ್ಟುಮಾಡಿ ೬ ತಿಂಗಳವರೇಗೆ ಈ ರೀತಿಯಿಂದ ಮಾರಲು ವ್ಯಾಪಾರಿಗಳ ಧಾನ್ಯಕ್ಕೆ ಹುಳ ಕುಟ್ಟಿ ಹಿಡಿಯುವ ಕಾಲ ಬಂತು. ವ್ಯಾಪಾರಿಗಳೆಲ್ಲ ಸುಲ್ತಾನಗೆ ಮೊರೆ ಇಟ್ಟರು. ಆದರೂ ರಾಜನು ಅವರಿಗೆ ಕಡಿಮೆಯಾದ ದರದಲ್ಲೇ ಮಾರಬೇಕೆಂದು ಅಪ್ಪಣೆ ಕೊಟ್ಟನು."

"ವಾಚಕರೇ! ಈ ಮೇಲಿನ ಅಲ್ಲಾವುದ್ದಿನ ಖಿಲಜಿಯ ಕಾಯಿದೆಗಳಿಗೂ ಈಗಿನ ವ್ಯಾಪಾರದ ನಡತೆಗೂ ಸರಿ ನೋಡಿದರೆ ಘುಹದಂತರ ಕಾಣುತ್ತದೆಯಲ್ಲವೆ? ಬ್ಲೇಸಾಯ ಸಾಗುವಳಿಯ ಕಾಲದಲ್ಲಿಯೂ ಆಗೋಸ್ತು ಸಪ್ಟಂಬರ ತಿಂಗಳುಗಳಲ್ಲಿ ಅನಿವಾರ್ಯದ ಸಂಗತಿಯಿಂದ ಕಷ್ಟಪಡುತ್ತಿರುವಾಗಲೂ ಬಡ ವಕ್ಕಲುಗಳಿಗೆ ವಂದುಮೂನಿಗೆ (ಮಂಗಳೂರು ಮುಡಿ) ಕೊಡತ್ತಲು ಅಕ್ಕಚ್ಚಿನ ಅಕ್ಕಿಯನ್ನು ಕೊಟ್ಟು ಅದೇ ನವಂಬರ ತಿಂಗಳಲ್ಲಿ ಬೆಳೆ ಕಟಾವಾಗುತ್ತಿರುವಾಗಲೇ ಚೊಕ್ಕಟವಾಗಿ ಗೇರಿದ ಹನ್ನೊಂದು ಕಳಸಿ ಘಟವಾದ ಬತ್ತವನ್ನು ಮತ್ತು ಅದರ ಮೇಲು ಸಹ ವಸೂಲು ಮಾಡುವ ವ್ಯಾಪಾರಿಗಳಿಂದಲೂ ಅಷ್ಟೇ ಅಕ್ಕಿ ಅದೇ ಕಾಲದಲ್ಲಿ ಕೊಟ್ಟದ್ದಕ್ಕೆ ಶಿವರಾತ್ರಿಯ ವೇಳ್ಯ ದುಬಾರಿಯಾಗಿ ಮೌಲ್ಯವನ್ನು ತಕೊಳ್ಳುವ ಕಡಧಾರಣೆಯ ಬಂಡವಾಳಿಕರ ದೆಸೆಯಿಂದಲೂ ಬಡ ವಕ್ಕಲುಗಳ ಕಷ್ಟದ ಫಲವೆಲ್ಲ ಇಂಥವರ ಪಾಲಾಗುತ್ತದೆ. ಕುತ್ತಾಟ್, ಕೆಣಬು, ಶಿರಿ, ಭಂಡಸಾಲೆಗಳಲ್ಲಿ ತುಂಬಿಸಿಟ್ಟ ಅಕ್ಕಿಯನ್ನು ಕೊಂಡು ಉಣ್ಣುವ ಜನರು ಸಾಕಷ್ಟು ಬೆಲೆಗೆ ವಿಚಾರಿಸಿದರೆ ಬಯಿಸದಾದರೂ ಸಾವಕಾರರೂ ಪರಂದರುಗಳ ಧಾರಣೆಯನ್ನು ನಿರೀಕ್ಷಿಸುತ್ತಿರುವದಲ್ಲದೆ ಸ್ವದೇಶದ, ಸ್ವಗ್ರಾಮದವರ ಸ್ಥಿತಿಯನ್ನು ವಿಚಾರ ಮಾಡುವದಿಲ್ಲವು. ಈ ತರದ ನಡತೆಗಳಿಂದ ವಕ್ಕಲುಗಳೂ ಬಡರೈತರೂ ಇದ್ದ ಸೊತ್ತುಗಳನ್ನೆಲ್ಲ ಕಳಕೊಂಡು ನಿರ್ಗತಿಕರಾಗುವ ವೇಳ್ಯದಲ್ಲಿಯೇ ಕಡಧಾರಣೆಯ ಭಂಡವಾಳಿಕರೂ, ಸಾವಕಾರರೂ, ದೊಡ್ಡ ರೈತರೂ ಹೇರಳ ಹಣಕಟ್ಟುವರು. ಬಡವರು ತೀರಾ ಗತಿ ಇಲ್ಲದವರಾಗುವದೂ, ದೊಡ್ಡವರು ಮತ್ತಷ್ಟು ಶ್ರೀಮಂತರಾಗುವದೂ ಇದೇ ಕಾರಣವೆಂದು ಹೇಳಬಹುದು. ನಮ್ಮ ಸರಕಾರದವರು ಈ ವಿಷಯವನ್ನು ಆಲೋಚಿಸುತ್ತಿರುವರಾದರೂ, ಸುಶಿಕ್ಷಿತರಾದ ಮಧ್ಯಮ ವರ್ಗದವರೂ, ಸಹಾನುಭೂತಿಯುಳ್ಳ ಶ್ರೀಮಂತರೂ, ವಕ್ಕಲುಗಳೂ ರೈತರೂ ಮದ್ರಾಸ್ ಹ್ಯಾಕೋರ್ಟ ವಕೀಲ್ ಮಹಾರಾಜೇಶ್ರಿ ಯು. ಸಿ ಕೃಷ್ಣಭಟ್ಟರವರು ಕನ್ನಡದಲ್ಲಿ ವಿವರಿಸಿದ ಧರ್ಮಗೋಲದ ಕ್ರಮಗಳಿಗನುಸಾರವಾಗಿ ತಮ್ಮ ತಮ್ಮ ಗ್ರಾಮಗಳಲ್ಲಿ ಧಾನ್ಯದ ಸಾರ್ವಜನಿಕ ಬ್ಯಾಂಕುಗಳನ್ನು ಸ್ಥಾಪಿಸುವರೆ ಆಯಾ ಗ್ರಾಮದ ರೈತರೂ ವಕ್ಕಲುಗಳೂ ಕಷ್ಟನಷ್ಟಗಳಿಗೆ [illegible] ವದನ್ನು ತಪ್ಪಿಸಿಕೊಂಡು ಪರಸ್ಪರ ಸಹಾ[illegible] ಹೆಚ್ಚಿನ ಪ್ರಯೋ[illegible] ಕೊಳ್ಳುವಲ್ಲಿ ಸರಕಾರದವರ ಸಹಾನುಭೂತಿಯ[illegible] ಸಹಾಯ[illegible] ಕೊಡಬೇಕಾಗಿ ಕಾಣುತ್ತದೆ." [illegible]

[illegible] ಶಾಲೆಗಳ ಸ್ಕೂಲ್ ಫೀಸಿನ [illegible]

ಕಳೆದ [illegible] ತಾ. ೧೫ನೇ ಸಂಚಿಕೆಯಲ್ಲಿ ಸೆಕೆಂಡರಿ ಶಾಲಾ ಫೀಸುಗಳನ್ನು ಹೆಚ್ಚಿಸುವುದರ ಕುರಿತು ಒಂದು ಅಗ್ರಲೇಖನವನ್ನು ಬರೆದಿದ್ದೆವು. ಶಾಲಾ ಫೀಸುಗಳನ್ನು ಹೆಚ್ಚಿಸಕೂಡದೆಂಬ ಪ್ರಜಾಕಡೆಯ ನಿರ್ಣಯವು ಮಂಜೂರಾಗದೆ ಹೋಯಿತೆಂತ ಸೂಚಿಸಿದ್ದೆವಾದರೂ ಪ್ರಜಾಕಡೆಯ ಮೆಂಬರರು ನ್ಯಾಯನಿರ್ಮಾಣ ಸಭೆಯಲ್ಲಿ ತಿಳಿಯಪಡಿಸಿದ ಸೂಚನೆಗಳಿಗೆ ತಾವು ಗಮನಕೊಡುವರೆಂಬ ಸರಕಾರದಿಂದ ದಯಪಾಲಿಸಿದ್ದ ಅಪ್ಪಣೆಯಲ್ಲಿ ಸರ್ವರಿಗೂ ಭರವಸೆಯಿತ್ತು. ಆದರೆ ಈ ವಿಷಯದಲ್ಲಿ ಪ್ರಜಾಭಿಪ್ರಾಯವು ಮನ್ನಿಸಲ್ಪಡಲಿಲ್ಲವೆಂಬದನ್ನು ತಿಳಿಸುವರೆ ವಿಷಾದಪಡುತ್ತೇವೆ. ಸೆಕೆಂಡರಿ ಶಾಲೆಗಳ ಫೀಸುಗಳ ದರವನ್ನು ಹೆಚ್ಚಿಸಿರುವ ಸರಕಾರದವರ ಹುಕುಂ ಇತ್ತಲಾಗೆ ಪ್ರಕಟಿಸಲ್ಪಟ್ಟಿರುವುದು. ಹೀಗೆ ಪರಿಸಲ್ಪಟ್ಟ ಫೀಸಿನ ಹೊಸ ಕ್ರಮವು ಕಾಲೇಜುಗಳಲ್ಲಿ ೧೯೧೧ನೇ ಜುಲಾಯಿ ತಿಂಗಳಿನಿಂದಲೂ ಶಾಲೆಗಳಲ್ಲಿ ೧೯೧೨ನೇ ಜುಲಾಯಿ ತಿಂಗಳಿನಿಂದಲೂ ಜಾರಿಗೆ ಬರುವದು.

ಖಾಸಗಿ ಶಾಲೆಗಳಲ್ಲಿ ಆಯಾ ಶಾಲೆಗಳ ಮೆನೇಜರರು ತಮಗೆ ಯುಕ್ತತೋರುವ ದರಗಳಲ್ಲಿ ಫೀಸುಗಳನ್ನು ವಸೂಲುಮಾಡಬಹುದೆಂದಿದ್ದರೂ, ಅಯೋಗ್ಯ ರೀತಿಗಳಲ್ಲಿ ಫೀಸುಗಳ ದರವನ್ನು ಕಡಿಮೆಮಾಡಿ ಶಾಲಾ ಫೀಸು ಕ್ರಮಗಳಲ್ಲಿ ಸೂಚಿಸಿರುವ ಸಿದ್ಧಾಂತಗಳಿಗೆ ಪ್ರತಿಕೂಲವಾಗಿ ಯಾವದಾದರೊಂದು ವಿಧದಲ್ಲಿ ಸಂಬಳವನ್ನು ವಸೂಲುಮಾಡಲಿಕ್ಕೆ ಅವರಿಗೆ ಸ್ವತಂತ್ರವಿಲ್ಲ. ಮುನಿಸಿಪಲ್ ಲೋಕಲ್ ಬೋರ್ಡು, ಸರಕಾರಿ ಶಾಲೆಗಳಲ್ಲಿ ಈ ಹೊಸ ದರಗಳಲ್ಲಿಯೇ ಫೀಸು ವಸೂಲು ಮಾಡಲಾಗುವುದು. ಈ ಹೊಸ ನಿಬಂಧನೆಗನುಗುಣವಾಗಿ ಶಾಲಾ ವರುಷವನ್ನು ಎರಡು ವಿಭಾಗ ಯಾ ಟರ್ಮುಗಳನ್ನಾಗಿ ಮಾಡಿರುವರು. ದಶಂಬರ ರಜೆಯ ನಂತರ ಸೆಕೆಕಾಲದ ರಜೆಯ ತನಕ ಇರುವ ಟರ್ಮಿನಲ್ಲಿ ಮೂರು ಕಂತುಗಳಲ್ಲಿಯೂ ಸೆಖೆಕಾಲದ ರಜೆನಂತರ ದಶಂಬರ ರಜೆವರೇಗೆ [illegible] ಟರ್ಮಿನಲ್ಲಿ ಐದು ಕಂತುಗಳಲ್ಲಿಯೂ ಸಂಬಳವನ್ನು ತೆರಬೇಕಾಗುವುದು.

ಫೀಸುಗಳ ದರವು

	೫ ಕಂತುಗಳ ಟರ್ಮಿಗೆ		೩ ಕಂತುಗಳ ಟರ್ಮಿಗೆ	
1 ಕಾಲೇಜುಗಳು	ಮುಂಗಡ 2 ಕಂತುಗಳು		ಮುಂಗಡ 3 ಕಂತುಗಳು	
(೧) ಪ್ರೆಸಿಡೆನ್ಸಿ ಕಾಲೇಜು	ರೂ ಆ ಪೈ	ರೂ ಆ ಪೈ	ರೂ ಆ ಪೈ	ರೂ ಆ ಪೈ
ಬಿ ಎ 1ನೇ ಭಾಗ	35 0 0	37 8 0	21 0 0	22 8 0
ಬಿ ಎ 2ನೇ ಭಾಗದಲ್ಲಿ ಒಂದು ವಿಷಯಕ್ಕೆ	35 0 0	37 8 0	21 0 0	22 8 0
ಇಂಟರ್‌ಮಿಡಿಯೇಟ್	[illegible] 0 0	[illegible]8 12 0	33 0 0	3[illegible] 4 0
(೨) ಇತರ ಕಾಲೇಜುಗಳು				
ಬಿ ಎ 1ನೇ ಭಾಗ	33 0 0	3[illegible] [illegible] 0	2[illegible] 0 0	21 0 0
ಬಿ ಎ 2ನೇ ಭಾಗದಲ್ಲಿ ಒಂದು ವಿಷಯಕ್ಕೆ	33 0 0	3[illegible] 0 0	20 0 0	21 0 0
ಇಂಟರ್‌ಮಿಡಿಯೇಟ್	[illegible]2 0 0	[illegible] 0 0	31 0 0	[illegible]3 0 0
2 ಶಾಲಾ ಇಲಾಖೆ	ಮುಂಗಡ 2 ಕಂತುಗಳು		ಮುಂಗಡ 3 ಕಂತುಗಳು	
	ರೂ ಆ ಪೈ		ರೂ ಆ ಪೈ	
IV V. VI ಫಾರ್ಮುಗಳು	2[illegible] 4 0		1[illegible] 12 0	
I II III. ಫಾರ್ಮುಗಳು	13 12 0		8 4 0	
3ನೇ 4ನೇ ತರಗತಿಗಳು	[illegible] 4 0		3 12 0	
ಬಾಲಕ, 1ನೇ 2ನೇ ದರ್ಜೆಗಳು	3 2 0		1 14 0	
ಸೆಕೆಂಡರಿ ಶಾಲೆಗಳ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟುಗಳ ಕ್ರಮಗಳ ಪ್ರಕಾರ ಪ್ರತಿ ಒಂದು ಹೆಚ್ಚಿನ ವಿಷಯದ ಸರ್ಟಿಫಿಕೇಟುಬೇಕಾದರೆ	1 0 0 (೨ ರ ಪಾಯಿ ತನಕ ಏರಿಸಬಹುದು)		9 0 0 (18 ರ ಪಾಯಿ ತನಕ ಏರಿಸಬಹುದು)	

ಈ ಕೆಳಗೆ ನಮೂದಿಸಲಾದ ಶಾಲಾ ಇಲಾಖೆಯ ಫೀಸಿನ ದರಗಳ ಕ್ರಮಗಳು ೧೯೧೦ ಜುಲಾಯಿ ತಿಂಗಳಿನಿಂದ ೧೯೧೨ ಜುಲಾಯಿ ತನಕ ಮಾತ್ರ ಜಾರಿಯಲ್ಲಿರಿಸುವರು —

	ಮುಂಗಡ 2 ಕಂತುಗಳು	ಮುಂಗಡ 3 ಕಂತುಗಳು
	ರೂ ಆ ಪೈ ರೂ ಆ ಪೈ	ರೂ ಆ ಪೈ ರೂ ಆ ಪೈ
IV. V. VI ಫಾರ್ಮುಗಳು	23 12 0	14 4 0
I. II. III. ಫಾರ್ಮುಗಳು	12 8 0	7 8 0
3ನೇ 4ನೇ ತರಗತಿಗಳು	5 0 0	3 0 0
ಬಾಲಕ 1ನೇ 2ನೇ ದರ್ಜೆಗಳು	2 8 0	1 8 0

ನಾನು ಯಾರು?

ಮೇಲೆ ಅನಂತವಾದ ನೀಲ[illegible]ಮಂಡಲ. ಕೆಳಗೆ ಅಪಾರವಾದ ವಾರಿರಾಶಿ. [illegible] ಅಕ್ಷಯವಾದ ಶಿಲ್ಪನೈಪುಣ್ಯದ ಅನಂತವಿ[illegible] [illegible] ಅನಿರ್ದಿಷ್ಟನಾದ ಅಜ್ಞಾತಲಕ್ಷ್ಯವನ್ನು ಲಕ್ಷಿಸಿ, [illegible] ಅಲೆದಾಡುತ್ತಿರುವ ನಾನು ಯಾರೆಂಬುದನ್ನು ಹೇಳಬಲ್ಲವರಾರು?

ವಿಶಾಲವಾದ ಬ್ರಹ್ಮಾಂಡದಲ್ಲಿ ಅನಂತ ಜೀವಿಗಳು, ತನ್ಮಧ್ಯೆ ನಾನೂ ಒಬ್ಬನು. ಎಲ್ಲಿದ್ದೆ, ಎಲ್ಲಿಂದ ಬಂದೆ, ಮತ್ತೆಲ್ಲಿಗೆ ಹೋಗುವೆ, ನನ್ನ ಅಸ್ತಿತ್ವವೇನು?—ಇದಾವುದನ್ನೂ ತಿಳಿಯೆ. ಆದರೂ ಪ್ರಾಂತರ ಮಧ್ಯವರ್ತಿಯಾಗಿ ದಿಕ್ಕುಕಾಣದ ಪಥಿಕನ ಹಾಗೆ ಸುತ್ತುತಿರುವೆನಲ್ಲ! ಈ ಸಂಸಾರವೆಂಬ ಮಾಯಾಕಾನನದಲ್ಲಿ ನನಗಾರೂ ಗತಿಯಿಲ್ಲವೆ? ಯಾರೂ ಹೇಳುವುದಿಲ್ಲವೇಕೆ?—ಸರಿ ಸರಿ, ತಿಳಿಯಿತು! ಎಲ್ಲವೂ ಇದ್ದಿತು, ಎಲ್ಲವೂ ಇರುವುದು, ಅಥವಾ ಏನೂ ಇಲ್ಲದ ಹಾಗೆ ಸರ್ವವೂ ಶೂನ್ಯ! ಆದುದರಿಂದಲೇ ಈಗ ನಾನೊಬ್ಬನೇ.

ಆ ಸ್ನೇಹಮಯರಾದ ಜನನೀಜನಕರ ಅಚ್ಛೇದ್ಯವಾದ ಸ್ನೇಹಬಂಧನ ಸದಾ ಶಾಂತಿಪ್ರದಾಯಿನಿಯಾದ, ಪ್ರೇಮಮಯಿಯಾದ ಪತ್ನಿಯ ಅನಂತಪ್ರೇಮ ಕನ್ಯಾಪುತ್ರರ ಸ್ನೇಹಾಕರ್ಷಣ, ಆ ಶೈಶವಸಹಚರರುಗಳ ಅಕೃತ್ರಿಮವಾದ ಸೌಹಾರ್ದ್ರಬಂಧನ—ಇವೆಲ್ಲವೂ ಸಂಸಾರದಲ್ಲಿ ಸರ್ವ ಪ್ರಯತ್ನದಿಂದಲೂ ನನ್ನನ್ನು ಸೆಳೆಯುತಲಿದ್ದುವು, ಆದರೆ ಈಗ ನಾನೊಬ್ಬನೇ. ಆಕಸ್ಮಿಕವಾಗಿ ಚಿನಂದಮಯವಾಗಿ ತೋರುತಲಿದ್ದ ಆ ಭೀಷಣವಾದ ಬಂಧನವು ಬಿಸ್ನವಾದುದೇಕೆ? ಈಗ ನಾನೊಬ್ಬನೇ ಇರುವೆನೇಕೆ?

ದುರ್ದಾಂತನಾದ ಕಾಲನು ವಿಕಟವದನವನ್ನು ವಿಸ್ತರಿಸಿ ಒಂದೊಂದಾಗಿ ಸಕಲವನ್ನೂ ಗ್ರಾಸಮಾಡುತ್ತಿರುವನು. ಈ ದಿನ ಯಾವುದಿರುವುದೋ ಅದು ನಾಳೆ ನಶಿಸಿಹೋಗುವುದು. ಈ ದಿನ ಯಾವುದು ನಯನಾಭಿರಾಮವಾಗಿ ತೋರುವುದೋ, ಅದು ನಾಳೆ ದೂಳೀಮಯವಾಗುವುದು—ನಿಕಟಸ್ಥ[illegible]ದಲ್ಲಿ ವಿಲೀನವಾಗುವುದು! ಈ ಘಟನೆಯು ಮಾನವ ಚಕ್ಷುಸ್ಸಿನಲ್ಲಿ ನಿತ್ಯವೂ ಪ್ರತ್ಯಕ್ಷ ಸಿದ್ಧವಾಗುವ. ಆದರೂ ಭ್ರಾಂತಜೀವನು "ನನ್ನದು ತನ್ನದು" ಎಂಬ ಸಮ್ಮೋಹನಾಸ್ತ್ರ[illegible]ದಿಂದ ಸಂಬದ್ಧನಾಗಿರುವನು. ಹಾಳು ಹೊಟ್ಟೆಗಾಗಿ ಸಲುವಾಗಿ ಮಹಾ ಪಾಪಗಳನ್ನು ಸಂಚಯ ಮಾಡಿ ಸಂಸಾರದಲ್ಲಿ "ಹೂವಾಸ್ತೇ" ದರೆಂದು ಉಲ್ಲಾಸದಿಂದ ನೃತ್ಯಮಾಡುತಲಿರುವನು. ಛೀ, ಛೀ! ಮಾಯಾಮೋಹವಿಮುಗ್ಧನೇ! ನಿನ್ನ ಲೀಲಾವಿಸ್ಮಯಗಳಿಗೆ ಧಿಕ್ಕಾರವಿರಲಿ! ಸಂಸಾರದಲ್ಲಿ ನಾನು ಒರುವಾಗಲೂ ಒಬ್ಬನೇ [illegible] ಹಾಗಾದರೆ ಎರಡು ದಿನಕ್ಕೆ ಸಲುವಾಗಿ ಈ ಸಕಲ ಮಾಯಾ ಬಂಧನವೇಕೆ? ತಾಯಿ ತಂದೆಗಳು!—ಆತ್ಮೀಯ ಜನಗಳು!—ಈ ಕಪಟ ನಾಟಕವೆಲ್ಲ ಏಕೆ? ಒಂದು ವೇಳೆ ಇದೆಲ್ಲವೂ ಸತ್ಯವೆಂದಾದರೆ ಸ್ವಜನಗಳೆಂಬುವವರು ನನ್ನನ್ನು ಮೋಹಿಸಿ ತಮ್ಮ ಹೃದಯ ಹರ್ಮ್ಯದಿಂದ ಹೊರಡಿಸುವರೇಕೆ?

ವಿಧಾತನೆ! ನಿನ್ನ ಈ ಚಿರಂತನವಾದ ನಿಯಮಕ್ಕೆ ವಶವರ್ತಿಯಾಗಿ ಜೀವನು ನಿಯತ ಸಂಸಾರದಲ್ಲಿ ಗಮನಾಗಮನ ಮಾಡುತ್ತಿರುವನು. ಒಬ್ಬನ ಅಭಾವದಿಂದ ಮತ್ತೊಬ್ಬನಿಗೆ ಹಾಹಾಕಾರವುಂಟಾಗುತ್ತಿರುವುದು. ಇದೇಕೆ? ಯಾವುದು ಪರಿಹಾರಮಶೀಲವಾದುದೋ ಅದಕ್ಕೋಸುಗ ದುಃಖವೇಕೆ.

ಆದುದರಿಂದಲೇ ಶ್ರೀ ಕೃಷ್ಣನು ಗೀತೆಯಲ್ಲಿ

"ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ
ಭಾರತ! ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿವೇದನಾ ॥"

ಎಂದು ಹೇಳಿರುವನು.

ಸಂಸಾರಕಾನನದಲ್ಲಿ ಸಂಚರಿಸುತ್ತಿರುವ ಹಿಂಸ್ರಪಶುಗಳ ಭೀಷಣವಾದ ನೃತ್ಯದಿಂದ ವ್ಯಾಕುಲನಾಗಿ ಉದ್ಧಾರ ಮಾಡೆಂದು ತಾಯಿ ತಂದೆ ಮೊದಲಾದವರನ್ನು ಎಷ್ಟೋ ಸಲ ಮೊರೆಯಿಟ್ಟು ಕರೆದೆನು. ನನ್ನೀ ಆಕುಲವಾದ ಆಹ್ವಾನದಿಂದ ವ್ಯಾಕುಲರಾಗಿ ಅವರಲ್ಲಿ ಒಬ್ಬರಾದರೂ ನನ್ನನ್ನು ಸಂತೈಸುವುದಕ್ಕೆ ಬರಲೇ ಇಲ್ಲ—ನನ್ನ ಕಡೆಗೆ ಯಾರೂ ತಿರುಗಿಯೂ ನೋಡಲಿಲ್ಲ! ಹುಲಿ ಕರಡಿಗಳಿಂದ ತುಂಬಿ ತುಳುಕಾಡುತ್ತಿರುವ ಸಂಸಾರಕಾನನದಲ್ಲಿ ನನ್ನನ್ನು ಕೈಬಿಟ್ಟು ಎಲ್ಲರೂ ಎಲ್ಲಿಗೋ ಹೊರಟುಹೋದರು. ಆದುದರಿಂದ ಈ ದಿನ ನಾನು ನದಿಯಲ್ಲಿ ತೇಲಿಹೋಗುತ್ತಿರುವ ತೃಣದ ಹಾಗೆ ವಿಷಮವಾದ ಸುಳಿಯಲ್ಲಿ ಸಿಕ್ಕಿಬಿದ್ದು ಒಂದೊಂದುವೇಳೆ ಮುಳುಗುತ್ತಾ ಒಂದೊಂದುವೇಳೆ ತೇಲುತ್ತಾ ಏಕಾಕಿಯಾಗಿ ಆ ಪ್ರವಾಹದಲ್ಲಿ ಗೊತ್ತುಗುರಿಯಾವುದೂ ಇಲ್ಲದ ಪ್ರದೇಶಕ್ಕೆ ತೇಲಿಕೊಂಡು ಹೋಗುತ್ತಿರುವೆನು. ಹರಿ ಹರಿ! ಈ ದಿನ ನಾನು ಏಕಾಕಿ!!

ಯಾವ ಸ್ನೇಹಮಯಿಯಾದ ತಾಯಿಯು ನನ್ನಮ್ಲಾನವಾದ ಮುಖವನ್ನು ನೋಡಿದರೆ [illegible]ದರದಿಂದ ಮುದ್ದಿಸುತ್ತಿದ್ದಳೋ, ಯಾವ ಪ್ರೇಮಮಯಿಯಾದ ಪತ್ನಿಯು ಪ್ರೇಮದಿಂದ ಸರ್ವದಾ ಸೇವಾ ಶುಶ್ರೂಷೆಗಳನ್ನು ಮಾಡುತ್ತಿದ್ದಳೊ, ಸಂಸಾರದ ಘೋರತಾಡನೆಯಿಂದ ಕಂಗೆಟ್ಟು ಮರ್ಮಾಹತನಾದ ವೇಳೆಯಲ್ಲಿ ಯಾವ ಕನ್ಯಾ ಪುತ್ರರು ತಮ್ಮ ಮುದ್ದು ಮಾತುಗಳಿಂದ ಶಾಂತಿಪ್ರಧಾನ ಮಾಡುತಲಿದ್ದರೋ ಮತ್ತು ಸಂಸಾರದ ಅಸಾರತೆಯನ್ನರಿತು ಅನಾಸಕ್ತನಾದ ಸಮಯದಲ್ಲಿ ಯಾವ ಬಾಲ್ಯಬಂಧುಗಳು ನಾನಾ ಯತ್ನಪೂರ್ವಕವಾಗಿ ಸಂತೈಸುತ್ತಿದ್ದರೋ ಈಗ ಅವರೆಲ್ಲ ಎಲ್ಲಿಗೆ ಹೋದರು? ಈಗ [illegible] ಸಂಸಾರದಲ್ಲಿ "ನನ್ನದು" ಎಂದು ಹೇಳುವುದಕ್ಕೆ ಯಾರೂ ಇಲ್ಲ. [illegible]

ಈ ರೀತಿಯಾಗಿ ನಾನು ಚಿಂತಾಲಹರಿಯಲ್ಲಿ ತೇಲಿ ಹೋಗುತ್ತಿರುವಾಗ್ಗೆ—

"ಕಾತೇವ ಕಾಂತಾ ಕಸ್ತೇ ಪುತ್ರಃ ಸಂಸಾರೋ ಯಮತೀವ ವಿಚಿತ್ರಃ ।
ಕಸ್ಯ ತ್ವಂ ವಾ ಕುತ ಆಯಾತಃ ತತ್ತ್ವಂಚಿಂತಯ ತದಿದಂ ಭ್ರಾಂತಃ ॥
ನಳಿನೀದಳಗತ ಜಲಮತಿತರಳಂ ತದ್ವಜ್ಜೀವಿತಮತಿಶಯಚಪಲಂ ।
ವಿದ್ಧಿ ವ್ಯಾಧ್ಯಭಿಮಾನಗ್ರಸ್ತಂ ಲೋಕಂ ಶೋಕಹತಂ ಚ ಸಮಸ್ತಂ ।
ಮಾ ಕುರು ಧನಜನಯೌವನಗರ್ವಂ ಹರತಿ ನಿಮೇಷಾತ್ಕಾಲಃ ಸರ್ವಂ ।
ಮಾಯಾಮಯಮಿದಮಖಿಲಂ ಹಿತ್ವಾ ಬ್ರಹ್ಮಪದಂ ತ್ವಂ ಪ್ರವಿಶ ವಿದಿತ್ವಾ ।"

ಎಂದೀ ರೀತಿಯಾಗಿ ಯಾರೋ ಗಾನಮಾಡಿದ ಹಾಗಾಯಿತು

ಆ ಸುಧಾಮಯವಾದ ಶ್ಲೋಕತ್ರಯವನ್ನು ನಾನು ಮನನಮಾಡುತ್ತ ಕ್ಷಣಕಾಲ ನಿಶ್ಚಲನಾಗಿರುವಾಗ ಅನತಿದೂರದಲ್ಲಿ ಅಕಸ್ಮಿತವಾಗಿ ಚಿಟಿಚಿಟಿ ಎಂಬ ಶಬ್ದವು ಕೇಳಿಸಿತು! ತತ್‍ಕ್ಷಣವೇ ಕಣ್ತೆರದು ನಿಟ್ಟಿಸಿ ನೋಡಿದೆನು ಭೀಷಣವಾದ ಸ್ಮಶಾನ ಕ್ಷೇತ್ರ! ಅಲ್ಲಿ ಪ್ರದೀಪ್ತವಾದ ವಹ್ನಿಯು ಲೋಲಜಿಹ್ವೆಯನ್ನು ವಿಸ್ತರಿಸಿ ಮಾನವದೇಹವನ್ನು ಭಸ್ಮೀಭೂತ ಮಾಡುತ್ತಲಿದ್ದಿತು!

ಎಲೈ, ಮೂಢನಾದ ಜೀವನೆ! [illegible] ಪ್ರೀತಿಯಿಂದ ಪಾಲಿಸಿದ ನಿನ್ನ ದೇಹಕಿಕ್ಕಾದ [illegible] ನ್ನು ಪ್ರೇಕ್ಷಿಸು! [illegible] ಲರೂ ಕಾಲನ [illegible] ದಿಂದ ಈ ರೀತಿಯಾಗಿ [illegible] ಆಗಬೇಕು ಆಗ [illegible] ಜನನ, ಸ್ವಕಪೋಲ ರಚಿತವಾದ [illegible]— ಅಷ್ಟೇಕೆ—ನಿನಗೆ [illegible] ಪ್ರಿಯವಾದ ಪ್ರತಿಯೊಂದು ವಸ್ತುವೂ ಇಲ್ಲಿಗೇ ನಿಲ್ಲುವವು ನೀನು ಮಾತ್ರ ಎಲ್ಲಿಗೋ ಹೊರಟುಹೋಗುವೆಯಲ್ಲ! ಆದುದರಿಂದ ಎಲೆ, ಜೀವನೇ! ಒಂದಾವರ್ತಿ ವಿಚಾರಮಾಡಿ ಹೇಳು! ಈ ಪ್ರಪಂಚಾತ್ಮಕವಾದ, ಅನಿತ್ಯವಾದ ಧನಕನಕಾದಿ ವಸ್ತುಗಳಲ್ಲಿ ಇಷ್ಟು ಆಸಕ್ತಿಯೇಕೆ! ಇದೋ! ನೋಡು! ಪ್ರಸ್ಫುಟಿತವಾದ ಪುಷ್ಪಗಳೂ ಕೂಡ [illegible] ನಿನಗೆ ಉಪದೇಶಮಾಡುತ್ತಿರುವವು,—ಎಲೈ ಮಾನವನೇ! [illegible] ನಾವೂ ಕೂಡ [illegible] ರಾಗುವೆವು [illegible] ನಮ್ಮ ಸೌರಭವನ್ನು [illegible] ಸ್ಮಿತವಕ್ತ್ರರಾಗುವೆವು ಹೀಗೆ ನಾವು [illegible] ಕ್ಷಣಾನಂತರ [illegible] ಪ್ರಚಂಡವಾದ [illegible] ತ್ತಿರುವೆವು [illegible] ಯಾವುದೂ [illegible] ರುವುದಿಲ್ಲ" ಇಷ್ಟು ನುಡಿಯುವುದನ್ನು ಕೇಳಿಯೂ, ಮಾನವನೆ—

[illegible]

[illegible] ರಾಗಿ "[illegible]" [illegible] ವಾದುದನ್ನು [illegible] ತ್ತಿರುವೆಯಲ್ಲವೆ! [illegible] ಈ ದಿನ ಸತ್ಯವಾಗಿಯೂ [illegible] ನನ್ನು ತಿಳಿದುಕೊಳ್ಳುವುದಕ್ಕೆ [illegible] "ಕಸ್ಮಿಕವಾಗಿ ದೇಹವಾಸನೆಯು ದೂರವಾಯಿತು! [illegible]—[illegible]—[illegible] ಹೇಳಲಿ! [illegible] ಕಂಡಹಾಗಾಯಿತು ಅದರಲ್ಲಿ—

[illegible]
[illegible]
[illegible]
[illegible]

ಎಂದು [illegible] ಹೇಳುತ್ತಿದ್ದರು.

ವಿವೇಕೋದಯ

ರಘುವಂಶ ಮುಕ್ತಾಫಲಂ

ವೇ॥ ಬ್ರ ದೊಡ್ಡ ಬೆ [illegible] ಶಾಸ್ತ್ರಿಗಳಿಂದ ರಚಿತವಾದ 'ಮುಕ್ತಾಫಲವೆಂಬ' ಟೀಕೆಯೊಂದಿಗೆ ಪ್ರಕಟಿಸಲ್ಪಟ್ಟ ಮಹಾಕವಿ ಕಾಳಿದಾಸಕೃತ ರಘುವಂಶ ಮಹಾ ಕಾವ್ಯದ ಮೊದಲನೆಯ ಸರ್ಗವನ್ನು ಒಳಕೊಂಡಿರುವ ಪುಸ್ತಕವು ನಮ್ಮ ಹಸ್ತಗತವಾಗಿರುತ್ತದೆ ಕಾಳಿದಾಸನ ಕಾವ್ಯ ಸ್ವಾರಸ್ಯವನ್ನು ಗ್ರಹಿಸುವದಕ್ಕೋಸ್ಕರ ಸಂಸ್ಕೃತವನ್ನು ಬಲ್ಲದಿರುವ ಬೇರೆ ಬೇರೆ ದೇಶದ ಜನರು ಇವರ ಕೃತಿಗಳನ್ನು ತಂತಮ್ಮ ಭಾಷೆಯೊಳಗೆ ತರ್ಜುಮೆ ಮಾಡಿಸಿ ವಾಚಾಮಗೋಚರವಾದ ಸಾಸ್ವಾದವನ್ನು ಮಾಡುತ್ತಿದ್ದಾರೆ. ಇದೇ ರೀತಿ ಸಂಸ್ಕೃತ ಅಕ್ಷರ ಜ್ಞಾನವಿಲ್ಲದ ಕನ್ನಡಿಗರಿಗೆ ಸಹಾ ಕಾಳಿದಾಸ ಕವಿ ಶ್ರೇಷ್ಠರ ಕಾವ್ಯದ ಕೆಲವಂಶವಾದರೂ ಗೊತ್ತಾಗಿ ಸಂಸ್ಕೃತ ಭಾಷೆಯಲ್ಲಿ ಇಂಥವರಿಗೆ ಅಭಿರುಚಿಯು ಉಂಟಾಗುವಂತೆ ನಾರಾಯಣ ಶಾಸ್ತ್ರಿಗಳು ಈ ಗ್ರಂಥದಲ್ಲಿ ಪ್ರಯತ್ನ ಪಟ್ಟಿರುವರು.

ರಘುವಂಶ ಮಹಾ [illegible] ಕಿಸಲ್ಪಟ್ಟಿರುವವು. ಟೀಕೆಯು ಸಂಸ್ಕೃತ ಅಭ್ಯಾಸವನ್ನು [illegible] ಅಧ್ಯಾಪಕರಿಂದ ಪಡಿಯಲು ಅನುಕೂಲವಿಲ್ಲದ ವಿದ್ಯಾರ್ಥಿಗಳಿಗೆ [illegible] ರೀತಿಯಲ್ಲಿಯೇ ಮಾಡಲ್ಪಟ್ಟಿರುವುದು. ಮೊದಲಾಗಿ ಶ್ಲೋಕವನ್ನು [illegible] ಅನಂತರ, ಕ್ರಮಪ್ರಕಾರ ಪದಚ್ಛೇದ, ಶಬ್ದರೂಪ, ಅನ್ವಯ ಪದ ಪದಾರ್ಥ, [illegible], ಆಕಾಂಕ್ಷೆ, ವಿಗ್ರಹ, ಧಾತುರೂಪ, ಧಾತ್ವರ್ಥ, ವಿಶೇಷವಾದ ನೋಟ್ಸ್ [illegible] ಯನ್ನು ಕೊಟ್ಟಿರುವರು. ಪುಸ್ತಕ ಪ್ರತಿಗಳು ಬೆಂಗಳೂರಿನಲ್ಲಿ ಚಿಕ್ಕ ಪೇಟೆಯಲ್ಲಿರುವ ವಿದ್ಯಾನಂದ ಆಫೀಸಿನಲ್ಲಿ ದೊರಕುವವು. ಪ್ರತಿಯೊಂದಕ್ಕೆ ಕ್ರಯ [illegible] ಅಂಚೆ ಹಾಸಲು ಅಣೆ [illegible]

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಪ್ರಿಯ ಸ್ವದೇಶಾಭಿಮಾನಿ ಪ್ರಕಾಶಕರ,

ವಿವಾಹ ವಿಷಯ.

ನನ್ನ "ಅಧ್ಯಾತ್ಮವಿಚಾರ"ವೆಂಬ ಗ್ರಂಥವನ್ನು ಖಂಡನೆಮಾಡುವಗೋಸ್ಕರ ಉಡುಪಿಯ ಮಹಾಸಭೆಯವರು ತಮಗೆ ಬರೆಸಿಕಳುಹಿಸಿದ ವಿಮರ್ಶೆಗೆ ಪ್ರತಿಯಾಗಿ ನಾನು [illegible] ರೆದ ಉತ್ತರಗಳಿಗೆ [illegible] ಪ್ರಸ್ತಾವನೆಯಲ್ಲಿ "ಬಾಲ ಬಾಲಕಿಯರ ವಿವಾಹ" ಮೊದಲಾದ ಸಾಂಸರ್ಗಿಕ ವಿಷಯಗಳ ಕುರಿತು ಆಗಿಂದಾಗ್ಯೆ ನಮ್ಮ ದೇಶದಲ್ಲಿ ಸಭೆಗಳಾಗಿ ಚರ್ಚೆಗಳಾಗುವದು ದೇಶಕ್ಕೆ ಹಿತಕರವಾದದ್ದೆಂದು ಸೂಚಿಸಿರುತ್ತೇನಷ್ಟೆ.

ಮ ರಾ ಕುಳಿತಲೆ ರಂಗಸ್ವಾಮಿ ಐಯರವರು "ಹಿಂದು" ಎಂಬ ಮದರಾಸು ವರ್ತಮಾನಪತ್ರಿಕೆಯ ಕಳದ [illegible] ನೇ ತಾರೀಕಿನ ಸಂಚಿಕೆಯ [illegible] ನೇ ಪುಟದಲ್ಲಿ ಪ್ರಕಟಿಸಿದ ಬಾತ್ಮಿಯಲ್ಲಿ, ಬಾಲ ಬಾಲಕಿಯರ ತಂದೆತಾಯಿಗಳು, ಅಥವಾ ಅವರ ರಕ್ಷಕರು, ಅವರಿಗೆ ಮಾಡುವ ವಿವಾಹಗಳಿಗೆ ಆ ಹೆಸರ (ವಿವಾಹವೆಂದು) ಹೇಳುವದು ತಪ್ಪು, ಅವುಗಳು ವಿವಾಹಗಳಲ್ಲ ಈ ಸಂಗತಿ [illegible] ಕರ್ಮಗಳಲ್ಲಿ ವಧೂವರರು ತಮ್ಮೊಳಗೆ ಮಾಡಿಕೊಳ್ಳುವ ಪ್ರತಿಜ್ಞೆಗಳಿಂದಲೇ ತಿಳಿದುಬರುತ್ತದೆ ಆದಕಾರಣ ಬಾಲಿಕೆಯರು ಯೌವನವನ್ನು ಪ್ರಾಪಿಸಿದ ತರುವಾಯ-ಎಂದರೆ—ಅವರು ತಮ್ಮ ಮುಖ್ಯ ಧರ್ಮವಾದ ಪ್ರಜೋತ್ಪತ್ತಿ ಮಾಡುವದಕ್ಕೆ ಯೋಗ್ಯರಾದ ಯಾನೆ ಸ್ತ್ರೀಯರು ರಜಸ್ವಲೆಯರಾದ ನಂತರವೇ—ಅವರ ವಿವಾಹಗಳು ಆಗುವ ಹಾಗೆ ಕೆಲವು ಏರ್ಪಾಟುಗಳು ಆಗುವದು ಅತ್ಯವಶ್ಯ [illegible] ಬರೆದಿರುತ್ತಾರೆ

ಈ ಸಂಬಂಧ [illegible] "ಧರ್ಮಸಿಂಧು"ವನ್ನು ಓದುತ್ತಿರುವಾಗ ನನಗೆ [illegible] ಈ ಕೆಳಗೆ [illegible] ದ ಪ್ರಮಾಣವು ಪ್ರಯೋಜನಕರವಾಗಿ [illegible] ಇದು [illegible] ಗೃಹ್ಯಸೂತ್ರಗಳ ಮೇಲೆ ಆಧರಿಸಿಕೊಂಡುದೆಂದು ಕಂಡುಬರುತ್ತದೆ (ಧ ಸಿ [illegible]) ಇದರ ಪ್ರಾಮಾಣ್ಯದ ವಿಷಯದಲ್ಲಿ ಏನೂ ಆಕ್ಷೇಪ ಇರಕೂಡದ ಆದಕಾರಣ, ಇದನ್ನು ಜನರ ತಿಳುವಳಿಕೆಗೋಸ್ಕರ ಲೋಕೋಪಕಾರಿಯಾದ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸೋಣಾಗಬೇಕಾಗಿ ಅಪೇಕ್ಷಿಸುವ,

ತಮ್ಮ ವಿಧೇಯ ಸೇವಕ,

H Krishna Rau.

ಧರ್ಮಸಿಂಧು

(ಬೊಂಬೈ ನಿರ್ಣಯಸಾಗರ ಛಾಪಖಾನೆ)

1888 ಪು 177 [illegible]

ಪ್ರಮಾಣ

अथ कन्यारजो दोषनिर्णय । विवाहा पूर्वं कन्याया रजोदर्शने मातापित्र भ्रातॄणां नरकपात । कन्यायाः वृषलीत्व । तद्भर्तुः वृषलीपतित्व । अत्र शुद्धिप्रकार । कन्यादाता ऋतुमत्यवयागोदानानि [illegible] यथा शक्ति ब्राह्मणभोजन वा कृत्वा कन्यादान योग्याभवेत् । कन्यातु उपवासत्रयान्ते गव्य पय पानकृत्वा विप्र कुमार्यै मगलभूषण दत्वो द्वाह योग्या भवति । वरश्च कुष्माण्ड होम पूर्वक तामुद्वहेत्सदोषीस्यादिति ॥ विवाह होमकाले रजोदोषे ता स्नापयित्वा युञ्जाने ति तैत्तिरीयमन्त्रेण प्रायश्चित्तं हुत्वा होम तन्त्रं समापयेत् ॥ यदातु दातृभावाद्रजो दर्शनं तदाकन्या वर्षत्रयं प्रतीक्ष्य स्वयंवरं [illegible]

ಭಾವಾಂತರ

ಈಗ ಕನ್ನಿಕೆಯ ರಜಸ್ (ಸಮ್ಮಂಧವಾದ) ದೋಷದ ಕುರಿತು ನಿರ್ಣಯವನ್ನು ಮಾಡೋಣಾಗುತ್ತದೆ.

ಮದುವೆಯಾಗುವ ಮೊದಲು ಕನ್ನಿಕೆಯ ರಜಸ್ ಕಂಡು ಬಂದ ಪಕ್ಷದಲ್ಲಿ, (ಕನ್ನಿಕೆಯು ಮೈನೆರದರೆ, ಅವಳ) ತಾಯಿ ತಂದೆ, ಸಹೋದರ ಇವರು "ನರಕದಲ್ಲಿ ಬೀಳುತ್ತಾರೆ, ಕನ್ನಿಕೆಗೆ ವೃಷಲೀತ್ವ (ಶೂದ್ರೀತ್ವ) ಅವಳ ಗಂಡಗೆ ವೃಷಲೀಪತಿತ್ವ ಸಹಾ ಪ್ರಾಪ್ತವಾಗುತ್ತದೆ. ಈ ಸಂಗತಿಯಲ್ಲಿ ಶುದ್ಧಿ ಉಂಟಾಗುವದ್ದು [illegible] ರೆ:—ಕನ್ಯಾದಾನ ಮಾಡುವವರು [illegible] ಗಳು [illegible] (ಕನ್ನಿಕೆ [illegible]) [illegible]

[illegible] ಯನ್ನು ಮೀರದೇ ಬ್ರಾಹ್ಮಣ ಭೋಜನವನ್ನಾದರೂ ಮಾಡಿಸಿದ ಪಕ್ಷದಲ್ಲಿ ಕನ್ಯಾದಾನವನ್ನು ಮಾಡಲಿಕ್ಕೆ ಯೋಗ್ಯನಾಗುತ್ತಾನೆ. ಆ ಕನ್ನಿಕೆಯು ಮೂರು ಉಪವಾಸವನ್ನು ಮಾಡಿ, ತರುವಾಯ ದಿನವಿನ ಹಾಲನ್ನು ಕುಡಿದು, ಬ್ರಾಹ್ಮಣ ಜಾತಿಯ ಕನ್ನಿಕೆಗೆ ರತ್ನಸಮೇತವಾದ ಅಲಂಕಾರ ಪದಾರ್ಥಗಳನ್ನು (ವಸ್ತ್ರ ಇತ್ಯಾದಿಗಳನ್ನು) ಕೊಟ್ಟರೆ ಮದುವೆಯಾಗಲಿಕ್ಕೆ ಯೋಗ್ಯಳಾಗುತ್ತಾಳೆ. ವರನು ಕೂಷ್ಮಾಂಡ ಹೋಮ ಪೂರ್ವಕವಾಗಿ ಅವಳನ್ನು ಮದುವೆಮಾಡಿಕೊಂಡರೆ ದೋಷಿಯಾಗುವದಿಲ್ಲ.

ವಿವಾಹ ಹೋಮಕಾಲದಲ್ಲಿ ರಜೋದೋಷವು ಪ್ರಾಪ್ತಿಯಾದರೆ (ಕನ್ನಿಕೆಯು ಮೈನೆರದರೆ) ಆ ಕನ್ನಿಕೆಗೆ ಸ್ನಾನ ಮಾಡಿಸಿ, "ಯುಂಜಾನ" ಎಂಬ ತೈತ್ತಿರೀಯ ಮಂತ್ರದಿಂದ ಪ್ರಾಯಶ್ಚಿತ್ತ ಹೋಮವನ್ನು ಮಾಡಿ (ಆ ವಿವಾಹ) ಹೋಮ ಕೆಲಸವನ್ನು ಮುಗಿಸಬೇಕು.

ದಾನಮಾಡುವವನಿಲ್ಲದ ದೆಸೆಯಿಂದ ರಜೋದರ್ಶನವಾದ ಪಕ್ಷದಲ್ಲಿ, (ಮದುವೆಯಾಗದೇ ಮೈನೆರದರೆ) ಆಗ ಆ ಕನ್ನಿಕೆಯು ೩ ವರುಷಗಳ ಪರ್ಯಂತರ ನೋಡಿ, (ತರುವಾಯ) ತಾನೇ (ಬೇಕಾದ ಒಬ್ಬ) ವರನನ್ನು ಆರಿಸಿ [illegible] ಅಂಥಾ ಸಂಗತಿಯಲ್ಲಿ ವರನಿಗೆ ಕೂಡಾ ದೋಷವಿಲ್ಲ. ಕನ್ಯಾ ರಜೋದೋಷ ವಿಷಯದಲ್ಲಿ ನಿರ್ಣಯವು ಇದೇಯಾಗಿರುತ್ತದೆ.

~~~~~~~~

ಜ . ಘಾಟೇ ಎವರ್. [illegible]

~~~~~~~~

ಇವರು ಜಾತಿಯ ಸಂಬಂಧವಾಗಿ ಪ್ರಕಟಿಸಿದ ಲೇಖನದ ಸಾರಾಂಶವು —

1. ಅತೀ ಹಳೇ ಗ್ರಂಥವಾದ ಋಗ್ವೇದದಲ್ಲಿ ಜಾತಿಯ ಸಂಬಂಧವಾಗಿ ಏನೂ ಹೇಳಿದ್ದಿಲ್ಲ. ಜಾತಿ ಎಂಬ ಶಬ್ದವೇ ಆ ವೇದದಲ್ಲಿ ಇಲ್ಲ.

2. ಆದಿಯಲ್ಲಿ ಆರ್ಯ ಜನಾಂಗದವರು, ಜಾತಿಭೇದ ಇಲ್ಲದೆ ಒಂದೇ ಕೂಟದವರಾಗಿದ್ದರು. ಹಿಂದುಸ್ಥಾನದಲ್ಲಿ ಆರ್ಯರು ತಕ್ಕಮಟ್ಟಿಗೆ ನಾಗರೀಕತೆ ಹೊಂದಿದವರಾಗಿದ್ದು ತಾವು ಉತ್ತಮರೆಂಬ ಅಭಿಮಾನ ಉಳ್ಳವರಾಗಿದ್ದರು.

3. ಹಿಂದುಸ್ಥಾನದ ಮೂಲನಿವಾಸಿಗಳು ನಾಗರೀಕತನದಲ್ಲಿ ಕಾಡುಜನರಾಗಿದ್ದರು. ಇವರನ್ನು ಅನಾರ್ಯರೆಂತಲೂ ದಸ್ಯುಗಳೆಂತಲೂ ಆರ್ಯರು ಕರೆಯುತ್ತಿದ್ದರು.

4. ಆರ್ಯರಿಗೂ ಅನಾರ್ಯರಿಗೂ ವರ್ಣಭೇದವಿತ್ತು. ಅಂದರೆ ಆರ್ಯರು ಬಿಳೀ ಜನರಾಗಿದ್ದರು. ಅನಾರ್ಯರು ಕಪ್ಪುವರ್ಣದವರಾಗಿದ್ದರು.

5. ಈ ಎರಡು ವಿಧದ ಜನರ ಮಧ್ಯ ಕಲಹ ಬೆಳೆಯಿತು. ಶರೀರ ಚೈತನ್ಯದಲ್ಲಿ ಅನಾರ್ಯರು ಮಿಗಿಲಾಗಿದ್ದರೂ ನಾಗರೀಕತನದಲ್ಲಿ ಆರ್ಯರು ಮಿಗಿಲಾಗಿದ್ದ ಕಾರಣ ಹೆಚ್ಚಾಗಿ ಆರ್ಯರೇ ಜಯಪ್ರದ ಹೊಂದುತ್ತಿದ್ದರು.

6. [illegible] ಈ ಎರಡೂ ವಿಧದ ಜನರು ರಾಜಿಯಾಗಿ [illegible] ಮಧ್ಯದಲ್ಲಿ ನಡಕೊಳ್ಳುವವರಾದರು.

7. ಅನಾರ್ಯರು ಆರ್ಯರ ಮತವನ್ನು ಅವಲಂಬಿಸಿದರು. ಈ ರೀತಿಯಲ್ಲಿ ಒಟ್ಟಾದ ಈ ಜನರು, ವೃತ್ತಿಗಳ ಪ್ರಕಾರ ತರಗತಿಗಳು ಮಾಡಿ, ಆರ್ಯರು ಬ್ರಹ್ಮ, ಕ್ಷತ್ರಿ, ವೈಶ್ಯರೆಂತಲೂ ಅನಾರ್ಯರು ಶೂದ್ರರೆಂತಲೂ ಕರೆಯಲ್ಪಟ್ಟರು. ಪ್ರಥಮ ೩ ತರಗತಿಯವರು ದ್ವಿಜರೆಂತಲೂ ಅನ್ನಿಸಿಕೊಂಡರು.

8. ಶೂದ್ರವೆಂಬ ಶಬ್ದವು ಸಂಸ್ಕೃತ ಶಬ್ದವಲ್ಲ. ಅನಾರ್ಯರ ಭಾಷೆಯಿಂದ ಸಂಸ್ಕೃತದಲ್ಲಿ ಸ್ವೀಕರಿಸಿಕೊಂಡ ಶಬ್ದವಾಗಿರುತ್ತದೆ.

9. ಆರ್ಯರೂ ಅನಾರ್ಯರೂ ಮೇಲೆ ಹೇಳಿದಂತೆ ರಾಜಿಯಾಗಿ ವಿವಿಧ ವೃತ್ತಿಗಳು ಅನುಸರಿಸುವಂಥವರಾಗಿ ವೃತ್ತಿ ಭೇದ ಮಾಡಿಕೊಂಡಾಗ್ಯೂ ಮಿಶ್ರವಾದ ಒಂದೇ ಜನಾಂಗವಾದರು. ಈ ಎರಡೂ ಜನಾಂಗದವರು ಮಿಶ್ರವಾದ ನಂತರ ಪುರುಷ ಸೂಕ್ತವು ರಚಿಸಲ್ಪಟ್ಟಿತು.

10. ಕಾಲಕ್ರಮದಲ್ಲಿ ಈ ವೃತ್ತಿಗಳೇ ಜಾತಿಭೇದವು. ವಿವಿಧ ಕಾರಣಗಳಿಂದ ಒಳಜಾತಿಗಳು ಸಹ ಉಂಟಾದವು.

11. ಜಾತಿಭೇದಗಳು ಮತಾಚರಣೆಯ ಸಲುವಾಗಿ ಹಿಂದುಸ್ಥಾನದಲ್ಲಿ ಉಂಟಾದ್ದಲ್ಲ. ಮನುಷ್ಯನ ಅಹಂಕಾರ ಸ್ವಾರ್ಥ ಮೊದಲಾದ ಕಾರಣಗಳಿಂದ ಉಂಟಾದ್ದು.

12. ಪೂರ್ವದಲ್ಲಿ ಹಿಂದುಸ್ಥಾನದಲ್ಲಿ ಆರ್ಯರು ಮತ್ತು ಅನಾರ್ಯರು ಹೇಗೆ ಪರಸ್ಪರ ದ್ವೇಷ ಸಾಧಿಸುವಂಥವರಾಗಿದ್ದರೋ, ಹಾಗೆಯೇ ಈಗಿನ ಕಾಲದಲ್ಲಿ ಅಮೇರಿಕಾ ಮತ್ತು ಆಫ್ರಿಕಾ ಖಂಡಗಳಲ್ಲಿ ಬಿಳೀ ಜನರಿಗೂ, ಕಪ್ಪು ವರ್ಣದ ಕಾಡು ಜನರಿಗೂ ಪರಸ್ಪರ ದ್ವೇಷ ಉಂಟಾಗಿರುತ್ತದೆ. ದುರ್ದೈವಕರವಾಗಿ ದಕ್ಷಿಣ ಆಫ್ರಿಕದಲ್ಲಿ ಹೋಗಿ ನಿವಾಸಮಾಡಿಕೊಂಡಿದ್ದ ನಮ್ಮ ಜನರನ್ನು ಅಲ್ಲಿಯ ಬಿಳೀ ಜನರು ಹೇಗೆ ಪೀಡಿಸುತ್ತಾರೆಂಬುದು ನಿಮಗೆಲ್ಲರಿಗೂ ಗೊತ್ತಿರಬಹುದು.

13. ಜಾತಿಭೇದವು ರಾಷ್ಟ್ರೀಯ ಅಭಿವೃದ್ಧಿಗೆ ಬಾಧಕವು ಮತ್ತು ದೇವಪ್ರಣೀತವಾದ್ದಲ್ಲವಾದ ಕಾರಣ, ತುಕಾರಾಮ ರಾಮದಾಸ, ಜ್ಞಾನೇಶ್ವರ್ ಮೊದಲಾದ ಅನೇಕ ಸತ್ಪುರುಷರು ಜಾತಿಭೇದವನ್ನು ದೂಷಿಸಿ ಜನರ ಮಧ್ಯ ಏಕಮತ್ಯ ವೃದ್ಧಿಸಲಿಕ್ಕೆ ಯತ್ನಿಸಿದರು. ಪರಂತು ಜಾತಿಭೇದವೆಂಬ ರಾಕ್ಷಸನು ಅತೀ ಬಲಿಷ್ಠನಾದ ಕಾರಣ ಯಾವ ಸತ್ಪುರುಷರಿಗೆ ಆದರೂ ಒಂದೇ ಜನಾಂಗವಾಗಿ ಎಲ್ಲರನ್ನೂ ಕೂಡಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ.

14. ಹಿಂದುಸ್ಥಾನದಲ್ಲಿ ಈಗ ಎಲ್ಲಾ ಜನರೂ ಏಕಮತ್ಯವುಳ್ಳವರಾದ ಒಂದೇ ಜನಾಂಗವಾಗಬೇಕಾದರೆ ಇಂಗ್ಲೀಷು ವಿದ್ಯೆಯ ಮೂಲಕವೇ ಆಗುತ್ತದೆ. ಅನ್ಯಥಾ ಜಾತಿಭೇದವೆಂಬ ಭ್ರಾಂತಿ ಹೋಗದು.

ದಾಸ ಭಟ್ಟ

~~~~~~~~

ವಿದೇಶವೃತ್ತಾಂತ

~~~~~

ಬರೋಡೆಯ ಗೈಕ್ವಾರರವರು ಕಳೆದ ಏಪ್ರಿಲ್ ತಿಂಗಳ ತಾ. ೨೬ರಲ್ಲಿ ಷಂಗಹಾಯಿ ಎಂಬಲ್ಲಿಗೆ ತಲ್ಪಿ ಒಂದು ದಿವಸ ಷಂಗಹಾಯಿಯಲ್ಲಿದ್ದು ಅದೇ ದಿವಸ ಜಪಾನಿಗೆ ಹೊರಟಿರುವರು. ಜಪಾನನ್ನು ಸಂದರ್ಶಿಸಿ ಬಳಿಕ ಚೀನಾ ದೇಶದ ಪೆಕಿಂಗ್ ಪಟ್ಟಣಕ್ಕೆ ಬರುತ್ತಿರುವಾಗ ಷಂಗಹಾಯಿಗೆ ತಿರಿಗೊಮ್ಮೆ ಬರುವರಾಗಿ ತಿಳಿದು ಬರುತ್ತದೆ. ಷಂಗಹಾಯಿಯಲ್ಲಿರುವ ಭಾರತೀಯ ಸಿಕ್ ಮತಸ್ಥರು ಗೈಕ್ವಾರರವರನ್ನು ಬಹಳ ಸಂಭ್ರಮದಿಂದ ಸನ್ಮಾನಿಸಿದರು.

~~~~~

ಪ್ರಿವಿ ಕೌನ್ಸಿಲಿನ ಪ್ರಭುಗಳಾಗಿ ನೇಮಿಸಲ್ಪಟ್ಟ ಬಹುಮಾನವಂತ ಅಮೀರಾಲಿಯವರಿಗೆ ಅಂಗ್ಲಾಳದ ಕೆಂಬ್ರಿಜ್ ವಿಶ್ವವಿದ್ಯಾನಿಲಯದವರು ಎಲ್ ಎಲ್. ಡಿ ಎಂಬ ಬಿರುದನ್ನು ಬಹುಮಾನಾರ್ಥವಾಗಿ ಕೊಡುವರಂತೆ.

~~~~~

ಜಪಾನೀಯರ ಪೂರ್ವಜರು ಯುರೋಪಿಯ ಗ್ರೀಕ್ ಜನಾಂಗದವರಾಗಿದ್ದರೆಂಬದಾಗಿ ತೋರಿಬರುವುದೆಂತ ಪ್ರೊಫೆಸರ ಕಿಮೂರಾ ಎಂಬವರು ಶೋಧಿಸಿರುವರಂತೆ. ಏಸ್ಯಾ ಮೈನರ್ ಎಂಬಲ್ಲಿಯ ಅಮಾಸ್ಸನಲ್ಲಿ ವಾಸಿಸಿಕೊಂಡಿದ್ದ ಗ್ರೀಕರು ಜಪಾನೀಯರ ಪೂರ್ವಜರೆಂತ ಈ ಶೋಧಕರ [illegible] ಅಮಾಸ್ಸನಿಂದ ಇವರು ಗ್ರೀಸುದೇಶ, [illegible] ಮತ್ತು [illegible] ಹೋಗಿ ನಿವಾಸಿಸಿಕೊಂಡಿರುತ್ತಾರೆಂತ ಇವರು ತಿಳಿಸಿರುವರು. ಜಪಾನಿನ ಪ್ರಥಮ ಚಕ್ರವರ್ತಿಗಳಾದ ಜಿಮ್ಮುಟೆನೋ ಎಂಬವರು ಇಟಲಿ ದೇಶದಿಂದ ಬಂದಿದ್ದವರೆಂತಲೂ ಈ ಚಕ್ರವರ್ತಿಯು ತಮ್ಮ ನೋವಿಕೊನ್ ಎಂಬವರು ಕ್ರಿಸ್ತ ಪೂರ್ವ ೬೦೦ ವರುಷಗಳ ಹಿಂದೆ ಆಗುಸ್ತದ ಚಕ್ರವರ್ತಿಯಾಗಿದ್ದರೆಂದೂ ಪ್ರೊಫೆಸರ ಕಿಮೂರಾರವರು ಸೂಚಿಸುತ್ತಾರೆ. ಜಪಾನೀಯರ ಪೂರ್ವಜರಾದ ಗ್ರೀಕರು ಜಪಾನ ದ್ವೀಪಕ್ಕೆ ಬಂದು ಅಲ್ಲಿಯ ಮೂಲನಿವಾಸಿಗಳೊಂದಿಗೆ ವಿವಾಹಿತರಾಗಿ ಜಪಾನೀಯ ಜನಾಂಗವು ಉಂಟಾಯಿತೆಂತ ಈ ಪ್ರೊಫೆಸರರವರ ಹೇಳಿಕೆಯಾಗಿರುವುದು.

~~~~~

ಅಂಗ್ಲಾಳದಲ್ಲಿರುವ ಲಾಲಾ ಲಾಜಪತರಾಯರವರು ಅಲ್ಲಿ ಪ್ರಕಟಿಸಲ್ಪಡುವ ಡೈಲಿನ್ಯೂಸ್ ಮತ್ತು ಮೋರ್ನಿಂಗ್ ಲೀಡರ್ ಎಂಬ ಎರಡು ಪತ್ರಗಳಿಗೆ ಜೋರ್ಜ್ ಚಕ್ರವರ್ತಿಗಳವರು ಸಿಂಹಾಸನವನ್ನೇರಿದ ಸ್ಮರಣಾರ್ಥವಾಗಿ ಹಿಂದುಸ್ಥಾನದಲ್ಲಿ ರಾಜದ್ರೋಹ ತಪ್ಪಿಗೆ ಹೊಣೆಯಾದಂಥಾ ತಿಲಕ, ಅರವಿಂದಘೋಷ ಮೊದಲಾದವರ ತಪ್ಪುಗಳನ್ನು ಕ್ಷಮಿಸುವದಲ್ಲದೆ ವರ್ತಮಾನಪತ್ರಗಳ ಮತ್ತು ಮುದ್ರಣಾಲಯಗಳ ಅತಿ ಉಗ್ರ ಶಾಸನಗಳನ್ನು ಸಹಾ ವಜಾಮಾಡಿ ಉಚಿತ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರಜೆಗಳಿಗೆಲ್ಲಾ ದೊರಕುವ ಏರ್ಪಾಡುಗಳನ್ನು ಈ ಸಂದರ್ಭದಲ್ಲಿ ಜಾರಿಗೆ ತರಬೇಕಾಗಿ ಸೂಚಿಸಿರುವರು.

ಕೀರ್ತಿಶೇಷ ವಿಕ್ಟೋರಿಯಾ ಮಹಾರಾಣಿಯವರು ತಮ್ಮ ಪ್ರಜೆಗಳಂತೆಯೇ ತಾವೂ ಸಹಾ ತೆರಿಗೆಗಳನ್ನು ಕೊಡಬೇಕೆಂಬ ಭಾವನೆಯಿಂದ ಕ್ರಮವಾಗಿ ತಮ್ಮ ಆದಾಯ ತೆರಿಗೆಯನ್ನು ಕೇಳದೆನೇ ಕೊಡುತ್ತಿದ್ದರಂತೆ. ಸ್ವರ್ಗಸ್ಥ ಎಡ್ವರ್ಡ್ ಪ್ರಭುಗಳು ಸಹಾ ತಾಯಿಯಂತೆಯೇ ಈ ತೆರಿಗೆಯನ್ನು ಕೊಡುತ್ತಿದ್ದರು. ಮಹಾರಾಣಿ ಅಲೇಕ್ಸಾಂಡ್ರರವರು ಸಹಾ ಈ ರೀತಿ ಆದಾಯ ತೆರಿಗೆ ಕೊಡುತ್ತಿರುವರಂತೆ.

~~~~~

ಭೂಲೋಕದಲ್ಲಿ ಶಾಂತತೆಯನ್ನುಂಟುಮಾಡುವ ಉದ್ದಿಷ್ಟದಿಂದ ಏರ್ಪಡಿಸಿದ 'ಪೀಸ್‌ಸೊಸೈಟಿ' ಎಂಬ ಸಂಘದವರು ಕೀರ್ತಿಶೇಷ ಎಡ್ವರ್ಡ್ ಚಕ್ರವರ್ತಿಗಳವರ ಸ್ಮರಣಾರ್ಥವಾಗಿ ೫೦,೦೦೦ ಪವನುಗಳ ಒಂದು ಫಂಡನ್ನು ಏರ್ಪಡಿಸಿ ಈ ದ್ರವ್ಯವನ್ನು ಸಂಘದ ಉದ್ದಿಶ್ಯವನ್ನು ಮುಂದುವರಿಯುವುದರಲ್ಲಿ ವಿನಿಯೋಗಿಸಬೇಕೆಂಬದಾಗಿ ನಿರ್ಣಯಿಸಿರುವರು.

~~~~~

ಉತ್ತರ ಹಿಂದುಸ್ಥಾನ.

~~~~~

ಅಲಿಘಡ ಸಮೀಪ ಚಂದೋಸಿ ಎಂಬಲ್ಲಿ ಅಗ್ರವಾಲ ಜಾತಿಯ ಲಾಲಾ ವೃಂದಾವನ ಎಂಬ [illegible] ವರುಷದ [illegible]

ಶ್ರೀಮಾನ್, ಶ್ರೋತ್ರಿ ಬಿಜ್ನುರ ಶಂಕರಲಾಲ ಎಂಬವರು ಈ ವಿವಾಹವ ಮಾಡಿಸಿದ್ದರೆಂತಲೂ, ಪಂಡಿತ ಶ್ಯಾಮಲಾಲ್ ಮತ್ತು ಧನಿರಾಮ್ ಎಂಬವರು ಪೌರೋಹಿತ್ಯ ನಡಿಸಿದರೆಂತಲೂ ಈ ವಿವಾಹಕ್ಕೆ ಊರಿನ ಪ್ರಮುಖ ಗೃಹಸ್ಥರೆಲ್ಲರೂ ಬಂದಿದ್ದರೆಂತಲೂ ಉತ್ತರ ಹಿಂದುಸ್ಥಾನದ ವರ್ತಮಾನ ಪತ್ರಗಳಿಂದ ತೋರುತ್ತದೆ

~~~~~~

ಸ್ವರ್ಗಸ್ಥರಾದ ಹೈಕೋರ್ಟು ಜಡ್ಜ ಮಹಾದೇವ ಗೋವಿಂದ ರಾನಡೇಯವರ ಪತ್ನಿಯೆ ಶ್ರೀಮತಿ ರಮಾಬಾಯಿಯವರು ತನ್ನ ಪತಿಯ ಜೀವನ ಚರಿತ್ರವನ್ನು ಮಹಾರಾಷ್ಟ್ರ ಭಾಷೆಯಲ್ಲಿ ರಚಿಸಿದ್ದಾರೆ ಈ ಗ್ರಂಥವು ಬಹಳ ಚಲೋದೆಂತಲೂ ಸರ್ವರೂ ಓದತಕ್ಕೆ ಯೋಗ್ಯವಾದದ್ದೆಂತಲೂ ಬಹುಮಾನಪಟ್ಟ ಮುಂಬಯಿ ಹೈಕೋರ್ಟ್ ಜಡ್ಜರಾದ ಸರ್ ನಾರಾಯಣ ಗಣೇಶ ಚಂದಾವರಕರರು ವರ್ತಮಾನ ಪತ್ರಗಳಲ್ಲಿ ಪ್ರಕಟಿಸಿದ್ದಾರೆ

~~~~~~

ಸಾಮ್ರಾಜ್ಯ ಸರಕಾರದವರು ಶಿವ ತಿಸ ಮಾ [illegible] ಡೆಲ್ಲ್ಯಲಾಮರವರಿಗೆ ತಿಂಗಳಿಗೆ ರೂ [illegible] ಪೆನ್ಶನ್ ಕೊಡುವರೆ ನಿರ್ಣಯಿಸಿರುವರು

~~~~~~

ಬಂಗಾಳದಲ್ಲಿ ಸಣ್ಣ ಸಣ್ಣ ಕೃತ್ರಿಮ ಕರೆನ್ಸಿ ನೋಟುಗಳನ್ನು ತಯ್ಯಾರಿಸುವ ಕಳ್ಳತನ [illegible] ವಾಗಿ ನಡಿಯುತ್ತಿರುವುದಂತೆ ಹೀಗೆ ತಯ್ಯಾರಿಸಿದ ಕೃತ್ರಿಮ ನೋಟುಗಳನ್ನು ತಾಜಾ ನೋಟುಗಳಿಂದ [illegible] ವುದು ಬಹಳ ಅಸಾಧ್ಯವೆಂತ ತಿಳಿಯುತ್ತದೆ [illegible] ನೋಟುಗಳನ್ನು ತಯ್ಯಾರಿಸುವ ಕಳ್ಳರನ್ನು ಪತ್ತೆಮಾಡಲಿಕ್ಕೆ ಪೋಲೀಸಿನವರಿಂದ ಇನ್ನೂ ಆಗಲಿಲ್ಲ ಅಪರಾಧಿಗಳನ್ನು ಹಿಡಿದುಕೊಟ್ಟವರಿಗೆ ಬಂಗಾಳ ಸರಕಾರದವರು ಇನಾಮುಕೊಡುವರಾಗಿ ಪ್ರಕಟಿಸಿರುವರು

~~~~~~

ಮುಂಬಯಿ ಪ್ರಾಂತ್ಯದ [illegible] ದವರು ಮುಂಬಯಿಯಲ್ಲಿ ಗುರುಕುಲ ವಿದ್ಯಾಲಯವನ್ನು ಸ್ಥಾಪಿಸುವರೆ ಒಂದು ಕಮಿಟಿಯನ್ನು [illegible] ಹೈಕೋರ್ಟ ಜಡ್ಜಿಗಳಾದ ಸರ್ [illegible] ಈ ಕಮಿಟಿಯ ಮೆಂಬರರಾ [illegible] ಇವರಿಗೆ ಗೊತ್ತು [illegible] ಕೆಲವು [illegible] ದೇಶಭಾಷಾ ವರ್ತಮಾನಪತ್ರಗಳು ಪ್ರಕಟಿಸಿದ್ದವಂತೆ ಸರ್ ಚಂದಾವರ ಕರ [illegible] ರಲ್ಲವೆಂತ ತಿಳಿದು ಬರುತ್ತದೆ

~~~~~~

ಬೆಕಾನ್ವರ ಎಂಬಲ್ಲಿ ಒಬ್ಬ ಮಹಮ್ಮದೀಯನು ತನ್ನ ಹೆಂಡತಿಗೂ ಇನ್ನೊಬ್ಬ [illegible] ಪರಸ್ಪರ [illegible] ವಿರುವುದೆಂತ ಅನುಮಾನಗೊಂಡು ಹೆಂಡತಿಯನ್ನು ತನ್ನ ಮೂರು ವರುಷಗಳ [illegible] ಅವಳ ಸಮ್ಮಂಧಿಕರ ಮನೆಗೆ ಕರೆದುಕೊಂಡು ಹೋಗುವೆನೆಂದು ನೆವ ಹೇಳಿ ಅವಳನ್ನು ಒಂದು ಹಳ್ಳಿಯ ಸಮೀಪ ತಕ್ಕೊಂಡು ಹೋಗಿ ಅಲ್ಲಿ ಕೊಡಲಿಯಿಂದ ಕೊಂದು ಬಿಟ್ಟನು ಇಷ್ಟರಲ್ಲಿಯೇ ತೃಪ್ತಿ ಹೊಂದದೆ ತನ್ನ ಹೆಂಡತಿಯನ್ನು ಭ್ರಷ್ಟಳನ್ನಾಗಿ ಮಾಡಿದ ಪಾಪಿಯನ್ನು ಸಹಾ ಕೊಲ್ಲುವ ಇರಾದೆಯಿಂದ ರಾತ್ರೆ ಸಮಯ ಕೊಡಲಿ ಸಮೇತ ಆತನ ಮನೆಯನ್ನು ಪ್ರವೇಶಿಸಿ ಮಲಗಿದ್ದಲ್ಲಿ ಈತನನ್ನು ಕೊಡಲಿಯಿಂದ ಕೊಂದು ಹಾಕಿ ಪಲಾಯನ ಮಾಡುವಷ್ಟರೊಳಗ ಮೃತ ಪಟ್ಟವನ ಹೆಂಡತಿಯು ಬೊಬ್ಬಿಟ್ಟು ಈತನನ್ನು ಪೋಲೀಸಿನವರು ಹಿಡಿಯುವಂತೆ ಮಾಡಿದಳು. ಪೋಲೀಸಿನವರಿಗೆ ಈತನು ನಡದ ನಿಜ ವೃತ್ತಾಂತವನ್ನೆಲ್ಲಾ ತಿಳಿಸಿರುವನು.

~~~~~~

ಲಾಲ್ಲಿಯಪುರ ಜಿಲ್ಲೆಯ ಮಂಗ್ಲಲ್‌ವಾಲ್ ಎಂಬಲ್ಲಿಯ, ಪೋಲೀಸು ಸ್ಟೇಶನಿನಲ್ಲಿ ಮಹಮ್ಮದ [illegible] ಬ್ಬ ಪೋಲೀಸು ಸಬ್‌ಇನ್ಸಪೆಕ್ಟರರವರನ್ನು ಒಂದು [illegible] ವಿನ ತನಖಿಯನ್ನು ನಡಿಸುತ್ತಿರುವಾಗ ಕೊಂದುಬಿಟ್ಟರುವರು. ಕಳವು ಮಾಡಿರುವರೆಂಬ ಅನುಮಾನದ ಮೇಲೆ ಇಬ್ಬರು ಮಹಮ್ಮದೀಯರನ್ನು ಇವರು ಸ್ಟೇಶನಿಗೆ ತಂದು ವಿಚಾರಮಾಡುತ್ತಿದ್ದರು ರಾತ್ರೆ ಸಮಯ ಈ ಇಬ್ಬರು ಆಸಾಮಿಗಳು ಸಬ್‌ಇನ್ಸಪೆಕ್ಟರರೊಂದಿಗೆ ಸ್ಟೇಶನಿನ ಮಾಡಿನ ಮೇಲೆ ಮಲಗಿಕೊಂಡಿದ್ದರು ಸಬ್ ಇನ್ಸ್‌ಪೆಕ್ಟರರವರಿಗೆ ಚನ್ನಾಗಿ ನಿದ್ರೆ ಹತ್ತಿರುವುದನ್ನು ಕಂಡು ಒಂದು ಹಾರೆಯನ್ನು ತಂದು ಸಬ್‌ಇನ್ಸಪೆಕ್ಟರರ ತಲೆಯು ಛಾಗವಾಗುವ ವರೆಗೆ ಇದರಿಂದ ಹೊಡೆದು ಇವರು ಮೃತಪಟ್ಟರೆಂದು ಹಾರೆಯನ್ನು ಮಾಡಿನಿಂದ ಕೆಳಗೆ ಬಿಸಾಡಿಬಿಟ್ಟರು ಹಾರೆ ಬಿದ್ದ ಶಬ್ದಕ್ಕೆ ಪೋಲೀಸು ಪೇದೆಗಳು ಎಚ್ಚತ್ತು ನೋಡಿ ದ್ದಲ್ಲಿ ಪೋಲೀಸು ಸಬ್ ಇನ್ಸಪೆಕ್ಟರರವರು ರಕ್ತದಲ್ಲಿ ನರಳುತ್ತಿದ್ದರು ಇಷ್ಟರಲ್ಲಿ ಅಪರಾಧಿಗಳಲ್ಲೊಬ್ಬನು ತಪ್ಪಿಸಿ ಓಡಿಹೋಗಿರುವನು ಸಬ್ ಇನ್ಸಪೆಕ್ಟರರವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಒಯ್ಯುವಷ್ಟರಲ್ಲಿಯೇ ಇವರು ಮೃತಪಟ್ಟರು ಡಿಪ್ಯುಟಿ ಕಮಿಶನರ್, ಪೋಲೀಸು ಸುಪರಿಂಟೆಂಡೆಂಟ್, ಡಿಪ್ಯುಟಿ ಸುಪರಿಂಟೆಂಡೆಂಟ್ ಇನ್ಸಪೆಕ್ಟರ್, ಸಬ್ ಇನ್ಸಪೆಕ್ಟರ್ ಮೊದಲಾದ ೩೦೦ ಜನ ಆಫೀಸರರವರು ಮೃತನ ಶವವನ್ನು ಸಕಲದ [illegible] ರೆ ಒಯ್ಯುತ್ತಿರುವಾಗ [illegible] ರಗೆ ಮೆರವಣಿಗೆಯಲ್ಲಿ ಹೋಗುವವರಾದರು

~~~~~~

ಪರ್ದೇಶದಿಂದ ಇತರ ಬಂದರುಗಳಿಗೆ ಹೋಗುತ್ತಿರುವ ಸೀಮೆ ಎಣ್ಣೆಯ ಮೇಲೆ ಸುಂಕವನ್ನು ವಿಧಿಸುವುದೋ ಎಂ ದರ ವಿಷಯ ಇಂಡಿಯಾ ಸರಕಾರದವರು ಮಾ [illegible] ಸರಕಾರಕ್ಕೆ ಬರಿಯಲಿಕ್ಕಿರುವರು ವಿದೇಶಗಳಿಂದ ಹಿಂದುಸ್ಥಾನದಲ್ಲಿ ರಫ್ತಾಗುವ ಸೀಮೆ ಎಣ್ಣೆಯ ಮೇಲೆ ಸುಂಕ ವಿಧಿಸೋಣಾದಂದಿನಿಂದ ಬರ್ಮಾ ಎಣ್ಣೆಯ ಕ್ರಯವು ಹೆಚ್ಚುತ್ತಾ ಬರುತ್ತಿರುವುದು

~~~~~~

ಅನ್ಯದೇಶಗಳಿಂದ ರಫ್ತಾಗುವ ಹೊಗೆಸೊಪ್ಪಿನ ಮೇಲೆ ಸುಂಕ ವಿಧಿಸಿದಂದಿನಿಂದ ಸಿಲೋನಿನಿಂದ ಮದ್ರಾಸು ಸಂಸ್ಥಾನಕ್ಕೂ ತಿರುವಾಂಕೋಡು ಸಂಸ್ಥಾನಕ್ಕೂ ರಫ್ತಾಗುವ [illegible] ತಂಬಾಕಿನ ವ್ಯಾಪಾರವು ಬಹಳ ಕಡಿಮೆಯಾಗಿರುವುದರಿಂದ ಈ ವಿಷಯವನ್ನು ಸಿಲೋನಿನ ಸರಕಾರದವರು ಇಂಡಿಯಾ ಸರಕಾರದವರಿಗೆ ಜಾಹೀರು ಮಾಡಿಕೊಂಡಿರುವರು ಹೊಗೆಸೊಪ್ಪಿನ ಮೇಲಿನ ಸುಂಕದ ಎಲ್ಲಾ ವಿಷಯಗಳು ಪ್ರಕೃತ ಸ್ಟೇಟ್ ಸಕ್ರೆಟರಿಗಳಿಂದ ಪರ್ಯಾಲೋಚಿಸಲ್ಪಡುತ್ತಿವೆ

~~~~~~

ಕರಾಚಿಯಲ್ಲಿ ಪ್ರಕಟವಾಗುತ್ತಿರುವ 'ಸಿಂದ ಗೆಜೆಟ್' ಎಂಬ ಆಂಗ್ಲೊ ಇಂಡಿಯನ್ ಪತ್ರಕರ್ತರಿಂದ ಅಲ್ಲಿಯ ಡಿಸ್ತ್ರಿಕ್ಟ ಮೆಜಿಸ್ಟ್ರೇಟರವರು ೧೦೦೦ ರೂಪಾಯಿಗಳ ಜಾಮಿನನ್ನು ಕೇಳಿರುವರಂತೆ

~~~~~~

ಹಿಂದುಸ್ಥಾನದ ವ್ಯಾಸರಾಯಿಗಳ ಪದವಿಗೆ ಮಾಜಿ ಹಿಂದುಸ್ಥಾನದ ಸರ್ವಸೇನಾಧಿಪತಿಗಳಾದ ಕಿಚ್ನರ್ ಪ್ರಭುಗಳು ನೇಮಿಸಲ್ಪಡುವ ಸಂಭವವು ಇರುವುದೆಂದು ಪಿಯೋನೀಯರ್ ಎಂಬ ಅಲ್ಲಹಾಬಾದಿನಲ್ಲಿ ಪ್ರಕಟವಾಗುವ ಪತ್ರಿಕೆಗೆ ಅದರ ಲಂಡನ್ ಬಾತ್ಮೀದಾರರು ತಂತೀ ಮೂಲಕ ತಿಳಿಸಿರುವರು

~~~~~~

ಟಾಪು ಯಾ ಕಾರಾಗ್ರಹವಾಸದ ಶಿಕ್ಷೆಯನ್ನು ಪಡದು ಮೇ ತಿಂಗಳ ೨೩ನೇ ತಾರೀಕಿನಲ್ಲಿ ತಮ್ಮ ಶಿಕ್ಷಾವಧಿಯಲ್ಲಿ ಒಂದು ತಿಂಗಳಿನಕ್ಕಿಂತ ಹೆಚ್ಚು ಸಮಯದ ಶಿಕ್ಷೆಯನ್ನನುಭವಿಸಲಿರುವ ಬ್ರಿಟಿಷ್‌ಹಿಂದುಸ್ಥಾನದ ಕೈದಿಗಳಿಗೆಲ್ಲಾ ಗವರ್ನರ್ ಜನರಲವರಿಗೆ ತಮಗೆ ಯುಕ್ತ ತೋರಿದ [illegible]

[illegible] ಛತ್ರವರ್ತಿಗಳವರು [illegible] ಟ್ಟಿರುವರು.

~~~~~~

ಟಾಟಾರವರು ವಿದ್ಯಾರ್ಥಿಗಳಿಗೆ ಅನ್ಯದೇಶಗಳಿಗೆ ಹೋಗಿ ಕಲಿಯುವುದಕ್ಕೆ ಬೇಕಾದ ಸಹಾಯವನ್ನು ಒದಗಿಸಿಕೊಡುವಂತೆ ಸ್ಥಾಪಿಸಿದ ವಿದ್ಯಾಸಂಸ್ಥೆಯು ಮಾದರಿಯಲ್ಲಿ ಒಂದು ದ್ರವ್ಯಸಹಾಯನಿಧಿಯನ್ನು ಏರ್ಪಡಿಸಲಿಕ್ಕೆ ಲಿವ್ಹಿ ಎಂಬಲ್ಲಿಗೆ ಉತ್ತರಾಧಿಕಾರಿಯಾಗಿರುವ ರಾಣಿ ಸಾಹೇಬರವರ ವಿವಾಹ ಸಂದರ್ಭದಲ್ಲಿ ೨೦,೦೦೦ ರೂಪಾಯಿಗಳು ಕೊಡೋಣಾಗಿರುವವು

~~~~~~

ಕಳದ ತಿಂಗಳ ತಾ ೨೭ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದುಸ್ಥಾನದಲ್ಲಿ ೧೫೭೯ ಪ್ಲೇಗು ಮರಣಗಳಿದ್ದವು

~~~~~~

ಹಿಂದುಸ್ಥಾನದಲ್ಲಿ ಬೆಳ್ಳಿ, ವಿದೇಶಿ ಮಾದಕ ಪದಾರ್ಥಗಳು ಸಿಗರೇಟುಗಳ ಮೇಲ ಸುಂಕವು ವಿಧಿಸೋಣಾದಂದಿನಿಂದ ಕಳದ ಎಪ್ರಿಲ್ ತಿಂಗಳಲ್ಲಿ ಆದ ವ್ಯಾಪಾರದಿಂದ ಬೆಳ್ಳಿ ಮತ್ತು ಮಾದಕ ಪದಾರ್ಥಗಳ ಆಮದು ಕಡಿಮೆ ಯಾಗಲಿಲ್ಲವೆಂತಲೂ, ಸಿಗರೇಟುಗಳ ಆಮದು ಮಾತ್ರ ಕಡಿಮೆ ಯಾಗಿದೆಂಬದಾಗಿಯೂ ತೋರುತ್ತದೆ ತೆರಿಗೆ ಯು ವಿಧಿಸಲ್ಪಡುವದಕ್ಕೇ ಬಹಳ ಹೆಚ್ಚು ಸಿಗರೇಟು ಇಲ್ಲಿಯ ಸಿಗರೇಟು ಬಂಡಸಾಲೆಗಳಲ್ಲಿ ದಾಸ್ತಾನು ಇದ್ದದರಿಂದ ಇವುಗಳ ಆಮದು ಕಡಿಮೆಯಾಗಿರುವುದೆಂತ ಅಭಿಪ್ರಾಯ ಪಡುತ್ತಾರೆ

~~~~~~

ಮಿಂಟೋ ಪ್ರಭುಗಳು ತಮ್ಮ ವ್ಯಾಸರಾಯಿ ಪ್ರಭುತ್ವದ ಅವಧಿಯನ್ನು ಹೆಚ್ಚಿಸಲು ಅಪೇಕ್ಷಿಸುವುದಿಲ್ಲವಾದ್ದರಿಂದ ಇವರ ಉತ್ತರಾಧಿಕಾರಿ ಯಾರೆಂಬದು ಬರುವ ಹಪ್ತೆಯೊಳಗ ಪ್ರಕಟಿಸಲ್ಪಡ ವುದಾಗಿ ಕೇಳುತ್ತೇವೆ

~~~~~~

ದಕ್ಷಿಣ ಹಿಂದುಸ್ಥಾನ.

~~~~~~

ಇದೇ ಬರುವ ಆಗೋಸ್ತು ತಿಂಗಳ ೧೬ನೇ ತಾರೀಕಿನಲ್ಲಿ ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಬಹುಮಾನಪಟ್ಟ ಫ್ರೇಜರರವರು ರಜೆ ಮೇಲೆ ಹೋಗುವುದರಿಂದ ಅವರ ಬದಲಾಗಿ ರಾಜಪುತಾನದಲ್ಲಿ ಗವರ್ನರ ಜನರಲರವರ ಏಜಂಟರಾಗಿರುವ ಮಿ ಡಾಲಿ, ಸಿ ಐ. ಇ. ಸಿ ಎಸ್ ಐಯವರು ಈ ಕೆಲಸಕ್ಕ ನೇಮಕವಪಟ್ಟಿರುವರು

— —

ಕರಕೌಶಲ್ಯದ ಕಾಮಗಾರಿ ವೃತ್ತಿಯನ್ನನುಸರಿಸುವವರಿಗೆ ಬೇಕಾದ ಮಾಹಿತಿಯನ್ನು ಕೊಟ್ಟು ಅವರಿಗೆ ಮಾರಿಹೋಗುವ ವಸ್ತುಗಳು ಯಾವವೆಂಬದನ್ನು ತಿಳಿಯಹೇಳಿ, ಅವರನ್ನು ಪ್ರೋತ್ಸಾಹಿಸುವಂತೆಯೂ 'ಮದ್ರಾಸಿನಲ್ಲಿರುವ ವಿಕ್ಟೋರಿಯಾ ಇನ್ಸ್‌ಟಿಟ್ಯೂಟ್ ಎಂಬ ಕಲಾಶಾಲೆಯ ಮಾಹಿತಿಯನ್ನು ಇವರಲ್ಲಿ ಉಂಟುಮಾಡುವಂತೆಯೂ ಸಂಸ್ಥಾನದ ಎಲ್ಲಾ ಪ್ರಾಂತ್ಯಗಳಲ್ಲಿ ಸರ್ಕೀಟು ತಿರುಗುವ ಒಬ್ಬ ಆಫೀಸರನನ್ನು ನೇಮಿಸುವರೆ ಮದ್ರಾಸು ಸರಕಾರದವರು ರೂ ೨೫೦೦೦ವನ್ನು ಸೆಂಕ್ಷನುಮಾಡಿರುತ್ತಾರೆ.

~~~~~~

ವೆಲ್ಲೂರು ಪೊಲೀಸು ಟ್ರೈನಿಂಗ್ ಶಾಲೆಯಲ್ಲಿ ಶೋರ್ಟ್ ಹೆಂಡ್ ಅಥವಾ ಸಂಕ್ಷಿಪ್ತ ಲಿಪಿಯನ್ನು ಕಲಿಸುವ ರಾ ಎಮ್ ಶ್ರೀನಿವಾಸರಾವ್ ಎಂಬವರಿಗೆ ಇವರು ಟಮಿಲ್ ಭಾಷೆಗೆ ರಚಿಸಿರುವ ಸಂಕ್ಷಿಪ್ತ ಲಿಪಿಯ [illegible] ಸ್ಕರ ಸರಕಾರದವರು ರೂ. ೫೦೦ನ್ನು ಬಹುಮಾನ [illegible] ವಾಗಿ ಕೊಡಬೇಕಾಗಿ ಅಪ್ಪಣೆಕೊಟ್ಟಿರುವರು [illegible]

ಗೌಡ ಸಾರಸ್ವತರು ಬ್ರಾ ೩೦, ೪೦, ಸಾವಿರ ಜನರನ್ನು ಸಹಾ ಕೊಟ್ಟಿರುವರು. ತೆಲುಗು, ಮಲೆಯಾಳ, ಮತ್ತು ಕನ್ನಡ ಭಾಷೆಗಳಿಗೆ ಸಹಾ ಸಂಕ್ಷಿಪ್ತ ಲಿಪಿಯ ಪುಸ್ತಕಗಳನ್ನು ತಯಾರು ಮಾಡಬೇಕೆಂದು ಶ್ರೀನಿವಾಸ ರಾಯರವರಿಗೆ ಅಪ್ಪಣೆಕೊಟ್ಟು, ಈ ಪುಸ್ತಕ ಪ್ರಕಟಣೆಯ ಖರ್ಚನ್ನು ತಾವೇ ವಹಿಸಿಕೊಳ್ಳುವರೆಂತ ಸಹಾ ಸರಕಾರದವರು ಒಪ್ಪಿರುವರು.

~~~

ಟ್ರಾನ್ಸವಾಲ ಸರಕಾರದವರಿಂದ ಹಿಂದೂಸ್ಥಾನಕ್ಕೆ ಗಡಿಪಾರು ಮಾಡಲ್ಪಟ್ಟು ಮದ್ರಾಸಿಗೆ ಬಂದಿಳಿದ ಹಲವು ಜನ ಟ್ರಾನ್ಸವಾಲ ಭಾರತೀಯರನ್ನು ವಾಣೀಕುಲ ಕ್ಷತ್ರಿಯ ಮಹಾಜನ ಸಂಘದವರು ಬಹಳ ಸಂಭ್ರಮದಿಂದ ಉಪಚರಿಸುವವರಾದರು. ಈ ಬಗ್ಗೆ ಈ ಸಂಘದವರು ಮದ್ರಾಸು ಪಟ್ಟಣದಲ್ಲಿ ಒಂದು ಸಭೆ ಕರೆದು ಆ ಸಭೆಯಲ್ಲಿ ಗಡಿಪಾರು ಆದ ಭಾರತೀಯರು ಒಬ್ಬೊಬ್ಬರೇ ತಮ್ಮ ಸಂಕಷ್ಟಗಳನ್ನು ಸಭೆಯಲ್ಲಿ ಹೇಳುವವರಾದರು. ತಮ್ಮ ನಿವಾಸಭೂಮಿಯಾದ ಟ್ರಾನ್ಸವಾಲಿನಲ್ಲಿ ಭಾರತೀಯರು ಪಡುತ್ತಿರುವ ಕಷ್ಟಗಳನ್ನೂ, ಅನುಭವಿಸುತ್ತಿರುವ ಸಂಕಷ್ಟಗಳನ್ನೂ, ಮಾನ ಭಂಗವನ್ನೂ ಕೇಳಿ ಸಭಿಕರಲ್ಲಿ ಸರ್ವರ ಮುಖಗಳು ದುಃಖಾತಿಶಯಗಳಿಂದ ಬಾಡಿದವು. ಗಡಿಪಾರಾದವರಲ್ಲಿ ಬ್ರಾಹ್ಮಣರೂ, ನ್ಯಾಡುಗಳೂ, ಮುದಲಿಯರುಗಳೂ, ಪಿಳ್ಳೆಗಳೂ, ಮುಸಲ್ಮಾನರೂ, ಕ್ರೈಸ್ತರೂ ಇದ್ದರೂ ಅವರೆಲ್ಲರೂ ಒಟ್ಟುಕೂಡಿ ಏಕೀಭವಿಸಿ ಉತ್ಸುಕತೆಯಿಂದಲೂ ಬ್ರಾತೃಭಾವದಿಂದಲೂ, ಭಾರತೀಯರ ಅಭಿಮಾನವನ್ನು ಕಾಪಾಡಬೇಕೆಂಬುವ ಛಲದಿಂದಲೂ ಈ ಕಷ್ಟಗಳನ್ನೆಲ್ಲಾ ಸಹಿಸುತ್ತಿರುವರು. ಗಡಿಪಾರಾದವರಲ್ಲಿರುವ 14 ವರುಷಗಳ ಕ್ರೈಸ್ತ ಹುಡುಗನೂ ಅವನ ಸರಿ ಪ್ರಾಯದ ಬ್ರಾಹ್ಮಣ ಮತ್ತು ಮಹಮ್ಮದೀಯ ಹುಡುಗರು ಸಹಾ ಈ ದುಸ್ಸಹ್ಯವಾದ ಕಷ್ಟಗಳನ್ನು ಅಭಿಮಾನ ಪೂರ್ವಕ ಅನುಭವಿಸುತ್ತಿರುವರು. ಸಭಿಕರೆಲ್ಲರೂ ಗಡಿಪಾರಾದವರ ವೃತ್ತಾಂತವೆಲ್ಲವನ್ನು ಕೇಳಿದ ನಂತರ ಪಾನ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ಮುಗಿಯಿತು

~~~

ಕೃಷ್ಣಾಗುಂಟೂರು ಕನ್ಫರೆನ್ಸ ಸಭೆಯು ಕಳೆದ ತಿಂಗಳ ತಾ. ೩೧ರಲ್ಲಿ ಗುಂಟೂರಿನಲ್ಲಿ ಕೂಡಿರುವುದು. ಬಹುಮಾನಪಟ್ಟ ರಾ| ಕೇಶವ ಪಿಳ್ಳೆಯವರು ಸಭೆಯ ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ಅಧ್ಯಕ್ಷರು ಗುಪ್ತ ಪೋಲೀಸಿನವರ ಉಪದ್ರವು ಸಹಿಸಲಾರದ್ದೆಂತ ಹೇಳಿ ಈ ವಿಷಯ ಸರಕಾರದವರಿಗೆ ಜಾಹೀರು ಮಾಡಿಕೊಳ್ಳಬೇಕೆಂದೂ ಸೆಕೆಂಡರಿ ಶಾಲೆಗಳ ಫೀಸುಗಳ ದರವನ್ನು ಸರಕಾರದವರು ಹೆಚ್ಚಿಸಿದ್ದು ಅನುಚಿತವೆಂದೂ ಈ ವಿಷಯ ತಕ್ಕದಾದ ಕಳಕಳಿ ವನ್ನಿಚ್ಚಿಸಿ ಸರಕಾರದವರ ಈ ವಿಷಯವಾದ ಅಪ್ಪಣೆಯನ್ನು ವಜಾಮಾಡಿಸಲಿಕ್ಕೆ ಪ್ರಯತ್ನಿಸಬೇಕೆಂದೂ ಸೂಚಿಸಿದ್ದಲ್ಲದೆ, ಜಂಗ್ಲಿ ಇಲಾಖೆ, ಜೈಲ್ ಇಲಾಖೆ, ವ್ಯವಸಾಯ ಮೊದಲಾದವುಗಳ ವಿಷಯ ಸಮಯೋಚಿತ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿರುವರು

~~~

ಮೈಸೂರು ಯುವರಾಜರವರ ವಿವಾಹದ ಬಹುಮಾನಾರ್ಥವಾಗಿ ಮೈಸೂರು ಸಂಸ್ಥಾನದ ಎಲ್ಲಾ ಸರಕಾರಿ ಆಫೀಸುಗಳಿಗೂ ಶಾಲೆಗಳಿಗೂ ಕೊಲೇಜುಗಳಿಗೂ ಈ ತಿಂಗಳ ೧ನೇ ತಾರೀಕಿನಿಂದ ಆರು ದಿವಸಗಳ ರಜೆಯು ಕೊಡಲ್ಪಟ್ಟಿರುವದು.

ದಕ್ಷಿಣ ಕನ್ನಡ

Wanted.

Two clerks with experience of Commercial routine and accounts Salary Rs 15 rising to Rs 20/- with future prospects Preference will be given to Matriculates Apply to M Ebrahim Elias, General Merchant, Mangalore

M Ebrahim Elias

ಸ್ವೀಕಾರ ರಾ ಬಿ ಶ್ರೀನಿವಾಸರಾವ್‌ರವರಿಂದ ರಚಿಸಲ್ಪಟ್ಟು ವಿವೇಕನುಡಿ ಅಭಿಪ್ರಾಯಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು

~~~

ತಲಚೇರಿಯ ಗೌಡಸಾರಸ್ವತ ಬ್ರಾಹ್ಮಣರ ಡಿಬೇಟಿಂಗ್ ಸೊಸೈಟಿ ಎಂಬ ಸಂಘದ ಮತ್ತು ವಾಚನಮಂದಿರದ ದ್ವಿತೀಯ ವರುಷದ ಸಭಾ ವೃತ್ತಾಂತವೂ ಸಂಘದ ವರದಿಯೂ ನಮ್ಮ ಹಸ್ತಗತವಾಗಿರುವುದು ಈ ದ್ವಿತೀಯ ವರುಷದ ಸಭೆಯು ತಲಚೇರಿಯಲ್ಲಿ ಕಳೆದ ಮೇ ತಿಂಗಳ ೧೯ನೇ ತಾರೀಕಿಗೆ ಕೂಡಿತು ಮ ರಾ ರಾ| ಪೈ ಸಾಹೇಬ ಎನ್ ಗೋಪಾಲರಾವ್ ಬಿ ಎ ಬಿ ಎಲ್‌ರವರು ಸಭಾಧ್ಯಕ್ಷರಾಗಿದ್ದರು ಈ ಸಂಘದವರ ಪ್ರಥಮ ವಾರ್ಷಿಕ ಸಭೆಗೆ ಕೀರ್ತಿಶೇಷ ಅಮ್ಮೆಂಬಳ ಸುಬ್ರಾಯ ಪೈಗಳವರು ಅಧ್ಯಕ್ಷರಾಗಿದ್ದರು ಸುಬ್ರಾಯ ಪೈಗಳವರ ಮರಣದಿಂದುಂಟಾದ ನಷ್ಟ ಸಂತಾಪಗಳನ್ನು ಸೂಚಿಸಿ ದ್ವಿತೀಯ ವರುಷಾವಧಿ ಸಭಾವೃತ್ತಾಂತವು ಪ್ರಾರಂಭಿಸಲ್ಪಟ್ಟಿರುವುದು ಕಳೆದ ವರುಷದಲ್ಲಿ ಈ ಸಂಘದ ಅಧ್ಯಕ್ಷರಾಗಿದ್ದ ರಾ ಆರ್ ಎಂ ಮಲ್ಯರ್ ಬಿ ಎ ಎಲ್ ಟಿ ಯವರು ಈ ವರುಷ ಸಹಾ ಸಂಘದ ಅಧ್ಯಕ್ಷರಾಗಿರುವರು ಇದೇ ವರುಷದಲ್ಲಿ ಸಂಘದವರ ೨೬ ಸಭೆಗಳು ಸೇರಿ ಉಪಯುಕ್ತ ವಿಷಯಗಳು ಆ ಸಭೆಗಳಲ್ಲಿ ಚರ್ಚಿಸಲ್ಪಟ್ಟವು ಕೊಚ್ಚಿಯ ಡಾಕ್ಟರ್ ಅಪ್ಪಾರಾವ್‌ರವರು ಗೌಡಸಾರಸ್ವತ ಬ್ರಾಹ್ಮಣರ ವಿವಾಹ ಪದ್ಧತಿಯಲ್ಲಿ ಅಶಾಸ್ತ್ರೀಕ ಕಟ್ಟಳೆಗಳನ್ನು ನೀಗಿಸುವರೆಂಬ ವಿಷಯ ಈ ಸಂಘದವರಿಗೆ ಅಲ್ಲಿಯ ಶ್ರೀ ಲಕ್ಷ್ಮೀ ದೇವಸ್ಥಾನದಲ್ಲಿ ಭಾಷಣವನ್ನು ಕೊಟ್ಟಿರುವರಾಗಿ ತೋರಿಬರುತ್ತದೆ ಸಂಘಕ್ಕೆ ಈ ವರುಷದಲ್ಲಿ ೨೦ ಜನ ಮೆಂಬರರಿರುವರು ಸಂಘದ ವಾಚನಗೃಹದೊಂದಿಗೆ ೮೦೦ ಪುಸ್ತಕಗಳುಳ್ಳ ಲೈಬ್ರೆರಿ ಯಾ ಗ್ರಂಥಾಲಯವು ಇರುವುದು ಸುಬ್ರಾಯಪೈಗಳವರ ಸ್ಮರಣಾರ್ಥವಾಗಿ ಒಂದು ಫಂಡನ್ನು ಏರ್ಪಡಿಸಿ ಈ ಸಂಘದವರು ಪ್ರತಿ ವರುಷವೂ ಪೈಗಳವರು ಮೃತಪಟ್ಟ ದಿನವನ್ನಾಚರಿಸಲಿಕ್ಕೆ ಐದು ಜನ ಬ್ರಾಹ್ಮಣ ಸಂತರ್ಪಣೆಯನ್ನು ಮಾಡುವರೆ ನಿರ್ಣಯಿಸಿರುವರು ಸಂಘದ ಪ್ರಥಮ ವಾರ್ಷಿಕ ಸಭೆಯ ಅಧ್ಯಕ್ಷರು ಅಪ್ಪಣೆ ಕೊಡಿಸಿದಂತೆ ಸಂಘವು ಯಾವಾಗಲೂ ಸಜೀವವಾಗಿರುವಂತೆ ಪ್ರಯತ್ನಿಸಿ ಸಂಘದವರಿಗೂ ಇತರರೆಲ್ಲರಿಗೂ ಇದರಿಂದ ಪ್ರಯೋಜನವು ದೊರಕುವಂತೆ ಗತವರುಷಗಳಲ್ಲಿ ಸಾಹಸಪಟ್ಟಂತೆಯೇ ಇನ್ನು ಮುಂದಿನ ವರುಷಗಳಲ್ಲಿ ಸಹಾ ಸಾಹಸಪಡುವರಾಗಿ ಕೋರುತ್ತೇವೆ

~~~

ಸುಲ್ತಾನ್ ಬತ್ತೇರಿಯಲ್ಲಿಯ ಸಬ್ ಪೋಸ್ಟಮಾಸ್ಟರ್ ರಾ| ಎಚ್| ಶಿವರಾಯರವರು ನಮಗೆ ಈ ರೀತಿ ಬರದಿರುವರು:—"ತಮ್ಮ ತಾ. ೨೭-೫-೧೧ನೇ ಪತ್ರಿಕೆಯಲ್ಲಿ ಪ್ರಕಟಿಸಿದ ಗೌಡಸಾರಸ್ವತ ಬ್ರಾಹ್ಮಣ ಪರಿಷದದಲ್ಲಿ ಸಾರಸ್ವತ ಜಾತಿಯನ್ನು ಸೇರಿಸಿಕೊಂಡಿರುತ್ತಿರೋ, ಅಥವಾ ಬಾರ್ದೇಶಕಾರ, ಪಿಡ್ನೆಕಾರ, ಮುಂತಾದ ಇತರ ಜಾತಿಯವರನ್ನು ಮಾತ್ರ ಸೇರಿಸಿದ್ದಿರೋ ಎಂಬ ವಿಷಯ ದಯವಿಟ್ಟು ತಮ್ಮ ಜೂನ್ ತಾ. ೩ನೇ ಸಂಚಿಕೆಯಲ್ಲಿ ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ."

ಕಳೆದ ೨೭ನೇ ತಾರೀಕಿನಲ್ಲಿ ನಾವು ಬರದ ಪರಿಷದದ ವೃತ್ತಾಂತವು 'ಗೌಡಸಾರಸ್ವತ ಬ್ರಾಹ್ಮಣ ಪರಿಷದ'ದಲ್ಲ. ಸಂಯುಕ್ತ ಗೌಡಸಾರಸ್ವತ ಬ್ರಾಹ್ಮಣ ಪರಿಷದದ್ದಾಗಿರುವುದು ಈ ಸಂಯುಕ್ತ ಪರಿಷದಿನಲ್ಲಿ ಕೂಡಿದ ಸಭಾಸದರ ಅಭಿಪ್ರಾಯದ ಮೇರೆಗೆ ಒಂದೇ ಗೌಡಸಾರಸ್ವತ ಜಾತಿಯ ಉಪಶಾಖೆಗಳಾಗಿರುವ ಸಾರಸ್ವತ, ಬಾರ್ದೇಶಕಾರ, ಪಿಡ್ನೆಕಾರ ಮೊದಲಾದ ಒಳಜಾತಿಯವರನ್ನು,—ಇತರ ಜಾತಿಯವರನ್ನಲ್ಲ ಒಂದೇ ಜಾತಿಯಾಗಿ ಆ ಸಂಯುಕ್ತ ಪರಿಷದದವರು ಒಟ್ಟಿಗೆ ಕೂಡಿಸಿರುವರು

Editor Swadeshabhimani

~~~

ಈ ಸಂಚಿಕೆಯ ಪತ್ರವ್ಯವಹಾರ ಭಾಗದಲ್ಲಿ ಇಪ್ಪಿಯ ಡಿಸ್ಟ್ರಿಕ್ಟ್ ಕೋರ್ಟ್ ವಕೀಲರಾದ ಮ ರಾ ರಾ ಹಳಗೇರಿ ಕೃಷ್ಣರಾಯರವರು ದಮೂರಿಂದ ವಿಸಿಂದ ೬ ವಾರ ಕೊಟ್ಟು ಬರೆದಿರುವ ವಿವಾಹ ವಿಷಯವನ್ನು ಪ್ರಕಟಿಸುತ್ತೇವೆ ಬಾಲ್ಯ ವಿವಾಹ ವಿಷಯ ಪ್ರಸ್ತುತ ಹಿಂದುಸ್ಥಾನದ ಎಲ್ಲಾ ಕಡೆಗಳಲ್ಲಿ ಚರ್ಚಿಸಲ್ಪಡುವುದು ಅಲ್ಲದೆ ಅನೇಕ ವಿಧದ ಬ್ರಾಹ್ಮಣ ಪರಿಷದಗಳಲ್ಲಿ ಈ ವಿಷಯವು ಚರ್ಚಿಸಲ್ಪಡುತ್ತಿರುವುದು ಅನೇಕಾನ ಜನರಾಗಲೂ ವಯೋವೃದ್ಧರೂ ಧರ್ಮಶಾಸ್ತ್ರಗಳಲ್ಲಿ ಈ ವಿಷಯ ಏನಿರುವುದೆಂಬದನ್ನು ತಿಳಕೊಂಡು ದೇಶದ ಇತರ ಕಡೆಗಳಲ್ಲಿ ಆಂಗ್ಲಭಾಷಾ ಪತ್ರಗಳಲ್ಲಿಯೂ ದೇಶಭಾಷಾ ಪತ್ರಗಳಲ್ಲಿಯೂ ತಮ್ಮ ಅಭಿಪ್ರಾಯಗಳನ್ನು ಶಾಸ್ತ್ರಾಧಾರದೊಂದಿಗೆ ಪ್ರಕಟಿಸಿ ಸಮುದಾಯಕ್ಕೆ ಈ ವಿಷಯ ಪ್ರವರ್ತಿಸಬೇಕಾದ ರೀತಿಗಳನ್ನು ಸೂಚಿಸಿ ಕೊಡುತ್ತಿರುವರು ನಮ್ಮಲ್ಲಿಯೂ ಸಹ ಪುರೋಹಿತ ವರ್ಗದವರಾದ ಭಟ್ಟ ಆಚಾರ್ಯರುಗಳಾದ ವೈದಿಕರೂ, ಶಾಸ್ತ್ರಸಾಹಿತ್ಯವನ್ನೂ ಲೋಕಾನುಭವವನ್ನೂ ಪಡೆದ ಸುಶಿಕ್ಷಿತರಾದ ವಿದ್ಯಾವಂತರುಗಳೂ ಈ ಸಂದರ್ಭದಲ್ಲಿ ತಂತಮಗೆ ಉಪಯುಕ್ತ ತೋರುವ ವಿವಾಹ ವಿಚಾರಗಳನ್ನು ಈ ಪತ್ರಮುಖೇನ ನಮ್ಮ ನಾಡಿನ ಜನರೆಲ್ಲರಿಗೆ ತಿಳಿಸಿಕೊಟ್ಟು ನಮ್ಮಲ್ಲಿನವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇವೆ

~~~

ಮದ್ರಾಸು ಸಂಸ್ಥಾನದ ಪ್ರಾಂತಿಕ ಸಭೆಯು ಕರ್ನೂಲಿನಲ್ಲಿ ಇನ್ನು ಎಂದೆರಡು ದಿವಸಗಳಲ್ಲಿಯೇ ಕೂಡುವುದು. ನಮ್ಮ ಪಟ್ಟಣದಲ್ಲಿ ಸಹಾ ಒಂದು ಡಿಸ್ಟ್ರಿಕ್ಟ್ ಕಾಂಗ್ರೆಸು ಕಮಿಟಿ ಇರುವದೆಂದು ತೋರುತ್ತದೆ ಈ ಪ್ರಾಂತಿಕ ಸಭೆಗೆ ನಮ್ಮ ಜಿಲ್ಲೆಯವರು ಇನ್ನಾದರೂ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸಿಕೊಡಬೇಕೆಂತ ಪ್ರಾಂತಿಕ ಸಭಾ ಸೆಕ್ರೆಟರಿಗಳು ವಿಜ್ಞಾಪಿಸಿಕೊಳ್ಳುತ್ತಿರುವರು ಇವರಿಗೆ ನಮ್ಮಲ್ಲಿಂದ ಉತ್ತರವೇನು?

~~~

ಮಂಗಳೂರು ಕಂಟೋನ್ಮೆಂಟ ಮುನಿಸಿಪಾಲಿಟಿಯಲ್ಲಿ ಪ್ಲೇಗು ಮರಣಗಳಿಲ್ಲ ಬೇರೆ ರೋಗದಿಂದ ಮೂರು ಮರಣಗಳು ಮಾತ್ರ ಇದ್ದವು.

ಸ್ಪೆಶ್ಯಲ್ ಲಿಂಡುಕಾರ್ಡು ಸಿಬಂದಿಯಲ್ಲಿದ್ದ ಲಿಂಡ್ ರಿಕಾರ್ಡ್ಸ ಇನ್ಸಪೆಕ್ಟರರವರು ತಮ್ಮ ಮುಂಚಿನ ಕೆಲಸಗಳನ್ನು ಕಳೆದ ೧ನೇ ತಾರೀಕಿನಿಂದ ವಹಿಸಿಕೊಳ್ಳುವರು.

ಇಪ್ಪಿಯ ಬಿಲ್ಲವರ ಜಾತಿಯ ದೇವಸ್ಥಾನದ ಕಮ್ಮಿಟಿ ಪ್ರೆಸಿಡೆಂಟ್ ಮೆ| ಎಚ್. ಕೊರಗಪ್ಪನವರು ಈ ಜಿಲ್ಲೆಯಲ್ಲಿರುವ ತಮ್ಮ ಸ್ವಜಾತಿ ಬಾಂಧವರಿಗೆ ಈ ಕೆಳಗಿನ ವಿಜ್ಞಾಪನೆಯನ್ನು ಮಾಡಿರುವರು:—"ಬ್ರಹ್ಮ ಶ್ರೀ ನಾರಾಯಣ ಗುರುಸ್ವಾಮಿಗಳವರ ಅನುಮತಿ ಮೇರೆಗೆ ಅವರ ಶಿಷ್ಯರಾದ ಶ್ರೀ ನಾರಾಯಣ ಚೈತನ್ಯ ಸ್ವಾಮಿಗಳವರು ಇದೇ ಬರುವ ಜೂನ್ ತಿಂಗಳ ತಾ. 4ನೇ ಶನಿವಾರ ರಾತ್ರಿ ಘಂಟೆ 9ಕ್ಕೆ ನಮ್ಮ ದೇವಸ್ಥಾನದ ಶಿವಾಧಾರ ಪ್ರತಿಷ್ಠೆಯ

ಕಾರ್ಯವನ್ನು ನೆರವೇರಿಸುವರಾಗಿ ಸಂಕಲ್ಪಿಸಿಯದೆ. ನಮ್ಮ ಸ್ವಜಾತಿ ಸ್ತ್ರೀಪುರುಷರು ತಮ್ಮ ತಮ್ಮ ಶಕ್ತ್ಯಾನುಸಾರ ಚಿನ್ನದ ನಾಣ್ಯಗಳನ್ನಾಗಲಿ, ನವರತ್ನಗಳ ಪೈಕಿಯಾಗಲಿ, ಕನಿಷ್ಟ ಪಕ್ಷಕ್ಕೆ ಒಂದು ಹಣ ತೂಕ ಚಿನ್ನದಷ್ಟು, ತಗಡಿನಲ್ಲಿ ದಶಾವತಾರಗಳ ಪೈಕಿ ಯಾವದಾದರು ಒಂದು ಅವತಾರದ ಪ್ರತಿಮೆಯನ್ನು ಬಿಡಿಸಿಯಾಗಲಿ ತಂದು ಅದೇ ದಿವಸ ಬೆಳಿಗ್ಯೆ 6 ಗಂಟೆಯಿಂದ ರಾತ್ರೆ 9 ಗಂಟೆ ವರೆಗೆ ಶಿಲಾಕಲಶದಲ್ಲಿ ತುಂಬಿಸಿದ ನಂತರ ಪ್ರತಿಷ್ಠಾಸ್ಥಾಪನೆ ಮಾಡತಕ್ಕದ್ದು ಎಂತ ಸಮಸ್ತ ಶ್ರೀ ಚೈತನ್ಯ ಸ್ವಾಮಿಗಳವರಿಂದ ಅಜ್ಞಾಪಿಸೋಣಾದ ಪ್ರಕಾರ ತಾವು ತಮ್ಮ ಸಕುಟುಂಬ ಬಂಧುಗಳ ಸಮೇತ ಮೇಲೆ ಹೇಳಿದ ರೀತಿಗನುಸರಿಸಿ ದಯಮಾಡಿ ಬಂದು ಈ ಶುಭಕಾರ್ಯವನ್ನು ಚಂದಗೊಳಿಸಬೇಕಾಗಿ ವಿಜ್ಞಾಪಿಸುತ್ತೇನೆ. ಈ ಮೊದಲು ಧನಸಹಾಯಕ್ಕೆ ಬರೆದಂತೆ ದೇವಸ್ಥಾನದ ಕೆಲಸವನ್ನು ನಡಿಸುವರೆ ನಿಮ್ಮ ನಿಮ್ಮ ಗ್ರಾಮಗಳಲ್ಲಿ [illegible] ವಂತಿಗೆ ಜಮೆ ಮಾಡಿ ಅದಷ್ಟು ಬೇಗದಲ್ಲಿ ತರುವಂತೆ [illegible]ತ್ತೇನೆ"

ಇಲ್ಲಿಯ ಎಸ್ಟ್ರಿಕ್ಟ್ ಜಡ್ಜರಾಗಿದ್ದ ಮಿ. [illegible] ಸಾಹೇಬರ ಒದಲಿಗೆ ಡಿಸ್ಟ್ರಿಕ್ಟ್ ಜಡ್ಜರಾಗಿ [illegible] ಮಿ. ಪಿ. ಎ. ಒಟಿ ದೊರೆಗಳವರು [illegible] ಕಾಲಕ್ಕೆ ಇಲ್ಲಿಗೆ ಬಂದು ತಲಪುವರು. ಡಿಸ್ಟ್ರಿಕ್ಟ್ ಕೋರ್ಟು [illegible] ನಾಡದು ಸೋಮವಾರ [illegible]

~~~~~~

ಕಾಸರಗೋಡು [illegible] ಳಲ್ಲಿ ಒರುವಂದಾ [illegible] ಯಗಾರರೇ [illegible] ರಲ್ಲಿ [illegible] ವಾರ ಈ [illegible] ಷ್ಟಿ, ಪಡಿಸಿತು.

ಇಲ್ಲಿ [illegible] ಪಟಿಕೆಯಿಂದಲೂ [illegible] ನಡಿಸುತ್ತಿದ್ದ [illegible] ಗೋಪಾಲರಾ[illegible] ಪಟ್ಟು ತೆರೆ[illegible] ಭಕ್ತಿಯವರ [illegible]

~~~~~~

ವಿವಿಧ ವಿಷಯಗಳು

ಡಾಕ್ಟರ್ ರಾಘವೇಂದ್ರ ರಾಯರವರು ಬ್ರಿಟಿಷ್ ಮೆಡಿಕಲ್ ಎಸೋಸಿಯೇಶನ್ [illegible] ವೈದ್ಯ ಸಂಘದವರು ಜುಲಾಯಿ ತಿಂಗಳಲ್ಲಿ [illegible] ಕೂಡುವ ಅವರ ವಾರ್ಷಿಕ ಸಭೆಯ ಸಂದರ್ಭದಲ್ಲಿ ಡಾಕ್ಟರ್ ರಾವ್‌ರವರನ್ನು [illegible] ಉಪ ಅಧ್ಯಕ್ಷರ [illegible] ವಿಯನ್ನು ಸ್ವೀಕರಿಸಲಿಕ್ಕೆ [illegible] ಆಮಂತ್ರಿಸಿರುವರು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಅತ್ಯಧಿಕ [illegible] ಹೊಂದಿಕೊಂಡಿರುವ ಈ [illegible] ತೀಯರನ್ನು ಆಮಂತ್ರಿಸಿದ್ದು ಇದೇ ಪ್ರಥಮ [illegible]ತ್ತದೆ. ಡಾಕ್ಟರ್ ರಾವ್‌ರವರು ಈ [illegible] ಸ್ಥಾನಕ್ಕೆ ಎಲ್ಲಾ ವಿಧಗಳಿಂದಲೂ ಅರ್ಹರಾಗಿರುವರು. ಇವರು ಮುಂಬಯಿಯ ಗ್ರೆಂಟ್ ಮೆಡಿಕಲ್ ಕೊಲೇಜಿನಲ್ಲಿ ವೈದ್ಯ ಪರೀಕ್ಷೆಗಳನ್ನು ಖ್ಯಾತಿಯಿಂದ [illegible] ಈ ವೈದ್ಯ ವಿದ್ಯಾಭ್ಯಾಸವನ್ನು ಮುಂದುವರಿಯಲಿಕ್ಕೆ ಲಂಡನ್ ಪಟ್ಟಣಕ್ಕೆ ಹೋಗಿ ಅಲ್ಲಿಯ ವಿಶ್ವವಿದ್ಯಾಲಯದ ಎಮ್. ಡಿ. ಡಿಗ್ರಿಯನ್ನು ಪಡದು ಆ ವಿಶ್ವವಿದ್ಯಾಲಯದಿಂದ ವೈದ್ಯಕೀಯ ಪರಿಶೋಧನೆ ಬಗ್ಯೆ ಸ್ಥಾಪಿಸಲ್ಪಟ್ಟ ವಿದ್ಯಾರ್ಥಿವೇತನವನ್ನು ಹೊಂದಿ ಮುಂಬಯಿಗೆ ಬಂದು ಅಲ್ಲಿ ತನ್ನ ವೃತ್ತಿಯನ್ನು ಮಾಡಿಕೊಂಡಿರುವರು. ಇತ್ತಲಾಗೆ ಮುಂಬಯಿಯಲ್ಲಿ ಕೂಡಿದ ಮೆಡಿಕಲ್ ಕೊಂಗ್ರೆಸಿನಲ್ಲಿ ಸಹಾ ಇವರು ಕೆಲವು [illegible]

[illegible] ಕೀಯ ಸಿದ್ಧಾಂತಗಳನ್ನು [illegible] ಬಹಳ ಹೆಸರುವಾಸಿಯಾಗಿರುವರು. ಇವರ ಜನ್ಮಭೂಮಿಯು ಇದೇ ದಕ್ಷಿಣಕನ್ನಡ ಜಿಲ್ಲೆಯಾಗಿರುವುದು. ಜಾತಿಯಲ್ಲಿ ಇವರು ಗೌಡ ಸಾರಸ್ವತ ಬ್ರಾಹ್ಮಣರಾಗಿರುವರು.

~~~~~~

ಈಗಿನ ನಮ್ಮ ಚಕ್ರವರ್ತಿಗಳು ೫ನೆಯ ಜೋರ್ಜ್ ಪ್ರಭುಗಳೆಂದು ಕರೆಯಲ್ಪಟ್ಟಿದ್ದಾರಷ್ಟೆ. ಇವರ ಹಿಂದೆ ೪ ಮಂದಿ ಜೋರ್ಜಗಳು ಆಳ್ವಿಕೆ ಮಾಡಿರುವರು. ಆ ವರೆ ಅವರು ಪ್ರಸಿದ್ಧ ಪುರುಷರಲ್ಲ. ಜೋರ್ಜ್ ಎಂಬ ಹೆಸರು ಈಗಿನ ಪ್ರಜೆಗಳ ಸಂಬಂಧದಿಂದಲೇ ವಿಖ್ಯಾತವಾಗುವ ಯೋಗವನ್ನು ತಂದಿರಬೇಕು. ಹಿಂದಿನವರಲ್ಲಿ ಮೊದಲನೆಯ ಜೋರ್ಜಿಗೆ ಇಂಗ್ಲಿಷ್‌ಭಾಷೆಯೇ [illegible] ಲ್ಲ. [illegible]ನೆಯ ಜೋರ್ಜಿ[illegible] [illegible] ಮೇಲೆ [illegible] ನೆಯ ಜೋರ್ಜಿನ ಕಾಲದಲ್ಲಿ ಆತನ [illegible] ಅಮೇರಿಕಾ ದೇಶವು ಇಂಗ್ಲಿಸಾಮ್ರಾಜ್ಯದಿಂದ [illegible] ಪ್ರತಿಷ್ಠಿತವಾಯಿತು. [illegible] ನೆಯ ಜೋರ್ಜ್ [illegible] ಆದಕಾರಣ ಆ ನಾಲ್ವರೂ [illegible] ಪ್ರಸಿದ್ಧಿಗೊಂಡವರಲ್ಲ.

ಮೈ. ಸ್ವಾ.

~~~~~~

ಗೌಡಸಾರಸ್ವತ ಬ್ರಾಹ್ಮಣರ ಸುಬ್ಬರಾವ್ ಮೆಮೊರಿಯಲ್ ಫಂಡಿಗೆ ದ್ರವ್ಯಸಹಾಯವನ್ನು ಕೊಡುವರೆ ವಾಗ್ದತ್ತ ಮಾಡಿದವರ ಹೆಸರುಗಳು ವ ಚಂದಾ ಮೊಬಲಗುಗಳು

ಕಳೆದ ತಿಂಗಳ [illegible] ಪತ್ರಿಕೆಯಲ್ಲಿ ಪ್ರಕಟಿಸಿದ ಜುಮುಲಾ ರೂ [illegible]

ಮ. ರಾ. ರಾ. [illegible] ಮಂಜುನಾಥ [illegible] (ಈ ವರೆಗೆ [illegible])		೧೦೦-೦-೦
,,	[illegible] ನಾಗಪ್ಪನಾಯ್ಕರವರು ([illegible])	೧೦೦-೦-೦
	[illegible] ವೆಂಕಟೇಶ ಪ್ರಭುಗಳು [illegible]	೧೦೦-೦-೦
,,	[illegible] ಪಾಂಡುರಂಗ [illegible] ಯವರು	೧೦೦-೦-೦
	[illegible] ಕಾಸರಗೋಡು, ಇವರು [illegible] ಈ [illegible] ಚಂದಾಪಟ್ಟಿಯಲ್ಲಿ ರೂ [illegible] ನ್ನು ಕೊಡುವರೆ ವಾಗ್ದತ್ತ ಮಾಡಿರುವರು.	೧೦೦-೦-೦
,,	ಕಾಸರಗೋಡು ಕಾಳಪ್ಪ ಕಾಮತ್ ಮತ್ತು ನರಸಿಂಹ ಕಾಮತರವರು	೧೦೦-೦-೦
,,	ಉಡುಪಾವರ ಶೇಷಗಿರಿ ಪೈ ಉಡುಪಿ	೫೦-೦-೦
,,	[illegible] ವಾಸುದೇವ ಪೈಗಳವರು ಉಡುಪಿ	೫೦-೦-೦
,,	ಉರ್ವ ಅಣ್ಣಪ್ಪಯ್ಯನವರು ಉಡುಪಿ.	೫೦-೦-೦
,,	ಕಲ್ಯಾಣಪುರ ನಾಗಪ್ಪ ಮಲ್ಯರವರು.	೭೫-೦-೦
,,	[illegible] ಕೃಷ್ಣರಾಯ [illegible]	[illegible]
	[illegible] ಪಡಿಯಾರರು.	೫೦-೦-೦
,,	ಉಡುಪಿ ಅನಂತ ಪಡಿಯಾರರು ವ ವಾಸುದೇವ ಪಡಿಯಾರರು.	೫೦-೦-೦
,,	ಕೊಕ್ಕರಣೆ ವಾಮನ ನ್ಯಾಕರು.	೫೦-೦-೦
,,	ಕಟ್ಪಾಡಿ ಬಾಬಯಾನೆ ಮಂಜುನಾಥ ಕಾಮತ್‌ರವರು	೫೦-೦-೦
,	ಮಂಗಳೂರು ರಾಮಚಂದ್ರ ಕಾಮತ್ ಮತ್ತು ತಮ್ಮಂದಿಯರು. ಕುಂದಾಪುರ	೫೦-೦-೦
..	ಬಂಟ್ವಾಳ ವೈಕುಂಠ ಬಾಳಿಗರವರು	೫೦-೦-೦
,,	ಪಡುಬಿದ್ರೆ ಶ್ರೀನಿವಾಸ ಶ್ಯಾನಭಾಗರು ಮತ್ತು ಗೋವಿಂದ ಕಾಮತರು	೫೦-೦-೦
	ಪಡುಬಿದ್ರೆ ಮಂಜುನಾಥ ನಾಯ್ಕರವರು	೫೦-೦-೦
..	ಹೊಸಬೆಟ್ಟು ಶ್ರೀನಿವಾಸ ಕಾಮತರು, ಕಾಪ್ರಗೋಡು	೫೦-೦-೦

ಜುಮುಲಾ ೧೫೩೮೦-೪-೦.

(ಮುಂದೆ ಸಾಗುವದು.)

~~~~~~

ಜೀವಸುಗಳ ಧಾರಣೆ ಮಂಗಳೂರು

~~~~~~

ಕೂಳೂರು ಮಸ್ತತಿ ಅಕ್ಕಿ	4—8—0
ಗುಬ್ಬಿ ಮಸ್ತತಿ	4—2—0
ಮಸ್ತತಿ [illegible]	3—15—0
ವಕ್ಲ ಸುಗ್ಗಿ	4—0—0
ಸುಗ್ಗಿ [illegible]	3—14—0
ಮಸ್ತತಿ ಬೆಳ್ತಿಗೆ	5—0—0
ರಂಗೂನ್ ಬೆಳ್ತಿಗೆ ಗೋಣಿ	8—0—0
ಪುರುಳಿ ಗೋಣಿ [illegible]	6—0—0
ಉಪ್ಪು ಗೋಣಿ [illegible]	3—8—0
ಕೊಪ್ರಿ ಖಂಡಿ [illegible]	105—0—0
ಕೊಪ್ರಿ ಎಣ್ಣೆ [illegible]	7—5—0
ಕಾಪಿ ಖಂಡಿ [illegible]	175—0—0
ಕಾಳು ಮೆಣಸು ಖಂಡಿ	118—0—0
[illegible] ಗೋಟು ಅಡಿಕೆ	80—0—0
ಕರಿ ಗೋಟು	65—0—0
ಏಲಕ್ಕಿ ಮಣ [illegible]	28—0—0

ಅಬಲಾ ಸಂಜೀವಿನಿ ಗುಳಿಗೆಗಳು.

~~~~~~

ಇವು ಸ್ತ್ರೀಯರ ಮಾಸಿಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮಪರಿಹಾರಕ ಸ್ವದೇಶೀಔಷಧವಾಗಿ [illegible] ಮಾಸಿಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದೂ, ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತವೆ. ಗರ್ಭಕೋಶದ ರೋಗರುಜೆಗಳಲ್ಲಿ ಈ ಔಷದವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ. ದೇಹದಲ್ಲಿ ಯಾವದೊಂದು ಅಕ್ರಮ [illegible] ಕಂಡುಬಂದಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು. ಉಪಯೋಗಿಸಿದವರು ಅವುಗಳ ಬಗ್ಗೆ ಶಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು [illegible] ಮಿತವಾಗಿದೆ. ವಿಶೇಷ ಮಾಹಿತಿಯ ಕೆಟಲಾಗನ್ನು [illegible] ವಾಗಿ ಕಳುಹಿ[illegible]. ಔಷಧಿ ಕ್ರಯ [illegible] ಅಂಚೆ ಹಾಸಲು [illegible]

[illegible]
~~~~~~

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಎಣ್ಣೆ. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ,

ಬಾಟ್ಲ ಒಂದರ 8 ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ

ಬಾಟ್ಲ ಒಂದರ 6 ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ರೆಬೀಳುವದು

ಬಾಟ್ಲ ಒಂದರ 6 ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ ಇದರಿಂದ ಮೆದುಳು ತಂಪಾಗುವದು ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ.

ಬಾಟ್ಲ ಒಂದರ 6 ಆಣೆ

ಮಾಲತಿ ಅತ್ತರು.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು ಇದರ ಪರಿಮಳವು ಹೆಚ್ಚು ದಿವಸಗಳ ವರೇಗೆ ಹೋಗುವದಿಲ್ಲ ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಎಲ್ಲಾ ಅತ್ತರುಗಳಿಗಿಂತ ಇದು ಉತ್ತಮ ಬಾಟ್ಲ ಒಂದರ ಕಿಮ್ಮತು 0—12—0

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕ

ಕೆ. ಗೋಪಾಲ್ ರಾವ್

ನಂಬ್ರ 3 ಕಂಟಾಕ್ವಾರ್ ಬಿಲ್ಡಿಂಗ್ ಗಿರಗಾಂವ ಮುಂಬಯಿ

ಇದನ್ನು ಓದಿದರೆ ತಿಳಿಯುತ್ತೆ! ತರಿಸಿದರೆ ಸಿಕ್ಕುತ್ತೆ!

ಸಮಸ್ತರಿಗೂ ಅನುಕೂಲವಾದ, ಚಿತ್ರಮಯವಾಗಿರುವ ಈ ಪುಸ್ತಕದಲ್ಲಿ ಚಿಕ್ಕವರೂ ದೊಡ್ಡವರೂ ನೋಡತಕ್ಕ, ತ್ರಯವಿಚಾರ, (ಬೆಳ್ಳಿ, ಬಂಗಾರ, ರತ್ನಗಳ) ಪರಿಶೀಲನೆ, ಕಟವಾಯು, ಜ್ವರ, ವಾತಪಿತ್ತವಿಚಾರ, ನಾಡೀಜ್ಞಾನ ಮತ್ತು ಚಿಕಿತ್ಸೆ

ಲಾಭವನ್ನು ಸಂಪಾದಿಸುವ ಒಗ್ಗೆ ಕಾಗದ, ಸೀಸದಕಡ್ಡಿ ಇಂಕರಿ ಬೆಂಕಿಪೆಟ್ಟಿಗೆ ಮೊದಲಾದ ಅನೇಕ ವಿಷಯಗಳು, ತನುಮನೋಲ್ಲಾಸವನ್ನೀಯುವ ತೈಲ, ಲವೆಂಡರ್ ಸೋಪು, ಅತ್ತರ್, ಪನ್ನೀರು, ಪರ್ಬತ್, ಗುಲ್‌ಕನ್, ಕುಸುಮಗಳ ವಿವೇಚನೆ, ರಂಜಿಸುತ್ತಾ ನೋಟಕರಿಗೆ ಆನಂದವನ್ನಿಯುವ ಗಿಲೀಟ್, ಫ್ರಾಲೀಷ್ ವಾರ್ನೀಷ್, ಮುಂತಾದ ಬಣ್ಣದ ವಿಷಯಗಳು

ಗಣನೆಗೆ ಮಿಗಿಲಾದ ಆಕಾಶಮಾನ ಮೊದಲಾದ ಅನೇಕ ವಿಷಯಗಳು ಮೊದಲನೇ ಭಾಗದಲ್ಲಿಯೇ ವಾಚಕರ ಹಸ್ತಗತವಾಗುವುದಕ್ಕಿರುವ ಪುಸ್ತಕವು ಯಾವುದು? "ಸಚಿತ್ರ ಕಲಾತರಂಗ" ಹಾಗಾದರೆ ಬೇಗನೆ ಬರದು ತರಿಸಿಕೊಳ್ಳಿರಿ! ಕ್ರಯ ಪ್ರತಿ ಒಕ್ಕೆ 1—8—0 ವಿ ಪಿ ಮೂಲಕ 1—12—0

(1) ವಿಳಾಸ—ಮ್ಯಾನೇಜರ್ ಯಸ್ ಜಿ ಯನ್ ಪ್ರೆಸ್

1೭೮ ಅರಳೆಪೇಟೆ, ಬೆಂಗಳೂರು ಸಿಟಿ

ಅಥವಾ

ಏಜಂಟರು —(2) ದಿ. ಊಲನ್ ಮಾರ್ಟ್,

ನಂ|| 1, ಮಂಗಳೂರು (ದ. ಕ)

ಮೇಲ್ಕಂಡ ಎರಡು ಸ್ಥಳಗಳಲ್ಲಿಯೂ ಪುಸ್ತಕವು ಕ್ರಯಕ್ಕೆ ದೊರೆಯುತ್ತೆ

ಅನುಪಾನಪತ್ರ ಬಾಟ್ಲಯೊಂದಿಗಿರುವುದು. | ಸಿದ್ಧಲಕ್ಷ್ಮೀ ವಿಲಾಸ. | ಕ್ರಯ ಬಾಟಲಿಕ್ಕೆ 12 ಆಣೆ.

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು. (ಆಸನದಲ್ಲಿ) ಗುದದ್ವಾರದ ಹತ್ತರ ಬೀಳುವಂಥಾ ತೂತುಗಳೂ, ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವೃಷಾದಿ ವ್ರಣಗಳೂ, ಬಚ್ಚೆ ಮೊದಲಾದ ಚರ್ಮರೋಗಗಳೂ ಇದರಿಂದ ಗುಣಹೊಂದುವವು. ರಕ್ತಶುದ್ಧಿಗೆ ಇದು ದಿವ್ಯ ಔಷಧವಾಗಿರುವದು.

ಈ ಔಷಧಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು. ಮುಲ್ಕಿ [illegible] ಮಂಗಳೂರು. ಕುಂದಾಪುರ [illegible]

[illegible]

BERNA WATCH COMPANY.

ಬರ್ನಾ ವಾಚು ಕಂಪೆನಿ

ಕೈಕ ಗಡಿಯಾರುಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿರುವುದು ಸೊರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಗ್ಗವಾದ ಬೆಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿ ಕೊಡುವವು

ನಮ್ಮ 'ಮಕ್ಸಿಮ್' ವಾಚನ್ನು ಬಳವಸೆಯಿಂದ ಕೊಂಡು ಕೊಳ್ಳಿರಿ

ನಿಕಲ್ ಕೇಸಿನಲ್ಲಿ ರೂ 10-0-0

ಬೆಳ್ಳಿ ಕೇಸಿನಲ್ಲಿ ರೂ 18-0-0

ನಮ್ಮ 'ಮ್ಯಾ.ಡಿ.ಪಿ' ನಿಕಲ್ ಕೇಸಿನಲ್ಲಿ ರೂ 17-0-0

ಬೆಳ್ಳಿ ಕೇಸಿನಲ್ಲಿ ರೂ 18-0-0.

ಕೆಟಲಾಗನ್ನು ಉಚಿತವಾಗಿ ಕಳುಹಿಸಿ ಕೊಡುವೆವು



ನಮ್ಮ 'ಚಾರ್ಟರ್' ನಿಕಲ್ ಕೇಸಿನಲ್ಲಿ ರೂ 12-0-0.

ಬೆಳ್ಳಿ ಕೇಸಿನಲ್ಲಿ ರೂ 20-0-0.

ನಮ್ಮ 'ವರ್ಡಲಿ.' ನಿಕಲ್ ಕೇಸಿನಲ್ಲಿ ರೂ. 15-0-0.

ಸಿಲ್ವರ್ ಕೇಸಿನಲ್ಲಿ ರೂ. 24-0-0.

ನಮ್ಮ 'ಬೆಸ್ಟ್' ನಿಕಲ್ ಕೇಸಿನಲ್ಲಿ ರೂ. 20-0-0.

ಬೆಳ್ಳಿ ಕೇಸಿನಲ್ಲಿ ರೂ. 32-0-0.

ಎಲ್ಲಾ ಗಡಿಯಾರುಗಳು ಜಂಟ್ ಸ್ಯಾಜಿನಲ್ಲಿರುವವು ವಾಚುಗಳನ್ನು 4 ಆಣೆ ಪೆಟ್ಟಿಗೆ ಖರ್ಚಿನಲ್ಲಿ ವಿ. ಪಿ ಮೂಲಕ ಕಳುಹಿಸುವೆವು ನಂಬ್ರ 59 ಎಸ್ಪ್ಲೆನೇಡ್ ರೋಡ್ ಮುಂಬಯಿ ಆಫೀಸಿನಲ್ಲಿಯೂ ಮತ್ತು ಹಿಂದೂಸ್ಥಾನದಲ್ಲಿರುವ ಎಲ್ಲಾ ವಾಚು ಮಾರಾಟವವರಲ್ಲಿಯೂ ಕ್ರಯಕ್ಕೆ ದೊರಕುವವು.

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು, ಇಂಗ್ಲೀಷ್ ಮತ್ತು ನೇಟಿವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು ಲಿಂಬು, ಕಿತ್ತಳೆ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟೀವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು ಬರದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಎಮ್. [illegible] ಅಂಡ್ ಸನ್ಸ್

[illegible]

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಳಾನಂದ ತೈಲವು** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ [illegible] ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ [illegible] ಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿ ೧ರೂ ೩ ಬಾಟ್ಲಿಗೆ [illegible]

೨ ಪ್ರಮೇಹರಿಪು ಬಿಂದು [illegible] ನ್ನೂ [illegible] ವನ್ನೂ ಕೂಡಲೇ [illegible] ಲ್ಲದೆ [illegible] ಶಿತವಾಗಿ ಗುಣ ಕೊಡುವ [illegible] ಬಾಟ್ಲಿಗೆ [illegible] ರೂ

೩. **ಕಾಮೇಶ್ವರ ಮಾತ್ರೆ** ಧಾತು ವರ್ಧಕವೂ ಉತ್ತೇಜಕವೂ [illegible] ಜಕವೂ **ನಪುಂಸಕತ್ವ** ನಾಶಕವೂ ಆಗಿದೆ. ಅರ್ಧ ತೊಲೆಗೆ [illegible] ರೂ

೪. **ಪಂಚಜೀರಕ ಪಾಕ** [illegible] ಪ್ರಸೂತಿ [illegible] ನ್ನೂ [illegible] ದೋಷ **ಗಳನ್ನೂ** ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲ್‌ಗೆ [illegible] ರೂ

೫ **ಸೂರಣಾವ ಲೇಹ** ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ **ಮೇಲೆ ಅತ್ಯುತ್ತಮವು**. ಪೌಷ್ಟಿಕವಾಗಿದೆ. ರಾತಲ್‌ಗೆ [illegible] ರೂ

೬ **ಪ್ಲೀಹೋದರಾರಿ ಚೂರ್ಣ** [illegible] ಇಲ್ಲದೆ **ದಾರುಣವಾದ** ಜ್ವರದ [illegible] ವಿಕಾರಗಳನ್ನೂ ಗುಣ **ಪಡಿಸುವದು.** ತಿಂಗಳ ಔಷಧಕ್ಕೆ [illegible] ರೂ [illegible] ಆಣೆ

೭. **ಜಗನ್ಮೋಹನ** ದಂತಮಂಜನ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತಿ ಮಂಜನದಷ್ಟೇ [illegible] ಸಾದ ಹಲ್ಲು ಪುಡಿ. ಅನೇಕ **ವನೌಷಧಗಳಿಂದ** ತಯಾರಿಸಿಯದೆ. ೧೦ ತೊಲೆಗೆ [illegible] ಆಣೆ

೮ ಸರಳಭೇದಿ **ಮಾತ್ರೆ** [illegible] **ತೊಲೆಗೆ** ೨ ರೂ

೯ **ಮಹಾಜ್ವರಾಂಕುಶ ಮಾತ್ರೆ** ಚಳಿಜ್ವರ, ವರಿಸೆಯ ಜ್ವರ **ಮುಂತಾಗಿ** ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. **ಅರ್ಧ ತೊಲೆಗೆ** ೨ ರೂ

೧೦ **ವಾಸಾವ ಲೇಹ** ಕೆಮ್ಮು, ಗುಲ್ಮಬ್ಬಸ, ಕಫ, **ಕ್ಷಯಗಳ ಮೇಲೆ** ರಾಮಬಾಣವು. ರಾತಲಿಗೆ ೨ ರೂ

೧೧ **ಶಾಲ್ಮಲೀ ಪಾಕ** ಸ್ವಪ್ನಾವಸ್ಥೆ, **ಮೂತ್ರದಲ್ಲಿ** ಧಾತುಪತನ, [illegible] ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು **ಹೋಗ** ಗೊಳಿಸಿ ರಕ್ತ, ಕಾಂತಿ, [illegible] ಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨ **ವಾತಮುರಾರಿ ಬಾಮ್** ತಲೆನೋವು, ಎದೆನೋವು, **ಸೊಂಟ** ನೋವು, ಉಳುಕು, [illegible], ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. **ಬಾಟ್ಲಿಗೆ** [illegible] ಆಣೆ ೩ ಬಾಟ್ಲಿಗೆ ೧ ರೂ [illegible] ಆಣೆ

೧೩ ಗಜಕರ್ಣ ಕೇಸರಿ **ಮುಲಾಮು** ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು [illegible] ಲೇಪನದೊಳಗಾಗಿ ಗೆಲ್ಲುವದು. **ಉರಿಯು** ಇಲ್ಲ. ಸುವಾಸಿಕವಾಗಿದೆ. ಕರಡಿಗೆ ೪ ಆಣೆ ೩ ಕರಡಿಗೆಗೆ ೧೧ ಆಣೆ

೧೪ ಸಪ್ವೀರಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ **ಚೂರ್ಣ** ಉನ್ಮಾದ, ಅಪಸ್ಮಾರ, ಉಗ್ಗುಮಾತು, [illegible] ಗಳನ್ನು [illegible] ಸ್ಮರಣ ಶಕ್ತಿಯನ್ನು ಬೆಳೆಯಿಸುವದು, [illegible] ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ **ಶಾಸ್ತ್ರೀಯ** ವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. **ರೋಗ** ಲಕ್ಷಣಗಳನ್ನು ಬರೆದು ಕಳುಹಿಸುವವರ **ರೋಗ** ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ — **B M Nathu & Co,**

Ayurvedic Chemists

Vepery Post, MADRAS.

ರೋಯಲ್ ಇಂಡಿಯನ್ ಬಾಮ್.

ವಾತ ನಿವಾರಣೆಯಲ್ಲಿ ಅಗ್ರಸ್ಥಾನ ಹೊಂದಿಯದೆ

[illegible] ಹಸ್ತಾಕ್ಷರ ಸಹಿತ [illegible] ನಾನು ಮನೋರಾ ಕಂಪೆನಿಯ ರೋಯಲ್ ಇಂಡಿಯನ್ ಬಾಮನ್ನು ವಾತದ ನೋವುಗಳ ಮೇಲೆ [illegible] ಯೋಗಿಸಿದ್ದೆ [illegible] ಅಮೂಲ್ಯವಾದ [illegible] ಲೂ ಶ್ರೇಷ್ಠವಾ [illegible]

ರೋಯಲ್ ಇಂಡಿಯನ್ ಬಾಮ್

ತಲೆನೋವು, ಸಂಧಿವಾತ [illegible] ಲೇಪನದಿಂದ [illegible] ವಾದದ್ದು.

ಇಂದು ಪ್ರಕಾಶ ಎಂಬ ಇಂಗ್ಲಿಷು ಪತ್ರ [illegible] ವದೇನಂದರೆ — ಮನೋರಾ ಕಂಪೆನಿಯವರ ರೋಯಲ್ ಇಂಡಿಯನ್ ಬಾಮ್ [illegible] ವಾತಕ್ಕೂ ಉಳುಕಿಗೂ ಬಹಳ ಉತ್ತಮವಾದದ್ದು. ಇದನ್ನು [illegible] ಚೇಳು ಕಡತದ ಮೇಲೂ ಸುಖಕರವಾಗಿ ಉಪಯೋಗಿಸಬಹುದು.

ರೋಯಲ್ ಇಂಡಿಯನ್ ಬಾಮ್

ಇದರಿಂದ ವಾತ, ಸಂಧಿವಾತ, ತಲೆನೋವು ಜಬಿಮು, ಘಾಯ ಉರಿ ಸೊಂಟದ **ನೋವು,** ಉಳುಕು ಮುಂತಾದ ಎಲ್ಲಾ ತರದ ನೋವುಗಳು ಖಾತ್ರಿಯಿಂದ ನಿಲ್ಲುವವು. **ಬಾಟ್ಲಿ** ಒಂದರ ಕಿಮ್ಮತು 0-8 0, 6 ಬಾಟ್ಲಿಗಳಿಗೆ 2-10 0, 12 ಬಾಟ್ಲಿಗಳಿಗೆ 5 0 0 **ಎಲ್ಲಾ ಔಷಧಾಲಯಗಳಲ್ಲಿ** ಮಾರಾಟಕ್ಕೆ ಸಿಕ್ಕುವದು.

ವಿಳಾಸ:—ಮನೋರಾ ಮತ್ತು ಕಂಪೆನಿ, ಗಿರಗಾಂ, ಮುಂಬಯಿ.

ಏಜಂಟರು, ಪರ್ಲ್ ಎಂಡ್ ಸನ್ಸ್ ಮಂಗಳೂರು

ಬೇಕಳ ವೆಂಕಟ ರಾವ್, ಉಡುಪಿ.

ರಾಮರಾವ್ ನಾನಾಬಾಯಿ ಕಾಳೆ ಇವರ,



ಸುರಂಗಿ ಅತ್ತರು

ಇದು ಸುರಂಗಿ ಹೂಗಳಿಂದಲೇ ತಯಾರಿಸಲ್ಪಟ್ಟ ಅತೀ ಸುವಾಸಿಕ ಮತ್ತು **ಮನೋ** ಹರವಾ [illegible] ಇಂಗ್ಲಿಷ ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು. ಇದರ ಸುವಾಸಿಕವಾದ ಮತ್ತು ಮನೋಹರವಾದ ಪರಿಮಳವು ಹೆಚ್ಚು ಸಮಯದ ವರೇಗೆ ಹೋಗುವದಿಲ್ಲ. ಈ ನಮ್ಮ ಅತ್ತರನ್ನು [illegible] ಜನರು ಹಾಗೆ ಒಂದು ಸಾರಿ **ಪರೀ** ಕಿಸಿ ನೋಡ [illegible] ಬಾಟ್ಲಿ ಒಂದರ ಕಿಮ್ಮತು ೧—೪—೦

ದಿಲ್ ಖುಷ್ ಮನಸ್ಸಿಗೆ ಉಲ್ಹಾಸವನ್ನುಂಟುಮಾಡುವ ಈ ಅತ್ತರನ್ನು ಒಂದು ಸಾರೆ ಹಚ್ಚಿ ನೋಡಿರಿ. ಇದಕ್ಕೆ ಮನೋಹರವಾದ ಪರಿಮಳವು ಬರುತ್ತದೆ. ಬಾಟ್ಲಿ ಒಂದರ ಕಿಮ್ಮತು ೧—೨—೦

ಜುಯಿ ಈ ಅತ್ತರಿನ ವಿಷಯವಾಗಿ ಹೆಂಗಸರೂ ಗಂಡಸರೂ ಬಹಳವಾಗಿ ಕೊಂಡಾಡುತ್ತಾರೆ. ಇದರ ಮನೋಹರವಾದ ಸುವಾಸನೆಯು ಹೆಚ್ಚು ದಿವಸಗಳ **ವರೇ** ಗೆ ಇರುತ್ತದೆ. ಬಾಟ್ಲಿ ಒಂದರ ಕಿಮ್ಮತು ೦—೧೪—೦

ನಾವು ತಯಾರಿಸುವ ಅತ್ತರುಗಳಲ್ಲಿ ಸ್ಪಿರಿಟ್ ವಗೈರೆ ಏನೂ ಇಲ್ಲದೆ **ತಾಜಾ** ಬಟ್ಟಿ ಇಟ್ಟು ತೆಗೆದದ್ದಾಗಿರುತ್ತದೆ.

ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು.

ಎಲ್ಲಾ ಮಾಹಿತಿಗೂ, ಅತ್ತರುಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕು ವದು

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕೆ

ಕೆ. ಗೋಪಾಲ ರಾವ್

[illegible]

ಪ್ರಕಟನೆಗಳು

1. ವ್ಯವಹಾರ ನಿರ್ಣಯ—ಪುಟಗಳು ೫೪೬ ಹಿಂದೂ ಮಹಮದೀ ಲಾಗಳು, ೨೯ ಕಾನೂನುಗಳು, ಇವುಗಳ ಸಂಗ್ರಹವೂ, ೯೩ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡ ಲಾ ಪುಸ್ತಕ ಕ್ರಯ ವಿ. ಪಿ. ಸೇರಿ ೧ ರೂಪಾಯಿ ೧೨ ಆಣೆ

2. ಕನ್ನಡ ಲಾ ರಿಪೋರ್ಟ್—ಮಾಸಪತ್ರಿಕೆ, ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗಬಿ ಕವಾಗುತ್ತವೆ ವರ ಷದ ಚಂದಾ ೧ ರೂಪಾಯಿ ಮುಂಗಡ ಯಾ ವಿ ಪಿ ಟಿಪಿಪತ್ರಿಕೆ ೧ಕ್ಕೆ ೨ ಆಣೆ

3. ಕನ್ನಡ ಲಾ ರಿಪೋರ್ಟುಗಳ 1ನೇ ಸಂಪುಟದ ಪುಸ್ತಕ ಕ್ರ ವಿ ಪಿ ಸೇರಿ 10 ಆಣೆ. ಇವುಗಳನ್ನು ಅಪೇಕ್ಷಿಸುವವರು ... ವ ಲಾ ... ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ ಈ ವಿಳಾಸಕ್ಕೆ ಬರೆಯುವುದು

THE HINDU SOAP MANUFACTURING CO.,
ಹಿಂದೂ ಸೋಪ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾಗಿದ್ದು ... ಕ್ರಯ ... ಕಡಿಮೆ ಪರಿಮಿತವಾದದ್ದು. ಮಾದರಿಗಳೂ, ವಿಶೇಷವಾಗಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು

ದಿ ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಏಜಂಟ್ಸ್

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರೆನೆಸ್ಸೆ, ಅರ್ಧಾಂಗವಾಯು, ವಾತ, ಸಂಧಿವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಗಾಯಗಳು, ಪಕ್ಷವಾತ, ಪಸ್ಸುನೋವು ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ದಬ್ಬಿ ೧ರ ಕ್ರಯ 0 8 0

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ ೨—೮—0

ಇನ್ನೂ ಅನೇಕ ಔಷಧಗಳು ಇರುವವರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ.

ವಿ. ಪಿ. ಖರ್ಚು ಪ್ರತ್ಯೇಕ — ಟಿ ಬಾಬುರಾಯರ

ಆಯುರ್ವೇದಿಕ್ ಔಷಧಾಲಯ,

ನೀರ್ ... ಮಾರ್ಕೆಟ್ ... ಮಂಗಳೂರು, ದ ಕ.

1888ನೇ ಇಸವಿಯಿಂದ ಈ ಬರೆಂ ... ನ್ನ ಸ್ಥಾಪಿಸಿದ ವ್ಯಾಪಾರ ಕ ಪು ಉತ್ತರ ವ ದಕ್ಷಿಣಕನ್ನಡದ ಎಲ್ಲಾ ಸ್ಥಾನ ... ದಲ್ಲಿ ಹೆಚ್ಚಿನ ಪರಿಚಿತಿಯುಳ್ಳದ್ದಾಗಿತ್ತದೆ. ಎಲ್ಲಾ ತರದ ಸಾಮಾನುಗಳನ್ನು ... ಮೂಲಕ ರವಾನಿಸುತ್ತೇವೆ ... ಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ... ಪತ್ರವ್ಯವಹಾರ ನಡೆಸಿದಲ್ಲಿ ಖಾತ್ರಿಯಾಗುತದೆ

ವಿಳಾಸ — ರಂಗಪ್ಪಾ ರಾಮಕೃಷ್ಣ ಕವಿ.

... ಬಸ್ತಿಗಲ್ಲಿ ... ಕು ಬಿ.

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,

... ದ. ಕ

ನಮ್ಮಲ್ಲಿ ಎಲ್ಲಾ ತರದ ... ವ ಕಾಫಿ, ಸ್ಪಿಕನರಿ, ಕಸ್ತೂರಿ, ಗ್ರಾಸರಿ, ಒಯಿಲಮೆನ ಸ್ಟೋರ್ ... ದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ... ಉಪಯೋಗವಾಗುವ ಸೈನೆಲು, ಎಲ್ಲಾ ಜಾತಿಯ ಕೊಡೆಗಳು ... ಬೆಲೆ ... ಕಮ್ಮಿ ಮುನಾಫೆಯಿಂದ ಮಾರುತ್ತೇವೆ ... ಸಾಮಾನಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

ಡಾಕ್ಟರ್ ವಾಮನ ಗೋಪಾಲರವರ

ಐಯೋಡೈಡ್‌ನಿಂದ ಕೂಡಿರುವ

ಸಾರ್ಸಾಪರಿಲ್ಲಾ.

ರಕ್ತಶುದ್ಧಿ ಬಗ್ಗೆ ಅತ್ಯುತ್ಕೃಷ್ಟವಾದ ಔಷಧಿಯು ... ಜನರು ಇದನ್ನು ಸೇವಿಸಿದ ಅನುಭವದಿಂದ ಅತ್ಯಂತ ಗುಣಕಾರಿ ... ಬಹುಕಾಲದ ವಾತ, ಚರ್ಮರೋಗಗಳು, ಗಂಡಮಾಲೆ, ಪಕ್ಷವಾತ, ಅಶುದ್ಧರಕ್ತದಿಂದ ಉಂಟಾಗುವ ಇತರ ರೋಗಗಳು, ... ಈ ಎಲ್ಲಾ ರೋಗಗಳಿಗೆ ಖಾತ್ರಿಯಾದ ಔಷಧಿಯೆಂದು ಕಳೆದ ಇಪ್ಪತ್ತು ವರುಷಗಳಿಂದ ಎಲ್ಲಾ ರಕ್ತಶುದ್ಧಿಯ ಔಷಧಿಗಳಲ್ಲಿ ಶ್ರೇಷ್ಠವಾದುದೆಂದು ಭೂಲೋಕದಲ್ಲೆಲ್ಲಾ ಕೀರ್ತಿಗೊಂಡಿರುವುದು. ಧಾತು ಪುಷ್ಟಿಗೆ ಉತ್ತಮವಾಗಿರುವದರಿಂದ ಇದರ ಪ್ರತಿನಿತ್ಯದ ಸೇವನೆಯು ... ಶಕ್ತಿಯನ್ನು ... ದೇಹಕ್ಕೆ ... ವನ್ನುಂಟುಮಾಡುತ್ತದೆ.

ಕ್ರಯ ಬಾಟ್ಲಿ ಒಂದಕ್ಕೆ ರೂ. ೧ ೮. ೪, ... ಟಪ್ಪಾಲು ಖರ್ಚು ೫ ಆಣೆ.

ಗಜಕರ್ಣದ ಮುಲಾಮು ೪ ಆಣೆ. ಟೂತ್ ಪೌಡರ್ ಆಣೆ ೨.

... ಮ್ಯಾನೇಜರ್, ಮಾಧವ್ ಬುಕ್ ಡಿಪೋ,

... ಬಾಕ್ಸ್‌ವಾಡಿ, ಮುಂಬಯಿ ...

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗರ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಘಾಳ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಮೈಸೂರು.

ಅಕ್ಸಿವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು.

ಟ್ರಸ್ಟೀ -- ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯುವರಿಗೂ ಕೇವಲ ... ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೆಗೆ ... ಮೊತ್ತಗಳಿಗೆ ಜೀವ ವಿಮೆ ಅತಿ ಕಮ್ಮಿಯಾದರೂ ಬದ್ಧವಾದ ವಿಮೆ ದರಗಳು ... ಬಹುದು.

ಇತರ ಯಾವ ಜೀವವಿಮೆ ಕಂಪೆನಿಗಳಿಗೆ ಉತ್ತರ ... ಮೊದಲು ನಮ್ಮ ದರಗಳ ನ್ನು ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ... ಸರಕಾರದ ... ಪತ್ರಗಳಲ್ಲಿ ಲೇವಡಿ ಯಾಗಿದ್ದವು

...

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ —ಪ್ರತ್ಯೇಕವಾದ ... ನಾನಾ ತರದ ದೃಷ್ಟಿ ಚಕ್ರಗಳನ್ನು ... ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಳ್ಳಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜಂಟ್ ಮಂಗಳೂರು, ದ ಕನ್ನಡ.

ಅತಿ ಉತ್ತಮವಾದ ಬೀಜಗಳು—ಗಿಡಗಳು ಹೂವು ವಗೈರೆ

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ... ತರಕಾರಿ ಬೀಜಗಳೂ, ಹೂವಿನ ಬೀಜಗಳೂ, ಬೇಲಿಗಳಿಗೂ ಮತ್ತು ... ನೆರಳಿಗೆ ಅನುಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ ಇವೂ ಅಲ್ಲದೆ ಉತ್ತಮವಾದ ಕಸಿ ಮಾಡಿದ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ, ಗುಲಾಬಿ ಗಿಡಗಳೂ, ಎಲೆ ಜಾತಿಯ ಗಿಡಗಳೂ, ವಗೈರೆ ಬಹಳ ಕಮ್ಮಿ ದರಗಳಿಗೆ ಬೇಕಾದಲ್ಲಿ ರವಾನಿಸಲ್ಪಡುವುವಲ್ಲದೆ ಕೆಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸುವೆವು ತರಕಾರೀ ... ಗಳು ಸದಾ ಕಳುಹಿಸಲ್ಪಡುವವು ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ... ತರಿಸಿಕೊಳ್ಳಬಹುದು

ದಿ ಎಲ್ ಬೈಯಣ್ಣ ಬ್ರದರ್ಸ್,

67 ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ

The Peoples Watch

UNEQUALLED FOR

CHEAPNESS ACCURACY

... ವಾರು ಕಾಲದಿಂದ ನಮ್ಮ ಗ್ರಾಹಕರು ... ಯಾರುಗಳನ್ನು ಕೇಳುವದರಿಂದ ಈ ... ಬೆಲೆಯಿಂದ ಕೆಲವು ವಾಚುಗಳನ್ನು ತರಿಸಿ ವಿಕರಿಗೆ ಇಟ್ಟಿದ್ದೇವೆ.



ಪೀಪಲ್ಸ್ ಓಪನ್‌ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಕೀಲೆಸ್ ಲಿವರ್ ಪಟಿಯಾದವು ಪರಪಣ ಪೆಟ್ಟಿಗೆ ಗ್ಲಾಸ್ ಸ್ಪಿಂಗ್ ಸಹಿತ ಕ್ರಯ 3—2—0 ಮೂರು ರೂಪಾಯಿ ಎರಡು ಆಣೆ ಈ ಗಡಿಯಾರಗಳು ಗುಣದಲ್ಲಿಯೂ ಕರೇದಿಯಲ್ಲಿಯೂ ಬಾಳಿಕೆಯಲ್ಲಿಯೂ ಮಜಬೂತಿನಲ್ಲಿಯೂ ಶ್ರೇಷ್ಠವಾದವೆಂದು ದೃಢವಾಗಿ ಹೇಳುತ್ತೇವೆ. ನಕಾಶಿ ಕೆಲಸಮಾಡಿದ ಸ್ವದೇಶಿ ಶರಟ್ ಬಟ್ನ್‌ಗಳು ಅನೇಕ ತರದ್ದು ಬಂದಿದೆ.

ವಿಳಾಸ.— ದಿ. ಊಲನ್ ಮಾರ್ಟ್,

ಆಸ್ಪತ್ರೆ ಎದುರಿಗೆ,

ಮಂಗಳೂರು.

SMALL-POX BALM.

ಸಿಡುಬು ರೋಗಕ್ಕೆ ಮುಲಾಮು.

ಅತ್ಯಲ್ಪ ಕಾಲದಲ್ಲಿಯೇ ಹಲವ ರಿಂದ ಉಪಯೋಗಿಸಲ್ಪಟ್ಟು ವಿಶೇಷ ಗುಣಕಾರಿ ಎಂದು ಹೆಸರ ಪಡೆದಿರು ವುದು.

ಸಿಡುಬು ರೋಗದ ಚಿಕಿತ್ಸೆ ಮಾಡು ಸುವ ವಿವಿಧ ವೈದ್ಯರಿಂದ ಖಾತ್ರಿಯಾದ ಔಷಧ ಎಂದು ಮನ್ನಿಸಲ್ಪಟ್ಟಿರುವದು.

ಮೈಲೆಯಲ್ಲಿ ಕೀವು ತುಂಬುತ್ತಿರುವಾಗ ಬರುವ ಜ್ವರವನ್ನು ಶಮನಿಸುವದು.

ಸಿಡುಬುರೋಗದ ಅಂಟುವ ಸ್ವಭಾವವು ಎಲ್ಲರಿಗೂ ತಿಳಿದಿರುವ ಪ್ರತ್ಯಕ್ಷಪ್ರಮಾಣ. ಸಿಡುಬು ಶರೀರದಲ್ಲೆಲ್ಲಾ ಕಾಣಿಸಿಕೊಂಡ ನಂತರ ಇದರ ಸೋಂಕು ಇನ್ನಷ್ಟು ಪ್ರಬಲವಾಗುವುದು. ರೋಗಿಗೆ ಒಂದು ಸ್ನಾನದ ನಂತರ ಕೀವು ತುಂಬಿರುವ ಮೈಲೆಯು ಒಣಗುತ್ತ ಬಂದು ಪೊರೆಪೊರೆಯುಳ್ಳದ್ದಾಗುವುದು. ಈ ಪೊರೆಗಳು ರೋಗಿಯು ಅತ್ತಿತ್ತ ಚಲಿಸುತ್ತಿರುವಾಗ್ಯೆ ಅಲ್ಲಲ್ಲಿ ಬಿದ್ದು ಗಾಳಿಯಿಂದ ಸರ್ವ ಕಡೆಗಳಲ್ಲಿಯೂ ಪ್ರಸರಿಸಲ್ಪಟ್ಟು ಪೊರೆಗಳಲ್ಲಿರುವ ರೋಗ ಅಣುಗಳಿಂದ ರೋಗದ ಸೋಂಕು ಸರ್ವತ್ರ ಹಬ್ಬುವುದು

ಮೈಲೆಯ ದುರ್ವಾಸನೆಯನ್ನು ಹೋಗಗೊಳಿಸಿ, ಚರ್ಮದ ಕಲೆಗಳು ವಿಕಾರ ಹೊಂದದಂತೆ ಮಾಡಿ, ಖಜ್ಜಿಯಿಂದ ಶರೀರದಲ್ಲಿ ಉಂಟಾಗುವ ತುರಿಸುವಿಕೆಯನ್ನು ನಿಲ್ಲಿಸಿ ರೋಗಜನಿತವಾದ ಹುಣ್ಣುಗಳು ಯಾವರೀತಿಯಲ್ಲಿಯಾದರೂ ವಿಶೇಷ ಪರಿಣಾಮವು ಹೊಂದದಂತೆ ಈ ಮುಲಾಮಿನ ಲೇಪನದಿಂದ ಸಾಧ್ಯವಾಗುವುದು. ರೋಗದ ಸೋಂಕನ್ನು ಸಹಾ ಇದರ ಲೇಪನವು ತಡೆಕಟ್ಟುವುದರಿಂದ ರೋಗ ತಗಲಿದ ಸರ್ವರೂ ಇದನ್ನು ಪರೀಕ್ಷಾರ್ಥ ಉಪಯೋಗಿಸಬಹುದು.

ಹೋಮಿಯೋಪತಿಕ್, ಟಿಸ್ಯುರೆಮಿಡಿಸ್, ಆಯುರ್ವೇದಿಕ್ ಅಥವಾ ಎಲೋಪತಿಕ್ ಈ ಎಲ್ಲಾ ವಿಧಾನಗಳಿಂದ ಚಿಕಿತ್ಸೆ ಹೊಂದುವ ರೋಗಿಗಳಿಗೆ ಈ ಮುಲಾಮಿನ ಲೇಪನವು ಏಕ ರೀತಿಯಲ್ಲಿ ಗುಣಕಾರಿಯಾಗಿರುವುದರಿಂದ ಎಂಥಾ ಚಿಕಿತ್ಸೆಯಲ್ಲಿಯಾದರೂ ಇದರ ಲೇಪನವು ಆಕ್ಷೇಪಕರವಲ್ಲ

ಮುಲಾಮನ್ನು ರೋಗತಗಲಿದ ೬ನೇ ದಿನದಿಂದ ಹಚ್ಚಲು ಪ್ರಾರಂಭಿಸಬಹುದು, ಹಚ್ಚುವ ಕ್ರಮ ಮುಂತಾದವುಗಳು ಕರಡಿಗೆಯ ಲೇಬಲಿನಲ್ಲಿರುವವು.

ಸರ್ವರಿಗೂ ಇದನ್ನು ಕ್ರಯಕ್ಕೆ ಪಡಕೊಳ್ಳುವರೆ ಸಾಧ್ಯವಾಗುವಂತೆ ಮುಲಾಮಿಗೆ ಹೆಚ್ಚು ಕ್ರಯದ ಔಷಧಿಗಳು ಬಿದ್ದಿದ್ದರೂ ಕ್ರಯವನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆಯಾಗಿಟ್ಟಿರುವೆವು.

ಕ್ರಯ ಡಬ್ಬಿ ಒಂದಕ್ಕೆ ಸಣ್ಣ ಸೈಜು ೫ ಆಣೆ. ದೊಡ್ಡದು ೮ ಆಣೆ.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ (ಮಂಗಳೂರು ವ್ಯಾಪಾರ ಸಂಘ.)

ರಥಬೀದಿ, ಮಂಗಳೂರು ಇವರಲ್ಲಿ ದೊರಿಯುವುದು.

ಲೆಕ್ಕದ ಪುಸ್ತಕಗಳನ್ನು ತರಿಸಕೊಳ್ಳುವಾಗ ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು

ಸ್ಟಿಫ್ ಕವರ್	ಹಾಫ್ ಬೈಂಡ್	ಫುಲ್ ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ,	(ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜವಾ ಬಿರ್ಜಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು

3 × 8¼ 3′ × 5¼′, 8¼″ × 6 6″ × 4 ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೆಗೆ ಬಾಳಿಕೆಯ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸೈಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ ಮನೇಜರ್,

ಶಾರದಾ ಮುದ್ರಾಲಯ, ಮಂಗಳೂರು.

ಶಾರದಾ ಛಾಪಖಾನೆ

ಕೋರ್ಟ ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸೈಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬೈಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ಷಿಕೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರೆಯುವ ವಿಳಾಸ:— ಮ್ಯಾನೇಜರ್,

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು.

Printed by V. S. Kamath, at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವು ಪ್ರಕಟಿಸಲ್ಪಡುವುದು.

ಚಂದಾ ನಿರ್ಣಯ ವರ್ಷ ಒಂದಕ್ಕೆ ರೂ 1 4 0 ಟಪ್ಪಾಲು ಹಾಸಲು ಸೇರಿ ರೂ 2 1 0

ಪುಸ್ತಕ 4 — ಮಂಗಳೂರು ತಾರೀಖು 10ನೇ ಶುಕ್ರವಾರ ಜೂನ 1910 — ಸಂಚಿಕೆ 23

Amrutanjan Depot Fort Bombay.

ಅಮೃತಾಂಜನ ಗಜಕರ್ಣದ ಮುಲಾಮು.

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಔಷಧ ಮುಲಾಮು ವು ... ವಾತ, ಸಂಧಿವಾತ, ತಲೆನೋವು ಶಿರಃಶೂಲೆ ... ಗ ವಾಯು, ಸೊಂಟನೋವು ... ಟ್ಟ ನೋವು ... , ... ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು ... ಸಣ್ಣ ಮಕ್ಕಳಿಗೆ ... ಯಾವ ದೋಷವೂ ಇಲ್ಲದೆ ... ವಿರಹಿತವಾಗಿ ... ಈ ಅಮೃತಾಂಜನವು ... ಸಿಕ್ಕಿರುತ್ತದೆ. ಅಮೃತಾಂಜನವು ಎಲ್ಲಾ ಊರ ... ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು. ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ

ಕಿಮ್ಮತ್ತು ಆರು ಆಣೆ ಈ ನಮೂನೆ ಡಬ್ಬಿ



ಕಿಮ್ಮತ್ತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು

ಇದನ್ನು ... ಹಚ್ಚಿದರೆ ... ನಾಶವಾಗಿ ಹೋಗುವದು. ಇದರಿಂದ ಉರಿಯ ... ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರೆ ಪರೀಕ್ಷಿಸಿನೋಡಿರಿ. ... ಡಬ್ಬಿ ಒಂದರ ಕಿಮ್ಮತ್ತು 6 ಆಣೆ 12 ಡಬ್ಬಿ ರೂ 4

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರೆ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿಯುವದು. ಡಬ್ಬಿ ಒಂದರ ಕಿಮ್ಮತ್ತು 3 ಆಣೆ

ಕೇಶವರ್ಧಿನಿ ತೈಲ

ಇದನ್ನು ... ಕಪ್ಪು ... ಯೂ ಶುದ್ಧವಾಗಿ ... ಇದಕ್ಕೆ ಮನೋಹರವಾದ ವಾಸನೆ ... ಮಳವು ಸಹ ... ಬಾಟ್ಲಿ ಒಂದರ ಕಿಮ್ಮತ್ತು ರೂ 1

ಬಿಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತ್ತು 3 ಆಣೆ

ಸಾರ್ಸಾಪರಿಲ್ಲಾ

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನದೋಷ ... ಆಗುವದು ನಿಲ್ಲಿಸುತ್ತದೆ. ನಿಪ್ಪುಣವಂತರಿಗೆ ಶಕ್ತಿ ... ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ... ಇದರಲ್ಲಿ ... ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. 30 ಗುಳಿಗೆಗಳ ಡಬ್ಬಿ ಒಂದರ ಕಿಮ್ಮತ್ತು ರೂ 1

ಸುಗಂಧ ತೈಲ

ಇದನ್ನು ... ಮುಖದ ಮೇಲಿನ ಮೊಡವೆಗಳೂ ಕಪ್ಪು ಕಲೆಗಳು ಹೋಗಿ ... ಮನೋಹರವಾದ ಕಾಂತಿಯು ಬರುವದು. ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ

ಬಿಂದಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ

ವಿಳಾಸ: — ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ.

~~ಟೆಲಿಗ್ರಾಫ್ ವಿಳಾಸ: — "ಅಮೃತಾಂಜನ", ಮುಂಬಯಿ.~~

ಸುಗಂಧ ದ್ರವ್ಯಗಳು.

ನಮ್ಮ ಸ್ವಂತ ಪರವಾಯಿಷಿಯಾಗಿ ತಯಾರು ಮಾಡಿ ಬಿಕರಿಗೆ ಸಿದ್ಧವಾಗಿರುವ ಸುಗಂಧ ದ್ರವ್ಯಗಳು.

ತರಹೇವಾರಿ ಊದುಬತ್ತಿ 24 ರೂ ತೂಕದ ಶೇರು 1ಕ್ಕೆ

	ರೂ ಆ ಪೈ.	ರೂ ಆ ಪೈ
1 ಖಾಸಾ ಅಂಬರ್ ಬತ್ತಿ	6—0—0	5—0—0
2 ಕೇಸರಿ ಬತ್ತಿ	4—0—0	3—8—0
3 ಜವ್ವಾಜಿ ಕಸ್ತೂರಿ ಬತ್ತಿ	3—0—0	2—8—0
4 ಪುನಗು ಬತ್ತಿ	1—8—0	1—0—0
5 ಪನ್ನೀರು ಬತ್ತಿ	0—10—0	0—8—0
6 ಉತ್ತಮವಾದ ದಶಾಂಗ	0—12—0	

ಗಂಧದ ಬಿಲ್ಲೆಗಳು

	1 ತೊಲೆ	½ ತೊಲೆ	¼ ತೊಲೆ
1 ಪುದುಕೋಟೆ ಬಿಲ್ಲೆ	3-0-0	1-8-0	0-12-0
2 ಕಸ್ತೂರಿ ಬಿಲ್ಲೆಗಳು	1-8-0	0-12-0	0-6-0
3 { 1 ಕೇಸರಿ ಬಿಲ್ಲೆ	0-8-0	0-4-0	0-2-0
2 ಡಿಟ್ಟೊ	0-4-0	0-2-0	0-1-0

ಕಾಲು ತೊಲೆ ತೂಕ ಉ[illegible] ಕೇಸರಿ ಬಿಲ್ಲೆ 100ಕ್ಕೆ 1[illegible] 5ರೂ

4 ಅವಲ್ ಹಸೀ ಬಿಲೆ	0-8-0	0-4-0	0-2-0
ಎರಡನೇ ರಖಂ	0-4-0	0-2-0	0-1-0

ಕಾಲು ತೊಲೆ ತೂಕ ಉ[illegible] ಹಸೀ ಬಿಲ್ಲೆ 100ಕ್ಕೆ ೩ರೂ [illegible]

5 ಅರಗಜ ಅಥವಾ ಜವ್ವಾ[illegible] ಗಂಧ ತೈ[illegible] 1ಕ್ಕೆ 1-0-0

ಪರಸ್ಥಳದವರಿಗೆ [illegible] ಮತ್ತು [illegible] ಲಾಯಿದಾ ಬೀಳುತ್ತೆ. ಮೇಲ್ಕಂಡ ಸಾಮಾನುಗಳನ್ನು [illegible] ಪ್ರೋತ್ಸಾಹಿಸುವಿರೆಂದು ಕೋರುತ್ತೇನೆ

ಯಂ ನರಸಿಹ್ಮ ಶಾಸ್ತ್ರಿ, ಸುಗಂಧಕಾರಿ,
[illegible] ಬೆಂಗಳೂರು ಸಿಟಿ

ಮುಖತ್ತು ಒಂದನೇ ನಮೂನೆ ಕ್ಯಾಲಿಕೊ ಮುಖತ್ತು

ಕಾನಪೂರ್ ಜಮನ್ ಜಮಖಾನೆಗಳು.

ಸೈಜು 40×40, ಪಳದಿ, [illegible] ನೀಲಿ, ಹಸುರು, ಕರೀದು, ಕೇಸರಿ, ಬಿಳಿಪು, ಚೆಕ್ಸ್ ಮತ್ತು ಇತರ ರಂಗುಗಳಲ್ಲಿ ನೂ 1ಕ್ಕೆ ರೂ 1—4—0.
ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಹೆಚ್ಚು 0—4—0

ಕಹ[illegible]ಗಳು.

ಉದ್ದ 6 ಮೊ[illegible] ಅಗಲ [illegible] ಮೊಳ [illegible] ರಂಗುಗಳಲ್ಲಿಯೂ 1ನೇ ನಂಬರು 1ಕ್ಕೆ ರೂ 1 4-0. 2ನೇ ನಂಬರು ರೂ 1—12—0 3ನೇ ನಂಬರು 3—8—0

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಹೆಚ್ಚು 0 4—0

ನಾಜೂಕು ಒಳ್ಳೇ ಕಲಾವತ್ತು "ಜರಿ"

[illegible] ಅಂಚು,

1ನೇ ನಂಬರು 0—1[illegible]—[illegible] 1—4—0.
2ನೇ ನಂಬರು 0—14—0, 1—8 0 [illegible]—4—0.

ರೇಷ್ಮೆ ನಮೂನೆಗಳು.

ಕೆಂಪು, ನೀಲಿ, [illegible] ಹಸರು, ಮೊದಲಾದ ರಂಗುಗಳಲ್ಲಿ, ಸೈಜು ಉದ್ದ 5-6 ಮೊಳ, ಅಗಲ [illegible] ಇಂಚು, 1ಕ್ಕೆ ರೂ 1 4-0, 1 8 0, 2 4 0, 2-8-0, 3 0-0

ಜಿತಾ[illegible] 3 0-0, 4 0 0 5 0-0, 6 0 0

ಡಿಟ್ಟೊ ಗಜ 1ಕ್ಕೆ 1 8-0

ರೇಷ್ಮೆ ಅಂಚುಗಳು ಗಜ 1ಕ್ಕೆ ಆಣೆ 2 3 4, 5

ಮಕ್‌ಮಲ್ ಅಂಚು ಗಜ 1ಕ್ಕೆ ಆಣೆ 4, 5, 6

ದೇವರುಗಳಿಗೆ ಉಪಯೋಗಿಸುವ ರೇಷ್ಮೆ [illegible] ಕೆಂಪು, ನೀಲಿ, ಹಸರು ರಂಗುಗಳಲ್ಲಿ ಗಜ 1ಕ್ಕೆ ರೂ 1-6 0, 2 8 0, 3 0 0

ದಾರದ ಬನೀನುಗಳು 1ಕ್ಕೆ ಆಣೆ 4, 5 6, 7, 8

ಉಲನ್ ಬನೀನುಗಳು 1ಕ್ಕೆ ರೂ 2 4 0, 2 8 0 3-0-0, 3-8-0.

ಫಿಲ್ಟ್ ಕ್ಯಾಪ್‌ಗಳೂ ಕ್ರಿಸ್ಟಿಸ್ 1ಕ್ಕೆ ರೂ 1 12 , 2 4 0, 2 8-0 2-12-0

ಇಟಲಿ ಕ್ಯಾಪ್‌ಗಳು 1ಕ್ಕೆ ರೂ 0 12 0 1 [illegible], 1 4 0, 1-8-0.

ಹಾಸನದ ಟೋಪಿಗಳು ಡಜನ್ 1ಕ್ಕೆ ರೂ 4-0 0 4 4-0, 4 8-0, 5-8-0, 6-0 0, 7 0 0 8 0-0, [illegible]-0, 10 0 0, 12-0-0,

ಪೇಟ ಕಟ್ಟುವ ತರಹೇವಾರಿ ರಂಗುಗಳ [illegible] 1ಕ್ಕೆ 0-6-0, 0-8-0, 0-10-0, 0-12-0

ಕುಪ್ಪಸಕ್ಕೆ ಮತ್ತು ಪರಕಾರಕ್ಕೆ ಉಪಯೋಗಿಸುವ ಛೀಟುಗಳು ಗಜ 1ಕ್ಕೆ ಆಣೆ 6, 8, 10, 12.

ಕೇಶರಂಜನ ತೈಲ ಬಾಟ್ಲು	1ಕ್ಕೆ ರೂ	0—11—0.
ಕುಂತಳ ಕೌಮುದಿ ತೈಲ ,,	,,	0—12—0.
ಕಮೋನಿಯಾ ಓಯಿಲ್ ,,	,,	1—0—0.
ಭೃಂಗಾಮಲಕ ತೈಲ ಸೀಸೆ ,,	,,	0—4—0, 0-8-0, 1-0-0
ಕಸ್ತೂರಿ ಮಾತ್ರೆ ಸೀಸೆ	,,	0—4—0.

ಎಲ್, ಎ. ಶೋರುವಾಲ್
[illegible] ಬೆಂಗಳೂರು ಸಿಟಿ.

ಜಾತಕ ಫಲಚಿಂತಾಮಣಿ

ಎಂಬೀ ಪುಸ್ತಕವು ಕರ್ಣಾಟಕ ದೇಶೀಯರೆಲ್ಲರ ಉಪಯೋಗಕ್ಕಾಗಿ [illegible] ತಾತ್ಪರ್ಯ ಸಹಿತವಾಗಿ ಬರೆಯಿಸಿ ಬಿಕರಿಗೆ ಸಿದ್ಧವಾಗಿದೆ. ಕ್ರಯ 0—12—0. ಹಾಸಲು ಚಾರ್ಜು 0—3—0. 3 ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ [illegible]ತ್ಕಾರವಾದ ಮಹಾಲಕ್ಷ್ಮಿ ಎಂಬ ಕಥೆ ಇನಾಮಾಗಿ ದೊರೆಯುತ್ತೆ.

ಹೆಚ್ ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು ಸಿಟಿ.

"ವಿದ್ಯಾನಂದ" ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ಶಾಲಾಗಿಯೋ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ತಾತ್ಪರ್ಯ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ಗ ಪ್ರಿಂಟಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

ಹೇಕ್ಕು ಪಾಠಗಳೊಂದಿಗೆ ಪ್ರತಿ ಪದ ಅರ್ಥ, ಅನುವಾದ, ತಾತ್ಪರ್ಯ ಸಹಾ [illegible]ರುತ್ತದೆ ಬೆಲೆ 0—4—0

ವಿಳಾಸ: ಮ್ಯಾನೇಜರ್,
ವಿದ್ಯಾನಂದ ಆಫೀಸು,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು

ಮೈಮೆನ್‌ಸಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಿದ್ದಾರೆ

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು ಇದರಲ್ಲಿ ಆಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರೆಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೇನ್, ಎಲ್. ಎಮ್. ಎಸ್.
216 ಕಾರನ್‌ವಾಲಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ —"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. ಶೋರುವಾಲ್ ಎಂಡ್ ಕೋ,
ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು:—ಮೆ॥ ರಾ॥ ರಾ॥ ಸಿ. ಆರ್. [illegible]
[illegible]

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 10ನೇ ಜೂನ್ 1910

ಹಿಂದೂ ಸಮಾಜ ರಚನಾ ಉದ್ದಿಷ್ಟವು

ಪ್ರತಿ ಒಂದು ಸಮಾಜದ ಕಟ್ಟುಕಟ್ಟಳೆಗಳು ನಮ್ಮ ಇಚ್ಛೆಗಳಂತೆ ಮನಸ್ಸು ಬಂದ್ಹಾಗೆ ಬದಲಾಯಿಸಲಾಗುವಷ್ಟು ಸುಲಭವೂ ಅಲ್ಲ ಅಲ್ಪವೂ ಅಲ್ಲ. ಅವುಗಳ ಮೂಲಕ ಒಂದು ಜನಾಂಗದ ಅಂತರಾತ್ಮವನ್ನು ನಾವು ಅರಿತುಕೊಳ್ಳಬಹುದು. ಪೂರ್ವ ಕಾಲದಲ್ಲಿ ಗ್ರೀಸ್‍ದೇಶದ ಸ್ಪಾರ್ಟಾ ಎಂಬ ರಾಜ್ಯದ ಜನರು ಬಹು ಯುದ್ಧಪ್ರಿಯರಾಗಿದ್ದರು. ಅಗ್ರಗಣ್ಯರೋದ್ಧರೆಂದು ಖ್ಯಾತಿಯನ್ನು ಉಳಿಸಿಕೊಳ್ಳಲಿಕ್ಕೆ ತಕ್ಕಂತೆ ಇವರು ತಮ್ಮ ಕಟ್ಟುಕಟ್ಟಳೆಗಳನ್ನು ನಿರ್ಮಿಸಿದರು. ಅವರಲ್ಲಿ ದೃಢಕಾಯರಾದ ಮಕ್ಕಳನ್ನು ಮಾತ್ರವೇ ಜೀವಿಸಬಿಡುತ್ತಿದ್ದರು. ಧನುರ್ವಿದ್ಯೆಯನ್ನು ಕಲಿಯಲೋಸುಗ ಮಕ್ಕಳನ್ನು ಚಿಕ್ಕ ಪ್ರಾಯದಲ್ಲೇ ರಾಜ್ಯಕ್ಕೆ ಒಪ್ಪಿಸಿಕೊಡುತ್ತಿದ್ದರು. ವಿಷಯ ಸುಖದಿಂದ ಶೌರ್ಯ ಕೆಡದಂತೆ ಎಲ್ಲರಿಗೂ ಸಂಗಾತ ಒಂದೇ ಬಗೆಯ ಊಟ ಬಡಿಸುವ ಕಟ್ಟಳೆ ಇತ್ತು. ಜನರು ದ್ರವ್ಯಾರ್ಜನೆಯಿಂದ ಭೋಗಾಸಕ್ತರಾಗದ ಹಾಗೆ ಅವರಿಗೆ ಹಣ ಕೂಡಿ ಸಬಾರದೆಂಬ ಆಜ್ಞೆ ಇತ್ತು. ಹೀಗೆಯೇ ಆಯಾ ಸಮಾಜ ರಚನೆಯಲ್ಲಿ ಬೇರೆ ಬೇರೆ ಉದ್ದಿಶ್ಯಗಳು ತೋರಿಬರುವುದು.

ಹೀಗಿರುತ್ತಾ ಸಮಾಜದ ಉದ್ದಿಶ್ಯಕ್ಕೆ ತಕ್ಕಂತೆ ಅದರ ಆಯುಷ್ಯವಿರುವದು. ಯುದ್ಧವೇ ಲೋಕದ ಸಹಜಾವಸ್ಥೆಯೆಂದು ಹೇಳಲಾಗದು. ಆದ್ದರಿಂದ ಕಾಲಬದಲಿಸಿ ಯುದ್ಧದ ಅವಶ್ಯತೆಯು ತೀರಿದರೆ ಸ್ಪಾರ್ಟನರ ಸಮಾಜ ಘಟವು ಪುಡಿಯಾಗುವದೇ ಸ್ವತಸ್ಸಿದ್ಧ. ವಸ್ತುತಃ ಅದು ಕ್ರಮೇಣ ಹಾಗೆಯೇ ಆಯಿತು. ಹೀಗೆಯೇ ಇನ್ನೂ ಅನೇಕ ಪೂರ್ವಿಕ ಸಮಾಜಗಳು ಅವರ್ಣ ಉದ್ದಿಶ್ಯದ ಬೇರು ಬಿದ್ದೊಡನೆ ನಾಶವಾದವು. ಆದರೆ ಹಿಂದು ಸಮಾಜವು ಇಂದಿಗೆ 5000 ವರುಷಗಳಿಂದ ಅನೇಕ ಅವಾಂತರಗಳನ್ನು ಅನುಭವಿಸಿದರೂ ಬಾಳಿದೆ. ಇದರ ಮರ್ಮವೇನು? ಎಂದೆಂದಿಗೂ ಅಮೂಲ್ಯವಾದ ಮತ್ತು ಮನುಷ್ಯನ ಪ್ರಕೃತಿಯನ್ನೇ ಅವರಿಸಿರುವ ಉದ್ದಿಶ್ಯವನ್ನೇ ಅಸ್ತಿವಾರವಾಗಿಟ್ಟು ಅದರ ಮೇಲೆ ಹಿಂದೂ ಜನಾಂಗ ಭವನವನ್ನು ಕಟ್ಟಿರುವದೇ ಇದರ ಮರ್ಮವಾಗಿದೆ.

ಈ ತತ್ವವನ್ನು ವಿವರಿಸಬೇಕಾಗಿದೆ. ಮನುಷ್ಯನು ಸಮಾಜಿಕ ಪಶುವೆಂದು ಒಬ್ಬ ಪಾಶ್ಚಾತ್ಯ ಶಾಸ್ತ್ರಜ್ಞನು ಹೇಳಿರುವನು. ಅಂದರೆ ಕುರಿ ಆನೆ ಮುಂತಾದ ಪಶುಗಳಂತೆ ಅವನು ತನ್ನವರ ಹಿಂಡಿನಲ್ಲಿ ಜೀವಿಸುವ ಸ್ವಭಾವದವನು. ಅವನ ಸಾಮಾಜಿಕ ಜೀವನವು ಸ್ವಾಭಾವಿಕ ನಿಯಮಕ್ಕನುಸಾರವಾಗಿದೆ. ಇಂಥ ಸಾಮಾಜಿಕ ಆಕರ್ಷಣೆಯೊಂದಿಗೆ ಮನುಷ್ಯನಲ್ಲಿ ವ್ಯಕ್ತಿತ್ವವು ಇದೆ. ಅಂದರೆ ಅವನಿಗೆ ಸ್ವತಂತ್ರ ಉದ್ದೇಶವು ಇದೆ. ಮಾನುಷ ಪ್ರಕೃತಿಯ ಈ ಎರಡು ಅಂಶಗಳಿಂದ ನಾವು ನಿರ್ಧರಿಸತಕ್ಕ ವಿಷಯವೇನಂದರೆ—ಮನುಷ್ಯನು ತನ್ನ ಸ್ವಂತ ಆಶಯವನ್ನು ಸಮಾಜದಲ್ಲಿ ಕೃತಕಾರ್ಯಪಡಿಸಬೇಕು. ಆದ್ದರಿಂದ ಪ್ರತಿಯೊಬ್ಬನಿಗೆ ತನ್ನ ಪುರುಷಾರ್ಥವನ್ನು ಸಾಧಿಸಲನುಕೂಲವಾಗುವದೇ ಸಮಾಜದ ಕರ್ತವ್ಯ. ಮನುಷ್ಯನ ಪಾರಮಾರ್ಥಿಕ ಉತ್ಕರ್ಷವೇ ಅವನ ಸಮವ್ಯವಹಾರದ ಅಂತಿಮಹೇತುವೆಂದೂ ಅದೇ ಅವನ ಅತ್ಯುತ್ತಮ ಉದ್ದಿಶ್ಯವೆಂದೂ ಎಲ್ಲವೂ ಈ ಉದ್ದಿಶ್ಯಕ್ಕೆ ಅನುಕೂಲವಾಗುವದೇ ಸಮಾಜದ ಸ್ವಾಭಾವಿಕ ಮತ್ತು ಅಮೂಲ್ಯವಾದ ಉದ್ದಿಶ್ಯ. ಇದನ್ನು ಬಿಟ್ಟರೆ ಐಹಿಕ ವಿಷಯಗಳನ್ನು ಹಿಂಬಾಲಿಸಿದ ಸಮಾಜಗಳ ಆಯುಷ್ಯ ಆ ವಿಷಯಗಳಂತೆಯೇ ಮಿತವಾಗಿರುವುದು.

ಹಿಂದೂ ಸಮಾಜಕರ್ತರು, ಮನ್ವಾದಿ ಮಹರ್ಷಿಗಳು ಈ ಜೀವನವು ಪರಲೋಕಕ್ಕೆ ಸೋಪಾನವೆಂದರಿತು ಅದರಂತೆ ಸಮಾಜವನ್ನು ಕ್ರಮಪಡಿಸಿ ಶಾಸನಗಳನ್ನು ರಚಿಸಿದರು. ಧರ್ಮವೆಂಬ ಅಸ್ತಿವಾರದ ಮೇಲೆ ಸಮಾಜವನ್ನು ಕಟ್ಟಿದರು. ಅತಿ ಪುರಾತನವಾದ ಈ ಭವನವು ಅಲ್ಲಲ್ಲಿ ಜೀರ್ಣವಾಗಿರುವದಾದರೂ ಆ ಅಸ್ತಿವಾರವು ಇನ್ನೂ ಬಲವಾಗಿದೆ. ಪೂರ್ವಿಕರ ಉದ್ದಿಶ್ಯವು ನಮ್ಮ ಸಾಮಾಜಿಕ ಕಟ್ಟುಕಟ್ಟಳೆಗಳಲ್ಲಿ ಇನ್ನೂ ತೋರುವದು. ಅವರು ವರ್ಣಭೇದಗಳನ್ನು ಐಹಿಕಧನವನ್ನನುಸರಿಸಿ ಮಾಡಲಿಲ್ಲ, [illegible] ಜ್ಞಾನವನ್ನು ಒರೆಕಲ್ಲಾಗಿಟ್ಟು ವಿಧಿಸಿದರು. ಇದರಿಂದಲೇ ಇತರ ದ್ವಿಜರ [illegible] ಜೀವನವನ್ನು ಹೊರೆಯುವ ಬಡ ಬ್ರಾಹ್ಮಣರಿಗೆ ಅಗ್ರಸ್ಥಾನ ದೊರಕಿತು. [illegible] ಬ್ರಾಹ್ಮಣನು ಮನುಷ್ಯನು ಹುಟ್ಟಿದಂದಿನಿಂದ ಸಾಯುವ [illegible]

[illegible] ವದು. ಅವನು ಶಾಲೆಗೆ ಹೋಗಬೇಕಾದರೆ [illegible] ಮೊದಲು ಕಲಿಯುವ ಬರಹ "ಶ್ರೀ ಗಣಾಧಿಪತಯೇನಮಃ" ವಾಗಿತ್ತು. ಬ್ರಹ್ಮಚರ್ಯ ಗಾರ್ಹಸ್ತ ಮೊದಲಾದ ಆಶ್ರಮಗಳ ಉದ್ದಿಶ್ಯವು ಅವನನ್ನು ಸನ್ಯಾಸಕ್ಕೆ ಸಿದ್ಧಪಡಿಸುವದಾಗಿತ್ತು. ವಿನೋದಾರ್ಥಮಾಡಿದ ಉತ್ಸವಗಳು ಸಹಾ ದೇವಾಲಯಗಳಲ್ಲಿ ಅಂದರೆ ಈಶ್ವರನ ಚರಣದ ಬುಡದಲ್ಲಿ ಆಗಿದ್ದವು. ಇಂಥಿಂಥಾ ಕೆಲಸ ಮಾಡಿದರೆ ಇಂತಿಷ್ಟು ಹಣ ದೊರಕುವದೆಂದಾಗಲಿ ಇಂತಹ ಸುಖ ಲಭಿಸುವದೆಂದಾಗಲಿ ಕಲಿಸದೆ ಇಂತಿಷ್ಟು ಪುಣ್ಯ ಸಿಕ್ಕುವದೆಂದು ಹೇಳಿದರು. ಆರೋಗ್ಯಶಾಸ್ತ್ರವು ಅವರೊಡನೆ ಆಯುರ್ವೇದವಾಯಿತು. ಎಲ್ಲಾ ವ್ಯವಹಾರವನ್ನು ಪಾರಮಾರ್ಥಿಕ ದೃಷ್ಟಿಯಿಂದ ಕಾಣುತ್ತಿದ್ದರೆಂಬದಕ್ಕೆ ಹೆಚ್ಚಿನ ದೃಷ್ಟಾಂತಗಳು ಅವಶ್ಯವಿಲ್ಲ.

ಈ ಪ್ರಾಚೀನ ಸಮಾಜವು ಪಾಶ್ಚಾತ್ಯ ಸಮಾಜ ರಚನೆಯೊಡನೆ ಹೋರಾಡಬೇಕಾಗಿ ಬಂದದೆ. ಆ ಸಮಾಜದ ಅಸ್ತಿವಾರವು ಬೇರೆ. ಪಾಶ್ಚಾತ್ಯರು ಲೌಕಿಕರು; ಲೌಕಿಕರಂತೆ ಜೀವನವನ್ನು ಸುಖಸಾಗರವೆಂದು ಕಾಣುವರು. ಅವರಿಗೆ 'ಐಹಿಕವೇ' ಸತ್ಯ. ನಮ್ಮ ಪೂರ್ವಜರು ಇದನ್ನು ಮಾಯೆಯೆಂದೂ ಮಿಥ್ಯವೆಂದೂ ಬೋಧಿಸಿದರು. ಪಾಶ್ಚಾತ್ಯರ ವರ್ಣಭೇದಗಳು ಧನ ಕೂಲಿ ಮೊದಲಾದ ಐಹಿಕ ವಿಚಾರಗಳನ್ನನುಸರಿಸುವವು. ಇವರು ತಾವು ಅಭ್ಯಾಸಿಸಿದ ಭೌತಿಕ ಶಾಸ್ತ್ರಜ್ಞಾನವನ್ನು ಐಹಿಕ ಸುಖಾಭಿವೃದ್ಧಿಗೆ ಪ್ರಯೋಗಿಸುವರು. ಅಥವಾ ಐಹಿಕ ರಾಜ್ಯಾಧಿಕಾರ ಪ್ರಸಾರಕ್ಕೆ ವಿನಿಯೋಗಿಸುವರು. ಪಾಶ್ಚಾತ್ಯರಿಗೆ ಸಮಾಜವು ಜೀವನದಲ್ಲಿ ಆಸಕ್ತಿಯನ್ನೂ ಹಿಂದುವಿಗೆ ವೈರಾಗ್ಯವನ್ನೂ ಕಲಿಸುವದು. ಇದರ ಪರಿಣಾಮವು ಈಗಲೇ ತೋರುವದು. ಪಾಶ್ಚಾತ್ಯ ಸಮಾಜದ ಅಸ್ತಿವಾರವು ಅಲ್ಲಲ್ಲಿ ಕದಲ ಹತ್ತಿದೆ. ಇದರ ಕಾರಣವು ಗಹನವಲ್ಲ. ಮಿತವಾದ ಐಹಿಕ ಸುಖದ ಹೋರಾಟದ ಪರಿಣಾಮವೇ ಅದು. ಪಾರಮಾರ್ಥಿಕ ಸುಖಕ್ಕೆ ಮಿತಿಯಿಲ್ಲ. ಅದರಲ್ಲಿ ಒಬ್ಬನ ಲಾಭದಿಂದ ಮತ್ತೊಬ್ಬನಿಗೂ ಲಾಭವೇ ಹೊರತು ನಷ್ಟವಾಗಲೀ ಹೊಟ್ಟೆಕಿಚ್ಚಾಗಲೀ ಇರದು.

ಈ ವಿಷಯವನ್ನು ಪರ್ಯಾಲೋಚಿಸಿದ್ದಲ್ಲಿ ನಾವು ಅನುಮೋದಿಸಬೇಕಾದ ಅಂಶವೇನೆಂದರೆ —ಯುರೋಪೀಯ ಸಮಾಜವು ಹಿಂದೂ ಸಮಾಜದೊಡನೆ ಹೋಲಿಸಿದರೆ ನಿನ್ನೆಯ ಶಿಶುವಿನಂತಿರುವದು. ಹೀಗಿರುವಲ್ಲಿ ಕಾಲವೆಂಬ ಒರೆಕಲ್ಲಿನಲ್ಲಿ ಮಸಿಯಲ್ಪಟ್ಟು ಪಾರಾದ ನಮ್ಮ ಸಮಾಜದ ಘಟವನ್ನು ಇನ್ನೂ ಆ ಒರೆಕಲ್ಲಿಗೆ ಹಾಗದ ಪಾಶ್ಚಾತ್ಯ ಸಂಸ್ಥೆಗೆ ವಿನಿಮಯಕಬಾರದು. ಕಾಲ ವಿದ್ಯಮಾನಗಳನುಸಾರವಾಗಿ ನಮ್ಮ ಸಮಾಜವನ್ನು ಅಲ್ಲಲ್ಲಿ ಮಾರ್ಪಡಿಸಬೇಕೆಂಬದು ನಿಜ. ಆದರೆ ಅದರ ಅಂತರಾತ್ಮವೂ ಬೀಜಮಂತ್ರವೂ ಸದಾ ಸ್ಥಿರವಾಗಿ ನಿಲ್ಲಬೇಕು. ಆ ಅಸ್ತಿವಾರದಲ್ಲೇ ಮುಂದಿನ ಭವನವು ಏರಬೇಕಾಗಿದೆ. ಆಗ್ಯೆ ನಾವು ನಮ್ಮ ಪೂರ್ವ ಸ್ಮೃತಿಯನ್ನೂ ಸ್ವಭಾವವನ್ನೂ ನಿತ್ಯವಾದ ಈಶ್ವರ ಶಾಸನವನ್ನೂ ಅನುಸರಿಸಿದಂತಾಗುವದು.

ಪ್ರಜಾಸೊತ್ತುಗಳನ್ನು ರಕ್ಷಿಸುವ ಪುರಾತನ ಭಾರತೀಯ ಪದ್ಧತಿ.

ರಕ್ತಶುದ್ಧಿ ಬಗ್ಗೆ ಅತ್ಯುತ್ಕೃಷ್ಟವಾದ ಔಷಧಿಯು [illegible] ಜನರು ಇದನ್ನು ಸೇವಿಸಿದ ಅನು ಭವದಿಂದ ಅತ್ಯಂತ ಗುಣಕಾರಿಯೆಂದು ಕಂಡುಕೊಂಡಿರ ವರು [illegible] ವಾತ ಚರ್ಮರೋಗಗಳು, ಗಂಟುವಾಯಿ, ಪಕ್ಷವಾತ, ಅಶುದ್ಧರಕ್ತದಿಂದ ಉಂಟಾಗಬಹುದಾದ ಇತರ ರೋಗಗಳು, ಬಲಹೀನತೆ ಈ ಎಲ್ಲಾ ರೋಗಗಳಿಗೆ ಖಾತ್ರಿಯಾದ ಔಷಧಿಯೆಂದು ಕಳೆದ ಐವತ್ತು ವರುಷಗಳಿಂದ ಎಲ್ಲಾ ರಕ್ತಶುದ್ಧಿಯ ಔಷಧಿಗಳಲ್ಲಿ ಶ್ರೇಷ್ಠವಾದುದೆಂತ ಭೂಲೋಕದಲ್ಲೆಲ್ಲಾ ಕೀರ್ತಿಗೊಂಡಿರುತ್ತದು ಧಾತು ಪುಷ್ಟಿಗೆ ಉತ್ತಮವಾಗಿರುತ್ತದರಿಂದ ಇದರ ಪ್ರತಿನಿತ್ಯದ ಸೇವನೆಯು ಆಲೋಚನಾಶಕ್ತಿಯನ್ನು ಬಲಗೊಳಿಸಿ [illegible] ತೃಪ್ತಿಕರವನ್ನುಯುಮಾಡುವುದು

ಕ್ರಯ ಬಾಟ್ಲಿ ಒಂದಕ್ಕೆ ರೂ. ೧ ಆ ೪, ಏನಾಹ ಟಿಪ್ಪಾಲು ದಸ್ತೂರಿ ೫ ಆಣೆ.

ಗಜಕರ್ಣದ ಮುಲಾಮು ೩—ಆಣೆ. ಟೂತ್ ಪೌಡರ್ ಆಣೆ ೨.

[illegible] ಮ್ಯಾನೇಜರ್, ಮಾಧವ್ ಬುಕ್ ಡಿಪೋ,
[illegible]

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕೃಯವ್ಯತ್ಯಾಸದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ಒಕ್ಕೆ ರೂ. ೫ರೂ. ೩ ರೂ. ೨ ರೂ. ೮ ಆ. ೧ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ; ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ಒಕ್ಕೆ ೪ ಆಣೆ ಮಕ್ಕಳಿಗೆ ಒದುವ ಬಾಲಗ್ರಹ (ಫಾಕ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ಒಕ್ಕೆ ೮ ಆಣೆ

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ ಎಲ್ ಉಪಾಧ್ಯಾಯ, ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ
ಲೈಫ್ ಎಶ್ಯೂರೆನ್ಸ್ ಕಂಪೆನಿ.
ಲಿಮಿಟೆಡ

ಆಫೀಸು ವಿಶಾಖಪಟ್ಟ, ಮತ್ತು ಮದ್ರಾಸು

ಟ್ರಸ್ಟೀ — ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯುಳ್ಳವರಿಗೂ ಕೇವಲ [illegible] ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೆಗಿನ ಪಾಲಿಸಿಗಳಿಗೆ ಜೀವ ವಿಮೋ ಅತಿ ಕಮ್ಮಿಯಾದರೂ ಬದ್ದವಾದ ವಿಮೇ ದರಗಳ ಉತ್ತರಾಯಿಸಿ ಒಹುದು

ಇತರ ಯಾವ ಜೀವವಿಮೋ ಕಂಪೆನಿಗಳಲ್ಲಿ ಊರ್ಜಿಯಿಸುವ ಮೊದಲು ನಮ್ಮ ದರಗಳ ನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ

ಕರ್ಣಾಟಕ [illegible] ಮೂಲದಸವೇ ಪೂ ಸರಕಾರದ ಪತ್ರಿಕಾಪತ್ರಗಳಲ್ಲಿ ಠೇವಣಿ ಮಾಡಿಕ್ಕಿರುವದು.

[illegible]

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಶೇಷ ಸೂಚನೆ — ಪ್ರಖ್ಯಾತಿಹೊಂದ ಶ್ರೀಕೃಷ್ಣ ಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು

ಎಲ್ಲೂರು ರಾಮರಾವ್, ಜನರಲ್ ಏಜೆಂಟ್ [illegible] ದಕನ್ನಡ

ಅತಿ ಉತ್ತಮವಾದ ಬೀಜಗಳು—ಗಿಡಗಳು—ಹೂವು ವಗೈರೆ

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟೀವ್ ತರಕಾರಿ ಬೀಜ ಗಳೂ, ಹೂವಿನ ಬೀಜಗಳೂ, ಬೇಲಿಗಳಿಗೂ ಮತ್ತು ಕಾಪಿ ಗಿಡಗಳ ನೆರಳಿಗೆ ಅನು ಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ ಇವೂ ಅಲ್ಲದೆ ಉತ್ತಮ ವಾದ ಕಟ್ಟಿದ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ, ಗುಲಾಬೀ ಗಿಡ ಗಳೂ, ಎಲ್ಲ ಜಾತಿಯ ಗಿಡಗಳೂ, ವಗೈರೆ ಬಹಳ ಕಮ್ಮಿ ದರಗಳಿಗೆ ಬೇಕಾದಲ್ಲಿ ರವಾ ನಿಸಲ್ಪಡುವುದಲ್ಲದೆ ಕೆಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸುವೆವು ತರಕಾರೀ ಮತ್ತು ಹೂವುಗಳು ಸಹಾ ಕಳುಹಿಸಲ್ಪಡುವವು ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಬಿ ಎಲ್ ಬೈಯ್ಯಣ್ಣ ಬ್ರದರ್ಸ್,
67 ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ

The Peoples Watch

UNEQUALLED FOR

CHEAPNESS ACCURACY

[illegible] ಕಾಲದಿಂದ ನಮ್ಮ ಗ್ರಹಕರು ಕಿಸೆ ಘಡಿಯಾರುಗಳನ್ನು ಕೇಳುವದ ರಿಂದ ಈ ಸರ್ತಿ ಸೀಮೆಯಿಂದ ಕೆಲವು ವಾಚುಗಳನ್ನು ತರಿಸಿ ವಿಕರೀಗೆ ಇಟ್ಟಿದ್ದೇವೆ



ಪೀಪಲ್ಸ್ ಓಪನ್‌ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಕೀಲೆಸ್ ಲಿವರ್ ಘಡಿಯಾರವು ಸರಪಣಿ ಪೆಟ್ಟಿಗೆ ಗ್ಲಾಸ್ ಸ್ಪ್ರಿಂಗ್ ಸಹಿತ ಕ್ರಯ ೩—೨—೦ ಮೂರು ರೂಪಾಯಿ ಎರಡು ಆಣೆ ಈ ಘಡಿಯಾರಗಳು ಗುಣದ ಲ್ಲಿಯೂ ಕರೀದಿಯಲ್ಲಿಯೂ ಬಾಳಿಕೆಯಲ್ಲಿಯೂ ಮಜ ಬೂತಿನಲ್ಲಿಯೂ ಶ್ರೇಷ್ಠವಾದವೆಂದು ದೃಢವಾಗಿ ಹೇಳು ತ್ತೇವೆ ನಕಾಶಿ ಕೆಲಸಮಾಡಿದ ಸ್ವದೇಶೀ ಶರಟ್ ಬಟ್ನ್ ಗಳು ಅನೇಕ ತರದ್ದು ಬಂದಿದೆ

ವಿಳಾಸ —

ದಿ ಊಲನ್ ಮಾರ್ಟ್,
ಆಸ್ಪತ್ರೆ ಎದುರಿಗೆ,
ಮಂಗಳೂರು.

SMALL-POX BALM.

ಸಿಡುಬು ರೋಗಕ್ಕೆ ಮುಲಾಮು.

ಅತ್ಯಲ್ಪ ಕಾಲದಲ್ಲಿಯೇ ಹಲವ ರಿಂದ ಉಪಯೋಗಿಸಲ್ಪಟ್ಟು ವಿಶೇಷ ಗುಣಕಾರಿ ಎಂದು ಹೆಸರು ಪಡೆದಿರು ವುದು.

ಸಿಡುಬು ರೋಗದ ಚಿಕಿತ್ಸೆ ಮಾಡು ವ ವಿವಿಧ ವೈದ್ಯರಿಂದ ಪ್ರಶಸ್ತವಾದ ಔಷಧಿ ಎಂದು ಮನ್ನಿಸಲ್ಪಟ್ಟಿರುವುದು.

ಮೈಲಿಯಲ್ಲಿ ಕೀವು ತುಂಬುತ್ತಿರುವಾಗ ಏರುವ ಜ್ವರವನ್ನು ಶಮನಿಸುವದು

ಸಿಡುಬುರೋಗದ ಅಂಟುವ ಸ್ವಭಾವವು ಎಲ್ಲರಿಗೂ ತಿಳಿದಿರುವ ಪ್ರತ್ಯಕ್ಷವಾದ್ದು, ಸಿಡುಬು ಶರೀರದಲ್ಲೆಲ್ಲಾ ಕಾಣಿಸಿಕೊಂಡ ನಂತರ ಇದರ ಸೋಂಕು ಇನ್ನಷ್ಟು ಪ್ರಬಲವಾಗುವುದು. ರೋಗಿಗೆ ಒಂದು ಸ್ನಾನದ ನಂತರ ಕೀವು ತುಂಬಿರುವ ಮೈಲೆಯು ಒಣಗುತ್ತ ಒಂದು ಪೊರೆಪೊರೆಯುಳ್ಳದ್ದಾಗುವುದು. ಈ ಪೊರೆಗಳು ರೋಗಿಯು ಅತ್ತಿತ್ತ ಚಲಿಸುತ್ತಿರುವಾಗೈ ಅಲ್ಲಲ್ಲಿ ಬಿದ್ದು ಗಾಳಿಯಿಂದ ಸರ್ವ ಕಡೆಗಳಲ್ಲಿಯೂ ಪ್ರಸರಿಸಲ್ಪಟ್ಟು ಪೊರೆಗಳಲ್ಲಿರುವ ರೋಗ ಅಣುಗಳಿಂದ ರೋಗದ ಸೋಂಕು ಸರ್ವತ್ರ ಹಬ್ಬುವುದು.

ಮೈಲೆಯ ದುರ್ವಾಸನೆಯನ್ನು ಹೋಗಗೊಳಿಸಿ, [illegible] ಹೊಂದದಂತೆ ಮಾಡಿ, [illegible]ಯಿಂದ ಶರೀರದಲ್ಲಿ ಉಂಟಾಗುವ ತುರಿಸುವಿಕೆಯನ್ನು ನಿಲ್ಲಿಸಿ ರೋಗಿ[illegible] [illegible]ಗಳು ಯಾವರೀತಿಯಲ್ಲಿಯಾದರೂ ವಿಶೇಷ ಪರಿಣಾಮ ಹೊಂದದಂತೆ ಈ ಮುಲಾಮಿನ ಲೇಪನದಿಂದ ಸಾಧ್ಯವಾಗುವುದು. ರೋಗದ ಸೋಂಕನ್ನು ಸಹಾ ಇದರ ಲೇಪನವು ತಡೆಕಟ್ಟುವುದರಿಂದ ರೋಗ ತಗಲಿದ ಸರ್ವರೂ ಇದನ್ನು [illegible] ಉಪಯೋಗಿಸಬಹುದು.

ಹೋಮಿಯೋಪತಿಕ್, ಟಿಸ್ಯುರೆಮಿಡಿಸ್, ಆಯುರ್ವೇದಿಕ್ ಅಥವಾ ಎಲೋಪತಿಕ್ ಈ ಎಲ್ಲಾ ವಿಧಾನಗಳಿಂದ ಚಿಕಿತ್ಸೆ ಹೊಂದುವ ರೋಗಿಗಳಿಗೆ ಈ ಮುಲಾಮಿನ ಲೇಪನವು [illegible] ಗುಣಕಾರಿಯಾಗಿರುವುದರಿಂದ ಎಂಥಾ ಚಿಕಿತ್ಸೆಯಲ್ಲಿಯಾದರೂ ಇದರ ಲೇಪನವು ಅಕ್ಷೇಪಕರವಲ್ಲ.

ಮುಲಾಮನ್ನು ರೋಗತಗಲಿದ [illegible] ದಿನದಿಂದ ಹಚ್ಚಲು ಪ್ರಾರಂಭಿಸಬಹುದು, ಹಚ್ಚುವ ಕ್ರಮ ಮುಂತಾದವುಗಳು ಕರಡಿಗೆಯ ಲೇಬಲಿನಲ್ಲಿರುವವು.

ಸರ್ವರಿಗೂ ಇದನ್ನು ಕ್ರಯಕ್ಕೆ ಪಡಕೊಳ್ಳುವದಕ್ಕೆ ಸಾಧ್ಯವಾಗುವಂತೆ ಮುಲಾಮಿಗೆ ಹೆಚ್ಚು ಕ್ರಯದ ಔಷಧಿಗಳು ಬಿದ್ದಿದ್ದರೂ ಕ್ರಯವನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆ ಮಾಡಿಟ್ಟಿರುವೆವು.

ಕ್ರಯ ದಬಿ ಒಂದಕ್ಕೆ [illegible] ಅಂಚೆ ಕೂಲಿ [illegible]

ಮಂಗಳೂರ ಟ್ರೇಡಿಂಗ ಎಸೋಸಿಯೇಶನ್ (ಮಂಗಳೂರು ವ್ಯಾಪಾರ ಸಂಘ)

ರಥಬೀದಿ ಮಂಗಳೂರು ಇವರಲ್ಲಿ ದೊರೆಯುವುದು.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ ಇತ್ತಕಡೆ ನೋಡಿ!

ಲೆಕ್ಕದ ಪುಸ್ತಕಗಳು

ಸ್ಟಿಫ್‌ಕವರ್	ಹಾಫ್‌ಬೈಂಡ್	ಫುಲ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)	(ಪಕ್ಕೆಗೆ [illegible] ಬೆನ್ನಿಗೆ [illegible])	(ಪೂರ್ಣ ಚರ್ಮ)

ಈ ಮೂರು [illegible]

3 × 8½ 3 × [illegible]½, 8½ × 6 [illegible] × [illegible] [illegible] ವ್ಯಾಪಾರಸ್ಥ ವ ಆಫೀಸರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಮಾತ್ರವಾಗಿದ್ದು

ಬಹಳ ಸಮಯ [illegible] ತಯ್ಯಾರಿಸ[illegible]

ಇದೇ ಕಾಗದದ [illegible] ಪುಸ್ತಕ [illegible]ವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು [illegible] ಕಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ಕಡಿಮೆ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಮ್ಮ ದರಗಳಿಗೆ [illegible] ಬರಕೊಳ್ಳಿ ಮೆನೇಜರ್,

ಶಾರದಾ ಮುದ್ರಾಲಯ ಮಂಗಳೂರು

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಟ್ಯಾಯಿಗಳಲ್ಲಿ ಅಚ್ಚು ಹಾಕುವುದು ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು

ಪತ್ರಗಳನ್ನು ಬರಿಯುವ ವಿಳಾಸ:— ಮ್ಯಾನೇಜರ್, ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್. ಮಂಗಳೂರು.

Printed by V. S. Kamat [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವು ಪ್ರಕಟಿಸಲ್ಪಡುವದು.

ಚಂದಾ ನಿರ್ಣಯ — ವರ್ಷ ಒಕ್ಕೆ ರೂ 1-4-0 ಟಪ್ಪಾಲು ಹಾಸಲು ಸೇರಿ ರೂ 2 1 0

ಪುಸ್ತಕ 4 ಮಂಗಳೂರು, ತಾರೀಕು 17ನೇ ಶುಕ್ರವಾರ ಜೂನ್ 1910 ಸಂಚಿಕೆ 24.

Amrutanjan Depot Fort Bombay.

ಅಮೃತಾಂಜನ

Trade Mark Registered

ಹಿಂದ ಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಜೇನೆಹಾ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದ ನೋವು, ಗಂಟ್ಲು ನೋವು, ಜಬುನು, ಉಳುಕು, ಘಾಯ, ಶೀತ, ಈ ಎಲ್ಲ ತರದ ನೋವುಗಳು ಪೂರ್ಣವಾಗಿ ಗುಣವಾಗುವದು. ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪ್ರದ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಲ್ಲಾ ದರಗಳಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು. ಬಾಟ್ಲಿ ೧ರ ಕಿಮ್ಮತು 8 ಆಣೆ

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

SAFE ★ EFFICACIOUS ★ SURE
WILLIAM & Co.
BOMBAY
PILLS ★ OINTMENTS ★ POWDERS

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು ೨ ಆಣೆ

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪ್ರಾಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಹೆಮೋಯಿನ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1.

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ಹಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳೆಯುವವು. ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ. ಬಾಟ್ಲಿ ಒಂದರ ಕಿಮ್ಮತು ರೂ 1

ಸುಂದರಿ ತೈಲ.

ಇದನ್ನು ಮೋರೆಗೆ ಹಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು. ಬಾಟ್ಲಿ ಒಂದರ ಕಿಮ್ಮತು 8 ಆಣೆ

ಖಜ್ಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತು 3 ಆಣೆ.

ಜುಲಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತು 8 ಆಣೆ.

ವಿಳಾಸ:—ಅಮೃತಾಂಜನ ಡಿಪೊ, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—ಅಮೃತಾಂಜನ, ಮುಂಬಯಿ.

ಸುಗಂಧ ದ್ರವ್ಯಗಳು.

ನಮ್ಮ ಸ್ವಂತ ಪರವಾಯಿಷಿಯಾಗಿ ತಯಾರು ಮಾಡಿ ಬಿಕರಿಗೆ ಸಿದ್ಧವಾಗಿರುವ ಸುಗಂಧ ದ್ರವ್ಯಗಳು

ತರಹೇವಾರಿ ಊದುಬತ್ತಿ 24 ರೂ ತೂಕದ ಶೇರು 1ಕ್ಕೆ

	ರೂ ಆ ಪೈ	ರೂ ಆ ಪೈ
1 ಖಾಸಾ ಅಂಬರ್ ಬತ್ತಿ	[illegible]—0—0	5—0—0
2 ಕೇಸರಿ ಬತ್ತಿ	4—[illegible]—0	3—8—0
3 ಜವ್ವಾಜಿ ಕಸ್ತೂರಿ ಬತ್ತಿ	3—0—0	2—8—0
4 ಪುನಗು ಬತ್ತಿ	1—8—0	1—[illegible]—0
5 ಪನ್ನೀರು ಬತ್ತಿ	0—1[illegible]—0	0—8—0
6 ಉತ್ತಮವಾದ ದಶಾಂಗ	0—12—[illegible]	

ಗಂಧದ ಬಿಲ್ಲೆಗಳು

	ತೊ	ತ	ಕೋಟಿ
1 ಪುದುಕೋಟೆ ಬಿಲ್ಲೆ	[illegible] 0	1 8 [illegible]	0 12 [illegible]
2 ಕಸ್ತೂರಿ ಬಿಲ್ಲೆಗಳು	1 8 [illegible]	[illegible] 12 [illegible]	0 0
3 } 1 ಕೇಸರಿ ಬತ್ತಿ	[illegible] 8 [illegible]	[illegible] 1 [illegible]	[illegible] 2 [illegible]
2 ಡಿಟ್ಟೊ	[illegible] 1 [illegible]	2	0 1 0

ಕಾಲು ತೊಲೆ ತೂಕ [illegible] 1[illegible]ಕ್ಕೆ 10 ರ[illegible]

4 ಅವಲ್ ಪಸಿಂ[illegible]	[illegible] 8 0	[illegible] 4 0	[illegible] 2 0
ಎರಡನೇ ದ[illegible]	0 4 [illegible]	0 [illegible]	0 1 0

ಕಾಲ ತೊಲ [illegible] 10[illegible]ಕ್ಕೆ 8[illegible]

5 ಅರಗಜ [illegible] ತೊಲ 1ಕ್ಕೆ 1 0 0

ಪರಸ್ಥಳದವರ [illegible] ಟಪ್ಪಾಲ್ [illegible] ದೀಳುತ್ತೆ [illegible] ಹಿಂದು [illegible] ರೆಂದು ಕೋರುತ್ತೇನೆ

ಯ ಂ ನರಸಿಹ್ಮ ಶಾಸ್ತ್ರಿ [illegible]ಕಾರಿ
[illegible] ಬೆಂಗಳೂರು ಸಿಟಿ

ಮುಖತ್ತು [illegible]ನೇ ವರುಷದ ಕ್ಯಾಲೆಂಡರು ಮುಖತ್ತು

ಕಾನಪೂರ್ [illegible] ಜೌಕಗಳು.

ಸೈಜು 40×10 [illegible] ಕರಿಂದು, ಕೇಸರಿ ಬಿಳಪು [illegible] 1ಕ್ಕೆ ರೂ 1—4—0
ರೇಷ್ಮೆ[illegible] 1[illegible] 1—4—0

ಶಹ[illegible]ಗಳು.

ಉದ್ದ [illegible] 1ನೇ ನಂಬರು 1ಕ್ಕೆ ರೂ 4 4 [illegible] —1[illegible]—0 [illegible]ನೇ ನಂಬರು 3—8—[illegible]
ರೇಷ್ಮೆ[illegible] 1[illegible] 0—4—0

ಸಾಚಾ ಒಳ್ಳೇ ಕಲಾಪತ್ತು "ಜರಿ"

[illegible] ಅಂಚು

1ನೇ ನಂಬರು 0—[illegible]—[illegible] 1—1—[illegible]
2ನೇ ನಂಬರು 0—11—[illegible] 1—8—0 —4—0

ರೇಷ್ಮೆ [illegible]ಗಳು

ಕೆಂಪು ಪೂವಾ [illegible] ಉದ್ದ 5 [illegible] 1ಕ್ಕೆ 1 4 [illegible] 1 8 0 2 4 0 2—8 0 [illegible] 0 0
ಚಿತ್ರಾಪನ 3 [illegible] 1 [illegible] 0 6 0 0
ಡಿಟ್ಟೊ ಗಜ 1ಕ್ಕೆ 1 8 0
ರೇಷ್ಮೆ ಅಂಚು [illegible] 1ಕ್ಕೆ [illegible] 4
ಮಕ್‌ಮಲ್ [illegible] 1[illegible] 1
ದೇವರುಗಳಿಗೆ ಉಪಯೋಗಿಸು[illegible] ಕೆಂಪು [illegible] ಹಸರು ಬಂಗುಗಳಲ್ಲಿ ಗಜ 1ಕ್ಕೆ ರೂ 1 [illegible] 0, 8 0 [illegible] 0
ದಾರದ [illegible] 1ಕ್ಕೆ [illegible]
ಉಲನ್ [illegible] 1ಕ್ಕೆ ರೂ [illegible] 4 0 [illegible] 8 0 —0 0 [illegible]
ಫ್ಲಿಟ್ [illegible] 1ಕ್ಕೆ ರೂ 1 1[illegible] 0 1 [illegible] 8 [illegible] 2—12—0
ಇಟಲಿ [illegible] 1ಕ್ಕೆ ರೂ [illegible] 1 0 [illegible] 1 4 0 1—8—0
ಹಾಸನದ [illegible] 1ಕ್ಕೆ ರೂ 4 [illegible] 0 4 4 0 4 8 0, 5—8—0, 6 0 0 7 0 [illegible] 8 [illegible] 0 [illegible] 0 [illegible] 10 0 0, 12 0 0
ಪೇಟ ಕಟ್ಟುವ ತರಹೆವಾರಿ [illegible] ಗಜ 1ಕ್ಕೆ 0 6 0 0 8 0, 0—10—0, 0—12 0
ಕುಪ್ಪಸಕ್ಕೆ ಮತ್ತು [illegible]ಕ್ಕೆ ಉಪಯೋಗಿಸುವ [illegible]ಗಳು ಗಜ 1ಕ್ಕೆ ಆಣೆ 6, 8, 10, 12

ಕೇಶರಂಜನ ತೈಲ ಬಾಟ್ಲಿ	1ಕ್ಕೆ	ರೂ	0—11—0
ಕುಂತಳ ಕೌಮುದಿ ತೈಲ	,,	,,	0—12—0
ಕಲೋನಿಯಾ ಓಯಿಲ್	,,	,,	1—0—0
ಭೃಂಗಾಮಲಕ ತೈಲ ಸೀಸೆ	,,	,,	0—4—0, 0—8—0, 1—0—0
ಕಸ್ತೂರಿ ಮಾತ್ರೆ ಸೀಸೆ		,,	0—4—0.

ಎಲ್. ಎ. ಶ್ರೋಫ್[illegible]
[illegible]

ಜಾತ್ಕ ಫಲ ಚಿಂತಾಮಣಿ.

ಎಂಬೀ ಪುಸ್ತಕವು ಕರ್ನಾಟಕ ದೇಶೀಯರೆಲ್ಲರ ಉಪಯೋಗಕ್ಕಾಗಿ ಪಂಡಿತರಿಂದ ತಾತ್ಪರ್ಯ ಸಹಿತವಾಗಿ ಬರೆಯಿಸಿ ಬಿಕರಿಗೆ ಸಿದ್ಧವಾಗಿದೆ ಕ್ರಯ 0—12—0. ಹಾಸಲು ಚಾರ್ಜು 0—3—0 3 ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಚಮತ್ಕಾರವಾದ ಮಹಾಲಕ್ಷ್ಮಿ[illegible] ಕಡೆ ಇನಾಮಾಗಿ ದೊರೆಯುತ್ತೆ

ಹೆಚ್ ಎನ್ ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು ಸಿಟಿ.

"ವಿದ್ಯಾನಂದ" ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

ರಘುವಂಶ ಮಹಾಕಾವ್ಯ"

ಕಾ[illegible]ಗಿಯೇ ([illegible]) [illegible] ಸಂಸ್ಕೃತ ವಿದ್ಯಾರ್ಥಿಗಳಿಗೆ [illegible] ಪದ ಶಬ್ದ, ಅನ್ವಯ ಅರ್ಥ [illegible] ತಾತ್ಪರ್ಯ, ವ್ಯಾಕರಣ ವಿಷಯ ವಿಶೇಷ [illegible] ಪ್ರಿಂಟಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

[illegible] ಪ್ರತಿ [illegible] ತಾತ್ಪರ್ಯ ಸಹಿತ [illegible] 0—4—0

ವಿಳಾಸ ಮ್ಯಾನೇಜರ್
ವಿದ್ಯಾನಂದ ಆಫೀಸು,
[illegible] ಬೆಂಗಳೂರು ಸಿಟಿ

ಕುಂತಳ ಕೌಮುದಿ ತೈಲ.

ಕು[illegible] ಮಹಾರಾಣಿಯವರು—ಅವರು ಉಪಯೋಗಿಸುವ [illegible] ತೈಲಗಳಲ್ಲೆಲ್ಲಾ ಇದೇ ಅ[illegible]
[illegible] ಮಹಾರಾಣಿಯವರು—ಅವರು ಇದನ್ನೆ ಪ್ರತಿನಿತ್ಯವೂ ಉಪಯೋಗಿಸುತ್ತಾರೆ
[illegible] ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ
ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ [illegible] ತೈಲವೆಂದು ಶಿಫಾರಸು ಮಾಡ[illegible]
ಶ್ರೀ [illegible]ರೇಂದ್ರನಾಥ [illegible]ಯವರು—ನಾನು ಉಪಯೋಗಿಸಿದ್ದೇನೆ [illegible]ರೂ ಇದನ್ನು ಉಪಯೋಗಿ[illegible]
ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವದಕ್ಕೂ [illegible] ಹಚ್ಚಿಕೊಳ್ಳುವದಕ್ಕೂ ಅತ್ಯಂತ [illegible]ಕವಾದ್ದು ಇದರಲ್ಲಿ ಅತ್ಯಾಶ್ಚರ್ಯಕರವಾಗಿ [illegible] ಗುಣಗಳಿರುವದಲ್ಲದೆ ಇದು [illegible] ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು [illegible] ಔನ್ಸುಗಳುಳ್ಳ ಸೀಸೆ ಒಂದಕ್ಕೆ [illegible] ಆಣೆಗಳು

ಕವಿರಾಜ ಆರ್ ಸಿ ಸೆನ್, ಎಲ್ ಎಮ್ ಎಸ್,
216 ಕಾರನ್‌ವಾಲಿಸ್ ಬೀದಿ ಕಲ್ಕತ್ತಾ

ಟೆಲಿಗ್ರಾಫ್ ವಿಳಾಸ—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು—ಎಲ್ ಎ ಶ್ರೋಫ್ [illegible] ಎಂಡ್ ಕೋ,
ಚಿಕ್ಕಪೇಟೆ, ಬೆಂಗಳೂರು.
[illegible] ಏಜಂಟರು—ಮ[illegible] ರಾ[illegible] ಸಿ. ಆರ್. [illegible]
[illegible]

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 17ನೇ ಜೂನ್ 1910

ಮದ್ರಾಸು ಪ್ರಾಂತಿಕ ಪರಿಷದ

ಈ ಪರಿಷದವು ಕಳದ ೯ನೇ ತಾರೀಕು ಬ್ರಹಸ್ಪತಿವಾರ ಕರ್ನೂಲಲ್ಲಿ ಕೂಡಿತು ರಾ| ಪಿ. ಆರ್. ಸುಂದರ ಅಯ್ಯರವರು ಅಧ್ಯಕ್ಷರಾಗಿದ್ದರು ಇವರು ಮದ್ರಾಸು ಹ್ಯಾಕೋರ್ಟಿನಲ್ಲಿ ಪ್ರಖ್ಯಾತಿ ಹೊಂದಿದ ವಕೀಲರಾಗಿರುವರು ಈ ದೆಶೆಯಿಂದ ಅವರನ್ನು ಅಧ್ಯಕ್ಷ ಪದವಿಗೆ ಆರಿಸಿದಂತೆ ತೋರುವದು ಇಂತಹ ಕಾರ್ಯವನ್ನು ನಿರ್ವಹಿಸಲಿಕ್ಕೆ ರಾಷ್ಟ್ರೀಯ ವರ್ತನಕ್ಕೆ ಜೀವನವನ್ನು ಸಮರ್ಪಿಸಿದವರು ಸರಕಾರಿ ಹುದ್ದೆಗಳ ಮೇಲೆ ದೃಷ್ಟಿಯಿಲ್ಲದವರು ಆದ ಗೃಹಸ್ಥರೇ ಯೋಗ್ಯರೆಂದು ಭಾವಿಸುತ್ತೇವೆ

ಅಧ್ಯಕ್ಷರು ತಮ್ಮ ಭಾಷಣಾರಂಭದಲ್ಲಿ ಸಹಜವಾಗಿ ಕೀರ್ತಿಶೇಷ ಎಡ್ವರ್ಡ್ ಚಕ್ರವರ್ತಿಯವರ ನಿರ್ಯಾಣವನ್ನು ಕುರಿತು ಪ್ರಸ್ತಾಪಿಸಿದರು ವಿಕ್ಟೋರಿಯಾ ಚಕ್ರವರ್ತಿನಿಯವರೂ, ಇವರ ಪುತ್ರರೂ ಉತ್ತರಾಧಿಕಾರಿಗಳೂ ಆದ ಎಡ್ವರ ಸಾರ್ವಭೌಮರೂ ಈ ದೇಶದ ಅಭಿವೃದ್ಧಿಯಲ್ಲಿ ತೋರಿದ ಕಾಂಕ್ಷೆಯನ್ನೂ ಒಗಿಂದಾಗ್ಯೆ ಜನರಿಗೆ ಜಾಹೀರು ನಾಮೆಗಳ ಮೂಲಕ ಕೊಟ್ಟ ಭರವಸೆಯನ್ನೂ ವಿವರಿಸಿ ರಾಜಾಪ್ರತ್ಯಕ್ಷದೇವತಾ ಎಂಬ ವಾಕ್ಯ ಪ್ರಕಾರ ಎಡ್ವರ್ಡ್ ಮಹಾಪ್ರಭುಗಳು ನಮ್ಮ ನಿಷ್ಟೆಗೂ, ಸ್ವಂತ ಗುಣಗಣ ಪ್ರಭಾವದಿಂದ ಪ್ರೀತಿಗೂ ಪಾತ್ರರಾಗಿದ್ದರು ಎಂದು ಸಹ ಅರುಹಿದರು ರಾ| ಸುಂದರಯ್ಯರವರ ದೀರ್ಘ ಭಾಷಣದಲ್ಲಿ ವಾಚಕರಿಗೆ ಉಪಯುಕ್ತವೆಂದು ತೋರಬಹುದಾದ ಮುಖ್ಯ ಅಂಶಗಳನ್ನು ಇಲ್ಲಿ ಸಾರಾಂಶವಾಗಿ ಹೇಳುವೆವು

ಈ ದೇಶದ ರಾಜ್ಯಭಾರವು ದೈವಸಂಕಲ್ಪದಿಂದ ಬ್ರಿಟಿಷರ ಕೈಸೇರಿತೆಂದೂ, ಬ್ರಿಟಿಷ ಜನಾಂಗದ ಯೋಗ್ಯತೆ ವಿಶೇಷದ ದೆಶೆಯಿಂದ ಅವರನ್ನು ದೇವರು ಇಲ್ಲಿ ನೆಲೆಗೊಂಡ ಫ್ರೆಂಚ್, ಪೋರ್ತುಗೀಸ್ ಮೊದಲಾದ ಯುರೋಪಿಯ ಜನಾಂಗಗಳೊಳಗಿಂದ ಆರಿಸಿದನೆಂದೂ ಅಧ್ಯಕ್ಷರು ಅಭಿಪ್ರಾಯಪಡುವರು ಮತ್ತು ಭಾರತೀಯ ಜನಾಂಗವನ್ನು ಪುನರುಜ್ಜೀವಿಸಮಾಡುವದೇ ಬ್ರಿಟಿಷ ರಾಜ್ಯಭಾರದ ಉದ್ದಿಶ್ಯ ಇದನ್ನು ಕಂಪೆನಿ ಸರಕಾರದವರು ಸಹಾ ಮೊದಲಿಂದ ಲಕ್ಷ್ಯಕ್ಕೆ ತಂದು ತಾವು ಹಿಂದುಸ್ಥಾನವನ್ನು ದೇಶೀಯ ಜನಸಮುದಾಯದ ಮೇಲಿನ ಒಗ್ಗೆ ಆಳತಕ್ಕದ್ದೆಂದು ನಿರ್ಧರಿಸಿದ್ದರೆಂದೂ ವಗೈರೆ ಹೇಳಿದರು ಈಶ್ವರೇಚ್ಛೆ ವಿನಹಾ ವಿಶ್ವದಲಿ ಯಾವದೊಂದು ಸಂಗತಿ ಸಂಭವಿಸದಿರಲು, ಜನಾಂಗದ ಅದೃಷ್ಟವನ್ನು ನಿರ್ಧರಿಸತಕ್ಕದಾದ ರಾಜ್ಯಭಾರ ಮಾರ್ಪಾಟಗಳಿಗೆ ಅವನೇ ಸೂತ್ರಧಾರನೆಂದು ಯಾವ ಆಸ್ತಿಕನು ಒಪ್ಪನು? ಪ್ರಬಲ ರಾಜ್ಯಗಳಲ್ಲಿ ಅಗ್ರಗಣ್ಯವೆನ್ನಿಸುವ ಬ್ರಿಟಿಷ ರಾಜ್ಯದ ನಿವಾಸಿಕರಾದ ಮತ್ತು ನಾನಾ ದೇಶ ಕಾಲಸಂದರ್ಭಗಳಲ್ಲಿ ಜಯಕ್ಕನುಕೂಲಗಳಾದ ಉತ್ಸಾಹ ಸಾಹಸ, ಧೈರ್ಯಸ್ಥೈರ್ಯ, ದೇಶಾಭಿಮಾನ, ತ್ಯಾಗ, ರಾಜನಿಷ್ಟೆ, ರಾಷ್ಟ್ರೀಯಭಾವನಾ ಮೊದಲಾದ ಗುಣಗಳಿಗೆ ಪ್ರಖ್ಯಾತಿ ಹೊಂದಿದ ಇಂಗ್ಲಿಷರ ಸಹವಾಸದಿಂದ ಭಾರತೀಯರಿಗೆ ಲಾಭ ಸಿಕ್ಕದಿರದು ಆದ್ದರಿಂದ ಕಂಪೆನಿಯ ಸರಕಾರದವರು ಯತಾರ್ಥವಾಗಿ ಭಾರತೀಯರಿಗೆ ಉಪಕಾರಿಗಳಾಗಿದ್ದರೋ ಎಂಬ ಸಂಗತಿಯ ಚರ್ಚೆ ಅವಶ್ಯವಿಲ್ಲ

ಬ್ರಿಟಿಷರ ಆಳಿಕೆಯಲ್ಲಿ ಹೊರಟ ಅಭ್ಯುದಯ ಪ್ರವಾಹವು ಕ್ರಮೇಣ ಮುಂದರಿಸುತ್ತಾ ರಾಷ್ಟ್ರೀಯ ಪ್ರಾಂತಿಕ ಸಭೆಗಳಲ್ಲಿ ರೂಪುಗೊಂಡಿತು ಮೊದಲು ಮೊದಲು ಈ ಸಭೆಯನ್ನು ಸರಕಾರದವರು ಸಂಶಯದೃಷ್ಟಿಯಿಂದ ಕಾಣುತ್ತಿದ್ದರು. ನಂತರ ಡಫರಿನ್ ಪ್ರಭು ಮೊದಲಾದ ಗವರ್ನರ ಜನರಲರುಗಳು ಕೊಂಗ್ರೆಸ್ ಸಭೆಯನ್ನು ಪ್ರಜಾಪ್ರತಿನಿಧಿ ಸಭೆ ಎಂಬ ವಿಶ್ವಾಸದಿಂದ ನಡಿಸುತ್ತಿದ್ದರು ತದನಂತರ ಈ ಸಭೆಗೂ ವಿದ್ಯಾವಂತರಿಗೂ ಸರಕಾರದವರ ವಿಶ್ವಾಸಭಾಗ ಕಡಿಮೆಯಾಯಿತು ಜನಸ್ತೋಮದ ಮೊರೆಯನ್ನು ಕೇಳದೆ ವಂಗವಿಭಾಗವನ್ನು ಈಡೇರಿಸಿದ್ದರಿಂದ, ಸರಕಾರದವರು ತಾವು ನಿರ್ಧರಿಸಿದ ಕೆಲಸವನ್ನು ಜನರು ಅಡ್ಡ ನಿಂತರೆ ಬಿಟ್ಟುಕೊಡೆವೆಂದು ಖಂಡಿತ ಹೇಳಿದಂತಾಯಿತು. ಇದೇ ಕಳಕಳದ ಬೀಜವಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷರದೊಂದು ಸೂಚನೆಯು ಸರಕಾರದವರು ಮನಸ್ಸಿಗೆ ತರತಕ್ಕದ್ದದೆ. ಸರಕಾರದವರು ಪ್ರಜೆಗಳಿಗೆ [illegible] ಮೊದಲಾದ ಯಾವ ವರಗಳನ್ನು ಕೊಡುವಾಗಲೂ ಅವನ್ನು ಜನರ [illegible]

ಕಾರವನ್ನು ಹೊಂದರಿಗೊಳಿಸಬಾರದಾಗಿರಬಹುದು. ಆದರೆ ಜನರು ಇಲ್ಲದ ಸಲ್ಲದ ವಸ್ತುಗಳನ್ನು ಕೇಳುವಷ್ಟು ಮೂಢರಲ್ಲ ಜನರ ನ್ಯಾಯವಾದ ಪ್ರಾರ್ಥನೆಗಳನ್ನು ಒಮ್ಮೆ ದಯಪಾಲಿಸಿದರೆ ಸರಕಾರದವರು ಜನರು ಕೇಳಿದ್ದನ್ನು ಕೊಡಬೇಕೆಂದಾಗುವದಿಲ್ಲ ಇದಲ್ಲದೆ ತಮ್ಮ ನ್ಯಾಯವಾದ ಇಚ್ಛೆಗಳನ್ನು ಸರಕಾರದವರು ಮನ್ನಿಸಿದರು ಎಂಬ ಸಂತೋಷವು ಜನರಲ್ಲಿ ಎಷ್ಟು ಸಂತುಷ್ಟಿಯನ್ನು ಹರಡದಿರದು ?- ಈಗಲಾದರೋ ಜನರಿಗೆ ತಮ್ಮ ಅರಿಕೆಗಳ ಸಾರ್ಥಕ್ಯದಲ್ಲಿ ವಿಶ್ವಾಸಕ್ಕೆ ಕಾರಣವಿಲ್ಲ

ಈ ವಂಗಭಂಗದಿಂದ ಅಸಂತುಷ್ಟರಾದ ಕೆಲವು ಬುದ್ಧಿಭ್ರಷ್ಟರು ರಾಜದ್ರೋಹದ ಬೀಜವನ್ನು ಬಿತ್ತಿದರು ರಾಜದ್ರೋಹವು ಹಿಂದುಗಳ ಸ್ವಭಾವಕ್ಕೂ ಪೂರ್ವಾಚಾರಕ್ಕೂ ಧರ್ಮಕ್ಕೂ ವಿರೋಧವೆಂದು ಅಧ್ಯಕ್ಷರು ಸಭೆಗೆ ತಿಳಿಹಿದರು ಈ ರಾಜದ್ರೋಹ ನಿವಾರಣಾರ್ಥವಾಗಿ ಸರಕಾರದವರು ಹಲವು ನಿರ್ಬಂಧಕರ ಕಾನೂನುಗಳನ್ನು ಏರ್ಪಡಿಸಬೇಕಾಯಿತು ಈ ವಿಷಯದಲ್ಲಿ ಅಧ್ಯಕ್ಷರ ಮಾತುಗಳನ್ನು ಓದುವಾಗ ಅವರು ಸರಕಾರದ ಕಡೆ ವಕೀಲರೋ ಎಂಬ ಸಂಶಯ ಹುಟ್ಟುವದು, ವಿನಹ ಪ್ರಜೆಗಳ ಪ್ರತಿನಿಧಿಯಂತೆ ಸರಕಾರದ ಮುಂದೆ ವ್ಯವಹರಿಸುವರೆಂಬ ದೃಢ ಹುಟ್ಟುವದಿಲ್ಲ ಆದರೂ ಅವರು ಸರಕಾರದವರು ಮನಸ್ಸಿಗೆ ತರಬಹುದಾದ ಎರಡು ಸೂಚನೆಗಳನ್ನು ಕೊಟ್ಟಿರುವರು ಒಂದನೇದು ಈ ಕಾನೂನುಗಳು ತತ್ಕಾಲಿಕವೆಂದು ಗೊತ್ತು ಮಾಡಬೇಕಿತ್ತು ವಿನಹ ಕಾಯಂ ಕಾಯಿದೆಗಳೊಂದಿಗೆ ಸೇರಿಸಬಾರದಿತ್ತು ಇನ್ನೊಂದು ಸಂಗತಿ ಅವನ್ನು ರಾಜದ್ರೋಹದ ಸೋಂಕಿಲ್ಲದ ಮದ್ರಾಸುಸಂಸ್ಥಾನಕ್ಕೆ ಲಗಾವು ಮಾಡಬಾರದಿತ್ತೆಂಬದು ಈ ವಿಷಯವನ್ನು ಮೋರ್ಲೆ ಪ್ರಭುಗಳು ಗಣನೆಗೆ ತಂದು ಚಕ್ರವರ್ತಿಯ ಪಟ್ಟಾಭಿಷೇಕದ ಕಾಲದಲ್ಲಿ ಮೇಲ್ಕಂಡ ಕಾನೂನುಗಳನ್ನು ವಜಾ ಮಾಡುವ ಯಾ ಸಡಲಿಸುವ ಏರ್ಪಾಡು ಮಾಡಿದ್ದಲ್ಲಿ ಜನರ ಕೃತಜ್ಞತೆಗೆ ಪಾತ್ರರಾಗುವರು ಸ್ವದೇಶಿಯು ಕಾಯಿದೆಗೆ ವಿರೋಧವಲ್ಲವೆಂದು ಅಯ್ಯರರವರು ಅಪ್ಪಣೆಕೊಡಿಸಿದರು

ಇಷ್ಟು ಅಸಂತುಷ್ಟಿ ರಾಜದ್ರೋಹಗಳು ದೇಶದಲ್ಲಿ ಹರಡಿದ್ದರೂ ಜನರಿಗೆ ರಿಫಾರ್ಮು ಆಕ್ಟು ಮೂಲಕ ರಾಜ್ಯಭಾರದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಕೊಟ್ಟದ್ದಕ್ಕೆ ಮೋರ್ಲೆ ಮಿಂಟೋ ಪ್ರಭುಗಳನ್ನು ಅಧ್ಯಕ್ಷರು ಧಾರಾಳವಾಗಿ ಹೊಗಳಿರುವರು ಈ ರಿಫಾರ್ಮು ಆಕ್ಟಿನ ಮುಖ್ಯ ಕುಂದು ಹಿಂದು ಮಹಮ್ಮದೀಯರಿಗೆ ಪ್ರತ್ಯೇಕ ಪ್ರತಿನಿಧಿ ಕೂಟಗಳನ್ನು ನೇಮಿಸಿ ಐಕ್ಯಕ್ಕೆ ಪ್ರತಿಬಂಧಕವನ್ನು ನಿರ್ಮಿಸಿದ್ದೇ ರಿಫಾರ್ಮು ನಿಬಂಧನೆಗಳನ್ನು ತಿದ್ದುಪಡಿ ಮಾಡುವಾಗ ಈ ವಿಷಯವನ್ನು ಸರಕಾರದವರು ಮನಸ್ಸಿಗೆ ತರುವರೆಂದು ಕೋರಬೇಕು ಅದೇ ಸಮಯದಲ್ಲಿ ಅಧ್ಯಕ್ಷರು ಜನರ ಜವಾಬುದಾರಿಯನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿರುವರು ಕೌನ್ಸಿಲುಗಳಿಗೆ ಆರಿಸಲ್ಪಡುವ ಮೆಂಬರರು ತಮ್ಮ ಕೆಲಸಕ್ಕೆ ಯೋಗ್ಯರಾಗುವಂತೆ ರಾಷ್ಟ್ರೀಯ ವಿಷಯಗಳನ್ನು ಮನಸ್ಸುಕೊಟ್ಟು ಸಾಂಗವಾಗಿ ವಿಚಾರಿಸಿ ತಿಳಕೊಳ್ಳಬೇಕು ಓಟರರೂ ಸಹಾ ತಮ್ಮ ನ್ಯೂನಾತಿರಿಕ್ತಗಳನ್ನು ಚನ್ನಾಗಿ ತಿಳಕೊಂಡು ಅವನ್ನು ಸರಿಪಡಿಸ ಸಮರ್ಥರಾದವರನ್ನೇ ಆರಿಸಲು ಬದ್ಧರಾಗಿದ್ದಾರೆ

ಶಾಲಾ ಹುಡುಗರ ಸಂಬಳವನ್ನು ಏರಿಸಿದ್ದರಿಂದ ಉಂಟಾಗುವ ಅನರ್ಥವನ್ನು ಅಧ್ಯಕ್ಷರು ಚನ್ನಾಗಿ ಬಣ್ಣಿಸಿದರು ಬಹುಶಾ ಅನೇಕ ಶಾಲೆಗಳು, ಖಾಸಗಿ ಶಾಲೆಗಳು ಮುಚ್ಚಲ್ಪಡಬೇಕಾಗುವವು ಮತ್ತು ಗ್ರಾಂಟು ವಿಷಯದಲ್ಲಿ ಸರಕಾರದವರು ಮಾಡಿದ ನಿಬಂದನೆಗಳು ಇತರ ಸಂಸ್ಥಾನಗಳ ಕ್ರಮಗಳಿಗಿಂತ ಕಠಿಣವಾಗಿವೆ ಇಲ್ಲಿ ವಿದ್ಯೆಗ ಪ್ರೋತ್ಸಾಹ ಕೊಡತಕ್ಕ ಮಧ್ಯ ದರ್ಜೆಯ ಜನರು ಒಂದು ವೇಳೆ ಸರ್ವಸಾಧಾರಣರ ಮೇಲ್ಮೆಯನ್ನು ಮನಸ್ಸಿಗೆ ತಂದು ದಾನಶೀಲರಾದರೂ ಈ ನಿಬಂಧನೆಗಳಿಗೆ ತಕ್ಕಂತೆ ಹಣವನ್ನು ಕೊಡುವಷ್ಟು ಶಕ್ತಿವಂತರೆಂದು ಹೇಳಲಾಗದು

ರಿಫಾರ್ಮು ಆಕ್ಟಿನ ಪ್ರಕಾರ ಉಂಟಾದ ಹೊಸ ಏರ್ಪಾಡುಗಳಿಂದಲೂ, ಡಿಸೆಂಟ್ರಲೈಜೇಶನ್ ಕಮ್ಮಿಶನಿನವರ ರಿಪೋರ್ಟಿನಿಂದಲೂ ಜನರು ರಾಜ್ಯಭಾರದಲ್ಲಿ ಹೆಚ್ಚಿನ ಪಾಲು ವಹಿಸ ಸಮರ್ಥರೆಂದು ಸಿದ್ಧವಾಗುವದು ಆದ್ದರಿಂದ ಯೋಗ್ಯತಾನುಸಾರವಾಗಿ ದೇಶೀಯರಿಗೆ ಸರಕಾರದ ಮೇಲು ಹುದ್ದೆಗಳನ್ನು ದಯಪಾಲಿಸಬೇಕೆಂದು ಅಧ್ಯಕ್ಷರು ವಾದಿಸಿದರು

ರಾ| ಅಯ್ಯರರವರು ಪ್ರಸ್ತಾಪಿಸಿದ ಇನ್ನೊಂದು ವಿಷಯವು ದೇವಾಲಯಗಳ ಆಡಳಿತೆ ಇವುಗಳಲ್ಲಿ ಸರಕಾರದವರು ಪ್ರವೇಶಿಸುವದನ್ನು ಬಿಟ್ಟು ಬಿಟ್ಟಂದಿನಿಂದ ಅನೇಕ ದುರುಪಯೋಗಗಳೂ, ಅನ್ಯಾಯಗಳೂ ನಡಿಯುತ್ತವೆಂದೂ ಈ ಕುರಿತಾದ ರಿಲಿಜಿಯಸ್ ಎಂಡೌಮೆಂಟ್ ಆಕ್ಟನ್ನು ತಿದ್ದುಪಡಿ ಮಾಡಬೇಕೆಂದೂ ಅಪ್ಪಣೆಕೊಡಿಸಿದರು.

ಬ್ರಿಟಿಷ ಜನರಿಗೂ ನಮಗೂ ಪರಸ್ಪರ ಸಂಪರ್ಕವು ದೈವಸಂಘಟನೆಯಿಂದಾದದ್ದು. ಅವರ ಸಹವಾಸದಿಂದ ನಾವು ಕೃತಕೃತ್ಯರಾಗಬೇಕು. ನಾವು ಇತ್ತಂಡದವರು ಪರಸ್ಪರ ವಿಶ್ವಾಸದಿಂದಲೂ ದಯಾಭಾವದಿಂದಲೂ ಕೂಡಿಕೆಯಿಂದಲೂ ವರ್ತಿಸಬೇಕು. ನಮ್ಮ ಮುಂದಿರುವ ಕಾರ್ಯವು ಕಷ್ಟತರವೂ ಅನೇಕವೂ ಆಗಿದೆ. ನಮ್ಮ ನಿರ್ದಿಷ್ಟ ನಿಲಯವು ದೂರವದೆ, ಆದರೂ ಈಶ್ವರನಲ್ಲಿ ವಿಶ್ವಾಸವಿಟ್ಟು ಸ್ಥಿರಪ್ರಯತ್ನದಲ್ಲಿ ಕೃತನಿಶ್ಚಯರಾಗಿ ನಾವು ಜಗದೀಶ್ವರನ ಕೈಯಲ್ಲಿ ನಮ್ಮನ್ನು ಒಪ್ಪಿಸಿಕೊಳ್ಳುವಾ. ಇವು ಅಧ್ಯಕ್ಷರ ಸಮಾಪ್ತಿಯ [illegible]

ನಮ್ಮ ಹೊಸ ವ್ಯಾಸರಾಯ ಪ್ರಭುಗಳು.

ಈಗ ಹಿಂದುಸ್ಥಾನದ ಗವರ್ನರ್ ಜನರಲ್ ಯಾ ವ್ಯಾಸರಾಯ ಪ್ರಭುಗಳ ಕೆಲಸದ ಅವಧಿಯು ಇದೇ ಬರುವ ನವಂಬರ ತಿಂಗಳಿಗೆ ಆಖೈರು ಆಗುವುದು. ಇವರ ಉತ್ತರಾಧಿಕಾರಿಗಳಾಗಿ ಹಲವು ಜನರ ಹೆಸರುಗಳು ಈ ಮೊದಲು ಸೂಚಿಸಲ್ಪಟ್ಟವಾದರೂ ಕಳೆದ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದಂತೆ ಬಹುಮಾನವಂತ ಸರ್ ಚಾರ್ಲ್ಸ್ ಹಾರ್ಡಿಂಗ್ ಪಿ ಸಿ ಜಿ ಸಿ ಎಮ್ ಜಿ ಕೆ ಸಿ ಎಮ್ ಜಿ, ಜಿ ಸಿ ವಿ ಒ ರವರನ್ನು ಹಿಂದುಸ್ಥಾನದ ವ್ಯಾಸರಾಯ ಪ್ರಭುಗಳನ್ನಾಗಿ ನೇಮಕಮಾಡಿರುವರೆಂತಲೂ, ಇವರಿಗೆ ಪ್ರಭು ಪದವಿಯ ಬಿರುದು ಸಹಾ ಸದ್ಯದಲ್ಲಿ ಕೊಡಲ್ಪಡುವುದೆಂದೂ ತಿಳಕೊಳ್ಳುತ್ತೇವೆ.

ಅಂಗ್ಲಾಳದಲ್ಲಿ ರಾಜಕೀಯ ವಿಷಯಗಳಲ್ಲಿ ಕನ್ಸರ್ವೇಟಿವ್ ಪ್ರಾಚೀನ, ಲಿಬರಲ್, ನವೀನ ಪಕ್ಷಗಳೆಂಬ ಎರಡು ತಂಡಗಳಿದ್ದು ವ್ಯಾಸರಾಯ ಪ್ರಭುಗಳ ನೇಮಕವನ್ನು ಮಾಡುವ ಸಂದರ್ಭದಲ್ಲಿ ಯಾವ ತಂಡದ ಕೈಕೆಳಗೆ ಸಾಮ್ರಾಜ್ಯ ಸರಕಾರವು ಇರುವುದೋ ಆ ತಂಡದವರು ತಮ್ಮ ಪೈಕಿ ಒಬ್ಬರನ್ನು ಈ ಪದವಿಗೆ ನೇಮಿಸುವ ವಾಡಿಕೆಯು ಈ ಮೊದಲು ಇತ್ತು. ಪ್ರಕೃತ ಅಂಗ್ಲಾಳದಲ್ಲಿ ಸಾಮ್ರಾಜ್ಯ ಸರಕಾರವು ಉದಾರ ಯಾ ಲಿಬರಲ್ ಪಕ್ಷದವರ ಕೈಕೆಳಗಿರುವುದಾದರೂ ಈ ಪಕ್ಷದವರು ಈ ವಾಡಿಕೆಯನ್ನನುಸರಿಸದೆ ರಾಜಕೀಯ ವಿಷಯಗಳಲ್ಲಿ ಉಭಯ ತಂಡಗಳಲ್ಲಿ ಸೇರಿದ ಸರ್ ಚಾರ್ಲ್ಸ್ ಹಾರ್ಡಿಂಗರವರನ್ನು ನೇಮಿಸಿರುವರು. ಸರ್ ಚಾರ್ಲ್ಸ್ ಹಾರ್ಡಿಂಗರವರ ಪರಿಚಿತಿಯನ್ನು ತಿಳಕೊಳ್ಳುವುದು ಈ ಸಂದರ್ಭದಲ್ಲಿ ಉಚಿತ.

ಸರ್ ಚಾರ್ಲ್ಸರವರಿಗೆ ಈಗ ವಯಸ್ಸು ಹೆಚ್ಚುಕಡಿಮೆ [illegible] ವರುಷವಾಗಿರುವುದು. ಇವರು [illegible] ರಲ್ಲಿ ನೇಮಕಪಟ್ಟರು. [illegible] ಸರ್ ಚಾರ್ಲ್ಸರವರ [illegible] ಮೊದಲಾದವುಗಳನ್ನು ತನಗಾಗಿ ತಿಳಕೊಂಡವರ [illegible] ರಲ್ಲಿ ರುಷ್ಯದೇಶದ ರಾಯಭಾರಿಗಳ ಕಾರ್ಯದರ್ಶಿಗಳಾಗಿ ಕಳುಹಿಸಲ್ಪಟ್ಟರು. [illegible] ನೇ ಇಸವಿಯಲ್ಲಿ ಇವರು ಫೋರೈನ್ ಎಫೇರ್ಸ್ ಅಂಡರ್ ಸಕ್ರಿಟರಿಗಳಾಗಿ ನೇಮಿಸಲ್ಪಟ್ಟರು. ರುಷ್ಯ ಜಪಾನ ಯುದ್ಧಕಾಲದಲ್ಲಿ ಇವರಿಗೆ ಸೆಂಟ್ ಪೀಟರ್ಸ್‌ಬರ್ಗಿನಲ್ಲಿಯ ರಾಯಭಾರಿ ಅಧಿಕಾರವು ದೊರೆಯಿತು. ಮಹತ್ವಪೂರ್ಣವಾದ ಎರಡು ದೇಶಗಳ ಸಹಾ ಸ್ನೇಹಿತರಾಗಿದ್ದ ಆಂಗ್ಲೇಯರ ನಿಷ್ಪಕ್ಷಪಾತ [illegible] ಅತಿ ಜಾಗರೂಕತೆಯಿಂದ ರಾಯಭಾರಿ ಕೆಲಸಗಳನ್ನು ನಿರ್ವಹಿಸಿ ವಿವೇಕಶಾಲಿಗಳೆಂದು ಇವರು ಖ್ಯಾತಿಹೊಂದಿದರು. ರುಷ್ಯದೇಶದ ಈ ರಾಯಭಾರಿ ಪದವಿಯಿಂದ ಹಿಂದಕ್ಕೆ ಬಂದೊಡನೆಯೇ ಫೋರೈನ್ ಆಫೀಸ್ ಅಂಡರ್ ಸೆಕ್ರೆಟರಿಗಳ ಸ್ಥಾಯಿ ಪದವಿಯು ಇವರಿಗೆ ಕೊಡಲ್ಪಟ್ಟಿತು. [illegible] ಚಕ್ರವರ್ತಿಗಳು ಯುರೋಪಿನಲ್ಲಿ [illegible] ಮಾಡಲು [illegible] ಮತ್ತು [illegible] ನೇ ಇಸವಿಗಳಲ್ಲಿ ಮಾಡಿದ ದೇಶ ಯಾತ್ರೆಗಳಲ್ಲಿ ಸರ್ ಚಾರ್ಲ್ಸರವರು ಚಕ್ರವರ್ತಿಯವರ [illegible] ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದರು. ಈ ಸಮ್ಮಂದದಿಂದ [illegible] ಇವರಿಗೆ [illegible] ಲಿಕ್ಕೆ ಸಾಕಾದ [illegible] ವರು.

ಹಿಂದುಸ್ಥಾನವನ್ನು ಆಳಿದ್ದ ಗವರ್ನರ್ ಜನರಲ್ ಲಾರ್ಡ್ ಹಾರ್ಡಿಂಗ್ ಪ್ರಭುಗಳ ಮೊಮ್ಮಗ ಸರ್ ಚಾರ್ಲ್ಸ್ ಹಾರ್ಡಿಂಗರವರಾಗಿರುವರೆಂದು ತಿಳಕೊಳ್ಳುತ್ತೇವೆ. ಸರ್ ಚಾರ್ಲ್ಸರವರಿಗೆ ಎರಡು [illegible] ಗಂಡುಮಕ್ಕಳೂ ಒಬ್ಬ ಹೆಣ್ಣು ಮಗಳೂ ಇರುವರು.

ಸರ್ ಚಾರ್ಲ್ಸರವರು [illegible] ಶ್ರೇಷ್ಠರೆಂದಾಗಿ ಹೆಸರುವಾಸಿಯಾಗಿದ್ದರೂ ದೊಡ್ಡ ದೊಡ್ಡ ರಾಷ್ಟ್ರಗಳನ್ನಾಳುವರೆ ಬೇಕಾದ ರಾಜನೀತಿಜ್ಞತೆಯು ಇವರಲ್ಲಿ ಹ್ಯಾಗಿರುವುದೆಂಬುದು ಈ ವರೆಗೆ ಪರೀಕ್ಷಿಸಲ್ಪಡಲಿಲ್ಲ. ತಂತ್ರೋಪಾಯಗಳಿಗಿಂತ ಉದಾರಮತಿಯ ರಾಜನೀತಿಜ್ಞತೆಯೇ ಪ್ರಕೃತ ಹಿಂದುಸ್ಥಾನವನ್ನಾಳುವವರಲ್ಲಿ ಇರಬೇಕಾಗುವುದು. ಸರ್ ಚಾರ್ಲ್ಸ್ ಹಾರ್ಡಿಂಗರವರು ಇಂತಹ ಉದಾರ ಮತಿಯನ್ನು ಪ್ರದರ್ಶಿಸಿ ಸಮರ್ಪಕವಾದ ರೀತಿಯಲ್ಲಿ ಈ ಮಹತ್ತಾದ ಪದವಿಯ ಕಾರ್ಯನಿರ್ವಾಹವನ್ನು ಮಾಡುವರಾಗಿ ಹಾರೈಸುವಾ.

ಇಹಲೋಕದಲ್ಲಿ ಸರ್ವಸಿದ್ಧಿ ಪ್ರದಾಯಕವಾದುದು ಯಾವುದು?

ಜೇಮ್ಸ ಬುಕೆನನ್‌ಡ್ಯೂಕ ಎಂಬವರು ಅಮೇರಿಕದ ಒಬ್ಬ ಸಂಪನ್ನ ಮಹಾಶಯರು. ಭೂಲೋಕದ ಹೊಗೆಸೊಪ್ಪಿನ ವ್ಯಾಪಾರವೆಲ್ಲವೂ ಇವರ ಅಧೀನತೆಯಲ್ಲಿರುವುದು. ಅಮೇರಿಕದ ಮತ್ತು ಯುರೋಪಖಂಡದ ತಂಬಾಕು ಕಂಪೆನಿಗಳ ಅಧ್ಯಕ್ಷರಾಗಿ ಇವರಿಗೆ ಹೆಚ್ಚುಕಡಿಮೆ ಮೂರುಲಕ್ಷ ರೂಪಾಯಿಗಳಷ್ಟು ವೇತನವು ದೊರಕುವುದು. [illegible]

ಇವರ ತಂದೆಯಾದರೋ ಸಾಧಾರಣ ಬಡವನೇ ಆಗಿದ್ದ [illegible]. ಸಣ್ಣದೊಂದು ಗದ್ದೆಯು ಮಾತ್ರ ಇವನಿಗಿದ್ದು ಹೊಗೆಸೊಪ್ಪಿನ ವ್ಯವಸಾಯದಿಂದ ಕುಟುಂಬದ ಪೋಷಣೆಯನ್ನು ಮಾಡುತ್ತಿದ್ದನು. ಮೂರು ಜನ ಗಂಡುಮಕ್ಕಳಲ್ಲಿ ಕಿರಿಯವನಾದ ಜೇಮ್ಸು ಬುಕೆನೆನ್ ಡ್ಯೂಕನು ಶಾಲೆಯಲ್ಲಿ ಅಭ್ಯಾಸಹೊಂದಿದ ನಂತರ ಕೊಲೇಜಿನ ವಿದ್ಯಾಭ್ಯಾಸವನ್ನು ಈ ತನ್ನ ಕಿರೆಮಗನಿಗಾದರೂ ಕೊಡಬೇಕೆಂಬ ಭಾವನೆಯಿಂದ ತಂದೆಯು ಜೇಮ್ಸನಿಗೆ ಪ್ರೌಢ ವಿದ್ಯಾಭ್ಯಾಸವನ್ನು ಹೊಂದುವಗೋಸುಗ ಕಾಲೇಜಿಗೆ ಹೋಗಬೇಕೆಂದು ಆಜ್ಞಾಪಿಸಿದನು. ಆದರೆ ಮಗನಲ್ಲಿ ಕಾಲೇಜು ವಿದ್ಯಾಭ್ಯಾಸದ ಅಭಿಪ್ರಾಯವು ಬೇರೆಯಾಗಿತ್ತು. ಬರಿಯಲೂ, ಓದಲೂ, ಚೆನ್ನಾಗಿ ಲೆಕ್ಕಮಾಡಲೂ ತನಗೆ ಗೊತ್ತಿರುವುದು. ಕೊಲೇಜು ವಿದ್ಯಾಭ್ಯಾಸಕ್ಕೆ—ತನಗೆ ಸಮಯವೂ ಇಲ್ಲ. ಅಭಿರುಚಿಯೂ ಇಲ್ಲ, ಅದು ನಮಗೆ ಸಲ್ಲದ ಅಭ್ಯಾಸವು ಎಂತ ತಂದೆಯನ್ನು ಸಮಾಧಾನ ಪಡಿಸಿದನು.

ಹದಿನೆಂಟು ವರುಷದ ಪ್ರಾಯದ ಹುಡುಗ, ಪ್ರೌಢ ವಿದ್ಯಾಭ್ಯಾಸವು ತನಗೆ ಬೇಡ ಎಂತ ತಿರಸ್ಕರಿಸಿಬಿಟ್ಟಿರುವನು. ವಿದ್ಯಾಭ್ಯಾಸಕ್ಕೆ ತನಗೆ ಸಮಯವಿಲ್ಲವೆಂತ ಹೇಳಿರುವನು. ಬೇರೆ ಯಾವ ವಿಧದಿಂದ ಈತನ ಸಮಯ ವಿನಿಯೋಗವು ಆಗಿತ್ತು? ತನಗೆ ವೃತ್ತಿಯು ಇಲ್ಲವೆಂತ ಅಲ್ಲಲ್ಲಿ ಹಂಬಲಿಸಿ ತಿರುಗಾಡಿದನೋ, ಅಥವಾ ವಿದ್ಯೆಯಲ್ಲಿ ಅಭಿರುಚಿಯಿಲ್ಲವೆಂತ ಪ್ರತಿ ಸಾಯಂಕಾಲ ೩ ಘಂಟೆಯಿಂದ ರಾತ್ರೆ ೧೦ ಘಂಟೆಗಳ ವರೇಗೆ ಊರ ಮೈದಾನಿನಲ್ಲಿ [illegible] ತಂದೆಯ ಗದ್ದೆಯಲ್ಲಿ ಬೆಳೆಯುವಂಥಾ ಹೊಗೆಸೊಪ್ಪಿನ ಸಿಗರೆಟುಗಳನ್ನು ಸೇದಿಕೊಂಡು ಹಲವು ಜನ ಸಂಗಾತಿಗಳೊಂದಿಗೆ ಕಾರ್ಯಕ್ಕೆ ಬಾರದ ಮಾತು ಪ್ರಸಂಗಗಳಲ್ಲಿ ಕಾಲಕಳೆಯುತ್ತಿದ್ದನೋ? ಇಂಥಾ ವರ್ತನೆಗೆ ಆತನು ಬಲಿಬೀಳಲಿಲ್ಲ. ದೈವವಶಾತ್ ತಂದೆಯ ವೃತ್ತಿಯನ್ನು ಆತನು ತುಚ್ಛವೆಂತ ಎಣಿಸಲಿಲ್ಲ.

ಕಾಲೇಜಿಗೆ ಹೋಗುವ ಬದಲಿಗೆ ಆತನು ನೆಟ್ಟಗೆ ತಂದೆ ಬಳಿ ಗದ್ದೆ ವ್ಯವಸಾಯ ಮಾಡಲು ಹೋದನು. ನಮ್ಮ ದೇಶದಲ್ಲಿ ಓದು ಬರಹ ಗೊತ್ತಿಲ್ಲದ ಮೂಢಮತಿಗಳು ಮಾತ್ರ ನೇಗಿಲು ಹಿಡಿದು ವ್ಯವಸಾಯ ಕೆಲಸ ಮಾಡಬಹುದು. ಆ ದೇಶದಲ್ಲಿ ಹಾಗಲ್ಲ, ಸಾಧಾರಣ ವಿದ್ಯಾಭ್ಯಾಸವನ್ನು ಪಡೆದವರೂ ಸಹ ವ್ಯವಸಾಯ ಕೆಲಸಗಳನ್ನು ಮಾಡುವರೆ ಹೇಸುವುದಿಲ್ಲ. ಜೇಮ್ಸ ಬುಕೆನನ್ ಡ್ಯೂಕನು ಹೀಗೆ ಶಾಲೆಯನ್ನು ಬಿಟ್ಟಂದಿನಿಂದ ತನ್ನ ತಂದೆಯೊಂದಿಗೆ ವ್ಯವಸಾಯ ವೃತ್ತಿಯನ್ನನುಸರಿಸಿದನು. ಹೊಗೆಸೊಪ್ಪಿನ ವ್ಯವಸಾಯ ವೃತ್ತಿಯಿಂದ ಅದರ ವ್ಯಾಪಾರವನ್ನು ತಿಳಕೊಂಡು ಅನೇಕ ನಷ್ಟ ಕಷ್ಟಗಳನ್ನು ತಾಳಿದರೂ [illegible] ಸಾಹಸ ನಿರಂತರ ಪ್ರಯತ್ನ ತಾಳ್ಮೆ, ಚಾತುರ್ಯ ಕಾರ್ಯಪಟುತ್ವ ಮೊದಲಾದ ಗುಣಾತಿಶಯಗಳಿಂದ ಭೂಲೋಕದ ಹೊಗೆಸೊಪ್ಪಿನ ವ್ಯಾಪಾರವೆಲ್ಲವನ್ನು ತನ್ನ ಕೈವಶಮಾಡಿಕೊಂಡಿರುವನು. ಪ್ರತಿ ವ್ಯಾಪಾರದಲ್ಲಿ ಪ್ರತಿ ಕಡೆಯಲ್ಲಿ [illegible] ತೀಕ್ಷ್ಣ ಹೋರಾಟವಿರುವುದು. ಜೇಮ್ಸನಿಗೆ ಎದುರಾದಿಗಳ [illegible] ಹೋರಾಟದ [illegible] ಸಹ ಬಹಳವಾಗಿತ್ತು. ಆದರೆ ಇವನ ಅಪ್ರತಿಮ ಕಾರ್ಯಶಕ್ತಿಯು ಇವನಿಗೆ ವೃತ್ತಿಯಲ್ಲಿ ಜಯವನ್ನು ದೊರಕಿಸಿ ಕೊಟ್ಟಿತು.

ಪ್ರತಿನಿತ್ಯವೂ ಎಡೆಬಿಡದೆ ಒಂದೇ ಸಲ ಹತ್ತು ತಾಸುಗಳ ತನಕ ಕೆಲಸಮಾಡಲು ಈತನು ಶಕ್ತನಾಗಿರುವನು. ಕಾರ್ಯಪ್ರವರ್ತನೆ ವಿಷಯ ಇವನು ಒಂದು ಸಂದರ್ಭದಲ್ಲಿ ವ್ಯಕ್ತಪಡಿಸಿದ ಅನುಭವದ ಮಾತುಗಳು ನಮಗೆ ಇಹಲೋಕದಲ್ಲಿ ಸರ್ವಸಿದ್ಧಿ ಪ್ರದಾಯಕವಾದುದು ಯಾವುದೆಂಬುದನ್ನು ಸೂಚಿಸದೆ ಇರವು. ಯಾವೊಬ್ಬನಿಗೆ ಯಾವ ವೃತ್ತಿಯು ಪ್ರಿಯತಮವಾಗಿರುವುದೋ ಅದನ್ನೇ ಅವನು ಅತ್ಯುತ್ಕೃಷ್ಟ ರೀತಿಯಲ್ಲಿ ಮಾಡಲು ಸಮರ್ಥನಾಗುವನು. ಒಂದು ವೃತ್ತಿಯಲ್ಲಿ ಉಪಕ್ರಮಿಸಿ ಅದನ್ನು ತನಗೆ ಪ್ರಿಯಕರವಾಗಿ ಮಾಡಲು ಯಾವಾತನಿಗೆ ಅಸಾಧ್ಯ ತೋರುವುದೋ, ಅದನ್ನು ಆತನು ತತಕ್ಷಣವೇ ಬಿಟ್ಟುಬಿಡಬೇಕು. ಯಾಕಂದರೆ ವೃತ್ತಿಗಳ ಹೋರಾಟವಿರುವ ಈ ದಿನಗಳಲ್ಲಿ ಕಾರ್ಯಸಾಧನೆಯಲ್ಲಿ ಕಾರ್ಯಕ್ರಮದಲ್ಲಿ ಸಂತೋಷವಿರಬೇಕು. ಸಂತೋಷವಿಲ್ಲದೆ ಸಾಧನೆಯಲ್ಲಿ ಉತ್ಸಾಹವಿಲ್ಲ, ಉತ್ಸಾಹವಿಲ್ಲದೆ ಆಸಕ್ತಿಯಿಲ್ಲ. ಕೆಲಸದಲ್ಲಿ ಪ್ರೀತಿಯನ್ನುಂಟುಮಾಡಿದೊಡನೆ ಅದರಲ್ಲಿ ಸಂತೋಷವೂ, ಉತ್ಸಾಹವೂ, ಆಸಕ್ತಿಯೂ ನಮ್ಮಲ್ಲಿ ತೋರಿ ವೃತ್ತಿಯಲ್ಲಿ ಜಯಲಕ್ಷ್ಮಿಯು ನಮಗೆ ಪ್ರಸನ್ನಳಾಗುವಳು. ಈ ರೀತಿ ಕೆಲಸದಲ್ಲಿ ಪ್ರವರ್ತಿಸುವವನು ಎಂದೂ ಕೆಲಸಸಾಧನೆಯಲ್ಲಿ ಜಯಶೀಲನಾಗದಿರನು. ಈ ಸಿದ್ಧಾಂತವನ್ನು ತಾನು ಅನುಸರಿಸಿದ್ದು ಹೊರತು ಲಕ್ಷಕಟ್ಟಳೆಯಲ್ಲಿ ತನ್ನ ಕೈಕೆಳಗೆ ಹೊಗೆಸೊಪ್ಪಿನ ಕಾರಖಾನೆಗಳಲ್ಲಿ ಕೆಲಸ ಮಾಡುತ್ತಿರುವವರಲ್ಲಿ ಸಹಾ ವ್ಯಕ್ತವಾಗಿರುವುದನ್ನು ತಾನು ಸ್ವತಹಾ ಬಲ್ಲೆನೆಂದು ಬುಕೆನನು ಹೇಳಿರುವನು. ಈ ಹೊಗೆಸೊಪ್ಪಿನ ವ್ಯಾಪಾರದ ವೃತ್ತಿಯಲ್ಲಿಯೇ ಜೇಮ್ಸನಿಗೆ ವಿನೋದ ವಿಹಾರಗಳೆಲ್ಲಾ ಅದರಲ್ಲಿಯೇ ಅವನ ಕಾರ್ಯಪ್ರವರ್ತನೆಯ ಕರ್ತವ್ಯ ಕರ್ಮಗಳು.

ಜೇಮ್ಸ ಬುಕೆನನ್ ಡ್ಯೂಕರವರು ಕಾಲೇಜುಗಳಲ್ಲಿ ಕಲಿತುಕೊಂಡು ಉತ್ಸಾಹಯುತವಾದ ಉದ್ಯಮವೇ ಸರ್ವ ಇಷ್ಟಾರ್ಥಗಳನ್ನು ಸಿದ್ಧಿಗೊಳಿಸುವುದೆಂಬ ಸಿದ್ಧಾಂತವನ್ನು ತಾವು ಓದಿದ ಪುಸ್ತಕಾನುಭವದಿಂದ ಹೇಳಿದ್ದಲ್ಲ; ತಮ್ಮ ಅನುಭವದಿಂದ [illegible] ಹೇಳಿದ್ದಾಗಿರುತ್ತದೆ. ಬುಕೆನನರವರ ಈ ಅನುಭವ ವಚನಗಳು [illegible]

[illegible] ಬಯಸಾಲಿಯಾಗಲಿಕ್ಕಿಲ್ಲ. ಹೀಗೆ ಒಂದು ವೇಳೆ ಅಲ್ಪಸ್ವಲ್ಪ ದ್ರವ್ಯವನ್ನು ಸಂಪಾದಿಸುವರೆ ಇಂಥವನು ಶಕ್ತನಾದರೂ ತನ್ನ ಜೀವಿತವು ತನಗಾದರೂ ಇತರರಿಗಾದರೂ ಸಾರ್ಥಕವಾಗಿ ಮಾಡಲಿಕ್ಕೆ ಇಂಥವನಿಂದ ಅಸಾಧ್ಯವಾಗಿರುವುದು

ಉತ್ಸಾಹವಿರುವ ಕೆಲಸದ ವಿಷಯದಲ್ಲಿ ಖ್ಯಾತಿಹೊಂದಿದ ಡಾಕ್ಟರರುಗಳ ಅಬಿಪ್ರಾಯವೇನು? ಔಷಧಿಗಳ ಮೂಲಕ ಗುಣಹೊಂದದ ರೋಗಿಗಳಿಗೆ ತಮಗೆ ಪ್ರೀತಿಕರವಾದ ಕೆಲಸ ಪ್ರವರ್ತನೆಯನ್ನು ಮಾಡಲಿಕ್ಕೆ ಹೇಳಿ ಇವರಿಗೆ ಇಂಥಾ ವೃತ್ತಿಗಳಲ್ಲಿ ಉಂಟಾದ ಉತ್ಸಾಹದಿಂದ ರೋಗಗಳನ್ನು ಅನೇಕ ಸಂದರ್ಭಗಳಲ್ಲಿ ಗುಣಪಡಿಸಿದ್ದುಂಟು ದುರ್ಬಲತೆಗೆ ಅನೇಕ ವಿಧದ ಧಾತುವರ್ಧಕ ಔಷಧಿಗಳನ್ನು ವೈದ್ಯರು ನಿರ್ಮಿಸಿರುವರು ಆದರೆ ಕೆಲಸ ಪ್ರವರ್ತನೆಯಲ್ಲಿ, ಕೆಲಸ ಸಾಧನೆಯಲ್ಲಿ, ಕೆಲಸ ಶ್ರಮದಲ್ಲಿ, ಪ್ರೀತಿ, ಉಲ್ಲಾಸ ಇದರಷ್ಟು ಗುಣಕಾರಿಯಾದ ಔಷಧವು ಮತ್ತೊಂದು ಯಾವುದಿರುವುದು? ಎಲ್ಲಾ ವಿಧದ ದುರ್ಬಲತೆಯು ಈ ಪರಿಶ್ರಮದಿಂದ ದೂರವಾಗುವುದು

ಜೇಮ್ಸ್ ಬುಕೆನನ ಡ್ಯೂಕನು [illegible] ಕೆಲಸ ಪ್ರವರ್ತನೆಯಲ್ಲಿ ಉತ್ಸಾಹವನ್ನುಂಟುಮಾಡಿಕೊಂಡು ತನ್ನ ವೃತ್ತಿಯ [illegible] ಕಟ್ಟಿಳೆಯ ಧನಸಂಗ್ರಹವು ಇವರಿಗಾಯಿತು ಈ [illegible] ಹುದಿದಿಡದೆ ಇದರಿಂದ ದೊಡ್ಡ ದೊಡ್ಡ ವ್ಯಾಪಾರ [illegible] ಗಳನ್ನೂ ಸ್ಥಾಪಿಸುವವರಾದರು ಇದರಿಂದ [illegible] ದೊರಕಿತು, ಉದರಪೋಷಣೆಯು ಸಾಧ್ಯವಾಯಿತು [illegible] ಧರ್ಮದಿಂದ ಅರ್ಥವೂ—ದ್ರವ್ಯಸಂಪಾದನೆಯೂ—[illegible] ಇಷ್ಟಯೆಂಬ ಕಾಮವೂ, ಇದನ್ನೆಲ್ಲಾ ಕೈವಶಮಾಡಿಕೊಂಡ್ಡಾರ [illegible] ಮೋಕ್ಷಮಾರ್ಗವೂ ಇವರಿಗೆ ಸಾಧ್ಯವಲ್ಲವೆಂತ ಯಾರು ತಾನೇ ಹೇಳಬಲ್ಲರು! ಆದ್ದರಿಂದ ಇಹಲೋಕದಲ್ಲಿ ಸರ್ವಸಿದ್ಧಿ ಪ್ರದಾಯಕವಾದದು ಯಾವುದು? ಕೆಲಸ ಪ್ರವರ್ತನೆಯು ಉತ್ಸಾಹಯುತವಾದ ಕೆಲಸ ಪ್ರವರ್ತನೆಯು V. A. H.

ಆಯುರ್ವೇದ ಪುನರುಜ್ಜೀವನ

ಶಾರೀರ ಶಾಸ್ತ್ರ

ಪಾಶ್ಚಾತ್ಯರು 'ಅನಾಟಮಿ' ಎಂಬದಾಗಿ ಹೇಳುತ್ತಿರುವದನ್ನೇ ಆಯುರ್ವೇದದಲ್ಲಿ ಶಾರೀರವೆಂದನ್ನುವರು ಇಲ್ಲಿ ಶಾರೀರವೆಂಬುವದಕ್ಕೆ ಶರೀರವನ್ನು ಅಧಿಕರಿಸಿ ಮಾಡಿದ ಶಾಸ್ತ್ರವೆಂದು ಅರ್ಥ ಪಾಶ್ಚಾತ್ಯ ಮತ್ತು ಪೌರಸ್ತ್ಯ ಶಾರೀರ ಶಾಸ್ತ್ರವನ್ನು ಹೋಲಿಸಿದರೆ ಪಾಶ್ಚಾತ್ಯರ ಶಾರೀರ ಶಾಸ್ತ್ರವು ಭೌತಿಕ ವಿಷಯವನ್ನು ಮಾತ್ರ ಬೋಧಿಸುವದು ಪೌರಸ್ತ್ಯರ ಶಾರೀರವು ಭೌತಿಕ ವಿಷಯ, ತಾತ್ವಿಕ ವಿಷಯ ಮನಸ್ಸು ಆತ್ಮ ಎಂಬವುಗಳನ್ನು ಬೋಧಿಸುವದು ಶಾರೀರ ಶಾಸ್ತ್ರವು ಮನುಷ್ಯ ಮಾತ್ರನಿಗೆ ತಿಳಿಯತಕ್ಕ ವಿಷಯವಾದರೂ ತಕ್ಕ ಅನುಕೂಲಗಳಿಲ್ಲದಿರುವದರಿಂದ ಸರ್ವ ಸಾಧಾರಣರಿಗೆ ದುರ್ಬೋಧ ವಿಷಯವಾಗಿದೆ ಶಾರೀರವನ್ನು ತಿಳಿಯದಿರುವದರ ಫಲವು ರೋಗ ಸಾಮಾನ್ಯಕ್ಕೆ ವಿಧೇಯವಾಗಿರುವದಾಗಿದೆ ಹಾಗಿರುವದಾದರೂ ಪ್ರತಿ ಒಬ್ಬನಿಂದಲೂ ತಿಳಕೊಳ್ಳಲ್ಪಡುವದು ಅಸಂಗತವಾಗಿದೆಯೆಂದು ಹೇಳಬಹುದು ಕಾರಣ ಪ್ರಪಂಚದ ವ್ಯಾಪಾರವು ವಿವಿಧ ವ್ಯವಸಾಯಗಳಿಂದ ನಡಿಯುವದು ಆ ವ್ಯವಸಾಯಗಳನ್ನೆಲ್ಲಾ ಒಬ್ಬನೇ ಸಾಧಿಸಲಶಕ್ಯನು ಒಂದೇ ವಿಧ ವ್ಯವಸಾಯದಿಂದ ಪ್ರಪಂಚ ವೃತ್ತಿಯು ನಡಿಯಲಾರದು

ಈ ವಿಷಯವನ್ನು ನಾವು ಚೆನ್ನಾಗಿ [illegible] ಸ್ವತಃ ನಾವು ಪ್ರಪಂಚದ ಕಡೆ ನೋಡುತ್ತಿದ್ದೇವಷ್ಟೆ [illegible] ಸಂಧಾರ [illegible] ಕಿಸೆಯಲ್ಲೂ ವಾಚ್ ಯಾ ಕಿಸೆಗಡಿಯಾರವೆಂಬ ಕಾಲ ಯಂತ್ರವು ತೋರುತ್ತಿರುವದಲ್ಲ ನಾವೆಲ್ಲಾ ಕಿಸೆ ಗಡಿಯಾರವನ್ನು ಮಾಡಬಲ್ಲೆವೊ? ಯಾ ಯಾವದೋ ಒಂದು ಕಾರಣದಿಂದ ಅದು ಕೆಟ್ಟು ಹೋದರೆ ಸರಿಮಾಡಬಲ್ಲೆವೊ? ಅರಿಯಲಾರದು ಅದನ್ನು ಮಾಡುವವರೂ, ಸರಿಮಾಡುವವರೂ ನಮ್ಮಗಳಿಂದ ಬೇರೆಯಾಗಿರುವರು ನಾವು ಬೇರೆ ಬೇರೆ ವೃತ್ತಿವುಳ್ಳವರಾಗಿರುವೆವು ಕಿಸೆಗಡಿಯಾರವೆಂಬವದು ಹ್ಯಾಗೆ ಉಂಟಾಯಿತು? ಅದಕ್ಕೆ ಸಮ್ಮಂಧವಾದ ಉಪಕರಣಗಳು ಯಾವವು ಅವುಗಳು ಯಾವ ಕ್ರಮದಲ್ಲಿ ಹ್ಯಾಗೆ ಪರಸ್ಪರ ಸೇರಿಕೊಂಡಿವೆ, ಅವುಗಳ ಸ್ವಭಾವವೇನು ಅವುಗಳಿಗೆ ವಿನಾಶವು ಹ್ಯಾಗೆ ಉಂಟಾಗುತ್ತದೆ, ಎಂಬ ಸೂಕ್ಷ್ಮ ವಿಚಾರವು ನಮ್ಮಂಥಾ ಸರ್ವ ಸಾಧಾರಣರ ತಲೆಗೆ ಹತ್ತುವದಿಲ್ಲ. ನಾವೆಲ್ಲಾ ಅದೊಂದೇ ವೃತ್ತಿಗೆ ಇಳಿದರೆ ಬಾಕಿ ವೃತ್ತಿಗಳೆಲ್ಲಾ ನಿಂತು ಹೋದಾವಲ್ಲವೇ ಅದಕ್ಕೋಸ್ಕರ ಗಡಿಯಾರ ಮಾಡುವವರು, ತಕ್ಕೊಳ್ಳುವವರು, ಹಾಳುಮಾಡುವವರು, ಸರಿಮಾಡುವವರು, ಎಂಬದಾಗಿ ಎಲ್ಲರೂ ಬೇಕಾಗಿರುವರು.

ಇದರಂತೆಯೇ ನಮ್ಮ ನಮ್ಮ ಶರೀರವನ್ನು ನಮ್ಮಗಳ ಕೈಗಾರಿಕೆಯಿಂದ ಮಾಡಿಕೊಳ್ಳಲಿಕ್ಕೆ ಅಶಕ್ಯವಾದರೂ ದೇವ ನಿರ್ಮಿತವಾದ ಶರೀರಕ್ಕೆ ಬರುವ ವ್ಯಾಧಿ ರೂಪವಾದ [illegible] ಹೋಗಲಾಡಿಸಬಹುದಷ್ಟೆ. ಕೆಟ್ಟುಹೋದ ಗಡಿಯಾರವನ್ನು ಸರಿಮಾಡು[illegible] ಗಡಿಯಾರದ ಆದ್ಯಂತ ಸಂಗತಿಗಳು ಹ್ಯಾಗೆ ಗೊತ್ತಿರಬೇಕೋ, [illegible]

[illegible]

ಆದ್ಯಂತ ಸಂಗತಿಯು ತಿಳಿದಿರಬೇಕು. ನಾವೆಲ್ಲರು [illegible] ನಮ್ಮ ನಮ್ಮ ಶರೀರದ ಸಂಗತಿಯು ಪ್ರತಿ ಒಬ್ಬರಿಗೂ ಗೊತ್ತಿರಲಾರದು, ಕಾರಣ ನಾವು ಬೇರೆ ಬೇರೆ ವ್ಯವಸಾಯ ಮಾಡುವವರಾಗಿದ್ದೇವೆ. ಆದರೆ ನಮ್ಮೆಲ್ಲ ಶರೀರದ ತಪ್ಪನ್ನು ತಿದ್ದುಪಾಟುಮಾಡುವವರಿಗೆ ಅದರ ಆದ್ಯಂತ ಸಂಗತಿಯು ತಿಳಿದಿರಬೇಕು ಹಾಗೆ ತಿಳಿಕೊಳ್ಳದವನಿಗೆ ನಮ್ಮ ಶರೀರದ ತಪ್ಪನ್ನು ತಿದ್ದುಪಾಟುಮಾಡುವದಕ್ಕೆ ಸಮರ್ಪಿಸುವದು ಯಮ ರಾಜ್ಯದ ಪ್ರಜಾಭಿವೃದ್ಧಿಗಲ್ಲವೇ ಹೇತುವಾಗಿರುವದು ಯಾರು ತಾನೆ ಕಿಸೆಗಡಿಯಾರದ ಸ್ವರೂಪವನ್ನು ತಿಳಿಯಲಾರದವನ ಹತ್ತರ ಅದನ್ನು ಸರಿಮಾಡಿಸಲಿಕ್ಕೆ ಸಮರ್ಪಿಸಿಯಾರು ಶರೀರದ ತಪ್ಪನ್ನು ತಿದ್ದುಪಾಟುಮಾಡುವವನೇ ವೈದ್ಯನೆಂದು ಪ್ರಪಂಚದಲ್ಲಿ ಕರಿಯಲ್ಪಡುವನು ವೈದ್ಯ ಶಬ್ದಕ್ಕೆ ಅದೊಂದು ಕೂಡ ಅರ್ಥವಾಗಿದೆ. ಹೀಗಿರತಕ್ಕ ವೈದ್ಯನು ಶಾರೀರ ಶಾಸ್ತ್ರದ ಗಂಧವನ್ನು ಕೂಡ ತಿಳಿಯದೆ ಶರೀರವನ್ನು ಸುಧಾರಿಸಲಿಕ್ಕೆ ವ್ಯವಸಾಯ ಮಾಡುವದು ಅದಷ್ಟು ಯಮಚಕ್ರವರ್ತಿಗೆ ಸಹಾಯಮಾಡುವದಲ್ಲವೇ? ಇಂಥ ಅಜ್ಞಾನಿಗಳ ಪ್ರವೃತ್ತಿಯೇ ನಮ್ಮ ಪ್ರಾಚೀನರ ವಿದ್ವತ್ತಿಕ್ಕೆ ತಿಲಾಂಜಲಿ ಸಮರ್ಪಿಸಿತು

ಇಂಥ ಮಹನೀಯರುಗಳ ಔದ್ಧತ್ಯವೆಂಬ ಉತ್ಪಾತ [illegible] ಆಯುರ್ವೇದವೆಂಬ ಮಹಾ ವೃಕ್ಷದ ಶಲ್ಯತಂತ್ರ ಮತ್ತು ಶಾಲಾಕ್ಯತಂತ್ರಗಳೆಂಬ ಬಲವಾದ ಗೆಲ್ಲುಗಳನ್ನು ಮುರಿದು ಹಾಕಿತು ಈ ರೀತಿ ಶಾಸ್ತ್ರ ವಿಮುಖರ [illegible] ಪ್ರವೃತ್ತಿಯಿಂದ ಪ್ರಾಚೀನ ಪೌರಸ್ತ್ಯ ವೈದ್ಯರಿಗೆ ಶಾರೀರ ಜ್ಞಾನವಿರಲಿಲ್ಲವೆಂಬ ಕಳಂಕವನ್ನು ಹಚ್ಚುವದು ಅನುಚಿತ [illegible] ಪಾಶ್ಚಾತ್ಯ ವೈದ್ಯರು ಮೃತ ಮಾನುಷರನ್ನೂ [illegible] ಜೀವ ತಿರ್ಯಗ್ಜಂತುಗಳನ್ನೂ ಕೊಯಿದು ಪ್ರತ್ಯಕ್ಷವಾಗಿ ಸೂಕ್ಷ್ಮ ಸೂಕ್ಷ್ಮ ಸಂಗತಿಗಳನ್ನು ಹ್ಯಾಗೆ ಕಂಡು ಹಿಡಿಯುತ್ತಿದ್ದಾರೆಯೋ ಅದರಂತೆ ಪೌರಸ್ತ್ಯ ಪ್ರಾಚೀನ ವೈದ್ಯರೂ ಕಂಡುಹಿಡಿದಿದ್ದರೆಂಬದಾಗಿ ಅನೇಕ ಕಾರಣಗಳಿಂದ ನಮಗೆ ಮುಂದಕ್ಕೆ ಸ್ಪಷ್ಟವಾಗುವದು ವೈದ್ಯನೆಂಬವನು ಶಾರೀರ ಶಾಸ್ತ್ರವನ್ನು ಚನ್ನಾಗಿ ತಿಳಕೊಳ್ಳತಕ್ಕದ್ದೆಂಬದಾಗಿ ಚರಕ ಸುಶ್ರುತ ಮತ್ತು [illegible] ಹೃದಯಗಳೆಂಬ ಗ್ರಂಥಗಳಲ್ಲಿ ಪದೇ ಪದೇ ತಿಳಿದು ಬರುತ್ತದೆ ಅದಲ್ಲದೆ ವಾಗ್ಭಟನು ಗ್ರಂಥಾರಂಭಾಧ್ಯಾಯದಲ್ಲಿ ಯೇ—ತೇಷಾಂ ಕಾಯಮನೋಭೇದಾದಧಿಷ್ಠಾನ ಮಪಿದ್ವಿಧಾ —ಅರ್ಥ (ದೋಷಗಳಿಗೆ ಶರೀರ ಮತ್ತು ಮನೋಭೇದಗಳಾದ ಆಧಾರವೂ ಕೂಡ ಎರಡು ಪ್ರಕಾರವಾಗಿದೆ) ಎಂದು ಹೇಳಿದ್ದಾನೆ ಹೀಗೆ ಹೇಳುವ ವಾಗ್ಭಟನ ತಾತ್ಪರ್ಯವೇನಂದರೆ—ಜ್ವರಾದಿಗಳಿಗೆ ಆಧಾರವಾಗಿರುವದು ಭೌತಿಕ ಶರೀರ [illegible] ವಿಷಯದರ್ಶಕವಾದ ಅಭೌತಿಕ ಮನಸ್ಸೆಂಬುದು ಅಪಸ್ಮಾರ ಮೊದಲಾದ ವ್ಯಾಧಿಗಳಿಗೆ ಆಧಾರವಾಗಿರುವದು ಆದ್ದರಿಂದ ಜ್ವರಾದಿಗಳ [illegible] ದ್ಯಂತವನ್ನು ತಿಳಕೊಳ್ಳುವವನು ಭೌತಿಕ ಶರೀರದ ಆದ್ಯಂತವನ್ನು ತಿಳುಕೊಳ್ಳಬೇಕು ಅಪಸ್ಮಾರಾದಿಗಳ [illegible] ದ್ಯಂತವನ್ನು ತಿಳುಕೊಳ್ಳಬೇಕಾದರೆ ಮನಸ್ಸಿನ [illegible] ದ್ಯಂತವನ್ನು ತಿಳಕೊಳ್ಳಬೇಕು ಈ ವಿಷಯವನ್ನು ಅವನೇ ನಿಧಾನ ಸ್ಥಾನದಲ್ಲಿ ಸ್ಪಷ್ಟಪಡಿಸಿದ್ದಾನೆ ಚರಕ ಶಾರೀರಸ್ಥಾನದಲ್ಲಿ—ಸರ್ವದಾ ಸರ್ವಥಾ ಸರ್ವಂ ಶರೀರಂ ವೇದಯೋ ಭಿಷಕ್ ಆಯುರ್ವೇದಂ ಸಕಾತ್ಸ್ನ್ಯೇನ ವೇದಲೋಕಸುಖಪ್ರದಂ ಶರೀರಸಂಖ್ಯಾಂ ಯೋವೇದ ಸರ್ವಾವಯವಶೋ ಭಿಷಕ್ ತದಜ್ಞಾನ ನಿಮಿತ್ತೇನ ಸಮೋಹೇನ ನಯುಜ್ಯತೆ। ಅಮೂಢೋ ಮೋಹ ಮೂಲೈಶ್ಚ ನ ದೋಷೈರಭಿಭೂಯತೇ (ಅರ್ಥ—ಯಾವವೈದ್ಯನು ಸದಾಕಾಲದಲ್ಲಿಯೂ ಶರೀರದ ಸರ್ವಾಂಶವನ್ನು ತಿಳಕೊಂಡೇ ಇರುತ್ತಾನೋ ಅವನು ಜನಗಳಿಗೆ ಸುಖವನ್ನುಂಟುಮಾಡುವ ಆಯುರ್ವೇದವನ್ನು ಸರ್ವಾಂಶದಿಂದ ತಿಳಿಯುತ್ತಾನೆ ಯಾವಾತನು ಅಂಗ ಪ್ರತ್ಯಂಗ ಸ್ವರೂಪದಿಂದ ಶರೀರದ ಪರಿಮಿತಿಯನ್ನು ತಿಳಿಯುತ್ತಾನೋ ಅಂಥಾ ವೈದ್ಯನು ತದಜ್ಞಾನ ಕಾರಣದಿಂದುಂಟಾಗ ಮೋಹಾದಿಗಳ ವಿರಮತ್ವದಿಂದ ಸೇರಲ್ಪಡುವದಿಲ್ಲ ಕಾರಣ, ತಿಳುವಳಿಕೆಯುಳ್ಳವನು ಮೋಹಜನ್ಯವಾದ ದೋಷಗಳಿಂದ ತಿರಸ್ಕರಿಸಲ್ಪಡುವದಿಲ್ಲ ಎಂದು ಹೇಳಲ್ಪಟ್ಟಿದ) ವೈದ್ಯನೆಂಬವನು ಶರೀರ ಶಾಸ್ತ್ರವನ್ನು ಚನ್ನಾಗಿ ತಿಳಕೊಳ್ಳಬೇಕು ಅನ್ಯಥಾ ಅವನು ಮೂಢನು ಅವನಿಂದ ಜನಗಳಿಗೆ ಸುಖ ಉಂಟಾಗಲಾರದು ಎಂಬದಾಗಿ ಈ ವಾಕ್ಯಗಳಿಂದ ನಮಗೆ ಸ್ಪಷ್ಟವಾಗುವದಿಲ್ಲವೇ? ಯದ್ಯಪಿ ಶರೀರದ ತಪ್ಪನ್ನು ಎರಡು ವಿಧದಿಂದ ಹೋಗಲಾಡಿಸುತ್ತಾರೆ ಒಂದು ಕೈಗಾರಿಕೇ ಬಲದಿಂದ ಇನ್ನೊಂದು ಸ್ವಭಾವ ಬಲದಿಂದ ಇಲ್ಲಿ ಕೈಗಾರಿಕೆ ಎಂಬದಕ್ಕೆ ಆಪರೇಷನ್ ಶಸ್ತ್ರಚಿಕಿತ್ಸೆ ಎಂತಲೂ, ಸ್ವಭಾವಬಲವೆಂಬದಕ್ಕೆ ಔಷಧವೆಂತಲೂ ತಾತ್ಪರ್ಯ ಆದ್ದರಿಂದ ಕೆಲವರು ಕೈಗಾರಿಕೆಯಿಂದ ಶರೀರದ ತಪ್ಪನ್ನು ತಿದ್ದು ಪಾಟು ಮಾಡುವವರಿಗನೇ ಶಾರೀರವಿದ್ಯೆ ಗೊತ್ತಿರಬೇಕು ಸ್ವಭಾವ ಬಲದಿಂದ ಶರೀರವನ್ನು ಸುಧಾರಿಸುವವರಿಗೆ ಶರೀರ ಶಾಸ್ತ್ರದ ಅಗತ್ಯವಿಲ್ಲವೆಂದು ಹೇಳ್ವಾರು ಅವರನ್ನೇ ಚರಕಾಚಾರ್ಯರು ಮೂಢರೆಂದು ಹೇಳಿರುವರು. ಸ್ವಭಾವ ಬಲದಿಂದ ಶರೀರದ ತಪ್ಪನ್ನು ಹೋಗಲಾಡಿಸುವವನಿಗೂ ಶರೀರ ಸ್ವಭಾವ ತಿಳಿಯದಿದ್ದರೆ ನಿಜವಾದ ಜ್ಞಾನ ಹ್ಯಾಗೆ ಉಂಟಾಗುತ್ತದೆ ಆದ್ದರಿಂದಲೇ ಚರಕಾಚಾರ್ಯರು ವಿಮಾನಸ್ಥಾನದಲ್ಲಿ—ಜ್ಞಾನಬುದ್ಧಿಪ್ರದೀಪೇನ ಯೋನಾವಿಶತಿ ತತ್ತ್ವವಿತ್ ಆತುರಸ್ಯಾಂತರಾತ್ಮಾನಂ ನಸರೋಗಾನ್ ಚಿಕಿತ್ಸತಿ॥ (ಅರ್ಥ—ನಿಜಾಂಶವನ್ನು ಅರಿತ ಯಾವ ವೈದ್ಯನು ಜ್ಞಾನ ಮತ್ತು ಬುದ್ಧಿಯೆಂಬ ದೀಪದೊಂದಿಗೆ ರೋಗಿಯ ಸೂಕ್ಷ್ಮ ಶರೀರ ಮತ್ತು ಶರೀರದ ಒಳಗಿನ ಸಂಗತಿ ಇವುಗಳನ್ನು ಪ್ರವೇಶಿಸುವದಿಲ್ಲವೋ [illegible] ರೋಗಗಳಿಗೆ ಚಿಕಿತ್ಸೆ ಮಾಡುವದಿಲ್ಲ) ಎಂದು ಹೇಳಿದ್ದಾರೆ [illegible]

[illegible]

ಜ್ಞಾನಪೂರ್ವಂ ಸಮಾಚರೇತ್ || ಯಸ್ತು ರೋಗಮವಿಜ್ಞಾಯ ... ಷಕ್ | ಅಪ್ಯೌಷಧ ವಿಧಾನಜ್ಞಃ ತಸ್ಯಸಿದ್ಧಿಯದೃಚ್ಛಯಾ || (ಅರ್ಥ—ಪ್ರಥಮ ದಲ್ಲಿ ರೋಗವನ್ನು ನಿಶ್ಚಯಿಸಬೇಕು, ಅನಂತರ ಔಷಧ ಸ್ವಭಾವವನ್ನು ತಿಳಿಯಬೇಕು, ಆಮೇಲೆ ಜ್ಞಾನಪೂರ್ವಕವಾಗಿ ಚಿಕಿತ್ಸೆಯನ್ನು ನಡಿಸಬೇಕು. ಯಾವಾತನು ರೋಗ ವನ್ನು ತಿಳಕೊಳ್ಳದೇನೇ ಔಷಧವಿಧಾನವನ್ನು ತಿಳಕೊಂಡು ಚಿಕಿತ್ಸೆಯನ್ನು ಶುರು ಮಾಡುತ್ತಾನೋ ಅಂಥವನಿಂದ ಒಂದು ವೇಳೆ ರೋಗವು ಗುಣವಾದ್ದಲ್ಲಿ ಅದು ಅವ ನಿಂದ ಗುಣವಾಯಿತೆಂದು ಹೇಳಕೂಡದು, ಅದು ಸ್ವಯಿಚ್ಛೆ ಯಾ ಸ್ವಭಾವದಿಂದ ಗುಣ ವಾಯಿತೆಂದು ತಿಳಕೊಳ್ಳಬೇಕು) ಎಂದು ವರ್ಣಿಸಿರುತ್ತಾನೆ. ಶಾರೀರ ವಿದ್ಯೆಯನ್ನು ತಿಳಕೊಳ್ಳದವನು ಹ್ಯಾಗೆತಾನೇ ರೋಗ ಪರೀಕ್ಷೆ ಮಾಡ್ಯಾನು, ಹ್ಯಾಗೆತಾನೆ ನಿಜವಾಗಿ ಶರೀರದ ತಪ್ಪನ್ನು ತಿದ್ದು ಪಾಟು ಮಾಡ್ಯಾನು ಸರ್ವಥಾ ಅಸಾಧ್ಯ ಸಂಗತಿ. ಮತ್ತು ಅಂಥ ವರ ಭರವಸದಲ್ಲಿ ಶರೀರವನ್ನು ಸಮರ್ಪಿಸುವದು ಭಯಂಕರವಲ್ಲವೇ ಎಂಬದು ಈ ಪ್ರಮಾಣಗಳಿಂದ ನಮಗೆ ವ್ಯಕ್ತವಾಗುವದಿಲ್ಲವೇ? ಆದ್ದರಿಂದ ಪ್ರತಿ ಒಬ್ಬ ವೈದ್ಯನು ಶಾರೀರ ವಿದ್ಯೆಯನ್ನು ಅವಶ್ಯವಾಗಿ ತಿಳಕೊಳ್ಳತಕ್ಕದ್ದೆಂದು ವ್ಯಕ್ತವಾದಂತಾಯಿತು. ಶಾರೀರಶಾಸ್ತ್ರದ ಸಾರಾಂಶವನ್ನು ಮುಂದಕ್ಕೆ ಬರಿಯುವೆನು.

ಕೆನರಾ ಹಿಂದೂ ಪರ್ಮನೆಂಟ್ ಫಂಡ್ ಮಂಗಳೂರು.

ಕಳದ ಮಾರ್ಚಿ ತಿಂಗಳ ತಾ ೩೧ಕ್ಕೆ ಅಂತ್ಯವಾಗುವ ನಾಲ್ಕನೇ ವರುಷದ ಈ ಫಂಡಿನ ವರದಿಯು ನಮ್ಮ ಹಸ್ತಗತವಾಗಿರುವುದು. ಪರಸ್ಪರ ಸಹಕಾರ ಯತ್ನಗಳಿಂದ ಸ್ವದೇಶಸ್ಥರು ನಮ್ಮ ಜಿಲ್ಲೆಯಲ್ಲಿ ಇತ್ತಲಾಗೆ ಸ್ಥಾಪಿಸಿದ ಒಂದೆರಡು ಸಂಸ್ಥೆಗಳಲ್ಲಿ ಇದೊಂದಾಗಿರುವುದು ಕೆಲವು ಜನ ಮುಂದಾಳುಗಳು ಸಾಮಾನ್ಯರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ ಅವರನ್ನೊಡಗೊಂಡು ಸಹಕಾರದಿಂದ ಒಂದುದ್ದಿಶ್ಯವನ್ನು ನೆರವೇರಿಸಲು ಪ್ರಯತ್ನಿಸಿದರೆ ಅದುಯಾವ ರೀತಿ ಸಾಧ್ಯವಾಗಬಹುದೆಂಬದು ಈ ಫಂಡಿನ ಅಭಿವೃದ್ಧಿಯ ವೃತ್ತಾಂತದಿಂದ ತಿಳಿದುಬರುವುದು. ಪರಸ್ಪರ ಸಹಕಾರದಿಂದ ದೇಶಾಭಿವೃದ್ಧಿಯನ್ನು ಸಾಧಿಸುವ ದೇಶವತ್ಸಲರಿಗೆ ಈ ಫಂಡಿನ ವರದಿಯು ತಕ್ಕ ಪ್ರೋತ್ಸಾಹವನ್ನು ಕೊಡದಿರದು.

ಗತವರುಷದಲ್ಲಿ ಫಂಡಿಗೆ ಏಸ್ ಮುನಾಫೆಯಾಗಿ ರೂ. ೧೫,೩೭-೦-೫ ಉಳಿದಿರುವುದು ಇದಕ್ಕೆ ಮೊದಲಿನ ವರುಷದಲ್ಲಿ ಈ ಸಂಖ್ಯೆಯು ರೂ ೯೩೫—೯—೮ ಆಗಿತ್ತು. ೧೯೦೮ನೇ ವರುಷದ ಜುಲಾಯಿ ತಿಂಗಳಿನಿಂದ ಫಂಡಿನವರು ಒಂದು ಸೇವಿಂಗ್ಸ್ ಬ್ಯಾಂಕ್ ಇಲಾಖೆಯನ್ನು ತೆರದಿರುವರು. ಈ ಇಲಾಖೆಯು ರಚಿಸೋಣಾದ್ದರಿಂದ ಅತಿ ಬಡವರಾದವರಿಗೆ ಸಹ ತಾವು ಉಳಿಸಬಹುದಾದ ಅತ್ಯಲ್ಪ ಮೊಬಲಗು ನಾಲ್ಕಾಣೆಗಳನ್ನು ಈ ಫಂಡಿನಲ್ಲಿ ರೇವಣಾತಿಯಾಗಿಡಲಿಕ್ಕೆ ಸಾಧ್ಯವಾಯಿತು. ಈ ರೀತಿ ರೇವಣಾತಿ ಇಡುವವರಿಗೆ ಟಪ್ಪಾಲು ಆಫೀಸುಗಳಿಗಿಂತ ಅಧಿಕವಾದ ಸೇಕಡಾ ರೂ ೪ ಆ ೬ ದರದ ಒತ್ತಿಯು ಇಲ್ಲಿ ದೊರಕುತ್ತದೆ ಫಂಡಿನ ಸೇವಿಂಗ್ಸ್ ಬ್ಯಾಂಕಿನ ಪ್ರಯೋಜನವನ್ನು ೧೯೦೮ನೇ ವರುಷಕ್ಕಿಂತ ಗತವರುಷದಲ್ಲಿ ಜನರು ಹೆಚ್ಚಾಗಿ ಪಡಕೊಂಡಿರುವಂಬದಾಗಿ ತೋರುತ್ತದೆ ಯಾಕಂದರೆ ೧೯೦೮ನೇ ವರುಷದಲ್ಲಿ ರೂ ೧,೦೧೧—೮—೦ ಆಗಿದ್ದ ಈ ರೇವಣಾತಿ ಮೊಬಲಗು ೧೯೦೯ನೇ ವರುಷದಲ್ಲಿ ರೂ ೭,೪೪೪—೬—೫ ಆಗಿರುವುದು ಇದೇ ರೀತಿ ಪಿಕ್ಸೆಡ್ ಡಿಪೋಜಿಟ್ ಯಾ ನಿಯಮಿತ ಅವಧಿಗಳ ವರೆಗೆ ಇಡೋಣಾಗುವ ಕಾಯಂ ರೇವಣಾತಿಯ ಮೊಬಲಗು ಸಹಾ ಹೆಚ್ಚು ಕಡಿಮೆ ಇಮ್ಮಡಿಸಿರುವುದೆಂದಾಗಿ ಹೇಳಬಹುದು ೧೯೦೮ ೯ನೇಯಲ್ಲಿ ರೂ ೧,೩೧೩೪—೧೪—೧೧ ಆಗಿದ್ದ ಈ ಮೊಬಲಗು ೧೯೦೯ ೧೦ನೇ ವರುಷದಲ್ಲಿ ರೂ ೨೧೩,೯೭೪—೧೪—೧೧ಕ್ಕೆ ಹೆಚ್ಚಿರುವುದು ಈ ರೀತಿ ಕೆನರಾ ಹಿಂದೂ ಪರ್ಮನೆಂಟ್ ಫಂಡು ಸ್ಥಾಪಿಸಲ್ಪಟ್ಟ ನಾಲ್ಕು ವರುಷಗಳಲ್ಲಿಯೇ ಜನರೆಲ್ಲರ ನಂಬಿಕೆಗೂ ಅನುರಾಗಕ್ಕೂ ಪಾತ್ರವಾದದ್ದು ತುಂಬಾ ಸಂತೋಷಕರ ವಿಷಯವಾಗಿರುವುದು ಮುಂದಿನ ವರುಷಗಳಲ್ಲಿ ಕಾಯಂ ರೇವಣಾತಿಯಾಗಿಯೂ, ಸೇವಿಂಗ್ಸ್ ಬೇಂಕ್ ರೇವಣಾತಿಯಾಗಿಯೂ ಈ ಫಂಡಿನಲ್ಲಿ ತಮ್ಮ ಹಣವನ್ನಿಡಲಿಕ್ಕೆ ಸವ ರೂ ಆತುರಪಡುವರಾಗಿ ಕೋರುತ್ತೇವೆ

ಏಸ್ ಮುನಾಫೆಯಾಗಿ ದೊರಕಿರುವ ರೂ ೧೫,೩೭—೦—೫ಯಿಂದ ಸೇಕಡಾ ೨೫ರಂತೆ ರೂ ೬,೧೨೭—೧೩—೬ನ್ನು ರಿಜರ್ವ ಫಂಡ್ ಯಾ ಸಂಚಯ ಫಂಡಿಗೆ, ರೂ. ೨೬೧೫—೧೦—೦ನ್ನು ಕಟ್ಟೋಣದ ಬಗ್ಗೆ ಫಂಡು, ಸಂಘದ ಆಯಾ ಅಧಿಕಾರಿಗಳ ಮತ್ತು ಡಿರೆಕ್ಟರರುಗಳ ಪ್ರತಿಫಲ ಮೊದಲಾದ ಇತರ ಖರ್ಚುಗಳ ಬಗ್ಗೆಯೂ ವಜಾ ಮಾಡಿ ರೂ ೯೫೩—೮—೧೧ನ್ನು ಹಿಶೆದಾರರಿಗೆ ಸೇಕಡಾ ೬ರ ದರದ ಮುನಾಫೆಯಾಗಿಯೂ ಸೇಕಡಾ ೧ರಂತೆ ಉಚಿತ ಧನವಾಗಿಯೂ ಕೊಟ್ಟಿರುವರು

ಸಂಘದ ಅಭಿವೃದ್ಧಿಯಲ್ಲಿ ಅನುದಿನ ಶ್ರಮಸಾಹಸಪಟ್ಟ, ಸಂಘದ ಟ್ರೆಜರರರಾದ ಹ್ಯಾಕೋರ್ಟ್ಟು ವಕೀಲ್ ಮ|ರಾ|ರಾ| ಕೆ. ಪಿ. ರಾಘುರಾಯರವರಿಗೂ, ಸಂಘದ ಕಾರ್ಯನಿರ್ವಾಹವನ್ನು ಬಹಳ ಜತನದಿಂದ ನಡಿಸಿದ ಸಂಘದ ಸೆಕ್ರಿಟರಿ ಮ|ರಾ|ರಾ| ಪಾಂಗಾಳ ... ಇವರ ... ರೀತಿಯಲ್ಲಿ ನಡಿಸಿದ್ದಕ್ಕೆ ಸಂಘದ ಹಿಸ್ಸೆದಾರರೆಲ್ಲಾ ಕೃತಜ್ಞರಾಗಿರುವರೆಂಬದಾಗಿ ಕೋರುತ್ತೇವೆ.

ಫಂಡಿನ ವರದಿಯ ಆರಂಭದಲ್ಲಿ ಡಿರೆಕ್ಟರರವರು, ಫಂಡಿನ ಪ್ರಥಮ ಅಧ್ಯಕ್ಷರೂ ಸ್ಥಾಪಕರೂ ಆದ ಗತಿಸಿದ ಅಮ್ಮೆಂಬಳ ಸುಬ್ರಾಯ ಪೈಗಳವರ ಮರಣದಿಂದುಂಟಾದ ನಷ್ಟವನ್ನೂ ಸಹಸಂತಾಪವನ್ನೂ ಸೂಚಿಸಿರುವರು ನಾವು ಹಿಂದೆಯೊಂದು ಸಂದರ್ಭದಲ್ಲಿ ಸೂಚಿಸಿದಂತೆ ಫಂಡಿನ ಅಧ್ಯಕ್ಷತೆಯನ್ನು ಕೀರ್ತಿಶೇಷ ಸುಬ್ರಾಯ ಪೈಗಳವರ ಅಗ್ರಜ ದಿವಾನ್‌ಬಹದೂರ್ ಮ|ರಾ|ರಾ| ಅ. ವೆಂಕಟರಮಣ ಪೈಗಳವರು ವಹಿಸಿಕೊಂಡಿರುವರು. ವಿವೇಕಶಾಲಿಗಳೂ, ಯತಾರ್ಥವಾದಿಗಳೂ ಎಂದು ಸರಕಾರದವರಿಂದ ಸಹಾ ಮನ್ನಿಸಲ್ಪಟ್ಟ ದಿವಾನ್‌ಬಹದೂರ ಪೈಗಳವರ ಆಡಳಿತೆಯಲ್ಲಿ ಈ ಕೆನರಾ ಹಿಂದೂ ಪರ್ಮನೆಂಟ್ ಫಂಡು ಇನ್ನಷ್ಟು ಅಭಿವೃದ್ಧಿಸಿ ಶಾಶ್ವತ ದ್ರವ್ಯನಿಧಿ ಎಂಬ ತನ್ನ ನಾಮಧೇಯವನ್ನು ಸಮರ್ಥಿಕೊಳ್ಳುವುದೆಂಬದಾಗಿ ನಂಬುದ್ದೇವೆ

ಪಟಗಳಿಂದ ಪ್ರಾಣದಾನ

ನನಗೆ ನಿಯಮಿತವಾದ ಕೆಲಸವೆಲ್ಲವೂ ಮುಗಿದಂತಾಯಿತು ಇನ್ನೇನೂ ಉಳಿದಿರುವುದಿಲ್ಲ. ಮಹಾರಾಜನು ಬರುವುದೊಂದೇ ಉಳಿದಿರುವುದು ಸುವಾಸನೆಯಿಂದ ಘಮಘಮಿಸುತ್ತಿರುವ ರಾಜೇಂದ್ರನ ಶಯನ ಮಂದಿರದ ಬಾಗಿಲಲ್ಲಿ ಕುಳಿತು ಆ ಸುವಾಸನೆಯನ್ನಾಘ್ರಾಣಿಸುತ್ತ ಧರಣೀಂದ್ರನ ಆಗಮನವನ್ನು ಇದಿರುನೋಡುತ್ತಿರುವೆನು" ಎಂದಾಲೋಚಿಸುತ್ತಿರುವಾಗಲೇ ಒಬ್ಬ ಸೇವಕನು ಬಂದು ಎಲೈ ಚಂಚಲನೇ! ಈ ದಿನ ಮಹಾರಾಜನು ಸತ್ಯಹರಿಶ್ಚಂದ್ರ ನಾಟಕವನ್ನು ನೋಡಲಪೇಕ್ಷಿಸಿರುವುದರಿಂದ ರಾತ್ರಿಯೆಲ್ಲ ಈ ಶಯನಾಗಾರರಕ್ಷಕನಾಗಿರತಕ್ಕುದೆಂದು ಸೂಚಿಸಿ ಹೊರಟು ಹೋದನು.

ದ್ವಾರಪಾಲಕನಾದ ಚಂಚಲನು ಶಯನಾಗಾರದ ಅಲಂಕಾರವನ್ನೆಲ್ಲಾ ಮತ್ತೊಮ್ಮೆ ಪರೀಕ್ಷಿಸಿ ತಾನು ಬಾಗಿಲಲ್ಲಿ ಕಾದಿರಬೇಕೆಂದು ಆಲೋಚಿಸಿ ಆ ಮಂದಿರದೊಳಗೆ ಸುಳಿದಾಡಲಾರಂಭಿಸಿದನು ಶಯ್ಯಾಮಂದಿರದ ಸೌಂದರ್ಯಕ್ಕೂ ಪುಷ್ಪಶಯ್ಯೆಯ ಮಾರ್ದವಕ್ಕೂ ಸುಗಂಧದ್ರವ್ಯಗಳ ಸುವಾಸನೆಗೂ ವಿಸ್ಮಿತನಾಗಿ "ಅಯ್ಯೋ! ನನ್ನ ಜನ್ಮದಲ್ಲಿ ಒಂದುಗಳಿಗೆಯಾದರೂ ಇಂತಹ ಸುಖವನ್ನು ಅನುಭವಿಸಲಾಗಲಿಲ್ಲ. ಸಾಯುವ ವರೆಗೂ ಸೇವಾವೃತ್ತಿಯಲ್ಲಿಯೇ ನನ್ನ ದೇಹವನ್ನು ಕೃಶಮಾಡುತ್ತಿರುವ ನಿರ್ಭಾಗ್ಯನಾದ ನನಗೆ ಇಂತಹ ಸುಖಶಯ್ಯೆಯ ಲಭ್ಯವೆಲ್ಲಿಯದು? ಆಹಾ! ವಿಧಿಯೇ! ನಾನೇನು ಪಾಪಮಾಡಿದೆನು! ನಾನು ನನ್ನ ರಮಣಿಯೊಡನೆ ಒಂದು ದಿನವಾದರೂ ಇಂತಹ ಸುಖಶಯ್ಯೆಯಲ್ಲಿ ಸುಖಿಸದಂತೆ ಅಸ್ತಿ ಮಾಡಿರುವ ನಿನ್ನ ಕೃತ್ಯಕ್ಕೆ ಧಿಕ್ಕಾರವಿರಲಿ! ವ್ಯರ್ಥವಾಗಿ ಯೋಚಿಸಿದುದರಿಂದ ಫಲವೇನು? ಹೇಗಾದರೂ ಆಗಲಿ ಇಂದು ರಾಜನು ಈ ಶಯ್ಯಾಗಾರಕ್ಕೆ ಬರುವುದು ಮಧ್ಯ ರಾತ್ರಿಯಲ್ಲಿಯೇ! ಅಷ್ಟರೊಳಗಾಗ ಈ ಸುಖಶಯ್ಯೆಯಲ್ಲಿ ಸ್ವಲ್ಪ ಹೊತ್ತಾದರೂ ಮಲಗಿ ನನ್ನ ಮನಸ್ಸನ್ನು ಸಂತೋಷಗೊಳಿಸುವೆನು ಇಂದು ನನಗೆ ಈ ಸುಖವನ್ನು ದೊರಕಿಸುವುದಕ್ಕಾಗಿಯೇ ಭೂಪನು ನಡುವಿರಳವರೆಗೂ ಬರದಂತೆ ವಿಧಿಯು ನಿಯಮಿಸಿರಬಹುದು ಏನು? ನಾನೊಬ್ಬನೇ! ನನ್ನ ರಮಣೀ ಮಣಿಯನ್ನು ಇಲ್ಲಿ ಕರತರಲಾಗುವುದೇ? ಅದು ಅಸಾಧ್ಯವಲ್ಲ ಅವಳಿಗೆ ಪ್ರಾಪ್ತಿಯಿಲ್ಲ ಅವಳೇ ಪಾಪಿನಿ ನಾನು ಪುಣ್ಯಶಾಲಿಯೇ ಸರಿ" ಎಂದು ಸಮಾಧಾನವನ್ನು ತೆಗೆದುಕೊಂಡು ಭೂಪಾಲನ ಮೃದು ಶಯ್ಯೆಯಲ್ಲಿ ಮಲಗತೊಡಗಿದನು ಕ್ಷಣಕಾಲವೇ ಆ ಸುಖವನ್ನು ಅನುಭವಿಸಿ ಎಚ್ಚರಗೊಳ್ಳಬೇಕೆಂದು ಗೊತ್ತುಮಾಡಿಕೊಂಡು ಮಲಗಿದನು ಎಂದೆಂದೂ ಕಾಣದ ಆ ಸುಖಶಯ್ಯೆಯ ಸ್ಪರ್ಶಮಾತ್ರದಿಂದಲೇ ಅವನಿಗ ಕುಂಬಕರ್ಣನ ಆವೇಶವುಂಟಾಯಿತು ನಿದ್ರಾಂಗನೆಗೆ ಪರವಶನಾದ ಚಂಚಲನು ಒಹಿರಿಂದ್ರಿಯವ್ಯಾಪಾರವಿಮುಖನಾಗಿ ಮೃದು ತಲ್ಪದಮೆಲೆ ಗಾಢ ನಿದ್ರೆಯಲ್ಲಿ ಸೇರಿಹೋದನು

ಮಹಾರಾಜನು ನಾಟಕವನ್ನು ನೋಡಲು ಮಹಾರಾಜ್ಞಿಯನ್ನು ಕರೆದನು. ಆಕೆಯು ತನಗೆ ದೇಹಾಲಸ್ಯವಾಗಿರುವುದರಿಂದ ಬರಲಾಗುವುದಿಲ್ಲವೆಂದು ಕ್ಷಮೆಯನ್ನು ಬೇಡಿಕೊಂಡಳು ರಾಜನು ಒಬ್ಬನೇ ನಾಟಕಗೃಹಾಭಿಮುಖನಾದನು ಮಹಾರಾಣಿಯು ಒಂದೆರಡು ಗಂಟೆಗಳ ಹೊತ್ತು ಸಖಿಯರಲ್ಲಿ ವಿನೋದದಿಂದಿದ್ದು ಶಯ್ಯಾಮಂದಿರಕ್ಕೆ ಬಂದಳು ಅಲ್ಲಿ ಮುಸುಕುಹಾಕಿಕೊಂಡು ಮಲಗಿದ್ದವನನ್ನು ನೋಡಿ ರಾಜನು ಸ್ವಲ್ಪ ಹೊತ್ತು ಮಾತ್ರ ನಾಟಕವನ್ನು ನೋಡಿಬಂದು ಮಲಗಿರಬಹುದೆಂದೂ ಗಾಢನಿದ್ರೆಯಿಂದ ಎಚ್ಚರಗೊಳಿಸಬಾರದೆಂದೂ ಆಲೋಚಿಸಿ, ಆ ಶಯ್ಯೆಯ ಮೇಲೆ ಅವನಿಗೆ ಸೋಂಕದಂತೆ ತಾನೂ ಮಲಗಿ ನಿದ್ರೆಹೋದಳು

ದೈವ ವಿಚಿತ್ರ—ಅನನುರೂಪವಾದ ಘಟನೆಯು ಏಕಶಯ್ಯೆಯಲ್ಲಿರಬೇಕಾದುದು ಅಮಾನುಷ ಸಂಕಲ್ಪಾತೀತವಾದುದು ಇಬ್ಬರೂ ಗಾಢನಿದ್ರಾಪರವಶರಾಗಿದ್ದರು.

ನಾಟಕವು ರಾತ್ರಿ ಎರಡುಗಂಟೆಗೆ ಮುಗಿಯಿತು. ರಾಜನು ತನ್ನ ಶಯನಗೃಹದಲ್ಲಿ ಮಲಗಲು ಬಂದನು. ಬಂದು ನೋಡಲು ಏಕ ಶಯ್ಯೆಯ ಮೇಲೆ ಎರಡು ವ್ಯಕ್ತಿಗಳೂ ಮುಸುಕಿಟ್ಟಿದ್ದುವು. ರಾಜನು, ತಾನು ನಾಟಕಕ್ಕೆ ಹೋದುದರಿಂದ ರಾಣಿಯು ತನ್ನ ಶಯ್ಯೆಯಲ್ಲಿ ತನ್ನ ಸಖಿಯನ್ನು ಮಲಗಿಸಿಕೊಂಡಿರಬಹುದೆಂದು ... ಮಧ್ಯರಾತ್ರಿ—ಬೇರೆ ಕಡೆಯಲ್ಲಿ ಮಲಗುವ ಸಂಭವವಿಲ್ಲ. ...

ಮುಖದ ಮೇಲಣ ಬಟ್ಟೆಯು ಜಾರಿತು. ಇನ್ನು ಹೇಳುವುದೇನು? ಮಹಾರಾಜನು ಮಂಗನಂತಾದನು. ಅವನ ಕೋಪಕ್ಕೆ ತಡೆಯುವವರಾರು? ಒರೆಯಿಂದ ಕತ್ತಿಯನ್ನು ಈಚೆಗೆ ಹಿರಿದನು. ಇಬ್ಬರನ್ನೂ ಅಲ್ಲೇ ಸಂಹರಿಸಿ ತಾನೂ ಪ್ರಾಣಹತ್ಯ ಮಾಡಿಕೊಳ್ಳಲು ಸಿದ್ಧಗೊಂಡನು. ಏನು? ಸರ್ವನಾಶ! ವಿಚಾರ ಮಾಡುವರಾರು? ಮಧ್ಯರಾತ್ರಿ ಮಹಾರಾಜನ ಇದಿರಿಗೆ ಮಹಾರಾಣಿಯು ವ್ಯಭಿಚಾರದ ಪರೀಕ್ಷೆಯಲ್ಲಿಯದು? ಪ್ರಪಂಚವನ್ನೇ ಎಲ್ಲರೂ ಬಿಡುವಾಗ ಪರೀಕ್ಷೆ ಎಲ್ಲಿಂದ ಬಂದಿತು! ಸಾಮಾನ್ಯಪುರುಷನಾದರೂ ತನ್ನ ಹೆಂಡತಿಯು ಪರಪುರುಷಾನುರಕ್ತೆಯೆಂದು ತಿಳಿದ ಮಾತ್ರದಿಂದಲೇ ಬಗೆಬಗೆಯ ಅನಾಹುತಗಳನ್ನುಂಟುಮಾಡುವನು. ಇಂತಹ ವಿಷಯದಲ್ಲಿ ಮಹಾರಾಜನು ಸಹಿಸುವುದುಂಟೇ? ಆಗ ಮಹಾರಾಜನು ತನ್ನ ಕತ್ತಿಯ ಕೊನೆಯಿಂದ ಜಾರಿದ್ದ ಮುಖದ ಬಟ್ಟೆಯನ್ನು ಮೆಲ್ಲನೆ ಸರಿ ಮಾಡಿದನು. ತನ್ನ ಶಯ್ಯಾಗಾರದ ದ್ವಾರಪಾಲಕನಾದ ಚಂಚಲನ ಮುಖವಾಗಿದ್ದಿತು. ಕೂಡಲೇ ರಾಜನು ರೋಷೋತ್ಫುಲ್ಲನಯನನಾಗಿ ತನ್ನ ಕತ್ತಿಯನ್ನು ಮೇಲಕ್ಕೆತ್ತಿ ಸುತ್ತಲೂ ನೋಡಿ ಹೊಡೆಯುವುದರೊಳಗಾಗಿ ಗೋಡೆಯ ಮೇಲೆ ತಗಲಿ ಹಾಕಿದ್ದ ಕನ್ನಡಿಯ ಪಟಗಳ ಕಡೆಗೆ ದೃಷ್ಟಿ ಬಿದ್ದಿತು. ಆ ಪಟಗಳಲ್ಲಿ ಈಗಣ ಕಾಲದಂತೆ ನಿರ್ಜೀವವಾದ ಬೊಂಬೆಗಳಿರಲಿಲ್ಲ. ಪ್ರತಿಯೊಂದು ಪಟವೂ ಅಕ್ಷರಗಳಿಂದ ಕೂಡಿದ್ದಿತು. ಆ ಪಟವು ದೃಷ್ಟಿಗೆ ಬಿದ್ದೊಡನೆಯೇ ಕತ್ತಿಯನ್ನು ಹಿಂದಕ್ಕೆ ತೆಗೆದುಕೊಂಡನು. ಪಟವನ್ನು ದೃಷ್ಟಿಸಿದನು. ಒಂದರಲ್ಲಿ "ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡು" ಎಂದೂ, ಮತ್ತೊಂದರಲ್ಲಿ "ಗೋಚರವಾದರೂ ವಿಚಾರಬೇಕು" ಎಂದೂ ಇನ್ನೊಂದರಲ್ಲಿ "ಕ್ಷಮೆಯಿಲ್ಲದವನು ಪಿಶಾಚಿ" ಎಂದೂ ಬರೆದಿದ್ದಿತ್ತು. ಆಗ ಮಹಾರಾಜನು ಚಿಂತಿಸಲಾರಂಭಿಸಿದನು. "ಈಗ ಪ್ರಮಾಣಿಸಿ ನೋಡುವುದೇನಿದೆ? ರಾಣಿಯು ಸೇವಕನೊಡನೆ ವ್ಯಭಿಚರಿಸುತ್ತಿರುವುದನ್ನು ನೋಡಿಯೂ ವಿಚಾರ ಮಾಡಬೇಕಾದುದೇನಿದೆ. ಆದರೆ ಹಾಗೂ ಮಾಡುವೆನು." ಎಂದು ಶಾಂತನಾಗಿ ಮೆಲ್ಲನೆ ಮಂಚದ ಕೆಳಗೆ ಅಡಗಿಕೊಂಡು ಅವರು ಎಚ್ಚರಗೊಳ್ಳುವಂತೆ ಅಲ್ಲಿನ ಒಂದು ಪದಾರ್ಥವನ್ನು ಕೆಳಗೆ ಕೆಡವಿಬಿಟ್ಟನು. ಸಾವಿರಾರು ನಗಾರಿಗಳನ್ನು ಬಾರಿಸಿದ್ದರೂ ಎಚ್ಚರವಾಗದ ನಮ್ಮ ಚಂಚಲನು ಈ ಸಣ್ಣ ಶಬ್ದದಿಂದ ಎಂದಿಗೂ ಎಚ್ಚರಗೊಳ್ಳಲಿಲ್ಲ. ರಾಜಪುತ್ರಿಯಾದ ಮಹಾರಾಣಿಯು ತತ್ಕ್ಷಣವೇ ನಿದ್ರಾಭಂಗದಿಂದ ಎಚ್ಚೆತ್ತವಳಾಗಿ ಭಯದಿಂದ ಸುತ್ತಲೂ ನೋಡಿದಳು. ಒಂದು ಪದಾರ್ಥವು ಮೇಲಿನಿಂದ ಕೆಳಗೆ ಬಿದ್ದುದನ್ನು ನೋಡಿ ಅದರಿಂದ ನಿದ್ರಾಭಂಗವುಂಟಾಯಿತೆಂದು ತಿಳಿದು, ತನ್ನ ಪತಿಗೆ ಎಚ್ಚರವಾಗದೇ ಇದ್ದುದಕ್ಕೆ ಆಶ್ಚರ್ಯಪಟ್ಟು, ಹಾಸ್ಯಮಾಡಲು ಪತಿಯನ್ನು ಎಬ್ಬಿಸಬೇಕೆಂದು ಸಮೀಪಕ್ಕೆ ಬಂದು ನೋಡಿದ ಕೂಡಲೇ, ಮುಖದ ಬಟ್ಟೆಯು ತೆರೆಯಲ್ಪಟ್ಟಿದ್ದ ಚಂಚಲದಾಸನ ಮುಖವು ಕಾಣಲ್ಪಟ್ಟಿತು. ರಾಣಿಯು ಮಹಾ ಕೋಪಭರಿತಳಾಗಿ ನೀಚನಾದ ಸೇವಕನು ತನ್ನನ್ನು ಮೋಸಗೊಳಿಸಿ ತನ್ನ ಪಾತಿವ್ರತ್ಯಕ್ಕೆ ಭಂಗವನ್ನು ತರುವ ಯೋಚನೆಯನ್ನು ಮಾಡಿದುದಕ್ಕೆ ತಕ್ಷಣವೇ ಅವನನ್ನು ಸಂಹರಿಸಿ ಏಕಶಯ್ಯೆಯಲ್ಲಿ ಮಲಗಿದ ದೋಷಕ್ಕಾಗಿ ತಾನೂ ಆತ್ಮಹತ್ಯವನ್ನು ಮಾಡಿಕೊಳ್ಳಲಪೇಕ್ಷಿಸಿದಳು. ಆದರೆ ಅವಳಲ್ಲಿ ಕತ್ತಿಯಿರಲಿಲ್ಲ. ಆ ಶಯ್ಯಾಗೃಹದಲ್ಲಿ ಎಲ್ಲಿಯಾದರೂ ಕತ್ತಿಯು ದೊರೆಯಬಹುದೆಂದು ಹುಡುಕಲಾರಂಭಿಸಿದಳು. ಗೋಡೆಯಕಡೆ ನೋಡಿದಳು. ಪಟಗಳು ಕಾಣಿಸಿದುವು. ಓದಿಕೊಂಡಳು "ಪ್ರತ್ಯಕ್ಷವಾದರೂ ಪ್ರಮಾಣಿಸಿನೋಡು" "ಗೋಚರವಾದರೂ ವಿಚಾರಬೇಕು" ಇದನ್ನು ಪುನಃ ಓದಿದಳು. ಇನ್ನೊಂದುಬಾರಿ ಓದಿದಳು. ಮತ್ತೊಂದು ಸಲ ಓದಿದಳು. "ಪಾತಿವ್ರತ್ಯವನ್ನು ಕೆಡಿಸಲು ಬಂದ ಸೇವಕನಲ್ಲಿ ವಿಚಾರವೇನಿದೆ" ಎಂದಳು. ಆದರೂ ನಿದಾನಿಸಬೇಕೆಂದು ಆಲೋಚಿಸಿ, "ನಾನು ಬರುವುದಕ್ಕೆ ಮುಂಚೆಯೇ ಇವನು ಇಲ್ಲಿ ಮಲಗಿದ್ದುದರಿಂದ ಇವನು ನನ್ನನ್ನು ಕೆಡಿಸುವುದಕ್ಕೆ ಬಂದಂತಾಗಲಿಲ್ಲ. ನಾನೇ ಇವನನ್ನು ರಾಜನೆಂದು ಭ್ರಮಿಸಿ ಮಲಗಿರುವೆನು. ಇವನು ಇಲ್ಲಿ ಮಲಗಿರುವ ತಪ್ಪೇ ಹೊರತು ನನ್ನನ್ನು ಕೆಡಿಸುವುದಕ್ಕೆ ಬಂದ ತಪ್ಪನ್ನು ಹೊರತಕ್ಕವನಲ್ಲ. ವಿಚಾರ ಮಾಡುವುದು ಉತ್ತಮವೇ ಸರಿ" ಎಂದು ತಕ್ಷಣ ಅವನನ್ನು ಎಬ್ಬಿಸಿದಳು. ಚಂಚಲನು ದಿಗ್ಭ್ರಮೆಗೊಂಡು ಎದ್ದುನಿಂತು ಮಹಾರಾಣಿಯನ್ನು ನೋಡಿ ಗಡಗಡನೆ ನಡುಗಿ "ಮಹಾತಾಯಿ! ನನ್ನನ್ನು ಕ್ಷಮಿಸು. ನಾನು ಬುದ್ಧಿಯಿಲ್ಲದೆ, ಈ ಮನೆಯ ಸೌಂದರ್ಯಕ್ಕೂ ಸುವಾಸನೆಗೂ ಮೃದುತಲ್ಪಕ್ಕೂ ಬೆರಗಾಗಿ, ಮಹಾರಾಜರು ಬರುವುದು-ಸಾವಕಾಶವೆಂದು ಬಗೆದು, ಕ್ಷಣಕಾಲ ಇಲ್ಲಿ ಮಲಗಿದರೆ ಹೇಗೆ ಇರುವುದೋ ಎಂದು ಮಲಗಿದೆನು. ನನಗೆ ನಿದ್ರೆಬಂದಿತು. ಇನ್ನೆಂದಿಗೂ ಇಂತಹ ತಪ್ಪು ಮಾಡುವವನಲ್ಲ. ಮಹಾರಾಣಿಯೆ! ನಾನು ನಿನ್ನ ದಾಸನು, ನಿನ್ನ ಊಳಿಗದವನು, ನೀನೇ ರಕ್ಷಕಳು, ನಾನು ನಿನ್ನ ಶರಣು ಹೊಕ್ಕಿರುವೆನು. ಮಹಾಪರಾಧವನ್ನು ಕ್ಷಮಿಸು, ತಾಯಿ!" ಎಂದು ಬಲುಬಗೆಯಾಗಿ ಬೇಡಿದನು. ಮಹಾ ಪತಿವ್ರತೆಯಾದ ಮಹಾರಾಣಿಯು ಬಹು ದಯಾರ್ದ್ರಹೃದಯಳಾದುದರಿಂದ ಮಹಾರಾಜರಿಗೆ ಇದನ್ನೆಲ್ಲಾ ತಿಳಿಸಿ ಆಮೇಲೆ ಅವರಿಂದಲೇ ನೀನು ಕ್ಷಮೆಯನ್ನು ಬೇಡಬೇಕೆಂದು ಹೇಳಿ, ಅವರು ಬರುವವರೆಗೂ ನೀನು ಅದೇ ಶಯ್ಯೆಯಲ್ಲಿ ಮಲಗಿರಬೇಕೆಂದು ಆಜ್ಞಾಪಿಸಿದಳು. ಇದೆಲ್ಲವನ್ನೂ ಕೇಳಿ ನೋಡುತ್ತಿದ್ದ ರಾಜನು, ತನ್ನ ಹೆಂಡತಿಯು ನಿರಪರಾಧೆಯಾಗಿರುವುದಕ್ಕೆ ಸಂತೋಷಿಸಿ, ತಕ್ಷಣವೇ ಹೊರಗೆ ಬಂದನು. ಮಹಾರಾಣಿಯು ಕಂಪಿತ ದೇಹಳಾಗಿ "ಮಹಾರಾಜನೆ! ಕ್ಷಮಿಸು ಕ್ಷಮಿಸು. ಇಲ್ಲಿ ಈಗ ನಡೆದಿರುವುದನ್ನೆಲ್ಲಾ ನೀನು ಕೇಳಿದೆಯೆಂದು ನಾನು ಸ್ವಪ್ನದಲ್ಲಿಯೂ ಸ್ಮರಿಸಿರಲಿಲ್ಲ. ನಡೆದಿರುವ ಸಂಗತಿಯು ಇಷ್ಟೇ. ಇವನನ್ನು ನೀನು ಕ್ಷಮಿಸಬೇಕು. ಗುಲ್ಲಿಯ ಮೇಲೆ ಬ್ರಹ್ಮಾಸ್ತ್ರವು ಸಲ್ಲದು. ಕ್ಷಮೆಯೇ ಮನುಷ್ಯನಿಗೆ ಅತ್ಯುತ್ತಮವು." ಎನ್ನಲು, ರಾಜನು ರಾಣಿಯ ಮಾತಿಗೆ ಒಪ್ಪಿ ಚಂಚಲನಿಗೆ ಆ ಶಯ್ಯಾಗಾರದಲ್ಲಿದ್ದ ವಿಶಿಷ್ಟ ವಸ್ತುವನ್ನೂ ಉಚಿತವಾಗಿ ಕೊಟ್ಟು ಇಂತಹ ವಿಷಯದಲ್ಲಿ ಹೀಗೆ ಪ್ರವರ್ತಿಸಬಾರದೆಂದು ಬುದ್ಧಿವಾದವನ್ನು ಹೇಳಿ ಕಳುಹಿಸಿ, ದಂಪತಿಗಳು ಮಲಗಲು ಉದ್ಯುಕ್ತರಾಗುವ ಸಮಯಕ್ಕೆ ಮಹಾರಾಣಿಯು ಮಹಾರಾಜನೆ! ಇಂದಿಗೆ ನನ್ನ ಜನ್ಮವು ಸಾಕು. ಸೇವಕನು ಮಲಗಿದ್ದ ಶಯ್ಯೆಯಲ್ಲಿ ನಾನು ಮಲಗಿ ಪತಿತಳಾಗಿರುವೆನು. ನನ್ನನ್ನು ಮಹಾರಾಜನು ಸ್ವೀಕರಿಸಲರ್ಹನಲ್ಲವೆಂದು ಹೇಳಿದಳು. ರಾಜನು ಎಷ್ಟೋ ಸಮಾಧಾನಗಳನ್ನು ಹೇಳಿದರೂ ಅವಳು ಕೇಳದೆ ಅಗ್ನಿಪ್ರವೇಶಕ್ಕೆ ಸಿದ್ಧಳಾದಳು. ಆಗ ಜ್ಞಾನಿಗಳು ಒಕ್ಕಣೆ ಪ್ರಾಣಹತ್ಯವನ್ನು ಮಾಡಿಕೊಳ್ಳುವುದಕ್ಕಿಂತಲೂ ಸಂಸಾರದಲ್ಲಿ ವಿರಕ್ತೆಯಾಗಿ ತಪಸ್ಸಿನಿಂದ ತಾನಾಗಿ ಪ್ರಾಣವನ್ನು ತ್ಯಜಿಸುವುದು ಉತ್ತಮವೆಂದು ಹೇಳಿದ ಮೇಲೆ ಆಕೆಯು ಒಬ್ಬಂದ ಪರಿವ್ರಾಜಿಕೆಯಾಗಿ ಮಹಾತಪಸ್ವಿಯಾಗಿದ್ದಳು.

ವಾಚಕರೆ! ಆತುರದಲ್ಲಿ ಎಷ್ಟು ಅನಾಹುತಗಳು ಒದಗಬಹುದೆಂಬುದನ್ನು ಎಲ್ಲರೂ ಯೋಚಿಸಬೇಕು. ಒಂದು ನಿರ್ಜೀವವಾದ ಪಟವು ಅಕ್ಷರಗಳಿಂದ ಕೂಡಿ ಮೂರು ಪ್ರಾಣಗಳನ್ನು ಉಳಿಸಿತು. ಆದುದರಿಂದ ಪ್ರತಿಯೊಬ್ಬರೂ ತಮ್ಮ ವಿವೇಕಾಭಿವೃದ್ಧಿಗೂ ದುಷ್ಕಾರ್ಯಗಳ ತಡೆಗೂ ಅನುಕೂಲಿಸುವಂತೆ ಕ್ರಮವಾದ ನೀತಿವಾಕ್ಯಗಳನ್ನು ಬರೆದು ತಾವು ಮಲಗುವ ಮನೆಯಲ್ಲಿಯೂ ಊಟಮಾಡುವ ಸ್ಥಳದಲ್ಲಿಯೂ ಕೆಲಸ ಮಾಡುವ ಪ್ರದೇಶದಲ್ಲಿಯೂ ಅದು ಚೆನ್ನಾಗಿ ಪದೇಪದೇ ಸ್ಮರಣೆಗೆ ಬರುವಂತೆ ದೊಡ್ಡ ದೊಡ್ಡ ಪಟಗಳಲ್ಲಿ ಸ್ಫುಟಾಂತವಾದ ಅಕ್ಷರದಲ್ಲಿ ಬರೆದು ತಗಲಹಾಕಿಕೊಂಡಿರಬೇಕು. ಇಂತಹ ಪಟಗಳನ್ನು ಬಿಟ್ಟು ಹೇಯವಾಗಿಯೂ ನಿರ್ಜೀವವಾಗಿಯೂ ನಾಚಿಕೆಗೇಡಾಗಿಯೂ ಇರುವ ಪಟಗಳನ್ನು ಮನೆಗಳಲ್ಲಿ ತಗಲಿ ಹಾಕಿಕೊಂಡು ಬುದ್ಧಿವಿಕಲತೆಯನ್ನುಂಟು ಮಾಡಿಕೊಳ್ಳಬಾರದು. ಪ್ರತಿಯೊಬ್ಬನ ಮನೆಯಲ್ಲಿಯೂ ನಿಜ—ಪರೋಪಕಾರ—ಭೂತದಯೆ—ಕ್ಷಮೆಗಳನ್ನು ಬೋಧಿಸುವ ನೀತಿವಚನದ ಪಟಗಳೂ, ಕಪಟ—ಮೋಸ—ಮತ್ಸರ—ದುರಾಶೆ—ದ್ವೇಷ—ಕೆಡಕುಗಳನ್ನು ತ್ಯಜಿಸುವಂತಹ ನೀತಿವಾಕ್ಯಗಳ ಪಟಗಳೂ ತಗಲಿಹಾಕಿದ್ದರೆ ಅಂತಹ ಪಟಗಳಲ್ಲಿ ದೇವರು ಪ್ರತ್ಯಕ್ಷನಾಗಿರುವನು.

ವಿವೇಕೋದಯ.

ವಿದೇಶ ವೃತ್ತಾಂತ.

ಬ್ರಿಟಿಷ ಪಾರ್ಲಿಮೆಂಟ್ ಸಭೆಯಲ್ಲಿ ಲಿಬರಲ್ ಮತ್ತು ಕನ್ಸರ್‌ವೇಟಿವ್ ತಂಡಗಳೊಳಗೆ ಉಂಟಾದ ವೈಷಮ್ಯವನ್ನು ಸಮಾಧಾನಪಡಿಸುವ ಒಗ್ಗೆ ಉಭಯ ತಂಡಗಳ ಸಭೆಯು ಜರಗುವ ಸಂಭವವಿರುವುದಾಗಿ ತೋರುತ್ತದೆ.

ಮೆಡಿಟೆರಿನಿಯನ್ ಸಮುದ್ರವೆಂಬ ಭೂಮಧ್ಯ ಸಮುದ್ರದ ಪ್ರಾಂತ್ಯದಲ್ಲಿಯ ಸೇನಾಧೀಶ ಪದವಿಯನ್ನು ಕಿಚ್ನರ್ ಪ್ರಭುಗಳಿಗೆ ಕೊಡಬೇಕೆಂತ ನಿರ್ಣಯಿಸಲ್ಪಟ್ಟಿತ್ತು. ಆದರೆ ಕಿಚ್ನರ್ ಪ್ರಭುಗಳು ತನಗೆ ಈ ಪದವಿಯು ಬೇಡವೆಂತ ತಿರಸ್ಕರಿಸಿ ಬಿಟ್ಟಿರುವರಂತೆ.

ಮುಂಬಯಿಂದ ಅಮೇರಿಕದ ಸಂಯುಕ್ತ ಸಂಸ್ಥಾನಕ್ಕೆ ಹೋಗಿರುವ ಒಬ್ಬ ಪಾರ್ಸಿಯನ್ನು ಸಂಯುಕ್ತ ಸಂಸ್ಥಾನದ [illegible] ಮಾಡಿರುವರಂತೆ. ಸ್ವಾತಂತ್ರಿಕ ಕೊಕಸಿಯನ್ ಗೋರಾ ಮನುಷ್ಯರೆಲ್ಲರು ಇಂತಹ ಹಕ್ಕುಗಳಿಗೆ ಅರ್ಹರಾಗಿರುವ ಕಾರಣದಿಂದ ಈ ಪಾರ್ಸಿ ಗೃಹಸ್ಥರಿಗೆ ಹೀಗೆ ಈ ಹಕ್ಕುಗಳು ಪ್ರಾಪ್ತವಾಗಿರುವವು. ಆದರೆ ಸರಕಾರದವರು ಹೀಗೆ ಈ ಪಾರ್ಸಿ ಗೃಹಸ್ಥರಿಗೆ ಕೊಟ್ಟಿರುವ ಬಾಧ್ಯತೆಯನ್ನು ನಿರಾಕರಿಸಲಿಕ್ಕೆ ಬೇಕಾದ ದಾವಿಲೆಗಳನ್ನು ಎಬ್ಬಿ ಕೂಡಿಸುವರು. ಈ ಸಂಗತಿಯು ನ್ಯೂಯೋರ್ಕ್ ಕೋರ್ಟ ಮುಂದೆ ಸಧ್ಯದಲ್ಲಿ ಬರುವದಾಗಿ ಕೇಳುತ್ತೇವೆ.

'ರೈಲ್ವೆ ಮೆಗಜೀನ್' ಎಂಬದೊಂದು ಮಾಸಿಕ ಪತ್ರದಲ್ಲಿ ಈ ಕೆಳಗಿನ ವೃತ್ತಾಂತವು ಪ್ರಕಟಿಸಲ್ಪಟ್ಟಿರುವುದು. ಅಮೇರಿಕದಲ್ಲಿ ರೈಲ್ವೆ ಇಂಜಿನ್ ಯಾ ಯಂತ್ರವನ್ನು ನಡಿಸುವ ಒಬ್ಬನಿಗೆ ಕಿವಿಯು ಚನ್ನಾಗಿ ಕೇಳಿಸುವುದಿಲ್ಲವೆಂತ ರೈಲ್ವೆ ಅಧಿಕಾರಿಗಳು ಈತನನ್ನು ಪರೀಕ್ಷೆ ಮಾಡುವರೆ ಕಿವಿಗಳ ಚಿಕಿತ್ಸೆ [illegible] ಬಳಿ ಡಾಕ್ಟರರಿದೆ ಹೇಳಿದರು. ಡಾಕ್ಟರನು [illegible] ವಾಗ ಈತನು—ನನ್ನನ್ನು ಇಲ್ಲಿ ಪರೀಕ್ಷಿಸಿ ಪ್ರಯೋಜನವಿಲ್ಲ. ನನ್ನೊಟ್ಟಿಗೆ ನಾನು ಇಂಜಿನು ನಡಿಸುವಾಗ ಬಂದರೆ ಆವಾಗ್ಯೆ ನನಗೆ ಕೇಳಿಸುತ್ತದೋ ಇಲ್ಲವೋ ಎಂಬದು ಗೊತ್ತಾಗುವುದು —ಎಂತ ಹೇಳಿ ಡಾಕ್ಟರರನ್ನು ತನ್ನೊಡನೆ ರೈಲ್ವೆ ಇಂಜಿನಿನಲ್ಲಿ ತಕೊಂಡು ಹೋಗಿ ಇಂಜಿನು ಓಡಿಸಿ ತೋರಿಸಿದನು. ಇಂಜಿನು ಓಡುತ್ತಿರುವಾಗ ಈ ಇಂಜಿನು ನಡಿಸುವವನಿಗೆ ಕಿವಿಯು ಸಮನಾಗಿ ಕೇಳಿಸುತ್ತಿತ್ತು. ಹ್ಯಾಗೆ ಇಂಜಿನು ಓಡುತ್ತಿರುವಾಗ ಇಂಜಿನಿನ ಶಬ್ದವು ಕಠಿಣವಾಗಿ ಬರುತ್ತಿತ್ತೋ ಹಾಗೆ ಇವನ ಕಿವಿಯು ಚನ್ನಾಗಿ ಕೇಳಿಸುತ್ತಿತ್ತು.

ಗತಿಸಿದ ಎಡ್ವರ್ಡ ಚಕ್ರವರ್ತಿಗಳವರ ಸ್ಮರಣಾರ್ಥವಾಗಿ ಲಂಡನಿನಲ್ಲಿ ಭಾರತೀಯರ ಸ್ಮಾರಕ ಸಂಸ್ಥೆಯನ್ನು ಸ್ಥಾಪಿಸುವ ವಿಷಯ ಆಲೋಚಿಸುವರೆ [illegible] ಮಂದಿರದಲ್ಲಿ ಈಸ್ಟ್ ಇಂಡಿಯಾ [illegible] ಒಂದು ಸಭೆಯು ಜರಗಿತು. [illegible]

ಜಿವನ್ನ. ನದೀ ತೀರದಲ್ಲಿ ಒಂದು 'ಮಚ್ಛೀಮ್‌ಖಾನ್ ಯಾ 'ಮತ್ಸ್ಯಬಿಯಮ್'ನ್ನು ಸ್ಥಾಪಿಸಬೇಕೆಂತ ನಿರ್ಣಯಿಸಿರುವರು. ಈ ಬಗ್ಗೆ ಖರ್ಚು ೬೦೦,೦೦೦ ಪವನುಗಳು ತಗಲುವದೆಂತ ಅಂದಾಜು ಮಾಡಿರುತ್ತಾರೆ. ರೋಬರ್ಟ್ಸ್ ಪ್ರಭು, ಕರ್ಜನ್ ಪ್ರಭು ಮೊದಲಾದವರು ಸಭೆಯವರ ಈ ಆಲೋಚನೆಯನ್ನು ಅಂಗೀಕರಿಸಿರುವರು.

~~~

ಇಂಡೋರು, ಭರತಪುರ, ಕೂಚ್‌ಬಿಹಾರ್, ಈ ಸಂಸ್ಥಾನದ ಮಹಾರಾಜರುಗಳಿಗೂ ನಭಾದಲ್ಲಿಯ ಟಿಕ್ಕಾ ರಿಪುದಮನಸಿಂಗರವರಿಗೂ ಜೋರ್ಜ್ ಚಕ್ರವರ್ತಿಯವರ ಸಂದರ್ಶನೆಯಾಯಿತು.

~~~

ಅಮೇರಿಕದ ಸಂಯುಕ್ತ ಸಂಸ್ಥಾನದ ಸರಕಾರದ ಮಾಜಿ ಪ್ರೆಸಿಡೆಂಟರಾಗಿದ್ದ ಮಿ। ರೋಸವೆಲ್ಟ ರವರು ಇಂಗ್ಲಾಂಡಿನಿಂದ ತೆರಳಿರುವರು.

~~~

ನೊಲಿಸ್ ಪ್ರಭು ಮತ್ತು ಸರ್ ಆರ್ಥರ್ ಬಿಗ್ ಇವರನ್ನು ತಮ್ಮ ಪ್ರೈವೇಟ್ ಸೆಕ್ರೆಟರಿಗಳಾಗಿ ಚಕ್ರವರ್ತಿಯವರು ನೇಮಿಸಿರುವರು.

~~~

ಕನ್ನೊಟ್ ಪ್ರಭುಗಳನ್ನು ಕೆನಡಾ ದೇಶದ ಗವರ್ನರ್ ಜನರಲರಾಗಿ ನೇಮಿಸುವರಾಗಿ ತಿಳಿದುಬರುತ್ತದೆ.

~~~

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯು ಇದೇ ತಿಂಗಳ ತಾ ೪ನೇ ಯಿಂದ ಪ್ರಾರಂಭವಾಗಿರುವುದು.

~~~

ಉತ್ತರ ಹಿಂದುಸ್ಥಾನ.

ಸಿಮಿ ಎಂಬಲ್ಲಿಂದ ಕ್ವೆಟಾ ಎಂಬಲ್ಲಿಗೆ ಹೋಗುವ ಗೂಡ್ಸ ಟ್ರೈನು ಶಿರೋಕ ಎಂಬಲ್ಲಿಂದ ಕೋಲಾಪುರಕ್ಕೆ ಹೋಗಿ ಕೋಲಾಪುರದಿಂದ ಹಿಂದಕ್ಕೆ ಬಹಳ ವೇಗದಿಂದ ಬರುವಾಗ ಹಿಂದಕಡೆಯಿಂದ ರೈಲ್ ಬಂಡಿಗಳನ್ನು ದೂಡಿಕೊಡುತ್ತಿದ್ದ ಪೈಪ್ಪ ಇಂಜಿನ್‌ಗಳೂ ಸರಕು ತುಂಬಿದ್ದ ಎಲ್ಲಾ ಬಂಡಿಗಳೂ ಬ್ರೇಕ್‌ವಾನಿನ ಸಮೇತ ಜಾರಿ ಇಳಿಜಾರಿನ ಕೆಳಗಿರುವ ಗಣಿಯಲ್ಲಿ ಬಿದ್ದು ಅನೇಕ ಅಪಘಾತಗಳು ಸಂಭವಿಸಿರುವುದಾಗಿ ಕೇಳುತ್ತೇವೆ. ಮೂರು ಜನ ಯುರೋಪಿಯನ್ ಡ್ರೈವರರವರೂ ಆರು ಜನ ಬಿರಾತೆಯು ವಾಯರ್ ಮನೆಗಳೂ ಬಹಳ ಬಾಧೆ ಹೊಂದಿರುವರು ವಾಯರ್ ಮನೆಗಳಲ್ಲಿ ಎರಡು ಜನರು ಮರಣಪಟ್ಟಿರುವರು ದನಕರು ಮೊದಲಾದ ಜೀವಜಂತುಗಳನ್ನು ತುಂಬಿದ್ದ ಗಾಡಿಗಳು ಈ ಟ್ರೈನಿನಲ್ಲಿದ್ದುದರಿಂದ ಇವುಗಳೂ ಆ ಗಾಡಿಗಳಲ್ಲಿರುವ ಜಂತುಗಳ ಕಾವಲುಗಾರರೊಡನೆ ಗುಣಿಯಲ್ಲಿ ಬಿದ್ದಿರುವವು. ಈ ಆಪತ್ತನ್ನು ಇನ್ನೂ ಹೆಚ್ಚಿಸಲಿಕ್ಕೆ ಕೆಲವು ಗಣಿಯಲ್ಲಿ ಬಿದ್ದ ಗಾಡಿಗಳಿಗೆ ಬೆಂಕಿ ತಗಿರುವುದು ಆಪತ್ತು ನಿವಾರಣಾರ್ಥವಾಗಿ ವೈದ್ಯರು ಮೊದಲಾದ ಆಫೀಸರುಗಳೊಡನೆ ಟ್ರೈನುಗಳು ಈ ಗಾಡಿಗಳು ಬಿದ್ದ ಸ್ಥಾನಕ್ಕೆ ಹೋಗಿರುವವು.

~~~

ಮುಂಬಯಿ ಹೈಕೋರ್ಟು ಈ ತಿಂಗಳ ತಾ ೧೩ರಲ್ಲಿ ಶಖಾ ಕಾಲದ ರಜೆಯ ನಂತರ ತೆರೆಯಲ್ಪಟ್ಟಿರುವುದು.

~~~

ಹುಗ್ಲಿ ನದಿಯಲ್ಲಿ ಚಲಿಸುತ್ತಿದ್ದ ಒಂದು ಲೋಂಚ್ ಎಂಬ ಸಣ್ಣ ಉಗಿ ದೋಣಿಯು ಯಾರೋ ಒಬ್ಬ ಯುರೋಪಿಯನಿಂದ ಕಳವು ಮಾಡಲ್ಪಟ್ಟ ಒಂದು ದಾವೆಯು ಕಲ್ಕತ್ತಾ ಹೈಕೋರ್ಟಿನಲ್ಲಿ ಬಹುಮಾನವಟ್ಟ ಜಸ್ಟೀಸ್ ಫ್ಲೆಚರರ ಮುಂದೆ ನಡಿಯುತ್ತಿರುವುದು. ಎಕ್‌ವರ್ತ ಟೈಲರ್ ಮತ್ತು ಕಂಪೆನಿಗೆ ಸಮ್ಮಂಧಪಟ್ಟ ಮೂರು ಲೋಂಚುಗಳು ಹುಗ್ಲಿ ನದಿಯ ಒಂದು ಕಡೆಯಲ್ಲಿದ್ದವು. ಕಳೆದ ಫೆಬ್ರವರಿ ತಿಂಗಳಲ್ಲಿ ಯಾರೋ ಒಬ್ಬ ಯುರೋಪಿಯನು ಈ ಲೋಂಚುಗಳ ಹತ್ತರ ಬಂದು ಕಂಪೆನಿಯವರ ಕಾರ್ಖಾನೆಯ ಒಬ್ಬ ಆಫೀಸರನೆಂತ ಹೇಳಿ ಒಂದು ಲೋಂಚನ್ನು ಹತ್ತಿಕೊಂಡು ಅದನ್ನು ಕಟ್ಟಿರುವ ಹಗ್ಗಗಳನ್ನು ಕಡಿದುಬಿಟ್ಟು ಎಲ್ಲಿಗೋ ಹೋಗಿಬಿಟ್ಟನು. ಈ ತನಕ ಈ ಯುರೋಪಿಯನಾಗಲಿ ಆತನು ಕೊಂಡುಹೋದ ಉಗಿ ದೋಣಿಯಾಗಲಿ ಪತ್ತೆಯಾಗಲಿಲ್ಲ. ಉಗಿ ದೋಣಿಗೆ ಭದ್ರತೆ ಬಗ್ಗೆ ವಿಮೆಯು ಉತ್ತರಾಯಿಸಲ್ಪಟ್ಟಿದ್ದರಿಂದ ಈ ಉಗಿ ದೋಣಿಯ ಮಾಲಿಕರಾದ ಕಂಪೆನಿಯವರು ವಿಮೆ ಕಂಪೆನಿಯವರ ಮೇಲೆ ತಮ್ಮ ಉಗಿ ದೋಣಿ ನಷ್ಟದ ಬಗ್ಗೆ ವ್ಯಾಜ್ಯ ತಂದಿರುವರು.

~~~

ಆಫ್ರಿಕದಿಂದ ಮುಂಬಯಿಗೆ ಬರುತ್ತಲಿದ್ದ ಸೋಮಾಲಿ ಎಂಬ ಸ್ಟೀಮರಿನಲ್ಲಿ ಜ್ವರದ ಕಾಹಿಲೆಯಿಂದಿದ್ದ ಮಿಸಿಸ್ ಕಾರ್ಡೋಜೋ ಎಂಬ ಸ್ತ್ರೀಯು ಹೊಗೆ ಜಹಜು ನಡಿಯುತ್ತಿರುವಾಗ ಪ್ರಯಾಣದಲ್ಲಿ ಸಮುದ್ರಕ್ಕೆ ಹಾರಿಬಿಟ್ಟಳಂತೆ.

~~~

ಸರಕಾರಿ ದೊಡ್ಡ ದೊಡ್ಡ ಆಫೀಸರರೆಲ್ಲರೂ ರಾಜದ್ರೋಹವನ್ನು ದೇಶದಿಂದ ಹೋಗಲಾಡಿಸಿ ಸರಕಾರದವರೊಡನೆ ಪ್ರಜೆಗಳಿಗೆ ಹ್ಯಾಗೆ ಪರಸ್ಪರ ಅನುರಾಗವನ್ನುಂಟುಮಾಡಬಹುದೆಂಬದರ ಕುರಿತು ಒಂದು ವಿಚಾರ ಪೂರಿತ ಲೇಖನವನ್ನು ಎಲ್ಲಾ ಪ್ರಾಂತಿಕ ಸರಕಾರಗಳ ತಿಳುವಳಿಕೆ ಬಗ್ಯೆ ಪ್ರಕಟಿಸಿರುವರು. ಈ ಲೇಖನದ ಮುಖ್ಯ ಅಂಶಗಳನ್ನು ನಮ್ಮ ಅಭಿಪ್ರಾಯದೊಂದಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

~~~

"ಚಿನ್ಸುರಾ ಭರತಭವ" ಎಂಬ ಪತ್ರದ ಬಾತ್ಮಿದಾರನೊಬ್ಬನು ಬರಿಯುವದೇನಂದರೆ—ಇದೇ ಕಳದ ಮೇ ತಾ. 23ನೇ ದಿವಸ ಚಂದ್ರಹತಿಯ ಕರ್ಕುಂಡಾ ಎಂಬಲ್ಲಿ ಬೆಳಗ್ಯೆ 10 ಘಂಟೆ ಸಮಯ ಸ್ವಲ್ಪ ಸ್ವಲ್ಪ ಮಳೆಯು ಬರುತ್ತಿತ್ತು ಆಗ್ಯೆ ಪಕ್ಕನೆ ಆಕಾಶಮಂಡಲದಿಂದ ಒಂದು ಸ್ತಂಭಾಕಾರ ವಸ್ತುವು ಕೆಳಗೆ ಇಳಿದುಬಂತು. ಸ್ವಲ್ಪ ಸಮಯದ ಒಳಗಾಗಿಯೇ ಒಂದು ಕಠಿಣವಾದ ಬಿರುಗಾಳಿಯು ಬಂದು ಆ ಸ್ತಂಭಾಕಾರ ವಸ್ತುವನ್ನು ಮೇಲಕ್ಕೆ ಚಲಿಸುವ ಹಾಗೆ ಮಾಡಿತು ಬಿರುಘಾಳಿಯು ಪ್ರಚಂಡವಾಗಿ ಬೀರುತ್ತಿರುವಾಗ ದಾರಿಯಲ್ಲಿ ದೊಡ್ಡ ದೊಡ್ಡ ಮರಗಳು ಕೆಡವಿ ಬಿದ್ದವು. ಒಬ್ಬ ಗೃಹಸ್ತನು ತನ್ನ ಒಂದು ದನವನ್ನು ಒಂದು ಅಶ್ವಸ್ಥದ ಮರಕ್ಕೆ ಕಟ್ಟಿಹಾಕಿದ್ದನು ದನವು ಮರದ ಸಮೇತ ಬಿರುಗಾಳಿಯಿಂದ ಮೇಲಕ್ಕೆ ಬಹಳ ಎತ್ತರದ ವರೇಗೆ ವಯ್ಯಲ್ಪಟ್ಟು ಅಲ್ಲಿಂದ ನೆಲಕ್ಕೆ ಅಪ್ಪಳಿಸಲ್ಪಟ್ಟಿತು ತನ್ಮಧ್ಯ ಆ ಸ್ತಂಭಾಕಾರ ವಸ್ತುವು ಗಂಧಕದ ವಾಸನೆಯನ್ನು ವ್ಯಾಪಿಸಿ ಸುಮಾರು 30 ನಿಮಿಷಗಳ ಪರಿಯಂತರ ಭೂಮಿಯ ಮೇಲ್ಭಾಗದಲ್ಲಿ ಚಲಿಸುತ್ತಾ ಭೀಕರವಾದ ಶಬ್ದದಿಂದ ವಾಯುಮಂಡಲದಲ್ಲಿ ಅಂತರ್ಧಾನವಾಯಿತು ತಕ್ಷಣವೇ ಬಿರುಗಾಳಿ ಮಳೆಯೂ ನಿಂತಿತು ಈ ಆಶ್ಚರ್ಯಕರವಾದ ನೋಟವನ್ನು ತಮ್ಮ ಕಣ್ಣುಗಳಿಂದ ನೋಡಿದವರು ಅನೇಕರಿರುವರಂತೆ.

ಅಮೇರಿಕಕ್ಕೆ ಹೋಗಿ ಪ್ರಖ್ಯಾತ ಲೇಖಕರೆಂದು ಕೀರ್ತಿ ಹೊಂದಿದ ರಾ ಸೈಂಟ್ ನಿಹಾಲಸಿಂಗರವರು ಒಬ್ಬ ಅಮೇರಿಕದ ಯುವತಿಯನ್ನು ಮದಿವೆ ಮಾಡಿಕೊಂಡು ಅಮೇರಿಕದಿಂದ ಪಂಜಾಬಿನಲ್ಲಿರುವ ಹೊಸ್ಟಿಯರ್‌ಪುರ ಎಂಬ ಹಳ್ಳಿಗೆ ಬಂದಿರುವರಾಗಿ ತಿಳಿಸಿದೆವಲ್ಲ ವಿದೇಶಸ್ಥಳಾದ ಸ್ತ್ರೀಯಳನ್ನು ಮದಿವೆಮಾಡಿಕೊಂಡು ತನ್ನ ಕುಟುಂಬಿಕನೊಡನೆ ತಿರಿಗಿ ಬಂದು ಸೇರಿರುವ ಸಿಂಗರವರಿಗೆ ಯಾವ ತರದ ಆದರಣೆಯು ಸಿಕ್ಕಿರುವುದೆಂಬದನ್ನು ತಿಳಿವ ಕುತೂಹಲವು ವಾಚಕರಲ್ಲಿರಬಹುದು. ರೈಲ್ವೆ ಸ್ಟೇಶನಿನಲ್ಲಿ ಮಗನನ್ನು ಎದುರುಗೊಳ್ಳಲಿಕ್ಕೆ ಸೈಂಟ್ ನಿಹಾಲಸಿಂಗರವರ [illegible] ಸ್ವರ ಆಲಿಂಗನ ಮೊದಲಾದವುಗಳನ್ನು ಮಾಡಿಕೊಂಡಾದ ಬಳಿಕ ಸ್ಟೇಶನಿನಿಂದ ಹೊಸ್ಟಿಯರಪುರಕ್ಕೆ ಹೊರಟು ಅಲ್ಲಿ ಸಾಯಂಕಾಲದಲ್ಲಿ ತಲ್ಪುತ್ತಲೇ ಊರ ಜನರೆಲ್ಲರು ಇವರನ್ನು ಎದುರುಗೊಳ್ಳಲಿಕ್ಕೆ ಪಟ್ಟಣದಿಂದ ಸುಮಾರು ದೂರ ಬಂದಿದ್ದರು. ರೈ ಬಹದೂರ್ ಲಾಲಾ ಶಾಮದಾಸರವರಲ್ಲಿ ನಿಹಾಲಸಿಂಗರವರನ್ನೂ ಇವರ ಪತ್ನಿಯನ್ನೂ ಉಪಚರಿಸಿ ದಂಪತಿಗಳಿಬ್ಬರಿಗೂ ಸ್ವಾಗತವನ್ನಿತ್ತರು. ಶುದ್ಧೀಕರಣ ಸಂಸ್ಕಾರವಿಲ್ಲದೆ ನಿಹಾಲಸಿಂಗರವರನ್ನೂ ಅವರ ಪತ್ನಿಯನ್ನೂ ಸಿಕ್ಖಸಮಾಜದವರು ತಮ್ಮಲ್ಲಿ ಇವರನ್ನು ಸ್ವೀಕರಿಸಿಕೊಂಡರು, ಆದರೆ ಸೈಂಟ್ ನಿಹಾಲಸಿಂಗರಿಗೂ ಇವರ ಪತ್ನಿಯರಿಗೂ ಸಿಕ್ಖಧರ್ಮದ ಪ್ರಕಾರ ವಿವಾಹ ಸಂಸ್ಕಾರವನ್ನು ಮಾಡುವರಾಗಿ ಕೇಳುತ್ತೇವೆ.

~~~

ಮುಂಬಯಿ ಪಟ್ಟಣದಲ್ಲಿ ತಂದೆತಾಯಿಗಳನ್ನು ಕಾಣದೆ ರಸ್ತೆಯಲ್ಲಿ ಅಲೆದಾಡುತ್ತಿರುವ ಹಿಂದೂ ಮತ್ತು ಮಹಮ್ಮದಿ ಹುಡುಗಿಯರನ್ನು ಪೋಲೀಸಿನವರು ಆಗಿಂದಾಗ್ಯೆ ಹಿಡಿದು ಅವರ ರಕ್ಷಕರನ್ನು ಗೊತ್ತುಮಾಡುವ ತನಕ ಪೋಲೀಸ್ ಚೌಕಿಗಳಲ್ಲಿರಿಸುವುದುಂಟು. ರಕ್ಷಕರನ್ನು ಹುಡುಕಿ ತೆಗಿಯುವುದು ಅತಿ ಪ್ರಯಾಸವಾಗಿದ್ದು ಈ ಬಗ್ಯೆ ಬಹಳ ಸಮಯ ತಗಲುವದರಿಂದಲೂ ಹುಡುಗಿಯರನ್ನು ಪೋಲಿಸು ಚೌಕಿಗಳಲ್ಲಿರಿಸುವುದನುಚಿತವಾದ್ದರಿಂದಲೂ ಇಂಥಾ ಹಿಂದು ಹುಡುಗಿಯರನ್ನು ಪೋಲೀಸು ಕಮಿಶನರವರು ಸೇವಾಸದನಕ್ಕೂ ಅಥವಾ ಲೆಡಿನೋರ್ತ್‌ಕೊಟರ ಅನಾಥ ಶಾಲೆಗೂ ಕಳುಹಿಸಿಕೊಡುವರು ಮಹಮ್ಮದೀಯ ಹುಡುಗಿಯರನ್ನು ಹೀಗೆ ಕಳುಹಿಸಿಕೊಡಲಿಕ್ಕೆ ಮೆಹಮ್ಮದೀಯ ಅನಾಥ ಶಾಲೆ ಇಲ್ಲದಿರುವುದರಿಂದ ಇಂಥಾದೊಂದು ಅನಾಥ ಶಾಲೆಯನ್ನು ಏರ್ಪಡಿಸುವುದು ಉಚಿತವೆಂತ ಗ್ರಹಿಸಿ ಪೋಲೀಸು ಕಮಿಶನರಾದ ಮಿ। ಎಸ್. ಎಮ್. ಎಡ್ವರ್ಡರವರು ಈ ಬಗ್ಯೆ ಚಂದಾಹಣಗಳನ್ನು ಕೂಡಿಸುತ್ತಿರುವರು ಈ ವರೇಗೆ ೬೦,೦೦೦ ರೂ. ಚಂದಾಹಣವು ವಸೂಲಾಗಿರುತ್ತದೆ ಒಬ್ಬ ಮಹಮ್ಮದೀಯ ಗೃಹಸ್ತರು ಈ ಅನಾಥಾಶ್ರಮಕ್ಕೆ ತಿಂಗಳಿಗೆ ೩೦೦ ರೂಪಾಯಿಯಂತೆ ಕೊಡುವರೆ ವಾಗ್ದತ್ತಮಾಡಿರುವರು ಅನಾಥಾಶ್ರಮಕ್ಕೆ ಒಟ್ಟಿಗೆ ೧॥ ಲಕ್ಷ ರೂಪಾಯಿ ಬೇಕಾಗಿದೆ ಎಂತ ಅಂದಾಜು ಮಾಡಲ್ಪಟ್ಟಿರುತ್ತದೆ.

~~~

ಇಂಡಿಯಾ ಸರಕಾರದವರು ಇತರ ಎಲ್ಲಾ ಪ್ರಾಂತಿಕ ಸರಕಾರಗಳಿಗೆ ಹಿಂದೂಸ್ಥಾನದಲ್ಲಿ ಹೆಚ್ಚಾಗುತ್ತ ಬರುತ್ತಿರುವ ಕ್ಷಯರೋಗ ನಿವಾರಣೆ ವಿಷಯ ಬರೆದಿರುವರಾಗಿ ತಿಳಿಯುತ್ತೇವೆ ಹಿಂದೂಸ್ಥಾನದ ಮುಖ್ಯ ಪಟ್ಟಣಗಳಲ್ಲೆಲ್ಲಾ ಕ್ಷಯ ರೋಗದ ಹಾವಳಿಯು ಬಹಳವಾಗಿ ತಲೆದೋರುತ್ತಿರುವುದು ರೋಗ ತಗಲಿದೊಡನೆಯೇ ರೋಗಿಗಳಿಗೆ ತಕ್ಕದಾದ ಆರೋಗ್ಯ ಮಂದಿರಗಳಿಗೆ ವೈದ್ಯರು ಅಲ್ಲಿ ಚಿಕಿತ್ಸೆಯನ್ನು ಮಾಡಿದರೆ ಈ ಹಾವಳಿಗೆ ಬಹಳಮಟ್ಟಿಗೆ ತಡೆಕಟ್ಟಿದಂತಾಗುವುದು ಈ ಬಗ್ಯೆ ಆಯಾ ಸ್ಥಳಗಳಲ್ಲಿ ಆರೋಗ್ಯ ಮಂದಿರಗಳನ್ನು ಕಟ್ಟಿಸಲಿಕ್ಕೆ ಪ್ರಜೆಗಳಲ್ಲಿ ಉದಾರಶಾಲಿಗಳಾದವರ ಸಹಕಾರವನ್ನು ಪಡಕೊಳ್ಳಬಹುದೆಂಬದನ್ನು ಸಹಾ ಸೂಚಿಸಿರುವರು.

~~~

ಮುಂಬಯಿಯ ಸಂಸ್ಥಾನದ ಆಯಾ ಪ್ರಮುಖ ಪಟ್ಟಣಗಳಲ್ಲಿ ಕುಷ್ಟರೋಗಿಗಳು ಸ್ವೇಚ್ಛಾನುಸಾರ ಬೀದಿಯಲ್ಲಿ ತಿರುಗಾಡದಂತೆ ಕುಷ್ಟರೋಗಿಗಳ ಕಾನೂನನ್ನು ಪ್ರಮುಖ ಪಟ್ಟಣಗಳಲ್ಲಿ ಜಾರಿಗೆ ತರುವರೆ ನಿಶ್ಚಯಿಸಿರುವರು. ಈ ಕಾನೂನಿನ ಪ್ರಕಾರ ಅಲ್ಲಲ್ಲಿ ತಿರುಗಾಡುವ ಕುಷ್ಟರೋಗಿಗಳನ್ನೆಲ್ಲಾ ಕಡ್ಡಾಯವಾಗಿ ಇವರ ಬಗ್ಯೆ ಕಟ್ಟಿಸಿರುವ ಆಲಯಕ್ಕೆ ಒಯ್ಯುವ ಅಧಿಕಾರವು ಸರಕಾರದವರಿಗೆ ಇರುವುದು. ಮದ್ರಾಸು ಸಂಸ್ಥಾನದಲ್ಲಿ ಸಹಾ ಈ ಆಕ್ಟನ್ನು ಜಾರಿಗೆ ತರುವದು ಅಗತ್ಯವೆಂತ ಹಲವು ವರ್ತಮಾನಪತ್ರಗಳು ಸೂಚಿಸಿರುವವು.

ಸರಕಾರದವರು ದೇಶೀಯ ಕೈಗಾರಿಕೆಗೆ ಸಹಾಯ ಮಾಡುವ ದೃಷ್ಟಾಂತಗಳು ಅಲ್ಲಲ್ಲಿ ತೋರುತ್ತಿರುವವು ಸ್ಟೈಲ್ವೆಗಳಿಗೆ ಬೇಕಾದ ಉಕ್ಕಿನ ಮತ್ತು ಕಬ್ಬಿಣ ಸಾಮಾನುಗಳನ್ನು ದೇಶೀಯ ಕೈಗಾರಿಕೆ ಕಾರ್ಖಾನೆಗಳಿಂದ ಪರೀಕ್ಷಿಸಿ ತಕೊಳ್ಳುವರೆ ರೈಲ್ವೆ ಬೋರ್ಡಿನವರು ಮುಂಬಯಿ ಮತ್ತು ಕಲ್ಕತ್ತೆಯಲ್ಲಿ ಸುಪರಿಂಟೆಂಡೆಂಟರನ್ನು ನೇಮಿಸಿದ್ದರು ಇತರ ಇಲಾಖೆಗಳಿಗೆ ಸಹಾ ಈ ಸುಪರಿಂಟೆಂಡೆಂಟರವರು ಕಬ್ಬಿಣದ ಮತ್ತು ಉಕ್ಕಿನ ಸಾಮಾನುಗಳನ್ನು ಪರೀಕ್ಷಿಸಿ ತಕೊಳ್ಳಬಹುದೆಂದು ಸರಕಾರದವರ ಆಜ್ಞಾಪಿಸಿರುವರು

~~~~~

ಬಾಬು ಅರವಿಂದ ಘೋಷರವರು ಫ್ರೆಂಚರ ಸ್ವಾಸ್ಥ್ಯವಾದ ಪುದುಚೇರಿಗೆ ಬಂದು ಅಲ್ಲಿ ಕೆಲವು ದಿವಸಗಳ ಪರ್ಯಂತರವಿದ್ದು ಯಾರಿಗೂ ತಿಳಿಯದ ರೀತಿಯಲ್ಲಿ ಮಾರ್ಸೆಲ್ಸ್ ಎಂಬ ಫ್ರೆಂಚ್ ಸ್ಟೀಮರಿನಲ್ಲಿ ಫ್ರಾನ್ಸ್ ದೇಶಕ್ಕೆ ಪಲಾಯನಮಾಡಿರುವರಂತೆ

ಬಾಬು ವಿನಯಭೂಷಣ ಎಂಬವರ ಏರೋಪ್ಲೇನ್ ಎಂಬದೊಂದು ವಾಯುಮಂಡಲದಲ್ಲಿ ಹಾರ್ವ ಯಂತ್ರವನ್ನು ರಚಿಸಿ ಅದನ್ನು ರಿಜಿಸ್ಟ್ರು ಮಾಡಿಸಿರುವರಂತೆ

~~~~~

ದಕ್ಷಿಣ ಹಿಂದುಸ್ಥಾನ

ಮದುರಾ ಜಿಲ್ಲೆಯವರ ಬ್ರಹ್ಮಜ್ಞಾನ ಸಂಘದವರ ಪ್ರಥಮ ಪರಿಷತು ಪೆರಿಯಾಕುಲಂ ಎಂಬಲ್ಲಿ ಕೂಡುವುದು ಬ್ರಹ್ಮಜ್ಞಾನ ಸಂಘದ ಅಧ್ಯಕ್ಷರಾದ ಮಿಸೆಸ್ ಎನಿ ಬಿಸೆಂಟರವರು ಈ ಪರಿಷದಿನ ಅಧ್ಯಕ್ಷರಾಗಿರುವರು

~~~~~

ಕರ್ನೂಲಿನಲ್ಲಿ ಇತ್ತಲಾಗೆ ನಡೆದ ಮದ್ರಾಸು ಪ್ರಾಂತಿಕ ಸಭೆಯ ಸಂದರ್ಭದಲ್ಲಿ ಟ್ರಾನ್ಸ್‌ವಾಲಿನಿಂದ ಹಿಂದುಸ್ಥಾನಕ್ಕೆ ಗಡಿಪಾರು ಮಾಡಲ್ಪಟ್ಟ ಟ್ರಾನ್ಸ್‌ವಾಲ ನಿವಾಸಿ ಭಾರತೀಯರೆಲ್ಲರಿಗೂ ಒಂದು ಔತಣವು ಕೊಡಲ್ಪಟ್ಟಿತು ಈ ಔತಣಕ್ಕೆ ಕೆಲವು ಜನ ಮೇಲು ಜಾತಿ ಹಿಂದುಗಳು ಸಹಾ ಜಾತಿಭೇದವನ್ನು ಲೆಕ್ಕಿಸದೆ ವಿವಿಧ ಜಾತಿಗಳಿಂದ ಕೂಡಿರುವ ಟ್ರಾನ್ಸ್‌ವಾಲ ಭಾರತೀಯರೊಡನೆ ಸಹಪಂಕ್ತಿಯಲ್ಲಿ ಕೂತುಕೊಂಡು ಊಟಮಾಡಿದರೆಂದು ತಿಳಿಯುತ್ತೇವೆ

~~~~~

ರಂಗೂನಿನಲ್ಲಿ ಇತ್ತಲಾಗೆ ಮಿ। ಎ ಡೇವಿಡ್ ಎಂಬ ಕ್ರೈಸ್ತ ಜಾತಿಯಲ್ಲಿ ಹುಟ್ಟಿದ ಒಬ್ಬ ಗೃಹಸ್ಥನನ್ನು ಆರ್ಯಸಮಾಜದವರ ಮತಾಂತರಗೊಳಿಸಿರುವರು ಈ ಕ್ರೈಸ್ತ ಜಾತಿಯ ಡೇವಿಡ್ ವರು ಮತಾಂತರಗೊಳ್ಳುವ ಮೊದಲು ರಂಗೂನು ಪಟ್ಟಣಕ್ಕೆ ಬಂದಿದ್ದ ಕಲ್ಕತ್ತೆ ಆರ್ಯಸಮಾಜದ ಪ್ರೆಸಿಡೆಂಟರಾದ ಲಾ ಕೆ ಸಿ ವರ್ಮರವರಿಂದ 'ಕ್ರೈಸ್ತ ಮತ್ತು ಕೃಷ್ಣ' ಈ ವಿಷಯವಾಗಿ ಒಂದು ಪ್ರಸಂಗವನ್ನು ಕೇಳಿ ದವರಾದರು ಈ ಪ್ರಸಂಗವನ್ನು ಕೇಳಿದ ಬಳಿಕ ತಾನು ಕ್ರೈಸ್ತ ಸಮಾಜದಲ್ಲಿ ನಿಲ್ಲಲಾರೆನೆಂದು ಹೇಳಿ ರಂಗೂನಿನ ಆರ್ಯಸಮಾಜಕ್ಕೆ ತನ್ನನ್ನು ಕೂಡಿಸಿಕೊಳ್ಳಬೇಕೆಂದಾಗಿ ವಿಜ್ಞಾಪನೆಯನ್ನು ಒದಗಿಸಿಕೊಳ್ಳುವವರಾದರು ಅವರ ಅಪೇಕ್ಷೆ ಮೇರೆಗೆ ಮಿ। ಡೇವಿಡರವರನ್ನು ಶುದ್ಧೀಕರಿಸಿ ದೇವರಾಜ್ ಎಂಬ ಹೆಸರು ಇವರಿಗೆ ಕೊಡೋಣಾಯಿತು ಶುದ್ಧಿಸಂಸ್ಕಾರ ಸಮಯದಲ್ಲಿ ಹೆಚ್ಚು ಕಡಿಮೆ ೫೦೦ ಜನರು ಕೂಡಿದ್ದರು

~~~~~

ಮದ್ರಾಸು ಗವರ್ನರರಾದ ಸರ್ ಆರ್ಥರ್ ಲೋಲೆಗ್ ವರು ಈ ತಿಂಗಳ ತಾ ೧೫ಕ್ಕೆ ಮೈಸೂರಿಗೆ ಬಂದು ಐದು ದಿವಸಗಳ ಪರ್ಯಂತರ ಮಹಾರಾಜರವರ ಅತಿಥಿಗಳಾಗಿ ಅಲ್ಲಿದ್ದು ತಾ ೨೦ನೇ ಸಾಯಂಕಾಲ ಮೈಸೂರಿನಿಂದ ಹೊರಟುಹೋಗುವರಾಗಿ ತಿಳಿಯುತ್ತೇವೆ

ಈ ತಿಂಗಳ ತಾ ೧೫ರಿಂದ ಮೈಸೂರು ಯುವರಾಜರವರ ವಿವಾಹದ ಬಗ್ಗೆ ಅತಿಥಿಗಳು ಬರುತ್ತಿರುವರು. [illegible] ತಾರೀಕಿನಿಂದ [illegible] ವರೆಗೆ ೩ ಸ್ಪೆಶಲ್ ಟ್ರೈನು ಗಳು ಓಡ್ಯಾಡುತ್ತಿರುವವು. [illegible] ಗಳಿಂದ ಮೈಸೂರಿಗೆ ಅನೇಕ ಜನರು ಬರುತ್ತಿರುವರು.

ಈ ಮೊದಲು ಸೂಚಿಸಲ್ಪಟ್ಟಿದ್ದಂತೆ ಕರ್ನೂಲಿನಲ್ಲಿ ಸಾಮಾಜಿಕ ಪರಿಷದವು ಕಳೆದ ವಾರ ಜರಗಿತು ಮ। ರಾ। ರಾ। ಕೆ ನಟರಾಜನ್ ಬಿ ಎ ಯವರು ಈ ಪರಿಷದಿನ ಅಧ್ಯಕ್ಷರಾಗಿದ್ದರು ಈ ಪರಿಷದದ ವೃತ್ತಾಂತಸಾರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ

~~~~~

ಗತಿಸಿದ ಚಕ್ರವರ್ತಿ ಎಡ್ವರ್ಡ ಪ್ರಭುಗಳಿಗೆ ತಕ್ಕದಾದ ಸ್ಮಾರಕವನ್ನು ಏರ್ಪಡಿಸಲಿಕ್ಕೆ ಎಡ್ವರ್ಡ ಮೆಮೋರಿಯಲ್ ಫಂಡಿನವರು ಚಂದಾದ್ರವ್ಯವನ್ನು ಕೂಡಿಸುತ್ತಿರುವರು ನಮ್ಮ ಗವರ್ನರ ಸಾಹೇಬರವರು ಈ ಫಂಡಿಗೆ ೧೦೦೦ ರೂಪಾಯಿಗಳನ್ನೂ ಬಹುಮಾನಪಟ್ಟ ಬೊಬಿಲಿ ಮಹಾರಾಜರವರು ೭ ಸಾ। ಜಸ್ಟೀಸ್ ಕೃಷ್ಣ ಸ್ವಾಮಿ ಅಯ್ಯರ್ ೧೦೦೦ ರೂಪಾಯಿ ಕುಮಾರ ರಾಜರವರು ೧೦೦೦ ಪೆರಿ ಕಂಪೆನಿಯವರು ೧೦೦೦ ಈ ರೀತಿ ಇನ್ನು ಅನೇಕ ಸರಕಾರಿ ಉದ್ಯೋಗಸ್ಥರೂ ಖಾಸಗಿ ಜನರೂ ಕೂಡಿ ಈ ವರೆಗೆ ರೂ ೧ ಲಕ್ಷ ೭—೦ ಚಂದಾದ್ರವ್ಯ ಕೂಡಿರುವುದು

~~~~~

ದಕ್ಷಿಣ ಕನ್ನಡ

~~~~~

WANTED.

Two clerks with experience of Commercial routine and accounts Salary Rs 15 rising to Rs 20 with future prospects Preference will be given to Matriculates Apply to M Ebrahim Elias General Merchant Mangalore

. M Ebrahim Elias

WANTED.

Four bill collectors who know to read and write English and Canarese Security of Rs 200—0—0 required Salary Rs 7 to 10 Cash security preferred Apply to M Ebrahim Elias General Merchant Mangalore

M Ebrahim Elias

ಮಂಗಳೂರು ಇತ್ತಲಾಗೆ ಕೆಲವು ತಿಂಗಳ ಹಿಂದೆ ಕಲೆಕ್ಟರುವರ ಆಫೀಸಿನ ಸಿಬಂದಿಯಲ್ಲಿ ಕೆಲವು ಗುಮಾಸ್ತರಿಗೆ ಮಾತ್ರ ಸಂಬಳವು ಏರಿಸಲ್ಪಟ್ಟಿತ್ತು ಕಲೆಕ್ಟರ ಮತ್ತು ಡಿಪ್ಯುಟಿ ಕಲೆಕ್ಟರವರ ಆಫೀಸಿನಲ್ಲಿ ಸ್ಕೇಲ್ ಫಂಡು ಜಾರಿಗೆ ಬಂದು ಮೊದಲಿನ ಕೆಲವು ಇಲಾಖೆಗಳಲ್ಲಿ ಕೆಲಸಮಾಡುವ ಕೆಲವು ಗುಮಾಸ್ತರಿಗೆ ಸಂಬಳವು ಏರಿಸಿದ ನಂತರ ೧೫ ರೂಪಾಯಿಯಾಗಿತ್ತು ಈಗ ಇವರ ಸಂಬಳವನ್ನು ಸಹಾ ರೂಪಾಯಿ ೨೦ಕ್ಕೆ ಏರಿಸಿರುವರು.

ಫರಂಗಿಪೇಟೆ ಅತ್ತಕಡೆ ಸರ್ಕಲಿನ ಮೇಲಿರುವ ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರವರು ಇದೇ ಬರುವ ತಾ ೨೦ನೇ ಸೋಮವಾರ ಇತ್ತ ಕಡೆ ಬರುವರಂತೆ

ಸ್ವದೇಶಾಭಿಮಾನಿಯ ಹಿಂದಿನ ಒಂದು ಸಂಚಿಕೆಯಲ್ಲಿ ಹಾವು ಕಡಿತದ ಚಿಕಿತ್ಸೆ ವಿಷಯ ಬರೆದಿದ್ದೆವು ಹಾವು ಕಡಿತಕ್ಕೆ ಔಷಧಿಯು ಸರ್ವರಿಗೂ ತಕ್ಕ ಸಮಯದಲ್ಲಿ ದೊರಕುವಂತೆ ನಮ್ಮ ಜಿಲ್ಲೆಯ ಪಟೇಲರೆಲ್ಲರ ಕೂಡೆ ಈ ಔಷಧಿಯನ್ನು ಇಂಡಿಯಾ ಸರಕಾರದವರ ಅನುಜ್ಞೆ ಮೇರೆಗೆ ಇರಿಸಿರುವರು.

ಇದೇ ಬರುವ ಜುಲೈ ಜುಲೈ ತಿಂಗಳಿಗನೇ ತಾರೀಕಿನಿಂದ ಮೂಡಬಿದ್ರಿಯಲ್ಲಿ ತಾಲೂಕು ಆಫೀಸು ಏರ್ಪಟ್ಟು, [illegible] [illegible]

ಕಿನವರೆ ಮಂಗಳೂರು ಮತ್ತು ಉಪ್ಪಿನಂಗಡಿ ತಾಲ್ಲೂಕು ಆಫೀಸುಗಳಲ್ಲಿ ೧೫ ರೂ. ತಲಬಿನ ಇಬ್ಬರು ಕ್ಲಾರ್ಕರು ನೇಮಕಪಟ್ಟಿರುತ್ತಾರೆ ತತ್ಕಾಲಕ್ಕೆ ಜೌಟರರ ಅರಮನೆಯನ್ನು ತಾಲೂಕಾಫೀಸಾಗಿ ಮಾಡಲಿಕ್ಕೆ ಸರಕಾರದವರು ಸಮ್ಮತಿಸಿರುವರು

ಡಿಸ್ಟ್ರಿಕ್ಟ್ ಸೆಶನ್ಸ್ ಕೋರ್ಟಿನಲ್ಲಿ ಈ ತಿಂಗಳಲ್ಲಿ ತನಿಖೆಗೆ ಬಂದ ೭ ಮೊಕದ್ದಮೆಗಳಲ್ಲಿ ಮೂರು ತೀರ್ಮಾನಿಸಲ್ಪಟ್ಟು ಬಾಕಿ ಉಳಿದಿರುವ ನಾಲ್ಕು ಮೊಕದ್ದಮೆಗಳನ್ನು ಬರುವ ತಿಂಗಳಲ್ಲಿ ತನಿಖೆ ಬಗ್ಗೆ ಮುಂದರಿಸಿಟ್ಟಿರುವರು.

ಈ ತಿಂಗಳಲ್ಲಿ ತನಿಖೆ ಮಾಡಲ್ಪಟ್ಟ ಒಂದನೇ ಮೊಕದ್ದಮೆಯು ಬೆಳ್ತಂಗಡಿ ಸಬ್ ಮೆಜಿಸ್ಟ್ರೇಟರವರಿಂದ ಕಮಿಟು ಮಾಡಲ್ಪಟ್ಟಿತ್ತು ತಕ್ಕ ರುಜುವಾತಿನ ಆಧಾರವಿಲ್ಲದ್ದರಿಂದ [illegible] ಮತ್ತು ಬೇರೆ ಇಬ್ಬರು ಮುದ್ದೆಯಾಲೆಗಳನ್ನು ಬಿಟ್ಟುಬಿಟ್ಟಿರುವರು

ಎರಡನೇ ಸೆಶನ್ಸ್ ಮೊಕದ್ದಮೆಯು ಉಪ್ಪಿನಂಗಡಿ ತಾಲೂಕ ಮಕ್ಕೂರು ಕಸಬೆಯಲ್ಲಿನ ವ ಶ್ರೀನಿವಾಸ ಬಟ್ಟ ಮತ್ತು ಗಣಪತಿ ಪೈ ಎಂಬವರ ಮೇಲಿನ ಫೋರ್ಜರಿ ಮೊಕದ್ದಮೆ ಆಗಿರುತ್ತದೆ ಇವರಲ್ಲಿ ಶ್ರೀನಿವಾಸಬಟ್ಟ ಎಂಬವನಿಗೆ ೫ ವರುಷ ಗಣಪತಿ ಪೈ ಎಂಬವನಿಗೆ ೨ ವರುಷ ಈ ರೀತಿ ಕಠಿಣ ಕಾರಾಗೃಹ ಶಿಕ್ಷೆಯು ವಿಧಿಸಲ್ಪಟ್ಟಿರುವುದು

ಮೂರನೇದು ಕಾರ್ಕಳ ಸಬ್ ಮೆಜಿಸ್ಟ್ರೇಟರವರು ಕಮಿಟ್ ಮಾಡಿದ್ದಾಗಿರುತ್ತದೆ ಈ ಮೊಕದ್ದಮೆಯು ವಿಶ್ವಾಸಘಾತಕದ್ದಾಗಿರುವುದು ಸುಮಾರು ಎರಡು ತಿಂಗಳ ಹಿಂದೆ ಬೋಳ್ವಾರ್ ಗ್ರಾಮದ ಉಗ್ರಾಣಿಯು ಕಾರ್ಕಳ ದಿಂದ ಜಮಾ ಬಂದಿ [illegible] ತಾಲೂಕ ಆಫೀಸಿಗೆ ಕಳುಹಿಸಲಿಕ್ಕೆ ತಕ್ಕೊಂಡು ಹೋಗುತ್ತಿದ್ದನು ಈ ಉಗ್ರಾಣಿಗೆ ಪರಮಮಿತ್ರನಾದ ನಾರಾಯಣ ಮೂಡ್ಲಗಿರಿ ಶ್ಯಾನುಭಾಗ ಎಂಬವನು ತಾನು ಸಹ ತನ್ನ ಸ್ನೇಹಿತನೊಂದಿಗೆ ಕಾರ್ಕಳಕ್ಕೆ ಬರುತ್ತೇನೆಂತ ಹೇಳಿ ಅವನ ಸಂಗಡ ಹೋದನು ಉಗ್ರಾಣಿಯು ಕೊಂಡುಹೋಗುವ ಬಂಡಲಿನಲ್ಲಿ ಹೆಚ್ಚು ಹಣ ಇರುವದೆಂದು ಈ ಮೂಡ್ಲಗಿರಿ ಶ್ಯಾನುಭಾಗನು ಗ್ರಹಿಸಿ ಉಗ್ರಾಣಿಯನ್ನು ಹಾದಿಯಲ್ಲಿ ಕೊಂದು ಹಣವನ್ನು ಅಪಹರಿಸುವ ಇರಾದೆಯಿಂದ ಒಂದು ಹರಿತವಾದ ಕತ್ತಿಯನ್ನು ತನ್ನ ಮುಂಡಾಸಿನಲ್ಲಿ ಒಟ್ಟಿಟ್ಟುಕೊಂಡಿದ್ದನು ರಾತ್ರಿ ಹೊತ್ತು ಇವರಿಬ್ಬರೇ ಕಾರ್ಕಳಕ್ಕೆ ಹೋಗುತ್ತಿರುವಾಗ ಮೂಡ್ಲಗಿರಿ ಶ್ಯಾನುಭಾಗನು ಮೂತ್ರಶಂಕೆ ಮಾಡುವ ಸುಳ್ಳು ನೆವನದಿಂದ ರಸ್ತೆ ಬದಿಯಲ್ಲಿ ಕುಳಿತುಕೊಂಡು ತನ್ನ ಸ್ನೇಹಿತನಾದ ಬೋಗ್ರಹೆಗ್ಗಡೆಗ ಮುಂದರಿಸಲಿಕ್ಕೆ ಹೇಳಿ ತಾನು ಹಿಂದಿನಿಂದ ಬೇಗನೆ ಬರುವೆನೆಂತ ಹೇಳಿದನು ಬೊಗ್ರಹೆಗ್ಗಡೆಯು ಇದನ್ನು ನಂಬಿ ಮುಂದರಿಸುತ್ತಿರುವಾಗ ಮೂಡ್ಲಗಿರಿ ಶ್ಯಾನುಭಾಗನು ತಾನು ಬಚ್ಚಿಟ್ಟ ಹರಿತವಾದ ಕತ್ತಿಯನ್ನು ತೆಗೆದು ಹಿಂದಿನಿಂದ ಬಂದು ಉಗ್ರಾಣಿಯ ಕುತ್ತಿಗೆಯನ್ನು ಕಡಿಯಲಿಕ್ಕೆ ಕತ್ತಿಯನ್ನು ಬೀಸಿದನು ದೈವವಶಾತ್ ಕತ್ತಿಯು ಕುತ್ತಿಗೆಗೆ ತಾಗದೆ ಬೆಜಕ್ಕೆ ಮಾತ್ರ ತಾಗಿ ಘಾಯವಾಗಿ ರಕ್ತ ಹರಿದು ಉಗ್ರಾಣಿಯು ಬಿದ್ದುಬಿಟ್ಟು ಬೊಬ್ಬಿಡುವುದನ್ನು ಕೇಳಿ ಉಗ್ರಾಣಿಯು ಸಜೀವನಾಗಿ ಉಳಿದಿರುವುದರಿಂದ ತನಗೆ ಆಪತ್ತು ಸಂಭವಿಸುವುದೆಂತ ಗ್ರಹಿಸಿ ಮೂಡ್ಲಗಿರಿ ಶ್ಯಾನುಭಾಗನು ಥಟ್ಟನೆ ಪಲಾಯನ ಮಾಡಿದನು ಉಗ್ರಾಣಿಯು ಬಿದ್ದಲ್ಲಿಂದ ಮೆಲ್ಲಗೆದ್ದು ಹತ್ತರವಿದ್ದ ಪೋಲೀಸು ಠಾಣ್ಯಕ್ಕೆ ನಡದ ವಿವರವನ್ನು ತಿಳಿಸಿದನು ಪೋಲೀಸಿನವರು ಮೂಡ್ಲಗಿರಿ ಶ್ಯಾನುಭಾಗನನ್ನು ತಲಾಸಿಯಿಂದ ಹಿಡಿದು ಈ ಮೊಕದ್ದಮೆಯು ನಡಿಯಿತು ಮೂಡ್ಲಗಿರಿ ಶ್ಯಾನುಭಾಗನಿಗೆ ೩ ವರುಷಗಳ ಕಠಿಣಸಜೆ ಶಿಕ್ಷೆಯನ್ನು ಜಡ್ಜರವರು ವಿಧಿಸಿರುವರು.

ಸರದಾರ ಮುಂಡಾಜೆ [illegible] [illegible]

ಕೆಲವು ದಿವಸಗಳಿಂದೀಚೆ ನಾಯಿಗಳ ಕಾಟವು ಬಹಳ ಕಡಿಮೆಯಾಗಿದ್ದರೂ ಹಂದಿಗಳ ಕಾಟವು ಮಿತಿಮೀರಿರುವದರಿಂದ ಮುನಿಸಿಪಾಲಿಟಿಯವರು ತಹಸೀಲ್‌ದಾರರವರ ಕೂಡ ಬೀದಿಗಳಲ್ಲಿ ಅಲೆದಾಡುವ ಹಂದಿಗಳನ್ನು ಸಹಾ ಕೊಲ್ಲಲು ಅಪ್ಪಣೆ ಕೇಳಿರುತ್ತಾರಂತೆ.

ಗೌಡಸಾರಸ್ವತರ ಸುಬ್ಬರಾವ್ ಮೆಮೋರಿಯಲ್ ಫಂಡಿನ ಕಮಿಟಿಯವರ ಸಭೆಯು ಇದೇ ತಿಂಗಳ ತಾರೀಕು ೧೪ರಲ್ಲಿ ಕೆನರಾ ಹ್ಯಾಸ್ಕೂಲಿನಲ್ಲಿ ಕೂಡಿತು. ಸಭೆಯವರು ಘರವೂರುಗಳಲ್ಲಿ ಚಂದಾಹಣ ಕೊಡುವರೆ ವಾಗ್ದತ್ತ ಮಾಡಿದವರಿಂದ ಇದನ್ನು ವಸೂಲು ಮಾಡುವರೆ ಆಯಾ ಊರುಗಳಲ್ಲಿ ಸಹಾಯಕ ಕಮಿಟಿಗಳನ್ನು ನೇಮಿಸಿರುವರಲ್ಲದೆ ಇಲ್ಲಿಯ ಚಂದಾಹಣವನ್ನು ಶೀಘ್ರದಲ್ಲಿಯೇ ವಸೂಲು ಮಾಡಬೇಕೆಂಬುವ ನಿರ್ಣಯವನ್ನು ಮಾಡಿರುವರು.

ನಮ್ಮ ಜಿಲ್ಲೆಯಲ್ಲಿ ತಹಸೀಲದಾರ, ಹಜೂರ ಸಿರಸ್ತೆದಾರ ಮೊದಲಾದ ಕೆಲಸಗಳನ್ನು ನೋಡಿ ಪ್ರಕೃತ ಉಡೋಪಿಯಲ್ಲಿ ಡಿಪ್ಯುಟಿ ಕಲೆಕ್ಟರರಾಗಿರುವ ಮ| ರಾ| ರಾ| ವರ್ಕಾಡಿ ರಾಮರಾಯರಿಗೆ ಆರು ತಿಂಗಳ ರಜೆಯು ಸೆಂಕ್ಷನ್ ಆಗಿರುತ್ತದೆ.

ಕಾಸರಗೋಡು. ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯು ಹಳೇ ತಾಲೂಕು ಕಚೇರಿಯ ಕಟ್ಟೋಣದಲ್ಲೂ, ಅದರ ಹತ್ತರವಿರುವ ಪ್ರೈಮರಿ ಶಾಲೆಯಲ್ಲಿ III ಮತ್ತು IV ಸ್ಟ್ಯಾಂಡರ್ಡ್ ಈಚೇಗೆ ಇಟ್ಟಿರುತ್ತಾರೆ. ಹಳೆ ತಾಲೂಕು ಕಚೇರಿಯ ಕಟ್ಟೋಣದಲ್ಲಿ ಸಾಕಷ್ಟು ಸ್ಥಳವಿದ್ದು ಎಲ್ಲಾ ಕ್ಲಾಸುಗಳು ಆ ವಂದೇ ಕಟ್ಟೋಣದಲ್ಲಿ ಮಾಡಬಹುದಾದರೂ ಪ್ರೈಮರಿ ಶಾಲೆಯು ಖಾಲಿಯಾಗಿಡದಂತೆ ೨ ಕ್ಲಾಸುಗಳು ಅದರಲ್ಲಿಟ್ಟದ್ದಾಗಿ ತೋರುತ್ತದೆ. ಆದರೆ ಈ ಪ್ರೈಮರಿ ಶಾಲೆಯ ಗೋಡೆಗಳ ಮಣ್ಣಿನ ಹೆಂಚಿಯು ಈಚೇಗೆ ೨—ವರ್ತಿ ಕ್ಲಾಸಿನಲ್ಲಿ ಕಲಿಯುವ ಹುಡುಗರ ಮೈಮೇಲೆ ಬಿದ್ದಾಗ್ಯೂ ಹೆಚ್ಚಿನ ಜಖಮುಗಳಾಗದೆ ಹ್ಯಾಗೂ ದೈವವಶಾತ್ ಬಡ ವಿದ್ಯಾರ್ಥಿಗಳು ಕಂಟಕದಿಂದ ತಪ್ಪಿದರು. ಇನ್ನೂ ಈ ಶಾಲೆಯ ಗೋಡೆಗಳು ಸ್ವಲ್ಪ ಸ್ವಲ್ಪ ಬೀಳುವ ಹಾಗಿದೆಯೆಂದೂ ಮತ್ತು ಮರದ ಅಡ್ಡಗಳು ಬರಿ ಕುಂಬಾಗಿ ಮುರಿದು ಬೀಳಲಿಕ್ಕೆ ಆಗಿದೆಯೆಂದೂ ಕೇಳುತ್ತೇನೆ. ಆದಾಗ್ಯೂ ಶಾಲಾಧಿಕಾರಿಗಳು ಈ ಕಟ್ಟೋಣದಿಂದ ಬೇರೆ ಕಡೆಯಲ್ಲಿ ಕ್ಲಾಸುಗಳು ಕೊಂಡುಹೋಗುವ ಆಲೋಚನೆಯನ್ನು ಮಾಡಿದ್ದಿಲ್ಲವಾಗಿ ಕೇಳಿ ವ್ಯಸನಪಡುತ್ತೇನೆ. ಇದಂತಿರಲಿ! ಮತ್ತೊಂದು ದೊಡ್ಡ ಕಟ್ಟೋಣದ ಸ್ಥಿತಿಯು ಇದಕ್ಕಿಂತಲೂ ಹೆಚ್ಚಿನದೇ. ಹಳೇ ನಮೂನೆಯ ಸಣ್ಣ ಹಂಚು ಅಥವಾ ಕಿನದ್ದಾದ ಕಾರಣ ಮಳೆಗಾಲದಲ್ಲಿ ಪ್ರತಿ ವರುಷವು ಸರಕಾರದವರು ದುರುಸ್ತಿ ಮಾಡಿಸುತ್ತಾ ಇರುವ ವಾಡಿಕೆ ಪ್ರಕಾರ ಈ ವರುಷ ಹೆಚ್ಚು ಸೋರುವ ರಿಪೋರ್ಟು ಹೋಗಿ ಪೂರ್ಣ ಹಂಚು ಸರಿಮಾಡಿಡಬೇಕಾಗಿ ಕಂಟ್ರಾಕ್ಟಿಗೆ ಕೊಟ್ಟಿತ್ತು. ಕಂಟ್ರಾಕ್ಟ್‌ದಾರನ ಕಡೆಯಿಂದ ಇದೇ ತಾ. ೧೧ನೇ ಗುರುವಾರ ದಿವಸ ಬೆಳಿಗ್ಗೆಯಿಂದ ಕೆಲವು ಹುಡುಗರು ಬಂದು ಶಾಲೆಯ ಮಾಡಿನ ಮೇಲೆ ಹತ್ತಿ ಹಂಚು ತೆಗದು ಸಮಮಾಡುತ್ತಾ ಇರುವಾಗ್ಯೆ ಸುಮಾರು ೧೧ ಘಂಟೆ ಸಮಯ ಪೂರಾ ಹಂಚು ಒಂದು ಮಾಡಿನದು ಜಾರಿಬಿತ್ತು. ಈ ಸಮಯದಲ್ಲಿ ಕೆಳಗೆ ಉಪಾಧ್ಯಾಯರೂ ವಿದ್ಯಾರ್ಥಿಗಳನೇಕರು ಇದ್ದಾಗ್ಯೂ ಜೀವಕ್ಕೇನೂ ಬಾಧಕವಾಗಲಿಲ್ಲ. ಅನೇಕ ವಿದ್ಯಾರ್ಥಿ ಹುಡುಗರ ಸ್ಲೇಟುಗಳೂ, ಕೊಡೆಗಳು ವಗೈರೆ ಹಾಳಾಗಿವೆ ಎಂತ ಕೇಳುತ್ತೇನೆ.

ಇದೇ ತಾ. ೧೧ನೇ ಶನಿವಾರ ದಿವಸ ಇಲ್ಲಿಯ ಆಸ್ಪತ್ರೆಯಲ್ಲಿ ೨ ಶವಗಳು ೧ ಮಂಜೇಶ್ವರ ಸ್ಟೇಶನಿನ ಸಿರ್ಕಿಯಿಂದಲೂ ಮತ್ತೊಂದು ಬೇಕ್ಲದಿಂದಲೂ ಪರೀಕ್ಷೆಗೋಸ್ಕರ ಬಂದಿತ್ತು. ಮತ್ತು ತಾ. ೧೫ನೇಗೆ ಒಂದು ಗರ್ಭಕೂನಿ ಮಾಡಿಕೊಂಡ ಹೆಂಗಸಿನ ಶವ ಸಹ ಆಸ್ಪತ್ರೆಗೆ ಪರೀಕ್ಷೆಗೆ ಬಂದಿತ್ತು. ಈ ೩ ಶವಗಳೂ ಆತ್ಮಹತ್ಯ ವ ಆಕಸ್ಮಾತ ನೀರಿನಲ್ಲಿ ಬಿದ್ದು ಸತ್ತದ್ದೆಂತ ವರ್ತಮಾನವಿದೆ. ಯವಂಚ ನಮ್ಮ ವೈದ್ಯಉದ್ಯೋಗಸ್ಥರಿಗೆ ಆಸ್ಪತ್ರೆಗೆ ಬಂದ ರೋಗಿಗಳಿಗೆ ಔಷದೋಪಚಾರ ಮಾಡಲಿಕ್ಕೆ ಸದಾ ಸರ್ವದಾ ಪುರುಸೋತು ಶಿಕ್ಕದಂತೆ ಶವ ಪರೀಕ್ಷೆಗಳೂ, ಪ್ಲೇಗ್ ಪಾಸ್‌ಪೋರ್ಟುಗಳೂ ಪದೇ ಪದೇ ಕಾಡುತ್ತವೆ.

ಕಳೆದ ವಾರದ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರ[illegible]

[illegible] ಹೊಡಕೊಂಡು ಬಂದ ಜಖಮಿನ ಬಂಟರ ಗೃಹಸ್ಥನು ಈ ಆಸ್ಪತ್ರೆಯಿಂದ ಜಿಲ್ಲಾ ಸರ್ಜನರು ನಿನ್ನೆ ಇಲ್ಲಿಗೆ ಬಂದು ನೋಡಿ ಮಂಗಳೂರಿಗೆ ವೈಯ್ಯಲ್ಪಟ್ಟನು. ಆದರೆ ನಿನ್ನೆ ರಾತ್ರಿಯೇ ಮಂಗಳೂರ ಆಸ್ಪತ್ರೆಯಲ್ಲಿ ಮೃತಪಟ್ಟ ವರ್ತಮಾನ ಇಲ್ಲಿ ತಲ್ಪಿಯದೆ. ಈ ಮೇಲಿನ ಮೊಕದ್ದಮೆಯಲ್ಲಿ ಒಟ್ಟಿಗೆ ೩ ಜನರಿಗೆ ಜಖಮು ಆಗಿ ಇಬ್ಬರು ಮೃತಪಟ್ಟು ಒಬ್ಬನು ಗುಣಹೊಂದಿರುವನು. ಮೊಕದ್ದಮೆಯು ಕ್ರಮಪ್ರಕಾರ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ತನಖಿಗೆ ಇಟ್ಟಿರುವರು.

ಇಲ್ಲಿ ಕಳೆದ ೨ ತಿಂಗಳಾರಭ್ಯ ಆಕ್ಟಿಂಗ್ ಮೇಜಿಸ್ಟ್ರೇಟರಾಗಿ ಕೆಲಸ ನೋಡುತ್ತಿದ್ದ ಮ. ರಾ. ಟ. ಭವಾನಿಶಂಕರರಾಯರು ಅನೇಕ ನಂಬರಗಳನ್ನು ಬಹಳ ನ್ಯಾಯನೀತಿಯಿಂದಲೂ ತೀವ್ರವಾಗಿಯೂ ತೀರಿಸಿ ಕಕ್ಷಿಗಾರರಿಗೆಲ್ಲಾ ಬಹಳ ನಷ್ಟಕಷ್ಟಗಳಿಂದ ವಿಮೋಚನೆ ಮಾಡಿದ್ದರಿಂದ ಊರ ಜನರೆಲ್ಲಾ ಸದರಿ ಶಂಕರ ರಾಯರನ್ನು ಬಹಳವಾಗಿ ಸ್ತುತಿಸುತ್ತಾರೆ. ಈ ದಿವಸ ಕಾಯಮಿನ ಮೇಜಿಸ್ಟ್ರೇಟರಾದ ಮ. ರಾ. ಅಚ್ಚುತಯ್ಯನವರು ಬಂದು ಚಾರ್ಜು ವಹಿಸಿಕೊಂಡಿರುತ್ತಾರೆ.

ಬಂಟ್ವಾಳ. ಇದೇ ಕಳದ ಮಳೆಗಾಲದಲ್ಲಿ ನೆರೆ ಬಂದು ನೀರಿನ ಬಡತದಿಂದ ಪೂರ್ಣ ಜರದು ಬಿದ್ದಿದ್ದ ಕಂಚಿಕಾರುಕುಟ್ಲ ಸಂಕವು ಪೂರ್ಣ ಚಲಾವಣೆಗೆ ಸಿದ್ಧವಾಗಿದೆ.

ಮುಲ್ಕಿ. ಇಲ್ಲಿಗೆ ಹೊಸತಾಗಿ ನೇಮಿಸಲ್ಪಟ್ಟು ಬಂದಂಥಾ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಆನಂದರಾಯರು ಪೆರ್ಡೂರಿಗೆ ವರ್ಗಾಯಿಸಲ್ಪಟ್ಟಿದ್ದರಿಂದ ಮಂಗಳೂರು ಟೌನಿನಲ್ಲಿ ಕೆಲಸ ನೋಡುತ್ತಿದ್ದ ಶ್ರೀನಿವಾಸ ಭಟ್ಟರವರು ಚಾರ್ಜು ವಹಿಸಿಕೊಂಡು ಕೆಲಸ ನಡಿಸುತ್ತಿರುವರು. ಮೇಲಾಧೀಕಾರರು ಒಂದೆರಡು ದಿನಗಳಲ್ಲಿಯೇ ಪೋಲಿಸು ಸಬ್ ಇನ್ಸ್‌ಪೆಕ್ಟರರನ್ನು ಒಂದು ಸ್ಥಳದ ಮಾಹಿತಿ ಗೊತ್ತಾಗುವ ವೊದಲೇ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವ ಉದ್ದಿಶ್ಯವು ತಿಳಿಯಲು ಕಷ್ಟ.

ಪರಮಾತ್ಮನ ಕಟಾಕ್ಷದಿಂದ ಮೃಗಶಿರ ನಕ್ಷತ್ರದ ಮಳೆಯು ಯಥೇಷ್ಟವಾಗಿ ದೊರೆಯುತ್ತಲಿದೆ ಮಾತ್ರವಲ್ಲದೆ ಒಕ್ಕಲಿಗರೆಲ್ಲರೂ ಹರುಷಿತರಾಗಿ ಸೊಂಟ ಕಟ್ಟಿಕೊಂಡು ತಮ್ಮ ಕೆಲಸಗಳನ್ನು ಅತ್ಯಾಸಕ್ತಿಯಿಂದ ಮಾಡತೊಡಗಿರುವರು. ವರ್ಗದಾರರಾದರೋ ಕೈಕಾಲು ಮುರುಟು ಕಟ್ಟಿಕೊಂಡವರಂತೆ ಹುಟ್ಟು ಮೈಗಳ್ಳರಂತೆ ವರ್ತಿಸುವರು.

ಇಲ್ಲಿಯ ಸಾಹುಕಾರರೊಬ್ಬರಿಗೆ ಒಂದು ಕಥೋಲಿಕನಿಂದ ಸಲ್ಲತಕ್ಕಂಥಾ ಹಳೇ ಸಾಲ ಒಂದು ಇತ್ತಂತೆ. ಸಾಲಗಾರನ ಮೇಲೆ ಆಗಿದ್ದಂಥಾ ಕೋರ್ಟು ಡಿಕ್ರಿಗೆ ಕೂಡಾ ವ್ಯಾದೆಯು ದಾಟಿಹೋಗಿತ್ತಂತೆ. ಸದರಿ ಕಥೋಲಿಕ ಮಾನವನ ಮನೆಯಲ್ಲಿ ಮದುವೆಪ್ರಸ್ತ ಒಂದು ನಡೆಯಲಿಕ್ಕಿದ್ದದರಿಂದ ಈತನಿಗೆ ಎರಡು ಪವನುಗಳ ಖಾಯಿಶಿ ಬಿದ್ದು ನಮ್ಮ ಅಂಗಡಿಗಳೊಂದರಲ್ಲಿಯೂ ಪವನು ದೊರಕದೆ ಸದರಿ ಸಾಹುಕಾರರಲ್ಲಿ ಪವನು ಉಂಟೆಂತ ಕೇಳಿ ಅಲ್ಲಿಗೆ ಹೋಗಿ, ಸ್ವಾಮಿ! "ಎರಡು ಪವನು ದೊರಕೀತೇ ಎಂದು ಕೇಳಲು—ರಾಯರು, "ಉಂಟೆಂದೇಳಿ ಮೂವತ್ತು ರೂಪಾಯಿ ಎಂಟಾಣೆಯನ್ನು ಕಿಸೆಯೊಳಗೆ ಹಾಕಿ, ಇದು ನನ್ನ ತಾತನಿಗೆ ಸಲ್ಲತಕ್ಕಂಥಾ ಸಾಲಕ್ಕಾಯಿತು ಎಂತ ಬೆದರಿಸಿಬಿಟ್ಟರಂತೆ.!! ಈ ಮಾನವನು ಎಷ್ಟು ಬೇಡಿಕೊಂಡರೂ ಹಣವಾಗಲೀ ಪವನಾಗಲೀ ಹಿಂದೆ ದೊರಕದ್ದರಿಂದ ಕೂಡಲೇ ಪೋಲೀಸ್ ಸ್ಟೇಶನಿಗೆ ಓಡಿ, ಸರ್ಕೀಟಿನ ಮೇಲೆ ಬಂದಿದ್ದಂಥಾ ಪೋಲೀಸ್ ಸುಪರಿಂಟೆಂಡೆಂಟರ ಬಳಿಯಲ್ಲಿ ಬಿದ್ದುಕೊಳ್ಳಲು ಅವರು ತತ್ಕ್ಷಣವೇ ಇನ್ಸ್‌ಪೆಕ್ಟರರನ್ನು ಕಳುಹಿಸಿ ಸಾಹುಕಾರರಿಂದ ವಾಚ್ಮಾಲ ತಕ್ಕೊಂಡು ನಂಬ್ರಮಾಡಿ ಮಂಗಳೂರಿಗೆ ಬಂದಿರುವರಂತೆ. ಈ ಮೊಕದಮೆಯ ಪರಿಣಾಮವು ಏನಾಗುವುದೆಂಬದನ್ನು ಸರ್ವರೂ ನಿರೀಕ್ಷಿಸಿಕೊಂಡಿರುವರು.

ಉಡುಪಿ. ಈ ತಾ. ೭ಕ್ಕೆ ಸರಿಯಾಗಿ ಮಳೆಯು ಪ್ರಾರಂಭವಾಗಿ ಸಾಧಾರಣವಾಗಿ ಸುರಿಯುತ್ತಾ ಇದೆ. ಎಣ್ಣೆ ಬೆಲ್ಲ ತುಪ್ಪ ಮೊದಲಾದ ಪದಾರ್ಥಗಳ ಬೆಲೆಯು [illegible]

[illegible] ಬ್ರಾಹ್ಮಣ ಗೃಹಸ್ಥನ ಮೂರು ಮಂದಿ ಮಕ್ಕಳು ಈ ಮಾರಿ ರೋಗಕ್ಕೆ ತುತ್ತಾದರು. ಕಾಪು ಎಂಬಲ್ಲಿ ಒಂದು ಬ್ರಾಹ್ಮಣ ಕುಟುಂಬದಲ್ಲಿ ಮೂರು ಮಂದಿ ಸಹೋದರರೂ ಅವರ ಪೈಕಿ ಇಬ್ಬರ ಹೆಂಡಂದಿರೂ ಇದೇ ರೋಗದಿಂದ ಸ್ವಲ್ಪ ದಿವಸಗಳ ನಂತರದಲ್ಲಿಯೇ ತೀರಿಹೋದರು.

ಇಲ್ಲಿಯ ಬೋರ್ಡ್ ಶಾಲೆಯನ್ನು ಈ ತಾ. ೮ಲ್ಲು ಹಳೆ ತಾಲೂಕು ಕಚೇರಿ ಕಟ್ಟಡಕ್ಕೆ ವೈದಿರುವರು. ಮೊದಲಿನ ಕಟ್ಟಡ ಒಂದಕ್ಕೆ ಬಾಲಿಕಾ ಪಾಠಶಾಲೆಯನ್ನು ತರುವರಂತೆ.

ಈ ವರುಷದ ಸಿಡುಬುರೋಗದ ಸಮ್ಮಂಧ ಕಾಪು ಮಾರಿಗುಡಿ ಒಂದರಲ್ಲಿಯೇ ಹರಿಕೆಗಾಗಿ ಸುಮಾರು ಮುನ್ನೂರು ಕುರಿಗಳು ಕಡಿಯಲ್ಪಟ್ಟವಂತೆ. ಸಾವಿರಾರು ಕೋಳಿಗಳನ್ನು ಕಡಿದಿರುವರಂತೆ. ಕೆಲವರು ಬ್ರಾಹ್ಮಣ ಜಾತಿಯವರೂ ಕೂಡಾ ಸ್ವಾರ್ಥಕ್ಕಾಗಿ ಇಂತಹ ಪ್ರಾಣಿಹಿಂಸೆಗಳಿಗೆ ಮನಸ್ಸು ಕೊಡುವದು ಅತಿ ಆಶ್ಚರ್ಯವೂ ದುಃಖಕರವೂ ಆಗಿದೆ.

ವಿವಿಧ ವಿಷಯಗಳು.

ಮಳೆಗಾಲವು ಪ್ರಾರಂಭಿಸಿರುವುದು. ಚಿಕ್ಕ ಮಕ್ಕಳಿಗೆ ಶೀತ ಮೊದಲಾದ್ದರಿಂದ ಕೆಮ್ಮು ತೊಡಗಿರುವುದು. ಈ ಕೆಮ್ಮಿನ ದೆಸೆಯಿಂದ ತಂದೆತಾಯಿಗಳಿಗೆ ರಾತ್ರಿ ಎಲ್ಲಾ ನಿದ್ರಾಭಂಗವಾಗುವುದು. ಅನುಭವದಿಂದ ಖಾತ್ರಿಯಾದ ಈ ಕೆಳಗಿನ ಔಷಧಿಯನ್ನು ತಕ್ಕೊಂಡು ಶೀಘ್ರದಲ್ಲಿ ಮಕ್ಕಳನ್ನು ಈ ಬೇನೆಯಿಂದ ಗುಣಪಡಿಸಬಹುದು. ಔಷಧಿಯು ಯಾವುದೆಂದರೆ:—ಒಳ್ಳೇ ನಿಂಬೆಹಣ್ಣು ಮೂರರ ರಸ ಹಿಂಡಿತೆಗದು ಅದಕ್ಕೆ ಸಮಪಾಲು ಕುದಿಯುವ ನೀರನ್ನು ಬೆರಸಿ ಸಾಧಾರಣ ಸರಬತಿನಷ್ಟು ದಪ್ಪವಾಗುವಂತೆ ಅದಕ್ಕೆ ಸಕ್ಕರೆಯನ್ನು ಕೂಡಿಸುವುದು. ಸಕ್ಕರೆಯನ್ನು ಕೂಡಿಸಿ ಆದನಂತರ ದೊಡ್ಡದೊಂದು ಅವರೆ ಕಾಳಿನಷ್ಟು ದೊಡ್ಡದಾದ ಶುದ್ಧ ಮಾಡಲ್ಪಟ್ಟ ಪಟಿಕಾರದ (Alum) ತುಂಡನ್ನು ಇದರಲ್ಲಿ ಹಾಕಿ ತಿರಿಗೊಮ್ಮೆ ಈ ಶರಬತನ್ನು ಚನ್ನಾಗಿ ಬಿಸಿಮಾಡಿ ಎಲ್ಲವೂ ಸರಿಯಾಗಿ ಮಿಶ್ರವಾಗುವಂತೆ ಕಲಸಿ ಒಲೆಯಿಂದ ತೆಗದು ತಣ್ಣಗಾಗುವರೆ ಬಿಡುವುದು. ತಣ್ಣಗಾದ ನಂತರ ಕೆಮ್ಮು ಬಹಳ ಕಠಿಣವಾದರೆ ಗಂಟೆಗೆ ಒಂದು ಸಲ ಈ ಔಷಧಿಯಿಂದ ಒಂದು ಚಾ ಚಮುಚೆ ಹಿಡಿಯುವಷ್ಟು ಔಷಧಿಯನ್ನು ಕೊಡಬೇಕು. ಇದಕ್ಕಿಂತ ಅಲ್ಪ ಪರಿಮಾಣದಲ್ಲಿ ಈ ಔಷಧಿಯನ್ನು ಆಗಿಂದಾಗ್ಯೆ ತಕ್ಕೊಂಡರೆ ಇನ್ನಷ್ಟು ಹೆಚ್ಚು ಬೇಗನೆ ಕೆಮ್ಮು ವಾಸಿಯಾಗುವುದು.

ಜೀವನಸುಗಳ ಧಾರಣೆ, ಮಂಗಳೂರು. (ರಖಂ)

ಕೊಳೊಂಬು ಮಸ್ತಿ ಅಕ್ಕಿ	4—10—0
ಗುದ್ದು ಮಸ್ತಿ ,, ...	4—4—0
ಮಸ್ತಿ ದುಯಂ ,, ...	4—2—0
ವಕ್ಲ ಸುಗ್ಗಿ ,, ...	4—3—0
ಸುಗ್ಗಿ ದುಯಂ ,, ...	4—0—0
ಮಸ್ತಿ ಬೆಳ್ತಿಗೆ ,, ...	5—6—0
ರಂಗೂನ್ ಬೆಳ್ತಿಗೆ ಗೋಣಿ	8—2—0
ಹುರುಳಿ ಗೋಣಿ ೧ ಮುಡಿ ೨ರ ...	6—0—0
ಉಪ್ಪು ಗೋಣಿ ೧ರ	3—12—0
ಕೊಬ್ರಿ ಖಂಡಿ ೧ರ	105—0—0
ಕೊಬ್ರಿ ಎಣ್ಣೆ ಮಣ	6—15—0
ಕಾಫಿ ಖಂಡಿ ೧ರ	175—0—0
ಕಾಳು ಮೆಣಸು ಖಂಡಿ [illegible]	118—0—0
[illegible]	80—0—0
[illegible]	65—0—0
[illegible]	28—0—0

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಎಣ್ಣೆ. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ.

ಬಾಟ್ಲಿ ಒಂದರ 8 ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸದ ವರೆಗೆ ಹೋಗುವದಿಲ್ಲ

ಬಾಟ್ಲಿ ಒಂದರ 8 ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು. ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ದೆ ಬೀಳುವದು

ಬಾಟ್ಲಿ ಒಂದರ 6 ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ. ಇದರಿಂದ ಮೆದುಳು ತಂಪಾಗುವದು. ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೆಗೆ ಹೋಗುವದಿಲ್ಲ.

ಬಾಟ್ಲಿ ಒಂದರ 6 ಆಣೆ

ಮಾಲತಿ ಅತ್ತರು.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು ಇದರ ಪರಿಮಳವು ಹೆಚ್ಚು ದಿವಸದ ವರೆಗೆ ಹೋಗುವದಿಲ್ಲ. ಒಂದು ಸಾರಿ ಪರೀಕ್ಷಿಸಿದರೆ ತಿಳಿಯಬರುವದು. ಎಲ್ಲಾ ಅತ್ತರುಗಳಿಗಿಂತ ಇದು ಉತ್ತಮ. ಬಾಟ್ಲಿ ಒಂದರ ಕಿಮ್ಮತ್ತು 0—12—0

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕೆ

ಕೆ. ಗೋಪಾಲ್ ರಾವ್

ನಂಬ್ರ 3 ಕಂಟ್ರಾಕ್ಟರ್ ಬಿಲ್ಡಿಂಗ್ ಗಿರ್ಗಾಂವ ಮುಂಬಯಿ

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವ ದರ

	೧ ಸಾರಿ	೪ ಸಾರಿ	೬ ಸಾರಿ	೨೪ ಸಾರಿ	೫೨ ಸಾರಿ
ಪೂರ್ಣ ಪಾನು	ರೂ ೧೦	ರೂ [illegible]	ರೂ [illegible]	ರೂ ೧೧೦	ರೂ [illegible]
ಅರ್ಧ ಪಾನು	,, [illegible]	,, [illegible]	,, [illegible]	[illegible]	[illegible]
ಕಾಲು ಪಾನು	,, ೪	[illegible]	,, [illegible]	,, [illegible]	, [illegible]
ಅರೆಕಾಲು ಪಾನು	,, [illegible]	[illegible]	, [illegible]	, [illegible]	[illegible]

ಸೂಚನೆ—ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ವಾಹಿತಿಗೂ 'ಮೆನೇಜರ್ ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ' ಈ ವಿಳಾಸಕ್ಕೆ ಬರೆಯುವದು. ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ತೆರತಕದ್ದು

ಸ್ವದೇಶಾಭಿಮಾನಿಯ ಚಂದಾ ನಿರ್ಣಯ

ಟಪ್ಪಾಲು ಹಾಸಲು ಸೇರಿ ೧ ವರುಷಕ್ಕೆ ರೂ ೧ ಆ. ಟಪ್ಪಾಲು ಹಾಸಲು ಇಲ್ಲದೆ ೧ ರೂ. ೪ ಆ. ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ ಒಂದೊಂದಕ್ಕೆ ಸೇರಿ ೧ ರೂ. ಆ. ಟಪ್ಪಾಲು ಹಾಸಲು ಸಹಿತ ಅರ್ಧ ವರುಷಕ್ಕೆ ೧ ರೂ ೧ ಆ.

BERNA WATCH COMPANY.

ಬರ್ನಾ ವಾಚು ಕಂಪೆನಿ.

ಈ ಗಡಿಯಾರಗಳನ್ನು ತಯಾರಿಸುವ ಕಾರಖಾನೆಗಳಲ್ಲಿ ಇದೊಂದೇ ಕಂಪೆನಿಯು ಶಾಖೆಯು ಹಿಂದುಸ್ಥಾನದಲ್ಲಿರುವದು. ಗ್ಯಾರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರಗಳನ್ನು ಮಾತ್ರ [illegible] ವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅನ್ಯವಾದ ಬೆಲೆಯು. ನಮ್ಮ ಗಡಿಯಾರಗಳು ಖಂಡಿತವಾಗಿ ತೃಪ್ತಿ ಕೊಡುವವು



ನಮ್ಮ 'ಮೆಕ್ಸಿಮ' ವಾಚನ್ನು ಒರವಸೆಯಿಂದ ಕೊಂಡು ಕೊಳ್ಳಿರಿ

ನಿಕಲ್ ಕೇಸಿನಲ್ಲಿ ರೂ ೧೦-೦-೦

ಬೆಳ್ಳಿ ಕೇಸಿನಲ್ಲಿ ರೂ ೧೪-೮-೦

ನಮ್ಮ 'ನ್ಯೂ ಡಿ ಪಿ' ನಿಕಲ್ ಕೇಸಿನಲ್ಲಿ ರೂ ೧೪ ೦ ೦

ಬೆಳ್ಳಿ ಕೇಸಿನಲ್ಲಿ ರೂ ೧೮ ೮ ೦

ಕೆಟಲಾಗನ್ನು ಉಚಿತವಾಗಿ ಕಳುಹಿಸಿ ಕೊಡುವೆವು

ನಮ್ಮ 'ಚಾರ್ಮರ್' ನಿಕಲ್ ಕೇಸಿನಲ್ಲಿ ರೂ ೧೬ ೦ ೦.

ಬೆಳ್ಳಿ ಕೇಸಿನಲ್ಲಿ ರೂ ೨೧ ೦ ೦.

ನಮ್ಮ 'ವರ್ಡಲಿ.' ನಿಕಲ್ ಕೇಸಿನಲ್ಲಿ ರೂ ೧೮-೦-೦.

ಸಿಲ್ವರ್ ಕೇಸಿನಲ್ಲಿ ರೂ ೨೩-೦-೦.

ನಮ್ಮ 'ಬೆಸ್ಟ್' ನಿಕಲ್ ಕೇಸಿನಲ್ಲಿ ರೂ. ೨೧-೦-೦.

ಬೆಳ್ಳಿ ಕೇಸಿನಲ್ಲಿ ರೂ ೨೭-೦-೦.

ಎಲ್ಲಾ ಗಡಿಯಾರುಗಳು ಜಂಟ್ಸ್ ಸ್ಯಾಜಿನಲ್ಲಿರುವವು. ವಾಚುಗಳನ್ನು ೪ ಆಣೆ ಹೆಚ್ಚಿಗೆ ಖರ್ಚಿನಲ್ಲಿ ವಿ ಪಿ ಮಾರ್ಗ ಕಳುಹಿಸುವೆವು. ನಂಬ್ರ 59 ಎಸ್‌ಪ್ಲೆನೇಡ್ ರೋಡ್ ಮುಂಬಯಿ ಆಫೀಸಿನಲ್ಲಿಯೂ ಮತ್ತು ಹಿಂದೂಸ್ಥಾನದಲ್ಲಿರುವ ಎಲ್ಲಾ ವಾಚು ಮಾರಾಟದವರಲ್ಲಿಯೂ ಕ್ರಯಕ್ಕೆ ದೊರಕುವವು

ಅನುಪಾನಪತ್ರ ಬಾಟ್ಲಿಯೊಂದಿಗಿರುವುದು { **ಸಿದ್ಧಲಕ್ಷ್ಮೀ ವಿಲಾಸ.** } ಕ್ರಯ ಬಾಟ್ಲಿ ೧ಕ್ಕೆ 12 ಆಣೆ.

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ. ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು. (ಆಸನದಲ್ಲಿ) ಗುದದ್ವಾರದ ಹತ್ತರ ಬೀಳುವಂಥಾ ತೂತುಗಳೂ, ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವ್ರಣಾದಿ ಬಾಧೆಗಳೂ, ಖಜ್ಜ ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. ರಕ್ತಶುದ್ಧಿಗೆ ಇದು ದಿವ್ಯ ಔಷಧವಾಗಿರುವದು

ಈ ಔಷಧಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು. ಮುಲ್ಕಿ ಸುಬ್ರಾಯ ಮುಕುಂದ ಪ್ರಭು [illegible] ಮಂಗಳೂರು. ಕುಂದಾಪುರ ರಾಮಚಂದ್ರ [illegible] [illegible] ದೊರಕುವದು

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು. ಇಂಗ್ಲೀಷ್ ಮತ್ತು ನೇಟಿವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು. ಶೇಬು, ಕಿತ್ತಳೆ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟಿವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು ಬರೆದು ತರಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಎಮ್. ದ್ಯಾವಪ್ಪ ಅಂಡ್ ಸನ್ಸ್,

[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿಳಿದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೬ ಬಾಟ್ಲಿಗೆ ೨ ರೂ. ೧೦ ಆಣೆ,

೨ ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ.

೫ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೬ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ ೮ ಆಣೆ

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ.

೮ ಸರಳಭೇದಿ ಮಾತ್ರೆ ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ. ೩ ಕರಡಿಗೆಗೆ ೧೧ ಆಣೆ.

೧೪ ಸಜ್ಜೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣಶಕ್ತಿಯನ್ನು ಬೆಳೆಯಿಸುವದು, ನಾಲಿಗೆಗೆ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:— **B. M. Nathu & Co.,**
Ayurvedic Chemists
Vepery Post, MADRAS.

ರೋಯಲ್ ಇಂಡಿಯನ್ ಬಾಮ್.

ವಾತ ನಿವಾರಣೆಯಲ್ಲಿ ಅಗ್ರಸ್ಥಾನ ಹೊಂದಿಯದೆ.

ಟಿ ಲ್ ನಾಸಿಕ್ ಮುನ್ಸಿಪಾಲ್ ಸೆಕ್ರಟರಿ ಹಂಗನಘಾಟಿ ಮದ್ಯ ಪ್ರದೇಶ ಇವರು ಬರಿಯುತ್ತಾರೆ. ನಾನು ಮನೋರಾ ಕಂಪೆನಿಯ ರೋಯಲ್ ಇಂಡಿಯನ್ ಬಾಮನ್ನು ವಾತದ ನೋವುಗಳ ಮೇಲೆ ಉಪಯೋಗಿಸಿದ್ದಲ್ಲಿ ಪೂರ್ಣವಾಗಿ ಗುಣಬಂದಿರುತ್ತದೆ ಈ ಅಮೂಲ್ಯವಾದ ಮುಲಾಮು ಎಲ್ಲಾ ಮುಲಾಮಿಗಿಂತಲೂ ಶ್ರೇಷ್ಟವಾದದ್ದು

ರೋಯಲ್ ಇಂಡಿಯನ್ ಬಾಮ್.

ತಲೆ ನೋವು, ಸಂಧಿವಾತ, ಉಳುಕು ಮೂರು ಲೇಪನಗಳಿಂದ ಗುಣವಾದದ್ದು

ಇಂದು ಪ್ರಕಾಶ ಎಂ. ಇಂಗ್ಲಿಷು ಪತ್ರ ಬರಿಯುವದೇನಂದರೆ —ಮನೋರಾ ಕಂಪೆನಿಯವರ ರೋಯಲ್ ಇಂಡಿಯನ್ ಬಾಮ್ ತಲೆನೋವಿಗೂ ಸಂಧಿವಾತಕ್ಕೂ ಉಳುಕಿಗೂ ಬಹಳ ಉತ್ತಮವಾದದ್ದು ಇದನ್ನು ಲೂತಿಘಾಯಗಳ ಮೇಲೂ ಚೇಳು ಕಡಿತದ ಮೇಲೂ ಸುಖಕರವಾಗಿ ಉಪಯೋಗಿಸಬಹುದು

ರೋಯಲ್ ಇಂಡಿಯನ್ ಬಾಮ್.

ಇದರಿಂದ ವಾತ, ಸಂಧಿವಾತ, ತಲೆನೋವು, ಜಖಮು, ಘಾಯ, ಉರಿ, ಸೊಂಟದ ನೋವು, ಉಳುಕು ಮುಂತಾದ ಎಲ್ಲಾ ತರದ ನೋವುಗಳು ಖಾತ್ರಿಯಿಂದ ನಿಲ್ಲುವವು ಬಾಟ್ಲಿ ಒಂದರ ಕಿಮ್ಮತು 0-8-0, 6 ಬಾಟ್ಲಿಗಳಿಗೆ 2-10-0, 12 ಬಾಟ್ಲಿಗಳಿಗೆ 5 0-0 ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ಶಿಕ್ಕುವದು

ವಿಳಾಸ:—ಮನೋರಾ ಮತ್ತು ಕಂಪೆನಿ, ಗಿರಗಾಂ, ಮುಂಬಯಿ.

ಏಜಂಟರು, **ಪರ್ಲ ಎಂಡ್ ಸನ್ಸ್ ಮಂಗಳೂರು.**
ಬೇಕಲ ವೆಂಕಟ ರಾವ್, ಉಡುಪಿ.

ರಾಮರಾವ್ ನಾನಾಬಾಯಿ ಕಾಳೆ ಇವರ,



ಸುರಂಗಿ ಅತ್ತರು



ಇದು ಸುರಂಗಿ ಹುಗಳಿಂದಲೇ ತಯಾರಿಸಲ್ಪಟ್ಟ ಅತಿ ಸುವಾಸಿಕ ಮತ್ತು ಮನೋಹರವಾದ ಅತ್ತರು ಇಂಗ್ಲಿಷು ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು. ಇದರ ಸುವಾಸಿಕವಾದ ಮತ್ತು ಮನೋಹರವಾದ ಪರಿಮಳವು ಹೆಚ್ಚು ಸಮಯದ ವರೇಗೆ ಹೋಗುವದಿಲ್ಲ ಈ ನಮ್ಮ ಅತ್ತರನ್ನು ಪರೀಕ್ಷಿಸದ ಜನರು ಹಾಗೆ ಒಂದು ಸಾರಿ ಪರೀಕ್ಷಿಸಿ ನೋಡಬಹುದು ಬಾಟ್ಲಿ ಒಂದರ ಕಿಮ್ಮತು ೧—೪—೦.

ದಿಲ್ ಖುಷ್ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಈ ಅತ್ತರನ್ನು ಒಂದು ಸಾರಿ ತರಿಸಿ ನೋಡಿರಿ ಇದಕ್ಕೆ ಮನೋಹರವಾದ ಪರಿಮಳವು ಬರುತ್ತದೆ. ಬಾಟ್ಲಿ ಒಂದರ ಕಿಮ್ಮತು ೧—೦—೦

ಜುಯಿ. ಈ ಅತ್ತರಿನ ವಿಷಯವಾಗಿ ಹೆಂಗಸರೂ ಗಂಡಸರೂ ಬಹಳವಾಗಿ ಕೊಂಡಾಡುತ್ತಾರೆ ಇದರ ಮನೋಹರವಾದ ಸುವಾಸನೆಯು ಹೆಚ್ಚು ದಿವಸಗಳ ವರೇಗೆ ಇರುತ್ತದೆ. ಬಾಟ್ಲಿ ಒಂದರ ಕಿಮ್ಮತು ೦—೧೪—೦.

ನಾವು ತಯಾರಿಸುವ ಅತ್ತರುಗಳಲ್ಲಿ ಸ್ಪಿರಿಟ್ ವಗೈರೆ ಏನೂ ಇಲ್ಲದೆ ಖಾಸಾ ಬಟ್ಟಿ ಇಟ್ಟು ತೆಗದದ್ದಾಗಿರುತ್ತದೆ

ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು.

ಎಲ್ಲಾ ಮಾಹಿತಿಗೂ, ಅತ್ತರುಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರದ್ದಲ್ಲಿ ಸಿಕ್ಕುವದು.

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕೆ

[illegible]

ಅಬಲಾ ಸಂಜೀವಿನಿ ಗುಳಿಗೆಗಳು.

ಇದು ಸ್ತ್ರೀಯರ ಮಾಸಕಟ್ಟಿಳಿಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮ ಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ. ಮಾಸಕಟ್ಟಿಳಿಯ ರಕ್ತಸ್ರಾವವೇ ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದರೂ, ಅಥವಾ ಅಕ್ರಮವಾಗಿ ಸ್ಥರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ. ಗರ್ಭಕೋಶದ ರೋಗರುಜಿಗಳಲ್ಲಿ ಈ ಔಷದವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ. ದೇಹದಲ್ಲಿ ಯಾವದೊಂದು ಅಕ್ರಮ ಗುರ್ತು ಕಂಡುಬಂದಾಗ್ಯೂ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು. ಉಪಯೋಗಿಸಿದವರು ಅವುಗಳ ಬಗ್ಗೆ ತಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ. ವಿಶೇಷ ಮಾಹಿತಿಯ ಕೆಟಲಾಗನ್ನು ಉಚಿತವಾಗಿ ಕಳುಹಿಸುವೆವು. ಔಷಧಿ ಕ್ರಯ ೧ ರೂ. ವಿ. ಪಿ. ಅಂಚೆ ಹಾಸಲು ೪ ಆಣೆ.

ಮಿಡ್ ವೈಫ್ ರಾದ ಕಮಲಾಬಾಯಿ, ಬಿ. ಎ.

HE HINDU SOAP MANUFACTURING CO.,
ಹಿಂದೂ ಸೋಪ್ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ.

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ. ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ. ಚರಬಿ ವಿರಹಿತವಾಗಿದ್ದು. ಮಾದರಿಗಳೂ, ವಿಶೇಷವಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ವ್ಯಾಪಾರಕ್ಕೆ ಏಜಂಟರನ್ನು ಅಪೇಕ್ಷಿಸುವವರು ಬರಕೊಳ್ಳಬಹುದು.

ದಿ ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಏಜಂಟ್ಸ್.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆಸ್ಸಿ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಬಿಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು. ಡಬ್ಬಿ ೧ರ ಕ್ರಯ 0-8-0

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ 2-8-0

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ. ವಿ. ಪಿ. ಖರ್ಚು ಪ್ರತ್ಯೇಕ. ಟಿ. ಬಾಬುರಾಯರ

ಆಯುರ್ವೇದಿಕ್ ಔಷಧಾಲಯ,

ಪೆಟ್ರೂಲ್ ಮಾರ್ಕೆಟ್ ರಸ್ತೆ, ಮಂಗಳೂರು, ದ. ಕ.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಸ್ಥೆ ಉತ್ತರ ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಪ್ರಸಿದ್ಧ ಪರಿಚಿತಿಯುಳ್ಳದ್ದಾಗಿದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪ್ ಸಹಿತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ— ರಂಗಪ್ಪಾ ರಾಮಕೃಷ್ಣ ಕವಿ.

ಮನೋಹರ ಬಿಲ್ಡಿಂಗ್ ಲೊಹಾರ್ ಚಾಲ್, ಮುಂಬಯಿ.

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,

ಮಂಗಳೂರು, ದ. ಕ.

ನಮ್ಮಲ್ಲಿ ಎಲ್ಲಾ ತರದ ಬೀಡಿ ಪಟ್ಟಿ ವ ಕೋರ್ಟಿಂಗ್, ಸ್ಟೆಶನರಿ, ಕಟ್ಲರಿ, ಗ್ಲಾಸವೇರ್, ಬಯಲಸ್ಕೋಪ್ಸು ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮನೆಗಾಲಕ್ಕೆ ಉಪಯೋಗವಾಗುವ ಪೈನೆಲು, ಎಲ್ಲಾ ಜಾತಿಯ ಕೊಡೆಗಳು ರಖಂ ಬಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ಹೆಚ್ಚು ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

ಡಾಕ್ಟರ್ ವಾಮನ ಗೋಪಾಲರವರ

ಏಲೋಪ್ಯಾಥಿಯಿಂದ ಕೂಡಿರುವ

ಸರ್ಸಪರಿಲ್ಲಾ.

ರಕ್ತಶುದ್ಧಿ ಬಗ್ಗೆ ಅತ್ಯುತ್ಕೃಷ್ಟವಾದ ಔಷಧಿಯು. ಸಾವಿರಾರು ಜನರು ಇದನ್ನು ಸೇವಿಸಿದ ಅನುಭವದಿಂದ ಅತ್ಯಂತ ಗುಣಕಾರಿಯೆಂದು ಕಂಡುಕೊಂಡಿರುವರು. ಬಹುಕಾಲದ ವಾತ, ಚರ್ಮರೋಗಗಳು, ಗಂಟುವಾಯು, ಪಕ್ಷವಾತ, ಅಶುದ್ಧರಕ್ತದಿಂದ ಉಂಟಾಗಬಹುದಾದ ಇತರ ರೋಗಗಳು, ಬಹಿರಂಗತೆ ಈ ಎಲ್ಲಾ ರೋಗಗಳಿಗೆ ಖಾತ್ರಿಯಾದ ಔಷಧಿಯೆಂದು ಕಳೆದ ಐವತ್ತು ವರುಷಗಳಿಂದ ಎಲ್ಲಾ ರಕ್ತಶುದ್ಧಿಯ ಔಷಧಿಗಳಲ್ಲಿ ಶ್ರೇಷ್ಠವಾದುದೆಂದು ಧಾರೋಕದಲ್ಲೆಲ್ಲಾ ಕೀರ್ತಿಗೊಂಡಿರುತ್ತದೆ. ಧಾತು ಪುಷ್ಟಿಗೆ ಉತ್ತಮವಾಗಿರುವದರಿಂದ ಇದರ ಪ್ರತಿನಿತ್ಯದ ಸೇವನೆಯು ಆಲೋಚನಾಶಕ್ತಿಯನ್ನು ಬಳಗೂಳಿಸಿ ಶರೀರದಲ್ಲಿ ಚೈತನ್ಯವನ್ನುಂಟುಮಾಡುವುದು.

ಒಂದು ಬಾಟ್ಲಿ ಒಂದಕ್ಕೆ ರೂ. ೨ ಆ. ೪. ಡಜನ್ ಬಾಟ್ಲಿಗಳು ದಸ್ತುರಿ ೫ ಆಣೆ.

ಗುಣಕಾರಿಯಾದ ಮುಲಾಮು ... ಟೂತ್ ಪೌಡರ್ ಆಣೆ ೨.

ಏಜಂಟರು: ಮ್ಯಾನೇಜರ್, ಮಾಡರ್ನ್ ಬುಕ್ ಡಿಪೊ, ...

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ರೂ. ೩ ರೂ. ೨ರೂ. ೧೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ. ಮಕ್ಕಳಿಗೆ ಬರುವ ಬಾಲಗ್ರಹ (ಫಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ದೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ— ಮದ್ರಾಸು ಆಫಿಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯುಳ್ಳವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೆಗಿನ ಪೊಲೀಸುಗಳಿಗೆ ಜೀವ ವಿಮೆ ಆಕಿ ಕಮ್ಮಿಯಾದರೂ ಭದ್ರವಾದ ವಿಮೆ ದರಗಳಲ್ಲಿ ಉತ್ತರವಾಯಿಸ ಬಹುದು.

ಇತರ ಯಾವ ಜೀವವಿಮೆ ಕಂಪೆನಿಗಳಲ್ಲಿ ಉತ್ತರವಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ವ್ಯವಹಾರವೆಲ್ಲ ಪ್ರಸಿದ್ಧ ವರ್ತಮಾನಪತ್ರಗಳಲ್ಲಿ ಲೇವಣಾತಿಯಾಗಿಟ್ಟಿರುವುದು

ಹೆಂಗಸರೂ ಜೀವವಿಮೆ ಉತ್ತರವಾಯಿಸಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಶೇಷ ಸೂಚನೆ —ಪ್ರಖ್ಯಾತಿಗೊಂಡ ಶ್ರೀಕೃಷ್ಣ ಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಳಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜಂಟ್, ಮಂಗಳೂರು, ದ. ಕನ್ನಡ

ಅತಿ ಉತ್ತಮವಾದ ಬೀಜಗಳು— ಗಿಡಗಳು — ಹೂವು ವಗೈರೆ

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟಿವ್ ತರಕಾರಿ ಬೀಜಗಳೂ, ಹೂವಿನ ಬೀಜಗಳೂ, ಬೇಸಿಗೆಗೂ ಮತ್ತು ಕಾರಿಗಾಲದ ವೇಳೆಗೆ ಅನುಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ. ಇವೂ ಅಲ್ಲದೆ ಉತ್ತಮವಾದ ಕಸಿಯ ಮಾವಿನ ಗಿಡಗಳೂ, ಹಣ್ಣಿನ ಹೂವಿನ ಗಿಡಗಳೂ, ಗುಲಾಬಿ ಗಿಡಗಳೂ, ಎಲೆ ಜಾತಿಯ ಗಿಡಗಳೂ, ವಗೈರೆ ಇವೆ. ನಿಮ್ಮ ವರಗಳಿಗೆ ಬೇಕಾದಲ್ಲಿ ರವಾನಿಸಲ್ಪಡುವುವಲ್ಲದೆ ಕೆಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸುವೆವು. ತರಕಾರೀ ಮತ್ತು ಹಣ್ಣುಗಳು ಸಹಾ ಕಳುಹಿಸಲ್ಪಡುವವು. ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಿ. ಎಲ್. ಬೈಯಣ್ಣ ಬ್ರದರ್ಸ್,

67 ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ

ಅಪೂರ್ವವಾದ ಅತ್ಯುತ್ತಮ ಸಾಹಿತ್ಯಗಳು.

ದಿಲ್‌ಬಹಾರ್ ತೈಲ್ಯ ಶೀಸೆ 1ಕ್ಕೆ	1-2-0	ಕಾಮಿನಿ ಅತ್ತರ್ ಶೀಸೆ 1ಕ್ಕೆ	1-8-0
ಕಾಮಿನಿ ,, ,,	1-0-0	ದಿಲ್‌ಬಹಾರ್ ,, ,,	1-8-0
ಕೇಶರಂಜನ ,, ,,	0-12-0	ಹ್ವೈಟ್ ಜಾಸ್ಮಿನ್ ,, ,,	1-8-0
ಕುಂತಲ ಕೌಮುದಿ ,, ,,	0-12-0	ಗುಲ್‌ಕೇಶ್ ,, ,,	1-8-0
ವಸಂತ ಕುಸುಮ ,, ,,	0-10-0	ಪ್ಯಾರಿಸ್ ಎಸೆನ್ಸ್ ,, ,,	0-8-0
ಭೃಂಗಾಮಲಕ ,, ,,	0-8-0	ಸುಶೀಲಮಾಲತಿ ಡಬ್ಬಿ 1ಕ್ಕೆ	0-3-0
ಕೇಶಮೋಹನ ,, ,,	0-7-0	ಪರಿಮಳ ತಾಂಬೂಲಮಿತ್ರ ,,	0-3-0
ರಕ್ತಶೋಧಕ ,, ,,	0-12-0	ಬೆಂಗಾಲ್ ಕಾರ್ಬೋಲಿಕ್	
ದೇಸಿ ಅತ್ತರ್ ಶೀಸೆ 1ಕ್ಕೆ	2-0-0	ಟೂತ್ ಪೌಡರ್ ಡಬ್ಬಿ 1ಕ್ಕೆ	0-2-6

ಸ್ವದೇಶಿ ಪಿಕ್ಚರ್ ಚಿತ್ರಗಳು ಶಿವಾಜಿ, ತಿಲಕ್, ಲಾಲಾಲಜಪತರಾಯಿ, ಆರ್ಯ ಮಾತಾ ಲಕ್ಷ್ಮಿ, ಶೀತಾರಾಮ ವಗೈರೆ, ಶೀಟ್ 1ಕ್ಕೆ 0—1—6 ರಿಂದ 0—6—6.

ವಿಳಾಸ:—

ದಿ. ಊಲನ್ ಮಾರ್ಟ್,

ಅಶ್ವತ್ಥ ಏಜಂಟರು

SMALL-POX BALM.

ಅತ್ಯಲ್ಪ ಕಾಲದಲ್ಲಿಯೇ ಹಲವ ರಿಂದ ಉಪಯೋಗಿಸಲ್ಪಟ್ಟು ವಿಶೇಷ ಗುಣಕಾರಿ ಎಂದು ಹೆಸರು ಪಡೆದಿರುವುದು

ಸಿಡುಬು ರೋಗಕ್ಕೆ ಮುಲಾಮು.

ಸಿಡುಬು ರೋಗದ ಅತ್ಯಂತ ಪ್ರಸಿದ್ಧರಾದ ಅನುಭವಸ್ಥರಾದ ಎಷ್ಟೋ ವೈದ್ಯರಿಂದ ಖಾತ್ರಿಯಾದ ಔಷಧಿ ಎಂದು ಮನ್ನಿಸಲ್ಪಟ್ಟಿರುವುದು.

ಮೈಲಿಯಲ್ಲಿ ಕೀವು ತುಂಬುತ್ತಿರುವಾಗ ಬರುವ ಜ್ವರವನ್ನು ಶಮನಿಸುವದು.

ಸಿಡುಬುರೋಗದ **ಅಂಟುವ ಸ್ವಭಾವವು ಎಲ್ಲರಿಗೂ** ತಿಳಿದಿರುವ ಪ್ರತ್ಯಕ್ಷಪ್ರಮಾಣ ಸಿಡುಬು ಶರೀರದಲ್ಲೆಲ್ಲಾ ಕಾಣಿಸಿಕೊಂಡ ನಂತರ ಇದರ **ಸೋಂಕು ಇನ್ನಷ್ಟು ಪ್ರಬಲ**ವಾಗುವುದು ರೋಗಿಗೆ ಒಂದು ಸ್ನಾನದ ನಂತರ ಕೀವು ತುಂಬಿರುವ ಮೈಲೆಯು ಒಣಗುತ್ತ ಬಂದು **ಪೊರೆಪೊರೆಯುಳ್ಳದ್ದಾಗುವುದು.** ಈ ಪೊರೆಗಳು ರೋಗಿಯು ಅತ್ತಿತ್ತ ಒ ತ್ತಿರುವಾಗ್ಯೆ ಅಲ್ಲಲ್ಲಿ ಬಿದ್ದು **ಗಾಳಿಯಿಂದ ಸರ್ವ ಕಡೆಗಳಲ್ಲಿಯೂ** ಪ್ರಸರಿಸಲ್ಪಟ್ಟು ಪೊರೆಗಳಲ್ಲಿರುವ ರೋಗ ಅಣುಗಳಿಂ ರೋಗದ ಸೋಂಕು ಸರ್ವತ್ರ ಹಬ್ಬುವುದು.

ಮೈಲೆಯ ದುರ್ವಾಸನೆಯನ್ನು ಹೋಗಗೊಳಿಸಿ, ಖಜ್ಜಿಯ ಕಲೆಗಳು ವಿಕಾರ ಹೊಂದದಂತೆ ಮಾಡಿ, ಖಜಿಯಿಂದ ಶರೀರದಲ್ಲಿ ಉಂಟಾಗುವ ತುರಿಸುವಿಕೆಯನ್ನು ನಿಲ್ಲಿಸಿ **ರೋಗಜನಿತವಾದ** ಹುಣ್ಣುಗಳು ಯಾವರೀತಿಯಲ್ಲಿಯಾದರೂ ವಿಶೇಷ ಪರಿಣಾಮ ಹೊಂದದಂತೆ **ಈ ಮುಲಾಮಿನ ಲೇಪನದಿಂದ** ಸಾಧ್ಯವಾಗುವುದು ರೋಗದ ಸೋಂಕನ್ನು ಸಹಾ ಈ ಲೇಪನವು ತಡೆಕಟ್ಟುವುದರಿಂದ **ರೋಗ ತಗಲಿದ ಸರ್ವರೂ ಇದನ್ನು** ಪರೀಕ್ಷಾರ್ಥ ಉಪಯೋಗಿಸಬಹುದು

ಹೋಮಿಯೊಪತಿಕ್, ಟಿಸ್ಯುರೆಮಿಡಿಸ್, ಆಯುರ್ವೇದಿಕ್ ಅಥವಾ **ಎಲೋಪತಿಕ್** ಈ ಎಲ್ಲಾ ವಿಧಾನಗಳಿಂದ **ಚಿಕಿತ್ಸೆ** ಹೊಂದುವ ರೋಗಿಗಳಿಗೆ **ಈ ಮುಲಾಮಿನ ಲೇಪನವು** ಏಕ ರೀತಿಯಲ್ಲಿ ಗುಣಕಾರಿಯಾಗಿರುವುದರಿಂದ ಎಂಥಾ **ಚಿಕಿತ್ಸೆ**ಯಲ್ಲಿಯಾದರೂ ಇದರ ಲೇಪನವು ಆಕ್ಷೇಪಕರವಲ್ಲ.

ಮುಲಾಮನ್ನು ರೋಗತಗಲಿದ ೭ನೇ ದಿನದಿಂದ ಹಚ್ಚಲು ಪ್ರಾರಂಭಿಸಬಹುದು, ಹಚ್ಚುವ ಕ್ರಮ ಮುಂತಾದವುಗಳು ಕರಡಿಗೆಯ ಲೇಬಲಿನಲ್ಲಿರುವವು.

ಸರ್ವರಿಗೂ ಇದನ್ನು ಕ್ರಯಕ್ಕೆ **ಪಡಕೊಳ್ಳುವರೆ** ಸಾಧ್ಯವಾಗುವಂತೆ ಮುಲಾಮಿಗೆ ಹತ್ತು ಕ್ರಯದ **ಔಷಧಿಗಳು** ಬಿದ್ದಿದ್ದರೂ ಕ್ರಯವನ್ನು ಸಾಧ್ಯವಾದಷ್ಟು **ಮಟ್ಟಿಗೆ** ಕಡಿಮೆಯಾಗಿಟ್ಟಿರುವೆವು

ಕ್ರಯ ಡಬ್ಬಿ ಒಂದಕ್ಕೆ ಸಣ್ಣಾ ಸೈಜು ೫ ಆಣೆ. ದೊಡ್ಡದು ೮ ಆಣೆ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ (ಮಂಗಳೂರು ವ್ಯಾಪಾರ ಸಂಘ)

ರಥಬೀದಿ, ಮಂಗಳೂರು ಇವರಲ್ಲಿ **ದೊರೆಯುವುದು.**

ಲೆಕ್ಕದ ಪುಸ್ತಕಗಳನ್ನು ತರಿಸಕೊಳ್ಳುವಾಗ
ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು

ಸ್ಟಿಫ್‌ಕವರ್	**ಹಾಫ್‌ಬೈಂಡ್**	ಫುಲ್‌ಬೈಂಡ್
(ಪಕ್ಕೆ ಮಾ ಲ್ ಬೆನ್ನಿಗೆ ಕೆಲಿಕೊ)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ)	(ಪೂರ್ಣ ಚರ್ಮ)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗರೆಗಳುಳ್ಳವುಗಳು

× 9¼ 3 × 1¼, 8¼ × 6 6 × 4 ಪರಿಮಾಣದಲ್ಲಿದ್ದು ಸಾವುಕಾರ ಅಂಗಡಿಗಾರ, ವರ್ತಕರ ವ ಆಪೀಸರರುಗಳಿಗೆ **ಬೇಕಾದ** ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೆಗ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸೈಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾ ಲ್, ಚರ್ಮ ಕೆಲಿಕೊ **ಮೊದಲಾದವುಗಳಿಂದ,** ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ ಮೆನೇಜರ್,

ಶಾರದಾ ಮುದ್ರಾಲಯ, **ಮಂಗಳೂರು.**

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು
ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು.
ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.
ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

[illegible]

ಮಂಗಳೂರು ಟ್ರೇಡಿಂಗ್ [illegible]

Printed [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾ ನಿರ್ಣಯ — ವರ್ಷಕ್ಕೆ ರೂ 1-4-0 ಟಪ್ಪಾಲು ಹಾಸಲು ಸೇರಿ ರೂ 2 10

ಸಂಪುಟ 4 ಬೆಂಗಳೂರು, ತಾರೀಖು 21ನೇ ಶುಕ್ರವಾರ ಜೂನ್ 1910 ಸಂಚಿಕೆ 25

Amrutanjan Depot Fort Bombay.

ಅಮೃತಾಂಜನ ಗಜಕರ್ಣದ ಮುಲಾಮು.

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಔಷಧ. ಮುಲಾಮು [illegible] ತಲೆನೋವು, ಶಿರೋಭಾರ, ಅರ್ಧಾಂಗವಾಯು, ನೆಗಡಿ ಕೆಮ್ಮು ಗಂಟಲುನೋವು ಚೇಳು, ಕಡಿತ [illegible] ಈ ಎಲ್ಲಾ ತರದ ನೋವುಗಳೂ ಪೂರ್ಣವಾಗಿ ಗುಣವಾಗುತ್ತವೆ [illegible] ಸಣ್ಣ ಮಗುವಿನ [illegible] ಧನ್ವಂತರಿ [illegible] ಈ ಅಮೃತಾಂಜನಕ್ಕೆ [illegible] ಸಿಕ್ಕಿರುತ್ತದೆ. ಅಮೃತಾಂಜನವು ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವುದು. ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ

ಕಿಮ್ಮತ್ತು ಅರು ಆಣೆ ಈ ನಮೂನೆ ಡಬ್ಬಿ	SAFE ★ EFFICACIOUS ★ CURE ★ PILLS ★ OINTMENTS ★ POWDERS ★ WILLIAM & Co. BOMBAY	ಕಿಮ್ಮತ್ತು ಅರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ಸಾಕವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿಯಬರುವದು. [illegible] ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿ ಒಂದರ ಕಿಮ್ಮತ್ತು 6 ಆಣೆ ೧೨ ಡಬ್ಬಿ ರೂ 4

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿಯಬರುವದು. ಡಬ್ಬಿ ಒಂದರ ಕಿಮ್ಮತ್ತು ೨ ಆಣೆ.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಷ್ಪ್ರಾಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮೆಯಿಸ ಕೊಕೊ, ಲೆಸಿತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ಒಂದರ ಕಿಮ್ಮತ್ತು ರೂ 1.

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ಹಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳೆಯುವವು. ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ. ಬಾಟ್ಲಿ ಒಂದರ ಕಿಮ್ಮತ್ತು ರೂ 1

ಸುಂದರಿ ತೈಲ.

ಇದನ್ನು ಮೋರೆಗೆ ಹಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು. ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ

ಖಜ್ಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತ್ತು 3 ಆಣೆ.

ಜುಲಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ.

ವಿಳಾಸ:— ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ.

ಟೆಲಿಗ್ರಾಫ ವಿಳಾಸ:— ಅಮೃತಾಂಜನ, ಮುಂಬಯಿ.

ಸುಗಂಧ ದ್ರವ್ಯಗಳು.

ನನ್ನ ಸ್ವಂತ ಪರಮಾಯಿಷಿಯಾಗಿ ತಯಾರು ಮಾಡಿ ಬಿಕರಿಗೆ ಸಿದ್ಧವಾಗಿರುವ ಸುಗಂಧ ದ್ರವ್ಯಗಳು.

ತರಹೇವಾರಿ ಊದುಬತ್ತಿ 24 ರೂ. ತೂಕದ ಶೇರು 1ಕ್ಕೆ

	ರೂ. ಅ. ಪೈ.	ರೂ. ಅ. ಪೈ
1 ಖಾಸಾ ಅಂಬರ್ ಬತ್ತಿ ...	6—0—0	5—0—0
2 ಕೇಸರಿ ಬತ್ತಿ ...	4—0—0	3—8—0
3 ಜವ್ವಾಜಿ ಕಸ್ತೂರಿ ಬತ್ತಿ ...	3—0—0	2—8—0
4 ಪುನಗು ಬತ್ತಿ ...	1—8—0	1—0—0
5 ಪನ್ನೀರು ಬತ್ತಿ ...	0—10—0	0—8—0
6 ಉತ್ತಮವಾದ ದಶಾಂಗ...	0—12—0	

ಗಂಧದ ಬಿಲ್ಲೆಗಳು

	1 ತೊಲೆ	1 ತೊಲೆ	1 ತೊಲೆ.
1 ಪುದುಕೋಟೆ ಬಿಲ್ಲೆ...	3-0-0	1—8-0	0-12-0
2 ಕಸ್ತೂರಿ ಬಿಲ್ಲೆಗಳು	1-8-0	0-12-0	0-6-0
3 { 1 ಕೇಸರಿ ಬಿಲ್ಲೆ .	0 8 0	0-4-0	0 2-0
2 ಡಿಟ್ಟೊ ...	0-4 0	0-2-0	0-1-0

ಕಾಲು ತೊಲೆ ತೂಕ ಉಳ್ಳ ಕೇಸರಿ ಬಿಲ್ಲೆ 100ಕ್ಕೆ 10 ರೂ -5ರೂ

4 ಅವಲ್ ಹಸೀ ಬಿಲ್ಲೆ	0-8-0	0-4-0	0-2-0
ಎರಡನೇ ರಖಂ ..	0 4-0	0 2-0	0-1-0

ಕಾಲು ತೊಲೆ ತೂಕ ಉಳ್ಳ ಹಸೀ ಬಿಲ್ಲೆ 100ಕ್ಕೆ 8ರೂ 5ರೂ

5 ಅರಗಜ ಅಥವಾ ಜವ್ವಾಜಿ ಗಂಧ ತೊಲಾ 1ಕ್ಕೆ . 1-0-0

ಪರಸ್ಥಳದವರಿಗೆ ಟಪ್ಪಾಲ್ ಹಾಸಲು ಮತ್ತು ಪ್ಯಾಕಿಂಗ್ ಖರ್ಚು ಅಲಾಯಿದಾ ಬೀಳುತ್ತೆ. ಮೇಲ್ಕಂಡ ಸಾಮಾನುಗಳನ್ನು ಅಜವಾಯಿಷಿಯಿಂದ ಪ್ರೋತ್ಸಾಹಿಸುವಿ ರೆಂದು ಕೋರುತ್ತೇನೆ.

ಯಂ ವರಸಿಷ್ಟ ಶಾಸ್ತ್ರಿ, ಸುಗಂಧಕಾರಿ,
ಶಂಕರಪುರ ಬೆಂಗಳೂರು ಸಿಟಿ.

ಮುಥತ್ತು ೧೯೧೧ನೇ ವರುಷದ ಕ್ಯಾಲೆಂಡರು ಮುಥತ್ತು

ಕಾನಪೂರ್ ಉಲನ್ ಚೌಕಗಳು.

ಸೈಜು 40×40, ಹಳದಿ, ಗುಲಾಬಿ ಊದ, ಹಸರು, ಕರೀದು, ಕೇಸರಿ, ನೀಲಿ, ಚ್ರಾಸ್ ಮತ್ತು ಇತರ ರಂಗುಗಳಲ್ಲಿಯೂ 1ಕ್ಕೆ ರೂ 1—4—0. ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಿಮ್ಮತು 0—4—0

ಶಹಲುಗಳು.

ಉದ್ದ 6 ಮೊಳ ಅಗಲ 3 ಮೊಳ ಎಲ್ಲಾ ರಂಗುಗಳಲ್ಲಿಯೂ 1ನೇ ನಂಬರು 1ಕ್ಕೆ ರೂ. 4-4-0. 2ನೇ ನಂಬರು ರೂ 3—12—0. 3ನೇ ನಂಬರು 3—8—0.

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಿಮ್ಮತು 0—4—0

ಸಾಚಾ ಒಳ್ಳೇ ಕಲಾವತ್ತು "ಜರಿ"

ಕಾಲು ಇಂಚು, ಅರ್ಧ ಇಂಚು, ಮುಕ್ಕಾಲು ಇಂಚು.

1ನೇ ನಂಬರು	0—10—0,	1—4—0,	
2ನೇ ನಂಬರು	0—14—0,	1—8—0,	2—4—0

ರೇಷ್ಮೆ ನೆತುಕಟ್ಟುಗಳು.

ಕೆಂಪು, ಪೊವಾ, ನೀಲಿ, ರೋಜಾ, ಹಸರು, ಮೊದಲಾದ ರಂಗುಗಳಲ್ಲಿ ಸೈಜು ಉದ್ದ 5-6 ಮೊಳ, ಅಗಲ 3 ಇಂಚು, 1ಕ್ಕೆ ರೂ. 1 4-0. 1-8-0, 2-4 0, 2-8-0, 3-0-0.

ಚಿತ್ರಾಸನ 3-0-0, 4-0 0, 5-0-0, 6-0-0

ಡಿಟ್ಟೊ ಗಜ 1ಕ್ಕೆ 1-8-0

ರೇಷ್ಮೆ ಅಂಚುಗಳು ಗಜ 1ಕ್ಕೆ ಆಣೆ 2, 3, 4, 5

ಮಕ್‌ಮಲ್ ಅಂಚು ಗಜ 1ಕ್ಕೆ ಆಣೆ 4, 5, 6

ದೇವರುಗಳಿಗೆ ಉಪಯೋಗಿಸುವ ರೇಷ್ಮೆ. ಗುಲಾಬಿ, ಕೆಂಪು, ಊದ, ಹಸರು ರಂಗುಗಳಲ್ಲಿ ಗಜ 1ಕ್ಕೆ ರೂ. 1-6-0, 2-8-0, 3-0-0

ದಾರದ ಬನೀನುಗಳು 1ಕ್ಕೆ ಆಣೆ 4, 5, 6, 7, 8

ಉಲನ್ ಬನೀನುಗಳು 1ಕ್ಕೆ ರೂ. 2-4-0, 2-8 0, 3-0-0, 3-8-0.

ಫೆಲ್ಟ್ ಕ್ಯಾಪ್‌ಗಳೂ ಕ್ರಿಸ್ಟಿಸ್ 1ಕ್ಕೆ ರೂ. 1-12-0, 2-4-0, 2-8-0 2-12-0.

ಇಟಲಿ ಕ್ಯಾಪ್‌ಗಳು 1ಕ್ಕೆ ರೂ 0-12-0. 1-0-0, 1-4-0, 1-8-0.

ಹಾಸನದ ಟೋಪಿಗಳು ಡಜನ್ 1ಕ್ಕೆ ರೂ. 4-0-0, 4-4-0, 4-8-0, 5-8-0, 6-0-0, 7-0-0, 8-0-0, 9-0-0, 10-0-0, 12-0-0.

ಪೇಟ ಕಟ್ಟುವ ತರಹೆವಾರಿ ರಂಗುಗಳ ಬಟ್ಟೆ ಗಜ 1ಕ್ಕೆ 0-6-0, 0-8-0, 0-10-0, 0-12-0.

ಕುಪ್ಪಸಕ್ಕೆ ಮತ್ತು ಪರಕಾರಕ್ಕೆ ಉಪಯೋಗಿಸುವ ಚೀಟುಗಳು ಗಜ 1ಕ್ಕೆ ಆಣೆ 6, 8, 10, 12.

ಕೇಶರಂಜನ ತೈಲ ಬಾಟ್ಲ 1ಕ್ಕೆ ರೂ.		0—11—0.
ಕುಂತಳ ಕೌಮುದಿ ತೈಲ ,,	,,	0—12—0.
ಕನೋನಿಯಾ ಓಯಿಲ್ ,,	,,	1—0—0.
ಭೃಂಗಾಮಲಕ ತೈಲ ಸೀಸೆ ,,	,,	0—4—0, 0-8-0, 1-0-0
ಕಸ್ತೂರಿ ಮಾತ್ರೆ ಸೀಸೆ ,,	,,	0—4—0.

ಎಲ್. ಎ. ಶೇರುವಾಲ್

ಚಾತಕ ಫಲ ಚಿಂತಾಮಣಿ

ಎಂಬೀ ಪುಸ್ತಕವು ಕರ್ನಾಟಕ ದೇಶೀಯರೆಲ್ಲರ ಉಪಯೋಗಕ್ಕಾಗಿ ಪ್ರತಿಪದದ ತಾತ್ಪರ್ಯ ಸಹಿತವಾಗಿ ಬರೆಯಿಸಿ ಬಿಕರಿಗೆ ಸಿದ್ಧವಾಗಿದೆ. ಕ್ರಯ 0—12—0. ಹಾಸಲು ಚಾರ್ಜು 0—3—0. 3 ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಇನಾಮು ತ್ಕಾರವಾದ ಮಹಾಲಕ್ಷ್ಮಿ ಎಂಬ ಕಡೆ ಇನಾಮಾಗಿ ದೊರೆಯುತ್ತೆ.

ಹೆಚ್. ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು ಸಿಟಿ.

"ವಿದ್ಯಾನಂದ" ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದಾರ್ಥ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ಗ ಪ್ರಿಂಟಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

ಹೆಚ್ಚು ಟೀಕೆಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಇರುತ್ತದೆ ಬೆಲೆ 0—4—0

ವಿಳಾಸ:- ಮ್ಯಾನೇಜರ್,
ವಿದ್ಯಾನಂದ ಆಫೀಸು,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ.

ಕುಚ್‌ವಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಮೆನ್‌ಶಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಿಲ್ಲನು.

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸ ಬಹುದು.

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು. ಇದರಲ್ಲಿ ಆಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ. ಇದು ಮನೋಹರವಾದ ಸುಗಂಧವಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರೆಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ೭ ಬೆನಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೇನ್, ಎಲ್. ಎಮ್. ಎಸ್.
216 ಕಾರನ್‌ವಾಲಿಸ್ ಬೀದಿ, ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. ಶೇರುವಾಲ್ ಎಂಡ್ ಕೊ.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 24ನೇ ಜೂನ್ 1910

ರಾಜದ್ರೋಹದ ಮೂಲವೂ ನಿರ್ಮೂಲವೂ

ಈ ವಿಷಯದಲ್ಲಿ ಇಂಡಿಯಾ ಸರಕಾರದವರು ಸ್ಥಳೀಯ ಸರಕಾರಗಳಿಗೆ ಒಂದು ಸರ್ಕಿಲಾರನ್ನು ಕೊಟ್ಟಿರುವರು ಸದರಿ ಪತ್ರದಲ್ಲಿ ರಾಜದ್ರೋಹವು ಹ್ಯಾಗೆ ಉದ್ಭವಿಸಿತು ಅದಕ್ಕೆ ಪ್ರತಿಕ್ರಿಯೆಯಾಗಿ ಸರಕಾರಿ ಉದ್ಯೋಗಸ್ಥರು ಮಾಡತಕ್ಕ ಕೆಲಸವೇನು ಎಂಬದನ್ನು ಸರಕಾರದವರು ವ್ಯಕ್ತಗೊಳಿಸಿರುವರು ಮದ್ರಾಸು ಸಂಸ್ಥಾನದಲ್ಲಿ ಈ ಅರಿಷ್ಟವು ಹಬ್ಬಿಲ್ಲವೆಂದು ಗವರ್ನಮೆಂಟಿನವರು ಅಭಿಪ್ರಾಯಪಡುವದು ತೃಪ್ತಿಕರವಾಗಿದೆ.

ಬ್ರಿಟಿಷ್ ರಾಜ್ಯಭಾರದ ಸ್ವಭಾವ ವ ಅದರ ಫಲಪರಂಪರೆಗಳನ್ನು ಜನರು ಅರಿಯದೆ ರಾಜದ್ರೋಹಕ್ಕೆ ಎಡೆ ಸಿಕ್ಕ ಕಾರಣವಾಯಿತೆಂದೂ, ಜನರು ಸರಕಾರಕ್ಕೆ ವಿರೋಧವನ್ನೆಣಿಸುವದಕ್ಕೆ ಆಸ್ಪದಕೊಡುವ ತೆರದ ಪ್ರಜಾಪೀಡಕ ಕಾಯಿದೆಗಳೂ ತೆರಿಗಗಳೂ ರಾಜ್ಯದಲ್ಲಿ ಇಲ್ಲವೆಂದೂ ಸರಕಾರದ ಅಭಿಮತವಾಗಿದೆ ಮತ್ತು ಸರಕಾರಕ್ಕೆ ಎದುರು ನಿಂತ ಯುವಕರು ಫಕ್ತ ಪರದೇಶಿಗಳ ಮೇಲಿನ ದ್ವೇಷದ ಭಾವವೊಂದರಿಂದಲೇ ಪ್ರೇರಿತರಾಗಿ ವರ್ತಿಸುವರೆಂದು ಸರ್ಕಿಲಾರಿನಲ್ಲಿ ಹೇಳಿದೆ

ಅದರಲ್ಲಿ ಹೇಳಿದ ಇತರ ಮುಖ್ಯಅಂಶಗಳು ಯಾವವಂದರೆ —

ಇಂಗ್ಲಿಷ ರಾಜ್ಯಕ್ಕೆ ವಿಮುಖರಾದ ಈ ಯುವಕರು ಇಂಗ್ಲಿಷು ವಿದ್ಯೆ ಇಂಗ್ಲಿಷ, ಫ್ರೆಂಚ ವಗೈರೆ ಜನಾಂಗಗಳ ಚರಿತ್ರ, ಅರ್ಥಶಾಸ್ತ್ರ, ರಾಜನೀತಿ ಮೊದಲಾದ್ದನ್ನು ಶಾಲೆಗಳಲ್ಲಿ ಕಲಿತವರ ಪೈಕಿಯವರು ಇವರಲ್ಲಿ ಎರಡು ತಂಡವಿದೆ ಸರ್ಕಾರಕ್ಕೆ ವಿರೋಧವಾಗಿ ಜನರ ಅಭಿಮತವನ್ನು ಬೆಳಯಿಸಿ ಸರ್ಕಾರವನ್ನು ಅಡಚಣೆಯಲ್ಲಿ ಹಾಕನೋಡುವವರು ಒಂದು, ಬೊಂಬ ವಗೈರೆ ಬೇಕಾದ ಉಪಾಯಗಳನ್ನು ಗ್ರಹಿಸಿದ ತಂಡ ಇನ್ನೊಂದು ಈ ಉಜ್ವಲ ಪಕ್ಷಕ್ಕೆ ತಾವು ಸೌಮ್ಯರೆಂದು ತೋರಿಸಿಕೊಳ್ಳುವ ಕೆಲವು ಗೃಹಸ್ಥರು ಬೆಂಬಲಕ್ಕಿರುವರು

ಬ್ರಿಟಿಷ ರಾಜ್ಯಬಾರದ ಕುರಿತು ಜನರಿಗ ಇರಬಹುದಾದ ತಪ್ಪು ಗ್ರಹಿಕೆಗಳನ್ನು ಮಾಜಲಿಕ್ಕೆ ಎಲ್ಲಾ ಇಲಾಖೆಯವರು ಪ್ರಯತ್ನಿಸಬೇಕೆಂದು ಗವರ್ನರ್ ಜನರಲರವರು ಆಜ್ಞಾಪಿಸಿರುವರು ಜನರಿಗೆ ರಾಜ್ಯಭಾರ ವಿರೋಧಿಗಳು ಕೊಟ್ಟ ದುರ್ಬೋಧನೆಗಳನ್ನು ಸರ್ಕಾರಿ ಉದ್ಯೋಗಸ್ಥರು ಕೀಳಬೇಕು ವಿದ್ಯಾಖಾತೆಯವರಿಗೆ ಈ ವಿಷಯದಲ್ಲಿ ವಿಶೇಷ ಜವಾಬ್ದಾರಿಯದೆ . ಅವರು ಸ್ವತಹಾ ರಾಜದ್ರೋಹದಲ್ಲಿ ಪ್ರವೇಶಿಸದಿದ್ದರೆ ಸಾಲದು ವಿದ್ಯಾರ್ಥಿಗಳು ನೆಟ್ಟನೆ ದಾರಿಯಲ್ಲಿ ನಡಿಯುವಂತೆ ಧರ್ಮಾಲಾಪ ತರ್ಕಗಳಿಂದಲೂ, ಪ್ರೀತಿಪುರಸ್ಸರ ಶಿಕ್ಷಣದಿಂದಲೂ ಅವರ ಮನಸ್ಸನ್ನು ತಿದ್ದಬೇಕು ಅಧ್ಯಾಪಕರು ಈ ಕಾರ್ಯಕ್ಕೆ ಯೋಗ್ಯರಾಗುವಂತೆ ಅವರನ್ನು ತಕ್ಕ ರೀತಿಯಲ್ಲಿ ಟ್ರೇನಿಂಗ್ ಶಾಲೆಗಳಲ್ಲಿ ತರಬೇತುಮಾಡತಕ್ಕದ್ದು ವಿದ್ಯಾಖಾತೆಯವರು ಈ ವಿಷಯದಲ್ಲಿ ವಿದ್ಯಾರ್ಥಿಗಳ ಬುದ್ಧಿಯು ಮೋಸಹೋಗದಂತೆ ಯೋಗ್ಯವಾದ ಪಾಠ ಪುಸ್ತಕಗಳನ್ನು ರಚಿಸಬಹುದು

ಜಿಲ್ಲಾ ಆಫೀಸರ (ಕಲೆಕ್ಟರ)ರೂ ಅವರ ಕೈ ಕೆಳಗಣವರೂ ರಾಜದ್ರೋಹ ಮೂಲೋತ್ಪಾಟನದಲ್ಲಿ ಸರ್ಕಾರಕ್ಕೆ ಹೆಚ್ಚಿನ ಸಹಕಾರ ಮಾಡಬೇಕು ದ್ರೋಹಿಯನ್ನು ಶಿಕ್ಷಿಸುವದಕ್ಕಿಂತ ದ್ರೋಹಕ್ಕೆ ತಡೆಗಟ್ಟುವದು ಸರ್ಕಾರಕ್ಕೆ ಪ್ರಿಯವೆಂದು ಅವರು ಅರಿಯತಕ್ಕದ್ದು ಅವರು ಸರ್ಕೀಟು ತಿರುಗುವಾಗ್ಯೆ ವ ಇತರ ಕಾಲದಲ್ಲಿಯೂ ಸಂಭಾವಿತ ಗೃಹಸ್ಥರೊಡನೆ ಸಂಪರ್ಕ ಬೆಳಸುತ್ತಾ ಯಾರೊಬ್ಬನಲ್ಲಿ ಸರ್ಕಾರದ ಅಧಿಕಾರಕ್ಕೆ ಪ್ರತಿಕೂಲವಾದ ಭಾವನೆಗಳವೆ ಎಂದು ತಿಳಿದರೆ ಅವನನ್ನು ಸಂಗತ್ಯಾನುಸಾರ ಖಾಸಗಿಯಲ್ಲಿ ಎಚ್ಚರಿಸಿ ಅಥವಾ ಚರ್ಚೆಯಿಂದ ಅವನ ಮನಸ್ಸನ್ನು ತಿರುಗಿಸಬೇಕು ಗದರಿಸುವಿಕೆಯಿಂದ ನಡಿಯದ ಕಾರ್ಯವು ನಯನುಡಿಯ ಪ್ರೇರೇಪಣೆಯಿಂದ ಸಾಧ್ಯವಾಗುವದು

ಸರ್ಕಾರಿ ಉದ್ಯೋಗಸ್ಥರು ದೇಶೀಯ ಗೃಹಸ್ಥರಿಗೆ ತಕ್ಕ ಮರ್ಯಾದೆಯನ್ನು ತೋರಿಸುವದಿಲ್ಲವೆಂದು ಆಗ್ಯಾಗ್ಯೆ ದೂರುಕೇಳಿಸುವದು. ಪ್ರತಿಯೊಬ್ಬ ಸರ್ಕಾರಿ ನೌಕರನು [illegible] ಎದುರು ಬರುವ ಯಾವನೊಬ್ಬ ಖಾಸಗಿ ಗೃಹಸ್ಥನಿಗೆ ತಕ್ಕ ಮನ್ನಣೆಯಿಂದ [illegible] ಮನ್ನಣೆಯಲ್ಲಿ ಬಹ [illegible] ದೇಶೀಯ ಗೃಹಸ್ಥರನ್ನು ಯಾವ ರೀತಿ ಎದುರುಗೊಳ್ಳತಕ್ಕದ್ದು, ಯಾವ ರೀತಿ ಅವರನ್ನು ಕರೆಯಬೇಕು, ಹ್ಯಾಗೆ ಅವರೊಡನೆ ಸಂಭಾಷಿಸಬೇಕು ಇವೇ ಮೊದಲಾದ ವಿಷಯ ಕೆಲವು ಅನುಜ್ಞೆಗಳನ್ನು ತರುಣ ಯುರೋಪೀಯ ಸಿವಿಲಿಯನ್ ಆಫೀಸರರ ಬಗ್ಗೆ ರಚಿಸಬಹುದು

ರಾಜಕೀಯ ತಕ್ಷೀರುಗಳ ತನಖಿಯಲ್ಲಿ ಜನರು ತಮಗೆ ತಿಳಿದರ ಕುರಿತು ಸಾಕ್ಷ್ಯ ಹೇಳಲು ಎದುರು ಬರುವದಿಲ್ಲ ಹೀಗೆ ಪರಾಮರ್ಶಕ್ಕೆ ಅನುಕೂಲ ಕೊಡುವ ತನಖಿಗೆ ಜನರು ನೆರವಾಗದಿದ್ದರೆ ಸರಕಾರದವರು ಗುಮಾನಿನ ಮೇಲೆ ತಪ್ಪುಗಾರನನ್ನು ಶಿಕ್ಷಿಸಬೇಕಾಗುವದೆಂದೂ ಆ ಕ್ರಮವನ್ನು ಜಾರಿಗೆ ತಂದಲ್ಲಿ ನಿರಾಪರಾಧಿಗಳು ತಕ್ಷೀರುಗಾರರೊಡನೆ ಸಿಲುಕಬಹುದೆಂದೂ ಜನರಿಗೆ ವಿವರಿಸಿ ರಾಜದ್ರೋಹ ವಗೈರೆ ತಕ್ಷೀರುಗಳ ತನಖಿಯಲ್ಲಿ ಸಹಾಯ ಮಾಡ ಪ್ರೇರೇಪಿಸಬೇಕೆಂದು ಸರ್ಕಾರದವರು ಜಿಲ್ಲಾ ಆಪೀಸರ ಮುಂತಾದವರನ್ನು ಅಪೇಕ್ಷಿಸಿರುವರು ಈ ಸಾಕ್ಷಿಗಾರರಿಗೆ ಎದುರು ಪಕ್ಷದವರು ಕೇಡಕು ಮಾಡದಂತೆ ಸರ್ಕಾರದವರು ಬಂದೋಬಸ್ತು ಇಡುವರು ಪುರಾಣ ಶಾಸ್ತ್ರಾದಿಗಳನ್ನು ರಾಜದ್ರೋಹ ಪ್ರಸಾರದ ಉದ್ದಿಶ್ಯ ಉಪಯೋಗಿಸಿದ್ದರಿಂದ ಯುವಕರಿಗೆ ವಿಶೇಷ ಹಾನಿಯಾಗಿದೆ ಈ ಕುರಿತು ಉತ್ಸವ ಸಮಾರಂಭ ವಗೈರೆಗಳನ್ನು ನಡಿಸುವ ಗೃಹಸ್ಥರಿಗೆ ಜಾಗ್ರತೆ ಹೇಳತಕ್ಕದ್ದೆಂದು ಗವರ್ನಮೆಂಟಿನವರು ಆಜ್ಞಾಪಿಸಿದ್ದಾರೆ.

ಪ್ರಜೆಗಳ ಕೂಡೆ ಸರಾಗವಾದ ದಯಾಭಾವದ ಸಂಪರ್ಕ ಬೆಳಸುವದು ಪರಸ್ಪರ ಅನ್ಯೋನ್ಯಕ್ಕೆ ಆವಶ್ಯಕವೆಂದು ಗವರ್ನಮೆಂಟಿನವರು ಕಂಡಿರುವರೆಂದು ಮೇಲಿನ ಸರ್ಕಿಲಾರದ ಸಾರಾಂಶದಿಂದ ತಿಳಿಯಬಹುದು ಸಾಧಾರಣ ಪ್ರಜೆಗಳು ಹುದ್ದೆ ವ ಹುದ್ದೆದಾರರೊಳಗೆ ಭೇದ ನೋಡರು ಅವರ ಹುದ್ದೆದಾರರೇ ಅವರಿಗೆ ಮೂರ್ತಿಭವಿಸಿದ ಸರ್ಕಾರ ಅಧಿಕಾರಿಯ ಗುಣಗಣಗಳಿಗೆ ಹಿಂದುಸ್ಥಾನದ ಪ್ರಜೆಗಳು ಇಡುವಷ್ಟು ಮೌಲ್ಯವು ಅನ್ಯದೇಶಗಳಲ್ಲಿ ವಿರಳ ಅಧಿಪತಿಯು ಪ್ರಜಾವತ್ಸಲನಾದ್ದಲ್ಲಿ ಅವನ ಮೇಲೆ ದೇವರಂತೆ ಶ್ರದ್ಧೆ ಇಡುವರು ಅಹಲ್ಯಾಬಾಯಿಯನ್ನು ಅವತಾರವೆಂದೇ ಗ್ರಹಿಸುವರಲ್ಲ

ಈಗಿನ ಅಲ್ಲೋಲಕ್ಕೆ ಒಂದು ಕಾರಣವದೆ ಅದಕ್ಕೆ ಸರಕಾರದವರು ಜವಾಬ್ದಾರರಲ್ಲ ಖರೆ ಇದು ಭರತಖಂಡದಲ್ಲಿ ಒಂದು ಸಂಧ್ಯಾಕಾಲ ಪಾಶ್ಚಾತ್ಯ ಪೌರ್ವಾತ್ಯ ಸುಧಾರಣೆಯ ಸಂಘಟನೆ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಯಂದಿನಿಂದ ಉಂಟಾದ ಶಾಂತಿಯ ದೆಸೆಯಿಂದ ಜನಸಂಖ್ಯೆ ಬೆಳದದೆ ಇಲ್ಲಿಯ ಧಾನ್ಯದವಸಕ್ಕೆ ಹೊಗೆಬಹಬು ರೈಲುಮುಖೇನ ಸ್ವಪರದೇಶದಲ್ಲಿ ಗಿರಾಕಿ ಹೆಚ್ಚಿದೆ ಈ ಎರಡು ಕಾರಣಗಳಿಂದ ಧಾರಣೆ ಏರಿದೆ ಆದರೆ ಅದಕ್ಕೆ ತಕ್ಕಂತೆ ಜನರಿಗೆ ಜೀವನೋಪಾಯದ ಉದ್ಯೋಗಗಳು ಹೆಚ್ಚಿಲ್ಲ ಕೈಗಾರಿಕೆಗಳು ಪ್ರಾಯಶಃ ಗರ್ಭದಲ್ಲಿವೆ ಆದ್ದರಿಂದ ಸಹಜವಾಗಿಯೇ ದಾರಿದ್ರ್ಯವೂ ದೌರ್ಬಲ್ಯವೂ ದುಃಖವೂ ಹೆಚ್ಚಿದೆ ಈ ಮಾಪಟ್ಟ ವಿದ್ಯಮಾನಗಳಿಗೆ ಸರಿಯಾಗಿ ನಮ್ಮ ಸಾಮಾಜಿಕ ಸಂಸ್ಥೆಗಳು ಮಾರ್ಪಡದೆ ಇಷ್ಟು ಸಂಕಷ್ಟಕ್ಕೆ ಕಾರಣವಾಯಿತು ನಮ್ಮಲ್ಲಿ ಬಾಲವಿವಾಹ ಪದ್ಧತಿಯು ಇನ್ನೂ ಊರ್ಜಿತವಿದೆ ದುಡಿಯುವ ಮುಂಚ ಹುಡುಗನು ಸಂಸಾರಿಯಾಗುವನು ಈ ತರದ ಇತರ ಅನೇಕ ಪದ್ಧತಿಗಳು ಹೇಳಲವಶ್ಯವಿಲ್ಲ ಸರಕಾರದವರಾದರೋ ದೇಶೀಯರ ಪದ್ಧತಿಗಳಲ್ಲಿ ಪ್ರವೇಶವಾಗಲಾರರು ಈ ಎಲ್ಲಾ ಸಂಕಷ್ಟಗಳು ಮಧ್ಯ ದರ್ಜೆಯವರ ಮೇಲೆ ವಿಶೇಷವಾಗಿ ತೋರುವವು ಈ ದರ್ಜೆಯವರೇ ಹೆಚ್ಚಾಗಿ ವಿದ್ಯೆ ಹೊಂದಿದವರು. ಆದ್ದರಿಂದ ಈ ಯುವಕರಲ್ಲಿ ಅಸಂತುಷ್ಟಿಗೆ ಕಾರಣವಾಗಿರಬೇಕು ಕೈಗಾರಿಕೆಗಳ ಪ್ರೋತ್ಸಾಹ ಮೊದಲಾದ ಮಾರ್ಗಗಳಿಂದ ಇದಕ್ಕೆ ಪ್ರತಿಕ್ರಿಯೆ ಮಾಡಬೇಕಲ್ಲದೆ ವಿದ್ಯೆಯನ್ನು ಸರಕಾರದವರು ದೂರಿ ಅದಕ್ಕೆ ಮೇರೆಗಟ್ಟುವ ಆಲೋಚನೆ ಮಾಡಬಾರದು.

ನಮ್ಮ ಅಭಿವೃದ್ಧಿಗೆ ಅವಶ್ಯವಿರುವ ಶಾಂತಿಯನ್ನೂ ನಿಷ್ಪಕ್ಷಪಾತದ ಕಾಯಿದೆ ಕಾನೂನು ಕೋರ್ಟುಗಳನ್ನೂ ಬ್ರಿಟಿಷರು ಕೊಟ್ಟಿದ್ದಾರೆ ನಾವು ಲೋಕದಲ್ಲಿ ಅಗ್ರಗಣ್ಯವಾದ ಜನಾಂಗದ ಆಶ್ರಯದಲ್ಲಿ ನಿರ್ಭೀತಿಯಿಂದ ಮುಂದರಿಸಬಹುದು. ಅಲ್ಲಲ್ಲಿ ಕೆಲವು ಅತಿಕೆಲವು ಅರೆಮರುಳು ಯುವಕರ ಹೊರತು ಈ ಎಲ್ಲಾ ವರದಾನಗಳ ಮೌಲ್ಯವನ್ನರಿತ ಪ್ರಜಾಸಮೂಹವು ಎಂದೆಂದಿಗೂ ಸರಕಾರಕ್ಕೆ ಕೃತಜ್ಞರಾಗಿಯೂ ಶ್ರದ್ಧೆಯುಳ್ಳವರಾಗಿಯೂ ಇರುವರು ಮತ್ತು ಇರಬೇಕು ಬ್ರಿಟಿಷ್ ಸರಕಾರವೆಂಬ ಶಿಲಾನಿರ್ಮಿತ ದುರ್ಗದೊಳಗೆ ನಿರ್ಭೀತಿಯಿಂದ ಜೀವಿಸುವದನ್ನು ಬಿಟ್ಟು ಆ ಬಂಡೆಕಲ್ಲಿಗೆ ತಲೆ ಬಡಕೊಳ್ಳಲು ಯಾರೆಳಸುವರು?

ಕರ್ನೂಲ ಸಾಮಾಜಿಕ ಪರಿಷತ್ತು.

ಕರ್ನೂಲಿನಲ್ಲಿ ಇತ್ತಲಾಗೆ ಕೂಡಿದ ಮದ್ರಾಸು ಪ್ರಾಂತಿಕ ಸಭೆಯೊಂದಿಗೆ ಸಾಮಾಜಿಕ ಪರಿಷದವು ಸಹ ಕೂಡಿತ್ತು. 'ಇಂಡಿಯನ್ ಸೋಸಿಯಲ್ ರಿಫೋರ್ಮರ್' ಎಂಬ ಪತ್ರದ ಸಂಪಾದಕರಾದ ಮ| ರಾ| ರಾ| ನಟರಾಜನ್ ಬಿ. ಎ. ಯವರು [illegible] ಅಧ್ಯಕ್ಷರಾಗಿದ್ದರು. ಮುಖ್ಯವಾಗಿ [illegible]

ಪತ್ರಿಕಾಕರ್ತರಾದ ನಟರಾಜನ್‌ರವರು ಈ ಸಂದರ್ಭದಲ್ಲಿ ಮಾಡಿದ ಭಾಷಣವು ಹಲವು ಸಮಯೋಚಿತ ಸೂಚನೆಗಳಿಂದ ಕೂಡಿರುವುದು. ಈ ಭಾಷಣದ ಮುಖ್ಯ ಅಂಶಗಳನ್ನು ಈ ಕೆಳಗೆ ಪರಿಶೀಲಿಸಿರುತ್ತೇವೆ.

ಕೀರ್ತಿಶೇಷ ಚಕ್ರವರ್ತಿಗಳವರ ಮರಣದಿಂದ ಭಾರತೀಯ ಪ್ರಜಾವರ್ಗಕ್ಕೆ ಉಂಟಾದ ದುಃಖಾತಿಶಯಗಳನ್ನು ಸೂಚಿಸಿ ಐದು ವರುಷಗಳ ಮೊದಲು ಹಿಂದುಸ್ಥಾನವನ್ನು ಸಂದರ್ಶಿಸಿ ತನ್ನ ಪ್ರಜಾವರ್ಗಗಳ ಪರಿಚಿತಿಯನ್ನು ಮಾಡಿಕೊಂಡು ಹಿಂದುಸ್ಥಾನವನ್ನು ಇನ್ನಷ್ಟು ಹೆಚ್ಚಾದ ಸಹಾನುಭೂತಿಯಿಂದ ಆಳಬೇಕೆಂಬುವ ಸಿದ್ಧಾಂತವನ್ನು ವ್ಯಕ್ತಗೊಳಿಸಿದ ಚಕ್ರವರ್ತಿಗಳು ಸಾಮ್ರಾಜ್ಯದ ರಾಜ್ಯಧುರವನ್ನು ಕೈಕೊಂಡಿರುವುದರಿಂದ ತಮಗುಂಟಾದ ಸಂತೋಷವನ್ನು ಪ್ರದರ್ಶಿಸಿ ಅಧ್ಯಕ್ಷರವರು ತಮ್ಮ ಭಾಷಣವನ್ನು ಪ್ರಾರಂಭಿಸಿರುವರು. ದೇಶದ ವಿದ್ಯಮಾನಗಳಿಗೂ ಪ್ರಕೃತ ಸಮಯಕ್ಕೂ ಅನುಸಾರವಾಗಿ ಸಾಮಾಜಿಕ ವಿಷಯಗಳಲ್ಲಿ ಬೇಕಾದ ಮಾರ್ಪಾಟುಗಳನ್ನೂ ತಿದ್ದುಪಾಟನ್ನೂ ಮಾಡಿ ಪ್ರಜಾವೃದ್ಧಿಯನ್ನು ಸಾಧಿಸಬೇಕೆಂಬುವ ಉದ್ದಿಶ್ಯಗಳಿಂದ ಸಂಘಸುಧಾರಕರ ಸಾಮಾಜಿಕ ಪರಿಷದವೆಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟು ಹಲವು ವರುಷಗಳಾದವು. ಈ ವರೆಗೆ ಇಂಥ ಸಂಸ್ಥೆಗಳ ಮೂಲಕ ಸಂಘಸುಧಾರಕರು ಸಮಾಜ ಅಭಿವೃದ್ಧಿಯನ್ನು ಎಷ್ಟರಮಟ್ಟಿಗೆ ಸಾಧಿಸಿರುವರೆಂಬದನ್ನು ಅಧ್ಯಕ್ಷರವರು ಸಂಕ್ಷೇಪವಾಗಿ ತಮ್ಮ ಭಾಷಣದಲ್ಲಿ ತಿಳಿಯಪಡಿಸಿರುವರು

ಪ್ರತಿ ಸಾಮಾಜಿಕ ಪರಿಷದದಲ್ಲಿ ಸಭೆಯವರು ವಾದಿಸಿ ಮಂಜೂರುಮಾಡುವ ಬಗ್ಗೆ ಹಲವು ನಿರ್ಣಯಗಳನ್ನು ಸಭೆಯ ಮುಂದಿಡುವರು ವಿಧವಾವಿವಾಹ, ಬಾಲಿಕೆಯರಿಗೆ ಪ್ರೌಢವಿವಾಹ, ಸ್ತ್ರೀ ವಿದ್ಯಾಭ್ಯಾಸ ಮೊದಲಾದ ಸ್ತ್ರೀ ಸಮುದಾಯದ ಅಭಿವೃದ್ಧಿಗೆ ಬೇಕಾದ ನಿರ್ಣಯಗಳೂ, ಸಮಾಜವನ್ನು ಪ್ರತಿಬಂಧಿಸುವ ಸಮುದ್ರ ಪ್ರಯಾಣ ನಿರ್ಬಂಧ, ಜಾತಿಭೇದ ಮೊದಲಾದವುಗಳನ್ನು ಸಡಿಲಿಸುವ ಯತ್ನಗಳನ್ನು ಒಳಕೊಂಡಿರುವ ನಿರ್ಣಯಗಳೂ ಸಭೆಯ ಮುಂದಿಡೋಣಾಗುವ ವಿಷಯಗಳನ್ನು ಸೇರಿರುವವು ವಿಧವಾ ವಿವಾಹವನ್ನು ಇಂಥ ನಿರ್ಣಯಗಳಲ್ಲಿ ಸೇರಿಸಿರುವುದನ್ನು ಕೆಲವರು ಆಕ್ಷೇಪಿಸಬಹುದು, ಇನ್ನು ಕೆಲವರು ಜಾತಿಭೇದ ಪ್ರಸ್ತಾಪವ್ಯಾಕೆಂತ ವಾದಿಸಬಹುದು, ಮತ್ತು ಕೆಲವರು ತಂತಮಗೆ ಅಯುಕ್ತವೆಂತ ತೋರಿದ ನಿರ್ಣಯಗಳನ್ನು ಸಭೆಯ ಮುಂದಿಡಕೂಡದೆಂದು ಅಭಿಪ್ರಾಯಪಡಬಹುದು ಆದರೆ ಸಮಾಜದ ಕಟ್ಟಳೆ ಆಚಾರ ಮೊದಲಾದವುಗಳು ಅಂಗಡಿಗಳಲ್ಲಿ ಮಾರಲಿಕ್ಕಿಡುವ ಬೇರೆ ಬೇರೆಯಾದ ಸಾಮಾಗ್ರಿಗಳ ಹಾಗಲ್ಲ ಹಾಗಿದ್ದರೆ ನಮಗೆ ಬೇಕಾದ್ದನ್ನು ಕೊಂಡುಕೊಂಡು ಬೇಡವಾದ್ದನ್ನು ಅಂಗಡಿಯಲ್ಲಿಯೇ ಬಿಟ್ಟು ಬರಬಹುದಿತ್ತು ಈ ಆಚಾರ ಪದ್ಧತಿಗಳೆಲ್ಲವೂ ಸಮಾಜರಚನೆಯಲ್ಲಿ ಒಂದರಲ್ಲೊಂದು ಬೆರತು ಬೆಳೆಯುವ ಪರಸ್ಪರ ಜೋಡಣೆಯುಳ್ಳವುಗಳಾಗಿರುವುದರಿಂದ ನಮಗೆ ಒಬ್ಬೊಬ್ಬನಿಗೆ ಬೇಕಾದಂತೆ ಬೇರೆ ಬೇರೆಯಾದ ಅವುಗಳ ವಿಚಾರವು ಅಸಾಧ್ಯ. ರಾ। ನಟರಾಜನ್‌ರವರು ಈ ಸಿದ್ಧಾಂತವನ್ನು ಕಾರ್ಯತಃ ಸಂಘಸಂಸ್ಕಾರವನ್ನು ಸಾಧಿಸಿದವರಿಗೆ ಚೆನ್ನಾಗಿ ತಿಳಿದಿರುವುದೆಂದು ಹೇಳಿ ಒಂದೆರಡು ಉಪಮೆಗಳಿಂದ ಸಭೆಯವರಿಗೆ ಇದನ್ನು ರುಜುಪಡಿಸಿ ತೋರಿಸಿದರು

ಹಲವು ವರುಷಗಳಿಂದ ಇಂಥಾ ಪರಿಷದಗಳು ಕೂಡಿ ನಿರ್ಣಯಗಳನ್ನು ಮಾಡಿದ್ದೇ ಹೊರತು ಕಾರ್ಯತಃ ಇಂಥ ನಿರ್ಣಯಗಳು ಬಹಳವಾಗಿ ಸಾಧಿಸಲಿಲ್ಲವೆಂಬದಕ್ಕೆ ರಾ। ನಟರಾಜನ್‌ರವರ ಉತ್ತರವು ಸಮರ್ಪಕವಾಗಿರುವುದು ಸಂಘಸುಧಾರಕರವರ ನಿರ್ಣಯಗಳನ್ನು ಈ ರೀತಿ ಟೀಕಿಸುವಂಥವರು ಸಾಮಾಜಿಕ ಪರಿಷದಗಳ ಉದ್ದಿಶ್ಯಗಳನ್ನು ಪೂರ್ಣವಾಗಿ ಅರಿತವರಲ್ಲವೆಂತ ರಾ। ನಟರಾಜನ್‌ರವರು ಅಭಿಪ್ರಾಯಪಡುವರು ಇಪ್ಪತ್ತು ವರುಷಗಳ ಮೊದಲು ಇಂಥಾ ನಿರ್ಣಯಗಳಲ್ಲಿ ಉದ್ದೇಶಿಸಲ್ಪಟ್ಟಿರುವ ವಿಷಯಗಳ ಪರವಾಗಿ ಇದ್ದ ಜನಸಮುದಾಯದ ಭಾವನೆಯು ಈಗಲೂ ಆಗ ಇದ್ದಂತೆಯೇ ಇರುವುದೇ? ಪ್ರಕೃತ ಸ್ತ್ರೀ ವಿದ್ಯಾಭ್ಯಾಸವನ್ನು ವಿರೋಧಿಸುವಂಥವರು ಎಷ್ಟು ಮಂದಿ ಇರುವರು? ಸಮುದ್ರಪ್ರಯಾಣವು ಎಷ್ಟು ಜನರಿಗೆ ಆಕ್ಷೇಪಕರವೆಂತ ತೋರುವುದು? ವಿಧವಾ ವಿವಾಹವನ್ನು ಸಹಾ ಪ್ರೋತ್ಸಾಹಿಸುವವರ ಸಂಖ್ಯೆಯು ಮೊದಲಿನಷ್ಟೇ ಇರುವುದೇ? ಆಯಾ ಜಾತಿಯವರು ಒಟ್ಟುಕೂಡಿ ಸಹಪಂಕ್ತಿ ಭೋಜನಗಳಾಗುವುದಿಲ್ಲವೇ? ಪತಿತರನ್ನು ಉದ್ಧರಿಸಲು ಪಂಚಮಶಾಲೆ ಮೊದಲಾದವುಗಳು ಅಲ್ಲಲ್ಲಿ ಸ್ಥಾಪಿಸಲ್ಪಟ್ಟಿಲ್ಲವೇ? ಇದೆಲ್ಲವೂ ಇಂಥಾ ಸಾಮಾಜಿಕ ಪರಿಷದಗಳಿಂದ ಸಾಧ್ಯವಾಯಿತೆಂತ ತಾನು ಭಾವಿಸುತ್ತೇನೆ.

(ಮುಂದೆ ಸಾಗುವುದು)

ವಿವಾಹವಾಗದೆ ಕ್ಷೇಮ ಸಿಗದು.

ಒಬ್ಬನಿಗಿಂತ ಇಬ್ಬರು ಲೇಸು ಎಂಬಂಥಾ ಮಾತು ಜನಜನಿತವಾಗಿದೆ ಮಾತ್ರವಲ್ಲದೆ, ಈ ಮಾತಿಗನುಸಾರವಾಗಿ ಈ ಲೋಕದಲ್ಲಿ ಮದುವೆ ಮಾಡಿಕೊಳ್ಳುವದೂ, ಕೊಡುವದೂ ರೂಢಿಯಾಗಿದೆಯಷ್ಟೆ. ಆದರೆ ಅನೇಕರು ಮದುವೆ ಆಗುವದಕ್ಕಿಂತಲೂ ಕೊರಳಿಗೆ ಒಂದು ಕಲ್ಲು ಕಟ್ಟಿ [illegible] ವರು. ಈ ಮಾತು ಬರೀ ಸುಳ್ಳು! ಯಾಕಂದರೆ 78 ಮಂದಿ ವಿವಾಹಿತರು [illegible] ಪ್ರಾಯಕ್ಕೆ ಮುಟ್ಟುವಾಗ 41 ಅವಿವಾಹಿತರು ಮಾತ್ರ ಆ ಪ್ರಾಯಕ್ಕೆ ಮುಟ್ಟುವರೆಂತಲೂ, 98 ಜನ ವಿವಾಹಿತರು 60 ಪ್ರಾಯಕ್ಕೆ ಮುಟ್ಟುವಾಗ 22 ಅವಿವಾಹಿತರು ಮಾತ್ರವೇ 60ಕ್ಕೆ ಮುಟ್ಟಿರುವರೆಂತಲೂ, 28 ಜನ ವಿವಾಹಿತರು 70ಕ್ಕೆ ಮುಟ್ಟುವಾಗ 11 ಜನ ಅವಿವಾಹಿತರು ಮಾತ್ರವೇ 70ಕ್ಕೆ ಮುಟ್ಟಿರುವರು ಅಂದರೆ ಸುಮಾರು 3ಕ್ಕೆ 1ರಂತೆ, 9 ಗೃಹಸ್ಥರು 90ಕ್ಕೆ ಮುಟ್ಟುವಾಗ 3 ಅವಿವಾಹಿತರು ಮಾತ್ರವೇ 90ಕ್ಕೆ ಮುಟ್ಟಿರುವರೆಂತ ಇಂಗ್ಲಾಂಡಿನಲ್ಲಿ ಇದನ್ನು ಕಂಡು ಹಿಡಿಯುವ ಬಗ್ಗೆಯೇ ಮಾಡಿದ ಖಾನೆಸುಮಾರಿನಿಂದ ತಿಳಿದು ಬರುವದು ಇದನ್ನು ನೋಡುವಾಗ ಮದುವೆ ಆಗದೆ ಕ್ಷೇಮಸಿಗದು ಎಂಬದಾಗಿ ಒಬ್ಬೊಬ್ಬ ವಾಚಕನಿಗೆ ಖಾತ್ರಿಯಾಗಬಹುದು. ಆದರೆ ಗೃಹಸ್ಥಾಶ್ರಮದಲ್ಲಿ ಸೇರುವದು ಮಾತ್ರವೇ ಕ್ಷೇಮವನ್ನು ಹೆಚ್ಚಿಸುತ್ತದೆಂಬದಲ್ಲ. ಕ್ಷೇಮವರ್ಧನೆ ಆಗುವದರಿಂದ ಮಾತ್ರವೇ ಗೃಹಸ್ಥಾಶ್ರಮವು ಭಾಗ್ಯಕರ. ಅದು ಹೇಗೆ ಎಂಬದಾಗಿ ಒಬ್ಬರು ಕೇಳಬಹುದು.

ವಿವಾಹಿತರು ತಮ್ಮ ಕ್ಷೇಮದ ವಿಷಯ ಜಾಗ್ರತೆ ತಕೊಳ್ಳುವಷ್ಟು ಅವಿವಾಹಿತರು ತಕೊಳ್ಳುವದಿಲ್ಲ, ಜಾಗ್ರತೆ ಮಾಡಲಿಕ್ಕೆ ಆಗುವದೂ ಇಲ್ಲ. ಅವಿವಾಹಿತರಿಗೆ ಎರಡೇ ಕಣ್ಣುಗಳು ಆದರೆ ಗೃಹಸ್ಥರಿಗೆ ಎರಡು ಜೋಡು ಕಣ್ಣುಗಳು. ಆದ್ದರಿಂದ ನಾಲ್ಕು ಕಣ್ಣುಗಳೂ ಒಟ್ಟಾಗಿ ಕೆಲಸ ನಡಿಸುವುದರಿಂದ ಗಂಡನಿಗೆ ನಷ್ಟ ಬಾರದಂತೆ ಹೆಂಡತಿಯು ವಿವೇಕದಿಂದಲೂ ಮಿತವ್ಯಯದಿಂದಲೂ ಗೃಹಕೃತ್ಯ ನಡಿಸುತ್ತಾಳೆ. ಗಂಡನ ಕೆಲಸವು ಹೊರಗೆ ಇರುವದರಿಂದ, ಮನೆಯಲ್ಲಾಗುವ ಎಲ್ಲಾ ಕೆಲಸಗಳನ್ನು ನೋಡುವುದಕ್ಕೆ ಆತನಿಗೆ ಸಮಯವಿರುವದಿಲ್ಲ ಅವೆಲ್ಲಾ ಹೆಂಡತಿಯ ಮೇಲೆ ಬೀಳುತ್ತದೆ ಗಂಡನು ಸಂಪಾದಿಸಿದ್ದು ಧಾಮು ಧೂಮು ಖರ್ಚಾಗದ ಹಾಗೆ ಮನೆತನ ನಡಿಸುವದು ಆಕೆಯ ಪಾಲಿಗೆ ಬೀಳುತ್ತದೆ ಅವಳು ಕ್ರಮವಾಗಿ ನಡಿಸದಿದ್ದರೆ ಗಂಡನಿಗೆ ನಷ್ಟಬಿದ್ದು ತನಗೆ ಬೇಡುವ ಗತಿ ಬಂದೀತು ಎಂಬದಾಗಿ ಅವಳಿಗೆ ಗೊತ್ತೇ ಇದೆ. ಹೀಗೆ ಒಬ್ಬನ ಕೆಲಸವನ್ನು ಇಬ್ಬರು ಮಾಡಿದಂತಾಯಿತು ಆದರೆ ಅವಿವಾಹಿತನಿಗೆ ಈ ಎಲ್ಲಾ ಸಹಾಯಗಳು ಉಂಟೇ? ತನ್ನ ವ್ಯಾಪಾರದಲ್ಲಿ, ಉದ್ಯೋಗದಲ್ಲಿ ಇಡೀ ದಿನ ಕಷ್ಟ ಮಾಡಿ, ದಣಿದುಕೊಂಡು ಸಾಯಂಕಾಲ ಮನೆಗೆ ಬರುವಾಗ ಈತನನ್ನು ಆದರಿಸುವ ಬಗ್ಗೆ ಯಾರಿರುವರು! ಆದರೆ ಗೃಹಸ್ಥನಿಗೆ, ಆವನು ಆ ದಿನದ ಆಯಾಸ ತೀರಿಸಿ ವಿಶ್ರಾಂತಿ ಪಡುವ ಹಾಗೆ ಪ್ರೀತಿಯಿಂದ ಅವನಿಗೆ ತನ್ನಿಂದಾದಷ್ಟು ಉಪಚಾರ ಪತ್ನಿಯು ಮಾಡುವಳಲ್ಲ! ಅವನಿಗೆ ರೋಗ ಬಂದರೆ, ಅಥವಾ ಕಷ್ಟದಲ್ಲಿ ಬಿದ್ದರೆ ಅವನಿಗೆ ಬಂದದ್ದು ತನಗೆ ಬಂದ ಹಾಗೆ ಎಂದು ನೆನಸಿಕೊಂಡು, ತನ್ನಿಂದಾಗುವ ಸಹಾಯ ಮಾಡಿ, ಅವನನ್ನು ಧೈರ್ಯ ಪಡಿಸಲೂ ಸಂತೋಷ ಪಡಿಸಲೂ ತಕ್ಕ ಉಪಾಯ ನಡಿಸುವಳು. ಆದರೆ ಅವಿವಾಹಿತ ಯೌವನಸ್ಥನಿಗೆ ಯಾರಾದರೂ ಇರುವರೇ? ಆದ್ದರಿಂದ ಎಲ್ಲಾ ಹೊರೆಗಳನ್ನು ಇವನೊಬ್ಬನೇ ಹೊರಬೇಕಾಗುವದಲ್ಲದೆ, ತಿದ್ದಿ ನಡಿಸುವವರ್‍ಯಾರೂ ಇಲ್ಲದ್ದರಿಂದ ಜೀವಮಾನದ ಮಧ್ಯಭಾಗದಲ್ಲಿ ಕುಡಿಕತನ, ಜುಗಾರಾಟ ಮೊದಲಾದ ದುಷ್ಟಚಾಳಿಗಳಲ್ಲಿ ಬಿದ್ದು, ಮಾನಸಿಕ ಮತ್ತು ಶಾರೀರಿಕ ನಷ್ಟಗಳನ್ನು ಹೊಂದಿ ಈ ಇಹವೆಂಬ ದೊಡ್ಡ ಪ್ರಯಾಣದ ಮಧ್ಯ ಕಾಲದಲ್ಲಿಯೇ ಹಡಗು ಮುಣುಗಿದವರಾಗುವರಲ್ಲ.

ಯೌವ್ವನ ಕಾಲದಲ್ಲಿ ಹೆಂಡತಿಯು ಗಂಡನಿಗೆ ಯಜಮಾನತಿ, ಮಧ್ಯ ಪ್ರಾಯದಲ್ಲಿ ಆಕೆಯು ಗಂಡನಿಗೆ ಒಳ್ಳೇ ಸಂಗಾತಿ, ಮುದಿ ಪ್ರಾಯದಲ್ಲಿ ಆಕೆಯು ಗಂಡನಿಗೆ ದಾದಿ ಎಂಬದಾಗಿ ಬೇಕನ್ ಎಂಬ ವಿದ್ವಾಂಸರು ಹೇಳುವರು. ಹೀಗಿರುವುದರಿಂದ ಪ್ರತೀ ಒಬ್ಬನು ಗೃಹಸ್ಥಾಶ್ರಮವನ್ನು ಸೇರುವದು ಅತ್ಯಗತ್ಯವೆಂಬದು ಇವರ ಮಾತಿನಿಂದಲೂ ಖಾತ್ರಿಯಾಗುತ್ತದಲ್ಲವೇ?

ಒಬ್ಬನು ನೀತಿವಂತನೆಂದೆನಿಸಿಕೊಳ್ಳಬೇಕಾದರೆ ಮದುವೆ ಎಂಬದು ನಿರ್ವಾಹವಿಲ್ಲದ ಸಾಹಿತ್ಯವೆಂದೂ, ಮದುವೆಯು ಒಂದು ಕಡೆಯಲ್ಲಿ ಶಕ್ತಿ ಕುಂದಿಸುವಂಥಾ ದುಂದುಗಾರಿಕೆಗೆ ತಡೆಕಟ್ಟುತ್ತದೆಂದೂ, ಮತ್ತೊಂದು ಕಡೆಯಲ್ಲಿ ನಿಶ್ಚಿಂತೆಯನ್ನು ಹುಟ್ಟಿಸುತ್ತದೆಂದೂ ಹೂಪ್‌ಲೇಂಡ್ ಎಂಬವರು ಹೇಳುವರು ಹ್ಯಾಗೂ ವಿವಾಹವು ಸುಖಾನುಭೋಗವನ್ನು ಮಿತಿಯಲ್ಲಿಟ್ಟು ಕ್ರಮಪಡಿಸುತ್ತದಲ್ಲದೆ ಗೃಹಕೃತ್ಯದ ಸಂಗತಿಗಳು ಸಂತೋಷಭರಿತವಾಗಿ ಆಗುವ ಹಾಗೆ ಮಾಡುತ್ತದೆ ಎಂಬದು ನಿಶ್ಚಯ! ಬರೇ ಕಾಮಾತುರವನ್ನು ತೃಪ್ತಿಪಡಿಸುವದಕ್ಕೆ ಮಾತ್ರವೇ ವಿವಾಹವಾಗತಕ್ಕದೆಂದು ಎಣಿಸದೆ ಯಾರು ವಿವಾಹವಾಗುವನೋ, ಯಾರು ಮದುವೆ ಎಂಬದನ್ನು ಪರಿಶುದ್ಧವಾದ ನಿಷ್ಕಳಂಕಪ್ರೀತಿ ಸಾಧನೆಯ ಸಂಯೋಗವೆಂತ ನೆನಸುತ್ತಾನೋ ಅವನಿಗೆ ಮಾತ್ರ ನಿಶ್ಚಯವಾಗಿ ಮಾನಸಿಕ ಶಾರೀರಿಕ ಸಂಬಂಧವಾದ ಕ್ಷೇಮವು ಹೆಚ್ಚುವದು ಎಂಬದಕ್ಕೆ ಯಾವ ಸಂಶಯವೂ ಇರದು.

ಇದನ್ನೆಲ್ಲಾ ಓದುವಾಗ ಹಾಗಾದರೆ ಮದುವೆ ಆಗತಕ್ಕ ಕಾಲ ಯಾವದೆಂಬದಾಗಿ ಒಬ್ಬರು ಕೇಳಬಹುದು. ಆದರೆ ಲೇಖನವು ಒಂದೇ ಸಾರಿಗೆ ಉದ್ದವಾದೀತೆಂಬ ಕಾರಣದಿಂದ ಈ ಸಂಗತಿಯನ್ನು ಇನ್ನೊಮ್ಮೆ ತಿಳಿಸುವೆನು.

S. E. A.

ಆಯುರ್ವೇದದ ಪುನರುಜ್ಜೀವನ.

ಶಾರೀರ ಶಾಸ್ತ್ರ.

———o———

ಶರೀರವು ಎರಡಾಗಿ ವಿಭಾಗಿಸಲ್ಪಟ್ಟಿದೆ ಎಂದು ಹೇಳ ಬಹುದು. ಅದರಲ್ಲಿ ಒಂದು ಮಾನುಷ ಶರೀರವೆಂತಲೂ ಇನ್ನೊಂದು ಅಮಾನುಷ ಶರೀರ ಯಾ ತಿರ್ಯಗ್ಜಂತು ಶರೀರವೆಂತಲೂ ಹೇಳಲ್ಪಡುತ್ತದೆ. ಪ್ರಕೃತ ಇಲ್ಲಿ ನಾವು ಮಾನುಷ ಶರೀರವನ್ನು ಉದ್ದೇಶವಾಗಿ ತಕ್ಕೊಳ್ಳೋಣ.

ಮಾನುಷ ಶರೀರವೆಂಬದು ಅನೇಕ ಮತ್ತು ಭಿನ್ನ ಭಿನ್ನ ಭೌತಿಕ ಪದಾರ್ಥಗಳಿಂದ ಕಟ್ಟಲ್ಪಟ್ಟ ಒಂದು ವಿಧ ಕಟ್ಟಡವಾಗಿದೆ. ಇದು ಸಾಧಾರಣವಾಗಿ ನೂರು ವರುಷಗಳ ತನಕ ಬಾಳುತ್ತದೆಂದು ಪ್ರಾಚೀನ ಆರ್ಯವೈದ್ಯರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಇದಕ್ಕೆ ಬೇರೇನಾದರೂ 'ಹಾಕುಚೋಕು'ಗಳು ಬಂದರೆ ಅಕಾಲದಲ್ಲಿ ಶೀಘ್ರವಾಗಿಯೇ ಬಿದ್ದು ಹೋಗುವದುಂಟು. ಇದು ಯಾವಾಗಲೂ ಒಂದೇ ರೀತಿಯಾಗಿರದೆ ಒಂದು ಚಿಕ್ಕ ಪರಿಮಿತಿಯಿಂದ ಕ್ರಮಶಃ ವೃದ್ಧಿಯನ್ನು ಹೊಂದುತ್ತಾ ಕೊನೆಗೆ ಒಂದು ನಿಯಮಿತ ಪರಿಮಿತಿಯಲ್ಲಿ ಕೆಲವು ವರ್ಷಗಳ ತನಕ ನಿಂತು ತರುವಾಯ ಕ್ರಮಶಃ ಜೀರ್ಣತ್ವವನ್ನೈದುತ್ತಾ ಕಡೆಗೆ ಬಿದ್ದು ಹೋಗುತ್ತದೆ. ಇದಕ್ಕೆ ಸಜೀವತ್ವ ಮತ್ತು ನಿರ್ಜೀವತ್ವವೆಂಬ ಎರಡು ಅವಸ್ಥೆಗಳಿರುವವು. ಈ ಕಟ್ಟಡವನ್ನು ಪುರವೆಂತಲೂ ಇದರ ಅಧಿಪತಿಯನ್ನು ಪುರುಷನೆಂತಲೂ ಕೂಡ ಹೇಳುವರು. ಈ ಕಟ್ಟಡವು ಅತ್ಯಂತ ಅದ್ಭುತ ಚಮತ್ಕೃತಿಗಳೊಂದಿಗೆ ಕಟ್ಟಲ್ಪಟ್ಟದ್ದಲ್ಲದೆ ಇದರ ನಿರ್ಮಾಣ ರೀತಿಯು ಅಸಾಧಾರಣ ಪದ್ಧತಿಯನ್ನು ಅನುಸರಿಸಿಕೊಂಡಿದೆ. ಇದು ಒಳಗಡೆಯಿಂದ ಕಟ್ಟಲ್ಪಡುತ್ತಾ ಒಂದು ಕೊಂಡು ಹೊರಗಡೆಯಲ್ಲಿ ಸಮಾಪ್ತಿಯನ್ನು ಹೊಂದಿದೆ. ಆದ್ದರಿಂದ ಹೊರ ಹೊರಗಿನ ವಸ್ತುಗಳಿಗೆ ಒಳ ಒಳಗಿರುವ ವಸ್ತುಗಳು ಆಧಾರವಾಗಿವೆ. ಇದರಲ್ಲಿ ನಾವು ಒಳಗಿನಿಂದಲೇ ವರ್ಣನೆಮಾಡಿಕೊಂಡು ಬರೋಣ.

ನಮಗೆ ಶರೀರದ ಹೊರಗಡೆಯಲ್ಲಿ ಅನೇಕ ರೋಮಗಳಿಂದಲೂ ಸ್ಥೂಲ ಮತ್ತು ಸೂಕ್ಷ್ಮ ರಂಧ್ರಗಳಿಂದಲೂ ತುಂಬಿಕೊಂಡಿರುವ ಚರ್ಮವೆಂಬ ಹೊದಿಕೆಯು ಕಾಣಬರುತ್ತದೆ ಅಲ್ಲವೆ. ಈ ಚರ್ಮವನ್ನು ಕೊಯ್ದು ಮೆಲ್ಲಮೆಲ್ಲನೆ ಸೂಕ್ಷ್ಮದೃಷ್ಟಿಯಿಂದ ಒಳಗಡೆ ನೋಡುತ್ತಾ ಹೋದರೆ ಮಧ್ಯಭಾಗದಲ್ಲಿ ಕಲಾ ಮತ್ತು ಮಾಂಸ ಮೊದಲಾದ ಅನೇಕ ವಸ್ತುಗಳು ಕಾಣಬರುವವು. ಕಡೆಗೆ ಘಟ್ಟಿಯಾದ ಮತ್ತು ಸಾಮಾನ್ಯ ಶಸ್ತ್ರಗಳಿಂದ ಕಡಿಯಲಿಕ್ಕೆ ಅಶಕ್ಯವಾದ ಅಸ್ಥಿ ಯಾ ಎಲುಬು ಎಂಬ ಒಂದು ವಿಧ ಪದಾರ್ಥವು ನಮಗೆ ತೋರಿಬರುವದು. ಇವುಗಳನ್ನು ಆಶ್ರಯಿಸಿಯೇ ಶರೀರವೆಂಬ ಕಟ್ಟಡವು ನಿಂತಿರುವದು.

ಪ್ರಾಚೀನ ಆರ್ಯ ವೈದ್ಯರು ಹಲ್ಲುಗಳನ್ನೂ, ಕಾರ್ಟಿಲೇಜ್ ಎಂದು ಈಗಿನವರು ಹೇಳುವ ಇನ್ನೊಂದು ಪದಾರ್ಥವನ್ನೂ ಅಸ್ಥಿ ಜಾತಿಗೇನೇ ಸೇರಿಸಿ ಕಪಾಲಾಸ್ಥಿ, ರುಚಕಾಸ್ಥಿ, ತರುಣಾಸ್ಥಿ, ವಲಯಾಸ್ಥಿ, ನಲಕಾಸ್ಥಿಗಳೆಂಬದಾಗಿ ಅಸ್ಥಿಯನ್ನು ಐದು ವಿಭಾಗವಾಗಿ ವಿಭಾಗಿಸಿದ್ದಾರೆ. ಇವುಗಳಲ್ಲಿ ಹಲ್ಲುಗಳು ರುಚಕಾಸ್ಥಿ ಜಾತಿಗೂ ಕಾರ್ಟಿಲೇಜ್ ಎಂಬದು ತರುಣಾಸ್ಥಿ ಜಾತಿಗೂ ಶೇರಿವೆ. ಆದ್ದರಿಂದ ಪ್ರಾಚೀನ ಆರ್ಯ ವೈದ್ಯರು ಹೇಳಿದ ಅಸ್ಥಿ ಸಂಖ್ಯೆಗೂ ಈಗಿನ ಪಾಶ್ಚಾತ್ಯರು ಹೇಳುವ ಅಸ್ಥಿ ಸಂಖ್ಯೆಗೂ ಭೇದವಿರುವದು. ಈ ಭೇದಕ್ಕೆ ಇದೊಂದೇ ಕಾರಣವಲ್ಲಾ ಇನ್ನೂ ಬೇರೆ ಕಾರಣಗಳಿವೆ. ಆ ವಿಷಯ ಇಲ್ಲಿ ನಮಗೆ ಬೇಕಾದ್ದಿಲ್ಲ.

ಬರೇ ಅಸ್ಥಿಭಾರವನ್ನು ಕಂಕಾಲ ಎಂದು ಹೇಳುವರು. ಇದನ್ನೇ ಈಗಿನವರು ಸ್ಕೆಲಿಟನ್ ಎಂದನ್ನುವರು. ಈ ಕಂಕಾಲವನ್ನು ಶಾಖಾ, ಅಂತರಾಧಿ, ಊರ್ಧ್ವಜತ್ರು ಎಂದು ಮೂರಾಗಿ ವಿಭಾಗ ಮಾಡಿದ್ದಾರೆ. ಇವೆಲ್ಲಕ್ಕೆ ಪ್ರತ್ಯೇಕ ಪ್ರತ್ಯೇಕವಾಗಿ ಅಂಗವೆಂದೂ ಇವುಗಳನ್ನು ಹೊಂದಿಕೊಂಡಿರುವ ಚಿಕ್ಕಚಿಕ್ಕ ಅಂಗಗಳಿಗೆ ಪ್ರತ್ಯಂಗಗಳೆಂದೂ ಹೇಳುವರು.

ಶಾಖಾ.

ಅಂತರಾಧಿಗೆ ಆಧಾರವಾಗಿಯೂ ಅಂತರಾಧಿಯನ್ನು ಆಶ್ರಯಿಸಿಕೊಂಡಿಯೂ ಇರುವ ಸಕ್ಥಿ ಬಾಹುಗಳೆಂಬ ಅಂಗಗಳನ್ನೇ ಶಾಖಾ ಎಂದನ್ನುವರು. ಇಲ್ಲಿ ಸಕ್ಥಿ ಎಂದರೆ ಕಾಲು, ಬಾಹು ಎಂದರೆ ಕೈ ಎಂದರ್ಥ.

ಕಾಲು.

ಕಾಲಿನ ಅಸ್ಥಿಗಳು ಪಾದಾಸ್ಥಿಗಳ ಬಲದಿಂದ ಎರಡು ಕಂಬಗಳೋಪಾದಿಯಲ್ಲಿ ಅಂತರಾಧಿಯನ್ನು ಹೊತ್ತುಕೊಂಡು ನಿಂತಿವೆ. ಇವುಗಳಿಗೆ ಪಾದಾಟಿಗೆಯೋಪಾದಿಯಲ್ಲಿರುವ ಪಾದವು 5 ಬೆರಳುಗಳನ್ನನುಸರಿಸಿಕೊಂಡು ಮೇಲಿನ ಭಾರವನ್ನು ಹೊತ್ತುಕೊಂಡು [illegible] ಬಿದ್ದುಹೋಗದಂತೆ ಬಲವಾಗಿ ಕಾಲುಗಳೆಂಬ ಕಂಬಗಳನ್ನು ಹೊತ್ತುಕೊಂಡಿದೆ. [illegible] ಬೆರಳಿನಿಂದ ಹಿಡಿದು ಚಿಕ್ಕ ಬೆರಳಿನ ತನಕ [illegible]

ಇವುಗಳಲ್ಲಿ ಅಂಗುಷ್ಠಾಂಗುಲಿ ಎಂಬದು ಚಿಕ್ಕಚಿಕ್ಕ ಎರಡು ತುಂಡು ಎಲುಬುಗಳಿಂದಲೂ ಮಿಕ್ಕ ನಾಲ್ಕು ಅಂಗುಲಿಗಳು ಮೂರು ಮೂರು ತುಂಡು ಎಲುಬುಗಳಿಂದಲೂ ಉಂಟಾಗಿವೆ. ಈ ತುಂಡು ಎಲುಬುಗಳು ಶ್ಲೇಷಕವೆಂಬ ಒಂದು ವಿಧದ ಪದಾರ್ಥದಿಂದ ಪರಸ್ಪರ ಜೋಡಿಸಲ್ಪಟ್ಟಿವೆ. ಇವುಗಳನ್ನು ಘಟ್ಟಿಯಾಗಿ ಸಂಧಿಸದೆ ಇರೋಣದರಿಂದ ಇವುಗಳಿಗೆ ಚಲಸಂಧಿ ಯಾ ಚೇಷ್ಟಾವತ್ಸಂಧಿಯೆಂದೂ ಹೆಸರದೆ. ಅದಕಾರಣ ನಾವು ಬೆರಳುಗಳನ್ನು ಮುಚ್ಚಲಿಕ್ಕೂ ಮುದರಿಸಲಿಕ್ಕೂ ಬಲ್ಲೆವು. ಈ ಸಂಧಿಗಳು ಕೋರಸಂಧಿ ಎಂಬ ಸಂಧಿಜಾತಿಗೆ ಶೇರಿವೆ. ಅಂಗುಲ್ಯಸ್ಥಿಗಳು ನಲಕಾಸ್ಥಿ ಎಂಬ ಅಸ್ಥಿ ಜಾತಿಗೆ ಶೇರಿವೆ.

ಪಾದ.

ಪಾದವು, ಪಾದತಲ, ಪಾದಹೃದಯ, ಪಾದಕೂರ್ಚ, ಗುಲ್ಫ, ಪಾರ್ಷ್ಣಿ ಎಂದು ಐದಾಗಿ ವಿಭಾಗಿಸಲ್ಪಟ್ಟಿದೆ. ಇದು ಹನ್ನೆರಡು ತುಂಡು ಎಲುಬುಗಳಿಂದ ರಚಿಸಲ್ಪಟ್ಟಿದೆ. ಇವುಗಳೂ ಹಿಂದೆ ಹೇಳಿದ ಶ್ಲೇಷಕವೆಂಬ ಪದಾರ್ಥದಿಂದ ಬಿಗಿಯಾಗಿ ಒಂದಕ್ಕೊಂದು ಹೊಡಲ್ಪಟ್ಟದೆ. ಆದ್ದರಿಂದ ಇವುಗಳನ್ನು ಹಿಂದಿನವುಗಳಂತೆ ಚಲಿಸಲಿಕ್ಕೆ ಸಾಧ್ಯವಿಲ್ಲ. ಪಾದದ ಎಲುಬುಗಳು ಬೇರೆಬೇರೆ ತುಂಡಾಗಿದ್ದದ್ದು ನಮಗೆ ಬಹಳ ಉಪಕಾರವಾಗಿದೆ. ಹಾಗಿಲ್ಲದೆ ಒಂದೇ ಎಲುಬಿನಿಂದ ಮಾಡಿದ್ದೇಯಾದರೆ ನಾವು ಪ್ರತಿಯೊಂದು ಅಂಗುಲಿಯ ಮುಚ್ಚುವಿಕೆ ಮತ್ತು ಮುದುರುವಿಕೆ ಮೊದಲಾದ ಕ್ರಿಯೆಗಳನ್ನು ಮಾಡಲಾರೆವು. ಇದರ ಸಂಧಿಗಳೂ ಕೋರಸಂದಿ ಜಾತಿಗೇನೇ ಶೇರಿದ್ದಾಗಿವೆ. ಆದರೆ ಅಸ್ಥಿಗಳು ಮಾತ್ರ ವಲಯಾಸ್ಥಿ ಜಾತಿಗೆ ಶೇರಿವೆ.

ಪಾದದ ಹಿಂಭಾಗವಾದ ಪಾರ್ಷ್ಣಿ ಎಂಬದರ ಮುಂದಕ್ಕೆ ಮತ್ತು ಸ್ವಲ್ಪ ಮೇಲಕ್ಕೆ ಗುಲ್ಫ ಎಂಬ ಸ್ಥಳವನ್ನೂ ಪಾರ್ಷ್ಣಿ ಎಂಬದರ ಮುಂಬಾಗವನ್ನೂ ಆಶ್ರಯಿಸಿ ಒಂದು ಜೋಡೆಲುಬು ನಿಲ್ಲಿಸಲ್ಪಟ್ಟಿದೆ. ಅದಕ್ಕೆ ಜಂಘಾಸ್ಥಿ ಎಂದು ಹೆಸರು. ಅದರ ಕೆಳಭಾಗ ಗುಲ್ಫ ಮತ್ತು ಪಾರ್ಷ್ಣ್ಯಸ್ಥಿಗಳಿಂದಲೂ ಮೇಲ್ಭಾಗ ಊರ್ವಸ್ಥಿ ಎಂಬದರ ಬುಡದಿಂದಲೂ ಶ್ಲೇಷಕವೆಂಬ ಪದಾರ್ಥದಿಂದಲೇ ಸಂದಿಸಲ್ಪಟ್ಟದೆ. ಈ ಸಂದಿಯು ಚೇಷ್ಟಾವತ್ಸಂಧಿ ಆಗಿ ಕೋರಸಂದಿ ಜಾತಿಗೆ ಶೇರಿದೆ. ಇದನ್ನು ನಾವು ಚಲಿಸಬಲ್ಲೆವು.

ಜಂಘಾಸ್ಥಿಯು ತನ್ನ ತಲೆಯ ಮೇಲೆ ಊರ್ವಸ್ಥಿಯನ್ನು ಹೊತ್ತುಕೊಂಡು ನಿಂತಿದೆ. ಊರ್ವಸ್ಥಿಯು ಜಂಘಾಸ್ಥಿಯ ತಲೆಯ ಮೇಲೆ ನಿಂತುಕೊಂಡು ತನ್ನ ತಲೆಯ ಮೇಲೆ ಕಟೀಕ, ತರುಣಗಳೆಂಬ ಶ್ರೋಣ್ಯಸ್ಥಿಯನ್ನು ಹೊತ್ತುಕೊಂಡಿದೆ. ಊರ್ವಸ್ಥಿಯು ಸೇರುವ ಸಂದಿಗೆ ಜಾನುಸಂದಿ ಎಂದು ಹೆಸರು. ಈ ಸಂಧಿಯು ಕೂಡ ಚೇಷ್ಟಾವತ್ಸಂದಿಯಾಗಿ ಕೋರಸಂದಿ ಜಾತಿಗೇನೆ ಸೇರಿದೆ. ಈ ಸಂಧಿಗೆ ಸರಿಯಾಗಿ ತಗಲಿ ಮುಂಭಾಗದಲ್ಲಿ ಉರುಟಾದ ಮತ್ತು ಸ್ವಲ್ಪ ದಪ್ಪವಿರುವ ಒಡೆಯಾಕೃತಿ ಒಂದು ಎಲುಬು ಇರುವದು. ಇದಕ್ಕೆ ಜಾನ್ವಸ್ಥಿ ಎಂದನ್ನುವರು. ಜಾನ್ವಸ್ಥಿಯು ಕಪಾಲಾಸ್ಥಿಗೆ ಸೇರಿದೆ. ಊರ್ವಸ್ಥಿಯ ತಲೆಯು ನುಣುಪಾಗಿಯೂ ಗೋಲವಾಗಿಯೂ ಇದ್ದುಕೊಂಡು ತನಗೆ ತಕ್ಕದಾದ ಕಟೀಕ ತರುಣಗಳೆಂಬ ಅಸ್ಥಿಗಳ ಕೆಳಗಡೆ ಮತ್ತು ಹಿಂಭಾಗದಲ್ಲಿ ಉರುಟಾಗಿಯೂ ಸ್ವಲ್ಪ ಆಳವಾಗಿಯೂ ನುಣುಪಾಗಿಯೂ ಇರುವ ಹೊಂಡದೊಳಗೆ ತನ್ನ ತಲೆಯನ್ನು ನುಸುಳಿಸಿಕೊಂಡಿದೆ. ಇದು ಶೇರಿದ ಸಂಧಿಗೆ ವಂಕ್ಷಣ ಸಂಧಿ ಎಂದನ್ನುವರು. ಇದು ಚೇಷ್ಟಾವತ್ಸಂಧಿಯಾಗಿ ಉದೂಖಲ ಸಂಧಿ ಜಾತಿಗೆ ಶೇರಿದೆ. ಒಂದು ಕಾಲಿನಂತೆಯೇ ಇನ್ನೊಂದು ಕಾಲಿನಲ್ಲಿಯೂ ಎಲುಬುಗಳು ಇವೆ ಆದರೆ ಇವುಗಳ ಚಡಿಗಳು ಇರುವ ಬದಿಯು ಹೆಚ್ಚು ಕಡಿಮೆಯಾಗಿದೆ. ವೃಕ್ಷಗಳಿಗೆ ಕೆಳಗಡೆ ಬೇರುಗಳಿರುವಂತೆ ನಮಗೆ ಕೆಳಗಡೆ ಕಾಲುಗಳಿವೆ. ವೃಕ್ಷಗಳಿಗೆ ಮೇಲ್ಗಡೆ ಗೆಲ್ಲುಗಳಿರುವಂತೆ ನಮಗೆ ಮೇಲ್ಗಡೆಯಲ್ಲಿ ಕೈಗಳಿವೆ.

ಕೈಗಳು.

ಕೈಎಲುಬುಗಳು ಕಾಲಿನೆಲುಬುಗಳಂತೆ ಅಂತರಾಧಿಯ ಭಾರವನ್ನು ತಕ್ಕೊಳ್ಳದೇನೇ ತನ್ನ ಭಾರವನ್ನು ಅಂತರಾಧಿಗೆ ಕೊಟ್ಟಿದೆ. ಇವುಗಳ ಅಂತರಾಧಿಯ ಮೇಲ್ಭಾಗ ಆಚೆ ಈಚೆ ದಡೆಗಳಲ್ಲಿ ಜೋಲಾಡುತ್ತಿವೆ. ಅವುಗಳು ಅಂತರಾಧಿಯಲ್ಲಿ ಶೇರಿಕೊಂಡು ಜೋಲಾಡುತ್ತಿರುವ ಸಂಧಿಗೇನೇ ಕಕ್ಷಾಸಂಧಿ ಎಂದನ್ನುವರು. ಇವುಗಳನ್ನು ಜತ್ರ್ವಸ್ಥಿ ಎಂಬ ಅಸ್ಥಿಗಳಲ್ಲಿಯೂ ಸಂಧಿಸಿದ್ದರಿಂದ ಇದರಲ್ಲಿ ಜತ್ರು ಸಂದಿ ಎಂಬ ಇನ್ನೊಂದು ಸಂಧಿಯು ಇರುವದು. ಕೈಎಲುಬಿನ ಬುಡವು ಅಂತರಾಧಿಯನ್ನು ಆಶ್ರಯಿಸಿಕೊಂಡಿರುವ ಅಂಸಾಸ್ಥಿ ಮತ್ತು ಜತ್ರ್ವಸ್ಥಿಗಳನ್ನು ಆಶ್ರಯಿಸಿಕೊಂಡಿದೆ. ಹೀಗೆ ಆಶ್ರಯಿಸಿಕೊಂಡಿರುವ ಈ ಎಲುಬಿಗೆ ಭುಜಾಸ್ಥಿ ಎಂದನ್ನುವರು. ಇದರ ಬುಡಭಾಗಕ್ಕೆ ಪ್ರಗಂಡವೆಂದೂ ತಲೆ ಭಾಗಕ್ಕೆ ಪ್ರಕೋಷ್ಠವೆಂದೂ ಹೆಸರು. ಪ್ರಗಂಡದ ಬುಡವನ್ನು ಭುಜಶಿರ ಎಂದನ್ನುವರು. ಈ ಸಂಧಿಯು ಚೇಷ್ಟಾವತ್ಸಂಧಿಯಾಗಿ ಉದೂಖಲ ಸಂಧಿ ಜಾತಿಗೆ ಶೇರಿದೆ. ಈ ಸಂಧಿಗಳಲ್ಲೂ ಶ್ಲೇಷಕವೆಂಬ ಪದಾರ್ಥ ವಿರುವದು. ಪ್ರಕೋಷ್ಠಾಸ್ಥಿಯ ತಲೆ ಭಾಗವು ಕಫೋಣ್ಯಸ್ಥಿ ಎಂಬುವ ಜೋಡೆಲುಬಿಗೆ ಆಧಾರವಾಗಿದೆ. ಕಫೋಣ್ಯಸ್ಥಿಗೆ ಮಣಿಕಾಸ್ಥಿ ಎಂಬ ಬೇರೊಂದು ಹೆಸರಿರುವದು. ಮಣಿಕಾಸ್ಥಿಯು ಭುಜಾಸ್ಥಿಯು ಸಂಧಿಸುವ ಸ್ಥಳಕ್ಕೆ ಕೂರ್ಪರ ಸಂಧಿ ಎಂದು ಹೇಳುವರು. ಕೂರ್ಪರ ಸಂಧಿಯಲ್ಲಿ [illegible]

ಬಂಧಸಂಧಿ ಎಂದು ಹೆಸರು. ಈ ಸಂಧಿಯು ಸ್ವೇಚ್ಛಾವ್ಯವಸ್ಥೆಯಾಗಿ ಕೋರ ಸಂಧಿ ಜಾತಿಗೇನೇ ಸೇರಿದೆ. ಇದಕ್ಕೆ ಮುಂಭಾಗದಲ್ಲಿ ಪಾಣಿಪಲ್ಲವವು ಇರುವುದು. ಈ ಪಾಣಿಪಲ್ಲವವು ಪಾಣಿತಲ, ಪಾಣಿಹೃದಯ, ಪಾಣಿಕೂರ್ಚ ಪಾಣಿಶಿರ ಎಂದು ನಾಲ್ಕಾಗಿ ವಿಭಾಗಿಸಲ್ಪಟ್ಟಿದೆ. ಇದರಲ್ಲಿ ಪಾದಾಸ್ಥಿಗಳಷ್ಟೇ ಅಸ್ಥಿಗಳಿರುವವು. ಇದರಲ್ಲಿ ಪಾರ್ಷ್ಣಸ್ಥಿ ಎಂಬದು ಮಾತ್ರ ಇಲ್ಲ. ಪಾಣಿಪಲ್ಲವಾಸ್ಥಿಗಳ ಮುಂದಕ್ಕೆ ಪಾಣ್ಯಂಗುಲ್ಯಸ್ಥಿಗಳಿರುವವು. ಇವುಗಳ ವಿಭಾಗ ಪಾದಾಂಗುಲ್ಯಸ್ಥಿ ವಿಭಾಗದಂತೇನೆ ತಿಳಿಯತಕ್ಕದ್ದು.

ಜಂಘಾಸ್ಥಿ, ಊರ್ವಸ್ಥಿ, ಭುಜಾಸ್ಥಿ, ಮಣಿಕಾಸ್ಥಿ ಎಂಬವುಗಳು ನಲಕಾಸ್ಥಿ ಜಾತಿಗೆ ಸೇರಿದ್ದಾಗಿವೆ. ಇವುಗಳು ನಮ್ಮ ಶರೀರದಲ್ಲಿರುವ ಬೇರೆ ಅಸ್ಥಿಗಳಿಗಿಂತ ಬಲವಾಗಿಯೂ ಉದ್ದವಾಗಿಯೂ ಥೋರವಾಗಿಯೂ ಇವೆ.

ಸ್ವೇಚ್ಛಾವ್ಯಾಯಾಮಿಯ ಟೀಕೆಗಳು.

ಟ್ರಾನ್ಸಿಟ್ ಪ್ರಯಾಣ.

ಟ್ರಾನ್ಸಿಟ್ ಎಂಬ ರಥವೇರಿ ಪರ್ಯಟನ ಗೈಯುವ ಸುಖವನ್ನು ಪದಬಾಹುಲ್ಯ ಮೂಲಕ ವಿವರಿಸುವದರಿಂದ ಅವರವರ ಸ್ವಾನುಭವ ಪರಿಮುಖ ಅದನ್ನು ತಿಳಕೊಳ್ಳುವದೇ ಉತ್ತಮ. ಆದರೂ ನಾನು ಪ್ರಾರಂಭಿಸಿದ ಟ್ರಾನ್ಸಿಟ್ ಚರಿತ್ರೆಯು ಪರ್ಯಟನಾಭಿಲಾಷಿಗಳನ್ನು ಅಧೈರ್ಯಪಡಿಸುವ ದುರುದ್ದೇಶವುಳ್ಳದ್ದಲ್ಲ. ಟ್ರಾನ್ಸಿಟ್ ಯಜಮಾನರ ಮನಸಿಗೆ ಕರಕರೆಯಾಗಬೇಕೆಂಬದು ಸರ್ವಥಾ ನನ್ನ ಯೋಚನೆಯಾಗಿರುವದಿಲ್ಲ. ಜನಸಮುದಾಯದ ಆರೋಗ್ಯ ರಕ್ಷಣೆಯು ಅವರ ಜೀವವನ್ನು ಕಾಪಾಡುವಗೋಸ್ಕರ ವಿಚಾರದಲ್ಲಿರಬೇಕಾದ ಪ್ರಧಾನ ಸದುದ್ದೇಶವೆಂಬದು ಎಲ್ಲರೂ ತಿಳಿದ ವಿಷಯವೇ. ಪರಂತು ಅದರ ಕುರಿತು ಅಗತ್ಯಬೀಳುವ ಏರ್ಪಾಡುಗಳನ್ನು ಮಾಡುವ ಮುಖ್ಯ ಕರ್ತವ್ಯವು ನಮ್ಮನ್ನು ಆಳುವ ಸರಕಾರದವರದಾಗಿರುವುದು. ಎಲ್ಲಾ ಮುಂಜಾಗ್ರತೆಗಳಲ್ಲಿ ಇದು ಪ್ರಥಮ ಸ್ಥಾನವನ್ನು ಅಲಂಕರಿಸಬೇಕು. ದೃಷ್ಟಾಂತವಾಗಿ ಮಂಗಳೂರ ಪತ್ತನದಲ್ಲಿ ಪರ್ಯಾಟನಾಭಿಲಾಷಿಗಳಿಗೆ ಬೇಕಾಗುವಷ್ಟು ಜಟ್ಕಾ ಬಂಡಿಗಳು ಯಾವ ಕಾಲದಲ್ಲಿಯೂ ದೊರಕುತ್ತವೆ. ಅವುಗಳು ಓಡ್ಯಾಡಬೇಕಾದ ದೂರವು ಹೆಚ್ಚಿನದಲ್ಲ. ಪರ್ಯಟನಕ್ಕೆ ತಗಲುವ ಸಮಯವು ವಾಡಿಕೆಯಾಗಿ ಅಲ್ಪವಾದದ್ದೇ. ಆದರೂ ಒಂದು ಬಂಡಿಯಲ್ಲಿ ನಿರ್ಣಯಿಸಲ್ಪಟ್ಟ ಮಿತದಕ್ಕಿಂತ ಹೆಚ್ಚು ವ್ಯಕ್ತಿಗಳನ್ನು ಸೇರಿಸಿಕೊಂಡರೆ ಆ ಕೃತ್ಯವು ಶಿಕ್ಷಾರ್ಹವಾದ ಅಪರಾಧವೆಂದು ಏರ್ಪಾಟಾಗಿಯದೆ. ಸ್ವಲ್ಪದೂರ ಓಡಾಡುವ ಇಂತಹ ಬಂಡಿಗಳ ವಿಷಯದಲ್ಲಿ ಸಲುವಳಿಯಾಗಿರುವ ನಿಬಂಧನೆಗಳು ಇಡೀ ಜಿಲ್ಲೆಯಲ್ಲಿ ತಿರುಗಿಕೊಂಡಿರುವ ಟ್ರಾನ್ಸಿಟ್ ರಥಗಳಿಗೆ ವಿಸ್ತರಿಸಲ್ಪಡದೆ ಇದ್ದ ಲೋಪಕೃತ್ಯದಿಂದ ಹುಟ್ಟಬೇಕಾದ ದೋಷಗಳು ಸ್ವತಃ ಪ್ರಮಾಣವಾದವುಗಳಾಗಿರುತ್ತವೆ. ಇದರ ವಿಚಾರಕರ್ತರು ಜಿಲ್ಲೆಯ ಕಲೆಕ್ಟರ್ ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಲ್ಲವೇ. ಪ್ರಕೃತ ಅವರ ಅವಗಾಹನೆಗೆ ಈ ಟ್ರಾನ್ಸಿಟ್ ಪರ್ಯಟನದ ದೋಷಗಳು ಇದುವರೆಗೆ ಬಂದ ಹಾಗೆ ತೋರುವುದಿಲ್ಲ. ಬಂದಿರುತ್ತಿದ್ದರೆ ಜಟ್ಕಾ ಬಂಡಿಗಳ ವಿಷಯದಲ್ಲಿ ಪ್ರಚಾರದಲ್ಲಿರುವ ಏರ್ಪಾಟು ಟ್ರಾನ್ಸಿಟ್ ಯಜಮಾನರ ನಡವಳಿಕೆಯ ಉದ್ದಿಶ್ಯವೂ ಅನುಷ್ಠಾನದಲ್ಲಿ ತರುವಗೋಸ್ಕರ ಅಗತ್ಯಬೀಳುವ ಅನುಜ್ಞೆಗಳು ವಿಧಿರೂಪವಾಗಿ ಇದರ ಮೊದಲೇ ನಿರ್ದೇಶಿಸಲ್ಪಡುತ್ತಿದ್ದವು. ಇಂತಹ ನಿಬಂಧನೆಗಳು ಇನ್ನಾದರೂ ಸಲುವಳಿಯಲ್ಲಿರುವ ಹಾಗೆ ಮುಂಜಾಗ್ರತೆ ತೆಗದುಕೊಳ್ಳದೆ ಇದ್ದರೆ ಕ್ರಮೇಣ ದೊಡ್ಡ ಅನರ್ಥಗಳು ತಲೆದೋರುವದಕ್ಕೆ ಆಸ್ಪದವಾಗುವದೇ ಸರಿ. ಈ ಭಾಗದಲ್ಲಿ ಇನ್ನೊಂದು ವಿದ್ಯಮಾನವು ಗಮನಾರ್ಹವಾದದ್ದು. ಟ್ರಾನ್ಸಿಟ್ ಪ್ರಯಾಣಸ್ಥರು ಅನಾವ ಹೊಳೆಗಳನ್ನು ದಾಟುವದು ಟ್ರಾನ್ಸಿಟ್ ಯಜಮಾನರ ವೆಚ್ಚದಿಂದಾಗಿರುತ್ತದೆ. ಬಂಡಿಗಳಲ್ಲಿ ಹ್ಯಾಗೆ ನರಪ್ರಾಣಗಳನ್ನು ಮಾವಿನ ಕಾಯಿಗಳಂತೆ ತುಂಬಿ ಬಿಡಲಾಗುತ್ತದೋ ಹಾಗೆಯೇ ದೋಣಿಗಳಲ್ಲಿ ಸುರಿದುಬಿಡುವ ವಾಡಿಕೆಯು ಇದುವರೆಗೂ ನಡೆದುಬರುತ್ತದೆ. ಇದರಿಂದ ಶೀಘ್ರ ಜಲಸಮಾಧಿಯೋಗವು ಸಿದ್ಧಿಯಾಗುವ ದುರಿತವು ಪ್ರಯಾಣಸ್ಥರ ಹಣೆತುಲೆಯಲ್ಲಿ ಕುಣಿದಾಡುವುದು. ಕಾಲವಾಜ್ಞೆಯ ಅಭಾವದ ದೆಸೆಯಿಂದಲೆ ಪ್ರಾಣರಕ್ಷಣೆ ಸಿದ್ಧಿಸುತ್ತದೆನ್ನಬೇಕು. ಒಮ್ಮೆ ದೋಣಿಯಲ್ಲಿ ತುಂಬಿದ ಸಜೀವ ಪ್ರಾಣಿಗಳ ಮೊತ್ತದಲ್ಲಿ ನಾನೊಬ್ಬನಾಗಿ ರಂಜಿಸುವ ಸುಖವು ಒದಗಿತು. ಆಗ್ಗೆ ಮಳೆಗಾಲವಾಗಿತ್ತು. ದೋಣಿ ಈಗ ಮುಳುಗುತ್ತದೋ ಮತ್ತೆ ಮುಳುಗುತ್ತದೋ ಎಂಬ ಸಂದೇಹದ ತಲೆಯಲ್ಲಿ ತೂಗಿಕೊಳ್ಳುತ್ತಾ ಕರೆಗೆ ಬಂದಾಗ ದೋಣಿಗಾರ ಫಕ್ಕನೆ ಕೆಳಗೆ ಹಾರಿ ಮಾರ್ಗವನ್ನು ಹತ್ತಿಬಿಟ್ಟನು. ದೋಣಿಯು ತಾಂಡವನಟನೆ ಆರಂಭಿಸಿತು. ಬಲಿಷ್ಠರು ಬೇಗ ಬೇಗ ಹೆದ್ದಾರಿ ಬದಿಯ ಕಟ್ಟಿಹುಣಿಯ ಕಲ್ಲುಗಳ ಎಡೆಯಲ್ಲಿ ಕಾಲು ಸಿಕ್ಕಿಸಿ ಮೇಲೇರಿದರು. ಸ್ವಲ್ಪ ಅಬಲಿಯಾದ ನಾನು ಸಂಗಡಿಗರ ಮೇಲ್ಪಂಕ್ತಿ ಅನುಸರಿಸಿ ಒಂದು ಕಾಲು ಮೇಲೇರಿಸುವಷ್ಟರಲ್ಲಿ ದೋಣಿಯು ಸ್ವಲ್ಪ ಹಿಂದಕ್ಕೆ ಹೋಯಿತು. ಉದ್ದಂಡ ನಮಸ್ಕಾರ ಮಾರ್ಗದ ಮೇಲ್ಬದಿಯಿಂದ ಆಪೋನಾರಾಯಣನಿಗೆ ಯಥೋಚಿತವಾಗಿ ಮಾಡಿದೆ. ಮಾರ್ಗದ ಬದಿಯಲ್ಲಿದ್ದ ನುಣ್ಣಗಾದ ಶಿಲುಕಲ್ಲಿನ ಮೇಲೆ ಒಂದು ಮೊಣಕಾಲಗಂಟು ರವಷ್ಟು ಜಜ್ಜಿದ ಹಾಗಾಗಿ ರಕ್ತಪ್ರವಹಿಸಿತು. ಅದೃಷ್ಟವಶಾತ್ ಕಾಲು ಮುರಿದುಹೋಗಲಿಲ್ಲ. ಆಪೋನಾರಾಯಣನ ಕೃಪೆ ದೊರಕಿದಂತಾಯಿತು. ಸಂಗಡಿಗರು ಮೊಸಳೆಯ ಕಣ್ಣೀರು ಸುರಿಸಿ ಆಹಾ! ಏನಾಯಿತೊ ಅಂದರು. ನಾಯವಿಲ್ಲ ಕಾಲು ಮುರಿಯಲೂ ಇಲ್ಲ. ಮನೆಗೆ ತಲ್ಪಿದಮೇಲೆ ಔಷಧೋಪಚಾರ ತೊಡಗುವುದು [illegible] ತೃಪ್ತನಾದೆನು. [illegible] ಮನೆಗೆ ತಲ್ಪಿದೆ. ಇದು [illegible] ಸ್ಯೆದು ಏನನ ಔಷಧ ಪ್ರಯೋಗ ಮಾಡಿ ನೋಯಲಾರಂಭಿಸಿ [illegible] ಗಡುವಿಗೆ ಕೊಂಚಕೊಂಚ ನೋವು ಹುಟ್ಟಿ ಹಿಂದಿನ ಪ್ರಯಾಣದ ನೆನಪು ಹುಟ್ಟಿಸುತ್ತದೆ. ಇದು ನನ್ನ ಟ್ರಾನ್ಸಿಟ್ ಪರ್ಯಟನದ ವರ್ಧಂತಿಯೆನ್ನಬಹುದು.

ಮಾನ್ಯ ಜಿಲ್ಲೆಯಧಿಕಾರಿಗಳು ಟ್ರಾನ್ಸಿಟ್ ಯಜಮಾನರ ಹೊಣೆಗಾರಿಕೆಯ ಕುರಿತು ಇನ್ನುಮುಂದಾದರೂ ತಕ್ಕ ವಿಚಾರತಕ್ಕೊಳ್ಳುವ ಪುಣ್ಯಕ್ಕೆ ಪಾತ್ರರಾಗಲೆಂದು ವಿನಯಪೂರ್ವಕವಾಗಿ ಈ ಸುಖದುಃಖ ಮಿಶ್ರವಾದ ಪ್ರಬಂಧವನ್ನು ಪರಿಣಾಮಾವಸ್ಥೆಗೆ ತರಲು ಪತ್ರಸಂಪಾದಕರನುಮತಿಯನ್ನು ಈಗ ಯೋಚಿಸುತ್ತೇನೆ.

ಸಚಿತ್ರಕಲಾತರಂಗ.

ಮೊದಲನೇ ಭಾಗ.

ಈ ಪುಸ್ತಕವು ಮ| ರಾ| ಬಿ. ಆರ್. ಗೋವಿಂದರಾಜಯ್ಯರವ(ರು) ರುವುದು. ಗ್ರಂಥಕರ್ತರು ಪುಸ್ತಕದ ಪೀಠಿಕೆಯಲ್ಲಿ ಹೇಳಿದಂತೆ ಇಂಥಾ ಕನ್ನಡಭಾಷೆಯಲ್ಲಿ ಈ ವರಿವಿಗೆ ಇದ್ದಿಲ್ಲ. ಈ ಪುಸ್ತಕವನ್ನು ಓದಿ ಕಲಿತ ಯಾವ ಕೈಗಾರಿಕೆಗಳನ್ನು ಕಲಿತುಕೊಳ್ಳಬಹುದೆಂಬದನ್ನು ತಿಳಿಯಬಹುದ ಕರ್ತರು ೧೬೦ ಪೇಜುಗಳುಳ್ಳ ಈ ಪುಸ್ತಕದಲ್ಲಿ ಸಾಧ್ಯವಾದ ಹೆಚ್ಚು ಕಡಿಮೆ [illegible] ಶಾಸ್ತ್ರ ವಿಷಯಗಳನ್ನು ಎಂಟು ಅಧ್ಯಾಯಗಳಲ್ಲಿ ವಿವರಿಸಿರುವರು. ಗೃಹಕೃತ್ಯಗಳಿಗೆ ಬೇಕಾದ ಹಲವು ವಸ್ತುಗಳನ್ನು ತಯ್ಯಾರಿಸುವ ವಿಧಾನಗಳನ್ನು ಈ ಪುಸ್ತಕವು ಒಳ ಕೊಂಡಿರುವುದರಿಂದ ಈ ವಿಧಾನಗಳನ್ನು ವಾಚಕರು ಪರೀಕ್ಷಿಸಿ ನೋಡಬಹುದು.

ಪ್ರತಿ ಒಂದಕ್ಕೆ ರೂ. ೧—೪—೦ರಂತೆ ಈ ಪುಸ್ತಕವು ಮಂಗಳೂರಿನ ಭೂಲಿನ್ ಮಾರ್ಟಿನಲ್ಲಿಯೂ, ಮ್ಯಾನೇಜರ್, ಎಸ್. ಜಿ. ಟಿ. ಪ್ರೆಸ್ ೧೭ಲ ಅರಳೆಪೇಟೆ ಬೆಂಗಳೂರು ಸಿಟಿ. ಇವರಲ್ಲಿಯೂ ಕ್ರಯಕ್ಕೆ ದೊರಕುವುದು.

ಪತ್ರವ್ಯವಹಾರ.

(ಪತ್ರಿಕೇದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಗೌಡಸಾರಸ್ವತ ಪರಿಷದವೂ ದಕ್ಷಿಣಕನ್ನಡ ಜಿಲ್ಲೆಯೂ.

ದಕ್ಷಿಣಕನ್ನಡ ಮತ್ತು ನಗರ, ತೀರ್ಥಹಳ್ಳಿಯವರು ಕೂಡಿ ಮಂಗಳೂರಲ್ಲಿ ಎರಡಾವರ್ತಿ ಅವರ ಸ್ವಜಾತಿಯವರ ಪರಿಷದವನ್ನು ಜರಗಿಸಿದರು. ಈ ಪರಿಷದಕ್ಕೆ ಆಮಂತ್ರಣವು ಬೆಳಗಾಂ ಊರಿಗೆ ದೊರಕಿ ಮೂರನೇ ಪರಿಷದವು ಸಂಯುಕ್ತ ಗೌಡಸಾರಸ್ವತ ಪರಿಷದವೆಂಬ ನಾಮವನ್ನು ತಾಳಿ ಬೆಳಗಾಂನಲ್ಲಿ ಮೆರೆಯಿತು. ಈ ಮೂರು ಪರಿಷದಗಳ ವೃತ್ತಾಂತವೆಲ್ಲವು ತಮ್ಮ ಪತ್ರದಲ್ಲಿ ಪ್ರಕಟಿಸಲ್ಪಟ್ಟಿರುವುದರಿಂದ ವಾಚಕರೆಲ್ಲರಿಗೂ ಈ ಮೂರು ಪರಿಷದಗಳ ವಿಷಯವೆಲ್ಲವು ತಿಳಿದಿರಬೇಕು. ಗೌಡಸಾರಸ್ವತರಿಗೆಂತೂ ಹಿಂದುಸ್ಥಾನದ ಅನೇಕ ಕಡೆಗಳಲ್ಲಿರುವ ಸ್ವಜಾತಿ ಬಾಂಧವರನ್ನು ನೋಡಿ ತಿಳಕೊಳ್ಳುವರೆ ಸಾಧ್ಯವಾಯಿತು. ವಿದ್ಯಾಪ್ರಚಾರವು ತಮ್ಮ ಸ್ವಜಾತಿಯರಲ್ಲಿ ಯಾವ ಕಡೆಗಳಲ್ಲಿ ಹೆಚ್ಚಾಗಿರುವುದು, ಯಾವ ಕಡೆ ಕಡಿಮೆ ಇದ್ದು ಸಾರಸ್ವತರು ದೀನಸ್ಥಿತಿಗೆ ಬಂದಿರುವರು, ಜಾತಿಯಲ್ಲಿ ಹೆಚ್ಚಾಗಿ ಯಾವ ದುರಾಚಾರಗಳಿರುವವು ಮೊದಲಾದ ಗೌಡಸಾರಸ್ವತರ ಹಾನಿವೃದ್ಧಿಗಳೆಲ್ಲಾ ಸ್ವಜಾತಿಯರೆಲ್ಲರಿಗೂ ತಿಳಿದಂತಾಯಿತು. ಈ ವಿಚಾರವು ಸ್ವಜಾತಿಯರಿಗೆಲ್ಲಾ ಪರಿಷದಗಳಲ್ಲಿ ತಿಳಿದುಬಂದಿರುವುದರಿಂದ ಇಂದಲ್ಲ, ನಾಳೆ, ಗೌಡಸಾರಸ್ವತ ಸಮಾಜದ ಅಭಿವೃದ್ಧಿಯ ಪ್ರಯತ್ನಗಳನ್ನು ಮಾಡಲು ಪ್ರಾರಂಭಿಸುವರೆಂಬದಕ್ಕೆ ಸಂದೇಹವಿಲ್ಲ. ಇಷ್ಟೆಲ್ಲಾ ಪ್ರಯೋಜನವು ಗೌಡಸಾರಸ್ವತ ಜಾತಿಯವರಿಗಾಯಿತು. ಗೌಡಸಾರಸ್ವತ ಪರಿಷದಕ್ಕೆ ಜನ್ಮಭೂಮಿಯಾದ ದಕ್ಷಿಣಕನ್ನಡ ಜಿಲ್ಲೆಗೆ ಇದರಿಂದ ಏನು ಪ್ರಯೋಜನ?

ಸಾಮಾನ್ಯವಾಗಿ ಒಂದು ಪರಿಸರದಲ್ಲಿಯ ಒಂದು ಜಾತಿಯವರು ಅಭಿವೃದ್ಧಿಯ ಪ್ರಯತ್ನಗಳನ್ನು ಮಾಡುತ್ತಿರುವಾಗ ಇತರ ಜಾತಿಯವರು ಈ ಪ್ರಯತ್ನಗಳನ್ನು ನೋಡಿ ತಮ್ಮ ಸ್ವಜಾತಿಗಳಲ್ಲಿ ಸಹ ಇಂಥಾ ಪ್ರಯತ್ನಗಳನ್ನು ಮಾಡಲು ಯತ್ನಿಸುವರು. ಇದೊಂದು ಸಾಮಾನ್ಯವಾದ ಪ್ರಯೋಜನ. ಇದಕ್ಕಿಂತ ಅಧಿಕತರವಾದ ಪ್ರಯೋಜನಗಳು ಯಾವವು? ಪತ್ರಿಕಾಕರ್ತರೇ ಈ ಪರಿಷದಗಳಿಂದ ನಮ್ಮ ಜಿಲ್ಲೆಯ ಸುಧಾರಣೆಯ ಅತ್ತಕಡೆ ಇನ್ನು ಹೆಚ್ಚು ವರುಷಗಳ ವಿಳಂಬವಿಲ್ಲದೆ ಸಾರುವದೆನ್ನಬೇಕು. ನಮ್ಮ ಜಿಲ್ಲೆಯಲ್ಲಿ ವಿದ್ಯಾಲಾಭಗಳನ್ನು ಪಡದು ಖ್ಯಾತಿಹೊಂದಿದ ಜಾತಿಗಳಲ್ಲಿ ಗೌಡಸಾರಸ್ವತರದೊಂದು, ಸಾರಸ್ವತರದು ಇನ್ನೊಂದು. ಇಲ್ಲಿಯ ಗೌಡಸಾರಸ್ವತರಲ್ಲಿ ಹತ್ತಿಪ್ಪತ್ತು ವರುಷಗಳ ಮೊದಲು ವಿದ್ಯೆಯು ಈಗಿನಷ್ಟು ಅವರಲ್ಲಿ ಆಗ ಪ್ರಚಾರವಾಗಿರಲಿಲ್ಲ. ಇತ್ತಲಾಗೆಯೇ ವಿದ್ಯಾಸಾಧನೆಗಳನ್ನು ಮಾಡಿ ಜಿಲ್ಲೆಯಲ್ಲಿ ಒಂದು ಪ್ರಮುಖ ಜಾತಿಯವರೆಂದು ಪ್ರಖ್ಯಾತಿಪಟ್ಟಿರುವರು. ಆದರೆ ಇಷ್ಟೆಲ್ಲಾ ವಿದ್ಯಾಪ್ರಾಪ್ತಿಯು ಇವರಿಗಿದ್ದರೂ ದೇಶಸಂಚಾರ ಮೊದಲಾದವುಗಳಿಂದ ಉಂಟಾಗುವ ಉದಾರಮತಿಯು ಇವರಲ್ಲಿ [illegible] ಜನರಿಗೆ ಮಾತ್ರ ಪ್ರಾಪ್ತವಾಗಿದೆ. ಸಾರಸ್ವತರಾದರೋ ತಾವು [illegible] ಜನರು ಈ ಜಿಲ್ಲೆಯಲ್ಲಿರುವ ಕಾರಣ ತಮ್ಮ ಸಮಾಜ [illegible] ಯೇ [illegible]

ನಡೆಸಲಿಕ್ಕೇನೇ ಅವಕಾಶ ದೊರಕಲಿಲ್ಲ. ವಿದ್ಯೆ ಮತ್ತು ಇತರ ಅಭಿವೃದ್ಧಿಯ ಪ್ರಯತ್ನಗಳಲ್ಲಿ ಇಲ್ಲಿಯ ಗೌಡಸಾರಸ್ವತ ಸಮುದಾಯಕ್ಕೆ ಮಾರ್ಗದರ್ಶಿಗಳಾಗಿರುವ ಸಾರಸ್ವತರನ್ನು ಗೌಡಸಾರಸ್ವತರು ಪ್ರತಿಯೊಂದು ವಿಷಯದಲ್ಲಿಯೂ ಅನುಸರಿಸಿದ್ದರಿಂದ ಈ ಮೊದಲೇ ಸಣ್ಣ ಮನಸ್ಸುಗಳ ಗೌಡಸಾರಸ್ವತರಿಗೆ ಮನಸ್ಸು ಇನ್ನಷ್ಟು ಸಂಕೋಚವಾಯಿತು. ಈ ಕಾರಣದಿಂದ ಈ ಎರಡು ಜಾತಿಗಳವರೂ ಒಂದೇ ಜಾತಿಯ ಶಾಖೆಗಳಾಗಿದ್ದರೂ ತಮ್ಮ ವಿದ್ಯಾಬಲದಿಂದ ಮಾಡಬಹುದಾದ ಅಭಿವೃದ್ಧಿಯ ಪ್ರಯತ್ನಗಳಿಂದ ತಮ್ಮ ಜಾತಿಸಮುದಾಯಗಳ ಹೊರತು ಇತರರಿಗೆ ಪ್ರಯೋಜನವು ದೊರಕುವಂತೆ ಮಾಡ ಲಶಕ್ಯರಾದರು. ವಿದ್ಯಾವಿಷಯಗಳಲ್ಲಿ ಮುಂದುಸಾರಿದ ಈ ಎರಡು ಜಾತಿಗಳ ವರ್ತನೆಯನ್ನು ನಮ್ಮ ಜಿಲ್ಲೆಯಲ್ಲಿ ಇತರರೆಲ್ಲರೂ ನೋಡಿಕೊಂಡು ತಾವೂ ಸಹಾ ಇವರಂತೆಯೇ ಸ್ವಭಾವಿಕವಾಗಿ ನಡಕೊಂಡರು. ಇದರಿಂದ ಒಟ್ಟಿನ ಫಲಿತಾರ್ಥವೇನು? ಪರಸ್ಪರ ವಿಶ್ವಾಸವು ಇಲ್ಲಿಯವರ ಹೊಟ್ಟೆಕಿಚ್ಚಿನ ತಾಪದ ಧಾವತಿಯನ್ನು ತಾಳಲಾರದೆ ಹಿಮಾಚಲಪರ್ವತಗಳಲ್ಲಿ ಈಗಲೂ ತಪಸ್ಸನ್ನು ಮಾಡಿಕೊಂಡಿರುವ ಋಷಿಶ್ರೇಷ್ಠರ ಸಮಾಧಿಯಲ್ಲಿ ಸೇರಿಕೊಂಡಿತು. ಪರಸ್ಪರ ಸಹಕಾರವಾದರೋ ತನ್ನ ಪ್ರಿಯ ಸ್ನೇಹಿತನಾದ ವಿಶ್ವಾಸನ ವಿಯೋಗ ತಾಪವನ್ನು ಸಹಿಸಲಾರದೆ ಊರ್ಧ್ವಮುಖವಾಗಿ ಬೊಬ್ಬಿಟ್ಟು ನಮ್ಮ ಜಿಲ್ಲೆಯನ್ನು ಬಿಟ್ಟು ತನ್ನ ಸ್ನೇಹಿತನು ಎಲ್ಲಿರುವನೆಂಬದನ್ನು ಹುಡುಕಲು ಹೋಗಿರುವುದು. ಇದರಿಂದ ನಮ್ಮ ಜಿಲ್ಲೆಯಲ್ಲಿ ಸ್ಥಾಪಿಸಲ್ಪಡುವ 'ವಾಚನಮಂದಿರಗಳಾಗಲಿ, ವಿದ್ಯಾನಿಲಯಗಳಾಗಲಿ, ದ್ರವ್ಯಸಹಾಯನಿಧಿಗಳಾಗಲಿ, ಸಮಾಜಉದ್ಧಾರಕ ಸಂಘಗಳಾಗಲಿ, ಆಯಾ ಜಾತಿಯವರ ಗೌರವ ನಾಮಾಂಕಿತಗಳನ್ನು ತಾಳಿ ಆಯಾ ಜಾತಿಗಳಲ್ಲಿ ವಿಧಿವಶಾತ್ ಜನನಕ್ಕೆ ಒದಗಿಬಹುದಾದ ಇಂತಹ ವಿದ್ಯಾನಿಲಯ, ವಾಚನಮಂದಿರ, ಜಾತಿಸಂಘ ಮೊದಲಾದವುಗಳನ್ನು ಸ್ಥಾಪಿಸಿದ ಸಮರ್ಥ ಮಹನೀಯರ ಜೀವಮಾನ ಕಾಲಗಳಲ್ಲಿ ಜೀವಕಳೆ ಇರುವುದೆಂದು ತೋರಿಸಿಕೊಂಡು ಇವರ ನಂತರದಲ್ಲಿ ಸಂಸ್ಥೆಗಳು ತಮ್ಮ ಉದ್ದಿಶ್ಯಗಳನ್ನೆಲ್ಲಾ ಮರೆತುಕೊಂಡು ತಮ್ಮ ಹೆಸರುಗಳಲ್ಲಿ ಮಾತ್ರ ಜೀವಿಸಿಕೊಂಡಿರುವುದೂ ಉಂಟು. ಅಥವಾ ಪೂರ್ಣವಾಗಿ ನಾಶವಾಗಿ ಹೋಗುವುದೂ ಉಂಟು. ಪತ್ರಿಕಾಕರ್ತರೇ, ಈ ನನ್ನ ಮಾತಿಗೆ ದೃಷ್ಟಾಂತಗಳು ಬೇಕೇ? ಆದರೆ ಇಂತಹ ಜಾತಿಯ ಸಂಸ್ಥೆಗಳಿಗೆ ಹೆಸರುಗಳನ್ನಿಡುವಾಗ ಈ ವಿದ್ಯಾವಂತರು ಇಂಥ ಹೆಸರುಗಳಲ್ಲಿ ಮಾತ್ರ ತಮ್ಮ ವಿದ್ಯೆಯಿಂದ ಪ್ರಾಪ್ತವಾದ ಉದಾರಶೀಲತೆಯನ್ನು ತೋರಿಸಿರುವರು. ಸಂಸ್ಥೆಗಳು ಹೆಸರಲ್ಲಿ ಮಾತ್ರ ಜಿಲ್ಲೆಗೆ ಸಮ್ಮಂಧವಾದವುಗಳೆಂತ ಸೂಚಿಸಲಿಕ್ಕೆ 'ಕೆನರಾ' ಎಂಬ ಶಬ್ದಗಳನ್ನು ಇಂತಹ ಸಂಸ್ಥೆಗಳ ಹೆಸರುಗಳಿಗೆ ಸೇರಿಸಿಬಿಡುವರು.

ಆದರೆ ನಮ್ಮ ಜಿಲ್ಲೆಯಲ್ಲಿ ಇಂತಹ ದಿನಗಳು ಇನ್ನು ಬೇಗನೇ ಸಂದುಹೋಗುವ ಚಿಹ್ನಗಳು ಕಾಣಿಸುತ್ತಿರುವವು. ಕಮ್ಮಾರನು ಕಂಕುಳಲ್ಲಿ ತನ್ನ ಕೊಡಲಿಯನ್ನಿಟ್ಟು ಕೊಂಡು ಕೊಡಲಿಯು ಎಲ್ಲಿರುವುದೆಂತ ಹುಡುಕುವಂತೆ, ಪ್ರತಿ ಜಾತಿಯ ವಿದ್ಯಾವಂತರಲ್ಲಿ ಹಲವರು ಪರಸ್ಪರ ಸಹಕಾರ ಸಂಸ್ಥೆಗಳನ್ನು ನಮ್ಮ ಜಿಲ್ಲೆಯಲ್ಲಿ ಸ್ಥಾಪಿಸಲು ಆಗುವುದಿಲ್ಲವಲ್ಲ? ಇದಕ್ಕೆ ಕಾರಣವೇನು? ಎಂತ ಹುಡುಕುವರು. ಕಾರಣಗಳು ತಮ್ಮ ಸಜೀವ ವ್ಯಕ್ತಿಗಳಾಗಿದ್ದರೂ, ಇವುಗಳನ್ನು ಅಲ್ಲಲ್ಲಿ ಹುಡುಕುವ ದಿನಗಳೂ, ಉಪಹಾರೋಕ್ತಿಗಳೂ ಅದೃಶ್ಯವಾಗುವ ಸಂಭವವು ಬೇಗನೇ ಒದಗುವುದು.

ಯಾಕಂದರೆ ನಮ್ಮಲ್ಲಿ ನೆರದ ಪ್ರಥಮ ಮತ್ತು ದ್ವಿತೀಯ ಗೌಡಸಾರಸ್ವತ ಬ್ರಾಹ್ಮಣ ಸಮಾಜದಲ್ಲಿ ಈ ಒಂದು ಜಾತಿಯಲ್ಲಿಯೇ ಎಷ್ಟು ಒಳ ಜಾತಿಗಳು ಇರುವವೆಂಬದನ್ನು ಪ್ರತ್ಯಕ್ಷ ನೋಡಿ ತಿಳಿಯಲಿಕ್ಕೆ ಅವಕಾಶ ದೊರಕಿತು. ಎರಡನೇ ಪರಿಷದದಲ್ಲಿ ಈ ಎಲ್ಲಾ ಒಳಶಾಖೆಗಳ ಸಂಯೋಗವು ಉಚಿತವಲ್ಲವೇ ಎಂಬ ಪ್ರಶ್ನೆಯನ್ನು ಎತ್ತಲು ಕೆಲವರು ಧೈರ್ಯಗೊಂಡರು. ಮೂರನೇದರಲ್ಲಿ ಇಂಥಾ ಸಂಯೋಗವೇ ಜಾತಿ ಸಮುದಾಯಕ್ಕೂ ದೇಶಕ್ಕೂ ಕ್ಷೇಮಕರವೆಂತ ಎಂದಿತ ಅಭಿಪ್ರಾಯ ಪಟ್ಟು ಎಲ್ಲಾ ಸಾರಸ್ವತ ಬ್ರಾಹ್ಮಣ ಜಾತಿಯ ಒಳಶಾಖೆಗಳನ್ನು ಏಕೀಕರಿಸಿ ಸಂಯುಕ್ತ ಗೌಡಸಾರಸ್ವತ ಪರಿಷದವು ಬೆಳಗಾಂನಲ್ಲಿ ಸಾಧ್ಯವಾಯಿತು. ಇದರಿಂದ ನಮ್ಮ ಜಿಲ್ಲೆಯಲ್ಲಿ ಪ್ರತ್ಯೇಕ ಎರಡು ಜಾತಿಗಳೆಂದು ವರ್ತಿಸುತ್ತಿದ್ದ ವಿದ್ಯಾಧನಲಾಭಗಳಲ್ಲಿ ಶ್ರೇಷ್ಠರಾದ ಸಾರಸ್ವತರಿಗೂ, ಗೌಡಸಾರಸ್ವತರಿಗೂ ತಾವೆಲ್ಲರೂ ಏಕೀಭಾವದಿಂದ ಗೌಡಸಾರಸ್ವತರಾಗಿ ವರ್ತಿಸಬೇಕೆಂಬುವ ಭಾವನೆಗೆ ಎಡೆದೊರಕಿತು. ಈ ಎರಡು ಜಾತಿಗಳಲ್ಲಿಯೂ ಸಮ್ಮೇಳನವನ್ನು ಅಪೇಕ್ಷಿಸುವವರು ವಿದ್ಯಾವಂತರಲ್ಲಿ ಹಲವರಿರುವುದರಿಂದ ಭಾವನೆಯು ಕ್ರಮೇಣ ಕಾರ್ಯದಲ್ಲಿ ಪರಿಣಮಿಸುವುದು. ಈ ಐಕ್ಯದಿಂದ ಉಭಯ ಸಾರಸ್ವತರಲ್ಲಿಯೂ, ತಮ್ಮ ಒಕ್ಕಟ್ಟಾದ ಸಮುದಾಯದ ಕ್ಷೇಮವೃದ್ಧಿಗಳನ್ನು ಸಾಧಿಸಿ, ಉಳಿದಿರುವ ಶಕ್ತಿಯನ್ನು ಈ ವರೆಗೆ ಪರಸ್ಪರ ದ್ವೇಷ ಮೊದಲಾದವುಗಳಲ್ಲಿ ವಿನಿಯೋಗಿಸಿದಂತೆ ಇನ್ನು ವಿನಿಯೋಗಿಸುವ ಸಂಭವವು ಕಡಿಮೆಯಾಗುವುದರಿಂದ ಇಂಥಾ ಚೈತನ್ಯದಿಂದ ಜಿಲ್ಲೆಯ ಅಭಿವೃದ್ಧಿಯನ್ನು ಇವರಿಗೆ ಸಾಧಿಸಲು ಸಾಧ್ಯವಾಗುವುದು. ಇವರ ಐಕ್ಯದ ವರ್ತನೆಯು ಇತರ ಜಾತಿಯವರಲ್ಲಿಯೂ ಐಕ್ಯವನ್ನುಂಟುಮಾಡಿ ಜಿಲ್ಲೆಯ ಜನರಲ್ಲಿ ಪರಸ್ಪರ ವಿಶ್ವಾಸವು [illegible] ದೊರಕಿ ಸಹಕಾರ ಸಾಧನೆಗಳು ತಮ್ಮಷ್ಟಕ್ಕೇನೇ ತೋರಿಸಿಕೊಂಡು ಜಿಲ್ಲೆಯ [illegible] ವೃದ್ಧಿಯು ಸಾಧ್ಯವಾಗುವುದು. ಇಂತಿ ತಮ್ಮ ವಿಧೇಯ.

[illegible]

ಗತಿಸಿದ ಎಡ್ವರ್ಡ್ ಚಕ್ರವರ್ತಿಗಳವರ ಮೆಮೋರಿಯಲ್ ಫಂಡು ಮತ್ತು ಮಂಗಳೂರಿನಲ್ಲಿ ಈ ಬಗ್ಗೆ ಕೂಡುವ ಸಭೆಯು.

ಅಯ್ಯಾ,

ನಮ್ಮ ಸಂಸ್ಥಾನದ ಪರವಾಗಿ ಗತಿಸಿದ ಎಡ್ವರ್ಡ್ ಚಕ್ರವರ್ತಿಗಳವರ ಸ್ಮರಣಾರ್ಥ ಮದ್ರಾಸಿನಲ್ಲಿ ತಕ್ಕ ಏರ್ಪಾಡನ್ನು ಮಾಡುವರೆ ದೊಡ್ಡ ದೊಡ್ಡ ಸರಕಾರಿ ಆಫೀಸರರೂ ಪ್ರಜಾ ಮುಂದಾಳುಗಳೂ ಉಪಕ್ರಮಿಸಿ ಎಡ್ವರ್ಡ್ ಮೆಮೋರಿಯಲ್ ಫಂಡೆಂಬ ದ್ರವ್ಯ ಸಹಾಯ ನಿಧಿಯನ್ನು ಈ ಬಗ್ಗೆ ಬೇಕಾದ ಹಣವನ್ನು ಸಂಗ್ರಹಿಸಿಕೊಳ್ಳುವರೆ ಸ್ಥಾಪಿಸಿರುವರು. ಈ ಫಂಡಿಗೆ ನಮ್ಮ ಜಿಲ್ಲೆಯವರು ಸಹ ತಕ್ಕ ದ್ರವ್ಯಸಹಾಯವನ್ನು ಮಾಡಬೇಕಾದುದರಿಂದ ಈ ಬಗ್ಗೆ ಇದೇ ಬರುವ ಜುಲ್ಯೆ ತಿಂಗಳ ತಾ 3ರಲ್ಲು ಇಲ್ಲಿಯ ಗವರ್ನಮೆಂಟು ಕೋಲೇಜಿನ ಸಭಾಮಂದಿರದಲ್ಲಿ ಪ್ರಮುಖ ಸರಕಾರಿ ಉದ್ಯೋಗಸ್ಥರನ್ನೂ, ಪ್ರಮುಖ ಪ್ರಜಾ ಮುಂದಾಳುಗಳನ್ನೂ ಸಭೆಕೂಡಬೇಕೆಂದು ಇಲ್ಲಿಯ ಜಿಲ್ಲಾ ಕಲೆಕ್ಟರ ದೊರೆಗಳವರೂ, ಡಿಸ್ಟ್ರಿಕ್ಟ್ ಜಡ್ಜರವರೂ ಮುನಿಸಿಪಾಲ ಚೆಯರ್‌ಮೇನರವರೂ ಆಮಂತ್ರಿಸಿರುವರು.

ನಮ್ಮ ಸಂಸ್ಥಾನದ ಮುಖ್ಯ ಪಟ್ಟಣವಾದ ಮದ್ರಾಸಿನಲ್ಲಿ ಇಂಥಾ ಏರ್ಪಾಡನ್ನು ಮಾಡುವುದೂ, ನಮ್ಮ ಜಿಲ್ಲೆಯವರು ಆ ಬಗ್ಗೆ ಬೇಕಾದ ಸಹಾಯ ಮಾಡುವುದೂ ವಿಹಿತವಾಗಿದೆ. ಆದರೆ ನಾಡದು 3ನೇ ತಾರೀಕಿನಲ್ಲಿ ಕೂಡುವ ಸಭೆಗಳಂಥವುಗಳ ಬಗ್ಗೆ ಸಭೆಕೂಡಲಿಕ್ಕೆ ಪ್ರತ್ಯೇಕವಾದ ಒಂದು ಸಭಾಮಂದಿರವು ನಮ್ಮ ಸಂಸ್ಥಾನದ ಅನೇಕ ಪಟ್ಟಣಗಳಲ್ಲಿದ್ದರೂ ಮಂಗಳೂರಲ್ಲಿ ಮಾತ್ರ ಇಂಥಾದೊಂದು ಸಭಾಮಂದಿರವು ಇರುವದಿಲ್ಲ. ಪ್ರಜಾ ಮುಂದಾಳುಗಳಲ್ಲಿ ಇಂಥಾದೊಂದನ್ನು ಸ್ಥಾಪಿಸಬೇಕೆನ್ನುವ ಕುತೂಹಲವು ಸಹ ಇರುವದೆಂತ ತೋರಿ ಬರುವದಿಲ್ಲ. ಇಂಥಾದೊಂದು ಕಟ್ಟಡವು ಮಂಗಳೂರು ಪಟ್ಟಣಕ್ಕೆ ಅಗತ್ಯವೆಂಬ ಪ್ರಜಾ ಮುಂದಾಳುಗಳಲ್ಲದ ಪ್ರಜಾ ಸಾಮಾನ್ಯರ ಸೂಚನೆಯನ್ನು ಕೇಳುವವರೂ ಇಲ್ಲ. ಇಂಥಾ ಸಭೆಗೆ ಧೈರ್ಯವಿದ್ದ ಪ್ರಜಾ ಸಾಮಾನ್ಯನು ಆ ಸೂಚನೆಯನ್ನು ಹೋಗಿ ಕೊಡಬಹುದೆಂದರೆ, ಆತನಿಗೆ ಆ ಸಭೆಗೆ ಆಮಂತ್ರಣ ಇಲ್ಲ. ಆದ್ದರಿಂದ ನನ್ನಂಥಾ ಸಾಮಾನ್ಯರು ಮಹಾಶಯರುಗಳಾದ ಸಭಾಸದರುಗಳಿಗೆ ಏನಾದರೂ ಸೂಚನೆಯನ್ನು ಕೊಡಬೇಕಾದರೆ ತಮ್ಮ ಪತ್ರದ ಮುಖಾಂತರವೇ ಕೊಡಬೇಕಾಗಿರುವದು. ತಮ್ಮ ಪತ್ರವಾದರೋ ಕನ್ನಡ ಭಾಷೆಯ ಪತ್ರ. ಸಾಮಾನ್ಯರು ಓದುವಂಥಾದ್ದು. ಪ್ರಜಾ ಮುಂದಾಳುಗಳು ಇದನ್ನು ಮುಟ್ಟಿ ಕೈಯಲ್ಲಿ ಹಿಡಿದದ್ದನ್ನು ಸಾಮಾನ್ಯರು ನೋಡಿ ಬಿಟ್ಟರೆ ತಮ್ಮಂತೆಯೇ ಮುಂದಾಳುಗಳು ಸಹ ಸಾಮಾನ್ಯರು ಎಂಬ ಅಭಿಪ್ರಾಯವು ಜನರಲ್ಲಿ ಉಂಟಾಗಿ ಸರ್ವ ನಾಶವಾಗುವುದೆಂಬ ಅಂಜಿಕೆಯು ಪ್ರಜಾ ಮುಂದಾಳುಗಳಲ್ಲಿ ಕೆಲವರಲ್ಲಿರುವುದು. ಆದ್ದರಿಂದ ಈ ನನ್ನ ಸೂಚನೆಯು ತಮ್ಮ ಪತ್ರದಲ್ಲಿ ಪ್ರಕಟಿಸಿದ್ದರಿಂದ ಮುಂದಾಳುಗಳಿಗೆ ಕೇಳಿಸುವುದೋ ಇಲ್ಲವೋ? ಎಂಬ ಸಂದೇಹವು ನನಗೆ ಹೆಚ್ಚಾಗಿರುವದು. ಈ ಸಂದೇಹಕ್ಕೆ ಆಸ್ಪದ ಕೊಡದೆ ಸಾಮಾನ್ಯನಾದರೂ ಹ್ಯಾಗಾದರೂ ಸಭೆಗೆ ಆಮಂತ್ರಣವನ್ನು ಒದಮಾಡಿ ಕೊಳ್ಳುವಾ ಎಂದರೆ ದೊಡ್ಡ ಸರಕಾರಿ ಆಫೀಸರರುಗಳ, ಅಥವಾ ಪಟ್ಟಣಶಾತರ, ಅಥವಾ ದೊಡ್ಡ ವಕೀಲರ ಸಮ್ಮಂಧಿಕನೂ ನಾನಲ್ಲ. ಸಭೆಗೆ ಆಮಂತ್ರಣವನ್ನು ಪಡೆದಿರುವ ಒಬ್ಬಿಬ್ಬ ವಕೀಲರಿಗೆ ಕೆಲವು ಕ್ರಿಮಿನಲ್ ಮೊಕದಮೆಗಳಲ್ಲಿಯೂ ಸಿವಿಲ್ ಮೊಕದಮೆಗಳಲ್ಲಿಯೂ ತಕ್ಕಷ್ಟು ರುಸುಂ ಕೊಟ್ಟು ಅವರ ಅಲ್ಪ ಸ್ವಲ್ಪ ಪರಿಚಿತಿಯನ್ನು ಮಾಡಿಕೊಂಡಿರುವೆನಾದರೂ ರುಸುಂ ಇಲ್ಲದೆ ಈ ನಮ್ಮ ಸಾಮಾನ್ಯರ ಸೂಚನೆಯನ್ನು ನಾಡದಿನಸಭೆಯಲ್ಲಿ ವ್ಯಹರಿಸಬಹುದೋ ಎಂದು ಕೇಳುವಷ್ಟು ಸಲಿಗೆಯು ನನ್ನಂಥವರಿಗೆ ಅವರಲ್ಲಿಲ್ಲ.

ಹ್ಯಾಗೂ ಇತ್ತಲಾಗೆ ಸರಕಾರದವರು ಏರ್ಪಡಿಸಿದ ಕಾನೂನು ಪ್ರಕಾರ ಪ್ರಕಟವಾಗುವ ಪತ್ರಗಳೆಲ್ಲಾ ಸರಕಾರದವರಿಗೆ ಕಳುಹಿಸಿಕೊಡುವ ನಿಯಮವಿರುವದೆಂದು ಕೇಳಿರುವೆನು. ಈ ಜಿಲ್ಲೆಯಲ್ಲಿ ಹಾಗೆ ಪತ್ರಗಳನ್ನು ಜಿಲ್ಲಾ ಕಲೆಕ್ಟರರಿಗೆ ಕಳುಹಿಸಿಕೊಡಬೇಕೆಂದೂ ತಿಳಿದಿರುವೆನು. ಕನ್ನಡ ಪತ್ರವಾದರೂ ಕಲೆಕ್ಟರ ದೊರೆಗಳವರ ಕೈಸೇರುವುದು. ಆದ್ದರಿಂದ ಈ ಸಭೆಯನ್ನು ಆಮಂತ್ರಿಸಿದ ಜಿಲ್ಲಾ ಕಲೆಕ್ಟರ ದೊರೆಗಳವರು ಈ ನಮ್ಮ ಸೂಚನೆಗೆ ತಕ್ಕ ಗಮನವನ್ನು ಕೊಟ್ಟು ನಡಿಸ್ಯಾರೆಂಬ ಭಾವನೆಯಿಂದ ಈ ಬಾತ್ಮಿಯನ್ನು ತಮ್ಮ ಪತ್ರದಲ್ಲಿ ಪ್ರಕಟಿಸುವರೆ ಕಳುಹಿಸಿಕೊಟ್ಟಿರುವೆನು.

ನಮ್ಮ ಸೂಚನೆಯಾದರೋ ಬೇರೇನೂ ಅಲ್ಲ, ಗತಿಸಿದ ಚಕ್ರವರ್ತಿಗಳವರ ಹೆಸರಲ್ಲಿ ಅವರ ನಾಮವು ಸದಾ ಇಲ್ಲೆಲ್ಲವರ ಜ್ಞಾಪಕದಲ್ಲಿರುವಂತೆ ಒಂದು ಸಭಾಸ್ಥಾನವನ್ನು ಮಂಗಳೂರಲ್ಲಿ ಕಟ್ಟಿಸಲಿಕ್ಕೆ ಬೇಕಾದ ದ್ರವ್ಯವನ್ನು ಇಲ್ಲಿ ಕೂಡಿಸೋಣಾಗುವ ಚಂದಾ ಹಣಗಳಿಂದ ತೆಗದಿಟ್ಟು ಬಾಕಿ ಉಳಿಯಬಹುದಾದ ಹಣವನ್ನು ಮದ್ರಾಸಿಗೆ ಕಳುಹಿಸಿ ಕೊಡಬಹುದು. ಪ್ರಜಾಸಾಮಾನ್ಯರ ಅಭಿಪ್ರಾಯಗಳಿಗೆ ಯಾವಾಗಲೂ ತಕ್ಕ ಲಕ್ಷ್ಯಕೊಡುವ ನಮ್ಮ ಜಿಲ್ಲಾ ಕಲೆಕ್ಟರರು ಈ ಸಂದರ್ಭದಲ್ಲಿ ಸಹಾ ಈ ನಮ್ಮ ಸೂಚನೆಯನ್ನು ಪರ್ಯಾಲೋಚಿಸಿ ಖಾನ್ ಬಹದೂರ ಅಜಿಜುದ್ದೀನ್ ಸಾಹೇಬ [illegible] ದೂರರವರು ಈ ಜಿಲ್ಲೆಯಲ್ಲಿ ಕಲೆಕ್ಟರರಾಗಿದ್ದ ಸಮಯದಲ್ಲಿ ಮಂಗಳೂರಲ್ಲಿ ಸಭಾಮಂದಿರವು ಕಟ್ಟಿಸಲಿಕ್ಕೆ ಸಾಧ್ಯವಾಯಿತೆಂಬ ಕೀರ್ತಿಗೆ ಪಾತ್ರ[illegible] ತೋರಿಕೆಯಾಗಿರುವುದು.

ವಿದೇಶ ವೃತ್ತಾಂತ.

—o—

ಜೋರ್ಜ ಚಕ್ರವರ್ತಿಗಳವರು ತಮ್ಮ ಹಿರೆ ಮಗನಾಗಿರುವ ಡ್ಯೂಕ್ ಒಫ್ ಕೊರ್ನವೊಲ್‌ರವರಿಗೆ ಪ್ರಿನ್ಸ್ ಒಫ್ ವೇಲ್ಸ ಮತ್ತು ಅರ್ಲ ಒಫ್ ಚೆಸ್ಟರ್ ಎಂಬ ಬಿರುದುಗಳನ್ನು ಕೊಡುವರಾಗಿ ವರ್ತಮಾನವಿರುವುದು.

~~~~~

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಮಾಜಿ ಪ್ರೆಸಿಡೆಂಟರಾಗಿದ್ದ ಮಿ| ರುಸವೆಲ್ಟರವರು ತಮ್ಮ ಯುರೋಪ ಮತ್ತು ಆಫ್ರಿಕ ಖಂಡಗಳ ದೇಶ ಸಂಚಾರವನ್ನು ತೀರಿಸಿ ಅಮೇರಿಕ ನ್ಯೂಯೊರ್ಕ್ ಪಟ್ಟಣಕ್ಕೆ ಹೋಗಿ ತಲ್ಪಿದರು. ಇವರನ್ನು ಬಹುಮಾನಾರ್ಥವಾಗಿ ಎದುರುಗೊಳ್ಳಲಿಕ್ಕೆ ೨೦೦ ಹೊಗೆ ಹಡಗುಗಳು ಶೃಂಗರಿಸಲ್ಪಟ್ಟು ಸಮುದ್ರಮಾರ್ಗವಾಗಿ ಇವರಿರುವ ಸ್ಟೀಮರನ್ನು ಎದುರುಗೊಳ್ಳಲಿಕ್ಕೆ ಬಂದಿದ್ದವು. ನ್ಯೂಯೋರ್ಕ ಪಟ್ಟಣಕ್ಕೆ ಬಂದಕೂಡಲೇ ದಾಕ್ಷಣವೇ ಇವರನ್ನು ದೊಡ್ಡ ಮೆರವಣಿಗೆಯಲ್ಲಿ ಪಟ್ಟಣಕ್ಕೆ ಕರಕೊಂಡು ಹೋದರು.

~~~~~

ಸಣ್ಣ ಪ್ರಾಯದ ಅಪರಾಧಿಗಳನ್ನು ತನಿಖೆ ಮಾಡುವರೆ ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಕೆಲವು ಕೋರ್ಟುಗಳನ್ನು ಸ್ಥಾಪಿಸಿರುವರು. ಈ ಕೋರ್ಟುಗಳಲ್ಲಿ ಅಪರಾಧಿಗಳನ್ನು ಬಹಿರಂಗವಾಗಿ ತನಿಖೆ ಮಾಡುವುದಿಲ್ಲ. ಕೋರ್ಟಿಗೆ ಅರ್ಜಿದಾರರು ಮತ್ತು ಅವರ ಪಕ್ಷದವರಿಗೆ ವಿನಹ ಇತರರ್ಯಾರಿಗೂ ಬರಲಿಕ್ಕಾಗುವದಿಲ್ಲ. ಅಪರಾಧಿಗಳಿಗೂ ಅವರ ಪಕ್ಷದವರಿಗೂ ಕೋರ್ಟಿನಲ್ಲಿ ಕೂತುಕೊಳ್ಳುವುದಕ್ಕೆ ಕುರ್ಚಿಗಳನ್ನು ಕೊಡುವರು. ಓಡಿ ಹೋಗುವನೆಂಬ ಅನುಮಾನವುಳ್ಳ ಕೈದಿಯನ್ನು ಮಾತ್ರ ತಕ್ಕ ಜಾಗ್ರತೆಯಿಟ್ಟು ನೋಡಿಕೊಳ್ಳುವರು.

~~~~~

ಚೀನಿ ಸರಕಾರದವರು ಇತ್ತಲಾಗೆ ಪ್ರಜೆಗಳಲ್ಲಿ ಅಫೀಮು ತಿನ್ನುವ ದುರಭ್ಯಾಸವನ್ನು ಪೂರ್ಣವಾಗಿ ನಿಲ್ಲಿಸುವದಲಿಕ್ಕೆ ಬಹಳ ಹೆಚ್ಚು ಸುಂಕವನ್ನು ಅಫೀಮಿನ ಮೇಲೆ ವಿಧಿಸಿರುವರು. ಈ ತೆರಿಗೆಯು ಕಾಯಂ ಆದರೆ ಹಿಂದೂಸ್ಥಾನದ ಸರಕಾರದವರಿಗೆ ಅಫೀಮಿನ ಉತ್ಪನ್ನ [illegible] ಬಹಳ ಕಡಿಮೆಯಾಗುವದು.

~~~~~

ಕಿಚನರ್ ಪ್ರಭುಗಳು [illegible] ಮೆಡಿಟರೇನಿಯನ್ ಸಮುದ್ರ ಪ್ರಾಂತ್ಯದ [illegible] ಸೇನಾಧಿಪತ್ಯವನ್ನು ಸರ್. ಇಯನ್ ಹೆಮಿಲ್ಟನ್ [illegible] ಕೊಟ್ಟಿರುವರು.

~~~~~

ಅಂಗ್ಲಾಂಡದಲ್ಲಿ [illegible] ಎಂಬ ಕೈದಿ [illegible] ಸವಾರ್ಕರನ ಎಂಬವನ ತನಿಖೆಯು ಹಿಂದೂಸ್ಥಾನದಲ್ಲಿಯೇ ಆಗಬೇಕೆಂಬದಾಗಿ ಕಡ ತೀರ್ಮಾನವಾಗಿರುವುದು.

~~~~~

ಇಡೀ ಭೂಲೋಕದ ಶಾಂತತೆಯನ್ನು ಅಭಿವೃದ್ಧಿಪಡಿಸುವ ವಿಷಯವನ್ನು ಎಲ್ಲಾ ವಿದೇಶ ಸರಕಾರಗಳೊಂದಿಗೆ ಪರ್ಯಾಲೋಚಿಸುವಗೋಸುಗ ಅಮೇರಿಕದ ಸರಕಾರದವರು ಒಂದು ಕಮಿಟಿಯನ್ನು ಏರ್ಪಡಿಸಬೇಕೆಂದು ನಿಶ್ಚಯಿಸಿರುವರು. ಮಾಜಿ ಅಮೇರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾದ ಮಿ. ರುಸ್‌ವೆಲ್ಟರವರನ್ನು ಈ ಕಮಿಟಿಯ ಅಧ್ಯಕ್ಷರನ್ನಾಗಿ ಮಾಡುವರು.

~~~~~

ಉತ್ತರ ಹಿಂದುಸ್ಥಾನ.

—o—

ಜೋರ್ಜ್ ಚಕ್ರವರ್ತಿಗಳವರ ಆಜ್ಞೆಗನುಗುಣವಾಗಿ ಕೈದಿಗಳಿಗೆ ಗವರ್ನರ್ ಜನರಲರವರು ಶಿಕ್ಷೆಗಳನ್ನು ಈ ರೀತಿ ಕಡಿಮೆಮಾಡಿರುವರು:—ಕಳೆದ ಮೇ ತಿಂಗಳ 23 ನೇಗೆ ಶಿಕ್ಷಾವಧಿಯು ಒಂದು ತಿಂಗಳು [illegible] ವರಿಗೆ ಅವಧಿಯನ್ನು ಕಡಿಮೆ ಮಾಡಲಿಲ್ಲ. ಒಂದು ತಿಂಗಳಿನಕ್ಕಿಂತ ಹೆಚ್ಚು ಮೂರು ತಿಂಗಳುಗಳಿಗಿಂತ ಕಡಿಮೆ ಶಿಕ್ಷಾವಧಿಯುಳ್ಳವರಿಗೆ 7 ದಿವಸಗಳನ್ನೂ ಮೂರು ತಿಂಗಳುಗಳಿಂದ ಆರು ತಿಂಗಳು ವರೆಗಿನವರಿಗೆ 15 ದಿವಸಗಳನ್ನೂ ಆರು ತಿಂಗಳುಗಳಿಂದ ಒಂದು ವರುಷ ತನಕದವರೇಗೆ 21 ದಿವಸಗಳನ್ನೂ, ಒಂದು ವರುಷದಿಂದ ಎರಡು ವರುಷಗಳ ಶಿಕ್ಷಾವಧಿಯುಳ್ಳವರಿಗೆ ಒಂದು ತಿಂಗಳನ್ನೂ, ಎರಡು ವರುಷಗಳಿಂದ ಮೂರು ವರುಷಗಳ ವರೆಗಿನವರಿಗೆ ಎರಡು ತಿಂಗಳುಗಳನ್ನೂ, ಮೂರು ವರುಷಗಳಿಂದ ಐದು ವರುಷಗಳ ವರೆಗಿನವರಿಗೆ ಮೂರು ತಿಂಗಳುಗಳನ್ನೂ, ಐದು ವರುಷಕ್ಕಿಂತ ಹೆಚ್ಚು ಶಿಕ್ಷಾವಧಿಯುಳ್ಳವರಿಗೆ [illegible] ತಿಂಗಳ ಶಿಕ್ಷೆಯನ್ನೂ ಮಾಫಮಾಡಿರುವರು. ಈ ರಿಯಾಯತಿಯು ಸಿವಿಲ್ ಕೈದಿಗಳಿಗೆ ಲಾಗೂವಾಗುವದಿಲ್ಲ. ಕೈದಿಗಳ [illegible] ನಡತೆಯ ದೆಸೆಯಿಂದ ಹೀಗೆ ಶಿಕ್ಷಾವಧಿಗಳನ್ನು ಕಡಿಮೆ ಮಾಡುವದರಲ್ಲಿ ಆಕ್ಷೇಪಣೆ [illegible] ಆದರೆ [illegible] ಜನ್ಮಾವಧಿ ಶಿಕ್ಷೆಯಾದವರಿಗೂ, ಸ್ಥಳೀಕ ಅಧಿಕಾರಿಗಳು ಈ ರೀತಿ ರಿಯಾಯತಿ ಹೊಂದಿದ ಶಿಕ್ಷಾವಧಿಯು ಮುಗಿದೊಡನೆ ವಿಮೋಚನೆ ಪಡಿಸುವುದು ಆಕ್ಷೇಪಕರವೆಂತ ಕಂಡರೆ ಅಂಥವರಿಗೂ, ಯಾವಾಗ ವಿಮೋಚನೆ ಪಡಿಸಿದರೂ ಜನಸಮುದಾಯಕ್ಕೆ ಅಪಾಯಕರವಾಗಿರುವ ಜನ್ಮಾವಧಿ ಶಿಕ್ಷೆಯನ್ನು ಪಡೆದವರಿಗೂ ಈ ರಿಯಾಯತಿಯು ಸಿಕ್ಕಲಾರದೆಂದಿರುವುದು.

~~~~~

ದರ್ಭಂಗದಲ್ಲಿರುವ ಒಬ್ಬ ಮಹಮ್ಮದೀಯನು ಒಬ್ಬ ಹಿಂದೂ ಸ್ತ್ರೀಯನ್ನು ಮದಿವೆ ಮಾಡಿಕೊಂಡದ್ದರಿಂದ ದರ್ಭಂಗದಲ್ಲಿ ಹಿಂದೂ ಮುಸಲ್ಮಾನರೊಳಗೆ ವಿಶೇಷ ಅವಾಂತರಕ್ಕೆ ಕಾರಣವಾಯಿತು. ಅನೇಕ ಜನ ಹಿಂದೂಗಳನ್ನು ಕೈದುಮಾಡಿದ್ದಲ್ಲದೆ ಈ ಪೈಕಿ 23 ಜನರನ್ನು ದಂಗೆ ಹೊರಡಿಸಿದವರೆಂದು [illegible] ಮೇಲೆ [illegible] ಕಮಿಟುಮಾಡಿರುವರು.

~~~~~

ಹಿಂದೆಯೊಂದು ಸಂಚಿಕೆಯಲ್ಲಿ ಪ್ರೊಫೆಸರ್ ರಾಮಮೂರ್ತಿ ಎಂಬ ಭಾರತೀಯ ಸೆಂಡೊರವರ ಮೇಲೆ ಒಬ್ಬ ರೈಲ್ವೆ ಅಧಿಕಾರಸ್ಥರು [illegible] ದಾವೆಯನ್ನು ದಾಖಲು ಮಾಡಿರುವರೆಂತಲೂ [illegible] ಈ ರೈಲ್ವೆ [illegible] ಕ್ರಿಮಿನಲ್ ದಾವೆ [illegible] [illegible] ಮಾಡಿರುವರು [illegible] [illegible] ವುದು [illegible] ದಾವೆಯನ್ನು ತೀರ್ಮಾನಿಸಿರುವರು.

~~~~~

[illegible] ಸಂಪಾದಕರಾಗಿದ್ದ [illegible] ಎಂಬ ಪತ್ರವನ್ನು ಪ್ರಕಟಿಸುತ್ತಿದ್ದ ಮನಮೋಹನ [illegible] ಎಂಬವರಿಗೆ ಆರು ತಿಂಗಳ ಕಠಿಣ ಕಾರಾಗೃಹ ಶಿಕ್ಷೆಯು ವಿಧಿಸಲ್ಪಟ್ಟಿರುವದು.

~~~~~

ಸುರತಿನಲ್ಲಿ ಪ್ರಕಟವಾಗುತ್ತಲಿದ್ದ ಶಕ್ತಿ ಎಂಬ ವರ್ತಮಾನಪತ್ರದ ಬಗ್ಗೆ ರೂ ೫೦೦೦ದ ಮತ್ತು ಈ ವರ್ತಮಾನಪತ್ರವು ಛಾಪೆಯಾಗುವ ಛಾಪಖಾನೆ ಬಗ್ಗೆ ರೂ ೫೦೦೦ ಈ ರೀತಿ ೧೦,೦೦೦ಗಳ ಜವಾಬ್ದಾರಿ ಠೇವಣಾತಿಯನ್ನು ಸರಕಾರದವರು ಕೇಳಿರುವುದರಿಂದ ಈ ಪತ್ರವು ನಿಲ್ಲಿಸಲ್ಪಟ್ಟಿರುವುದು.

~~~~~

ಪಂಜಾಬಿನಲ್ಲಿ ಗತಿಸಿದ ಎಡ್ವರ್ಡ್ ಚಕ್ರವರ್ತಿಗಳವರ ಮೆಮೊರಿಯಲ್ ಫಂಡಿಗೆ ರೂ. ೬೫,೦೦೦ ಚಂದಾ ದ್ರವ್ಯ ಸೇರಿರುವುದು.

~~~~~

ವಿಲಾಯತಿಗೆ ಹೋಗಿ ಅಲ್ಲಿ ಕ್ರಿಕೆಟ ಆಟದಲ್ಲಿ ಕ್ರ [illegible] ದಲ್ಲಿ ಸಮರ್ಥರಾದವರು [illegible] ನಿಶ್ಚಯಿಸಿರುವುದು. ಈ ಬಗ್ಗೆ ಇತ್ತರ ವರೆಗೆ [illegible] ಯ ೫೫,೦೦೦ ಚಂದಾ ದ್ರವ್ಯವು ಜಮೆಯಾಗಿರುವುದು.

~~~~~

ಫತೆಪುರ್ ಎಂಬಲ್ಲಿಯ ಸೆಂಟ್ರಲ್ ಜೈಲಿನಲ್ಲಿ ಕೈದಿಗಳಲ್ಲಿ ಹಲವರು ಕೂಡಿ ದಂಗೆಗೆದ್ದು ಜೈಲಿನ ಸುಪರಿಂಟೆಂಡೆಂಟರಾದ ಲೆಫ್ಟಿನೆಂಟ್ ಕರ್ನೆಲ್ ಜಂಕಿನ್ಸರವರನ್ನೂ ಜೈಲರನನ್ನೂ ಚನ್ನಾಗಿ ಹೊಡದರಂತೆ. ಜೈಲು ಕಾರ್ಖಾನೆಯಲ್ಲಿ ಕೆಲಸ ಮಾಡುತಲಿದ್ದ ಕೈದಿಗಳೊಳಗೆ ಏನೋ ಅಸಮಾಧಾನದ ಕುರಿತು ಸುಪರಿಂಟೆಂಡೆಂಟರವರು ಕೈದಿಗಳನ್ನು ವಿಚಾರಿಸುತ್ತಿರುವಷ್ಟರಲ್ಲಿಯೇ ಕೈದಿಗಳು ಕಾರ್ಖಾನೆಯ ಬಾಗಿಲುಗಳನ್ನು ಮುರಿದು ಅಂಗಳ ಹೆಬ್ಬಾಗಿಲನ್ನು ಸಹ ಮುರಿಯುವರೆ ಹೋದರು. ಹೆಬ್ಬಾಗಿಲನ್ನು ಮುರಿಯ ಪ್ರಯತ್ನಿಸಿದರೆ ತಾನು ದಂಗೆಗಾರರ ಮೇಲೆ ಗುಂಡು ಹಾರಿಸೇನೆಂಬುವ ಗದರಿಕೆಗೆ ಸಹಾ ಹೆದರದೆ ಗೇಟಿನ ಬಾಗಿಲುಗಳನ್ನು ಒಡೆಯುವ ತಮ್ಮ ಪ್ರಯತ್ನಗಳನ್ನು ಕೈದಿಗಳು ಬಿಡಲಿಲ್ಲ. ಸುಪರಿಂಟೆಂಡೆಂಟರವರು ಜೈಲು ಕಾವಲುಗಾರರುಗಳಿಂದ ಇವರ ಮೇಲೆ ಗುಂಡುಹಾರಿಸಿ ಈ ದಂಗೆಯನ್ನು ಶಾಂತಪಡಿಸಬೇಕಾಯಿತು. ದಂಗೆ ಎಬ್ಬಿಸಿದ ಕೈದಿಗಳು ಹೆಚ್ಚುಕಡಿಮೆ ೪೦೦ ಜನರಿದ್ದರು. ಕೈದಿಗಳಲ್ಲಿ ಏಳು ಜನರು ತಾವು ಪಡೆದ ಘಾಯಗಳಿಂದ ಮೃತಪಟ್ಟಿರುವರು. ಘಾಯಪಡದವರ ಸಂಖ್ಯೆಯು ೫೦ ಆಗಿರುವುದು.

~~~~~

ಇದೇ ತಿಂಗಳ ಕಳೆದ ೧೧ನೇ ತಾರೀಕಿಗೆ ನರಸಿಗಂಜ್ ಎಂಬಲ್ಲಿಯ ಬೆರಕ್ಪುರ ಎಂಬಲ್ಲಿ ಸರಳಾ ಮತ್ತು ಚಪಲಾ ಎಂಬ ಉತ್ತಮ ಕುಲದ ಬ್ರಾಹ್ಮಣ ಸ್ತ್ರೀಯರಿಬ್ಬರು ಮಧ್ಯರಾತ್ರಿಯಲ್ಲಿ ತಮ್ಮ ಪ್ರತಿವ್ರತಾಭಂಗವನ್ನು ಮಾಡಲು ಬಂದಿದ್ದ ಒಬ್ಬ ನೆರೆಹೊರೆ ಗ್ರಾಮದ ನಿವಾಸಿಕನನ್ನು ಕೊಂದುಬಿಟ್ಟಿರುತ್ತಾರೆ. ನರಸಿಗಂಜ್ ಎಂಬಲ್ಲಿಯ ಸಬ್ ಡಿವಿಜನಲ್ ಮೆಜಿಸ್ಟ್ರೇಟರವರು ಈ ಇಬ್ಬರು ಸ್ತ್ರೀಯರನ್ನು ಇಂಡಿಯನ್ ಪೆನಲ್ ಕೋಡಿನ ೬೦೨ನೇ ಪ್ರಕರಣದ ಪ್ರಕಾರ ಡೆಪ್ಯುಟಿ ಸೆಶ್ಯನ್ಸ ಜಡ್ಜರಲ್ಲಿ ತನಖಿಗೆ ಕಳುಹಿಸಿ ಕೊಟ್ಟಿದ್ದರು. ಜಡ್ಜರವರು ಪ್ರತಿ ಒಬ್ಬ ಸ್ತ್ರೀಗೆ ಒಂದೊಂದು ಸಾವಿರ ರೂಪಾಯಿ ಜಾಮೀನನ್ನು ಪಡಕೊಂಡು ಸದರಿ ಮೊಕದಮೆಯನ್ನು ಮುಂದರಿಸಿಟ್ಟಿರುತ್ತಾರೆ.

~~~~~

ಮಹಮ್ಮದೀಯರ 'ಒಲ್ ಇಂಡಿಯಾ ಮುಸಲ್ಮನ್ ಲೀಗ್' ಎಂಬ ಹಿಂದೂಸ್ಥಾನದ ಸರ್ವ ಮಹಮ್ಮದೀಯರ ಸಂಘದಂತೆ ಕಲ್ಕತ್ತೆಯಲ್ಲಿ ಹಿಂದುಗಳು ಸಹ ತಮ್ಮ ಒಂದು ರಾಷ್ಟ್ರೀಯ ಸಂಘವನ್ನು ಏರ್ಪಡಿಸಿರುವರು. ಸರೋದ ಚರಣಮಿತ್ರ ಮತ್ತು [illegible] ಚೌಧುರಿಯವರು ಈ ಹೊಸ ಸಂಘದ ಕಾರ್ಯದರ್ಶಿಗಳಾಗಿರುವರು.

~~~~~

ಬರೋಡದ ಗೈಕ್ವಾರರವರು ಜಪಾನಿಗೆ ಹೋಗಿ ತಲ್ಪಿರುವರಾಗಿ ತಿಳಿಯುತ್ತೇವೆ. ಕಳೆದ ಮೇ ತಿಂಗಳ ೩೧ನೇ ತಾರೀಕಿನಲ್ಲಿ ಜಪಾನೀಯ ವಿದೇಶ ವಿಷಯಗಳ ಬಗ್ಗೆ ಮಂತ್ರಿಯಾದ ಕೊಮುರಾ ಪ್ರಭುಗಳೆಂಬವರು ಗೈಕ್ವಾರರವರನ್ನು ಒಂದು ಔತಣ ಕೊಟ್ಟು ಉಪಚರಿಸುವವರಾದರು. ಯೊಕೋಹಾಮದಿಂದ ಜೂನ್ ೧ನೇ ತಾರೀಕಿನಲ್ಲಿ ಗೈಕ್ವಾರರವರು ತೆರಳಿರುವರು. ಜಪಾನ ದೇಶದ ಹಲವು ಸಂಸ್ಥೆಗಳಿಗೆ ದ್ರವ್ಯಸಹಾಯವನ್ನು ಗೈಕ್ವಾರರವರು ಮಾಡಿರುವರಾಗಿ ತಿಳಿಯುತ್ತೇವೆ.

~~~~~

ಸಿವಿಲ್ ಮತ್ತು ಮಿಲಿಟರಿ ಗಜೇಟಿನ [illegible] ಯ ಬಾತ್ಮೀದಾರನು ಈ ಗಜೇಟಿಗೆ [illegible]

ಭಾರತೀಯರು ಪರ್ಶಿಯದ ಮುಲ್ಲರಾದ ಮಿರ್ಜಾ ಇಬ್ರಾಹಿಮ್ ಎಂಬವರ ಮನೆಹೊಕ್ಕಿಕೊಂಡು ಅವರ ಮನೆಯಲ್ಲಿಯೇ ಹೊರಗೆ ಬಾರದೆ ಉಳಿಕೊಂಡಿದ್ದರು. ಇಬ್ಬರು ಭಾರತೀಯರೂ ಜಾತಿಯಲ್ಲಿ ಹಿಂದೂಗಳಾಗಿರುವರು. ಇವರು ಒಂದು ಪತ್ರವನ್ನು ಪರ್ಶಿಯದಲ್ಲಿ ಪ್ರಕಟಿಸಲಿಕ್ಕೆ ಮುಲ್ಲರವರಿಂದ ಅಜ್ಞೆಯನ್ನು ಪಡಕೊಂಡು ಹಿಂದುಸ್ಥಾನದ ಸರಕಾರಕ್ಕೆ ವಿರೋಧವಾದ ವಿಷಯಗಳನ್ನು ಈ ಪತ್ರದಲ್ಲಿ ಈಗಿಂದಾಗ್ಯೆ ಪ್ರಕಟಿಸುತ್ತಿದ್ದರು ಇತ್ತಲಾಗೆ ಈ ಪತ್ರದಲ್ಲಿ ರುಶ್ಯದೇಶದ ಸರಕಾರಕ್ಕೆ ವಿರೋಧ ವಿಷಯಗಳನ್ನು ಸಹಾ ಪ್ರಕಟಿಸಲಿಕ್ಕೆ ಪ್ರಾರಂಭಿಸಿದ್ದರು ಕ್ರೈಸ್ತರನ್ನು ಹೀಯಾಳಿಸಿ ಬರಿಯುವುದು ಸಹಾ ಈ ಪತ್ರದಲ್ಲಿ ವಾಡಿಕೆಯಾಗಿತ್ತು ಈ ಇಬ್ಬರ ವಿಷಯ ಯಾವ ಸಮಾಚಾರವನ್ನಾದರೂ ತಿಳಿಯುವುದು ಅಸಾಧ್ಯ ಕ್ರೈಸ್ತರಿದ್ದಕ್ಕೆ ಇವರು ಬರುವುದೇ ಇಲ್ಲ ಮೆ| ಸ್ಮಾರ್ಟ್ ಎಂಬ ಕನ್ಸಲರವರು ಈ ಇಬ್ಬರು ಭಾರತೀಯರನ್ನು ತಮಗೆ ಒಪ್ಪಿಸಿಕೊಡಬೇಕೆಂತ ಅಲ್ಲಿಯ ಡಿಪ್ಯುಟಿ ಗವರ್ನರರವರನ್ನು ಕೇಳಿದರು ಆದರೆ ಮಿರ್ಜಾ ಇಬ್ರಾಹಿಮರವರ ಇವರನ್ನು ಬಿಟ್ಟುಕೊಡುವರೆ ನಿರಾಕರಿಸಿದ್ದರಿಂದ ಡಿಪ್ಯುಟಿ ಗವರ್ನರರವರಿಗೆ ಇವರನ್ನು ಒಪ್ಪಿಸಿಕೊಡುವದು ಅಸಾಧ್ಯವಾಯಿತು ಇತ್ತಲಾಗೆ ಈ ಇಬ್ಬರು ಭಾರತೀಯರೂ ಶಿರಾಜಿನಿಂದ ಎಲ್ಲಿಯೋ ಹೋಗಿಬಿಟ್ಟಿರುವರಂತೆ ಕೆಲವು ಸಮಯದ ಮೊದಲು ಆರ್ನಾಲ್ಡ್ ಮತ್ತು ಸಾಪಿರ್ ಎಂಬಿಬ್ಬರು ಪರ್ಶ್ಯಕ್ಕೆ ಓಡಿಹೋಗಿದ್ದಾರೆಂಬದಾಗಿ ವರ್ತಮಾನವಿತ್ತು ಶಿರಾಜಿನಲ್ಲಿದ್ದ ಇಬ್ಬರು ಭಾರತೀಯರು ಇವರೆಯೋ ಏನೋ?

~~~~~~

ಈ ತಿಂಗಳ ತಾರೀಕು ೧೫ರಲ್ಲಿ ಗತಿಸಿದ ಎಡ್ವರ್ಡ್ ಚಕ್ರವರ್ತಿಗಳವರ ಸ್ಮರಣಾರ್ಥವಾಗಿ ತಕ್ಕ ಏರ್ಪಾಡು ಮೊದಲಾದವುಗಳನ್ನು ಮಾಡಲಿಕ್ಕೆ ಮುಂಬಯಿ ನಿವಾಸಿಕರ ಸಭೆಯು ಮುಂಬಯಿಯಲ್ಲಿ ಜರಗಿತು ಸರ್ ಜೋರ್ಜ್ ಕ್ಲಾರ್ಕರವರು ಸಭೆಯ ಅಧ್ಯಕ್ಷರಾಗಿದ್ದರು ಮೆಮೋರಿಯಲ್ ಫಂಡಿನ ಬಗ್ಗೆ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿತು. ಸಭೆಯಲ್ಲಿ ರೂ ೪೫,೦೦೦ ಚಂದಾ ಮೊಬಲಗು ಕೂಡಿರುವುದು

— ೧ —

ದಕ್ಷಿಣ ಹಿಂದುಸ್ಥಾನ

ಇಂಡಿಯಾ ಗವರ್ನಮೆಂಟಿನವರು ಆಯಾ ಪ್ರಾಂತಿಕ ಸರಕಾರಗಳಿಗೆ ಕ್ಷಯ ರೋಗಿಗಳ ಚಿಕಿತ್ಸೆ ಬಗ್ಗೆ ಚಿಕಿತ್ಸಾಲಯಗಳನ್ನು ಏರ್ಪಡಿಸುವುದುಚಿತವೆಂತ ಸೂಚಿಸಿದ್ದಾರೆಂದು ಕಳೆದ ಸಂಚಿಕೆಯಲ್ಲಿ ತಿಳಿಯಪಡಿಸಿತ್ತಷ್ಟೆ ಮದ್ರಾಸು ಗವರ್ನಮೆಂಟಿನವರು ಈ ಸೂಚನೆಗನುಗುಣವಾಗಿ ಈ ಸಂಸ್ಥಾನದಲ್ಲಿ ಒಂದು ಕ್ಷಯರೋಗ ಚಿಕಿತ್ಸಾಲಯವನ್ನು ಕಟ್ಟಿಸುವ ಅವಶ್ಯತೆಯನ್ನು ತಿಳಕೊಳ್ಳಲಿಕ್ಕೆ ಸರ್ಜನ್ ಜನರಲ್ ಮೊದಲಾದ ಇತರ ವೈದ್ಯ ಆಫೀಸರರ ಅಭಿಪ್ರಾಯಗಳನ್ನು ಕೇಳಿರುವರು

~~~~~~

ಹಿಂದುಸ್ಥಾನದಲ್ಲಿ ಬೆಳೆಸಲ್ಪಡುವ ಹೊಗೆಸೊಪ್ಪಿನ ಮೇಲೆ ತೆರಿಗೆಯನ್ನು ವಿಧಿಸುವುದು ಹೊಗೆಸೊಪ್ಪಿನ ವ್ಯಾಪಾರಸ್ಥರಿಗೂ ಅದನ್ನು ಬೆಳಸುವವರಿಗೂ ಸರಕಾರದವರಿಗೂ ಬಹಳ ಅನಾನುಕೂಲತೆಗಳನ್ನುಂಟುಮಾಡುವುದರಿಂದ ಈ ತೆರಿಗೆಯನ್ನು ವಿಧಿಸುವುದು ಅನುಚಿತವೆಂತ ಮದ್ರಾಸು ಸರಕಾರದವರು ಅಭಿಪ್ರಾಯ ಪಟ್ಟಿರುವರಂತೆ

~~~~~~

ಮೈಸೂರಿನ ಯುವರಾಜರ ಮದಿವೆಗಾಗಿ ಬಂದಿದ್ದ ಮದ್ರಾಸು ಗವರ್ನರ್ ಧೊರೆಗಳವರಾದ ಸರ್. ಆರ್ಥರ್ ಲಾಲಿ ಧೊರೆಗಳು ಮೊದಲಾದ ಅತಿಥಿಗಳು ಮೈಸೂರಿನಿಂದ [illegible]

[illegible] ಪ್ರಿಕಲ್ಚರಲ್ ಕೆಲೆಂಡರ್ ಎಂಬ ವ್ಯವಸಾಯ ವಿಷಯಗಳಲ್ಲಿ ಉಪಯುಕ್ತ ಮಾಹಿತಿಯನ್ನು ಕೂಡಿರುವ ಪಂಚಾಂಗಗಳನ್ನು ಮಲೆಯಾಳ, ಕನ್ನಡ, ಉರಿಯಾ, ಟಮಿಲ್, ಟೆಲುಗು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟಿಸಿ ಗ್ರಾಮ ಅಧಿಕಾರಸ್ಥರೆಲ್ಲರಿಗೂ ಉಚಿತವಾಗಿ ಕೊಡಬೇಕೆಂದು ಮದ್ರಾಸು ಗವರ್ನಮೆಂಟಿನವರು ರೆವಿನ್ಯೂ ಬೋರ್ಡಿನವರನ್ನು ಅಜ್ಞಾಪಿಸಿರುವರು

~~~~~~

ಮದ್ರಾಸು ಗವರ್ನಮೆಂಟಿನವರು ಗತಿಸಿದ ಎಡ್ವರ್ಡ್ ಚಕ್ರವರ್ತಿಗಳವರ ಮೆಮೋರಿಯಲ್ ಫಂಡಿನ ವಿಷಯವಾಗಿ ಈ ಕೆಳಗಿನ ಸರಕಾರಿ ಹುಕುಮನ್ನು ಪ್ರಕಟಿಸಿರುವರು — ಎಡ್ವರ್ಡ್ ಮೆಮೋರಿಯಲ್ ಫಂಡಿನ ಬಗ್ಗೆ ಆಯಾ ಜಿಲ್ಲೆಗಳಲ್ಲಿ ಕೂಡಿಸಲ್ಪಡುವ ಚಂದಾಹಣಗಳನ್ನು ಕಲೆಕ್ಟರರವರ ಅಥವಾ ಅವರಿಂದ ನೇಮಿಸಲ್ಪಡುವ ಇತರ ಸರಕಾರಿ ಉದ್ಯೋಗಸ್ಥರ ಹೆಸರುಗಳಲ್ಲಿ ಠೇವಣಾತಿಯಾಗಿ ಪಡಕೊಳ್ಳುವುದಲ್ಲದೆ ಹೀಗೆ ಪಡಕೊಂಡ ಹಣವುಗಳನ್ನು ಖರ್ಚಿಲ್ಲದೆ ಟ್ರೇನ್ಸ್ಫರ್ ರಶೀದುಗಳ ಮುಖಾಂತರ ಮದ್ರಾಸು ಬೇಂಕಿಗೆ ಕಳುಹಿಸತಕ್ಕದೆಂದು ಅಕೌಂಟಂಟ್ ಜನರಲರವರು ಎಲ್ಲಾ ಟ್ರೆಜರಿ ಆಫೀಸರರುಗಳಿಗೆ ತಿಳಿಸತಕ್ಕದ್ದು ಅಲ್ಲಲ್ಲಿ ಏರ್ಪಡಿಸಲ್ಪಡುವ ಈ ಫಂಡಿನ ಸ್ಥಳಿಕ ಕಮಿಟಿಗಳು ಕೊಟ್ಟ ಚಂದಾದ್ರವ್ಯಗಳನ್ನು ಖರ್ಚಿಲ್ಲದೆ ಡಿಸ್ಟ್ರಿಕ್ಟ್ ಗೆಜೆಟ್ಟುಗಳಲ್ಲಿ ಛಾಪಿಸತಕ್ಕದ್ದು ಸರಕಾರಿ ಉದ್ಯೋಗಸ್ಥರು ಇಂಥಾ ಕಮಿಟಿಗಳ ಮೆಂಬರರಾಗ ಬಹುದೆಂದೂ ಈ ಫಂಡಿನ ಬಗ್ಗೆ ಕಲೆಕ್ಟರರೂ ಯಾ ಡಿವಿಜನಲ್ ಆಫೀಸರರುಗಳೂ ಜನರ ಸಭೆ ಕೂಡಿಸಬಹುದೆಂದೂ ತಿಳಿಸಲ್ಪಡುವದಾಗಿರುತ್ತದೆ ಆದರೆ ಸರಕಾರಿ ಆಫೀಸರರು ತಾವು ಸ್ವತಹಾ ಚಂದಾ ಹಣಗಳನ್ನು ಕೇಳುವ ವಿಷಯ ತಮಗೆ ಸಂತೋಷವಿರದೆಂದು ಕೂಡಾ ಮದ್ರಾಸು ಗವರ್ನಮೆಂಟಿನವರು ಅಜ್ಞಾಪಿಸಿರುವರು ಡಿಸ್ಟ್ರಿಕ್ಟ್ ಜಡ್ಜರವರನ್ನು ಅಥವಾ ಇತರ ಸರಕಾರಿ ಆಫೀಸರನಲ್ಲದವರನ್ನು ಅಲ್ಲಲ್ಲಿ ಕೂಡುವ ಸಭೆಗಳ ಅಧ್ಯಕ್ಷರನ್ನಾಗಿ ಮಾಡಿ ಆ ಸಭೆಗಳಲ್ಲಿ ಏರ್ಪಡಿಸಲ್ಪಡುವ ಫಂಡಿನ ಕಮಿಟಿಗಳ ಕಾರ್ಯದರ್ಶಿಗಳನ್ನಾಗಿ ಸರಕಾರಿ ಆಫೀಸರರಲ್ಲದವರನ್ನೇ ಮಾಡುವುದು ಉಪಯುಕ್ತವೆಂತ ಸಹಾ ಸೂಚಿಸಿರುವರು

~~~~~~

ಮುಂಬಯಿಯಲ್ಲಿದ್ದ ಪ್ರಖ್ಯಾತ ಗರಡಿ ಸಾಧಕಿಯಾದ — ಸಿಂಹ ಕಾಟೋ ಎಂಬವನನ್ನು ಮೈಸೂರು ಸರಕಾರದವರು ತಮ್ಮ ಸಂಸ್ಥಾನದ ಪೋಲೀಸು ಪೋಜನ್ನು ಜಿಯುಜಿಟ್ಸು ಎಂಬ ಅಂಗಸಾಧನೆಯನ್ನು ಕಲಿಸಬೇಕು ಮಾಡಲಿಕ್ಕೆ ನೇಮಿಸಿರುವರು

~~~~~~

ಮದ್ರಾಸು ಗವರ್ನರರವರು ಉದಕಮಂಡಲದಿಂದ ಮದ್ರಾಸಿಗೆ ಬರುವ ಮೊದಲೇ ಬೆಂಗ್ಳೂರು ಮತ್ತು ಅನಂತಪುರಗಳನ್ನು ಸಂದರ್ಶಿಸಿ ಬರುವರಾಗಿ ತಿಳಿಯುತ್ತೇವೆ

~~~~~~

ಮೈಸೂರು ಯುವರಾಜರವರ ವಿವಾಹ ವೈಭವಗಳು ಇನ್ನೂ ನಡಿಯುತ್ತಿರುವವು ಹಿಂದೂಸ್ಥಾನದ ಆಯಾ ಕಡೆಗಳಿಂದ ಮುಖ್ಯವಾಗಿ ತಂಜಾವೂರು, ಬರೋಡಾ, ಮತ್ತು ಜೈಪುರಗಳಿಂದ ತರಿಸಲ್ಪಟ್ಟ ನಲ್ವತ್ತು ಜನ ಗಾಯನಗಾರರು ತಮ್ಮ ಗಾಯನಗಳಿಂದ ಅತಿಥಿಗಳನ್ನು ಉಪಚರಿಸುತ್ತಿರುವರು ದೇಶದ ಆಯಾ ಕಡೆಗಳಿಂದ ಬಂದ ಅತಿಥಿಗಳೂ ರಾಜ ಪ್ರತಿನಿಧಿಗಳೂ ಕೋಲಾರ ಚಿನ್ನದ ಗಣಿಗಳು, ಶ್ರೀರಂಗಪಟ್ಣ ಮೊದಲಾದವುಗಳನ್ನು ಸಂದರ್ಶಿಸುವರೆ ತೆರಳಿರುವರು.

~~~~~~

ದಿವಾನ್‌ಬಹದೂರ್ ರಘುನಾಥರಾಯರವರು ಮೈಸೂರಿನಲ್ಲಿ ಸಮುದ್ರಪ್ರಯಾಣ, ವಿಧವಾವಿವಾಹ ಮತ್ತು ಜಾತಿಭೇದ ಇವುಗಳ ವಿಷಯ ಒಂದು ಭಾಷಣವನ್ನು ಕೊಡುವವರಾದರು.

[illegible] ಮದ್ರಾಸು [illegible] ಎಡ್ವರ್ಡ್ ಮೆಮೋರಿಯಲ್ ಫಂಡಿನ ಚಂದಾ ಮೊಬಲಗು ತಾರೀಕು 22ನೇ ವರೇಗೆ ರೂ. 24,489-8-0 ಆಗಿರುವುದು. ನಮ್ಮ ಜಿಲ್ಲೆಯ ಬಹುಮಾನಪಟ್ಟ ಮೆ| ಸಾಲ್ಡಾನಾರವರು ಈ ಫಂಡಿಗೆ ರೂಪಾಯಿ 100 ನ್ನು ಚಂದಾದ್ರವ್ಯವಾಗಿ ಕೊಟ್ಟಿರುವರಾಗಿ ತೋರಿಬರುತ್ತದೆ

~~~~~~

ದಕ್ಷಿಣ ಕನ್ನಡ.

~~~~~~

WANTED.

Four bill collectors who know to read and write English and Canarese. Security of Rs 200—0—0 required. Salary Rs 7 to 10 Cash security preferred Apply to M Ebrahim Elias General Merchant, Mangalore

M Ebrahim Elias

ಮಂಗಳೂರು ಕಳೆದ ವಾರ ಮುನಿಸಿಪಾಲಿಟಿಯಲ್ಲಿ ೪ ಬ್ಯುಬೋನಿಕ್ ರೋಗದ ಮರಣಗಳು ಮಾತ್ರವೇ ಇದ್ದವು

ಎರಡು ಮೂರು ದಿವಸಗಳಿಂದೀಚೆಗೆ ಇಲ್ಲಿಯ ಮುನಿಸಿಪಾಲಿಟಿಯವರು ನಮೂನೆಗಾಗಿ ಪೆಟ್ರೋಲಿಯಮ್ ಎಂಬ ದ್ರವ್ಯವಾಗ ಎಣ್ಣೆಯ ಗೇಸ್ ಮೂಲಕ ಉರಿಯುವಂಥಾ 2 ಗೇಸ್ ದೀಪಗಳನ್ನು ತರಿಸಿದ್ದಾರೆ ಇವುಗಳನ್ನು ಪ್ರಕೃತ ಮೂರು ರಸ್ತೆಗಳು ಕೂಡಿರುವ ಒಂದು ಗೋಳಿಕಟ್ಟೆ ಬಜಾರಿನಲ್ಲಿಯೂ, ಮತ್ತೊಂದು ಗವರ್ನಮೆಂಟ್ ಕೋಲೇಜಿನ ಸಮೀಪವೂ ಇಡುವರು ಇವುಗಳನ್ನು ಸರ್ವತರದಲ್ಲಿಯೂ ಯುಕ್ತವೆಂತ ಕಂಡ ಪಕ್ಷಕ್ಕೆ ಇಡೀ ಪಟ್ಟಣದಲ್ಲಿ ಅಂಥವುಗಳನ್ನೆ ಉರಿಸುವರಂತೆ

ಹುಜೂರ್ ವರ್ನಾಕ್ಯುಲರ್ ಹೆಡ್‌ಕ್ಲಾರ್ಕರಾದ ಸುಬ್ಬೇರಾಯರವರು ೯ ತಿಂಗಳ ರಜೆಯ ಮೇಲೆ ಹೋಗುವದರಿಂದ ಇವರ ಬದಲಿಗೆ ಲೇಂಡ್‌ರಿಕಾರ್ಡ್ಸ್ ಇನ್ಸ್‌ಪೆಕ್ಟರರಾಗಿದ್ದ ಗುರುಪುರ ಮಾಧವ ಪ್ರಭುಗಳವರನ್ನು ನೇಮಿಸಿರುತ್ತಾರೆ

ಈ ತಿಂಗಳ ತಾ ೨೦ರಲ್ಲು ಡಿಸ್ಟ್ರಿಕ್ಟ್ ಬೋರ್ಡು ಸಭೆಯು ಇತ್ತು ಉಳ್ಳಾಲ ಮತ್ತು ಪರಮನ್ನೂರು ಎಂಬ ಊರು ಜನರ ಕಮಿಟಿಯ ಅಧ್ಯಕ್ಷರಾದ ಮ| ರಾ| ರಾ| ಹ್ಯಾಕೋರ್ಟು ವಕೀಲ್ ಯು. ಸಿ. ಕೃಷ್ಣಬಟ್ಟರವರು ನೇತ್ರಾವತಿ ಹೊಳೆ ರೈಲ್ವೆ ಸಂಕದ ಮೇಲೆ ಹಾದುಹೋಗುವ ಜನರ ಉಪಯೋಗಾರ್ಥವಾಗಿ ಎರಡು ಲಾಟನುಗಳನ್ನು ಸಂಕದ ಮೇಲೆ ಉರಿಸುವ ಸೂಚನೆಯನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಮಾಡಿದ್ದರೆಂಬದಾಗಿ ತೋರುತ್ತದೆ ರೈಲ್ವೆ ಕಂಪೆನಿಯವರ ಅಂದಾಜು ಮೇರೆಗೆ ಎರಡು ದೀಪಸ್ತಂಭಗಳ ಬಗ್ಗೆ ರೂ ೪೦೦ ಮತ್ತು ಇವುಗಳ ಬಗ್ಗೆ ಉರಿಸಲಿಕ್ಕೆ ತಿಂಗಳು ಒಂದಕ್ಕೆ ರೂ ೨೫ರ ಪ್ರಕಾರ ತಗಲುವುದೆಂತ ಕಾಣುತ್ತದೆ ಬೋರ್ಡಿನವರಿಗೆ ರೈಲ್ವೆ ಸಂಕದಲ್ಲಿ ದೀಪಸ್ತಂಭಗಳನ್ನು ಸ್ಥಾಪಿಸುವುದು ಈ ವಿದ್ಯಮಾನಗಳಲ್ಲಿ ಅಸಾಧ್ಯವೆಂತ ತಿಳಿಯುತ್ತೇವೆ

~~~~~~

ಪುತ್ತೂರು. ಅಜ್ಜಾವರ ಗ್ರಾಮದ ಬಿಲ್ಲತ್ತಿ ಕುಂಞಕ್ಕೆ ಹೆಂಗಸು ಎಂಬವಳಿಗೆ ಆಕೆ ಗಂಡನ ಅಣ್ಣನಾಗಿರುವ ಪುತ್ತಪ್ಪ ಎಂಬವನು ಆಕೆಯನ್ನು ಕಡದು ಹಿಂಸೆಮಾಡಿದ್ದಾನೆ [illegible]
~~~~~~

ತನಗೆ ನೋಯುತ್ತಿದ್ದ [illegible] ಮುಲ್ಕಿಯಾರ ಕೃಷ್ಣಪ್ಪನಿಗೆ ಆ ವರುಷ ಕಠಿಣಶಾವಾಗಿ ಸಜಾವಿಧಿಸಿರುವರು.

ನಮ್ಮ ಡಿವಿಜನ್ ಡಿಪ್ಯುಟಿ ಕಲೆಕ್ಟರವರು ಕಾಸರಗೋಡ ಕಡೆ ಸರ್ಕೀಟಿಗೆ ಹೋಗಿರುವರು

~~~~~~

ಪಣಂಬೂರು ಮದ್ರಾಸು ವಿದ್ಯಾ ಇಲಾಖೆಯ ವ್ಯಾನಿಯಮಗಳ ಪ್ರಕಾರ ಮಹಮ್ಮದೀ ಮಕ್ಕಳು ಸರಕಾರಿ, ಮುನಿಸಿಪಲ್ ಯಾ ಲೋಕಲ್ ಫಂಡ್ ಶಾಲೆಗಳಲ್ಲಿ ಅರೆವಾಸಿ ಸಂಬಳ ಕೊಡಬಹುದೆಂತ ಉಂಟು. ಆದರೆ ಇತ್ತಲಾಗಿ ಪಣಂಬೂರು ಗ್ರಾಮದ ನಿವಾಸಿಕರು ಮಾಡಿದ ಅರ್ಜಿ ಮೇರೆಗೆ ಮಂಗಳೂರು ತಾಲೂಕು ಬೋರ್ಡಿನವರು ಸದರೀ ಮತದ ಅರ್ಭಕರಿಗೆ ಶಾಲಾ ಪೀಸನ್ನು ಶಿರಾಮನ್ನಾಮಾಡಿರುತ್ತಾರೆ ಈ ವಿಷಯದಲ್ಲಿ ಪಣಂಬೂರಿನ ನಿವಾಸಿಕರಿಗೆ ಮಹಮ್ಮದೀಯರು ತುಂಬಾ ಕೃತಜ್ಞರಾಗಿರಬೇಕು ಇದೇ ರೀತಿಯಲ್ಲಿ ಇತರ ತಾಲೂಕು ಬೋರ್ಡಿನವರು ಆದಷ್ಟು ಬೇಗ ವರ್ತಿಸುವರೆಂತ ಆತ್ಯಾಶೆಯಿಂದ ಕೋರುತ್ತೇನೆ

~~~~~~

ಮುಲ್ಕಿ ಇಲ್ಲಿಯ ಬಂಟರ ಹೊಟೇಲಿನಲ್ಲಿ ಒಬ್ಬನು ಅನೇಕ ದಿವಸಗಳಿಂದ ಊಟಮಾಡಿಕೊಂಡಿದ್ದು ಕಡೇಗೆ ಅಲ್ಲಿಯ ಚಿನ್ನಾಭರಣಗಳನ್ನು ತಾ ಗಳಿಕ್ಕೆ ಕದ್ದುಕೊಂಡಿರುವನು ಮಾಲೂ ಕಳ್ಳನೂ ಅಂದೇ ಪತ್ತೆಯಾಗಿ ಪೋಲೀಸಿನವರು ಚಾರ್ಜುಮಾಡಿ ಮಂಗಳೂರಿಗೆ ಕಳುಹಿಸಿರುವರು. ಉಧಾರ ಕೊಡುವದು ಈಗಿನ ಕಾಲದಲ್ಲಿ ಕಷ್ಟ!

~~~~~~

ವಿವಿಧ ವಿಷಯಗಳು

~~~~~~

ಅಳುವ ಶಿಶುಗಳು ಹೆತ್ತವರು ಅಥವಾ ಮಕ್ಕಳ ಸಂರಕ್ಷಣೆಯನ್ನು ಕೈಕೊಳ್ಳುವ ಇತರರು ಶಿಶುಗಳನ್ನು ಸಂರಕ್ಷಿಸುವ ವಿಧಾನಗಳಲ್ಲಿ ಮಿತಿಮೀರುವುದರಿಂದ ಅವುಗಳಲ್ಲಿ ಅಳುವ ದುರಭ್ಯಾಸವನ್ನುಂಟುಮಾಡುವರು ಪ್ರತಿಸರ್ತಿ ಶಿಶುವು ಅಳುತ್ತದೆಂದಕೂಡಲೇ ಅದಕ್ಕೆ ಏನಾದರೂ ಒಂದು ಉಪಚಾರವನ್ನು ಮಾಡಿಇಡುವರು ಇಂತಹ ಉಪಚಾರಗಳಿಂದ ಅದಕ್ಕೆ ಅಳುವ ಅಭ್ಯಾಸವೇ ಹಿಡಿದು ಹೋಗುತ್ತದೆ

ಅಮೇರಿಕದಲ್ಲಿ ಶಿಶುಗಳ ಆಸ್ಪತ್ರೆಗಳಿರುವವು ಇದರಲ್ಲಿ ಶಿಶುಗಳು ಒಂದೆರಡು ದಿನ ಬಹಳವಾಗಿ ಕೂಗುವವು ಆದರೆ ಹೀಗೆ ಅಳುವ ಮಕ್ಕಳನ್ನು ಅವುಗಳ ತೊಟ್ಟಿಲುಗಳಿಂದ ತೆಗದು ಅವುಗಳು ಅಳುವುದನ್ನು ನಿಲ್ಲಿಸುವವರಿಗೆ ಅವುಗಳನ್ನು ಕೈಯಲ್ಲೆತ್ತಕೂಡದೆಂಬ ಕಠಿಣ ನಿಯಮವು ಆ ಆಸ್ಪತ್ರೆಗಳಲ್ಲಿರುವುದು ಇಲ್ಲಿ ಶಿಶುಗಳು ಅಳುವ ಅಭ್ಯಾಸವನ್ನು ಬೇಗನೆ ಬಿಟ್ಟು ಯಾವಾಗಲೂ ಶಾಂತವಾಗಿರುವವು. ಈ ಆಸ್ಪತ್ರೆಗಳ ಅನುಭವವು ಮೇಲ್ಕಂಡ ರೀತಿಯಾಗಿರುವುದು

ಶಿಶುಗಳ ವಿಷಯ ಅತೀರೇಕ ಜಾಗರೂಕರಾಗಿರುವುದು ಕೇವಲ ಹಾನಿಕರ ಶಿಶುವು ಸುಮ್ಮನೆ ಆಡುತ್ತಿರುವಾಗ ಅದನ್ನು ಸುಮ್ಮನಿದ್ದಲ್ಲಿಯೇ ಬಿಟ್ಟುಬಿಡಬೇಕು ಅದರ ಸಂಗಡ ಅನಾವಶ್ಯಕ ಮಾತಾಡುವದಾಗಲಿ, ಅದನ್ನು ಕೈಯಲ್ಲೆತ್ತಿ ಅತ್ತಿತ್ತ ತೂಗುವುದಾಗಲಿ, ಅಥವಾ ಬಾಯಿಂದ ಅನೇಕ ವಿಧ ಸಪ್ಪಳವನ್ನು ಮಾಡಿ ಈ ಸಪ್ಪಳಗಳಿಗೆ ಅವುಗಳು ಕಿವಿಗೊಡುವಂತೆ ಮಾಡುವದಾಗಲಿ ಯುಕ್ತವಲ್ಲ ಈ ರೀತಿ ಮಾಡಿದ್ದೆ ಆದರೆ ಅದಕ್ಕೆ ಈ ನಮ್ಮ ಕೆಟ್ಟ ಅಭ್ಯಾಸಗಳು ತಗಲಿ ಪದೇ ಪದೇ ತನ್ನನ್ನು ಅದೇ ರೀತಿ ನೋಡದಿದ್ದರೆ ಅದು ಇಡೀ ದಿನ ಕೂಗುವುದು ಈ ರೀತಿ ಅನೇಕ ಶಿಶುಗಳಲ್ಲಿ ಅಳುವ ಅಭ್ಯಾಸವನ್ನುಂಟುಮಾಡಿ ಅವುಗಳನ್ನು ಕೆಡಿಸಿ ಬಿಡುವುದು ನಮ್ಮಲ್ಲಿ ವಾಡಿಕೆಯಲ್ಲವೆ?

ಇಪ್ಪತ್ತು ಯಾ ಮೂವತ್ತು ವರುಷಗಳ ಮೊದಲು ತಾಯಂದಿರುಗಳಿಗೆ ಹಲವು ಶಿಶುಗಳಿದ್ದರೂ ಅವುಗಳಲ್ಲಿ ಈ ದುರಾಭ್ಯಾಸವನ್ನುಂಟು ಮಾಡುವ ಸಂದರ್ಭಗಳು ಈ ತಾಯಂದಿರುಗಳಿಗೆ ಇರಲಿಲ್ಲ. ಯಾಕಂದರೆ ಏಳೆಂಟು ಜನ ಮಕ್ಕಳನ್ನು ಸಂರಕ್ಷಿಸುವುದೂ ಪೂರ್ಣ ಮನೆಕೆಲಸಗಳನ್ನು ತಾನೇ ನಿರ್ವಹಿಸಿಕೊಳ್ಳುವುದೂ ಆ ತಾಯಂದಿರುಗಳಿಗೆ ವಾಡಿಕೆಯಾಗಿತ್ತು [illegible] ಅತಿರೇಕ ಜಾಗರೂಕತೆಯ [illegible] ಮಗುವಿನ ಲಾಲನೆ ಪಾಲನೆಗಳನ್ನು ಮಿತಿಯುಳ್ಳ ರೀತಿಗಳಲ್ಲಿಯೇ ಮಾಡುತ್ತಿದ್ದರು. ಅಗ್ಯೆ ಶಿಶುಗಳಿಗೆ ಅಳುವ ದುರಭ್ಯಾಸವು ಸಹ ಬಹಳ ಅಪರೂಪವಾಗಿತ್ತು. ಇಂಥಾ ತಾಯಿಯ ಶಿಶುವು ತನ್ನ ಸಮೀಪ ಯಾರೂ ಬಾರದಿರುವದನ್ನು ಕಂಡು ತನ್ನಷ್ಟಕ್ಕೆ ತಾನೇ ಆಡಲಿಕ್ಕೂ ವಿನೋದಪಡಲಿಕ್ಕೂ ಕಲಿಯುತ್ತಿತ್ತು.

ಎಲ್ಲಾ ಅಳುವ ಶಿಶುಗಳನ್ನು ಹಾಗೆಯೇ ಅಳಲಿಕ್ಕೆ ಬಿಡಬೇಕೆಂತ ಇದರಿಂದ ತಿಳಕೊಳ್ಳಕೂಡದು ಅಳಲಿಕ್ಕೆ ಕಾರಣವೇನೆಂಬದನ್ನು ನಾವು ಪ್ರಥಮತಾ ಚನ್ನಾಗಿ ಪರಿಶೋಧಿಸಿ ಅಳಲಿಕ್ಕೆ ಆಸ್ಪದ ಕೊಡುವ ಅಂಥಾ ಕಾರಣಗಳಿಗೆ ತಕ್ಕ ಉಪಾಯಗಳನ್ನು ಮಾಡತಕ್ಕದ್ದು

~~~~~~

ವಿಶ್ರಾಂತಿಯ ವಿಷಯ ಕೆಲಸ ಮಾಡುವುದು ಹ್ಯಾಗೆಂಬುವುದನ್ನು ತಿಳಕೊಳ್ಳುವುದಕ್ಕಿಂತಲೂ ವಿಶ್ರಾಂತಿಯನ್ನು ತಕ್ಕೊಳ್ಳುವುದು ಹ್ಯಾಗೆಂಬುವುದನ್ನು ತಿಳಕೊಳ್ಳುವುದು ಪ್ರಯಾಸ ಕೆಲಸಮಾಡುವುದು ಹ್ಯಾಗೆಂಬುವುದನ್ನು ಬೇಗನೇ ತಿಳಕೊಳ್ಳಬಹುದು ವಿಶ್ರಾಂತಿಯು ಏನೆಂಬುದನ್ನು ತಿಳಕೊಳ್ಳಲಿಕ್ಕೆ ಬಹಳ ವರುಷಗಳು ಬೇಕಾಗುವವು ಹಲವರಿಗೆ ವಿಶ್ರಾಂತಿಯು ಏನೆಂಬುದು ಎಂದೂ ತಿಳಿಯದು ಸ್ವೇಚ್ಛಾ ವ್ಯಾಯಾಮಿಯಾಗಿ ಅತ್ತಿತ್ತ ತಿರುಗಾಡುವುದು ವಿಶ್ರಾಂತಿಯಲ್ಲ ಏನೂ ಕೆಲಸ ಮಾಡದೆ ಸುಮ್ಮನೆ ಕೂತುಕೊಂಡಲ್ಲಿಯೇ ಕೂತರೆ ಇದರಿಂದ ವಿಶ್ರಾಂತಿಯು ದೊರಕದು ಹಗಲುರಾತ್ರೆ ಯಾವ ವಿಷಯದಲ್ಲಿಯೂ ಯೋಚನೆಯನ್ನು ಮಾಡದೆ ನಿದ್ರಿಸುವುದರಿಂದ ಸಹಾ ವಿಶ್ರಾಂತಿಯುಂಟಾಗಲಾರದು ಆದರ ಬದಲಾಗಿ ಹೀಗೆ ನಿದ್ರಿಸುವುದರಿಂದ ಮೈ ಇನ್ನಷ್ಟು ಕೊಬ್ಬಿ ಸ್ಥೂಲಗಾತ್ರರಾಗಿ ಶರೀರದಲ್ಲಿ ದಣಿವೂ ಆಯಾಸವೂ ಮತ್ತಷ್ಟು ಹೆಚ್ಚುವವು ಆದ್ದರಿಂದ ಯಾವದಾದರೂ ಒಂದು ಉದ್ಯೋಗವನ್ನು ಮಾಡುತ್ತಿರುವವನಿಗೆ ಆತನ ಉದ್ಯೋಗದಿಂದ ಉಂಟಾಗಬಹುದಾದ ದಣುವನ್ನು ಪರಿಹರಿಸುವ ಬಗೆ ಹೇಗೆ?

ಉದ್ಯೋಗಿಗೆ ನಿದ್ರೆಯಲ್ಲಿಯಾಗಲಿ, ಸುಮ್ಮನೆ ಕೂತುಕೊಳ್ಳುವುದರಲ್ಲಿಯಾಗಲಿ, ಅಥವಾ ಅತ್ತಿತ್ತ ತಿರುಗಾಡುವುದರಲ್ಲಾಗಲಿ ವಿಶ್ರಾಂತಿಯು ದೊರಕದು ಉದ್ಯೋಗದಲ್ಲಿ ಯಾವಾಗಲೂ ಇಂದ್ರಿಯಗಳಿಗೆ ಒಂದೇ ರೀತಿಯ ಪಾಟವು ಉಂಟಾಗುವುದು ದಿನಂಪ್ರತಿಯೂ ನೋಡಿದ್ದನ್ನೇ ನೋಡಬೇಕು, ಒಂದೇ ಸ್ವಭಾವದ ಕೆಲಸವನ್ನು ಮಾಡುತ್ತಿರಬೇಕು ಒಂದೇ ವಿಧದಲ್ಲಿ ಯೋಚಿಸುತ್ತಿರಬೇಕು. ವಿಶ್ರಾಂತಿಯು ದೊರಿಯಬೇಕಾದರೆ ಕೆಲಸ ತೀರಿದೊಡನೆ ಇಂದ್ರಿಯಗಳ ಉಪಯೋಗವು ಇತರ ಕೆಲವು ನವೀನ ರೀತಿಗಳಲ್ಲಿ ಮಾಡಬೇಕಾಗಿರುವುದು ಹ್ಯಾಗಂದರೆ ಒಂದು ಕೆಲಸವನ್ನು ಮಾಡುತ್ತಿರುವವನಿಗೆ ಚನ್ನಾಗಿ ಆಡುವುದರಿಂದ ವಿಶ್ರಾಂತಿಯು ದೊರಿಯುವುದು ಒಂದೇ ರಾಜ್ಯದಲ್ಲಿ ನೋಡಿದ್ದನ್ನೆ ನೋಡಿಕೊಂಡಿರುವವನಿಗೆ ಸ್ಥಳ ಬದಲಿಸಿದ್ದರಿಂದ ವಿಶ್ರಾಂತಿಯು ಸಾಧ್ಯವಾಗುವುದು ಯಾವಾಗಲೂ ವೃತ್ತಿಯಲ್ಲಿ ಯೋಚಿಸುತ್ತಿರುವವನನ್ನು ಯೋಚನೆಯೂ ಜವಾಬುದಾರಿಯೂ ಇಲ್ಲದ ವೈಕಪ್ಪವು ಚನ್ನಾಗಿ ವಿರಮಿಸುವುದು ತನ್ನ ವೃತ್ತಿಯಲ್ಲಿ ಸಾಧಿಸುತ್ತಿರುವ ಕೆಲಸವಲ್ಲದೆ ಇತರ ಕೆಲಸಗಳು ಉದ್ಯೋಗಿಗೆ ತಕ್ಕಮಟ್ಟಿನ ವಿಶ್ರಾಂತಿ ಕೊಡಬಹುದೆಂದು ಹೇಳಬಹುದು ಆದರೆ ಇವೆಲ್ಲವುಗಳಿಗಿಂತಲೂ ವಿಶ್ರಾಂತಿಗೆ ಮುಖ್ಯವಾದದ್ದು ಯಾವದು? ನಿಷ್ಕಳಂಕ ಹೃದಯವು, ಒಳ್ಳೇ ಸ್ವಭಾವವು, ಕುಂದಿಲ್ಲದ ಆರೋಗ್ಯವು

~~~~~~

ಮಳೆಗಾಲ ಪ್ರಾರಂಭದಲ್ಲಿ ಅಳಿಂಬೆ ಯಾ ನಾಯಿಕೊಡೆ ನಮ್ಮ ಪಟ್ಟಣದಲ್ಲಿ ಅಲ್ಲಲ್ಲಿ ಮಾರಾಟಕ್ಕೆ ಬರುವುದು ಇತರ ಪ್ರಾಂತ್ಯಗಳಲ್ಲಿಯೂ ಇದು ಈಗ ಮನೆಗಳ ವಠಾರಗಳಲ್ಲಿ ಬೆಳೆದಿರುವುದನ್ನು ಜನರು ಪದಾರ್ಥಕ್ಕೆ ಉಪಯೋಗಿಸುವುದುಂಟು. ಈ ಅಳಿಂಬೆಯ ವಿಷಯ ಜನರು ಅಲ್ಪಸ್ವಲ್ಪ ತಿಳಕೊಳ್ಳುವುದು ಪ್ರಕೃತ ಸಮಯದಲ್ಲಿ ಉಪಯುಕ್ತ. ಅಳಿಂಬೆಯು ನಾಯಿಪಲ್ಯ ಜಾತಿಗೆ ಸೇರಿದ ವನಸ್ಪತಿ [illegible] ಹುಟ್ಟಿರುವ ಕೆಲ ಜನರು ಮೊದಲಾದ್ದ [illegible] ಅಲ್ಲಿ ಈ ಅಳಿಂಬೆಯು ನೋಡಲಿಕ್ಕೆ ಸಿಕ್ಕುವದು. ಈ ಅಳಿಂಬೆಯಲ್ಲಿ ಹಲವು ಜಾತಿಗಳಿರುವವು. ಇವುಗಳಲ್ಲಿ ಕೆಲವನ್ನು ತಿಂದರೆ ಸಾಯುವರೆಂಬದನ್ನು ವಾಚಕರು ತಿಳಿದಿರಲಿಕ್ಕೆ ಸಾಕು. ಇಂಥ ವಿಷ ತುಂಬಿರುವ ಅಳಿಂಬೆಯು ಜಾತಿಯು ಯಾವುದೆಂದು ಕಂಡುಕೊಳ್ಳಲಿಕ್ಕೆ ಅಮೇರಿಕದಲ್ಲಿ ಅನೇಕ ಡಾಕ್ಟ್ಯರರುಗಳು ಪ್ರಯತ್ನಪಡುವವರಾದರು ಆದರೆ ಇವರ ಪ್ರಯತ್ನಗಳು ನಿಷ್ಫಲವಾದರೂ ಇವರು ಅಳಿಂಬೆಯನ್ನು ಚನ್ನಾಗಿ ಪರಿಶೋಧಿಸಿ ಅದನ್ನು ಪದಾರ್ಥದ ಬಗ್ಯೆ ಉಪಯೋಗಿಸಬಹುದೋ ಎಂಬಂತವನ್ನು ನಿರ್ಧರಿಸಿರುವರು ಅಳಿಂಬೆಯಲ್ಲಿ ಶರೀರ ಪುಷ್ಟಿಗೆ ಬೇಕಾದ ಯಾವ ವಸ್ತುವೂ ಇರುವುದಿಲ್ಲ. ಅದಕ್ಕೆ ವಿಶೇಷವಾದ ಯಾವ ರುಚಿಯೂ ಇಲ್ಲ ಇತರ ಪದಾರ್ಥಗಳೊಂದಿಗೆ ಬಾಯಿ ರುಚಿಗೆ ಮಾತ್ರವೇ ಇದನ್ನು ಉಪಯೋಗಿಸುವರು ಒಂದು ವಿಧದ್ದು ಅಳಿಂಬೆಯು ವಿಷಕರವಲ್ಲ, ಇನ್ನೊಂದು ವಿಷಕರ, ಯಾಕೆಂಬುದನ್ನು ಯಾರೂ ಹೇಳಲಾರರು ಇವುಗಳಲ್ಲಿ ವಿಷಕರವಾದವುಗಳು ಕೆಲವರು ಎಣಿಸುವಂತೆ ಕಹಿಯಾಗಿ ಇರುವುದೂ ಇಲ್ಲ. ಏನೂ ಪ್ರಯೋಜನವಿಲ್ಲದೆ ಅನುಮಾನಕರವಾದ ಅಳಿಂಬೆಗಳನ್ನು ತಿನ್ನುವುದು ಮನುಷ್ಯರಿಗೆ ಸಲ್ಲದೆಂದು ಈ ಡಾಕ್ಟ್ಯರರು ನಿರ್ಧರಿಸಿರುವರು

~~~~~~

ಸರ್ವ ಜನರ ತಿಳುವಳಿಕೆ ಬಗ್ಯೆ.

~~~~~~

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನವು. ದಿಗ್ದೇಶಗಳಲ್ಲಿ ಕೀರ್ತಿಪಟ್ಟ ಮಹಾ ಪುಣ್ಯಕ್ಷೇತ್ರವಾಗಿರುತ್ತದೆ ಆದರೆ ಈ ಸುಬ್ರಹ್ಮಣ್ಯವು ದೊಡ್ಡದಾದ ಪೇಟೆ ಪಟ್ಟಣವಲ್ಲದೆ ಚಿಕ್ಕದಾದ 3 ಯಾ ನಾಲ್ಕು ಅಂಗಡಿಗಳಿಂದ ಮಾತ್ರವೇ ಆಡಗಿರುತ್ತದೆ ಇಲ್ಲಿಗೆ ಬರತಕ್ಕ ಭಕ್ತಾದಿಗಳಿಗೆ ಸ್ವಾಮಿಗೆ ಅರ್ಪಿಸುವ ಬಗ್ಯೆ ಅವಶ್ಯವಿರುವ ಹಣ್ಣು ಕಾಯಿ ವಗೈರೆ ಸಾಮಾನುಗಳನ್ನು ಇಲ್ಲಿಯ ವ್ಯಾಪಾರಸ್ಥರು ಕ್ರಮಕ್ಕೆ ಮೀರಿದ ಧಾರಣೆಗೆ ವಿಕ್ರಯಿಸಿ ಹೆಚ್ಚಿನ ನಷ್ಟಕ್ಕೆ ಒಳಪಡಿಸುವದರಿಂದ ಈ ಕೆಳಗೆ ನಮೂದು ಮಾಡಿದ ಏರ್ಪಾಡು ಮಾಡಿರುತ್ತದೆ, ಏನಂದರೆ —

ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯವರಿಗೆ ಸಮರ್ಪಣೆ ಬಗ್ಯೆ ಬಾಳೆಹಣ್ಣು, ತೆಂಗಿನಕಾಯಿ ಮತ್ತು ಚಿನ್ನಬೆಳ್ಳಿಗಳ ಬಾಬತು ಹರಿಕೆ ಸಾಮಾನುಗಳನ್ನು ಕೂಡಾ ಎಲ್ಲಾ ಜನರಿಗೆ ಆದಷ್ಟು ಕಮ್ಮಿ ಮೌಲ್ಯಕ್ಕೆ ವಿಕ್ರಯಿಸುವರೆ ಪೇಟೆಯಲ್ಲಿ ದೇವಸ್ಥಾನದ ಕಡೆಯಿಂದ ಅಂಗಡಿ ಏರ್ಪಡಿಸಿರುತ್ತದೆ ಆದಪ್ರಯುಕ್ತ ಸರ್ವ ಜನರು ಸ್ವಾಮಿ ದರುಶನಾರ್ಥವಾಗಿ ಬಂದಾಗ್ಯೆ ಅವಶ್ಯವಿರುವ ವಿಶಿಷ್ಟ ಹರಿಕೆ ಸಾಮಾನುಗಳನ್ನು ದೇವಸ್ಥಾನದ ಅಂಗಡಿಯಿಂದಲೇ ಕೊಂಡುಕೊಂಡು ದೇವಸ್ಥಾನಕ್ಕೆ ತರುವಂತೆ ಅಪೇಕ್ಷಿಸೋಣಾಗುತ್ತದೆ

B Bhoja Rau
Managing Moktesar,
Shri Subrahmanya Swami Temple.

~~~~~~

ಜೀನಸುಗಳ ಧಾರಣೆ. ಮಂಗಳೂರು	(ರೂ೦)
ಕೂಳೂರು ಮಸ್ಸತಿ ಅಕ್ಕಿ	4—11—0
ಬುದ್ದು ಮಸ್ಸತಿ ,	4—6—0
ಮಸ್ಸತಿ ದುಯಂ ,,	4—5—0
ವಕ್ಲ ಸುಗ್ಗಿ ,,	4—4—0
ಸುಗ್ಗಿ ದುಯಂ ,,	4—2—5
ಮಸ್ಸತಿ ಬೆಳ್ತಿಗೆ ,, …	5—8—0
ರಂಗೂನ್ ಬೆಳ್ತಿಗೆ ಗೋಣಿ .	8—2—0
ಹುರುಳಿ ಗೋಣಿಗ ಮುಡಿ 2ರ	6—0—0
ಉಪ್ಪು ಗೋಣಿ ಗರ …	3—12—0
ಕೊಬ್ರಿ ಖಂಡಿ ಗರ . ..	105—0—0
ಕೊಬ್ರಿ ಎಣ್ಣೆ ಮಣ . . . …	6—12—0
ಕಾಫಿ ಖಂಡಿ ಗರ … … …	175—0—0
ಕಾಳು ಮೆಣಸು ಖಂಡಿ … …	120—[illegible]
ಹೊಸ ಬಿಳಿ ಗೋಟು ಅಡಿಕೆ	[illegible]
[illegible] ಗೋಟು	[illegible]
[illegible]	[illegible]
~~~~~~

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಎಣ್ಣೆ. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ

ಬಾಟ್ಲಿ ಒಂದರ 8 ಆಣೆ

ಕುಂತಲವಿಹಾರಿ ಎಣ್ಣೆ

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ

ಬಾಟ್ಲಿ ಒಂದರ 5 ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು ಇದನ್ನು ಹಚ್ಚಿಕೊಂಡರೆ ತಲೆಯು ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ರೆ ಬೀಳುವದು

ಬಾಟ್ಲಿ ಒಂದರ 6 ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ ಇದರಿಂದ ಮೆದುಳು ತಂಪಾಗುವದು ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ

ಬಾಟ್ಲಿ ಒಂದರ 6 ಆಣೆ

ಮಾಲತಿ ಅತ್ತರು.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು ಇದರ ಪರಿಮಳವು ಹೆಚ್ಚು ದಿವಸಗಳ ವರೇಗ ಹೋಗುವದಿಲ್ಲ ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿಯಬರುವದು ಎಲ್ಲಾ ಅತ್ತರುಗಳಿಗಿಂತ ಇದು ಉತ್ತಮ ಬಾಟ್ಲಿ ಒಂದರ ಕಿಮ್ಮತ್ತು 0—12—0

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕೆ

ಕೆ. ಗೋಪಾಲ್ ರಾವ್,
ನಂಬ್ರ 3 ಕಂಟ್ರಾಕ್ಟರ್ ಬಿಲ್ಡಿಂಗ್ ಗಿರ್ಗಾಂವ ಮುಂಬಯಿ

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವ ದರ

	೧ ಸಾರಿ	೪ ಸಾರಿ	೧೩ ಸಾರಿ	೨೬ ಸಾರಿ	೫೨ ಸಾರಿ
ಇಡೀ ಪಾನು	ರೂ ೧೦	ರೂ ೩೨	ರೂ ೭೦	ರೂ ೧೧೦	ರೂ ೧೫೦
ಅರ್ಧ ಪಾನು	,, ೬	,, ೧೭	,, ೩೮	,, ೬೦	,, ೭೫
ಕಾಲು ಪಾನು	,, ೪	, ೯	, ೨೦	,, ೩೨	, ೪೫
ಅರೆಕಾಲು ಪಾನು ,,	೩	, ೭	,, ೧೩	,, ೧೮	,, ೩೫

ಸೂಚನೆ—ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ವಾಚಕರೂ 'ಮೆನೇಜರ್, ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ' ಎಂಬ ವಿಳಾಸಕ್ಕೆ ಬರೆಯುವದು ಎಲ್ಲಾ ಪ್ರಕಟಣಗಳ ಫೀಸನ್ನು ಮುಂದಾಗಿ ತೆರತಕದ್ದು

ಸ್ವದೇಶಾಭಿಮಾನಿಯ ಚಂದಾ ನಿರ್ಣಯ

ಟಪ್ಪಾಲು ಹಾಸಲು ಸೇರಿ ೧ ವರುಷಕ್ಕೆ ೩ ರೂ ೯ ಆ ಟಪ್ಪಾಲು ಹಾಸಲು ಇಲ್ಲದೆ ೧ ರೂ ೪ ಆ ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ ಅಂಚೆ ವೆಚ್ಚ ಸೇರಿ ೧ ರೂ ೯ ಆ ಟಪ್ಪಾಲು ಹಾಸಲು ಸಹಿತ ಅರ್ಧ ವರುಷಕ್ಕೆ ೧ ರೂ ೧ ಆ

BERNA WATCH COMPANY.

ಬರ್ನಾ ವಾಚು ಕಂಪೆನಿ.

ಕಿಸೆ ಗಡಿಯಾರುಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿರುವುದು ಗೋರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಗ್ಗವಾದ ಬೆಲೆಯು ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿಕೊಡುವವು

ನಮ್ಮ 'ಮೆಕ್ಸಿಮ್' ವಾಚನ್ನು ಬೆರವಸಿಯಿಂದ ಕೊಂಡುಕೊಳ್ಳಿರಿ
ನಿಕಲ್ ಕೇಸಿನಲ್ಲಿ ರೂ ೧೦ ೦ ೦
ಬೆಳ್ಳಿ ಕೇಸಿನಲ್ಲಿ ರೂ ೧೪ ೮ ೦
ನಮ್ಮ 'ಮ್ಯಾಡಿ ಪಿ' ನಿಕಲ್ ಕೇಸಿನಲ್ಲಿ ರೂ ೧೪ ೦ ೦
ಬೆಳ್ಳಿ ಕೇಸಿನಲ್ಲಿ ರೂ ೧೮-೮ ೦
ಕೆಟಲಾಗನ್ನು ಉಚಿತವಾಗಿ ಕಳುಹಿಸಿ ಕೊಡುವೆವು



ನಮ್ಮ 'ಚಾರ್ಮರ್' ನಿಕಲ್ ಕೇಸಿನಲ್ಲಿ ರೂ ೧೬ ೦ ೦
ಬೆಳ್ಳಿ ಕೇಸಿನಲ್ಲಿ ರೂ ೨೧-೦ ೦
ನಮ್ಮ 'ವರ್ಡಲಿ.' ನಿಕಲ್ ಕೇಸಿನಲ್ಲಿ ರೂ ೧೮-೦-೦.
ಸಿಲ್ವರ್ ಕೇಸಿನಲ್ಲಿ ರೂ. ೨೩ ೦-೦.
ನಮ್ಮ 'ಬೆಸ್ಟ್' ನಿಕಲ್ ಕೇಸಿನಲ್ಲಿ ರೂ ೨೧-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೭-೦-೦.

ಎಲ್ಲಾ ಗಡಿಯಾರುಗಳು ಜಂಟ್ಸ್ ಸ್ಯಾಜಿನಲ್ಲಿರುವವು ವಾಚುಗಳನ್ನು ೪ ಆಣೆ ಕೆಚ್ಚಿಗೆ ಖರ್ಚಿನಲ್ಲಿ ವಿ ಪಿ ಮಾಡಿ ಕಳುಹಿಸುವೆವು ನಂಬ್ರ 59 ಎಸ್‌ಪ್ಲೆನೇಡ್ ರೋಡ್ ಮುಂಬಯಿ ಆಪೀಸಿನಲ್ಲಿಯೂ ಮತ್ತು ಹಿಂದೂಸ್ಥಾನದಲ್ಲಿರುವ ಎಲ್ಲಾ ವಾಚು ಮಾರಾಟವರಲ್ಲಿಯೂ ಕ್ರಯಕ್ಕೆ ದೊರಕುವವು

ಅನುಮಾನಪತ್ರ ಬಾಟ್ಲಿಯೊಂದಿಗಿರುವುದು. { **ಸಿದ್ಧಲಕ್ಷ್ಮೀ ವಿಲಾಸ. ಧೃತ** } ಕ್ರಯ ಬಾಟ್ಲಿ ೧ಕ್ಕೆ 12 ಆಣೆ

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು (ಆಸನದಲ್ಲಿ) ಗುದದ್ವಾರದ ಹತ್ತರ ಬೀಳುವಂಥಾ ಹೊತುಗಳೂ, ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವೃಣಾದಿ ಬಾವುಗಳೂ, ಖಜ್ಜಿ ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು ರಕ್ತಶುದ್ಧಿಗೆ ಇದು ದಿವ್ಯ ಔಷಧವಾಗಿರುವದು.

ಈ ಔಷಧಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು. ಮುಲ್ಕಿ [illegible] ಮುಕುಂದ ಪ್ರಭು ಮತ್ತು ಕಂಪೆನಿ, ಮಂಗಳೂರು. [illegible]

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು. ಇಂಗ್ಲೀಷ್ ಮತ್ತು ನೇಟಿವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರ ಸಮಸ್ತ ವಿಧವಾದ ಬೀಜಗಳು ಲೇಬು, ಕಿತ್ತಳೆ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟಿವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು ಬರದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕೆಟಲಾಗ್ [illegible]

[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ **ನಪುಂಸಕತ್ವ ನಾಶಕವೂ** ಆಗಿದೆ. ಅರ್ಧ ತೊಲೆಗೆ ೨ ರೂ

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷ**ಗಳನ್ನೂ ಬಂಜೆತನವನ್ನೂ** ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ **ಮೇಲೆ ಅತ್ಯುತ್ತಮವು.** ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ **ದಾರುಣವಾದ** ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ**ಪಡಿಸುವದು. ತಿಂಗಳ** ಔಷಧಕ್ಕೆ ಒಟ್ಟು ೩ ರೂ ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆ**ಗಳನ್ನು** ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ ಅನೇಕ **ವನೌಷಧಗಳಿಂದ** ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು **ತೊಲೆಗೆ** ೨ ರೂ.

೯. ಮಹಾಜ್ವರಾಂಕುಶ ಮಾತ್ರೆ ಚಳಿಜ್ವರ, ವರಿಸೆಯ ಜ್ವರ **ಮುಂತಾಗಿ** ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುಲ್ಮ, ಶ್ವಾಸ, ಕಫ, **ಕ್ಷಯಗಳ ಮೇಲೆ** ರಾಮಬಾಣವು. ರಾತಲಿಗೆ ೨ ರೂ.

೧೧ ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು **ಹೋಗ**ಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨ ವಾತಮುರಾರಿ ಬಾಮ್. ತಲೆನೋವು, ಎದೆನೋವು, **ಸೊಂಟ**ನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. **ಬಾಟ್ಲಿಗೆ** ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ ಕರಡಿಗೆಗೆ ೪ ಆಣೆ. ೩ ಕರಡಿಗೆಗೆ ೧೧ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಲ್ಲಿ ಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ — **B. M. Nathu & Co,**

Ayurvedic Chemists

Vepery Post, MADRAS.

ತ್ವರೆ ಮಾಡಿರಿ! ಮನೋಹರ ಅತ್ತರು ಕೊಂಚ ಬಾಟ್ಲಿಗಳು ಇವೆ।

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಸುವಾಸಿಕವಾದ ಅತ್ತರು. ಇದರ ಪರಿಮಳವು ಹೆಚ್ಚು ದಿವಸಗಳ ವರೇಗೆ ಹೋಗುವದಿಲ್ಲ. ಇದು ಚಲೋ ಬಾಟ್ಲಿಯಲ್ಲಿದ್ದು ಅದನ್ನು ಇಡುವದೆ ಒಂದು ಪೆಟ್ಟಿಗೆ ಸಮೇತ ಸಿಕ್ಕುವದು. ಬಾಟ್ಲಿ ಒಂದರ ಕಿಮ್ಮತ್ತು 0—12—0 ಮೂರು ಬಾಟ್ಲಿಗಳಿಗೆ 2—2—0 6 ಬಾಟ್ಲಿಗಳಿಗೆ 4—0—0

ಮಾಲತಿ ಅತ್ತರು.

ಇದರ ವಿಷಯವಾಗಿ ಹೆಂಗಸರೂ ಗಂಡಸರೂ ಬಹಳವಾಗಿ ಕೊಂಡಾಡುತ್ತಾರೆ ಇದರ ಪರಿಮಳವು ಹೆಚ್ಚು ಸಮಯದ ವರೇಗೆ ಇರುತ್ತದೆ ಬಾಟ್ಲಿ ಒಂದರ ಕಿಮ್ಮತ್ತು 0—10—0 3 ಬಾಟ್ಲಿಗಳಿಗೆ 1—12—0. 6 ಬಾಟ್ಲಿಗಳಿಗೆ 3—4—0 ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬೇಗನೇ ಬರದು ಕೊಳ್ಳೀರಿ.

ಸೋಲ್ ಏಜಂಟ್

ಕೆ. ಗೋಪಾಲ್ ರಾವ್,

ನಂಬ್ರ 3 ಕಂಟ್ರಾಕ್ಟರ್ಸ್ ಬಿಲ್ಡಿಂಗ್

ಚರ್ನಿರೋಡ್ ಗಿರಗಾಂ, ಮುಂಬಯಿ

ರೊಯಲ್ ಇಂಡಿಯನ್ ಬಾಮ್.

ಇದರಿಂದ ವಾತ, ಸಂಧಿವಾತ, ತಲೆನೋವು, ಸೊಂಟದ ನೋವು, ಘಾಯ, **ಊತ** ಮುಂತಾದ ಎಲ್ಲಾ ತರದ ನೋವುಗಳು ಖಾತ್ರಿಯಿಂದ ನಿಲ್ಲುವದು. ಸಾವಿರಾರು **ಜನರು** ಇದರಿಂದ ಗುಣ ಹೊಂದಿದ್ದುತ್ತಾರೆ. ಬಾಟ್ಲಿ ಒಂದರ 0—8—0.

ಏಜಂಟರು, ಪರ್ಲ ಎಂಡ್ ಸನ್ಸ್ ಮಂಗಳೂರು.

ವೆಂಕಟ ರಾವ್, ಉಡುಪಿ.

ಸ:—ಮನೋರಾ ಮತ್ತು ಕಂಪನಿ, ಮುಂಬಯಿ.

ರಾಮರಾವ್ ನಾನಾಬಾಯಿ ಕಾಳೆ ಇವರ,



ಸುರಂಗಿ ಅತ್ತರು

ಇದು ಸುರಂಗಿ ಹೂಗಳಿಂದಲೇ ತಯಾರಿಸಲ್ಪಟ್ಟ ಅತೀ ಸುವಾಸಿಕ ಮತ್ತು ಮನೋಹರವಾದ ಅತ್ತರು ಇಂಗ್ಲಿಷು ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು. ಇದರ ಸುವಾಸಿಕವಾದ ಮತ್ತು ಮನೋಹರವಾದ ಪರಿಮಳವು ಹೆಚ್ಚು ಸಮಯದ ವರೇಗೆ ಹೋಗುವದಿಲ್ಲ ಈ ನಮ್ಮ ಅತ್ತರನ್ನು ಪರೀಕ್ಷಿಸದ ಜನರು ಹಾಗೆ ಒಂದು ಸಾರಿ ಪರೀಕ್ಷಿಸಿ ನೋಡಬಹುದು. ಬಾಟ್ಲಿ ಒಂದರ ಕಿಮ್ಮತ್ತು ೧—೪—೦.

ದಿಲ್ ಖುಷ್. ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಈ ಅತ್ತರನ್ನು ಒಂದು ಸಾರಿ ತರಿಸಿ ನೋಡಿರಿ ಇದಕ್ಕೆ ಮನೋಹರವಾದ ಪರಿಮಳವು ಬರುತ್ತದೆ. ಬಾಟ್ಲಿ ಒಂದರ ಕಿಮ್ಮತ್ತು ೧—೦—೦.

ಜುಯಿ. ಈ ಅತ್ತರಿನ ವಿಷಯವಾಗಿ ಹೆಂಗಸರೂ ಗಂಡಸರೂ ಬಹಳವಾಗಿ ಕೊಂಡಾಡುತ್ತಾರೆ ಇದರ ಮನೋಹರವಾದ ಸುವಾಸನೆಯು ಹೆಚ್ಚು ದಿವಸಗಳ ವರೇಗೆ ಇರುತ್ತದೆ. ಬಾಟ್ಲಿ ಒಂದರ ಕಿಮ್ಮತ್ತು ೦—೧೪—೦.

ನಾವು ತಯಾರಿಸುವ ಅತ್ತರುಗಳಲ್ಲಿ ಸ್ಪಿರಿಟ್ ವಗೈರೆ ಏನೂ ಇಲ್ಲದೆ **ತಾಜಾ** ಬಕ್ಷಿ ಇಟ್ಟು ತೆಗದದ್ದಾಗಿರುತ್ತದೆ.

ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು

ಎಲ್ಲಾ ಮಾಹಿತಿಗೂ, ಅತ್ತರುಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ಸಿಕ್ಕುವದು.

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕೆ

ಕೆ. ಗೋಪಾಲ್ ರಾವ್,

ಅಬಲಾ ಸಂಜೀವಿನೀ ಗುಳಿಗೆಗಳು

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮ ಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ. ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ, ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ. ಗರ್ಭಕೋಶದ ರೋಗರುಜಿಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ. ದೇಹದಲ್ಲಿ ಯಾವದೊಂದು ಅಕ್ರಮ ಗುರ್ತು ಕಂಡುಬಂದಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು. ಉಪಯೋಗಿಸಿದವರು ಅವುಗಳ ಬಗ್ಯೆ ಶಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ. ವಿಶೇಷ ಮಾಹಿತಿಯ ಕೆಟಲಾಗನ್ನು ಉಚಿತವಾಗಿ ಕಳುಹಿಸುವೆವು. ಔಷಧಿ ಕ್ರಯ ೧ ರೂ ವಿ. ಪಿ. ಅಂಚೆ ಹಾಸಲು ೪ ಆಣೆ.

ಮಿಡ್‌ವ್ಯಾಫ್‌ರಾದ ಕಮಲಾಬಾಯಿ, ಜಿ ಎಮ್

THE HINDU SOAP MANUFACTURING CO,

ಹಿಂದೂ ಸೋಪ್ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ. ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ. ಚರಬಿ ವಿರಹಿತವಾದದ್ದು. ಮಾದರಿಗಳೂ, ವಿಶೇಷ ಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು.

ಬಿ ದತ್ತ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂದುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು. ಡಬ್ಬಿ ೧ರ ಕ್ರಯ 0 8 0

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ ೨—೮—0

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ. ವಿ ಪಿ ಖರ್ಚು ಪ್ರತ್ಯೇಕ.

ಟಿ ಬಾಬುರಾಯರ

ಆಯುರ್ವೇದಿಕ್ ಔಷಧಾಲಯ,

ಸೆಟ್ರಲ್ ಮಾರ್ಕೆಟ್ ರಸ್ತೆ, ಮಂಗಳೂರು, ದ ಕ

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಪು ಉತ್ತರ ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ — ರಂಗಪ್ಪಾ ರಾಮಕೃಷ್ಣ ಕವಿ,

ಮನೋಹರ ಬಿಲ್ಡಿಂಗ್ ಲವಂಚಾಲ, ಮುಂಬಯಿ

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,

ಮಂಗಳೂರು, ದ ಕ

ನಮ್ಮಲ್ಲಿ ಎಲ್ಲಾ ತರದ ಚೀಟು ಒಪ್ಪಿನ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲಮೆನ ಸ್ಟೋವ್ಸ ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು, ಎಲ್ಲಾ ಜಾತಿಯ ಕೊಡೆಗಳು ರಖಂ ಲಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

ಡಾಕ್ಟರ್ ವಾಮನ ಗೋಪಾಲರವರ

ಐಯೊಡ್ಯಾಡಿನಿಂದ ಕೂಡಿರುವ

ಸರ್ಸಪರಿಲ್ಲಾ.

ರಕ್ತಶುದ್ಧಿ ಬಗ್ಗೆ ಅತ್ಯುತ್ಕೃಷ್ಟವಾದ ಔಷಧಿಯು. ಸಾವಿರಾರು ಜನರು ಇದನ್ನು ಸೇವಿಸಿದ ಅನುಭವದಿಂದ ಅತ್ಯಂತ ಗುಣಕಾರಿಯೆಂದು ಕಂಡುಕೊಂಡಿರುವರು. ಬಹುಕಾಲದ ವಾತ, ಚರ್ಮರೋಗಗಳು, ಗರ್ಮಿರೋಗ, ಪಕ್ಷವಾತ, ಅಶುದ್ಧ ರಕ್ತದಿಂದ ಉಂಟಾಗಬಹುದಾದ ಇತರ ರೋಗಗಳು, ಬಲಹೀನತೆ ಈ ಎಲ್ಲಾ ರೋಗಗಳಿಗೆ ಖಾತ್ರಿಯಾದ ಔಷಧಿಯೆಂದು ಕಳೆದ ಐವತ್ತು ವರುಷಗಳಿಂದ ಎಲ್ಲಾ ರಕ್ತಶುದ್ಧಿಯ ಔಷಧಿಗಳಲ್ಲಿ ಶ್ರೇಷ್ಠವಾದುದೆಂತ ಭೂಲೋಕದಲ್ಲೆಲ್ಲಾ ಕೀರ್ತಿಗೊಂಡಿರುತ್ತದೆ. ದಾತು ಪುಷ್ಟಿಗೆ ಉತ್ತಮವಾಗಿರುವುದರಿಂದ ಇದರ ಪ್ರತಿನಿತ್ಯದ ಸೇವನೆಯು ಆಲೋಚನಾಶಕ್ತಿಯನ್ನು ಬಲಗೊಳಿಸಿ ಜ್ಞಾಪಕಶಕ್ತಿಯನ್ನುಂಟುಮಾಡುವುದು.

ಕ್ರಯ ಬಾಟ್ಲಿ ಒಂದಕ್ಕೆ ರೂ. ೧ ಆ. ೪, ವಿಪಿಸಹಾ ಟಪ್ಪಾಲು ದಸ್ತೂರಿ ೫ ಆಣೆ.

ಗುಣಕಾರದ ಮುಲಾಮು ೪— ಆಣೆ. ಟೂತ್ ಪೌಡರ್ ಆಣೆ ೨.

[illegible]

ಪ್ರಸಿದ್ಧವಾದ [illegible] ಗಳು.

[illegible] ಅಗರ್ (ಊದು) ಬತ್ತಿಗಳು ಸೇರು ೧ಕ್ಕೆ ರೂ. [illegible] ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳು, [illegible] ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ. ಮಕ್ಕಳಿಗೆ ಬರುವ ಬಾಲಗ್ರಹ (ಛಳಿ) ಬೇನೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ ಎಲ್ ಉಪಾಧ್ಯಾಯ, ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲಾ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು — ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ — ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯುಳ್ಳವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಬದ್ಧವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಬಗ್ರಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವದು.

ಹೆಂಗಸರೂ ಜೀವವಿಮೆ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ —ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜೆಂಟ್, ಮಂಗಳೂರು ದ ಕನ್ನಡ.

ಅತಿ ಉತ್ತಮವಾದ ಬೀಜಗಳು—ಗಿಡಗಳು—ಹೂವು ವಗೈರೆ

ದೇಶಬಾಂಧವರೇ!

—ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟಿವ್ ತರಕಾರಿ ಬೀಜಗಳೂ, ಹೂವಿನ ಬೀಜಗಳೂ, ಬೇಲಿಗಳಿಗೂ ಮತ್ತು ಕಾಪಿ ಗಿಡಗಳ ನೆರಳಿಗೆ ಅನುಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ. ಇವೂ ಅಲ್ಲದೆ ಉತ್ತಮವಾದ ಕಟ್ಟಿದ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ, ಗುಲಾಬೀ ಗಿಡಗಳೂ, ಎಲ ಜಾತಿಯ ಗಿಡಗಳೂ, ವಗೈರೆ ಬಹಳ ಕಮ್ಮಿ ದರಗಳಿಗೆ ಬೇಕಾದಲ್ಲಿ ರವಾನಿಸಲ್ಪಡುವುದಲ್ಲದೆ ಕೆಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸುವೆವು. ತರಕಾರೀ ಮತ್ತು ಹಣ್ಣುಗಳು ಸಹಾ ಕಳುಹಿಸಲ್ಪಡುವವು. ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಿ ಎಲ್ ಬೈಯಣ್ಣ ಬ್ರದರ್ಸ್,

67 ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ

ಅಪೂರ್ವವಾದ ಅತ್ಯುತ್ತಮ ಸಾಹಿತ್ಯಗಳು

ದಿಲ್‌ಭಾರ್ ತೈಲ್ಯ ಶೀಸೆ 1ಕ್ಕೆ	1-2-0	ಕಾಮಿನಿ ಅತ್ತರ್ ಶೀಸೆ 1ಕ್ಕೆ	1-8-0
ಕಾಮಿನಿ ,, ,, ,,	1-0-0	ದಿಲ್‌ಭಾರ್ ,, ,, ,,	1-8-0
ಕೇಶರಂಜನ ,, ,, ,,	0 12-0	ಸ್ಪ್ರಿಂಗ್‌ಜುವೆಲ್ ,, ,,	1-8-0
ಕುಂತಲ ಕೌಮುದಿ ,	0 12 0	ಗುಲ್‌ಶನ್ ,, , ,	1-8-0
ವಸಂತ ಕುಸುಮ ,, ,,	0 10 0	ಪನ್ನೀರ್ ಎಸೆನ್ಸ್ , ,,	0-8-0
ಭೃಂಗಾಮಲಕ , ,	0 8-0	ಸುಶೀಲಮಾಲತಿ ಡಬ್ಬಿ 1ಕ್ಕೆ	0-3-0
ಕೇಶಮೋಹನ ,, ,,	0-7-0	ಪರಿಮಳ ತಾಂಬೂಲಮಿತ್ರ ,,	0-3-0
ರಕ್ತಶೋಧಕ ,, ,	0 12 0	ಬೆಂಗಾಲ್ ಕಾರ್ಬೋಲಿಕ್	
ದೇಸಿ ಅತ್ತರ್ ಶೀಸೆ 1ಕ್ಕೆ	2-0-0	ಟೂತ್ ಪೌಡರ್ ಡಬ್ಬಿ 1ಕ್ಕೆ	0-2-6

ಸ್ವದೇಶಿ ಶರಟ್ ಬಟನ್‌ಗಳು ಶಿವಾಜಿ, ತಿಲಕ್, ಲಾಲಾಲಜಪತರಾಯಿ, ಆರ್ಯಮಾತಾ ಲಕ್ಷ್ಮಿ, ಶೀತಾರಾಮ ವಗೈರೆ, ಸೆಟ್ 1ಕ್ಕೆ 0—1—6 ರಿಂದ 0—6—6.

ವಿಳಾಸ:—

ದಿ. ಊಲನ್ ಮಾರ್ಟ್,

ಆಸ್ಪತ್ರೆ ಎದುರು,

ಮಂಗಳೂರು.

SMALL-POX BALM.

ಸಿಡುಬು ರೋಗಕ್ಕೆ ಮುಲಾಮು

ಗುಣಕಾರಿ ಎಂದು ಹೆಸರು ಪಡೆದಿರು ತ್ತದು

ಸುವ ... ಔಷಧ ಎಂದು ... ರುವ್ವದು

ಮೈಲೆಯುಲ್ಲಿ ಕೀವು ತುಂಬುತ್ತಿರುವಾಗ ಬರುವ ಜ್ವರವನ್ನು [illegible]

ಸಿಡುಬುರೋಗದ ಅಂಟುವ ಸ್ವಭಾವವು [illegible] ಕಾಣಿಸಿಕೊಂಡ ನಂತರ ಇವರ ಸೋಂಕು [illegible] ತುಂಬಿರುವ ಮೈಲೆಯು [illegible] ತ್ತಿರುವಾಗ್ಗೆ ಅಲ್ಲಿಲ್ಲಿ [illegible] ಈ ಫೋಡಗಳು ಹೋಗಿಯು [illegible] ರೋಗದ ಸೋಂಕು [illegible] ರೋಗ ಅಣುಗಳಿಂದ [illegible]

ಮೈಲೆಯ [illegible] ರದಲ್ಲಿ ಉಂಟಾಗುವ [illegible] ಯಿಂದ ಶರೀ [illegible] ಪರಿಣಾಮ ಹೊಂದುವಂತ ಈ [illegible] ವಿಶೇಷ ಲೇಪನವು [illegible] ರೋಗದ ಸೋಂಕನ್ನು ಸಹಾ ಇದರ [illegible]

[illegible] ಹೊಂದುವ [illegible] ಚಿಕಿತ್ಸೆ [illegible] ಎಂಥಾ ಚಿಕಿತ್ಸೆ [illegible]

ಮುಲಾಮು [illegible] ಮುಂತಾದವು ಗಳು [illegible]

[illegible] ಔಷಧಿಗಳು [illegible]

ಕ್ರಯ ಡಬ್ಬಿ ಒಂದಕ್ಕೆ [illegible]

ಮಂಗಳೂರ ಟ್ರೇಡಿಂಗ ಅಸೋಸಿಯೇಶನ್ (ಶಾರದಾ ... ಸಂಘ)

[illegible] ದೊರೆಯುವದು

ಲೆಕ್ಕದ ಪುಸ್ತಕಗಳನ್ನು ಕೊಂಡುಕೊಳ್ಳುವಾಗ ಎಚ್ಚರಿಕೆ ತೆಕೊಳ್ಳಿ!

ಲೆಕ್ಕದ [illegible]

ಹಾಫ್ ಬೈಂಡ

ಫುಲ್ ಬೈಂಡ (ಪೂರ್ಣ ಚರ್ಮ)

[illegible] ಬೇಕಾದ

[illegible]

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು [illegible] ಕಂಚಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ [illegible]

ನಮ್ಮ ದರಗಳಿಗೆ ದಯವಿಟ್ಟು ಬರೆಕೊಳ್ಳಿ ಮೆನೇಜರ್, ಶಾರದಾ ಮುದ್ರಾಲಯ, ಮಂಗಳೂರು

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು
ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು
ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.
ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್. ಮಂಗಳೂರು

Printed by V. S. Kamath, at the Mangalore Trading Association's Sharada Press, Mangalore.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.
ಚಂದಾ ನಿರ್ಣಯ.—ವರ್ಷ ೧ಕ್ಕೆ ರೂ. 1 4-0. ಟಪ್ಪಾಲು ಹಾಸಲು ಸೇರಿ ರೂ. 2-1 0
ಮಂಗಳೂರು, ತಾರೀಕು 1ನೇ ಶುಕ್ರವಾರ ಜುಲಾಯಿ 1910 ಸಂಚಿಕ 26

Amrutanjan Depot Fort Bombay.

ಅಮೃತಾಂಜನ ಗಜಕರ್ಣದ ಮುಲಾಮು

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟನೋವು ಗಂಟ್ಲು ನೋವು ಜಖಮು, ಉಳುಕು, ಘಾಯ ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು ಬಾಟ್ಲಿ ೧ರ ಕಿಮ್ಮತು 8 ಆಣೆ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಬಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು [illegible] ಆಣೆ.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆಮಿಯಿನ ಕೊಕೊ, ಲೆಸಿತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ಹಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳೆಯುವವು ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ ಬಾಟ್ಲಿ ಒಂದರ ಕಿಮ್ಮತು ರೂ 1

ಸುಂದರಿ ತೈಲ.

ಇದನ್ನು ಮೋರೆಗೆ ಹಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು ಬಾಟ್ಲಿ ಒಂದರ ಕಿಮ್ಮತು 8 ಆಣೆ

ಖಜ್ಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತು 3 ಆಣೆ

ಜುಲಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತು 8 ಆಣೆ

ವಿಳಾಸ:—ಅಮೃತಾಂಜನ ಡಿಪ್ಪೊ ಫೋರ್ಟ್. ಮುಂಬಯಿ.

ಟೆಲಿಗ್ರಾಫ್ ವಿಳಾಸ:—ಅಮೃತಾಂಜನ, ಮುಂಬಯಿ.

ಸುಗಂಧ [illegible]

[illegible] ನಮ್ಮ [illegible] ಸುಗಂಧ ದ್ರವ್ಯ [illegible]

ಕರಹೇವಾರಿ [illegible] 24 ರೂ [illegible] 1ಕ್ಕೆ.

1 [illegible] ಬತ್ತಿ	6—0—0	5—0—0
2 [illegible] ಬತ್ತಿ	4—0—0	3—8—0
3 [illegible] ಕಸ್ತೂರಿ ಬತ್ತಿ	3—0—0	2—8—0
4 [illegible]ನಗು ಬತ್ತಿ	1—8—0	1—0—0
5 [illegible]ನ್ನೀರು ಬತ್ತಿ	0—10—0	0—8—0
6 ಉತ್ತಮವಾದ ದಶಾಂಗ	0—12—0	

ಗಂಧದ ಬಿಲ್ಲೆಗಳು

	1 ತೊಲೆ	ತೊಲೆ	ತೊಲೆ
1 ಪುದುಕೋಟೆ ಬಿಲ್ಲೆ	3 0 0	1 8 0	0 12 0
2 ಕಸ್ತೂರಿ ಬಿಲ್ಲೆಗಳು	1 8 0	0 12 0	0 6 0
3 1 ಕೇಸರಿ ಬಿಲ್ಲೆ	0 8 0	0 4 0	1 2 -0
2 ಡಿಟ್ಟೊ	0 4 0	1 2 0	0 1 0

ಕಾಲು ತೊಲೆ ತೂಕ ಉಳ್ಳ ಕೇಸರಿ ಬಿಲ್ಲೆ 100ಕ್ಕೆ 10 ರೂ [illegible]

4 ಅವಲ್ ಹಸಿಂ ಬಿಲ್ಲೆ	0 8 0	0 4 0	0 2 0
ಎರಡನೇ ರಖಂ	0 4 0	0 2 0	0 1 0

ಕಾಲು ತೊಲೆ ತೂಕ ಉಳ್ಳ ಹಿಸಿಂ ಬಿಲ್ಲೆ 100ಕ್ಕೆ [illegible]

5 [illegible] ತೊಲೆ 1ಕ್ಕೆ 1 0 0

ಪರಸ್ಥಳದವರಿಗೆ [illegible] ಬೇಳುತ್ತೆ [illegible] ಪ್ರೋತ್ಸಾಹಿಸುವಿರೆಂದು ಕೋರುತ್ತೇನೆ

ಯ ಂ ನರಸಿಹ್ಮ ಶಾಸ್ತ್ರಿ [illegible]ಂದಕಾರಿ

ಶಂಕ[illegible] ಬೆಂಗಳೂರು ಸಿಟಿ

ಮುಫತ್ತು [illegible]ನೇ ವರುಷದ ಕ್ಯಾಲೆಂಡರು ಮುಫತ್ತು

ಕಾನಪೂರ್ ಉಲನ್ ಚೌಕಗಳು.

ಸೈಜು 40×40 [illegible], [illegible] ನೀಲಿ, ಹಸರು ಕರಿಂದು, ಕೇಸರಿ, ಬಿಳಿಪು, ಚಕ್ರಾನ್ ಮತ್ತು ಇತರ ರಂಗುಗಳಲ್ಲಿಯೂ 1ಕ್ಕೆ ರೂ 1—4—0

ರೇಷ್ಮೆ ಅಂಚು ಕಟ್ಟಿದವಕ್ಕೆ 1ಕ್ಕೆ ಕಮ್ಮತು 0—4—0

ಶಲ್ಯಗಳು.

ಉದ್ದ [illegible] ಎಲ್ಲಾ ರಂಗುಗಳಲ್ಲಿಯೂ 1ನೇ ನಂಬರು 1ಕ್ಕೆ ರೂ 4 4 0 [illegible]ನೇ ನಂಬರು ರೂ —12—0 [illegible]ನೇ ನಂಬರು 3—8—0

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಿಮ್ಮತ್ 0—4—0

ಸಾಚ ಒಳ್ಳೇ ಕಲಾವತ್ತು "ಜರಿ"

[illegible] ಇಂಚು [illegible] ಇಂಚು ಮುಕ್ಕಾಲು ಇಂಚು

1ನೇ ನಂಬರು 0—10—0 1—1—0

2ನೇ ನಂಬರು 0—14—0, 1—8—0 2—4—0

ರೇಷ್ಮೆ ನಡುಕಟ್ಟುಗಳು

ಕೆಂಪು ಪೂವಾ, [illegible] ಹಸರು ಮೊದಲಾದ ರಂಗುಗಳಲ್ಲಿ ಸೈಜು ಉದ್ದ 5 6 ಮೊಳ, [illegible] ಇಂಚ 1ಕ್ಕೆ ರೂ 1 4 0 1 8 0 2 4-0, 2-8-0 3 0 0.

ಚಿತ್ರದ 3 0-0 4 0 0 [illegible]-0 6 0 0

ಡಿಟ್ಟೊ ಗಜ 1ಕ್ಕೆ 1 8-0

ರೇಷ್ಮೆ ಅಂಚು[illegible] 1ಕ್ಕೆ ಆಣೆ 2 [illegible]

ಮುಕ್ಮಲ್ ಅಂಚು ಗಜ 1ಕ್ಕೆ ಆಣೆ 1 [illegible]

ದೇವರುಗಳಿಗೆ ಉಪಯೋಗಿಸುವ ರೇಷ್ಮೆ [illegible] ಕೆಂಪು, ನೀಲಿ, ಹಸರು ರಂಗುಗಳಲ್ಲಿ ಗಜ 1ಕ್ಕೆ ರೂ 1-0 0, [illegible] 8 0 [illegible]

ದಾರದ [illegible] 1ಕ್ಕೆ ಆಣೆ [illegible]

ಉಲನ್ [illegible] 1ಕ್ಕೆ ರೂ 2 4 0 [illegible] 0, [illegible]0 0 3-8 0

ಫಿಲ್ಟ್ ಕ್ಯಾಪ್ [illegible] ಕ್ರಿಸ್ಟಸ್ 1ಕ್ಕೆ ರೂ 1 12 0 [illegible] 4 0 2 8-0 2-12-0

ಇಟಲಿ ಕ್ಯಾಪ್[illegible] 1ಕ್ಕೆ ರೂ 0 12 0 1 [illegible], 1 4 0 1-8-0

ಹಾಸಿಗೆ [illegible] 1ಕ್ಕೆ ರೂ 4 0 0 4 4 0, 4-8-0, 5-8-0, 6 0 0, 7 0 0 8 0-0 9 0 0 10 0 0, 12-0-0,

ಪೇಟ ಕಟ್ಟುವ ತರಹೇವಾರಿ ರಂಗುಗಳ [illegible] ಗಜ 1ಕ್ಕೆ 0 6 0, 0 8-0, 0-10-0, 0-12 0

ಕುಪ್ಪಸಕ್ಕೆ ಮತ್ತು ಪರಕಾರಕ್ಕೆ ಉಪಯೋಗಿಸುವ ಚೀಟುಗಳು ಗಜ 1ಕ್ಕೆ ಆಣೆ 6, 8, 10, 12

ಕೇಶರಂಜನ ತೈಲ	ಬಾಟ್ಲಿ 1ಕ್ಕೆ	ರೂ	0—11—0
ಕುಂತಳ ಕೌಮುದಿ ತೈಲ	,,	,,	0—12—0
ಕಮೋನಿಯಾ ಓಯಿಲ್	,,	,,	1—0—0
ಭೃಂಗಾಮಲಿಕ ತೈಲ ಸೀಸೆ	,,	,,	0—4—0, 0—8—0, 1—0—0
ಕಸ್ತೂರಿ ಮಾತ್ರೆ ಸೀಸೆ		,,	0—4—0.

ಎಲ್. ಪಿ. ಶ್ರೋರುವಾಲ್

ಕಂಪೆನಿ, ಬೆಂಗಳೂರು ಸಿಟಿ

[illegible] ಫಲ ಚಿಂತಾಮಣಿ

ಎಂಬೀ [illegible] ಉಪಯೋಗಕ್ಕಾಗಿ ಪಂಡಿತರಿಂದ ಆತ್ಮರ್ಯ ಸಹಿತವಾಗಿ ಬರೆಯಿಸಿ [illegible] ಕ್ರಯ 0—12—0. ಹಾಸೆಲು ಚಾರ್ಜು 0—3—0. [illegible] ಅಮುತ್ಕಾರವಾದ ಮಹಾಲಕ್ಷ್ಮಿ ಎಂಬ ಕಥೆ ಇನಾಮಾಗಿ ದೊರೆಯುತ್ತೆ.

ಹೆಚ್ ಎಸ್. ರಾವ್ ಬ್ರದರ್ಸ್,

ಚಿಕ್ಕಪೇಟೆ ಬೆಂಗಳೂರು ಸಿಟಿ.

"ವಿದ್ಯಾನಂದ" ಗ್ರಂಥಮಾಲೆ

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ಕಾನಾಗಿಯೇ (ಸ ತಃ) ಸಂಸ್ಕೃತವನ್ನು ಕಲಿತ [illegible]ವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ [illegible] ಶ್ಲೋಕ, ಪದ, ಶಬ್ದ, ಅನ್ವಯ [illegible] ಆಕಾಂಕ್ಷೆ, ವಿಗ್ರಹ, ಧಾತು ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ [illegible] ಇವುಗಳ [illegible] ಮೊದಲನೆ ಸರ್ಗ ಪ್ರಿಂಟಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

[illegible] ಪ್ರತಿ [illegible] ಅರ್ಥ [illegible] ವಾರ್ಥ, ತಾತ್ಪರ್ಯ ಸಹಿತ [illegible] ಬೆಲೆ 0—4—0

ವಿಳಾಸ ಮ್ಯಾನೇಜರ್

ವಿದ್ಯಾನಂದ ಆಫೀಸು,

ಚಿಕ್ಕಪೇಟೆ ಬೆಂಗಳೂರು ಸಿಟಿ

ಕುಂತಳ ಕೌಮುದಿ ತೈಲ.

[illegible] ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು

[illegible] ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ

[illegible] ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಿದ್ದಾರೆ

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ ಸರ್ವರೂ ಇದನ್ನು ಉಪಯೋಗಿಸಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತ ಉಪಯುಕ್ತವಾದದ್ದು ಇದರಲ್ಲಿ ಆಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು ಇದುವರೆಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು [illegible] ಸೀಸೆ ಒಂದಕ್ಕೆ [illegible] ಆಣೆಗಳು.

ಕವಿರಾಜ ಆರ್ ಸಿ ಸೇನ್, ಎಲ್ ಎಮ್ ಎಸ್,

216 ಕಾರ್ನವಾಲಿಸ್ ಬೀದಿ, ಕಲ್ಕತ್ತಾ

ಟೆಲಿಗ್ರಾಫ್ ವಿಳಾಸ—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು—ಎಲ್ ಪಿ ಶ್ರೋರುವಾಲ್ ಎಂಡ್ ಕೊ,

ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು—ಮೆ| ರಾ| ರಾ| ಸಿ. ಆರ್. [illegible]

[illegible], ಮಂಗಳೂರು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 1 ನೇ ಜುಲೈ 1910

ಕರ್ನೂಲ ಸಾಮಾಜಿಕ ಪರಿಷದ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಸಂಘಸುಧಾರಣೆಯ ಪರವಾಗಿ ಜನರ ಭಾವನೆಯು ಮೊದಲಿಗಿಂತಲೂ ಇತ್ತಲಾಗೆ ಹೆಚ್ಚಾಗಿ ಮಾರ್ಪಟ್ಟಿರುವುದು. ಆದರೆ ಭಾವನಾರೂಪವಾಗಿಯೇ ಸುಧಾರಣೆಯು ಇದ್ದು ಅದು ಕಾರ್ಯರೂಪಗೊಳ್ಳದಿದ್ದರೆ ಸಮಾಜಕ್ಕೇನು ಕಾಯಂತ ಪ್ರಯೋಜನವಿರುವುದೆಂದು ಸುಧಾರಕರಲ್ಲಿ ಅತೀತೀಕ್ಷ್ಣ ಪಕ್ಷದವರೆನ್ನುವುದು. ಇಂತವರ ವಾದಗಳಿಂದ ತಮ್ಮ ಪ್ರಯತ್ನಗಳಲ್ಲಿ ನಿರಾಶೆಯುಂಟಾಗದಂತೆ ಸಭಾ ಅಧ್ಯಕ್ಷರು, ಭಾವನೆಯು ಜೀವತತ್ವ ಶಾಸ್ತ್ರಕ್ಕನುಗುಣವಾಗಿ ಮನುಷ್ಯನ ಪ್ರತಿಯೊಂದು ನಾಡಿಯಲ್ಲಿಯೂ ಸಹ ಪ್ರಬಲಿಸಿ ಆತನನ್ನು ಕ್ರಮೇಣ ಕಾರ್ಯಪ್ರವರ್ತಕನನ್ನಾಗಿ ಮಾಡುವುದೆಂದೂ ಸರ್ವಕಾರ್ಯಕ್ಕೂ ಭಾವನೆಯೇ ಮುಖ್ಯ ಹೇತುವಾಗಿರುವುದೆಂದೂ ಹೇಳಿ ಪಾಶ್ಚಾತ್ಯ ಪ್ರಖ್ಯಾತ ಶಾಸ್ತ್ರಜ್ಞರ ಪರಿಶೋಧನಾ ಫಲಗಳನ್ನು ತಮ್ಮ ಮಾತುಗಳಿಗೆ ಆಧಾರವಾಗಿ ಕೊಟ್ಟರು. ಭಾವನೆಗಳನ್ನು ಕಾರ್ಯರೂಪಗೊಳಿಸುವುದಕ್ಕೆ ಬೇಕಾದಷ್ಟು ಮನೋದಾರ್ಢ್ಯವು ಹಲವರಲ್ಲಿರುವುದಾದರೂ ಇಂತಹ ಭಾವನೆಗಳನ್ನು ಕಾರ್ಯತಃ ಸಾಧಿಸುವುದರಿಂದ ಉಂಟಾಗಬಹುದಾದ ಫಲಗಳ ಊಹನೆಯೇ ಅನೇಕರಿಗೆ ಸಂಘಸುಧಾರಕರು ಉದ್ದೇಶಿಸುವ ಕಾರ್ಯಗಳನ್ನು ಅವಲಂಬಿಸ ಬಿಡದ ಅಭ್ಯಂತರವಾಗಿರುವುದು. ಕ್ರೈಸ್ತ ಮತಸ್ಥ ಮಿಶನರಿಗಳು ತಮ್ಮ ಮತ ಪ್ರಸರಣೆ ಬಗ್ಗೆಯೂ ತಮ್ಮ ಮತದವರಲ್ಲದ ಇತರರನ್ನು ಮತಾಂತರಗೊಳಿಸುವ ಬಗ್ಗೆಯೂ ಶಾಲೆ, ಆಸ್ಪತ್ರೆ, ಸಹಸ್ರಾರು ವಿಧಗಳ ಪತ್ರ ಪ್ರಕಟಣೆ, ಸಾವಿರಾರು ಜನ ಪ್ರಸಂಗಿಗಳು ಮೊದಲಾದ ಬಹಳ ಖರ್ಚು ತಗಲುವ ಸಾಧನೋಪಾಯಗಳಿಂದ ಸಹ ತಮ್ಮ ಕಾರ್ಯವನ್ನು ಪೂರ್ಣವಾಗಿ ಕೈವಶಗೊಳಿಸಿಕೊಳ್ಳುವುದು ಬಹಳ ಕಡಿಮೆ. ಇವರ ಸಾಧನೆಗೆ ತಕ್ಕಂತೆ ವಿದ್ಯಾವಂತರಲ್ಲಿ ಮತಾಂತರಪಡುವವರ ಸಂಖ್ಯೆಯು ಅತ್ಯಲ್ಪವಾಗಿರುವುದು. ಸಂಘಸುಧಾರಕರ ಪ್ರಯತ್ನಗಳನ್ನು ಈ ಮಿಶನರಿಗಳ ಪ್ರಯತ್ನಗಳಿಗೆ ಸರಿಯೋಚಿಸಿದರೆ ಸುಧಾರಕರ ಪ್ರಯತ್ನಗಳು ಪರಿಗಣಿಸ ತಕ್ಕವುಗಳೇ ಅಲ್ಲ. ಆದರೂ ಸಾಮಾಜಿಕ ಪರಿಷದವು ಸ್ಥಾಪಿಸಲ್ಪಟ್ಟ ಕಳೆದ 25 ವರುಷಗಳಲ್ಲಿ ಮಿಶನರಿಗಳು ಮತಾಂತರಗೊಳಿಸಿದರಕ್ಕಿಂತ ಹೆಚ್ಚು ಜನ ವಿದ್ಯಾವಂತರನ್ನು ನಮ್ಮ ಪಕ್ಷಕ್ಕೆ ಬರಮಾಡಿಕೊಂಡಿರುವೆವೆಂದು ಅಧ್ಯಕ್ಷರವರು ಅಪ್ಪಣೆಕೊಟ್ಟರು.

ಕಾರ್ಯಸಾಧನೆಯ ಫಲಗಳ ಊಹನೆಯೇ, ಭಾವನೆಗಳನ್ನು ಕಾರ್ಯರೂಪಗೊಳಿಸುವುದಕ್ಕೆ ಅಭ್ಯಂತರವೆಂತ ಮೇಲೆ ಸೂಚಿಸಿದ್ದಾಯಿತು. ಹುಡುಗಿಯು ಋತುಮತಿಯಾಗುವ ಮೊದಲೇ ಕೈಯಲ್ಲಿ ಕಾಸಿಲ್ಲವಿದ್ದರೂ ಎಂಥಾ ಯಾತನೆಗಳಿಗೆ ಒಳಗಾಗಿಯಾದರೂ ಪಿತ್ರಾರ್ಜಿತ ವಿತ್ತವೂ ಮನೆ ಮೊದಲಾದವುಗಳನ್ನಾದರೂ ಮಾರಿ ವರದಕ್ಷಿಣೆ ಕೊಟ್ಟು ಮಗಳಿಗೆ ಮದುವೆ ಮಾಡ ಬೇಕೆ ತಂದೆಯು ದೇಶಭ್ರಷ್ಟನಾಗುವನು? ಅಲ್ಪಸ್ವಲ್ಪ ಈ ಪಿತ್ರಾರ್ಜಿತ ಆಸ್ತಿಯನ್ನು ಉಳಿಸಿಕೊಳ್ಳುವಷ್ಟು ಆತನಿಗೆ ಮನೋದಾರ್ಢ್ಯವಿಲ್ಲವೋ? ಇರುವುದು. ಆದರೆ ನೆರೆಹೊರೆಯವರೂ ಸಮ್ಮಂಧಿಕರೂ ತನ್ನ ಮಗಳ ಹೆಸರನ್ನು ಕೆಡಿಸಿ ಆಕೆಯ ಜನ್ಮವನ್ನು ವ್ಯರ್ಥ ಮಾಡುವರೆಂಬ ಅಂಜಿಕೆಯು ಆತನಲ್ಲಿ ಬಹಳವಾಗಿರುವುದು. ಈ ಅಂಜಿಕೆಯಿಂದಲೇ ಪ್ರಾಯಬಂತಳಾದ ಮೇಲೆ ಮಗಳಿಗೆ ವಿವಾಹಮಾಡುವರೆ ಆತನು ಹೇಸುವನು. ಸುಧಾರಣೆಯ ಆಚಾರ ಕಟ್ಟಳೆಗಳನ್ನು ಸಾಧಿಸುವರೆ ಮನೆಯಲ್ಲಿ ಸ್ತ್ರೀಯರು ವಿಡರೆಂಬದಾಗಿ ಕೆಲವರು ಹೇಳುವ ವಾದವು ಆಧಾರವಿಲ್ಲದ್ದೆಂದು ಅಧ್ಯಕ್ಷರವರು ಅಪ್ಪಣೆಕೊಟ್ಟಿರುವರು. ಸಮಾಜದ ಪ್ರಕೃತ ಸ್ಥಿತಿಗತಿಗಳನ್ನು ಸ್ತ್ರೀಯರಿಗೆ ಸ್ವತಹಾ ನೋಡಿಕೊಳ್ಳುವರೆ ಅವಕಾಶವಿಲ್ಲದೆ ಅನೇಕ ಸಂದರ್ಭಗಳಲ್ಲಿ ಹಿಂಗಡವಾಗಿದ್ದು ಅವರ ನಿಜವಾದ ಸ್ಥಿತಿಯನ್ನು ಸಹಾ ಸ್ತ್ರೀಯರು ತಿಳಕೊಳ್ಳಲಾರರು. ಸಮ್ಮಂತೆಯೇ ಸ್ತ್ರೀಯರುಗಳಿಗೆ ತಕ್ಕದಾದ ರೀತಿಗಳಲ್ಲಿ ಸಮಾಜದ ಅರಿಷ್ಟಗಳನ್ನು ತಿಳಕೊಳ್ಳುವರೆ ಅವಕಾಶಕೊಟ್ಟಲ್ಲಿ ಅವರು ಎಂದೂ ಸಂಘಸುಧಾರಣೆಯನ್ನು ವಿರೋಧಿಸರು. ಉದಾಹರಣೆಯಾಗಿ ಅಧ್ಯಕ್ಷರವರು ತಮ್ಮ ಭಾಷಣದಲ್ಲಿ ಒಂದು ನಡೆದ ವೃತ್ತಾಂತವನ್ನು ಹೇಳಿರುವರು. ಕೆಲವು ವರುಷಗಳ ಮೊದಲು ಒಂದು ಪ್ರಸ್ತ ಸಮಯದಲ್ಲಿ ಸ್ತ್ರೀಯರ ಸಭೆಯೊಂದು ನೆರದಿತ್ತು. ಈ ಸಭೆಗೆ ಪುನರ್ವಿವಾಹ ಮಾಡಿಕೊಂಡ [illegible] ಯುವತಿಯು ಸಹಾ ಬಂದಿದ್ದಳು. [illegible] ಪ್ರಸ್ತದ [illegible]

[illegible] ವಾದ ಬಳ್ಳಿ ಸ್ತ್ರೀಯು [illegible] ಈ ಪುನರ್ವಿವಾಹವನ್ನು ಮಾಡಿಕೊಂಡ ಯುವತಿಯು ಹತ್ತಿರ [illegible] ಸಾರು ತ್ತಲೇ ಒಂದುಸಲ ವಿಧವೆಯಾಗಿದ್ದ ಈ ಯುವತಿಗೆ ತಿಲಕವನ್ನಿಡಲು [illegible] ಯು ತುಸ ಸಮಯ ಸಂಶಯಪಟ್ಟಳು. ಆದರೆ ನಿಮಿಷಮಾತ್ರದಲ್ಲಿ ತಾನು ಪಡುವ ಅಂಜಿಕೆಯನ್ನು ಬಿಟ್ಟುಬಿಟ್ಟು ಪುನರ್ವಿವಾಹ ಮಾಡಿಕೊಂಡ ಯುವತಿಗೆ ಸಹಾ ತಿಲಕವನ್ನು ಮಾಡಿಬಿಟ್ಟಳು. ಕೆಲವು ಸಮಯದಮೇಲೆ ಇನ್ನೊಬ್ಬ ಸ್ತ್ರೀಯು ಒಂದು ಸಲ ವಿಧವೆಯಾಗಿದ್ದವಳಿಗೆ ಕುಂಕುಮದ ತಿಲಕವನ್ನಿಟ್ಟದ್ದು ಯಾಕೆಂತ ಈಕೆಯನ್ನು ಕೇಳಲು, ಆ ಸ್ತ್ರೀಯು—ಮೊದಲು ವಿಧವೆಯಾಗಿದ್ದ ಆಕೆಯನ್ನು ನೋಡಿ ನಾನು ಬಹಳ ಕನಿಕರಪಟ್ಟೆನು. ಈಕೆಯು ನನ್ನ ಮಗಳಾಗಿದ್ದ ಪಕ್ಷಕ್ಕೆ ನಾನು ಹ್ಯಾಗೆ ವರ್ತಿಸುತ್ತಿದ್ದೆನೆಂಬ ವಿಚಾರವು ನನಗೆ ಕ್ಷಣದಲ್ಲಿ ಒಂದು ಆಕೆಗೆ ಕುಂಕುಮ ತಿಲಕವನ್ನು ಪ್ರೀತಿ ಪುರಸ್ಸರವಾಗಿ ಮಾಡಿಯೇ ಬಿಟ್ಟೆನು ಎಂದಳು.

ಸುಧಾರಣೆಯ ಪರವಾದ ಭಾವನೆಗಳಿದ್ದರೂ ಅವುಗಳನ್ನನುಸರಿಸಿದ್ದರಿಂದ ಭಯಂಕರವಾದ ಆಪತ್ತು ಉಂಟಾಗುವುದೆಂಬ ಊಹನೆಯನ್ನು ಎದುರಾಡುದಕ್ಕೆ ಅಧ್ಯಕ್ಷರವರು ಬಹಳ ಉಪಯುಕ್ತವಾದ ಒಂದು ಸೂಚನೆಯನ್ನು ಮಾಡಿರುವರು. ಬಾಲವಿವಾಹಗಳು ಮೊದಲಾದ ಅರಿಷ್ಟಗಳಿಂದ ಉಂಟಾಗುವ ಕೆಡಕುಗಳನ್ನು ವರ್ಣಿಸಿ ಚಿತ್ರಪಟಗಳನ್ನು ಬರೆದು ಅವುಗಳನ್ನು ಪ್ರಕಟಿಸಿದರೆ ಜನರ ಈ ವಿಷಯವಾದ ಊಹನೆಯು ಇದರಿಂದ ಮಾರ್ಪಡುವುದು. ಶಾಲೆಗೆ ಪುಸ್ತಕಗಳನ್ನು ಹಿಡಕೊಂಡು [illegible] ಹೋಗುವ ಹದಿನೆಂಟು ವರುಷ ಪ್ರಾಯದ ಸೌಭಾಗ್ಯವತಿಯು ಸ್ವಲ್ಪ ದೂರದಲ್ಲಿಯೇ ತಿರೋಮುಂಡನವನ್ನು ಮಾಡಿದ ವೃಥಿತ ವದನವುಳ್ಳ ಅಷ್ಟೇ ಪ್ರಾಯದ ಬಾಲವಿಧವೆಯು ಗೂಂಬೆಗಳೊಡನೆಯೂ, ಹದಿಮೂರು ವರುಷ ಪ್ರಾಯದಲ್ಲಿಯೇ ಪ್ರಸೂತಳಾಗಿ ಒಂದು ಮೂಲೆಯಲ್ಲಿ ಮಲವನ್ನಿರಿ [illegible] ಪ್ರಸೂತಿ ಜ್ವರ ಕಾಯಿಲೆಯಿಂದ ಉನ್ಮತ್ತಳಾಗಿ ರೇಗುವ ಬಾಲಿಕೆಯ ಚಿತ್ರಪಟವನ್ನೂ ಇನ್ನೂ ಇಂತಹ ಸಂಕಷ್ಟಗಳ ಬಗೆಬಗೆಯ ಚಿತ್ರಪಟಗಳನ್ನೂ ಬಿಡಿಸಿ ಅವುಗಳನ್ನು ಪ್ರಕಟಿಸಿದರೆ ಜನರ ಊಹನೆಯು ಸಹಾ ಮಾರ್ಪಟ್ಟು ಕಾರ್ಯವು ಕೈಗೂಡುವುದೆಂಬ ಅಧ್ಯಕ್ಷರವರ ಸೂಚನೆಯು ಅನುಸರಣೀಯವಾಗಿರುವುದು.

ಮುಖ್ಯವಾದ ಸಾಮಾಜಿಕ ಅರಿಷ್ಟಗಳನ್ನು ಅಧ್ಯಕ್ಷರು ಎರಡು ಭಾಗಗಳಾಗಿ ವಿಂಗಡಿಸಿರುವರು. ಒಂದು ಸ್ತ್ರೀಪರವಾದದ್ದು, ಮತ್ತೊಂದು ಜಾತಿಭೇದ ಪರವಾದದ್ದು. ಸ್ತ್ರೀವಿದ್ಯಾಭ್ಯಾಸ ಮತ್ತು ಬಾಲಿಕೆಯರ ವಿವಾಹ ಪ್ರಾಯವನ್ನು ಹೆಚ್ಚಿಸುವುದು. ಇವೆರಡು ವಿಷಯಗಳು ಸ್ತ್ರೀಯರ ಅಭಿವೃದ್ಧಿಗೆ ಬೇಕಾದ ಮುಖ್ಯ ಮಾರ್ಗಗಳು. ಕ್ರೈಸ್ತ ಬಾಲಿಕೆಯರನ್ನು ಬಿಟ್ಟು ವಿದ್ಯಾವಿಷಯಗಳಲ್ಲಿ ಇತರ ಜಾತಿಯ ಬಾಲಿಕೆಯರ ಸ್ಥಿತಿಯು ಮದ್ರಾಸು ಸಂಸ್ಥಾನದಲ್ಲಿ ಬಹಳ ದೀನವಾಗಿರುವುದು. ಈ ಸಂಸ್ಥಾನದ ಅಲ್ಪಸ್ವಲ್ಪ ಹುಡುಗಿಯರಲ್ಲಿ ಮಾತ್ರ ಶಾಲೆಗೆ ಹೋಗುವ ಪದ್ಧತಿ ಇರುವುದು. ಇವರಲ್ಲಿ ಸಹಾ ಅನೇಕರು ಮೂಲಪಾಠಶಾಲೆಯ ಮೂರನೇ ನಾಲ್ಕನೇ ದರ್ಜೆಗಳ ವರೆಗೆ ಶಾಲೆಗೆ ಬರುತ್ತಿದ್ದು ನಂತರದಲ್ಲಿ ಶಾಲೆಗಳಿಗೆ ಹೋಗುವದನ್ನೇ ಬಿಟ್ಟುಬಿಡುವರು. ಹೀಗಾಗಿ ವಿದ್ಯಾವಂತ ಸ್ತ್ರೀಯರ ಸಂಖ್ಯೆಯು ಈ ಸಂಸ್ಥಾನದಲ್ಲಿ ಅತ್ಯಲ್ಪ ಅಥವಾ ಇಲ್ಲವೇ ಎನಬಹುದೆಂದು ಅಧ್ಯಕ್ಷರವರು ಸೂಚಿಸಿರುವರು. ಹುಡುಗರಾದರೋ ಮುಂದಕ್ಕೆ ಏನಾದರೂ ವೃತ್ತಿಯನ್ನವಲಂಬಿಸಿ ದುಡಿಯಬೇಕಾಗಿರುವುದು, ಆದ್ದರಿಂದ ಇವರಿಗೆ ವಿದ್ಯೆಯು ಆಗತ್ಯ. ಸ್ತ್ರೀಯರು ದುಡಿಯಬೇಕೆಂತಿಲ್ಲ, ಆದ್ದರಿಂದ ಹುಡುಗಿಯರಿಗೆ ವಿದ್ಯಾಭ್ಯಾಸವೇಕೆ ಎಂದ ವಿದ್ಯಾಭ್ಯಾಸಕ್ಕೆ ರೂಪಾಯಿ ಆಣೆ ಪೈಗಳಲ್ಲಿ ಮೌಲ್ಯಕಟ್ಟಿ ತಮ್ಮ ಹುಡುಗಿಯರನ್ನು ಶಾಲೆಗೆ ಕಳುಹಿಸದೆ ಕೆಲವರು ಸುಮ್ಮನಿರುವರು. ಹತ್ತು ಹನ್ನೊಂದು ವರುಷ ಪ್ರಾಯ ಬಂತಳಾದ ಕೂಡಲೇ ಗಂಡನ ಮನೆಗೆ ಹೋಗಲಿಕ್ಕಿರುವ ಹುಡುಗಿಗೆ ವಿದ್ಯಾಭ್ಯಾಸ ಕೊಡುವರೆ ಅವಕಾಶವೆಲ್ಲಿರುವುದೆಂದು ಹೇಳುವ ಬಹುಪಕ್ಷದವರಿರುವರು. ಒಂಭತ್ತು ಯಾ ಹತ್ತು ವರುಷಗಳಲ್ಲಿಯೇ ಹುಡುಗಿಯರಿಗೆ ಮದುವೆಯಾಗುವುದರಿಂದ ವಿದ್ಯಾಭ್ಯಾಸಕ್ಕೆ ಅನನುಕೂಲವಾಗುವುದು. ಈ ಕಾರಣದಿಂದಲೂ ಮುಂದಿನ ಪೀಳಿಗೆಯ ದೇಹಪುಷ್ಟಿ ಬಗ್ಗೆಯೂ ಬಾಲಿಕೆಯರ ವಿವಾಹ ಪ್ರಾಯವನ್ನು ಹೆಚ್ಚಿಸಬೇಕಾಗಿರುವುದು. ಬಾಲಿಕೆಯರ ವಿವಾಹ ಪ್ರಾಯವನ್ನು ಹೀಗೆ ಹೆಚ್ಚಿಸಿ ಅವರಿಗೆ ವಿದ್ಯಾಭ್ಯಾಸವನ್ನು ಈ ಪ್ರಾಯದಲ್ಲಿ ಕೊಡದಿದ್ದರೆ ಅದರಿಂದ ಉಂಟಾಗಬಹುದಾದ ಕೆಡಕನ್ನೂ ಸಹಾ ಅಧ್ಯಕ್ಷರವರು ವ್ಯಕ್ತಪಡಿಸುವರು. ಹೀಗೆ ವಿವಾಹ ಪ್ರಾಯವನ್ನು ಅಧಿಕ ಮಾಡುವುದೂ ಬಾಲಿಕೆಯರಿಗೆ ಯುಕ್ತವಾದ ವಿದ್ಯಾಭ್ಯಾಸವನ್ನು ಕೊಡುವುದೂ, ಈ ಎರಡು ವಿಷಯಗಳು ಪರಸ್ಪರ ಸಮ್ಮಂಧವಿರುವವುಗಳೆಂತ ರಾ। ನಟರಾಜನರವರು ಅಪ್ಪಣೆಕೊಡುವವರಾದರು.

ಬಾಲಿಕೆಯರ ವಿವಾಹ ಪ್ರಾಯವನ್ನು ಈ ಸಂಸ್ಥಾನದಲ್ಲಿ ಹೆಚ್ಚಿಸುವುದು ದೇಶದ ಇತರ ಪ್ರಾಂತ್ಯಗಳಿಗಿಂತ ಅಗತ್ಯವೆಂಬದಕ್ಕೆ ಅಧ್ಯಕ್ಷರವರು ಇನ್ನೊಂದು ಕಾರಣವನ್ನು ಕೊಟ್ಟಿರುವರು. [illegible]

ದೊಡ್ಡವನಾಗಿರುವನು. ಮದ್ರಾಸು ಸಂಸ್ಥಾನದಲ್ಲಿ ಈ ಸರಾಸರಿಯು ಇತರ ಎಲ್ಲಾ ಪ್ರಾಂತ್ಯಗಳಿಗಿಂತ ಹೆಚ್ಚಾಗಿರುವುದು. ಇಲ್ಲಿ ವಧೂವರರಿಗೆ ಸರಾಸರಿ ಮೇಲೆ 9 ಯಾ ಹತ್ತು ವರುಷಗಳ ಭೇದವಿರುವುದು, ಅಂದರೆ ಸುಮಾರು 20 ವರುಷ ಪ್ರಾಯದ ಯುವಕನು 10 ವರುಷ ಪ್ರಾಯದ ಹುಡುಗಿಯನ್ನು ಮದುವೆ ಮಾಡಿಕೊಳ್ಳುವನು. ಈ ಪ್ರಾಯ ಭೇದವು ನಮ್ಮಲ್ಲಿ ಬಹಳ ಚಿಕ್ಕಪ್ರಾಯದ ಬಾಲಿಕೆಯರಿಗೆ ಹೆಚ್ಚು ಅಪಾಯಕರವಾಗಿ ಪರಿಣಮಿಸುವುದು. ನಮ್ಮ ಸಂಸ್ಥಾನದ ಹುಡುಗರ ಮದುವೆಯಾಗುವ ಪ್ರಾಯವು ಹೀಗೆ ದೇಶದ ಇತರ ಎಲ್ಲಾ ಕಡೆಗಳಿಗಿಂತ ಅಧಿಕವಾಗಿದ್ದದ್ದರಿಂದ ಈ ಕಾರಣಕ್ಕಾಗಿಯೇ ಆದಷ್ಟು ಬೇಗನೆ ಬಾಲಿಕೆಯರ ವಿವಾಹ ಪ್ರಾಯವನ್ನು ಸಹಾ ಹೆಚ್ಚಿಸಬೇಕಾಗಿರುವುದು.

ಬಾಲವಿವಾಹದಿಂದ ಬಾಲಿಕೆಯರು [illegible] ದೇಹಪುಷ್ಟಿ [illegible] ಮೊದಲೇ ರಜಸ್ವಲೆಯರಾಗುವರು. ವಿವಾಹವು ಬಾಲ್ಯ ಪ್ರಾಯದಲ್ಲಿ ಆಗುವುದರಿಂದ ದಾಂಪತ್ಯವಿಚಾರವು ಇವರಲ್ಲಿ [illegible] ಇದರಿಂದ [illegible] ದರ್ಶನವು ಸಹಾ ಬೇಗನೆ ಆಗುವುದೆಂದು [illegible] ಶಾಸ್ತ್ರಕಾರರು [illegible] ವರು. ಆದ್ದರಿಂದ [illegible] ದಿಂದ ಮಾತ್ರ ಬಾಲಿಕೆಯರ ವಿವಾಹ ಪ್ರಾಯವನ್ನು ನಿರ್ಧರಿಸಕೂಡದೆಂದು [illegible] ಅಧ್ಯಕ್ಷರು [illegible] ರಜೋದರ್ಶನವಾದ [illegible] ದೇಹಪುಷ್ಟಿ ಹೊಂದುವದರಿಂದ ಈ [illegible] ಅಧ್ಯಕ್ಷರವರ ಸೂಚನೆಯಾಗಿರುವುದು.

ಈ [illegible] ಬಾಲಿಕೆಯರ [illegible] ವಿಷಯದಿಂದ [illegible] ಸುವ ಅನರ್ಥ ಪರಂಪರೆಯನ್ನು ಸಹಾ ಅಧ್ಯಕ್ಷರವರು ತಮ್ಮ ಭಾಷಣದಲ್ಲಿ ಪರ್ಯಾಲೋಚಿಸಿರುವರು. ಈ [illegible] ನಮ್ಮ [illegible] ಯನ್ನು [illegible] ವರ ಮಗ [illegible] ಮೊದಲು ವರದಕ್ಷಿಣೆಯ [illegible] ಕಡೆಯ ವರಿಗೆ ದ್ರವ್ಯವನ್ನು ಕೊಡುವ ವಾಡಿಕೆಯು [illegible] ತಮ್ಮ [illegible] ತಿಳಿಸಿರುವರು. [illegible] ಇದ್ದದ್ದು [illegible] ನಾವು [illegible] ವಿವಾಹ [illegible] ಭಾವನೆಯೇ [illegible] ಕೆಲವು [illegible] ಯುವಕರಲ್ಲಿ ಮಾತ್ರ [illegible] ಹುಡುಕುವುದರಿಂದ [illegible] ವರದಕ್ಷಿಣೆಯು [illegible] ಹೆಚ್ಚು [illegible] ಕೊಟ್ಟು [illegible] ದ್ರವ್ಯ [illegible] ಕ್ಕಳ ವಿದ್ಯಾ [illegible] ಲ್ಲಾ ಹ್ಯಾಗಾದ [illegible] ವಿಪರೀತ [illegible] ರವು ಹೆಚ್ಚಾಗಿ [illegible] ನ್ನು ತೋರಿಸದೆ [illegible] ಗುವ ಮೊದಲ [illegible] ತ ಸಮವಾತೀತ [illegible] ಹೆಚ್ಚಿಸುವುದೇ [illegible] ಪದೆಂಬ [illegible] ತ್ತದೆ ಸ್ತ್ರೀ [illegible] ಸಮಾಜಕೆ ಅನೇಕ ವಿಧಗಳಲ್ಲಿ [illegible] ರ್ಗದಲ್ಲಿ ಸೂಚಿ [illegible] ಉಸ್ಸು ಹುಟ್ಟಿಸುವುದರಿಂದ ವಿದವಾ [illegible] ವಾ ವಿವಾಹದ ವಿಷಯ [illegible] ಕೊಟ್ಟು ಸ್ತ್ರೀಯರ ಅಭಿವೃದ್ಧಿ ವಿಷಯದಲ್ಲಿ ತಮ್ಮ [illegible]

ಜಾತಿಭೇದ ವಿಷಯವನ್ನು [illegible] ತಮ್ಮ ಭಾಷಣದಲ್ಲಿ ವಿಶೇಷವಾಗಿ ಪ್ರಸ್ತಾಪಿಸಲಿಲ್ಲ. ರಾಷ್ಟ್ರೀಯ ಐಕ್ಯಕ್ಕೆ ಜಾತಿಭೇದವು ಬಹಳ ದೊಡ್ಡ ತೊಡಕಾಗಿ ದೆಂದು ಸೂಚಿಸಿ ತಮ್ಮ ಭಾಷಣದ ಕಡಿಬಾಗದಲ್ಲಿ ಸೂಚಿಸಿದಂತೆ ಜಾತಿಭೇದ ನಿರ್ಬಂಧವನ್ನು ಇತರ ಸಮಾಜ ಅರಿವುಗಳೊಡನೆಯೇ ನೀಗಲು ಪ್ರಯತ್ನಿಸಬೇಕೆಂದು ಹೇಳಿದರು. ದೇವರು ಯೋಚಿಸಿದಂತೆಯಾಗುವುದೆಂದು ಪ್ರಯತ್ನಶಾಲಿಯಾಗುವುದನ್ನು ಬಿಟ್ಟು ಎಲ್ಲಾ ವಿಷಯಗಳಲ್ಲಿಯೂ ಅಭಾವದಿಂದ ಕಾರ್ಯಶೂನ್ಯರಾಗುವುದು ಅವಿವೇಕತನವೆಂದು ಹೇಳಿ ಶ್ರೀ ಕೃಷ್ಣನು ಬಗವದ್ಗೀತೆಯ ಎರಡನೇಯ ಮತ್ತು ಮೂರನೇಯ ಅಧ್ಯಾಯದಲ್ಲಿ ಅಪ್ಪಣೆಸಿದ ಮೇರೆಗೆ ನಮ್ಮ ಧೀಶಕ್ತಿಯಿಂದ ಸರ್ವ ಪ್ರಯತ್ನವಾದುವುದು ಪ್ರತಿ ಮನುಷ್ಯನ ಕರ್ತವ್ಯವೆಂದೂ ಈ ಕರ್ತವ್ಯ [illegible] ಪ್ತಿಮಯನಾದ ಸರ್ವೋತ್ತಮನ [illegible]

ಸುಧಾರಣೆಯಲ್ಲಿ ಸರ್ವರೂ ಕಾರ್ಯೋದ್ಯುಕ್ತರಾಗಬೇಕೆಂದು ಸಭಿಕರನ್ನು ವಿಜ್ಞಾಪಿಸಿಕೊಂಡರು.

ಸಾಮಾಜಿಕ ವಿಷಯಗಳಲ್ಲಿ ಹೆಚ್ಚಿನ ಅನುಭವಶಾಲಿಗಳಾದವರು, ರಾ| ನಟರಾಜನರವರು ಕೊಟ್ಟ ಸೂಚನೆಗಳನ್ನು ತಮ್ಮ ಲೋಕಾನುಭವದೊಡನೆ ವಾಚಕರು ಸರಿ ಹೋಲಿಸಿ ದಿನೇದಿನೇ ಅಭಿವೃದ್ಧಿಯಾಗುತ್ತಿರುವ ಸಮಾಜ ಅರಿವುಗಳಿಗೆ ತಕ್ಕದಾದ ರೀತಿಯಲ್ಲಿ ಗಮನಕೊಡಬೇಕೆಂಬುವ ಕೋರಿಕೆಯಿಂದ ಈ ಪ್ರಾಂತಿಕ ಸಾಮಾಜಿಕ ಪರಿಷದದ ಅಧ್ಯಕ್ಷರ ಭಾಷಣವನ್ನು ಸ್ವಲ್ಪ ಹೆಚ್ಚು ವಿಸ್ತಾರವಾಗಿ ಪ್ರಕಟಿಸಿರುತ್ತೇವೆ.

ಕೀರ್ತಿಶೇಷ ಎಡ್ವರ್ಡ್ ಚಕ್ರವರ್ತಿಗಳವರ ಮೆಮೋರಿಯಲ್ ಫಂಡಿನ ಬಗ್ಗೆ ನಾಳೆ ಮಂಗಳೂರಲ್ಲಿ ಕೂಡುವ ಪುರಜನರ ಸಭೆಯು

ನಾಳೆ [illegible] ತಿಂಗಳ ತಾ [illegible] ವಾರ ಶ್ಯಾಮ ಘಂಟೆ ಐಕ್ಕೆ ಸ್ವರ್ಗಸ್ಥ [illegible] ಚಕ್ರವರ್ತಿ [illegible] ವರ ಮೆಮೋರಿಯಲ್ ಫಂಡಿನ ಬಗ್ಗೆ ಇಲ್ಲಿಯ ಗವರ್ನಮೆಂಟು ಕಾಲೇಜಿನ ಸಭಾ ಸದನದಲ್ಲಿ ಪುರನಿವಾಸಿಗಳ ಸಭೆಯು ಕೂಡುವುದು. ಹಿಂದೂಸ್ಥಾನದ ಮುಖ್ಯ ಮುಖ್ಯ ಸಂಸ್ಥಾನಗಳೆಲ್ಲಾ ಆಯಾ ಸಂಸ್ಥಾನದ ಪರವಾಗಿ ಸಂಸ್ಥಾನದ ಮುಖ್ಯ ಪಟ್ಟಣಗಳಲ್ಲಿ [illegible] ಚಕ್ರವರ್ತಿಗಳ ಸ್ಮರಣಾರ್ಥವಾಗಿ ಯೋಗ್ಯವಾದ ರೀತಿಯಲ್ಲಿ ತಕ್ಕ ಏರ್ಪಾಡುಗಳನ್ನು ಮಾಡುವರೆ [illegible] ಯಿರುವರು. ಮುಂಬಯಿ ಮದ್ರಾಸು ಕಲಕತ್ತೆ ಪಟ್ಟಣ [illegible] ಇಂಥಾ [illegible] ಗಳನ್ನು ಕಾರ್ಯರೂಪಗೊಳಿಸುವರೆ [illegible] ಕೂಡಿ ತಂತಮ್ಮ ಸಂಸ್ಥಾನದ ಎಲ್ಲಾ ಕಡೆಗಳಿಂದಲೂ ದ್ರವ್ಯ ಸಹಾಯವನ್ನು ಪೇಕ್ಷಿಸಿ ವಿಜ್ಞಾಪನಾಪತ್ರಗಳನ್ನು ಪ್ರಕಟಿಸಿರುವರು. ಎಡ್ವರ್ಡ್ ಚಕ್ರವರ್ತಿಗಳವರ ಸ್ಮರಣಾರ್ಥವಾಗಿ ಆಯಾ ಸಂಸ್ಥಾನದವರು [illegible] ತಂತಮ್ಮ ಸಂಸ್ಥಾನದಲ್ಲಿ ಪ್ರತ್ಯಪ್ರತ್ಯೇಕ ಏರ್ಪಾಡುಗಳನ್ನು ಮಾಡುವರಲ್ಲದೆ ಇಡೀ ಹಿಂದೂಸ್ಥಾನದ ಪರವಾಗಿ ಡಿಲ್ಲಿಯಲ್ಲಿ ಹತ್ತುಕಡಿಮೆ [illegible] ಲಕ್ಷ ರೂಪಾಯಿ [illegible] ಆಗುವ ಕೀರ್ತಿಶೇಷರ ಒಂದು [illegible] ಪ್ರತಿಮೆಯನ್ನು ಸ್ಥಾಪಿಸಬೇಕೆಂದು [illegible] ಈಗ [illegible] ಜೋರ್ಜ್ ಚಕ್ರವರ್ತಿಗಳವರಿಂದ ಸಹಾ ಸಮ್ಮತಿಯನ್ನು [illegible] ಮುಂಬಯಿಯವರು ಎಡ್ವರ್ಡ್ ಚಕ್ರವರ್ತಿಗಳವರ ಹೆಸರಲ್ಲಿ [illegible] ರೋಗಿಗಳ ಚಿಕಿತ್ಸೆ ಬಗ್ಗೆ ಒಂದು ಆಸ್ಪತ್ರೆಯನ್ನು ಕೂಡಿರುವ ಆರೋಗ್ಯಾಶ್ರಮವನ್ನು ಕಟ್ಟಿಸುವರ ನಿಶ್ಚಯಿಸಿರುವರು.

ಮೇಲೆ ಸೂಚಿಸಿದ [illegible] ಪ್ರಕಟವಾಗಿರುವ ಮದ್ರಾಸು ಮೆಮೋರಿಯಲ್ [illegible] ನಿರ್ವಾಹಕ ಕಮಿಟಿಯವರ ವಿಜ್ಞಾಪನೆಗನುಗುಣವಾಗಿ ನಾಳೆ ಮಂಗಳೂರಿನಲ್ಲಿ [illegible] ಸಭೆ ಸೇರುವರು. ಈ ಫಂಡಿನ ಬಗ್ಗೆ ಮದ್ರಾಸಿನ ನಿವಾಸಿಗಳೆಲ್ಲರ [illegible] ಕೂಡಿ ಕಳೆದ ತಿಂಗಳ ತಾ [illegible] ಈ ಫಂಡಿನ ಬಗ್ಗೆ ಒಂದು ಜನರಲ್ ಕಮಿಟಿಯನ್ನು [illegible] ವರಲ್ಲದೆ ಈ ಜನರಲ್ ಕಮಿಟಿಯವರು ಒಂದು ಕಾರ್ಯನಿರ್ವಾಹಕ ಕಮಿಟಿಯನ್ನು [illegible] ಯಿಸಿರುವರು. ಗವರ್ನರ ದೊರೆಗಳವರಾದ ಲೋಲೆ ದೊರೆಗಳವರು ಜನರಲ್ ಕಮಿಟಿಯ ಅಧ್ಯಕ್ಷರೂ ಮದ್ರಾಸು ಹ್ಯಾಕೋರ್ಟಿನ ಚೀಫ್ ಜಸ್ಟಿಯವರಾದ ಸರ್ [illegible] ರವರ ಕಾರ್ಯನಿರ್ವಾಹಕ ಕಮಿಟಿಯ ಅಧ್ಯಕ್ಷರೂ [illegible] ವರು. [illegible] ಚಕ್ರವರ್ತಿ [illegible] ವರ ಸ್ಮರಣಾರ್ಥ ಸಂಸ್ಥೆಯು ಯಾವ [illegible] ಇಂಥಾ ಸಂಸ್ಥೆಯು ಯಾವ ಉದ್ದಿಶ್ಯ [illegible] ವರು. ಇದೀ ದಕಿ ಣಹಿಂದು [illegible] ಜಾತಿ ಮತಸ್ತರಿಗೂ ಏಕ ರೀತಿ ಉಪಯೋಗವಾಗ [illegible] ಹೆಸರಲ್ಲಿ ಇಂಥಾ [illegible] ಗೌರವಕ್ಕೆ ತಕ್ಕದಾದ ರೀತಿಯಲ್ಲಿ ಇದ [illegible] ಸಂಸ್ಥಾನ [illegible] ಸದಾ ಅಭಿವೃದ್ಧಿಸುವ ಸ್ವಭಾವವುಳ್ಳ [illegible] ಸ್ಮರಣಾರ್ಥ [illegible] ಬೇಕೆಂದೂ ನಿರ್ಣಯಿಸಲ್ಪಟ್ಟಿರುವುದು. ಈ ಎಲ್ಲಾ ಉದ್ದಿಶ್ಯ [illegible] ಬೇಕಾದರೆ ಸರ್ವರೂ ಉದಾರ ಮನಸ್ಸಿನಿಂದ ಈ ಫಂಡಿಗೆ ಸಹಾಯ [illegible] ಸ್ಮರಣಾರ್ಥ ಸಂಸ್ಥೆ ಬಗ್ಗೆ ಈ ಉದ್ದಿಶ್ಯಗಳಿಗನುಸಾರವಾದ ಯಾವ [illegible] ಯಾದರೂ ಜನರಲ್ ಕಮಿಟಿಯವರ ಮುಂದಿರುವ ಬಗ್ಗೆ ಈ ಕಾರ್ಯನಿರ್ವಾಹಕ [illegible] ವರು ಪರ್ಯಾಲೋಚಿಸುವರು.

ನಾಳೆ ಈ ಬಗ್ಗೆ ಕೂಡುವ ಸಭೆಯಲ್ಲಿ ಎಡ್ವರ್ಡ್ ಚಕ್ರವರ್ತಿಗಳವರ ಹೆಸರಲ್ಲಿ ಇಲ್ಲಿ ಒಂದು ಟೌನ್ ಹೋಲನ್ನು ಕಟ್ಟಿಸುವ ಸೂಚನೆಯನ್ನು ಮಾಡಬೇಕೆಂತ [illegible] ಬಾತ್ಮೀದಾರರು ನಮ್ಮ ಕಳೆದ ಒಂದೆರಡು ಸಂಚಿಕೆಗಳಲ್ಲಿ ಸೂಚಿಸಿರುವರು. [illegible] ಸೂಚನೆಯು ನಮಗೆ ಅಯುಕ್ತವೆಂತ ತೋರುತ್ತದೆ. ಯಾಕಂದರೆ ಮಂಗಳೂರು ಪಟ್ಟಣಕ್ಕೆ ಅಗತ್ಯವಿರುವ ಟೌನ್‌ಹೋಲನ್ನು ಕೀರ್ತಿಶೇಷ ವಿಕ್ಟೋರಿಯಾ [illegible] ವರ ಹೆಸರಲ್ಲಿ ಸ್ಥಾಪಿಸಬೇಕೆಂತ ಈ ಮೊದಲೇ ನಿರ್ಣಯಿಸಲ್ಪಟ್ಟಿರುವದು. [illegible]

ಆಗಿನ ಜಡ್ಜರಾಗಿದ್ದ ಹಾರ್ಡಿಂಗ್ ದೊರೆಗಳವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಪರ ಲೋಕವನ್ನೈದಿದ ಮಂಗಳೂರು ಯುನಿಯನ್ ಕ್ಲಬ್ಬಿನ ರೂ. ೧೧೦೦ ಕೂಡಿ ವಂತಿಗೆ ಪಟ್ಟಿಯಲ್ಲಿ ಒಟ್ಟಿಗೆ ರೂ ೩೦೦೦ ಜಮೆಯಾಗಿತ್ತೆಂತ ಆಗ್ಯೆ ತಿಳಿಸಲ್ಪಟ್ಟಿತ್ತು ಈ ಸಭೆಗೆ ಕಲೆಕ್ಟರ ದೊರೆಗಳವರು ಸಹಾ ಬಂದಿದ್ದರು ಹಣಸಂಗ್ರಹಿಸುವ ಬಗ್ಯೆ ರಾವ್ ಸಾಹೇಬ್ ಎಸ್ ಸುಬ್ಬರಾವ್, ರಾ ಕೇಜಾವರ ಭೋಜರಾವ್, ರಾ। ಎ ಜಿ ಲೋಬೋ, ರಾ। ಅಮ್ಮೆಂಬಳ ವಾಸುದೇವಪೈ ಜಮಾಲುದ್ದೀನ್ ಸಾಹೇಬ, ಖಾನ್ ಬಹದೂರ್ ಹಾಜಿ ಅಬ್ಬುಬಕರ್ ಸಾಹೇ ಇವರ ಒಂದು ಕಮಿಟಿಯನ್ನು ಏರ್ಪಡಿಸಿದ್ದರು ಕಮಿಟಿಯವರ ಕಾರ್ಯನಿರ್ವಾಹ ವೃತ್ತಾಂತವು ಈ ವರೆಗೆ ಪ್ರಕಟಿಸಲ್ಪಡಲಿಲ್ಲವಾದ್ದರಿಂದ ವಿಕ್ಟೋರಿಯಾ ಮೆಮೊರಿಯಲ್ ಹೋಲಿನ ಪ್ರಸ್ತಾಪವನ್ನೇ ಮರೆತುಬಿಟ್ಟು ಬಾತ್ಮೀದಾರರು ಗತಿಸಿದ ಚಕ್ರವರ್ತಿಗಳ ಹೆಸರಲ್ಲಿ ಇಲ್ಲಿಯು ಪಟ್ಟಣ ಸಭಾಮಂದಿರವನ್ನು ಸ್ಥಾಪಿಸಬೇಕೆಂತ ಸೂಚಿಸಿರುವುದಕ್ಕೆ ಸಾಕ್ಷಿ ನಾಳೆಯ ಸಭೆಯಲ್ಲಿ ಬಾತ್ಮೀದಾರರು ಸೂಚಿಸಿದ ಅಸಾಧ್ಯ ಸೂಚನೆಯನ್ನು ಯಾರೂ ಮಾಡದಂತೆ ನಾಳೆ ಕೂಡುವ ಸಭಿಕರ ಸ್ಮೃತಿಪಥಕ್ಕೆ ೧೯೦೬ನೇ ಇಸವಿ ಜುಲಾಯಿ ೩ನೇ ತಾರೀಖಿನ ಕೂಟದ ನಡವಳಿ ವೃತ್ತಾಂತವನ್ನು ಈ ಮೂಲಕ ತಂದಿರುವೆವು ಹೋಲಿನ ವಿ ಮೆಮೊರಿಯಲ್ ಹೋಲಿನ ಬಗ್ಯೆ ದ್ರವ್ಯಸಂಗ್ರಹವನ್ನು ಮಾಡಲಿಕ್ಕೆ ನೇಮಕಪಟ್ಟ ಕಮಿಟಿಯವರು ೧೯೦೬ನೇ ಇಸವಿ ಜುಲಾಯಿ ೩ನೇ ತಾರೀಖಿನ ನಂತರದ ತಮ್ಮ ಕಾರ್ಯ ನಿರ್ವಾಹ ವೃತ್ತಾಂತವನ್ನು ಪ್ರಕಟಿಸಬಹುದೆಂಬದಾಗಿ ತೋರುತ್ತದೆ

ನಮ್ಮ ಸಂಸ್ಥಾನದ ಮುಂದಾಳುಗಳು ಗತಿಸಿದ ಚಕ್ರವರ್ತಿಗಳ ಸ್ಮರಣಾರ್ಥವಾಗಿ ಪ್ರಜಾ ಉಪಯೋಗಕರವಾದ ಏರ್ಪಾಡನ್ನು ಮಾಡತಕ್ಕ ಉದ್ಯುಕ್ತರಾಗಿರುವರು ಇಂಥಾ ಸಂಸ್ಥೆಗೆ ರಾಜಭಕ್ತಿ ಪುರಸ್ಸರವಾಗಿಯೂ ಪ್ರಾಮಾಣಿಕತೆಯಿಂದಲೂ ಪ್ರತಿಯೊಬ್ಬನು ಸಹಾಯಮಾಡುವುದು ಕರ್ತವ್ಯವಾಗಿರುವುದರಿಂದ ನಾಳೆಯ ಸಭಾಕಾರ್ಯವನ್ನು ನಮ್ಮಲ್ಲಿಯ ಸರ್ವರೂ ಕೂಡಿ ನೆರವೇರಿಸಿಕೆಡುವರೆಂದು ನಂಬಿದ್ದೇವೆ

ಮೆಡಿಕಲ್ ರಿಜಿಸ್ಟ್ರೇಶನ್ ಆಕ್ಟು

ಈ ಆಕ್ಟು ಅಂಗ್ಲಾಳ ಮೊದಲಾದ ಪಾಶ್ಚಾತ್ಯದೇಶಗಳಲ್ಲಿ ಜಾರಿಯಲ್ಲಿರುವುದು. ಈ ಆಕ್ಟಿನ ಪ್ರಕಾರ ಸರಕಾರದವರಿಂದ ಅಂಗೀಕರಿಸಲ್ಪಟ್ಟ ಅಥವಾ ಸ್ಥಾಪಿಸಲ್ಪಟ್ಟ ವೈದ್ಯಶಾಲೆಗಳಲ್ಲಿ ತರಬೇತಿ ಪಡೆದ ಸರ್ಟಿಫಿಕೇಟುಗಳನ್ನು ಹೊಂದಿದ ವೈದ್ಯರೇ ವೈದ್ಯವೃತ್ತಿಯನ್ನು ಮಾಡಬೇಕು ಇತರರು ಈ ವೃತ್ತಿಯನ್ನವಲಂಬಿಸುವುದು ಸಮಾಜಕ್ಕೆ ಅಪಾಯಕರವಾದ್ದರಿಂದ ವೈದ್ಯಶಾಸ್ತ್ರಜ್ಞತೆ ಇಲ್ಲದ ಜನರನ್ನು ನಿರ್ಬಂಧಿಸಿ ಔಷಧಿ ಚಿಕಿತ್ಸೆ ಮೊದಲಾದವುಗಳು ಜನರಿಗೆ ಶಾಸ್ತ್ರೋಕ್ತ ರೀತಿಗಳಲ್ಲಿಯೇ ದೊರೆಯುವಂತೆ ಮಾಡುವುದು ಇಂಥಾ ಆಕ್ಟುಗಳ ಮುಖ್ಯೋದ್ದೇಶ್ಯವಾಗಿರುವುದು ಹಿಂದುಸ್ಥಾನದಲ್ಲಿ ಸಹ ಇಂಥಾದೊಂದು ಆಕ್ಟನ್ನು ಪಾಸುಮಾಡಿ ಜಾರಿಗೆ ತರಬೇಕೆಂತ ದೇಶದ ಆಯಾ ಕಡೆಗಳಲ್ಲಿರುವ ವೈದ್ಯವೃತ್ತಿಗಳಲ್ಲಿ ಪ್ರಮುಖರಾದವರು ಪ್ರಯತ್ನಪಡುತ್ತಿರುವರು

ಮುಂಬಯಿ ಪಟ್ಟಣದಲ್ಲಿ ಸರ್ ಬಾ [illegible] ಪ್ರಸನ್ನ [illegible] ಪ್ರಭು [illegible] ಸಾಕ್ಕಾರರವರ ಅಧ್ಯಕ್ಷತೆಯಲ್ಲಿ ವೈದ್ಯವೃತ್ತಿಯ ಸಭೆ [illegible] ಆಕ್ಟನ್ನು ಏರ್ಪಡಿಸಿ ಜಾರಿಗೆ ತರಬೇಕೆಂದು [illegible] ತಿ [illegible] ವೈದ್ಯಶಾಲೆಗಳಲ್ಲಿ ನಾಲ್ಕು ವರುಷಗಳ ಪರ್ಯಂತ ಶಿಕ್ಷಣ ಪಡೆದು [illegible] ಶಾಲಾ ಪರೀಕ್ಷೆಗಳನ್ನು ಪಾಸಾದವರೂ ಆಗದ್ದ ಹೊಸ್ಪಿಟಲ್ ಅಸಿಸ್ಟಾಂಟರನ್ನು ಸಹ [illegible] ಅಥವಾ ತರಬೇತಿ ಹೊಂದಿದ ಡಾಕ್ಟರರು ಅಲ್ಲವೆಂದು [illegible] ಸಹಾ ಗವರ್ನಮೆಂಟಿನವರಿಗೆ ಮನವಿ [illegible] ಕೊಂಡಿದ್ದರೆಂದು [illegible] ಸಂಚಿಕೆಯಲ್ಲಿ ಸೂಚಿಸಿದ್ದೇವೆ ಇದರ ಹೊಸ್ಪಿಟಲ್ ಅಸಿಸ್ಟಾಂಟರನ್ನು ತರಬೇತಿ ಪಡೆದ ಡಾಕ್ಟರರುಗಳಲ್ಲವೆಂತ ಗ್ರಹಿಸುವುದು [illegible] ಈ ಮನವಿಯನ್ನು ಮಾಡಿದವರಿಗೆ ಮುಂಬಯಿ ಸರಕಾರದವರ ತಿಳಿಸಿದ ಪ್ರಕಾರ ಆಕ್ಟನ್ನು ಜಾರಿಗೆ ತರುವ ವಿಷಯಕ್ಕೆ ತಕ್ಕ ಗಮನವನ್ನು ಕೊಡುವೆವೆಂದು ಆಜ್ಞಾಪಿಸಿರುವರು ಇತ್ತಲಾಗೆ ಈ ಹೊಸ್ಪಿಟಲ್ ಅಸಿಸ್ಟಾಂಟರವರ [illegible] ಸಹಾ ಸಬ್ ಅಸಿಸ್ಟಾಂಟ್ ಸರ್ಜನರುಗಳೆಂತ ತಬ್ದೀಲಾಗಿ ಸರಕಾರದವರು ಇವರ ವೇತನವನ್ನು ಸಹ ಅಲ್ಪಸ್ವಲ್ಪ ಹೆಚ್ಚಿಸಿರುವರು [illegible] ಮುಂಬಯಿಯ ಸರಕಾರದ ಈ ಆಕ್ಟಿನ ವಿಷಯದ ಅಭಿಪ್ರಾಯವನ್ನೂ ಸ್ಟೇಟ್ ಸೆಕ್ರೆಟರಿಗಳಾದ ಮೋರ್ಲೆ ಪ್ರಭುಗಳು ವೈದ್ಯ ಇಲಾಖೆಯಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಲಿಕ್ಕಿರುವರೆಂಬ ಸಂಬಂಧವನ್ನೂ ಅರಿತುಕೊಂಡು ದೇಶದ ಆಯಾ ಪ್ರಾಂತ್ಯಗಳಲ್ಲಿ ಅಂಗ್ಲ ರೀತಿಗಳಲ್ಲಿ ವೈದ್ಯಶಾಸ್ತ್ರ ಪಾಂಡಿತ್ಯವನ್ನು ಪಡೆದ ಡಾಕ್ಟರರುಗಳು ಇಂಥಾದೊಂದು ಆಕ್ಟನ್ನು ಹಿಂದುಸ್ಥಾನದಲ್ಲಿ ಸಹಾ ರಚಿಸಬೇಕೆಂತ ಕಳಕಳವೆಬ್ಬಿಸುತ್ತಿರುವರು

ಜನರ ದೇಹಸಂರಕ್ಷಣೆಗಾಗಿ ಇಂಥಾದೊಂದು ಕಾನೂನು ಅಗತ್ಯವಾಗಿರುವುದು [illegible] ಆದರೆ ಹಿಂದುಸ್ಥಾನದ ಪ್ರಜಾ ವಿದ್ಯಮಾನಗಳು ಪೂರ್ಣವಾಗಿ [illegible]

ಯೂ ಇನ್ನೂ ಇಂಗ್ಲಿಷ್ ವಿದ್ಯಾಭ್ಯಾಸ [illegible] ಅನುಕೂಲವಾದ ವಿ[illegible] ಇರುವುದು. ದೇಶದ ಕೆಲವು ಕಡೆಗಳಲ್ಲಿ ಶಾಸ್ತ್ರೋಕ್ತ ಆಯುರ್ವೇದ ಮೊದಲಾದವುಗಳನ್ನು ಕಲಿಸಿ ಆಯುರ್ವೇದ ಪಂಡಿತರನ್ನು ತರಬೇತಿ ಮಾಡುವ ಬಗ್ಯೆ ಆಯುರ್ವೇದ ಶಾಲೆಗಳನ್ನು ಸ್ಥಾಪಿಸಿರುವರು ಮೈಸೂರು ಸರಕಾರದವರು ಸಹಾ ಪ್ರಜಾ ಸಮುದಾಯಕ್ಕೆ ಹೆಚ್ಚಿನ ವಿಶ್ವಾಸವುಳ್ಳ ಆಯುರ್ವೇದ ಚಿಕಿತ್ಸೆಯಲ್ಲಿ ಸ್ವದೇಶಸ್ಥರನ್ನು ತರಬೇತಿ ಮಾಡುವುದು ಶ್ರೇಯಸ್ಕರವೆಂತ ಅಭಿಪ್ರಾಯಪಟ್ಟು ಈ ಬಗ್ಯೆ ಬೇಕಾದ ಏರ್ಪಾಡುಗಳನ್ನು ಮಾಡಿರುವರಾಗಿ ತೋರುತ್ತದೆ ಹಿಂದುಸ್ಥಾನದಲ್ಲಿ ಜನಸಂಖ್ಯೆಗೆ ತಕ್ಕ ಅಂಗ್ಲ ವೈದ್ಯಶಾಸ್ತ್ರಜ್ಞರಾದ ಡಾಕ್ಟರುಗಳ ಸಂಖ್ಯೆಯು ಬಹಳ ಕಡಿಮೆಯಾಗಿರುವುದು ಇಂಥವರ ಸಂಖ್ಯೆಯು ಹೆಚ್ಚಾಗುವುದಕ್ಕೆ ಸಹ ತಕ್ಕ ಉಪಾಯ ಪ್ರಕೃತವಿಲ್ಲ ಎಮ್ ಬಿ ಸಿ ಎಮ್ ಮತ್ತು ಎಲ್ ಎಮ್ ಎಸ್ ಪರೀಕ್ಷೆಗಳಿಗೆ ಕುಳಿತುಕೊಳ್ಳಬೇಕಾದರೆ ವಿದ್ಯಾರ್ಥಿಯು ಕನಿಷ್ಠಪಕ್ಷಕ್ಕೆ ಎಫ್ ಎ ಪರೀಕ್ಷೆಯಾದರೂ ಪಾಸಾಗಬೇಕು 'ಹೊಸ್ಪಿಟಲ್ ಅಸಿಸ್ಟಾಂಟರ ಪರೀಕ್ಷೆಗೆ ಹೋಗಬೇಕಾದರೆ ಮೆಟ್ರಿಕ್ಯುಲೇಶನ್ ಪಾಸಾದವನು ಬೇಕು ಇತ್ತಲಾಗೆ ನಮ್ಮ ಸಂಸ್ಥಾನದ ಸರಕಾರದವರು ಪ್ರೌಢ ವಿದ್ಯಾಭ್ಯಾಸ ಕ್ರಮದಲ್ಲಿ ಮಾಡಿದ ಮಾರ್ಪಾಟುಗಳಿಂದ ಇನ್ನು ಮುಂದಕ್ಕೆ ಎಫ್ ಎ ಮತ್ತು ಮೆಟ್ರಿಕ್ಯುಲೇಶನ್ ಪರೀಕ್ಷೆಗಳಿಗೆ ಹೋಗುವವರ ಸಂಖ್ಯೆಯು ಬಹಳ ಸ್ವಲ್ಪವೇ ಆಗುವುದೆಂತ ಹಲವರು ಊಹಿಸುತ್ತಿರುವರು

ಈ ವಿದ್ಯಮಾನಗಳಲ್ಲಿ ಅಂಗ್ಲಾಳದಲ್ಲಿರ ಪಷ್ಟೇ [illegible] ಈ ಕಾನೂನನ್ನು ಜಾರಿಗೆ ತರುವುದು ಉಪಯುಕ್ತವಲ್ಲ ಶಾಸ್ತ್ರರೀತಿಗಳಲ್ಲಿ ಆಯುರ್ವೇದದಲ್ಲಿ ತರಬೇತಿ ಹೊಂದಿದವರನ್ನು ಇಂಥ ಆಕ್ಟಿನಿಂದ ನಿರ್ಬಂಧಿಸುವುದು ಸಹ ಯುಕ್ತವೆಂತ ನಮಗೆ ತೋರುವುದಿಲ್ಲ [illegible] ಕಾಲದಲ್ಲಿ [illegible] ಅವಳಿಕೆಯಾಗಿದ್ದ ಆಯುರ್ವೇದ ಔಷಧಿಗಳ ಪ್ರಚಾರವನ್ನು ನಿಲ್ಲಿಸಿ ಇವುಗಳ ಬದಲು ಆಪರಿಚಿತ ಔಷಧಿಗಳನ್ನು ರೂಢಿಗೆ ತರುವುದು [illegible] ಶಾಸ್ತ್ರೋಕ್ತ ರೀತಿಗಳಲ್ಲಿಯೇ ಪ್ರಜೆಗಳಿಗೆ ಔಷಧಿಯೂ ಚಿಕಿತ್ಸೆಯೂ ದೊರೆಯುವಂತೆ ಮಾಡುವುದು ಈ ಆಕ್ಟಿನ ಮುಖ್ಯ ಉದ್ದಿಶ್ಯವಾದ್ದರಿಂದ ಇಂಥಾ ಚಿಕಿತ್ಸೆಗಳು [illegible] ಆಯುರ್ವೇದ ಶಾಸ್ತ್ರಕ್ಕನುಗುಣವಾದರೇನು ಅಥವಾ ಪಾಶ್ಚಾತ್ಯ ಶಾಸ್ತ್ರಕ್ಕನುಗುಣವಾದರೇನು? ಸರಕಾರದವರು ಅಲ್ಲಲ್ಲಿ ಸ್ಥಾಪಿಸಲ್ಪಟ್ಟ ಆಯುರ್ವೇದ ಶಾಲೆ ಮುಂತಾದವುಗಳನ್ನು ಅಂಗೀಕರಿಸಿ ಅವುಗಳನ್ನು ತಕ್ಕದಾದ ಮೇಲ್ವಿಚಾರದಲ್ಲಿಟ್ಟುಕೊಂಡು ಈ ಔಷಧಿ ಶಾಲೆಗಳಿಂದ ಪಾಸಾದವರನ್ನೂ ಕೊಂಡು ಈ ಆಕ್ಟನ್ನು ಜಾರಿಗೆ ತರುವುದುಚಿತ ಆಗ್ಯೆ ಅಪಾಯಕರವಾದ 'ಅರೆಕಾಯಿ ಪಂಡಿತರಿಂದಲೂ, ಬೇರೆ ಯಾವದಾದರೂ ವೃತ್ತಿಗಳನ್ನು ಮಾಡುವುದು ಪ್ರಯಾಸವೆಂತ ಕಂಡು, ತಕ್ಕ ಶಿಕ್ಷಣವಾಗಲೀ ಆಸ್ಪತ್ರೆ ಮೊದಲಾದವುಗಳಲ್ಲಿ ದೊರೆಯುವ ತರಬೇತಿಯಾಗಲೀ ಹೊಂದದೆ ಪುಸ್ತಕ ಪಠನವನ್ನು ಮಾಡಿ ಅವುಗಳ ಅರ್ಥವನ್ನು ಸರಿಯಾಗಿ ತಿಳಿಯದಿದ್ದರೂ ಸಂಸ್ಕೃತ ಭಾಷಾ ಜ್ಞಾನವಿಲ್ಲದೆ ಅದರ ಪವಿತ್ರತೆಯಲ್ಲಿ ಮಾತ್ರ ವಿಶ್ವಾಸವಿರುವ ಜನಸಾಮಾನ್ಯರನ್ನು, ಸಂಸ್ಕೃತ ಶ್ಲೋಕ ಪಠನದಿಂದ ವಿಶ್ವಾಸಗೊಳಿಸುವ ಆಯುರ್ವೇದ ಪಂಡಿತರೆಂಬ ಬಿರುದನ್ನು ಹಾಕಿಕೊಂಡಿರುವವರಿಂದ ಆಗುವ ಹಾವಳಿಯೂ ಕ್ರಮೇಣ ಅದೃಶವಾಗುವುದು

ನಮ್ಮ ಪುಸ್ತಕಗಳು

ಮನುಷ್ಯನಿಗೆ ಈ ಲೋಕದಲ್ಲಿ ಮೂರು ವಸ್ತುಗಳು ಅವಶ್ಯವಾದವು ಎಂದು ಹೇಳಿದರೆ ಕಲವರು ಈ ಮೂರು ವಸ್ತುಗಳು ಹೊನ್ನು, ಹೆಣ್ಣು, ಮಣ್ಣು ಎಂಬದಾಗಿ ನೆನಸಬಹುದು [illegible] ವಿದ್ವಾಂಸರು ಹೇಳುವದೇನೆಂದರೆ ಒಂದನೇ ಒಳ್ಳೇ ಪ್ರಕೃತಿ, ಎರಡನೇ ಒಳ್ಳೇ ಮಿತ್ರರು ಮೂರನೇ ಒಳ್ಳೇ ಪುಸ್ತಕಗಳು ಆ ವಿದ್ವಾಂಸರು ಹೇಳುವಂತೆ ಈ ಮೂರರಿಂದ ಪ್ರತಿಯೊಬ್ಬ ಮಾನವನು ಸುಖಿ ಪಡುತ್ತಾನೆಂಬುದು ನಿಶ್ಚಯವು. ನಾವು ಇವುಗಳ ವಿಚಾರವನ್ನು ಸ್ಪಷ್ಟವಾಗಿ ಮಾಡಿದರೆ ಶರೀರ ಪ್ರಕೃತಿಯು ಏಕಪ್ರಕಾರದ್ದಾಗಿರದೆ ವಿಕೃತಿಸುವುದು ಒಳ್ಳೇ ಮಿತ್ರರು ದೂರವಾಗಬಹುದು, ಆದರೆ ಒಳ್ಳೇ ಪುಸ್ತಕಗಳು ಯಾವಾಗಲೂ ಹತ್ತರವಿದ್ದು ಉಪಯೋಗಕ್ಕೆ ಬೀಳುತ್ತವೆ ದೇಹ ಪ್ರಕೃತಿಯು ದೃಢವಾಗಿರುವಂತೆ ಜಾಗರೂಕರಾಗಿರುವುದೂ, ಮಿತ್ರರೊಂದಿಗೆ ಸಂಪರ್ಕವನ್ನು ಕಾಪಾಡುವದೂ ಹೇಗೆ ಅಗತ್ಯವೋ ಅದಕ್ಕಿಂತಲೂ ಹೆಚ್ಚಾಗಿ ಒಳ್ಳೇ ಪುಸ್ತಕಗಳನ್ನು ಕಾಪಾಡಿಕೊಳ್ಳುವದು ಅಗತ್ಯವಾಗಿದೆ.

[illegible] ಕಿಟಿಕಿಗಳಿಲ್ಲದ ಮನೆಗೆ ಕ್ಷೇಮ ಇಲ್ಲವೋ ಹಾಗೆಯೇ ಪುಸ್ತಕಗಳಿಂದುಂಟಾಗುವ ಜ್ಞಾನರಹಿತನಿಗೆ ಶುಭವಿಲ್ಲ ಹೇಗೆ ಕಿಟಿಕಿಯಿಂದಲೇ ಸೆಕೆ, ತಂಪು, ಗಾಳಿ, ಬೆಳಕು ಮನೆಯೊಳಗೆ ಬಂದು ಕೆಡಕಾದ ವಾಯು ಹೊರಗೆ ಹೋಗುತ್ತದೋ ಹಾಗೆಯೇ ನಮಗೆ ಮನೋರಂಜನೆಯೂ ಬೇರೆ ಬೇರೆ ವಿಧದ ಅರುಹು ಬರುವದೂ, ಅಜ್ಞಾನ ಹೋಗುವದೂ ಪುಸ್ತಕಗಳಿಂದಲೇ! ಅನ್ನಪಾನ, ವಸ್ತ್ರ ಹೊದಿಕೆ, ಮಡಿಕೆ [illegible] ಯಲ್ಲಿ ಮನುಷ್ಯನಿಗೆ ಅಗತ್ಯವೋ ಹಾಗೆಯೇ [illegible]

[illegible]

ಪುಸ್ತಕಗಳಂತಹ ಅಮೂಲ್ಯವಾದ ವಸ್ತು ಇಲ್ಲವೆಂದು ವಿದ್ವಾಂಸರ ಸಮ್ಮತವು. ಪುಸ್ತಕಗಳ ಮುಂದೆ ನವರತ್ನಗಳು ಕಲ್ಲಿನ ಹರಳಿನಂತೆ, ರುಪಾಯಿ ಮಣ್ಣಿನಂತೆ, ಚಿನ್ನವು ಉಸುಬಿನಂತೆಯೂ, ಸೂರ್ಯ ಚಂದ್ರನ ಬೆಳಕು ಕತ್ತಲೆಯಂತೆಯೂ ಇದೆ. ಜೇನು ಪುಸ್ತಕಗಳ ಮುಂದೆ ರುಚಿ ಕಳಕೊಳ್ಳುತ್ತದೆ. ಅದೇ ಬುದ್ಧಿಯನ್ನು ಕೊಡುವದು. ಐಶ್ವರ್ಯವು ವಿಷಯಾನುರಾಗವನ್ನುಂಟುಮಾಡಬಹುದು; ಒಳ್ಳೇ ಪುಸ್ತಕಗಳು ಅಂಥಾ ವಿಷಯಾನುರಾಗವನ್ನು ನಾಶಮಾಡುವವು. ದುಃಖಪಡುವವರಿಗೆ ಇವುಗಳಿಂದ ಸುಖವೂ, ದರಿದ್ರರಿಗೆ ಇದರಿಂದ ಭಾಗ್ಯವೂ, ದೊರಕುವುದು, ಆಪತ್ತಿನಲ್ಲಿ ಇವುಗಳೇ ಕವಚ, ಇವುಗಳೇ ನೆನಸಿದೆಲ್ಲವನ್ನು ಕೊಡುವ ಚಿಂತಾಮಣಿ!

ಮಹಾನುಭಾವರು ಬಹು ಶ್ರಮೆಯಿಂದಲೂ ದೀರ್ಘ ಪ್ರಯತ್ನದಿಂದಲೂ ಗಳಿಸಿಟ್ಟ ದ್ರವ್ಯಬಂಡಾರವು ತಕ್ಷಣವೇ ಹೋಗಿಬಿಡುವದು, ನೂರಾರು ವರುಷಗಳ ಹಿಂದೆ ಶೋಭಿಸಿದ ವಿದ್ವಾಂಸರು ಈಗ ಜೀವಂತರಾಗಿ ಇಲ್ಲವಿದ್ದಾಗ್ಯೂ ಅವರು ಬರೆದಿಟ್ಟ ಗ್ರಂಥಗಳು ಎಂದೆಂದಿಗೂ ಹೋಗಯುತ್ತವಲ್ಲ. ಅವರು ಬರೆದಿಟ್ಟ ಪುಸ್ತಕಗಳು ಜೀವಿತ ಮನುಷ್ಯರಂತೆ ನಮ್ಮ ಕೂಡ ಮಾತಾಡುತ್ತವಲ್ಲ. ಅರಸರು ಹೇಗೆ ರಾಜ್ಯಭಾರ ಮಾಡಿದರು? ಶೂರರು ಎಂಥೆಂಥಾ ಶೂರಕೃತ್ಯಗಳನ್ನು ಮಾಡಿದರು? ಜ್ಞಾನಿಗಳು ಹೇಗೆ ಜ್ಞಾನಶೋಧನೆ ಮಾಡಿದರು? ಎಂಬಿತ್ಯಾದಿ ಸಂಗತಿಗಳು ಪುಸ್ತಕಗಳಲ್ಲಿದ್ದರೆ ಅವು ಕಾಲವಾದಾಕ್ಷಣ ನಿಮಿಷಮಾತ್ರದಲ್ಲಿಯೇ ಅಪ್ರಕಾಶವಾಗಿ ಹೋಗುತ್ತಿದ್ದವು ಎಂಬುವದಕ್ಕೆ ಸಂದೇಹ ಉಂಟೇ? ಆದರೆ ಈಗ ವಿದ್ವಾಂಸರ, ಅರಸರ ಬುದ್ಧಿವಂತಿಕೆಗಳೆಲ್ಲಾ ನಮ್ಮ ತಿಳುವಳಿಕೆಗೆ ಬಂದು ಈ ಲೋಕದಲ್ಲಿ ಹೇಗೆ ನಡೆಯಬೇಕೆಂಬುದರ ವಿಷಯ ಪೂರ್ವಜರ ಅನುಭವವನ್ನು ನೋಡಿಕೊಂಡು, ಜೀವನ ಮಾರ್ಗದಲ್ಲಿ ಯಾವ ಯಾವ ಅಡಚಣೆಗಳು ಉಂಟೆಂದು ತಿಳಿದು, ಮಾರ್ಗವನ್ನು ಸರಾಗಮಾಡಿಕೊಳ್ಳುವ ಹಾಗೆ ಪೂರ್ವಿಕರು ಬರೆದಿಟ್ಟ ಪುಸ್ತಕಗಳಿಂದ ನಮಗೆ ಸಾಧ್ಯವಾಗುತ್ತದಲ್ಲ.

ವಿದ್ವಾಂಸರ ಬಾಯಿ ಮಾತುಗಳಿಗೆ ಬೆಲೆಯಿದೆ ಬಿಡಿ, ಆದರೆ ಅವರ ಲೇಖನಿಯಿಂದ ಬರೆದ ವಾಕ್ಯಗಳಿಗೆ ಇನ್ನೂ ಬೆಲೆ ಹೆಚ್ಚು. ಉಪಾಧ್ಯಾಯರು ಸಿಕ್ಕುವದು ಪ್ರಯಾಸ, ಒಂದು ವೇಳೆ ಸಿಕ್ಕಿದರೂ ಅವರನ್ನು ಸಂತೋಷಪಡಿಸಿಕೊಳ್ಳುವದು ಮತ್ತಷ್ಟು ಪ್ರಯಾಸವು. ಆದರೆ ಉತ್ತಮ ಗುರುಗಳ ಬಾಯಿಂದ ಬಂದ ಮಾತುಗಳೂ, ಅವರ ಲೇಖನಿಯಿಂದ ಬರೆದಿಟ್ಟ ವಾಕ್ಯಗಳೂ ಸಿಕ್ಕುವದು ಎಂಥಾ ಭಾಗ್ಯವು! ಗುರುಗಳು ಶಿಕ್ಷಿಸಬಹುದು, ಪುಸ್ತಕಗಳು ಕೋಪವಿಲ್ಲದೆ ನಮಗೆ ಬುದ್ಧಿ ಹೇಳುತ್ತವೆ. ಒಂದಾವರ್ತಿ ಎರಡಾವರ್ತಿ ವಿಚಾರಿಸಿದರೆ ಉಪಾಧ್ಯಾಯರು ಬೇಸತ್ತು ನೀವು ಹೆಡ್ಡರು, ದಡ್ಡರು ಎಂದು ನಮ್ಮನ್ನು ಧಿಕ್ಕಾರಿಸಬಹುದು. ಆದರೆ ನಮಗೆ ಅರ್ಥ ಆಗುವ ವರೆಗೆ ನೂರಾರು ಬಾರಿ ವಿಚಾರಿಸಿದರೂ ಪುಸ್ತಕಗಳು ನಮ್ಮ ಮೇಲೆ ಬೇಸರಪಡವು. ಯಾವ ವೇಳೆಯಲ್ಲಿ ಹೋಗಿ ವಿಚಾರಿಸಿದರೂ, ಈಗ ನಮಗೆ ತೆರಪಿಲ್ಲ, ಮತ್ತೆ ಬನ್ನಿ ಎಂದು ಪುಸ್ತಕಗಳು ಹಿಂದೆ ದೂಡಿಬಿಡವು. ಅವುಗಳಿಗೆ ಅನ್ನವಸ್ತ್ರ ಕೊಟ್ಟು ಸಾಕುವ ಅಗತ್ಯವೂ ಇಲ್ಲ. ಅವುಗಳ ಜೀವವು ಕೆಡದಂತೆ ಕಾಪಾಡುವುದೇ ಸಾಕು. ಇದಕ್ಕಿಂತ ಹೆಚ್ಚು ಅವು ನಮ್ಮಿಂದ ಬೇಡುವುದೇ ಇಲ್ಲ.

ಒಳ್ಳೊಳ್ಳೇ ಪುಸ್ತಕಗಳನ್ನು ಓದ ಮಾಡುತ್ತಿದ್ದಷ್ಟು ಮನಸ್ಸಿಗೆ ವಿಶೇಷ ಹರುಷವಾಗುತ್ತದೆ. ಅವುಗಳನ್ನು ಓದ ತೊಡಗಿದರೆ ಹಸಿವೆ ತಿಳಿಯುವುದಿಲ್ಲ. ಹೊತ್ತು ಹೋಗುವುದೂ ತಿಳಿಯುವದಿಲ್ಲ. ಆಹಾರ ನಿದ್ರೆಗಳ ನೆನಪೂ ಉಳಿಯುವದಿಲ್ಲ. ಮನಸ್ಸಿನ ಕಡುತಾಪಗಳೆಲ್ಲಾ ನೀಗಿಹೋಗುತ್ತವೆ.

ಪಾಶ್ಚಾತ್ಯರು ಗ್ರಂಥಗಳ ಪಕ್ಷೀಯ ಮಾಡುತ್ತಿರುವುದು ಹೆಚ್ಚು. ಇವರು ನಮ್ಮ ದೇಶಕ್ಕೆ ಬಂದು, ನಮ್ಮ ಮಾತೃಭಾಷೆಗಳನ್ನು ಕಲಿತು ಅವುಗಳಲ್ಲಿ ಪಂಡಿತರೆಂದು ಬಿರುದು ಹೊಂದುತ್ತಿರುವರು. ನಾವಾದರೋ ಅಂಥವುಗಳಲ್ಲಿ ಅವರನ್ನು ಅನುಸರಿಸದೆ, ನಮಗೆ ಒಪ್ಪದವುಗಳನ್ನು ಅಂದರೆ ಅವರ ಉಡಿಗೆ ತೊಡಿಗೆ ಮುಂತಾದವುಗಳನ್ನು ಮಾತ್ರವೇ ಅನುಸರಿಸುತ್ತಿರುವೆವು. ನಮ್ಮವರಲ್ಲಿ ಹಲವರು ಶಾಲೆ ಬಿಟ್ಟ ಕೂಡಲೇ ಓದುವುದನ್ನು ಬಿಟ್ಟೇಬಿಟ್ಟು ಅಪರಾಧಿಯನ್ನು ಕಟ್ಟಿ ಹಾಕುವ ಹಾಗೆ ಪುಸ್ತಕಗಳನ್ನು ಕಟ್ಟಿ ತೂಗುತ್ತಾರೆ ಅಥವಾ ಅಡಿಗೆ ಕೋಣೆಯಲ್ಲಿ ಹಾಕಿರುವ ಹಲಗೆಯ ಮೇಲೆ ಪಿಸಾಡಿಬಿಡುತ್ತಾರೆ. ಅವುಗಳ ಸಾರವು ಇಲಿ ಹೆಗ್ಗಣಗಳ ಪಾಲಾಗುವದೇ ಹೊರತು ನಮ್ಮವರ ತಲೆಯ ಪಾಲಿಗಾಗುವುದಿಲ್ಲ. ಆದರೆ ವಿಲಾಯತಿಯವರು ಹೀಗೆ ಮಾಡುವದೇ ಇಲ್ಲ. ಅವರು ಪುಸ್ತಕಗಳನ್ನು ಎಷ್ಟು ಜಾಗ್ರತೆಯಿಂದ ಇಡುತ್ತಾರೆಂಬದನ್ನೂ ಎಷ್ಟು ಒಳ್ಳೇ ರೀತಿಯಲ್ಲಿ ಪರಿಸುತ್ತಾರೆಂಬದನ್ನೂ ನೋಡಿದವರು ಕೊಂಚಮಾತ್ರವೇ ಇದ್ದಾರು!

ವಾಚಕಮಹಾಶಯರುಗಳಿರಾ! ಈ ಕಾಲದಲ್ಲಂತೂ ಪುಸ್ತಕಗಳು ಧಾರಾಳವಾಗಿವೆ. ಬಹಳ ಅಗ್ಗವಾಗಿಯೂ ಸಿಕ್ಕುತ್ತವೆ. ಪೂರ್ವದಲ್ಲಿ ಅವುಗಳು ತುಟ್ಟಿಯಾಗಿದ್ದು ಮಹಾ ಮಹಾ ಶ್ರೀಮಂತರ ಮನೆಗಳಲ್ಲಿ ಮಾತ್ರವೇ ಇದ್ದವು. ಆದರೆ ಈ ಕಾಲವು ಕೇವಲ ಬಡವನಾದರೂ ಪುಸ್ತಕಗಳನ್ನು ತೆಗದಿಡುವ ಕಾಲವು. ವರುಷ ವರುಷಕ್ಕೆ ತಿಂಗಳು ತಿಂಗಳಿಗೆ ಮಾತ್ರವಲ್ಲ, ದಿನಾವಹಿ ಪುಸ್ತಕಗಳ ಸಂಖ್ಯೆ ಹೆಚ್ಚುತ್ತಿರುವ ಈ ಕಾಲದಲ್ಲಿ ಯಾವನ ಬಳಿಯಲ್ಲಿ ಪುಸ್ತಕಗಳಿಲ್ಲವೋ ಅವನು ನಿರ್ಭಾಗ್ಯನು ಎಂದೆನ್ನಬೇಕು. ಆದರೆ ಪುಸ್ತಕಗಳನ್ನು ಕೊಂಡುಕೊಳ್ಳುವಾಗ ಮಾತ್ರ ಅನೇಕ ಸಾರಿ ಓದಿದರೂ ಮನಸ್ಸಿಗೆ [illegible] ಕೊಳ್ಳಬೇಕು. ಬುದ್ಧು ಕಥೆಗಳು ಅಥವಾ ಇತರ ಅನುಚಿತ ವಿಷಯಗಳನ್ನು ಹೊಂದಿರುವ ಕೆಲವು ಪುಸ್ತಕಗಳಿರಬಹುದು. ಅಂಥವುಗಳನ್ನು ಎಂದಾದರೂ ಕೊಂಡುಕೊಂಡು ಓದುವದು ಉಚಿತವಲ್ಲ, ಮಾನಸಿಕ ಅಭಿವೃದ್ಧಿಯನ್ನು ಯಾ ವಿಕಸತೆಯನ್ನು ಹುಟ್ಟಿಸುವ ಪುಸ್ತಕಗಳನ್ನೇ ಓದಬೇಕು. ವ್ಯಾಕರಣ, ನಿಘಂಟು ಇವುಗಳೂ ಅಗತ್ಯವಾದ ಪುಸ್ತಕಗಳು, ವೈದ್ಯರೂ ಉಪಾಧ್ಯಾಯರೂ ಇನ್ನು ಆಯಾ ಉದ್ಯೋಗಸ್ಥರು ತಮ್ಮ ತಮ್ಮ ಉದ್ಯೋಗವನ್ನು ಪರಿಷ್ಕಾರವಾಗಿ ಮಾಡುವ ತಿಳಿವನ್ನು ಕೊಡುವ ಪುಸ್ತಕಗಳನ್ನು ಕೊಂಡುಕೊಂಡು ಓದಿದರೆ ತಮ್ಮ ತಮ್ಮ ಉದ್ಯೋಗದಲ್ಲಿ ಸಮಯಕ್ಕನುಸಾರವಾದ ನೈಪುಣ್ಯವನ್ನು ಹೊಂದಿ ತಮ್ಮ ವೃತ್ತಿಯಿಂದ ತಮಗೂ ಇತರರೆಲ್ಲರಿಗೂ ಪ್ರಯೋಜನವು ಉಂಟಾಗುವಂತೆ ಮಾಡಬಹುದು.

ಪುಸ್ತಕಗಳನ್ನು ಬಲ್ಲನಿಗೆ ಎರವಾಗಿ ಕೊಡುವದು ಒಳ್ಳೆದಲ್ಲ. ಎರವಾಗಿ ಕೊಟ್ಟ ಪುಸ್ತಕಗಳು ಮರಳಿ ಕೈಗೆ ಸಿಕ್ಕುವದು ಕಷ್ಟ. ಎರವಾಗಿ ತರುವುದೂ ಒಳ್ಳೇಯದಲ್ಲವು. ಅವರವರ ಒಡವೆ ಅವರವರಿಗೆ ಪ್ರಿಯವಾಗಿದೆ ಎಂದು ನೆನಸಬೇಕು. ಒಂದು ವೇಳೆ ತಂದರೆ ಬಹಳ ಜಾಗ್ರತೆಯಿಂದಿಟ್ಟು ನೆನಪಿನಿಂದ ಮರಳಿಕೊಡಬೇಕು. ಪುಸ್ತಕಗಳನ್ನು ಬೇಡಿತರುವುದಕ್ಕಿಂತಲೂ ಲೈಬ್ರರಿ ಎಂಬ ಸರಸ್ವತಿ ಭಂಡಾರಕ್ಕೆ ವರಾಡ ಕೊಟ್ಟು ಅಲ್ಲಿಂದ ಅಗತ್ಯವಾದ ಪುಸ್ತಕಗಳನ್ನೇ ತರುವದು ಲೇಸು.

ಜ್ಞಾನವನ್ನು ಅಭಿವೃದ್ಧಿಸಿಕೊಳ್ಳುವ ಮನುಷ್ಯನೂ, ವಿವೇಕವನ್ನು ಕಂಡುಕೊಳ್ಳುವ ಮನುಷ್ಯನೂ ಭಾಗ್ಯವಂತನು. ಜ್ಞಾನವನ್ನು ಸಂಪಾದಿಸುವದು ಅಮೂಲ್ಯವಾದದ್ದೆಂತ ತಿಳಿದು ಇದಕ್ಕೆ ಹೇತುವಾಗಿರುವ ಪುಸ್ತಕಗಳನ್ನೇ ಕೊಂಡುಕೊಂಡು ಅವುಗಳೊಂದಿಗೆ ಸ್ನೇಹಿತರಾಗಿರಲಿಕ್ಕೆ ನೋಡಿದರೆ ಲೋಕದಲ್ಲಿ ಯಾವ ತೊಂದರೆಯೂ ಉಂಟಾಗದು.

S. E. A.

ಪರೋಪಕಾರ

* * * * * * * * *

* * * * * * * * * *

ಪರೋಪಕಾರವನ್ನು ಹೀಗೆಯೇ ಮಾಡಬೇಕೆಂಬ ನಿಯಮವೇನೂ ಇಲ್ಲ. 'ಮನಸ್ಸಿದ್ದರೆ ಮಾರ್ಗವಿದೆ' ಎಂಬಂತೆ ಪರೋಪಕಾರವನ್ನು ಮಾಡಬಯಸುವವನು, ಆವುದಾದರೊಂದು ವಿಧದಿಂದ ಪರೋಪಕಾರವನ್ನು ಮಾಡಿಯೇ ಮಾಡುವನು. ಒಬ್ಬನು ಅನ್ನಛತ್ರಗಳನ್ನು ಕಟ್ಟಿಸುವನು, ಒಬ್ಬನು ವಿದ್ಯಾಶಾಲೆಗಳನ್ನು ಸ್ಥಾಪಿಸಿ ಬಡಬಗ್ಗರಿಗೆ ಧರ್ಮಾರ್ಥವಾಗಿ ವಿದ್ಯೆಯನ್ನು ಹೇಳಿಸುವನು, ಒಬ್ಬನು ಬಡ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡುವನು, ಒಬ್ಬನು ಕಷ್ಟನಷ್ಟದ ಸಂಕಟಪಡುವವರಿಗೆ ಧನಸಹಾಯವನ್ನು ಮಾಡುವನು. ಒಬ್ಬನು ಬಡ ರೋಗಿಗಳಿಗೆ ಉಚಿತವಾಗಿ ಔಷಧಗಳನ್ನೀವನು, ಇವುಗಳೆಲ್ಲವುಗಳಿಗಿಂತಲೂ ಮೇಲಾಗಿ, 'ಪರೋಪಕಾರಾರ್ಥಮಿದಂ ಶರೀರಂ' ಎಂಬುದನ್ನು ಮೂಲಮಂತ್ರವಾಗಿಟ್ಟುಕೊಂಡ ಕೆಲವು ಮಹಾತ್ಮರು, ತಮ್ಮ ಶರೀರವನ್ನೇ ಪರರ ಹಿತಕ್ಕೋಸ್ಕರ ಅರ್ಪಿಸಿಬಿಡುವರು. ಇವರಲ್ಲಿ ಅಗ್ರಗಣ್ಯನಾದೊಬ್ಬ ಪುರಾತನಾರ್ಯ ಮಹನೀಯನ ಚರಿತ್ರೆಯನ್ನು ಉದಾರ ಬುದ್ಧಿಯುಳ್ಳ ನಮ್ಮ ವಾಚಕಮಹಾಶಯರಿಗೆ ತಿಳಿಸಬೇಕೆಂಬಾಸೆಯು ಸಹಜವಾಗಿ ನಮ್ಮಲ್ಲಿ ಹುಟ್ಟಿರುವುದು. * * * *

ಭಯಂಕರವಾದುದೊಂದು ಸ್ಮಶಾನ. ಅಲ್ಲಲ್ಲಿ, ಸ್ವಲ್ಪದೂರದಲ್ಲಿ, ಒಂದೆರಡು ಚಿಕ್ಕ ದೊಡ್ಡ ವೃಕ್ಷಗಳು. ಅಲ್ಲಲ್ಲಿ, ಶವಗಳನ್ನೆಳೆದು ತಿನ್ನಲಾಶಿಸುವ ನಾಲ್ಕೈದು ನರಿನಾಯಿಗಳು. ಸ್ಮಶಾನಮಧ್ಯದಲ್ಲಿ ಎಲುಬುಗಳಿಂದುಂಟಾದ ದೊಡ್ಡ ರಾಶಿಯೊಂದು ಪರ್ವತದಂತೆ ಕಣ್ಣೊಳಿಸುತ್ತಿದ್ದಿತು. ಒಂದೊಂದು ಸಲ ಅಕಸ್ಮಾತ್ತಾಗಿ ಬಿರುಗಾಳಿಯು ಆ ಸ್ಮಶಾನ ಪ್ರಾಂತದಲ್ಲಿ 'ಘೋ' ಎಂದು ಗರ್ಜಿಸುತ್ತ ಬೀಸುತ್ತಿದ್ದಿತು.

ಬಹುಮಾನ! ಬಹುಮಾನ! ಬಹುಮಾನ!

THE KALA-NIDHI MANGALORE.

(ಪೋಷ್ಟ 1 ಕ್ಕೆ 3 ಪೈ)

ಬರುವ ದಶಂಬರ ತಿಂಗಳ ವರೆಗೆ ಮಾತ್ರ. ೪ ರೂಪಾಯಿಗಳ ಕಾಯಿ ಪೊಟ್ಟಗಳನ್ನು ತೆಗದುಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಕೀಲೆಸ್ ಘಡಿಯಾರವು

ಈ ಕಾಯಿಯ [illegible] ತುಕ್ಕು ಹಿಡಿಯದು. ಕಾಯಿಯ ಮೇಲ್ಗಡೆ ಬಾಳು ಸಲ್ಲದು. [illegible] ಅದರೊಡನೆ ಅತಿ ಕಷ್ಟವುವದು

ಬಹುಮಾನಗಳ ವಿವರ. ೪ ಆಣೆಯ ಪೊಟ್ಟಗಳನ್ನು ತಕೊಳ್ಳುವವರಿಗೆ ಸುಗಂಧ ದಂತ ಕಾಂತಿ ಚೂರ್ಣದ ಡಬ್ಬಿ ೧, ೮ ಆಣೆಯವನ್ನು ತಕೊಂಡವರಿಗೆ ಜರ್ಮನ್ ಫೇಬರ್ ಪೆನ್ಸಿಲ್ ಡಜನ್ ೧; ೧ ರೂಪಾಯಿ ಪೊಟ್ಟಗಳನ್ನು ಪಡಕೊಂಡವರಿಗೆ ದೊಡ್ಡವರ ಉತ್ತಮವಾದ ಬನಿಯನ್ ೧; ೨ ರೂಪಾಯಿಯದ್ದನ್ನು ತರಿಸಿಕೊಳ್ಳುವವರಿಗೆ ಓಫೀಸ್ ನಂ ೧ ಕಿಸೆ ಘಡಿಯ ಪೆಟ್ಟಿಗೆ ೧; ೪ ರೂಪಾಯಿಗಳದ್ದು ತರಿಸಿಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್, ಕೀಲೆಸ್ ಕಿಸೆ ಘಡಿಯಾರವು ಗ್ಯಾರಂಟಿ ಸ್ಪ್ರಿಂಗ್ ಸಹಿತ.

ಬ್ಲೋ ಬ್ಲೇಕ್ ದೊಡ್ಡ ಕಾಯಿಯ ಬಾಟ್ಲಿ ೧ಕ್ಕೆ ಆಣೆ ೮. ಸಣ್ಣದಕ್ಕೆ ಆಣೆ ೪. ಕಾಯಿಯ ಗುಳಿಗೆಗಳೂ ಕಾಗದಗಳೂ ಸಹ ಸಿಕ್ಕುವವು. ಪರಸ್ಥಳದವರಿಗೆ ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ:— ಕಲಾನಿಧಿ ಮಂಗಳೂರು.

[illegible]

ಚಿತಿಯಮೇಲಿದ್ದ ಕುಣಪಗಳಿಂದ ಹೊರಡುತ್ತಿದ್ದ ಹೊಗೆಯು, ಆ ಸ್ಮಶಾನವನ್ನೆಲ್ಲ ತುಂಬಿಕೊಂಡು ನಭೋಮಂಡಲವನ್ನು ವ್ಯಾಪಿಸಿದ್ದಿತಲ್ಲದೆ, ದಹ್ಯಮಾನಶವ ದುರ್ಗಂಧವು ದುಸ್ಸಹವಾಗಿದ್ದಿತು. ಎಲ್ಲಿಯೂ ಶಬ್ದವಿಲ್ಲ! ಎಲ್ಲಾ ಕಡೆ ನಿಶ್ಶಬ್ದ! ನೀರವ!

ಮಧ್ಯಾಹ್ನ. ಸೂರ್ಯದೇವನು ಅಂತರಿಕ್ಷದಿಂದ ಪ್ರಾಕಾಂಡವಾದ ಕಿರಣಗಳನ್ನು ಪ್ರಪಂಚದಮೇಲೆ ಪ್ರಸರಿಸುತ್ತಿದ್ದನು. ಅಸದಳವಾದಾ ಬಿಸಿಲಿನ ತಾಪಕ್ಕೆ ಹೆದರಿ, ಪಕ್ಷಿಸಮೂಹವು ಮರಗಳ ಪೊದರುಗಳನ್ನೂ, ದಪ್ಪವಾಗಿ ಶೀತಳವಾಗಿದ್ದ ಎಲೆಗಳ ಮಧ್ಯಪ್ರದೇಶವನ್ನೂ ಆಶ್ರಯಿಸಿಕೊಂಡಿದ್ದುವು. ಒಂದೊಂದುಸಲ, ದೂರದಲ್ಲೆಲ್ಲಿಯೋ ಹಾಡುತ್ತಿದ್ದ ಗೋಪಾಲಕರ ಅಸ್ಪಷ್ಟವಾದ ಗೀತಧ್ವನಿಯೊಂದು ಕೇಳಿಬರುವುದು. ಉತ್ತರಕ್ಷಣದಲ್ಲಿ ನಿಂತು ಹೋದಂತಾಗುವುದು. ಪುನಃ ಕೇಳುವುದು. ಪುನಃ ನಿಂತುಹೋಗುವುದು. ಎಲ್ಲಿಯೂ ಮನುಷ್ಯ ಸಂಚಾರವಿಲ್ಲ. ಯುವಕನೊಬ್ಬನು ಮಾತ್ರ ಆ ಬಿಸಿಲಿಗೆ ಬೆದರದೆ, ಭರದಿಂದ ಹೆಜ್ಜೆಗಳಿಟ್ಟು ಸ್ಮಶಾನದ ಮಧ್ಯ ಪ್ರದೇಶಕ್ಕೆ ಬಂದು ನಿಂತನು.

ಯುವಕನು ಸುಂದರನಾಗಿಯೂ, ಸುಪುಷ್ಟಕಾಯವುಳ್ಳವನಾಗಿಯೂ ಇದ್ದನು. ಅವನ ಸರ್ವಾಂಗಗಳಲ್ಲಿಯೂ ರಾಜಚಿಹ್ನೆಗಳಿದ್ದಂತೆ ಬೋಧೆಯಾಗುತ್ತಿದ್ದಿತು. ಸುವರ್ಣಪಾತ್ರೆಯ ಕಾಂತಿಯನ್ನು ನವರತ್ನಗಳು ಹೇಗೆ ವೃದ್ಧಿಗೊಳಿಸುವುವೋ, ಹಾಗೆಯೇ ನವಯೌವನ ಪ್ರಾದುರ್ಭಾವವು ಯುವಕನು ಮೈಬಣ್ಣದ ಶೋಭೆಯನ್ನು ಹೆಚ್ಚಿಸಿದ್ದಿತು. ಅವನ ಮೈಮೇಲೆ ವಿಶೇಷ ಒಡವೆಬಟ್ಟೆಗಳೇನೂ ಇರಲಿಲ್ಲ. ಯುವಕನು ಹರ್ಷಚಿತ್ತದಿಂದ, ಅಸ್ಥಿಪರ್ವತದ ಕಡೆಗೆ ನೋಡಿದನು. ಮುಖವು ಅರಳಿತು. ವಾಚಕಮಹಾಶಯರೇ! ತಾವೆಂದಾದರೂ ಮುಖವು ಅರಳುವುದನ್ನು ಕಂಡಿರುವಿರಾ? ಆಹಾ! ಪ್ರೇಮಾತಿಶಯವುಳ್ಳ ಸ್ತ್ರೀಪುರುಷರಿಬ್ಬರು ಕಾಲಾಂತರದಿಂದ ಒಬ್ಬರನ್ನೊಬ್ಬರು ನೋಡುವಾಗ ಅವರ ಮುಖವು ಅರಳುವುದು! ಸತಿಯು, ಪತಿಗೃಹದಿಂದ ತೌರುಮನೆಗೆ ಹೋಗುವ ವೇಳೆಯಲ್ಲಿ ಮುಖವು ಅರಳುವುದು! ಮಗನು ಪರೀಕ್ಷೆಯಲ್ಲಿ ಉತ್ತೀರ್ಣನಾದನೆಂದು ಕೇಳಿದೊಡನೆಯೇ, ತಂದೆಯ ಮುಖವು ಅರಳುವುದು! ಗಂಡನ ಸಂಬಳವು ಹೆಚ್ಚಾದಾಗ, ಹೆಂಡತಿಯ ಮುಖವು ಅರಳುವುದು! ಹೊಸದಾಗಿ ಮದುವೆಯಾದ ಸತಿಯನ್ನು ನೋಡುತ್ತಿರುವಾಗಲೆಲ್ಲ, ಪತಿಯ ಮುಖವು ಅರಳುವುದು! ಹೊಸಹೊಸದಾದ ಸೀರೆಗಳನ್ನೂ, ನಗನಾಣ್ಯಗಳನ್ನೂ ತಂದುಕೊಡುವಾಗ ಗೃಹಿಣಿಯ ಮುಖವು ಅರಳುವುದು! ಎಲೆಯಮೇಲೆ ಲಾಡು, ಚಿರೋಟಿ ಮುಂತಾದ ಭಕ್ಷ್ಯಗಳು ಬಂದು ಬೀಳುವಾಗ, ಆಚಾರ್ಯ ಮಹಾಶಯರ ಮುಖವು ಅರಳುವುದು! ಮನೆಯ ಯಜಮಾನನು, ಹಳೇ ಪಾತ್ರೆಯನ್ನು 'ಝಣ ಝಣ' ಎಂದು ಸದ್ದುಮಾಡುವಾಗ, ಮುಖವು ಮತ್ತಷ್ಟು ಅರಳುವುದು! ಅತ್ತೆಯನ್ನು ಹೊಡೆದು ಹೊರಗೆ ಹೊರಡಿಸುವಾಗ ಸೊಸೆಯ ಮುಖವು ಅರಳುವುದು! ಸೊಗಸಾದ ಸಂಗೀತವನ್ನು ಕೇಳುವಾಗ ಶ್ರೋತೃಗಳ ಮುಖವು ಅರಳುವುದು! ಒಂದಕ್ಕೆರಡು ಬೆಲೆಯನ್ನು ಹೇಳಿ, ಒಂದವನನ್ನು ವಂಚಿಸುವಾಗ, ವರ್ತಕನ ಮುಖವು ಅರಳುವುದು! ರಾಜ್ಯಾಧಿಪತಿಗಳಿಂದ ದೊಡ್ಡ ಬಿರುದುಗಳನ್ನೂ, ಬಹುಮಾನಗಳನ್ನೂ ಸಂಪಾದಿಸುವಾಗ ಪ್ರತಿಷ್ಠಾಕಾಮಿಗಳ ಮುಖವು ಅರಳುವುದು! ಆದರೆ, ಮೃತ್ಯುವು ಸಮೀಪಿಸಿತೆಂದು ಗೊತ್ತಾದಾಗಲೂ ಮುಖವು ಅರಳುವುದುಂಟೇ?

ಯುವಕನು ಸ್ಥಿರಭಾವದಿಂದಾ ಪರ್ವತವನ್ನೀಕ್ಷಿಸುತ್ತಿದ್ದನು. ಸ್ವಲ್ಪ ಹೊತ್ತು ನೋಡಿಬಿಟ್ಟು, ಆಕಾಶದ ಕಡೆಗೆ ದೃಷ್ಟಿಯನ್ನು ತಿರುಗಿಸಿದನು. ಅನಂತವಾದ ಆಕಾಶದಲ್ಲಿ ಒಂದೆರಡು ಬಿಳಿಯ ಮೋಡಗಳು ತೇಲಿಹೋಗುತ್ತಲಿದ್ದುವು. ಯುವಕನು ಸ್ನಿಗ್ಧಮಯವಾದ ಲೋಚನಗಳಿಂದ, ಪ್ರಕೃತಿಯ ಸೌಂದರ್ಯವನ್ನೋ, ಅಥವಾ ಅಪೂರ್ವವಾದ ರೊಂದು ವಸ್ತುವಿಶೇಷವನ್ನೋ ನೋಡುತ್ತಿದ್ದನು. ಇದ್ದಿದ್ದಹಾಗೆ, ಅವನು ವಿಷಣ್ಣವದನನಾದನು. ತನ್ನೊಳಗೆತಾನೆ "ಇಂದು ಪ್ರಾಣಿಯನ್ನಾದರೂ ಉಳಿಸಲಾರೆನೇ" ಎಂದೆಂದುಕೊಂಡನು.

ಸ್ವಲ್ಪ ಸಮಯದೊಳಗೆ, ಪಕ್ಷಿಯೊಂದು ಆಕಾಶದಲ್ಲಿ ಗೋಚರವಾಯಿತು. ಆಹಾ! ಯುವಕನ ಆನಂದಾತಿಶಯವನ್ನು ಹೇಗೆ ತಾನೇ ಬಣ್ಣಿಸಲಾಪೆವು? ಒಂದು ವೇಳೆ ಇಂದ್ರಪಟ್ಟವೇ ಆತನಿಗೆ ದೊರೆಯುತಿದ್ದರೂ, ಆನಂದ ಅಷ್ಟೊಂದು ಹೆಚ್ಚುತ್ತಿದ್ದಿತೋ, ಇಲ್ಲವೋ ಬಲ್ಲವರಾರು? ಯುವಕನ ಮುಖವು ಮತ್ತಷ್ಟು ಉಜ್ವಲವಾಯಿತು! ಮುಖಕಮಲದಲ್ಲಿ ಆನಂದವು ಉಕ್ಕಿ ಹರಿಯುವಂತಿದ್ದಿತು. ಮನೋಹರವಾದ ದಂತ ಪಙ್ತಿಗಳ ನಡುವೆ ಮುಗುಳ್ನಗೆಯು ಮೃದುಮೃದುವಾಗಿ ಕ್ರೀಡಿಸಲಾರಂಭಿಸಿತು. ಹಠಾತ್ತಾಗಿ, ಪಕ್ಷಿಶ್ರೇಷ್ಠನು ಅಂಬರಮಾರ್ಗದಿಂದ ಯುವಕನಿದ್ದೆಡೆಗೆ ಬಂದನು. ಕ್ಷಣಮಾತ್ರದಲ್ಲಿ, ಯುವಕನು ಮಾಯವಾಗಿ ಹೋದನು!

ವಾಚಕರಿಲ್ಲಿ ತಿಳಿದಿರಬೇಕಾದುದೇನೆಂದರೆ — ಈಗ ತಾನೇ ಮಾಯವಾಗಿ ಹೋದ ಯುವಕನ ಹೆಸರು ಜೀಮೂತವಾಹನ. ಅವನ ಜನಕನಾದ, ಮಹಾರಾಜ ಜೀಮೂತಕೇತುವು, ವಿಧಿವಶದಿಂದ ರಾಜ್ಯವನ್ನು ಕಳೆದುಕೊಂಡು, ಪತ್ನೀ ಪುತ್ರರೊಡನೆ ಗುಡ್ಡಬೆಟ್ಟಗಳಲ್ಲಿ ಅಲೆಯುತ್ತಿರುವಾಗ, ಸಿದ್ಧ ಕನ್ಯೆಯೊಬ್ಬಳು ರಾಜಕುವರನನ್ನು ಮೋಹಿಸಿ, ಆತನ ಸತಿಯಾದಳು. ಹೀಗಿರುತ್ತಿರಲೊಂದು ದಿನ, ಜೀಮೂತವಾಹನನು ವಿಹರಿಸುತ್ತಿರುವ ವೇಳೆಯಲ್ಲಿ, ನಾಗಗಳು ವೈನತೇಯನ ಹಾವಳಿಯನ್ನು ತಪ್ಪಿಸುವುದಕ್ಕಾಗಿ ಪ್ರತ್ಯಹವೂ ಒಂದೊಂದು ಸರ್ಪವನ್ನು ಅವನಿಗಾಹಾರವಾಗಿ ಕೊಡುವಂತೆ ಕಟ್ಟುಮಾಡಿಕೊಂಡಿರುವುವೆಂಬುದನ್ನೂ, ಈ ದಿನ ಶಂಖಚೂಡನೆಂಬ ಸರ್ಪಶ್ರೇಷ್ಠನ ಸರದಿಯು ಬಂದಿರುವುದರಿಂದ ಏಕಪುತ್ರನಾದ ಆತನೇ ಗರುಡನಿಗಾಹಾರವಾಗಿ ಹೋಗಬೇಕೆಂಬುದನ್ನೂ ತಿಳಿದು, ದಯಾರ್ದ್ರಹೃದಯನಾಗಿ, ತಾನೇ ಆ ಉರಗದ ಬದಲು ಗರುಡನಿಗಾಹುತಿಯಾಗಬೇಕೆಂದು ನಿಶ್ಚಯಿಸಿ, ಶಂಖಚೂಡನರಿಯದಂತೆ ವಧ್ಯಸ್ಥಾನವಾದ ಸ್ಮಶಾನಕ್ಕೆ ಬಂದು, ಅಲ್ಲಿ ಗರುಡನಾಗಮನವನ್ನು ನಿರೀಕ್ಷಿಸುತ್ತಿದ್ದನು. ಕೆಂಪುಬಟ್ಟೆಗಳನ್ನು ಧರಿಸಿದ್ದ ಆ ರಾಜಕುವರನನ್ನು ಗರುಡನು ಕಂಡು, ತನ್ನಾಹಾರವಾದ ಸರ್ಪಶ್ರೇಷ್ಠನೇ ಇವನೆಂದು ಭಾವಿಸಿ, ಆತನನ್ನು ಅಂಬರಮಾರ್ಗವಾಗಿ ಕಚ್ಚಿಕೊಂಡೊಯ್ದುದರಿಂದ, ಸ್ವಲ್ಪ ಹೊತ್ತಿನ ಮುಂಚೆ ಪ್ರತ್ಯಕ್ಷನಾಗಿದ್ದ ಜೀಮೂತವಾಹನನು, ಈಗಲೀಗ ಅದೃಶ್ಯನಾಗುವುದಕ್ಕೆ ಕಾರಣವಾಯಿತು.

ಪ್ರಾಣಿಹಿಂಸಕನಾದ ಗರುಡನು ರಾಜಕುವರನನ್ನು ಮಲಯಾಚಲದ ಕೋಡುಗಲ್ಲಿನ ಮೇಲೆ ಇಟ್ಟುಕೊಂಡು, ಕೊಕ್ಕಿನಿಂದ ಚುಚ್ಚಿ ಮಾಂಸವನ್ನು ತಿನ್ನುತ್ತಿದ್ದರೂ ಆತನು ಉಪಕೃತಿಯನ್ನು ಹೊಂದಿದವನಂತೆ ಶಾಂತನಾಗಿದ್ದನು. ಅಷ್ಟರಲ್ಲಿ, ವಧ್ಯಚಿಹ್ನೆಗಳಾದ ಕೆಂಪುಬಟ್ಟೆಯನ್ನುಟ್ಟಿದ್ದ ಮತ್ತೊಬ್ಬ ವ್ಯಕ್ತಿಯು ಗರುಡನೆದುರಿಗೆ ಬಂದು ನಿಂತನು. ಗರುಡನು ಚಮಕಿತನಾಗಿ, ಬಂದವನನ್ನು ನೀನಾರೆಂದು ಕೇಳಿದನು. ಆದಕ್ಕಾತನು, ತಾನು ಆತನಾಹಾರವಾದ ಶಂಖಚೂಡನೆಂದು ಹೇಳಿ, ರಾಜಕುವರನನ್ನು ಘಾಸಿಗೊಳಿಸಿದುದಕೆ ಗರುಡನನ್ನು ಬಹಳವಾಗಿ ಹಿಯ್ಯಾಳಿಸಿದನು. ವೈನತೇಯನು ವನ್ನು ಕೇಳಿ, ಅತ್ಯಂತ ಶೋಕಭರಿತನಾಗಿ, "ನನಗಿನ್ನು ಅಗ್ನಿಪ್ರವೇಶವೇ ತಕ್ಕ ಪ್ರಾಯಶ್ಚಿತ್ತ. ಅಗ್ನಿಯನ್ನೆಲ್ಲಿಂದ ತರಲಿ?" ಎಂದು ಯೋಚಿಸುತ್ತಿರಲು ಅದೋ ಕೆಲವರು ಅಗ್ನಿಸಮೇತರಾಗಿ ಆ ಪ್ರದೇಶಕ್ಕೆ ಬರುವುದನ್ನು ಕಂಡನು.

ಎಪ್ಪತ್ತು ವಯಸ್ಸಿನ ವೃದ್ಧನೊಬ್ಬನು, ಕಂಬನಿದೆರೆಯುತ್ತ, ಮಲಯಾಚಲವನ್ನು ಹತ್ತುತ್ತಿದ್ದನು. ಅವನ ಹಿಂದೆ ಶೋಕದಿಂದ ವಿಹ್ವಲರಾದ ನಾರಿಯರಿಬ್ಬರು ನಡೆಯುತ್ತಿದ್ದರು. ವೃದ್ಧನು ಕೋಡುಗಲ್ಲಿನ ಬಳಿಗೆ ಬಂದುದನ್ನು ಕಂಡು ಜೀಮೂತವಾಹನನು ಮೇಲೆದ್ದು ನಿಂತನು. ಆದರೆ ಹಾಗೆ ಮಾಡಲು ಅವನ ಶರೀರದಲ್ಲಿ ಶಕ್ತಿ ಇರಲಿಲ್ಲ. ವೃದ್ಧನಾದ ಜೀಮೂತಕೇತುವು ಪುತ್ರನ ದುರವಸ್ಥೆಯನ್ನು ಕಂಡು, ಗಟ್ಟಿಯಾಗಿ ರೋದಿಸಲಾರಂಭಿಸಿದನು. ಸತಿಯಾದ ಮಲಯವತಿಯು ಮೂರ್ಛೆ ಹೋದಳು. ಜೀಮೂತವಾಹನನ ಮಾತೆಯು ಗರುಡನನ್ನು ಮೂದಲಿಸಿ ನಿಂದಿಸುತ್ತಿರಲು ಪರೋಪಕಾರಿಯಾದಾ ರಾಜಕುವರನು ಪ್ರಾಣ್ಯಯಾದಾ ಮಾತಾಪಿತೃಗಳನ್ನೂ, ಪ್ರಾಣಪ್ರಿಯಳಾದ ಮಲಯವತಿಯನ್ನೂ ನಾನಾ ಬಗೆಯಾಗಿ ಸಂತೈಸಿ, ತನ್ನ ಪ್ರಾಣವು ನಿಲ್ಲಲಾರದೆಂದು ಹೇಳಿ ಅಸುವಳಿಗಿದನು.

ಮಲಯಾಚಲದ ಕೋಡುಗಲ್ಲಿನ ಬಳಿಯಲ್ಲಿ ಚಿತೆಯು ಪ್ರಜ್ವಲಿಸುತ್ತಲಿದೆ! ಅದರ ಮುಂಭಾಗದಲ್ಲಿ ಜೀಮೂತವಾಹನನ ಮಾತಾಪಿತೃಗಳೂ, ಶಂಖಚೂಡನೂ ನಿಂತಿದ್ದಾರೆ! ಶೋಕದ ಧ್ವನಿಯು ದಿಕ್ಕುಗಳನ್ನೂ ವ್ಯಾಪಿಸಿಕೊಂಡಿದೆ! ಪುತ್ರವಿಯೋಗವನ್ನು ತಾಳಲಾರದೆ, ಆ ರಾಜದಂಪತಿಗಳು ಚಿತಾರೋಹಣವನ್ನು ಮಾಡಲು ಸಿದ್ಧರಾಗಿದ್ದಾರೆ. ಶಂಖಚೂಡನು ತಾನು ಅಗ್ನಿಪ್ರವೇಶವನ್ನು ಮಾಡಲೇಬೇಕೆಂದು ನಿಶ್ಚಯಮಾಡಿಕೊಂಡು, ಆ ಚಿತಿಯ ಜ್ವಾಲೆಯನ್ನು ಹೆಚ್ಚು ಮಾಡುತಲಿದ್ದಾನೆ! ಮಲಯವತಿಯು ಸಜ್ಜಲನಯನಳಾಗಿ ಜಗವತಿಯಾದ ಗೌರೀದೇವಿಯನ್ನು ಭಕ್ತಿಪೂರ್ವಕವಾಗಿ ಸ್ತುತಿಸುತ್ತ, ಚಿತೆಯನ್ನೇರಲು ಸಿದ್ಧಳಾಗಿದ್ದಾಳೆ! ಅಷ್ಟರೊಳಗೆ ಭಕ್ತವತ್ಸಲೆಯಾದ ಪಾರ್ವತಿಯು ಪ್ರತ್ಯಕ್ಷಳಾದಳು! ಮಲಯವತಿಯು ಪರಮಾದರದಿಂದ ಆಕೆಯ ಪಾದಪದ್ಮವನ್ನು ಹಿಡಿದುಕೊಂಡು, ತನ್ನ ಪತಿಯನ್ನು ಬದುಕಿಸೆಂದು ಪರಿಪರಿಯಾಗಿ ಪ್ರಾರ್ಥಿಸಲು, ಕರುಣಾಮಯಿಯಾದಾ ದೇವಿಯು ರಾಜಕುವರನನ್ನು ಬದುಕಿಸಿದಳು. ಒಡನೆಯೇ ಆಕಾಶದಿಂದ ಸುಧೆಯು ಸುರಿಯಲಾರಂಭಿಸಿತು! ಇದೇನದ್ಭುತವೆಂದು ದೇವಿಯು ಜ್ಞಾನದೃಷ್ಟಿಯಿಂದ ನೋಡಲು, ಅತಿಬಲಶಾಲಿಯಾದಾ ಗರುಡನು ತಾನು ಕೊಂದಿದ್ದ ಪ್ರಾಣಿಗಳನ್ನು ಬದುಕಿಸುವದಲುವಾಗಿ ದೇವಲೋಕದಿಂದ ಸುರಿಸುತ್ತಿರುವ ಸುಧಾವೃಷ್ಟಿ ಎಂದು ಗೊತ್ತಾಯಿತು. ಬಂದಾನೊಂದು ಕಾಲದಲ್ಲಿ ಗರುಡನಿಗಾಹಾರವಾಗಿದ್ದ ಸರ್ಪಕುಲವೆಲ್ಲವೂ, ಈಗಲೀಗ ಜೀವವನ್ನು ತಾಳಿ, ಹರಿದು ಬರುತ್ತಿರುವುದನ್ನು ಕಂಡು, ಜೀಮೂತವಾಹನನು ಆನಂದಾನಂದ ತುಂದಿಲ ಸ್ವಾಂತನಾದನು. ದೇವಿಯು ವೃದ್ಧರಾಜನಾದಾ ಜೀಮೂತಕೇತುವಿಗೆ ಆತನ ರಾಜ್ಯವನ್ನೂ, ಸಕಲ ಐಶ್ವರ್ಯವನ್ನೂ ಪುನಃ ಕೊಡಿಸಿ, ಜೀಮೂತವಾಹನನ ಪರೋಪಕಾರ ಬುದ್ಧಿಯನ್ನು ಶ್ಲಾಘಿಸಿ ಅಂತರ್ಧಾನಳಾದಳು.

ಜೀಮೂತವಾಹನ, ಈಗ ಬಾ! ಒಂದು ಸಲ ಈ ಪ್ರಪಂಚದಲ್ಲಿ ಪ್ರತ್ಯಕ್ಷವಾಗಿ ಕಾಣಿಸಿಕೋ! ನಾವು ನಿನ್ನನ್ನು ಪರಮಾನಂದದಿಂದ ನೋಡುವೆವು! ಒಂದು ಸಲ ನಮ್ಮೆದುರಿಗೆ ನಿಂತು "ನಾನು ನವನಾಗರಿಕನಲ್ಲ! ಪುರಾತನಾರ್ಯನು!

"ಧನಾನಿ ಜೀವಿತಂ ಚೈವ ಪರಾರ್ಥೇ ಪ್ರಾಜ್ಞಉತ್ಸೃಜೇತ್ । ತನ್ನಿಮಿತ್ತೇವರಂ ತ್ಯಾಗೋ ವಿನಾಶೇ ನಿಯತೇ ಗತಿ ।"

[ಬುದ್ಧಿವಂತನು ಧನವನ್ನೂ ಜೀವವನ್ನೂ ಪರೋಪಕಾರಕ್ಕಾಗಿ ವಿನಿಯೋಗಿಸಬೇಕು. ಪರೋಪಕಾರಕರವಾದಲ್ಲಿ ಅವೆರಡೂ ನಷ್ಟವಾದರೂ ಅದು ಶ್ಲಾಘ್ಯವೇ ಸರಿ]

ಎಂಬೀ ಶ್ಲೋಕವನ್ನು ನೆನಪುಮಾಡುವುದಕ್ಕೆ ಬಂದೆನು" ಎಂದು ಹೇಳು. ನವನಾಗರಿಕರಲ್ಲನೇಕರು ನಿನ್ನ ಮೂಲಮಂತ್ರವನ್ನು ಸಂಪೂರ್ಣವಾಗಿ ಮರೆತುಬಿಟ್ಟಹಾಗಿದೆ. ಒಂದು ಸಲ ಅವರೆದುರಿಗೆ ಕಾಣಿಸಿಕೊಂಡು, ಈ ಕೆಳಗಣ ಶ್ಲೋಕವನ್ನು ಅವರಿಗೆ ಉಪದೇಶಿಸು!

"ಆತ್ಮಾರ್ಥಂ ಜೀವಲೋಕೇಸ್ಮಿನ್ । ಕೋ ನ ಜೀವತಿ ಮಾನವಃ ॥ ಪರಂ ಪರೋಪಕಾರಾರ್ಥಂ । ಯೋಜೀವತಿ ಸ ಜೀವತಿ ॥"

[ಯಾವನು ತಾನೇ ಈ ಲೋಕದಲ್ಲಿ ತನ್ನ ಹೊಟ್ಟೆಯನ್ನು ತಾನು ಹೊರೆದುಕೊಳ್ಳುವುದಿಲ್ಲ? ಪರೋಪಕಾರಕ್ಕಾಗಿ ಜೀವಿಸುವವನ ಬಾಳೇ ಬಾಳು!]

([illegible])

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ವಿವಾಹದ ಕಾಲ

ಪಾಶ್ಚಾತ್ಯ ರಾಜ್ಯಗಳಲ್ಲಿ ಮದುವೆ ಆಗತಕ್ಕ ಕಾಲವನ್ನು ರಾಜಶಾಸನಗಳಲ್ಲಿಯೇ ಸೂಚಿಸುವರು. ಆಸ್ಟ್ರೀಯ ಮತ್ತು ಹಂಗೇರಿಯದಲ್ಲಿ ಕಥೋಲಿಕರಲ್ಲಿ ಗಂಡಿಗೆ 14ರಲ್ಲಿಯೂ ಹೆಣ್ಣಿಗೆ 12ರಲ್ಲಿಯೂ, ಪ್ರೊಟೆಸ್ಟಾಂಟರಲ್ಲಿ ಗಂಡಿಗೆ 18ರಲ್ಲಿ ಹೆಣ್ಣಿಗೆ 16 ವರುಷ ಪ್ರಾಯದಲ್ಲಿಯೂ, ಇಟಾಲಿಯದಲ್ಲಿ ಗಂಡಸರಿಗೆ 18, ಹೆಣ್ಣಿಗೆ 15ರಲ್ಲಿಯೂ, ಗ್ರೀಸ್‌ದೇಶದಲ್ಲಿ ಗಂಡಿಗೆ 14, ಹೆಣ್ಣಿಗೆ 12ರಲ್ಲಿಯೂ ಫ್ರಾನ್ಸ್ ಮತ್ತು ಬೆಲ್ಜಿಯಂ ದೇಶಗಳಲ್ಲಿ ಗಂಡಿಗೆ 18, ಹೆಣ್ಣಿಗೆ 1[illegible]ರಲ್ಲಿಯೂ, ಸ್ಪಾನಿಯ ಪೋರ್ಚುಗಲ್, ಸ್ವಿಟ್ಜರ್‌ಲೇಂಡ್ ರಾಜ್ಯಗಳಲ್ಲಿ ಗಂಡಿಗೆ 14, ಹೆಣ್ಣಿಗೆ 12ರಲ್ಲಿಯೂ ಇನ್ನು ಸ್ವಿಜರ್‌ಲೆಂಡಿನ ಕೆಲವು ಪ್ರಾಂತ್ಯಗಳಲ್ಲಿ ಗಂಡಿಗೆ 20 ಹೆಣ್ಣಿಗೆ 17 ವರುಷ ಪ್ರಾಯದಲ್ಲಿ ಮದುವೆ ಮಾಡಿಕೊಳ್ಳಬಹುದೆಂದು ಶಾಸನವಿರುವದು. ಈ ಪ್ರಾಯವನ್ನು ಆಯಾ ದೇಶದವರು ಆಯಾ ದೇಶದ ಪ್ರಕೃತಿಯ ರೀತಿಯ ಲಕ್ಷ್ಯಾನುಸಾರವಾಗಿ ಸೂಚಿಸಿರುವರಾದ್ದರಿಂದ ಆಯಾ ದೇಶದವರು ಆ ಶಾಸ್ತ್ರಕ್ಕನುಸಾರವಾಗಿ ಮದುವೆ ಮಾಡುವುದು ತಪ್ಪಲ್ಲ. ಯಾಕೆಂದರೆ ಋತುಮತಿಯಾಗುವ ಕಾಲವು ಮದುವೆಗೆ ತಕ್ಕ ಕಾಲವೆಂಬುದು ತಪ್ಪು. ಯೋಗ್ಯತಾಗಿ ಬೇಕಾದ ಬೀಜವನ್ನು ಬಿತ್ತಿದರೆ ಮಾತ್ರವೇ ಒಳ್ಳೇ ಪುಷ್ಟಿಯಾದ ಮೊಳಕೆಯು ಅಂಕುರಿಸುವುದು ಎಂಬುದಾಗಿ ಪ್ರತೀ ಒಬ್ಬ ಕೃಷಿಕನ ಅನುಭವವಾಗಿದೆ. ಹೀಗೆ ವನಸ್ಪತಿಗಳಲ್ಲಿ ಪಕ್ವ ಬೀಜದ ಬ್ರೂಣವು ಅವಶ್ಯವಾಗಿದೆಯೋ ಹಾಗೆಯೇ ಮಾನವರಲ್ಲಿ ಪ್ರಾಯಕ್ಕೆ ಸಹಾ ಅದು ಅಗತ್ಯವಾಗಿರುವುದು. ಶರೀರದ ಅಂಗ ಉಪಾಂಗಗಳು ಬೆಳೆಯುತ್ತಾ ಬೆಳೆಯುತ್ತಾ ಸಂಪೂರ್ಣ ವಿಕಾಸವನ್ನು ಹೊಂದಿದ ವಿನಹಾ ಮನುಷ್ಯರು ದಾಂಪತ್ಯಕ್ಕೆ ಅರ್ಹರಾಗರು. ಹೀಗೆ ಕಾಯ ಪುಷ್ಟಿಯನ್ನು ಹೊಂದುವ ಮೊದಲೇ ಗೃಹಸ್ಥಾಶ್ರಮವನ್ನು ಪ್ರವೇಶಿಸಿದ ದಂಪತಿಗಳಿಂದ ಹುಟ್ಟಿದ ಮಕ್ಕಳೆಂದಿಗೂ ದೇಹಪುಷ್ಟರಾಗಿರಲಿಕ್ಕಿಲ್ಲ.

ಒಂದೊಂದು ದೇಶದ ವಾಯುಗುಣಾನುಸಾರವಾಗಿಯೂ, ಸ್ವಭಾವಕ್ಕನುಸಾರವಾಗಿಯೂ ಮಾತ್ರವೇ ಆಯಾ ದೇಶದವರ ಶರೀರ ವೃದ್ಧಿಯು ಉಂಟಾಗುವದಾದ್ದರಿಂದ ಎಲ್ಲರಿಗೂ ಹಿತವಾಗಿರುವ ಒಂದೇ ಪ್ರಾಯವನ್ನು ಹುಡುಕುವದು ಅವಶ್ಯವೆಂಬದಾಗಿ ಕಂಡುಬಂದದರಿಂದ ಗಂಡಸಿಗೆ 24ರಲ್ಲಿಯೂ, ಹೆಂಗಸಿಗೆ 21ರಲ್ಲಿಯೂ ಮದುವೆ ಮಾಡುವದು ಉತ್ತಮವೆಂತಲೂ ಹ್ಯಾಗೂ ಗಂಡಸರು 21ರಿಂದ 30ರ ಒಳಗೂ, ಹೆಂಗಸರು 21ರಿಂದ 25 ಪ್ರಾಯದ ಒಳಗೂ ಮದುವೆ ಆಗಬೇಕೆಂಬದು ವೈದ್ಯ ಶಾಸ್ತ್ರಜ್ಞರ ಅಭಿಪ್ರಾಯ. 5, 10, 15 ಪ್ರಾಯದ ಹುಡುಗ ಹುಡಿಗಿಯರು ಗೃಹಸ್ಥಾಶ್ರಮವನ್ನು ಪ್ರವೇಶಿಸುವುದರಿಂದ ಮುಂದಿನ ಜನಾಂಗದ ಭವಿಷ್ಯವೇ ಹಾಳಾಗುವದಲ್ಲದೆ ಅಂದವರಿಗೆ ಮಕ್ಕಳು ಹುಟ್ಟಿದ ಪಕ್ಷಕ್ಕೆ ಮಕ್ಕಳನ್ನು ಸಾಕಲಿಕ್ಕೂ, ಅವರಿಗೆ ಬುದ್ಧಿ ಹೇಳಿ ಸನ್ಮಾರ್ಗದಲ್ಲಿ ನಡಿಸಲಿಕ್ಕೂ ಸಾಮರ್ಥ್ಯವು ಎಲ್ಲಿಂದ? ಇಂಥವರಿಗೆ ಹುಟ್ಟಿದ ಮಕ್ಕಳು ಯಾವಾಗಲೂ ಕೃಶರಾಗಿಯೂ ರೋಗಪೀಡಿತರಾಗಿಯೂ ಇರುವರೆಂಬದಕ್ಕೆ ಸಂಶಯ ಉಂಟೇ?

ದೇಶಾಭಿಮಾನಿಗಳಿರಾ! ಬಾಲವಿವಾಹದಿಂದುಂಟಾಗುವ ನಾನಾ ತರದ ಕೆಡಕುಗಳು ನಿಮ್ಮ ಕಣ್ಣ ಮುಂದೆಯೇ ಕಾಣುತ್ತಲಿವೆಯಲ್ಲ. ಎಷ್ಟು ಜನ ಬಡ ಬಾಲಕಿಯರು ವಿಧವೆಗಳಾಗಿರುವರೆಂಬದಾಗಿ ನಿಮಗೆ ಗೊತ್ತಿದೆಯೋ? 1901ನೇ ಖಾನೆಶುಮಾರಿ ಲೆಕ್ಕದ ಪ್ರಕಾರ [illegible] ವರುಷದ ಕೆಳಗಿನ ವಿದುರರು 6000, ವಿಧವೆಗಳು [illegible]000, [illegible] 10 ವರುಷ ಪ್ರಾಯದ ಒಳಗಿನ ವಿದುರರು 37000, ವಿಧವೆಗಳು 96000, 10 1[illegible] ವರುಷದ ಒಳಗಿನ ವಿದುರರು 113000, ವಿಧವೆಗಳು 276,000 ಕಾಣಸಿಕ್ಕುವರು. ಎಲ್ಲರಿಂದ ಧಿಕ್ಕರಿಸಲ್ಪಡುವ ಇಂಥಾ ವಿಧವೆಗಳ ಸಂಕಟವನ್ನು ನೋಡುವಾಗ ಯಾರಿಗೆತಾನೇ ನಿಟ್ಟುಸುರು ಬಾರದೆ ಇದ್ದೀತು? ವಿಧವಾಶ್ರಮಗಳನ್ನು ಸ್ಥಾಪಿಸಿದ ಮಹಾನುಭವರುಗಳಿಗೆ ದೀರ್ಘಾಯುಷ್ಯ ಉಂಟಾಗಲಿ ಎಂಬದಾಗಿ ಯಾರು ಹೇಳದೆ ಇದ್ದಾರು? ಬಾಲವಿವಾಹದಿಂದುಂಟಾಗುವ ಕೇಡನ್ನು ಕುರಿತು ಅನೇಕ ದೇಶವತ್ಸಲರು ನಾನಾ ಪುಸ್ತಕಗಳನ್ನು ಬರದಿರುತ್ತಾರಾದ್ದರಿಂದ ಇಲ್ಲಿ ತಿರಿಗಿ ಬರಿಯುವದು ಅವಶ್ಯವಿಲ್ಲ. ಹ್ಯಾಗೂ ಬಾಲವಿವಾಹವು ಕೆಟ್ಟದ್ದೇ ಎಂಬದನ್ನು ಪ್ರತೀ ಒಬ್ಬ ದೇಶವತ್ಸಲನು ತಿಳಿದು ತಕ್ಕಕಾಲದಲ್ಲಿ ತಕ್ಕ ಹುಡುಗಿಯನ್ನು ನೋಡಿ ಮದುವೆಯಾಗಿ ಧರ್ಮಾನುಸಾರವಾಗಿ ಬಾಳಬೇಕೆಂಬದೇ ನನ್ನ ಕೋರಿಕೆ.

S E A.

ಳಕ್ಕೆ ತಪ್ಪಿ ತನ್ನ ಪದವಿಯನ್ನು ವಹಿಸಿಕೊಳ್ಳುವವರಾದರು.

ವಿದೇಶ ವೃತ್ತಾಂತ

ಅಂಗ್ಲಾಂಡದಲ್ಲಿ 'ಇಂಡಿಯನ್' [illegible] ಸೊಸೈಟಿ ಎಂಬ ಒಂದು ಸಂಘವನ್ನು ಇತ್ತಲಾಗೆ ಸ್ಥಾಪಿಸಿರುವರು. ಭಾರತೀಯರ ಕಲಾಶಾಸ್ತ್ರ ಶಿಲ್ಪಶಾಸ್ತ್ರ ಮೊದಲಾದ ವುಗಳನ್ನು ಪರಿಶೋಧಿಸಿ [illegible] ಹಿಂದುಸ್ಥಾನದಲ್ಲಿಯೂ ಭಾರತೀಯ ಕಲ್ಪನೆ [illegible] ಸರ್ವರಲ್ಲಿಯೂ ಚೆನ್ನಾಗಿ [illegible]ಟಾಗುವಂತೆ ಸಾಧಿಸುವುದೇ ಈ ಸಂಘದ ಮುಖ್ಯ ಉದ್ದೇಶವಾಗಿರುವುದು. ಭಾರತೀಯರ ಪುರಾತನ ಕರಕೌಶಲ್ಯವಿದ್ಯೆಯನ್ನು [illegible]ತವಿಡುವರೆ ಈ ಸಂಘದವರು ಪ್ರಯತ್ನಿಸುವರು.

ಲಂಡನ್ ಪಟ್ಟಣದಲ್ಲಿರುವ ಯಹೂದ್ಯರ ಒಂದು ಸಭೆಯು ಇತ್ತಲಾಗೆ ಕೂಡಿ [illegible]ತಿಸಿದ ಎಡ್ವರ್ಡ್ ಚಕ್ರವರ್ತಿಗಳವರ ಸ್ಮರಣಾರ್ಥ ಒಂದು ಯಹೂದ್ಯರ ಆಸ್ಪತ್ರೆಯನ್ನು ಲಂಡನ್ ನಗರದಲ್ಲಿ ಸ್ಥಾಪಿಸುವರೆ [illegible]ಯಿಸಿರುವರು.

ದಕ್ಷಿಣ ಆಫ್ರಿಕದ [illegible] ಕಮಿಶನರರವರು ದಕ್ಷಿಣ ಆಫ್ರಿಕದ ಯುನಿಯನ್ [illegible] ಪರವಾಗಿ ಚಕ್ರವರ್ತಿನಿಯವರಿಗೆ 'ಕುಲಿಯನ್' ತಾಯಮಂತ್ರ[illegible]ಬ ಅಮೂಲ್ಯ ವಜ್ರಗಳಿರುವ ಒಂದು ಉಂಗುರವನ್ನೂ ಒಂದು ಪದಕವನ್ನೂ ಉಚಿತವಾಗಿ ಒಪ್ಪಿಸಿಕೊಟ್ಟುವರು. ಆಫ್ರಿಕದ ಬ್ರಿಟಿಷ ವಸಾಹತಿಗಳ ಯುನಿಯನ್ ಪಾರ್ಲಿಮೆಂಟನ್ನು ತೆರಿಯಲಿಕ್ಕೆ ಪ್ರಿನ್ಸ್ ಒಫ್ ವೇಲ್ಸರವರು ತನ್ನ ಪತ್ನಿಸಮೇತ ಬಂದಾಗ ಈ ವಜ್ರದ ಉಂಗುರವನ್ನೂ ಪದಕವನ್ನೂ ಆ ಸಂದರ್ಭದಲ್ಲಿ ಉಡಗಿರೆ ನೀಯಬೇಕೆಂತ ಇವೆರಡೂ ತಯ್ಯಾರಿಸಲ್ಪಟ್ಟಿದ್ದವು.

ಸ್ಟೇಟ್ ಸೆಕ್ರೆಟರಿಗಳವರು ಇಂಡಿಯಾ ಕೌನ್ಸಿಲ ಸಭೆಗೆ ಮೆಂಬರರಾಗಿ ನೇಮಿಸಲ್ಪಟ್ಟ [illegible]

ಜಾರ್ಜ್ ಚಕ್ರವರ್ತಿಯವರ ಹಿರಿ ಮಗ ಡ್ಯೂಕ್ ಒಫ್ ಕೋರ್ನವೋಲ್‌ರವರಿಗೆ ಕಳೆದ ಜೂನ್ ತಾರೀಕಿನಲ್ಲಿ ಪ್ರಿನ್ಸ್ ಒಫ್ ವೇಲ್ಸ ಮತ್ತು ಅರ್ಲ್ ಒಫ್ ಚಸ್ಟರ್ ಎಂಬ ಬಿರುದುಗಳು ಚಕ್ರವರ್ತಿಯವರಿಂದ ಕೊಡಲ್ಪಟ್ಟವು.

ಮದ್ರಾಸಿನ ಸಿವಿಲಿಯನ್‌ರಾಗಿದ್ದ ಮೆ ಜಿ ಡಿ [illegible]ಸ್ ಎಂಬವರಿಗೆ ಚಕ್ರವರ್ತಿಯವರ ಜನ್ಮ ದಿನ ಬಹುಮಾನಾರ್ಥವಾಗಿ ಕೆ ಸಿ ಐ ಇ ಎಂಬ ಬಿರುದನ್ನು ಕೊಟ್ಟಿರುವರು.

ಉತ್ತರ ಹಿಂದುಸ್ಥಾನ

ನಮ್ಮ ಮುಂದಿನ ವ್ಯಾಸರಾಯಿ ಪ್ರಭುಗಳಾಗಿ ನೇಮಕಪಟ್ಟಿರುವ ಸರ್ ಚಾರ್ಲ್ಸ ಹಾರ್ಡಿಂಗರವರಿಗೆ ಹಿಂದುಸ್ಥಾನದ ವ್ಯಾಸರಾಯಿ ಪ್ರಭುತ್ವವನ್ನು ಅಂಗೀಕರಿಸಿಕೊಳ್ಳುವರೆ ಕೆಲವು ತಿಂಗಳುಗಳ ಮೊದಲೇ ವಿಜ್ಞಾಪಿಸಿಕೊಂಡಿದ್ದರಂತೆ. ಆದರೆ ಗತಿಸಿದ ಎಡ್ವರ್ಡ್ ಚಕ್ರವರ್ತಿಗಳವರಿಗೆ ಇವರು ಬಹಳ ಆಪ್ತಭೃತ್ಯರಾಗಿದ್ದುದ್ದರಿಂದಲೂ ಹೆಚ್ಚು ಅನುಭವ ಮತ್ತು ವಿವೇಕಶಾಲಿಗಳಾದ್ದರಿಂದಲೂ ಚಕ್ರವರ್ತಿಗಳನ್ನು ಬಿಟ್ಟು ಈ ಪದವಿಯನ್ನು ಅಂಗೀಕರಿಸಲಿಕ್ಕೆ ಒಗ್ಗೆ ಆಗಲಿಲ್ಲವಂತೆ. ಎಡ್ವರ್ಡ್ ಚಕ್ರವರ್ತಿಗಳ ಮನೋಭಾವವೆಲ್ಲವುಗಳನ್ನು ತಿಳಿದಿದ್ದ ಸರ್ ಚಾರ್ಲ್ಸ ಹಾರ್ಡಿಂಗರವರು ಇನ್ನು ಸ್ವಲ್ಪ ಸಮಯದಲ್ಲಿಯೇ ಹಿಂದುಸ್ಥಾನದ ಸರಕಾರವನ್ನು ನಡಿಸಲು ಬರುವರೆಂಬ ವಾರ್ತೆಯು ವಾಚಕರೆಲ್ಲರಿಗೂ ಸಂತೋಷಕರವಾಗದಿರದು.

[illegible] ಸರ್ವಸೇನಾಧಿಪತಿಗಳಾಗಿದ್ದ ಕಿಚನರ್ ಪ್ರಭುಗಳ [illegible] ಬಹುಮಾನಾರ್ಥವಾಗಿ [illegible] ಅವರ [illegible]

ಪ್ರತಿಮೆಯು ಒಗ್ಗೆ ಬೇಕಾದ ದ್ರವ್ಯಸಹಾಯವು ಈ ವರೆಗೆ ರೂ [illegible]000ವಾಗಿರುವುದು.

ನವ ವ್ಯಾಸರಾಯಿಗಳಾದ ಸರ್ ಚಾರ್ಲ್ಸ ಹಾರ್ಡಿಂಗರವರು ಪಿ ಮತ್ತು ಒ ಕಂಪೆನಿಯ ಸ್ಟೀಮರಿನಲ್ಲಿ ಮಾರ್ಸೆಲ್ಸ್‌ನಿಂದ ಹೊರಟು ಏಡನಿಗೆ ಬಂದಿಳಿಯುವರೆಂತಲೂ ಅಲ್ಲಿಂದ ನೋರ್ತ್‌ಬ್ರೂಕ್ ಎಂಬ ಜಹಜಿನಲ್ಲಿ ಏಡನಿನಿಂದ ಮುಂಬಯಿಗೆ ಬಂದು ತಲ್ಪುವರಾಗಿಯೂ ತಿಳಿಯುತ್ತೇವೆ.

ರಾಜದ್ರೋಹಪರವಾದ ಒಂದು ಚಿಕ್ಕ ಪುಸ್ತಕವನ್ನು ಪ್ರಕಟಿಸಿದ್ದಕ್ಕೆ ಎರಡು ವರುಷಗಳ ಕಠಿಣಕಾಮಗಿರಿ ಶಿಕ್ಷೆಗೆ ಗುರಿಯಾಗಿದ್ದ ಲಿಕೇಟ್ ಹುಸೇನ್ ಮೌಲ್ವಿ ಎಂಬವರನ್ನು ಸೆರೆಯಿಂದ ಬಿಟ್ಟಿರುವರಂತೆ.

ತಿಬೇತಿನ ಡೆಲೈಲಾಮರವರು ಡಾರ್ಜಿಲಿಂಗನಲ್ಲಿ ಉಳಕೊಂಡಿದ್ದು ಚೀನಿ ಮತ್ತು ಬ್ರಿಟಿಷ ಸರಕಾರದವರಿಗೆ ತಾನು ಮಾಡಿದ ವಿಜ್ಞಾಪನೆಯ ಪರಿಣಾಮವನ್ನು ನಿರೀಕ್ಷಿಸುತ್ತಿರುವರು. ಚೀನಿಯರು ಈ ಡೆಲೈಲಾಮರವರು ಮಾಡಿದ ವಿಜ್ಞಾಪನೆಯನ್ನು ಮನ್ನಿಸದೆ ಹೊಸ ಡೆಲೈಲಾಮರನ್ನು ಚುನಾಯಿಸುವ ಇರಾಧೆಯಲ್ಲಿರುವರಂತೆ. ಲಾಸ್ಸಾದಲ್ಲಿ ಚೀನಿಯರ ವರ್ತನೆಯಿಂದ ತಿಬೇತಿಯರು ಅಸಂತುಷ್ಟರಾಗಿರುವರೆಂದೂ ಲಾಸ್ಸಾದಲ್ಲಿಯ ಮತ್ತು ಡೆಲೈಲಾಮರವರ ಸ್ಥಿತಿಗತಿಗಳಿಗೆಲ್ಲಾ ಬ್ರಿಟಿಷರ ಅಭಾವದಿಂದ ಬಹಳ ನಿರಾಶೆಗೊಂಡವರಾಗಿರುವರೆಂತಲೂ ಲಾಸ್ಸಾ ಪಟ್ಟಣದ ವರ್ತಮಾನದಿಂದ ತಿಳಿದುಬರುವುದು.

ಬಂಗಾಳದಲ್ಲಿ ಒಬ್ಬ ಸ್ತ್ರೀಯು ತನ್ನ ಮಕ್ಕಳ ಸಮೇತ [illegible]

ಹುಡುಗರಿಗೆ ದಿತ್ತು. ಮಗುವು ಈ ಹಣ್ಣನ್ನು ತೆಗೆಯುತ್ತೇನೆಂತ ನದಿಗೆ ಬೀಳಲು ನದಿನೀರಿನಲ್ಲಿ ಮುಣುಗಿ ಅಲ್ಲಿಯೇ ಪ್ರಾಣ ಕಳಕೊಂಡಿತು.

~~~~~

ಜೀವ ವಿಮೇ ಕಂಪೆನಿಗಳ ಕಾರ್ಯ ನಿರ್ವಾಹವು ಯೋಗ್ಯ ರೀತಿಯಲ್ಲಿ ನಡಿಸಲ್ಪಡುವಂತೆ ಇಂಡಿಯಾ ಸರಕಾರದವರು ಈ ಬಗ್ಗೆ ಬೇಗನೆ ಬೇಕಾದ ಕಾನೂನುಗಳನ್ನು ರಚಿಸುವರಾಗಿ ತಿಳಕೊಳ್ಳುತ್ತೇವೆ.

~~~~~

ಮಧ್ಯರಾತ್ರಿಕಾಲ ತಮ್ಮನ್ನು ಮಾನಭಂಗ ಪಡಿಸಲು ಬಂದಿದ್ದವನನ್ನು ಕೊಂದ ಸರಳಾ ಮತ್ತು ಚಪಲಾ ಎಂಬವರನ್ನು ಡಕ್ಕಾ ಮೆಜಿಸ್ಟ್ರೇಟರವರು ಸೆಶನ್ಸಿಗೆ ಕಮಿಟು ಮಾಡಿರುವರೆಂತ ತಿಳಿಸಿದ್ದೆವಷ್ಟೆ. ಗವರ್ನಮೆಂಟಿನವರು ಇವರ ಮೇಲಿನ ತಪ್ಪು ಸ್ಥಾಪನೆಯ ಬಾಬ್ತು ತೀರ್ಪು ಹಾಕಿದ್ದರಿಂದ ಸೆಶನ್ಸ್ ಜಡ್ಜರವರು ಇವರಿಬ್ಬರನ್ನು ಬಿಟ್ಟಿರುವರು.

~~~~~

ಪೆಂಜಾಬು ಯುನಿವರ್ಸಿಟಿಯವರು ಈ ಸಂಸ್ಥಾನದ [illegible]ನೇ ವರುಷದ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಹಿಂದು ಚರಿತ್ರೆಯನ್ನು ಇಡಲಿಲ್ಲವಾಗಿ ತಿಳಿಯುತ್ತೇವೆ

~~~~~

ವ್ಯಾಸರಾಯಿಗಳಾದ ಮಿಂಟೋಪ್ರಭುಗಳು ಮುಂಬಯಿಂದ ಡಫರಿನ್ ಎಂಬ ಸ್ಟೀಮರು ಹತ್ತಿ ವಿಲಾಯತಿಗೆ ತೆರಳುವರು. ಪಾಟಿಯಾಲಾ, ಅಲ್ಲಹಾಬಾದ ಮತ್ತು ಬೆನಾರೀಸ್ ಈ ಪಟ್ಟಣಗಳನ್ನು ಸಂದರ್ಶಿಸಿ ತೆರಳುವರಾಗಿ ತಿಳಿಯುತ್ತೇವೆ

~~~~~

ಕೊಮಿಲ್ಲದ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರವರಿಂದ ರೂ [illegible] ಜುರುಮಾನೆ ತೆರಬೇಕೆಂದು ವಿಧಿಸಲ್ಪಟ್ಟ ತೀರ್ಮಾನದ ಮೇಲೆ ಅಪೀಲು ಮಾಡುವರೆ ಪ್ರೊಫೆಸರ್ ರಾಮಮೂರ್ತಿಯವರು ಕಲ್ಕತ್ತೆಗೆ ಹೋಗಿರುವರು

~~~~~

ಓಡಸಾದಿಂದ ಮುಂಬಯಿಗೆ ಕಳದ ಜೂನ್ [illegible]ರಲ್ಲಿ ಹೊರಟಿರುವ ಟ್ರೀಸ್ಟ್ ಎಂಬ ಸ್ಟೀಮರು ಈ ವರೆಗೆ ಮುಂಬಯಿಗೆ ತಲ್ಪಲಿಲ್ಲವೆಂತ ತಿಳಿಯುತ್ತೇವೆ ಈ ಸ್ಟೀಮರಿನ ಮೇಲೆ ಇರುವ ಪ್ರಯಾಣಸ್ಥರ ಸಮ್ಮಂಧಿಕರು ಪ್ರತಿನಿತ್ಯ ಈ ಸ್ಟೀಮರು ಕಂಪೆನಿಯ ಆಫೀಸಿಗೆ ಬಂದು ವಿಚಾರವಾಗಿ ಗೋಳಾಡುತ್ತಿರುವರು. ಮುಂಬಯಿಯಲ್ಲಿರುವ ಇಟಲಿಯ ಕಾನ್ಸಲರವರು ಈ ಸ್ಟೀಮರು ಎಲ್ಲಿರುವದೆಂಬದನ್ನು ಹುಡುಕಿ ನೋಡಲಿಕ್ಕೆ ಏಡನಿನಲ್ಲಿರುವ ಇಟಲಿ ದೇಶದ ಯುದ್ಧನಾವೆಗಳನ್ನು ಕಳುಹಿಸಿಕೊಡುವೆವೆಂಬದಾಗಿ ಹೇಳಿ ಈ ರೀತಿ ವರ್ತಿಸಲಿಕ್ಕೆ ಏಡನಿನಲ್ಲಿರುವ ಕಾನ್ಸಲ್ ಜನರಲರವರಿಗೆ ತಂತಿ ಬಿಟ್ಟಿರುವರು

~~~~~

ಲಾಹೋರಿನ ಇಸ್ಲಾಮಿಯಾ ಕೊಲೇಜಿನ ವಿದ್ಯಾರ್ಥಿಭವನದ ವಿದ್ಯಾರ್ಥಿಗಳೆಲ್ಲರೂ ಏನೋ ಒಂದು ಕಾರಣದಿಂದ ವಿದ್ಯಾರ್ಥಿಭವನವನ್ನು ಬಿಟ್ಟುಬಿಟ್ಟಿರುವರು. ವಿದ್ಯಾರ್ಥಿಭವನದ ತಾವು ಹೇಳುವ ಸಂಕಷ್ಟಗಳು ಪರಿಹಾರವಾಗುವ ತನಕ ಅಲ್ಲಿಗೆ ಬರುವುದಿಲ್ಲವೆಂತ ನಿರ್ಧರಿಸಿರುವರಂತೆ ಈ ವಿದ್ಯಾರ್ಥಿಗಳಿಂದ ಪ್ರಿನ್ಸಿಪಾಲರವರ ದೇಹಕ್ಕೆ ಏನೂ ಹಾನಿಬಾರದಂತೆ ಪೋಲೀಸಿನವರು ಇವರನ್ನು ಕಾಯುತ್ತಿರುವರಂತೆ.

~~~~~

ಷಾಬಾದ ಜಿಲ್ಲೆಯಲ್ಲಿ ಒಂದು ಮದಿವೆಪ್ರಸ್ತ ಸಮಯದಲ್ಲಿ ವಧುವಿನ ಮನೆಯಿಂದ ವರನ ಮನೆಗೆ 12 ಮಂದಿ ಸಮ್ಮಂಧಿಕರು ಹೋಗಿದ್ದರು. ಅಲ್ಲಿ ಅವರನ್ನು ಉಪಚರಿಸಲಿಕ್ಕೆ ಈ 12 ಜನರಿಗೂ ಶರಬತ್ತು ಕೊಟ್ಟರು. ಶರಬತ್ತು ಕುಡಿದೊಡನೆಯೇ ಇವರೆಲ್ಲರಿಗೂ ಅಸ್ವಸ್ಥವುಂಟಾಗಿ [illegible] [illegible] [illegible] 12ರಲ್ಲಿ 6 ಜನರು ಮೃತಪಟ್ಟರು. ಹೀಗೆ ಶರಬತ್ತು ಕುಡಿದದ್ದರಿಂದ ಮರಣ ಸಂಭವಿಸಲು ಕಾರಣವೇನೆಂಬದನ್ನು ತಿಳಿಯಲು ಸರಕಾರದವರು ಶವಪರೀಕ್ಷೆ ಮೊದಲಾದವುಗಳನ್ನು ಮಾಡುತ್ತಿರುವರಂತೆ.

~~~~~

ರೋಹಟಾಕ ಜಿಲ್ಲೆಯ ಬಿರೋಹಾ ಎಂಬ ಹಳ್ಳಿಯಲ್ಲಿ ಜಾಟ್ ಜಾತಿಯವರಿಗೂ ಅಲ್ಲಿಯ ಕ್ಷತ್ರಿಯರುಗಳಿಗೂ ಏನೋ ಕೆಲವು ವಿವಾದದಿಂದ ಮನಸ್ತಾಪ ಉಂಟಾಗಿ ಈ ಮನಸ್ತಾಪವು ಇತ್ತಂಡದವರ ಜಾತಿಯವರಿರುವ ಇತರ ಹಳ್ಳಿಗಳಿಗೂ ಪಸರಿಸಿತು ಈ ಎರಡು ಜಾತಿಗಳ ವಿವಾದವನ್ನು ತೀರ್ಮಾನಿಸುವರೆ ಅಲ್ಲಿಯ ಕೆಲವು ಪ್ರಜಾಮುಂದಾಳುಗಳು ನಿಶ್ಚಯಿಸಿ ಇತ್ತಂಡದವರೂ ಕೂಡುವ ಒಬ್ಬೆ ಒಂದು ದಿನವನ್ನು ನಿರ್ಣಯಿಸಿದರು. ಹೆಚ್ಚುಕಡಿಮೆ [illegible] ಜಾಟರವರೂ ಕ್ಷತ್ರಿಯರೂ ಆ ದಿನ ಕೂಡುವ ಸಂಭವವಿದ್ದು ಅನೇಕ ಗಲಾಟೆಯು ಇದರಿಂದ ಉಂಟಾಗಬಹುದಾದ್ದರಿಂದ ಈ ಸಂದಿಯನ್ನು ತಪ್ಪಿಸಿಬಿಡುವರೆ ಸಿಡಿಶಿಯಸ್ ಮೀಟಿಂಗ್ಸ್ ಆಕ್ಟು ಇದನ್ನು ಅಲ್ಲಿ ಜಾರಿ ನಡಸಿದರಂತೆ

~~~~~

ಗುಜ್ರಾಥದ ಜಮೀನುದಾರರಾದ ಕಾಶೀನಾಥರಾಯ್‌ರವರು "ತನ್ನ ಜೀವಿತದ ಕೊನೆಯವರೆಗೂ ಗಂಡು ಹಕ್ಕಿಯ ಸಂಘವನ್ನೇ ಕಾಣದಂತೆ ಪಂಜರದಲ್ಲಿಡಲ್ಪಟ್ಟಿದ್ದ ಒಂದು ಹೆಣ್ಣು ಹಕ್ಕಿಯು ಎಂದು ಮೊಟ್ಟೆಯನ್ನಿಕ್ಕಿರುವುದು" ಎಂದು ಆಶ್ಚರ್ಯಪಟ್ಟು ಪತ್ರಿಕೆಗೆ ಬರದಿದ್ದರು ಅದರ ಮೇಲೆ ಮತ್ತೊಬ್ಬರು ಇದು ಆಶ್ಚರ್ಯಕರ ಸಂಗತಿಯಲ್ಲವೆಂತಲೂ ಆ ಜಮೀನುದಾರರು ಸ್ತ್ರೀಪುರುಷರ ಭೇದ ಸಂಬಂಧವಾದ ಶಾಸ್ತ್ರವನ್ನು ಪರಿಶೋಧಿಸಿದ್ದರೆ, ಸ್ತ್ರೀಯರಿಗೆ ಸಂಭವಿಸುವ ಯೌವನಾವಸ್ಥೆಯು ಕೆಲಗುರುತುಗಳಿಂದ ಹೇಗೆ ಗೋಚರವಾಗುವುದೋ ಹಾಗೆಯೇ ಪಕ್ಷಿಗಳೂ ಕೂಡ ಮೊಟ್ಟೆ ಇಡುವುದು ಅವುಗಳ ಯೌವನಾವಸ್ಥೆಯ ದ್ಯೋತಕವಾದುದೆಂದೂ, ಆದರೆ ಅಂತಹ ಮೊಟ್ಟೆಗಳಿಂದ ಮರಿಗಳು ಹುಟ್ಟುವದಿಲ್ಲವೆಂದೂ ಅದುದರಿಂದ ಆ ಮೊಟ್ಟೆಯನ್ನಿಡುವುದರಲ್ಲಿ ಆಶ್ಚರ್ಯವೇನು ಇಲ್ಲವೆಂದೂ ಹೆಣ್ಣು ಹಕ್ಕಿಯು ಗಂಡು ಹಕ್ಕಿಯೊಡನೆ ಕೂಡಿದ ನಂತರ ಇಡುವ ಮೊಟ್ಟೆಯಲ್ಲಿ ಮಾತ್ರವೇ ಮರಿಗಳು ಇರುವುದೆಂದೂ ಬರೆದಿರುತ್ತಾರೆ ಮೈ ಸಾ.

~~~~~

ಕಳದ ತಿಂಗಳ ತಾ 23ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದುಸ್ಥಾನದಲ್ಲಿ 2050 ಪ್ಲೇಗು ಮರಣಗಳಿದ್ದವು

~~~~~

ಅಮೇರಿಕದಿಂದ ಬಂದಿರುವ ಸ್ಟೇಟ್ ನಿಹಾಲ್ ಸಿಂಗರವರು ತಮ್ಮ ಪತ್ನಿ ಸಮೇತ ಅಲ್ಲಹಾಬಾದಿಗೆ ಬಂದು ಬಹುಮಾನಪಟ್ಟ ಮಿ ಎಸ್ ಪಿ ಸಿಂಹರವರ ಅತಿಥಿಗಳಾಗಿರುವರು. ಹಿಂದುಸ್ಥಾನದಲ್ಲಿ ಮೂರು ತಿಂಗಳುಗಳವರೆಗಿದ್ದು ಅಫಘಾನಿಸ್ಥಾನಕ್ಕೆ ಹೋಗಿ ಅಲ್ಲಿಂದ ಪರ್ಷಿಯಾ, ಸಿಲೋನ್, ಮಲೆಯ, ಚೀನಾ ಮಾರ್ಗವಾಗಿ ಅಮೇರಿಕಕ್ಕೆ ಹೋಗುವರು

~~~~~

ಮನೋಹರ ಮುದ್ರಣಾಲಯದ ಮಾಲಿಕರಾಗಿದ್ದು 'ಕಾಳ'ಪತ್ರದ ಸಂಪಾದಕರಾಗಿದ್ದ ರಾ ಎಸ್ ಎಮ್. ಪರಂಜಪೆ ಎಂ ಎ. ಯವರು ತಮ್ಮ ಛಾಪಖಾನೆಗೆ ಗೋವರ್ಧನ ಛಾಪಖಾನೆ ಎಂತ ಹೆಸರಿಟ್ಟು ಪತ್ರಪ್ರಕಟನೆಗಳಲ್ಲದೆ ಇತರ ಛಾಪಾ ಕೆಲಸಗಳನ್ನು ನಡಿಸುವ ಬಗ್ಗೆ ಸರಕಾರದವರಿಂದ ಅಪ್ಪಣೆ ಪಡಕೊಂಡಿರುವರು.

~~~~~

ಪ್ರಖ್ಯಾತ ಬ್ಯಾರಿಸ್ಟರರಾದ ಮಿ|| ಇ. ನೊರ್ಟನರವರು ರಾಜದ್ರೋಹಿಗಳಿಂದ ಗುಂಡು ಹೊಡೆಯಲ್ಪಟ್ಟು [illegible] [illegible] ಕಲ್ಕತ್ತೆಯಲ್ಲಿ ತಾ. [illegible]ರಲ್ಲಿ ಹಬ್ಬಿತ್ತು. ಆಯಾ ಪ್ರತಿಕೆಗಳ ಪ್ರತಿನಿಧಿಗಳೂ, ಪೋಲೀಸು ಕಮಿಶನರರ ಕಡೆ ಪೋಲೀಸ್ ಆಫೀಸರರೂ ಸಹಾ ಈ ವರ್ತಮಾನ ನಿಜತ್ವವನ್ನು ತಿಳಕೊಳ್ಳುವರೆ ಕಲ್ಕತ್ತೆ ಹ್ಯಾಕೋರ್ಟಿಗೆ ಬಂದಿದ್ದರು. ನೋರ್ಟನರವರು ಈ ಸಮಯದಲ್ಲಿ ಒಂದು ವ್ಯವಹರಣೆಯನ್ನು ನಡಿಸುತ್ತಿದ್ದದ್ದನ್ನು ಕಂಡು ಈ ವರ್ತಮಾನ ಸುಳ್ಳೆಂತ ಸರ್ವರಿಗೂ ಖಾತ್ರಿಯಾಯಿತು.

~~~~~

ಮುಂಬಯಿ ಸಂಸ್ಥಾನದಲ್ಲಿ ಹುಚ್ಚು ನಾಯಿಗಳ ಕಡಿತ ಮೊದಲಾದವುಗಳ ಚಿಕಿತ್ಸೆ ಬಗ್ಗೆ ಪೆಸ್ಟ್ಯರ್ ಇನ್ಸ್ಟಿಟ್ಯೂಟ್ ಎಂಬ ಆಸ್ಪತ್ರೆಯನ್ನು ಸ್ಥಾಪಿಸುವರೆ ಪ್ರಯತ್ನಗಳು ನಡಿಯುತ್ತಿರುವವು

~~~~~

ದಕ್ಷಿಣ ಹಿಂದುಸ್ಥಾನ.

ಮದ್ರಾಸು ಸಂಸ್ಥಾನದ ನ್ಯಾಯವಿಧಾಯಕ ಸಭಾಮಂದಿರವನ್ನು ಕಟ್ಟಿಸುವ ಬಗ್ಗೆ ರೂ 2,34700ವನ್ನು ಮದ್ರಾಸು ಸರಕಾರದವರು ಸೆಂಕ್ಷನ್ ಮಾಡಿರುವರು ಈ ನೂತನ ಮಂದಿರದಲ್ಲಿ ಸಭಾಸದರಿಗೆ ಕೂತುಕೊಳ್ಳುವ ಬಗ್ಗೆ ಆಸನಗಳನ್ನು ನೂತನ ರೀತಿಯಲ್ಲಿ ಕಟ್ಟಿಸುವರೆ ಅನುಜ್ಞೆಯಾಗಿರುತ್ತದೆ ಒಂದು ಮಗ್ಗುಲಲ್ಲಿ ಗವರ್ನರರವರೂ ಕೂಡಿ 11 ಜನ ಮೆಂಬರರಿಗೆ ಕೂತುಕೊಳ್ಳುವರೆಯೂ ಇನ್ನೊಂದು ಮಗ್ಗುಲಲ್ಲಿ 39 ಜನ ಮೆಂಬರರುಗಳಿಗೆ ಕೂತುಕೊಳ್ಳುವರೆಯೂ ಆಸನಗಳನ್ನು ಸಿದ್ಧಗೊಳಿಸುವರು ಗವರ್ನರರ ಧೊರೆಗಳೊಂದಿಗೆ 10 ಜನ ಕೂತುಕೊಳ್ಳುವ ಆಸನಗಳಿಗೆ ಟ್ರಿಜರಿ ಬೆಂಚ್ ಎಂತ ಹೆಸರಿಡುವರು ಈ ಟ್ರಿಜರಿ ಬೆಂಚಿನ ಮೇಲೆ ಗವರ್ನರರು ಮತ್ತು ಅವರ ಕಾರ್ಯನಿರ್ವಾಹಕ ಕಮಿಟಿ ಮೆಂಬರರೂ, ಸರಕಾರದ ಸೆಕ್ರೆಟರಿಗಳೂ, ವಿದ್ಯಾ ಇಲಾಖೆಯ ಡಿರೆಕ್ಟರರವರೂ ಮತ್ತು ಬಹುಮಾನಪಟ್ಟ ಎಡ್ವಕೇಟ್ ಜನರಲರವರೂ. ಮಿಕ್ಕ ಸರಕಾರಿ ಮತ್ತು ಪ್ರಜಾಕಡೆಯ ಮೆಂಬರರು ಹೀಗೆ ಬಾಕಿಯುಳಿದ 3[illegible] ಆಸನಗಳಲ್ಲಿಯೂ ಕೂತುಕೊಳ್ಳುವರು

ಕಳದ ತಿಂಗಳ ತಾ 2[illegible]ರ ರಾತ್ರೆ ಮೈಸೂರು ಮಹಾರಾಜರವರ ಜನ್ಮ ದಿನ ಮತ್ತು ಯುವರಾಜರವರ ವಿವಾಹ ಬಹುಮಾನಾರ್ಥವಾಗಿ ಯೂರೋಪಿಯ ಅತಿಥಿಗಳಿಗೆ ಬಹಳ ಸಂಭ್ರಮದ ಔತಣವಾಯಿತು ಹೆಚ್ಚುಕಡಿಮೆ 150 ಜನ ಯೂರೋಪಿಯರು ಈ ಔತಣಕ್ಕೆ ಬಂದಿದ್ದರು. ಬಂದಿದ್ದ ಅತಿಥಿಗಳಲ್ಲಿ ಬಹುಮಾನಪಟ್ಟ ಸರ್ಜನ್ ಜನರಲ್ ಬೆನ್ಸನ್‌ರವರೂ, ರೆಸಿಡೆಂಟರಾದ ಮಿ ಫ್ರೆಜರರವರೂ, ಬಹುಮಾನಪಟ್ಟ ಮಿ| ಎಟ್ಕಿನ್‌ಸನ್‌ರವರೂ, ಹಾಜರಿದ್ದರು. ಯೂರೋಪಿಯ ಗೃಹಸ್ಥರ ಭೋಜನವು ಮುಗಿಯುತ್ತಲೇ ಮಹಾರಾಜರವರು ಯುವರಾಜರೂ ಕೌನ್ಸಿಲರರೂ ದಿವಾನರೇ ಮೊದಲಾದವರಿಂದ ಕೂಡಿಕೊಂಡು ಯೂರೋಪಿಯ ಅತಿಥಿಗಳಿದ್ದ ಗವರ್ನಮೆಂಟ್ ಹೌಸಿಗೆ ದಯಮಾಡುವವರಾದರು ಮಹಾರಾಜರವರು ಈ ಅತಿಥಿಗಳ ಸಭೆಯಲ್ಲಿ ಚಕ್ರವರ್ತಿಗಳವರಿಗೆ ಶುಭೋಕ್ತಿಗಳನ್ನು ಹೇಳಿದ ನಂತರ ರೆಸಿಡೆಂಟರಾದ ಬಹುಮಾನಪಟ್ಟ ಫ್ರೆಜರರವರು ಮಹಾರಾಜ ಯುವರಾಜರುಗಳವರಿಗೆ ತಮ್ಮ ಭಾಷಣದಲ್ಲಿ ಕ್ಷೇಮಾತಿಶಯಗಳನ್ನು ಬಯಸಿ ತಾನು ಇನ್ನು ಸ್ವಲ್ಪ ಸಮಯದಲ್ಲಿ ಮೈಸೂರನ್ನು ಬಿಟ್ಟು ಹೋಗುವುದರಿಂದ ತನಗೆ ಈ ವಿಯೋಗದಿಂದುಂಟಾಗುವ ಕರೆಕರೆಯನ್ನು ಸಹಾ ಪ್ರದರ್ಶಿಸುವವರಾದರು. ಮಹಾರಾಜರವರು ಯಥೋಚಿತ ವಚನಗಳಿಂದ ಫ್ರೆಜರರವರ ಭಾಷಣಕ್ಕೆ ಉತ್ತರ ಕೊಟ್ಟರು.

ಮೈಸೂರು ಯುವರಾಜರವರ ಪ್ರಸ್ತಕ್ಕಾಗಿ ಬೆಂಗಳೂರಿನಿಂದ ಬಂದಿದ್ದ ರಾವ್ ಬಹದೂರ್ ಮೈಗಂಡದೇವ ಮುದಲಿಯರರು ವಾಂತಿಭೇದಿಯಿಂದ ಮೃತಪಟ್ಟರು

ಮದ್ರಾಸು ಗವರ್ನರರವರು ಉದಕಮಂಡಲದಿಂದ ಕಲ್ಕತ್ತೆಗೂ, ಹೈದರಾಬಾದಿಗೂ ಹೋಗಿ ಬಂದ ನಂತರ ಮದ್ರಾಸಿಗೆ ಬರುವರಂತೆ

ಮದ್ರಾಸು ಸಂಸ್ಥಾನದ ಎಡ್ವರ್ಡ ಮೆಮೊರಿಯಲ್ ಫಂಡಿನ ಬಗ್ಯೆ ಇಷ್ಟರವರೆಗೆ ರೂಪಾಯಿ ೪೩,೭೫೫-೦-೦ ಚಂದಾದ್ರವ್ಯವು ಸೇರಿರುವುದು ಇದರಲ್ಲಿ ಪಿಟ್ಟಾಪುರದ ರಾಜರವರು ರೂಪಾಯಿ ೧೦,೦೦೦, ಬಂಗನಪಳ್ಳ ನವಾಬರವರು ರೂಪಾಯಿ ೩೫೦೦ ಕೊಟ್ಟಿರುವರು

ತಿರುಚಿನಾಪಳ್ಳಿಯ ವೊರಿಯುರ್ ಎಂಬಲ್ಲಿ ಬೆಂಕಿ ಬಿದ್ದು ೪೦೦ ಮನೆಗಳು ಸುಟ್ಟುಹೋದವು ಮನೆಗಳೆಲ್ಲವೂ ಬಡನಿವಾಸಿಕರದ್ದಾಗಿರುವವು

ಟ್ರಾನ್ಸ್‌ವಾಲ ಸರಕಾರದವರಿಂದ ಗಡಿಪಾರು ಮಾಡಲ್ಪಟ್ಟ ಮದ್ರಾಸಿನ ಕಡೆ ವಲಸೇಯವರ ಪರವಾಗಿ ಏನು ಮಾಡಬಹುದೆಂಬದನ್ನು ಮದ್ರಾಸು ಸರಕಾರದವರು ಆಲೋಚಿಸುತ್ತಿರುವರು

ಈ ವರುಷದಲ್ಲಿಯೇ ಮದ್ರಾಸು ಮುನಿಸಿಪಾಲಿಟಿಗಳ ಪರವಾದ ಕಾನೂನು ಮಸೂದೆಯು ನ್ಯಾಯವಿಧಾಯಕ ಸಭೆ ಮುಂದೆ ಒರಲಿಕ್ಕಿಲ್ಲವೆಂಬದಾಗಿ ತಿಳಿಯುತ್ತೇವೆ

1896ನೇ ಇಸವಿಯ ಮಲಬಾರ ಮೆರಿಯೇಜ್ ಆಕ್ಟು ಎಂಬ ವಿವಾಹದ ರಿಜಿಸ್ಟ್ರೇಶನ್ ಆಕ್ಟಿನ ಪ್ರಕಾರ 1910ನೇ ಇಸವಿ ಮಾರ್ಚ ತಿಂಗಳಲ್ಲಿ ಒಬ್ಬರಾಗುವ ವರುಷದಲ್ಲಿ ಮದುವೆಗಳನ್ನು ರಿಜಿಸ್ಟ್ರಿ ಮಾಡಬೇಕೆಂತ ಎರಡೇ ಎರಡು ಅರ್ಜಿಗಳು ಬಂದಿದ್ದವಾಗಿ ಗೊತ್ತಾಗುವದು

ದಕ್ಷಿಣ ಕನ್ನಡ

ಚಕ್ರವರ್ತಿಗಳವರ ಸ್ವಜನ್ಮದಿನ ಸಮಾರಂಭವಾದ ಬಿರುದುಗಳ ಪಟ್ಟಿಯು ಈಗ ಪ್ರಕಟಿಸಲ್ಪಟ್ಟಿರುವುದು ದಕ್ಷಿಣ ಹಿಂದುಸ್ಥಾನದವರ ಕಡೆಯಲ್ಲಿ ಮದ್ರಾಸು ಸರಕಾರದ ರೆವಿನ್ಯೂ ಸಕ್ರೆಟರಿಗಳಾಗಿರುವ ಸಿ ಎಸ್ ಕಾಡ್ಯೂರರವರಿಗೆ ಸಿ ಎಸ್ ಐ ಎಂಬ ಬಿರುದೂ, ಹೈದರಾಬಾದಿನ ನೈಜಾಮರವರ ಪ್ರಧಾನ ಮಂತ್ರಿಯಾಗಿರುವ ಸರ್ ಕಿಶನ್ ಪ್ರಸಾದ ಎಂಬವರಿಗೆ ಕೆ ಸಿ ಐ ಇ ಎಂಬ ಬಿರುದೂ ಬಂದಿರುವುದು ಮೈಸೂರು ದಿವಾನರಾಗಿರುವ ರಾ ಟಿ ಆನಂದರಾವ್ ರವರಿಗೆ ಸಿ ಐ ಇ ಎಂಬ ಬಹುಮಾನವೂ ಬೊಬ್ಬಿಲಿಯ ಮಹಾರಾಜರವರ ಅಣ್ಣ ವೆಂಕಟಗಿರಿಯ ರಾಜರವರಿಗೆ ಮಹಾರಾಜರೆಂಬ ನಾಮಾಂಕಿತವೂ ದೊರಕಿರುತ್ತದೆ ಇದೇ ಬಿರುದು ವಿಜಯನಗರದ ಮಹಾರಾಜರವರಿಗೆ ಸಹಾ ಕೂಡೋಣಾಗಿರುತ್ತದೆ ದಿವಾನ್ ಬಹದೂರ ಎಂಬ ಬಿರುದು ಪೂರ್ಣ ನಮ್ಮ ಸಂಸ್ಥಾನದವರಿಗೇ ಕೊಟ್ಟಿರುವುದು ನಮ್ಮ ಜಿಲ್ಲೆಯ ಮೈಲ ಮದ್ರಾಸು ಹೈಕೋರ್ಟು ವಕೀಲರಾಗಿರುವ ಮಾ ರಾ ರಾ ಕೆ ನಾರಾಯಣರಾವ್ ಮತ್ತು ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾಗಿರುವ ಮಾ ರಾ ರಾ ಮುಂಡಪ್ಪ ಬಂಗೇರರವರಿಗೆ ಈ ಬಹುಮಾನವು ದೊರಕಿರುವುದರಿಂದ ಈ ಬಗ್ಯೆ ನಾವು ಸಂತೋಷಪಡುತ್ತೇವೆ ಈ ವರುಷದ ಈ ಬಿರುದಾವಳಿಯಲ್ಲಿ ನಮ್ಮ ಸಂಸ್ಥಾನದಲ್ಲಿ 'ಇಂಡಿಯನ್ ಪೆಟ್ರಿಯಟ್' ಎಂಬ ಪತ್ರದ ಸಂಪಾದಕರಾಗಿರುವ ರಾ। ಕರುಣಾಕರ ಮೇನನರವರಿಗೆ ದಿವಾನಬಹದೂರ ಎಂಬ ಬಿರುದನ್ನೂ, ಗುಂಟೂರಿನಲ್ಲಿ ಛಾಪಿಸಲ್ಪಡುವ ದೇಶಾಭಿಮಾನಿ ಎಂಬ ದೇಶಭಾಷಾ ಪತ್ರದ ಸಂಪಾದಕರಾದ ರಾ। ಸೌದಗೋಪಾಚಾರಿ ಎಂಬವರಿಗೆ ರಾವ್‌ಸಾಹೇಬ್ ಎಂಬ ಬಿರುದನ್ನೂ ಕೊಟ್ಟದ್ದು ಬಹಳ ವಿಶೇಷವಾದ ಸಂಗತಿಯಾಗಿರುತ್ತದೆ. ಪ್ರಜಾಭಿವೃದ್ಧಿಯ ಚಟುವಟಿಕೆಯಲ್ಲಿ ಪತ್ರಿಕಾಕರ್ತರೂ ಸಹಾ ಬೇಕಾಗಿರುವರೆಂಬ ತಮ್ಮ ಮನೋಗತವನ್ನು ಸರಕಾರದವರು ಈ ಸಂದರ್ಭದಲ್ಲಿ ತೋರಿದ್ದು ಸ್ತುತ್ಯವಾಗಿರುವದು.

ಮಂಗಳೂರು. ಕಳದ ವಾರ ಮುನಿಸಿಪಾಲಿಟಿಯಲ್ಲಿ ಒಂದು ಸಿಡುಬುರೋಗದ ಮರಣ ಮಾತ್ರ ಇತ್ತು

ಈ ದಿನದಂದಿನಿಂದ ನಾಯಿಗಳನ್ನು ಕೊಲ್ಲುವ ಹುಕುಮನ್ನು ಮನ್ನಾಪಡಿಸಿರುವರು

ಉಡುಪಿ ತಾಲೂಕಿನಲ್ಲಿ ರೆವಿನ್ಯು ಇನ್ಸ್‌ಪೆಕ್ಟರರಾಗಿದ್ದ ರಾ। ಎಮ್ ನಾರಾಯಣ ಕಮ್ತಿಯವರು ತಾಲೂಕು ಹೆಡ್ ಎಕೌಂಟಾಂಟರ ಕೆಲಸವನ್ನು ಕಲಿತುಕೊಳ್ಳುವರೆ ಇವರನ್ನು ಮಂಗಳೂರು ತಾಲೂಕು ಆಫೀಸಿಗೆ ವರ್ಗ ಮಾಡಿರುತ್ತಾರೆ

ಬೋಳಾರದಲ್ಲಿ ಎರಡು ಮೂರು ಕಡೆಗಳಲ್ಲಿ ಕಳವು ಮಾಡಿ ಈವರೆಗೆ ಪತ್ತೆಯಾಗದ ಕಳ್ಳರಲ್ಲಿ ಐದು ಜನರನ್ನು ಸಬ್ ಇನ್ಸ್‌ಪೆಕ್ಟರ್ ರಾ। ಶಾಂತಾರಾಮರಾಯರು ಕೈದು ಮಾಡಿರುವರಂತೆ ಕಳ್ಳರೊಂದಿಗೆ ಆವರು ಕದ್ದು ಕೊಂಡುಹೋದ ಆಭರಣವು ಸಹ ಸಿಕ್ಕಿರುವುದಂತ

ಮಂಗಳೂರು ಜೈನ ವಿದ್ಯಾರ್ಥಿ ಪರಿಷದೆ ವಾರ್ಷಿಕ ಸಭೆಯು ಈ ತಿಂಗಳ ತಾ 10ರಲ್ಲಿ ಜೈನ್ ವಿದ್ಯಾರ್ಥಿ ಭವನದಲ್ಲಿ ಜರಗುವುದು ಮಾ ರಾ ರಾ ಬಿ ... ಸಬ್ ಜಡ್ಜರಾದ ಸುಬೀರ ರಘುನಾಥಯ್ಯ ... ಇವರು ಸದರಿ ಸಂದರ್ಭದಲ್ಲಿ ಅಧ್ಯಕ್ಷ ಪದವಿಯನ್ನು ವಹಿಸುವರ ಒಪ್ಪಿಕೊಂಡಿರುವರು

ಮಂಗಳೂರಲ್ಲಿ ನೇಟಿವ್ ಪಂಡಿತರ ಸಂಖ್ಯೆಯು ಹೆಚ್ಚು ಕಡಿಮೆ ೭೦೦ಕ್ಕೆ ಮುಟ್ಟಿರುವುದಂತೆ

ಕೆನರಾ ಹಿಂದೂ ಪರ ... ಪಂಡು ... ವೃಷ್ಣ ಸಹಾಯ ನಿಧಿಯ ... ಮಾಸಿಕರ ಸಭೆಯು ಇದೇ ತಿಂಗಳ ತಾ ೧೦ರಲ್ಲಿ ಕೆನರಾ ಹೈ ಸ್ಕೂಲಿನಲ್ಲಿ ಕೂಡುವದು

ಪುತ್ತೂರು ... ಸಬ್ ... ಹೊಂದ ... ಡೆಪ್ಯುಟಿ ಕಲಕ್ಟರವರು ವಾಪಾಸು ಬಂದಿರುವರು

ಪುತ್ತೂರು ಮತ್ತು ಉಪ್ಪಿನಂಗಡಿ ರೇಂಜಿಗ ಫೊರೆಸ್ಟ್ ಸಬ್ ಡಿವಿಜನ್ ... ಇದೇ ಜುಲಾಯಿ ತಿಂಗಳ ತಾ 1ರಿಂದ ಜ್ಯಾರಿಗೆ ... ರಾ। ರಂಜಾಡಿ ಕೇಶವಯ್ಯ ... ಈ ... ಕೆಲಸಕ್ಕೆ ಮೊಕ್ರರು ಆಗಿರುವರೆಂಗಿರುವ ...

ಮುಲ್ಕಿ ತಾಲೂಕು ... ಕಿನ್ನಿಗೋಳಿ ... ಎಕ್ಕಿ ... ಸಾವಿರ ರೂ ... ಜಿಲ್ಲೆಯ ... ಇಲ್ಲಿಯ ಪೋಲೀಸರವರು ತನಿಖೆ ... ಈ ... ಕೊಂಡು ... ವಿಚಾರಿಸುತ್ತಿರಲು ... ಕಂಪ್ಯು ... ವಿವಾಹ ... ಸೂಕ್ತ ... ಪೊಲೀಸರವರು ಹಿಡಿದು ನೋಡಲು ಅವನ ಚೀಲದಲ್ಲಿ ... ಹಂತೆ ... ಈ ... ತನಕ ಈ ಕಳವಿಗೆ ... ಕೈದು ಮಾಡಿರುವರು ಇವರ ಕೈಯಲ್ಲಿ ಸಿಕ್ಕಿದ ನೂತಿನ ಕ್ರಯ ಸುಮಾರು ೬೦೦ ರೂಪಾಯಿಯಂತಲೂ, ಕಾಡಿನಲ್ಲಿ ೬೦೦ ರೂಪಾಯಿಯ ನೋಟುಗಳೂ ಒಂದು ಪವನೂ ಸಿಕ್ಕಿರುವದೆಂತಲೂ ವಾರ್ತೆ, ಪೋಲೀಸ್ ಸುಪರಿಂಟೆಂಡಂಟರವರು, ಕೂಡಲೇ ಕಿನ್ನಿಗೋಳಿಗೆ ಬಂದು ಮದ್ದುಬಾಯಿಯವರೆಂಬ ಪಾಪ್ಯಾಲ ತಕ್ಕೊಂಡು ಹೋಗಿರುವರಂತೆ ಸದರಿ ರಾಮಪ್ಪ ಆಚಾರಿಯು ಮದ್ದುಬಾಯಿಯವರ ಮನೆಯಲ್ಲಿ ಉಳಕೊಂಡು ಆಭರಣಗಳನ್ನು ಮಾಡಿಕೊಟ್ಟವನಾದ್ದರಿಂದ ಮನೆಯ ಎಲ್ಲಾ ಗುಟ್ಟನ್ನು ತಿಳಿದವನಾಗಿರುವನಂತೆ! ಮನೆಗೆ ಅಕ್ಕಸಾಲಿಗರನ್ನು ತರಿಸಿ ಆಭರಣ ಮಾಡಿಸುವವರು ಎಚ್ಚರಿಕೆಯಿಂದ ಇರಲಿ!

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ಥರಿಗ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರು ತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ ವಿಶೇ ಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿ ದಲ್ಲಿ ಖಾತ್ರಿಯಾಗುತ್ತದೆ

ವಿಳಾಸ — ರಂಗಪ್ಪಾ ರಾಮಕೃಷ್ಣ ಕವಿ

ವ ನೋಹರ ಬಿಲ್ಡಿಂಗ್ ಲವರಚಾಲ ಮುಂಬಯಿ

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,

ಮಂಗಳೂರು, ದ ಕ

ನಮ್ಮಲ್ಲಿ ಎಲ್ಲಾ ತರದ ಬೀಟು [illegible] ವ ಕೋಟಿಂಗ್. ಸ್ಟೇಶನರಿ, ಕಟ್ಲೆರಿ, ಗ್ಲಾಸ ವೇರ, ಒಯಲಮೆನ ಸ್ಟೋರ್ಸ್ ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಪ್ಲೆನೆಲು, ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆ ಯಿಂದ ಮಾರುತ್ತೇವೆ ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾ ದೀತು

ಡಾಕ್ಟರ್ ವಾಮನ ಗೋಪಾಲರವರ

ಐಯೊಡ್ಯಾಡಿನಿಂದ ಕೂಡಿರುವ

ಸರ್ಸಪರಿಲ್ಲಾ.

ರಕ್ತಶುದ್ಧಿ ಬಗ್ಗೆ ಅತ್ಯುತ್ಕೃಷ್ಟವಾದ ಔಷಧಿಯು ಸಾವಿರಾರು ಜನರು ಇದನ್ನು ಸೇವಿಸಿದ ಅನು ಭವದಿಂದ ಅತ್ಯಂತ ಗುಣಕಾರಿಯೆಂದು ಕಂಡುಕೊಂಡಿರುವರು ಬಹುಕಾಲದ ವಾತ, ಚರ್ಮರೋಗಗಳು, ಸುಟುಮಾಲೆ, ಪಕ್ಷವಾತ, ಅಶುದ್ಧರಕ್ತದಿಂದ ಉಂಟಾಗಬಹುದಾದ ಇತರ ರೋಗಗಳು, ಬಲಹೀನತೆ ಈ ಎಲ್ಲಾ ರೋಗಗಳಿಗೆ ಖಾತ್ರಿಯಾದ ಔಷಧಿಯೆಂದು ಕಳದ ಐವತ್ತು ವರುಷಗಳಿಂದ ಎಲ್ಲಾ ರಕ್ತಶುದ್ಧಿಯ ಔಷಧಿಗಳಲ್ಲಿ ಶ್ರೇಷ್ಠವಾದುದೆಂತ ಭೂಲೋಕದಲ್ಲೆಲ್ಲಾ ಕೀರ್ತಿಗೊಂಡಿರುವುದು ಧಾತು ಪುಷ್ಟಿಗೆ ಉತ್ತಮವಾಗಿರುವುದರಿಂದ ಇದರ ಪ್ರತಿನಿತ್ಯದ ಸೇವನೆಯು ಆಲೋಚನಾಶಕ್ತಿಯನ್ನು ಬಲಗೊಳಿಸಿ [illegible]ದಲ್ಲಿ [illegible]ವನ್ನುಂಟುಮಾಡುವುದು

ಕ್ರಯ ಬಾಟ್ಲಿ ಒಂದಕ್ಕೆ ರೂ. ೧ ಆ. ೪, ಎನಹಾ ಟಪ್ಪಾಲು ದಸ್ತೂರಿ ೫ ಆಣೆ.

[illegible] ಮುಲಾಮು — ಆಣೆ. ಟೂತ್ ಪೌಡರ್ ಆಣೆ ೨.

[illegible] ಮ್ಯಾನೇಜರ್, ಮಾಧವ್ ಬುಕ್ ಡಿಪೋ

[illegible]

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೦ ರೂ. ೫ ರೂ. ೩ ರೂ ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಪಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ದೂಪ ಡಬ್ಬಿ ೧ಕ್ಕೆ ೮ ಆಣೆ

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಟಿ ಎಲ್ ಉಪಾಧ್ಯಾಯ, ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯುವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ [illegible] ಮೊಬಲು ನಮ್ಮ ದರಗಳ ನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿ ಯಾಗಿಟ್ಟಿರುವುದು

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕ ಬರೆಯಿರಿ

ವಿಶೇಷ ಸೂಚನೆ —ಪ್ರಖ್ಯಾತಿಗೊಂಡ ಶ್ರೀಕೃಷ್ಣ ಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು

ಎಲ್ಲೂರು ರಾಮರಾವ್, ಜನರಲ್ ಏಜೆಂಟ್ ಮಂಗಳೂರು ದ ಕನ್ನಡ

ಅತಿ ಉತ್ತಮವಾದ ಬೀಜಗಳು—ಗಿಡಗಳು—ಹೂವು ವಗೈರೆ

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟಿವ್ ತರಕಾರಿ ಬೀಜ ಗಳೂ, ಹೂವಿನ ಬೀಜಗಳೂ, ಬೇಲಿಗಳಿಗೂ ಮತ್ತು ಕಾಫಿ ಗಿಡಗಳ ನೆರಳಿಗೆ ಅನು ಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ ಇವೂ ಅಲ್ಲದೆ ಉತ್ತಮ ವಾದ ಕಸಿ ದ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ, ಗುಲಾಬೀ ಗಿಡ ಗಳೂ, ಎಲ್ಲಾ ಜಾತಿಯ ಗಿಡಗಳೂ, ವಗೈರೆ ಬಹಳ ಕಮ್ಮಿ ದರಗಳಿಗೆ ಬೇಕಾದಲ್ಲಿ ರವಾ ನಿಸಲ್ಪಡುವುದಲ್ಲದೆ ಕಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸುವೆವು ತರಕಾರೀ ಮತ್ತು ಹಣ್ಣುಗಳು ಸಹಾ ಕಳುಹಿಸಲ್ಪಡುವವು ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ದಿ ಎಲ್ ಬೈಯಣ್ಣ ಬ್ರದರ್ಸ್,

67 ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ

THE ROYAL SNUFF TRADING Cos,

ಮದ್ರಾಸು ನಶ್ಯದ ಪುಡಿ

ಇದು ಸಾಧಾರಣವಾಗಿ ಎಲ್ಲರೂ ಉಪಯೋಗಿಸುವ ಹುಡಿನಶ್ಯವಾಗಿದ್ದರೂ ಇದರ ಖಾರವೂ ಇದರ ಗುಣವೂ ಒಂದೇಸರ್ತಿ ಉಪಯೋಗಿಸಿ ನೋಡಿದರೆ ಎಂತವರಿಗೂ ಆಶ್ಚ ರ್ಯವಾಗಬಹುದು ಆದ್ದರಿಂದಲೇ ಜಮೀನ್‌ದಾರರೂ, ವಕೀ ಲರೂ, ಉದ್ಯೋಗಸ್ತರೂ ವ್ಯಾಪಾರಸ್ತರು ಮತ್ತು ಎಲ್ಲಾ ರೀತಿಯ ಮನುಷ್ಯರು ನಮ್ಮ ರಾಯಲ್ ನಶ್ಯವನ್ನ ಉಪಯೋ ಗಿಸುತ್ತಾರೆ ಅನ್ಯ ದೇಶದವರಿಗೂ ಈ ನಶ್ಯ ಬಹಳ ಪ್ರಯೋ ಜನವಾಗಿರುವದೆಂದು ಹೇಳುವದಕ್ಕೆ ಸಂದೇಹವಿಲ್ಲ. ಇದರ ಖಾರವು 3 ತಿಂಗಳ ವರಿಗೂ ಕೆಟ್ಟುಹೋಗದು ಕ್ರಯ ಡಬ್ಬಿ 1ಕ್ಕೆ 2 ಆಣೆ ಟಪ್ಪಾಲು ಖರ್ಚು 1ರಿಂದ 6 ಡಬ್ಬಿ ವರೇಗೆ 5 ಆಣೆ ಅಲ್ಯಾದಾ

ವಿಳಾಸ —

ದಿ. ಊಲನ್ ಮಾರ್ಟ್,

[illegible]

SMALL-POX BALM.

ಸಿಡುಬು ರೋಗಕ್ಕೆ ಮುಲಾಮು.

ಅತ್ಯಲ್ಪ ಕಾಲದಲ್ಲಿಯೇ ಜನರಿಂದ ಉಪಯೋಗಿಸಲ್ಪಟ್ಟು ವಿಶೇಷ ಗುಣಕಾರಿ ಎಂದು ಹೆಸರು ಪಡೆದಿರುವುದು.

ಮೈಮೇಲೆ ಕೀವು ತುಂಬುತ್ತಿರುವಾಗಿರುವ ಜ್ವರವನ್ನು ಶಮನಿಸುವದು.

ಸಿಡುಬು ರೋಗದ ಚಿಕಿತ್ಸೆ ನಡೆಸುವ ವಿವಿಧ ವೈದ್ಯರಿಂದ ಉತ್ತಮವಾದ ಔಷಧಿ ಎಂದು ಮನ್ನಿಸಲ್ಪಟ್ಟಿರುತ್ತದೆ.

ಸಿಡುಬುರೋಗದ ಅಂಟುವ ಸ್ವಭಾವವು ಎಲ್ಲರಿಗೂ ತಿಳಿದಿರುವ ಪ್ರತ್ಯಕ್ಷಪ್ರಮಾಣ. ಸಿಡುಬು ಶರೀರದಲ್ಲೆಲ್ಲ ಕಾಣಿಸಿಕೊಂಡ ನಂತರ ಇದರ ಸೋಂಕು ಇನ್ನಷ್ಟು ಪ್ರಬಲವಾಗುವದು. ರೋಗಿಗೆ ಒಂದು ಸ್ನಾನದ ನಂತರ ಕೀವು ತುಂಬಿರುವ ಮೈಲೆಯು ಒಣಗುತ್ತ ಬಂದು ಪೊರೆಪೊರೆಯುಳ್ಳದ್ದಾಗುವುದು. ಪೊರೆಗಳು ರೋಗಿಯು ಅತ್ತಿತ್ತ ಚಲಿಸುತ್ತಿರುವಾಗ್ಯೆ ಅಲ್ಲಲ್ಲಿ ಬಿದ್ದು ಗಾಳಿಯಿಂದ ಸರ್ವ ಕಡೆಗಳಲ್ಲಿಯೂ ಪ್ರಸರಿಸಲ್ಪಟ್ಟು ಪೊರೆಗಳಲ್ಲಿರುವ ರೋಗ ಅಣುಗಳಿಂದ ರೋಗದ ಸೋಂಕು ಸರ್ವತ್ರ ಹಬ್ಬುವುದು.

ಮೈಲೆಯ ಮರ್ದನವನ್ನು ಹೋಗಗೊಳಿಸಿ, ಬಿಡಿಯ ಕಲೆಗಳು ಬೀಳದಂತೆ ಮಾಡಿ, ಬಿಸಿಯಿಂದ ಶರೀರದಲ್ಲಿ ಉಂಟಾಗುವ ತುರಿಸುವಿಕೆಯನ್ನು ನಿಲ್ಲಿಸಿ ರೋಗಜನಿತವಾದ ಹುಣ್ಣುಗಳು ಯಾವರೀತಿಯಲ್ಲಿಯೂ ವಿಶೇಷ ಪರಿಣಾಮ ಹೊಂದದಂತೆ ಈ ಮುಲಾಮಿನ ಲೇಪನದಿಂದ ಸಾಧ್ಯವಾಗುವುದು. ರೋಗದ ಸೋಂಕನ್ನು ... ಇದರ ಲೇಪನವು ತಡೆಯುವುದರಿಂದ ರೋಗ ತಗಲಿದ ಸರ್ವರೂ ಇದನ್ನು ಪರೀಕ್ಷಾರ್ಥ ಉಪಯೋಗಿಸಬಹುದು.

ಹೋಮಿಯೋಪತಿಕ್, ಟಿಸ್ಯುರೆಮಿಡಿಸ್, ಆಯುರ್ವೇದಿಕ್ ಅಥವಾ ಎಲೋಪತಿಕ ಚಿಕಿತ್ಸೆಯ ವಿಧಾನಗಳಿಂದ ಔಷಧ ಹೊಂದುವ ರೋಗಿಗಳಿಗೆ ಈ ಮುಲಾಮಿನ ಲೇಪನವು ಏಕ ರೀತಿಯಲ್ಲಿ ಗುಣಕಾರಿಯಾಗುವುದರಿಂದ ಎಂಥಾ ಚಿಕಿತ್ಸೆಯಲ್ಲಿಯಾದರೂ ಇದರ ಲೇಪನವು ಆಕ್ಷೇಪಕರವಲ್ಲ.

ಮುಲಾಮನ್ನು ರೋಗತಗಲಿದ ಒಸೇ ದಿನದಿಂದ ಹಚ್ಚಲು ಪ್ರಾರಂಭಿಸಬಹುದು. ಹಚ್ಚುವ ಕ್ರಮ ಮುಂತಾದ್ದು ಮಾದರಿಗಳು ಕರಡಿಗೆಯ ಲೇಬಲಿನಲ್ಲಿರುವವು.

ಸರ್ವರಿಗೂ ಇದನ್ನು ಕ್ರಯಕ್ಕೆ ಪಡಕೊಳ್ಳುವದು ಸಾಧ್ಯವಾಗುವಂತೆ ಮುಲಾಮಿಗೆ ಹೆಚ್ಚು ಕ್ರಯದ ... ಬಿದ್ದರೂ ಕ್ರಯವನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆಮಾಡಿಟ್ಟಿರುವೆವು.

ಕ್ರಯ ಡಬ್ಬಿ ಒಂದಕ್ಕೆ ಸ್ಮಾಲ್ ಸೈಜು ೫ ಆಣೆ. ದೊಡ್ಡದು ೮ ಆಣೆ.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ (ಮಂಗಳೂರು ವ್ಯಾಪಾರ ಸಂಘ.)

ರಥಬೀದಿ, ಮಂಗಳೂರು ಇವರಲ್ಲಿ ದೊರೆಯುವದು.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್ ಕವರ್	ಹಾಫ್ ಬೈಂಡ್	ಫುಲ್ ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ)	(ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವು.

3 × 8¼, 3 × 5¼, 8¼" × 6, 6" × 4 ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೇಗೆ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತವೆ

ಇದೇ ಕಾಗದದ ಗೀಟು ಇದ್ದ ಮೇಲಿನ ಎಲ್ಲಾ ಸ್ಯಾಯುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ವಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್ ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ ಮೆನೇಜರ್,
ಶಾರದಾ ಮುದ್ರಾಲಯ, ಮಂಗಳೂರು.

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಯುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರೆಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು.

ಬೇಕಲ ವೆಂಕಟ್ರಾ Kamath, at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾ ನಿರ್ಣಯ — ವರ್ಷಕ್ಕೆ ರೂ 1 4 0 ಟಪ್ಪಾಲು ಹಾಸಲು ಸೇರಿ ರೂ 2 1 0

ಪುಸ್ತಕ 4 | ಮಂಗಳೂರ ತಾರೀಕು 22ನೇ ಶುಕ್ರವಾರ ಜುಲಾಯಿ 1910 | ಸಂಚಿಕೆ 29

Amrutanjan Depot Fort Bombay.

ಅಮೃತಾಂಜನ ಗಜಕರ್ಣದ ಮುಲಾಮು.

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಜೇನಹಾಂ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು, ಗಂಟ್ಲು ನೋವು ಜಲುಬು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹದು ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಟು ಸಾವಿರಕ್ಕಿಂತ ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು ಬಾಟ್ಲಿಗರ ಕಿಮ್ಮತು 8 ಆಣೆ

ಕಿಮ್ಮತು	SAFE ★ EFFICACIOUS ★ SURE WILLIAM & Co. BOMBAY PILLS ★ OINTMENTS ★ POWDERS	ಕಿಮ್ಮತು
ಆರು		ಆರು
ಆಣೆ		ಆಣೆ
ಈ		ಈ
ನಮೂನೆ		ನಮೂನೆ
ಡಬ್ಬಿ		ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಹಿಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿಗರ ಕಿಮ್ಮತು 6 ಆಣೆ ೧೨ ಡಬ್ಬಿ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿಗರ ಕಿಮ್ಮತು ೨ ಆಣೆ.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಷ್ಪ್ರಾಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಹೆಮೊಯಿಸ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿಗರ ಕಿಮ್ಮತು ರೂ 1

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ತಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳೆಯುವವು ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ ಬಾಟ್ಲಿ ಒಂದರ ಕಿಮ್ಮತು ರೂ 1

ಸುಂದರಿ ತೈಲ.

ಇದನ್ನು ಮೋರೆಗೆ ತಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು ಬಾಟ್ಲಿ ಒಂದರ ಕಿಮ್ಮತು 8 ಆಣೆ

ಖಜ್ಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತು 3 ಆಣೆ

ಜುಲಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತು 8 ಆಣೆ.

ವಿಳಾಸ: — ಅಮೃತಾಂಜನ ಡಿಪ್ಪೊ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು: — "ಅಮೃತಾಂಜನ", ಮುಂಬಯಿ.

ಕರ್ನಾಟಕ ಪ್ರಕಾಶಿಕಾ ಪುಸ್ತಕಶಾಲೆ,

ಬೆಂಗಳೂರು.

ಅಪೂರ್ವ ಪುಸ್ತಕಗಳು.

1.	ವೃದ್ಧಚಾಣಿಕ್ಯಾ ಸುಭಾಷಿತ (ಕನ್ನಡ ಟೀಕು)	0—2—0
2.	ನಕ್ಷತ್ರ ಚೂಡಾಮಣಿ	0—4—0
3.	ಬಾಲಗ್ರಹ ಚಿಕಿತ್ಸೆ (ಮಕ್ಕಳ ವೈದ್ಯ)	0—2—0
4.	63 ಶಿವಾಶರಣರ ಕಥೆ	1—8—0
5	ಜ್ಞಾನಸಿಂಧು .	0—12—0
6.	ರಾಜಶೇಕರ ವಿಲಾಸ	0—8—0
7.	ವೀರಶೈವ ಮತಸಾರ	0—6—0
8.	ಅಖಂಡೇಶ್ವರ ವಚನಾ	0—6—0
9.	ಕೈವಲ್ಯ ಕಲ್ಪವಲ್ಲರಿ ...	0—10—0
10.	ಅನುಭವಸಾರ .	0—8—0
11.	ವೈದ್ಯಸಾರ ಸಂಗ್ರಹ ಅಪೂರ್ವವಾದ ಅತ್ಯುಪಯೋಗವಾದ ಗ್ರಂಥ (ಕ ಟಿ)	3—0—0
12.	ಶ್ರೀವಿಷ್ಣುಸಹಸ್ರನಾಮ ಸ್ತೋತ್ರ (ತ್ರಿಮತ ಟೀಕಾ ತಾತ್ಪರ್ಯ)	3—0—0
13.	ಶಿವಾನಂದಲಹರಿ (ಕನ್ನಡ ಟೀಕು ತಾತ್ಪರ್ಯ ಸಹಿತ)	0—6—0
14	ಉದಕಶಾಂತಿ ಮಂತ್ರ .	0—2—0
15.	ಕಾಲಾಮೃತ (ಕ ಟಿ) ಉತ್ತಮ	0—12—0
	,, ,, ಸಾದಾ	0—8—0

ಇವುಗಳಲ್ಲದೆ ಇನ್ನೂ ನೂರಾರು ಇತರ ಪುಸ್ತಕಗಳು ದೊರೆಯುವವು

ವಿಳಾಸ — ಮ್ಯಾನೇಜರ್,

ಕನ್ನಡ ಪ್ರಕಾಶಿಕಾ ಪುಸ್ತಕಶಾಲೆ, ಬೆಂಗಳೂರು

ಮುಫತ್ತು ೧೯೧೦ನೇ ವರುಷದ ಕ್ಯಾಲೆಂಡರ್ ಮುಫತ್ತು

ಕಾನಪೂರ್ ಉಲನ್ ಚೌಕಗಳು.

ಸೈಜು 10×10, ಹಳದಿ, ಗುಲಾಬಿ ಊದ, ಹಸರು, ಕರೀದು, ಕೇಸರಿ, ಬಿಳಿಪು, ಚಾಕ್ಲಾಸ್ ಮತ್ತು ಇತರ ರಂಗುಗಳಲ್ಲಿಯೂ 1ಕ್ಕೆ ರೂ 1—4—0.

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಿಮ್ಮತು 0—4—0

ಶಾಲುಗಳು.

ಉದ್ದ 6 ಮೊಳ ಅಗಲ , ಮೊಳ ಎಲ್ಲಾ ರಂಗುಗಳಲ್ಲಿಯೂ 1ನೇ ನಂಬರು 1ಕ್ಕೆ ರೂ 1 4—0 2ನೇ ನಂಬರು ರೂ 1—12—0 3ನೇ ನಂಬರು 3—8—0

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಿಮ್ಮತು 0—4—0

ಸಾಚಾ ಒಳ್ಳೇ ಕಲಾಪತ್ತು "ಜರಿ"

ಕಾಲು ಇಂಚು, ಅರ್ಧ ಇಂಚು, ಮುಕ್ಕಾಲು ಇಂಚು,

1ನೇ ನಂಬರು 0—10—0 1—1—0,

2ನೇ ನಂಬರು 0—14—0, 1—8—0, 2—4—0

ರೇಷ್ಮೆ ಸಮುಕಟ್ಟುಗಳು.

ಕೆಂಪು, ಪೂವಾ, ನೀಲಿ, ರೋಜಾ ಹಸರು, ಮೊದಲಾದ ರಂಗುಗಳಲ್ಲಿ ಸೈಜು ಉದ್ದ 5–6 ಮೊಳ, ಅಗಲ 1 ಇಂಚು, 1ಕ್ಕೆ ರೂ 1 4–0. 1 8 0, 2 4 0, 2–8–0, 3 0 0

ಚಿತ್ರಾಸನ 3 0–0. 4 0 0, 5–0–0, 6 0 0

ಡಿಟ್ಟೊ ಗಜ 1ಕ್ಕೆ 1 8–0

ರೇಷ್ಮೆ ಅಂಚುಗಳು ಗಜ 1ಕ್ಕೆ ಆಣೆ 2, 3 4, 5

ಮಕಮಲ್ ಅಂಚು ಗಜ 1ಕ್ಕೆ ಆಣೆ 4, 5, 6

ದೇವರುಗಳಿಗೆ ಉಪಯೋಗಿಸುವ ರೇಷ್ಮೆ ಗುಲಾಬಿ, ಕೆಂಪು, ಊದ, ಹಸರು ರಂಗುಗಳಲ್ಲಿ ಗಜ 1ಕ್ಕೆ ರೂ 1–6–0, 2 8 0. 3–0 0

ದಾರದ ಬನೀನುಗಳು 1ಕ್ಕೆ ಆಣೆ 4, 5 6, 7, 8

ಉಲನ್ ಬನೀನುಗಳು 1ಕ್ಕೆ ರೂ 2–4 0, 2 8 0, 3–0–0, 3–8 0.

ಫಿಲ್ಟ್ ಕ್ಯಾಪ್‌ಗಳೂ ಕ್ರಿಸ್ಟಿಫ್ 1ಕ್ಕೆ ರೂ 1 12–0, 2–4 0, 2 8 0 2–12–0

ಇಪಲಿ ಕ್ಯಾಪ್‌ಗಳು 1ಕ್ಕೆ ರೂ 0 12 0 1–0 0, 1 4 0, 1–8–0.

ಹಾಸನದ ಟೋಪಿಗಳು ಡಜನ್ 1ಕ್ಕೆ ರೂ 4–0 0, 4–4–0, 4–8–0, 5–8–0, 6–0 0, 7 0 0 8 0–0, 9 0 0, 10 0–0, 12–0–0,

ಪೇಟ ಕಟ್ಟುವ ತರಹೆವಾರಿ ರಂಗುಗಳ ಬಟ್ಟೆ ಗಜ 1ಕ್ಕೆ 0–6–0, 0–8–0, 0–10–0, 0–12 0.

ಕುಪ್ಪಸಕ್ಕೆ ಮತ್ತು ಪರಕಾರಕ್ಕೆ ಉಪಯೋಗಿಸುವ ಚೀಟುಗಳು ಗಜ 1ಕ್ಕೆ ಆಣೆ 6, 8, 10, 12.

ಕೇಶರಂಜನ ತೈಲ ಬಾಟ್ಲು 1ಕ್ಕೆ ರೂ. 0—11—0.
ಕುಂತಳ ಕೌಮುದಿ ತೈಲ ,, ,, 0—12—0.
ಕಮೋನಿಯಾ ಓಯಿಲ್ ,, ,, 1—0—0.
ಭೃಂಗಾಮಲಕ ತೈಲ ಸೀಸೆ ,, ,, 0—4—0, 0–8–0, 1–0–0.
ಕಸ್ತೂರಿ ಮಾತ್ರೆ ಸೀಸೆ ,, 0—4—0.

ಎಲ್. ಎ. ಶೋರುವಾಲ್

ಮ| ರಾ| ರಾ| ಬಂಧ್ಯಾ ...
...ಗಳಿಗೆ ಮೊಕ್ತಪ್ರರುಮಾಡಿರುತ್ತಾರೆ.

ಜಾತಕ ಫಲ ಚಿಂತಾಮಣಿ!

ಎಂಬೀ ಪುಸ್ತಕವು ಕರ್ನಾಟಕ ದೇಶೀಯರೆಲ್ಲರ ಉಪಯೋಗಕ್ಕಾಗಿ ಸಂಧಿಸಿದ ತಾತ್ಪರ್ಯ ಸಹಿತವಾಗಿ ಬರೆಯಿಸಿ ಬಿಕರಿಗೆ ಸಿದ್ಧವಾಗಿದೆ. ಕ್ರಯ 0—12—0. ಹಾಸಲು ಚಾರ್ಜು 0—3—0. 3 ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಚಮತ್ಕಾರವಾದ ಮಹಾಲಕ್ಷ್ಮಿ ಎಂಬ ಕಥೆ ಇನಾಮಾಗಿ ದೊರೆಯುತ್ತೆ.

ಹೆಚ್. ಎನ್. ರಾವ್ ಬ್ರದರ್ಸ್,

ಚಿಕ್ಕಪೇಟೆ ಬೆಂಗಳೂರು ಸಿಟಿ.

"ವಿದ್ಯಾನಂದ" ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ಗ ಪ್ರಿಂಟಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

ಹೆಚ್ಚು ಪಾಠಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಇರುತ್ತದೆ ಬೆಲೆ 0—4—0

ವಿಳಾಸ ಮ್ಯಾನೇಜರ್,

ವಿದ್ಯಾನಂದ ಆಫೀಸು,

ಚಿಕ್ಕಪೇಟೆ ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ.

ಕುಚ್‌ವಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು

ಮೈಮೆನ್‌ಸಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಿದ್ದಾರೆ

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತ ಯೋಗ್ಯವಾದದ್ದು. ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳೆಸುವ ಗುಣಗಳಿರುವದಲ್ಲದೆ ಇದು ಮಿದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ.

216 ಕಾರನ್‌ವಾಲಸ್ ಬೀದಿ ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. ಶೋರುವಾಲ್ ಎಂಡ್ ಕೋ.

...

ಬೆಂಗಳೂರಿಗೆ ಏಜಂಟರು:—ಮ| ರಾ| ರಾ| ...

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 22ನೇ ಜುಲೈ 1910

ಮಲ್ಪೆ ಬಂದರದ ರೇವಿನ ಮಾರ್ಗದ ಕುರಿತು

ಈ ಬಂದರಿನ ಸಮುದ್ರ ಕಿನಾರೆಯಿಂದ ಸರಕು ತುಂಬಿದ ದೋಣಿ ಮೊದಲಾದವುಗಳು ಸರಾಗವಾಗಿ ಬಂದರಕ್ಕೆ ಬರುವರೆ ಉಪಾಯವಿಲ್ಲದ್ದರಿಂದ ಬಂದರವನ್ನು ಸಮುದ್ರಮಾರ್ಗವಾಗಿ ಬಳಸಿಕೊಳ್ಳುವವರು ಪಡೆಯುವ ನಷ್ಟ ಕಷ್ಟಗಳು ಮಲ್ಪೆ ಬಂದರವನ್ನು ನೋಡಿರುವವರೆಲ್ಲರಿಗೂ ವ್ಯಕ್ತವಾಗಿರುವವು. ಆ ವರೆಗೆ ಅವುಗಳ ವಿಮೋಚನಾ ಮಾರ್ಗವು ಸರಕಾರದವರಿಂದ ತೋರಿಬರಲಿಲ್ಲವಾದರೂ ಸ್ಥಳೀಕ ಅಧಿಕಾರಿಗಳು ಅಂಥಾ ವಿಮೋಚನೆಯನ್ನು ಸಾಧಿಸಲಿಕ್ಕೆ ಬಹಳ ಪ್ರಯತ್ನಿಸುತ್ತಿರುವರು. ಮಲ್ಪೆ ಬಂದರದ ರೇವಿನ ಹೊಸ ಮಾರ್ಗವನ್ನು ಕಟ್ಟಿಸುವ ಪ್ರಸ್ತಾಪವು ಸ್ಥಳೀಕ ಅಧಿಕಾರಿಗಳ ಮುಂದೆ ತಿರಿಗೊಮ್ಮೆ ಇತ್ತಲಾಗೆ ಬಂದಿರುವುದನ್ನು ಕೇಳುತ್ತೇವೆ.

ಉಸುಬು ರೇವಿನಿಂದ ಬಂದರಕ್ಕೆ ಅಡ್ಡವಾಗಿರುವ ಕಸರು ಮೊದಲಾದ್ದನ್ನು ತುಂಬಿರುವ ಚಿಕ್ಕ ಹಳ್ಳವನ್ನು ಗಾಡಿಗಳು ದಾಟುವದಕ್ಕೆ ಬಂದರದಲ್ಲಿ ಅಂತ್ಯವಾಗುವ ಲೋಕಲ್‌ಫಂಡ್ ರಸ್ತೆಯಿಂದ ಮಹಾಲಿನ್ನು ರೇವಿನ ಮೊದಲಾದವುಗಳಿಂದ ಇಳಿಸಲಾಗುವ ರೇವಿನ ಪ್ರಾಂತ್ಯದವರೆಗೆ, ಒಂದು ಮಾರ್ಗವನ್ನೂ ರೇವನ್ನು ದಾಟಿ ಸರಕು ದೋಣಿ ಮೊದಲಾದವುಗಳು ನಿಲ್ಲಲಾಗುವ ಒಳಗಿನ ಸಿಂಧುವಿನ ಸಮೀಪದಲ್ಲಿ ಒಂದು ಜೆಟ್ಟಿಯನ್ನೂ ಕಟ್ಟಿಸುವುದು ಯುಕ್ತವೆಂತ 1902ನೇ ಇಸವಿಯಲ್ಲಿ ಸಮ್ಮಂಧಪಟ್ಟ ಅಧಿಕಾರಿಯೊಬ್ಬರಿಂದ ಸೂಚಿಸಲ್ಪಟ್ಟು ಆ ಬಂದರಿನಲ್ಲಿ ಹೆಚ್ಚು ಸರಕುಗಳ ವ್ಯಾಪಾರ ನಡಿಸುತ್ತಿರುವ ಮಿಶನರಿ ಹಂಚಿನ ಕಾರ್ಖಾನೆಯವರೂ ಇತರ ದೊಡ್ಡ ಸಾಹುಕಾರರೂ ಈ ಸೂಚನೆಗನುಗುಣವಾಗಿ ತಮ್ಮ ಅಭಿಪ್ರಾಯವನ್ನು ಕೊಟ್ಟಿರುವರೆಂದು ವಾಗಿ ಮಲ್ಪೆ ಸಾಹುಕಾರರಿಂದ ತಿಳಿದುಬರುತ್ತದೆ. ಇದರ ನಂತರ ಈ ಮಾರ್ಗವನ್ನೂ ಜೆಟ್ಟಿಯನ್ನೂ ಕಟ್ಟಿಸುವ ವಿಷಯವು ಹಿಂದಿನ ಬ್ರೌಟ್ಟ ಕಲೆಕ್ಟರರು ಸರಕಾರದವರ ಮುಂದೆ ತಂದಿರುವರಾದರೂ ಸರಕಾರದವರು ಏನೋ ಕಾರಣಗಳಿಂದ ಈ ಸೂಚನೆಯ ಸಾಧನೆಯನ್ನು ಬಿಟ್ಟುಬಿಟ್ಟಿರುವರು.

ಬಹುಶಾ ಮಲ್ಪೆ ಬಂದರದ ರೇವು ಪಳವು ವರ್ಷಗಳಲ್ಲಿ ರೂಪಾಂತರಹೊಂದಿ ಇದರ ಮೇಲೆ ಕಟ್ಟಿಸಬೇಕಾಗುವ ಮಾರ್ಗವೂ ಜೆಟ್ಟಿಯೂ ಉಪಯೋಗವಿಲ್ಲದೆ ಹೋದೀತೆಂಬ ಅಭಿಪ್ರಾಯದಿಂದ ಸರಕಾರದವರು ಈ ವಿಷಯದಲ್ಲಿ ಉದ್ಯುಕ್ತರಾಗದೆ ಸುಮ್ಮನಿರಬಹುದು. ಹಾಗೆ ರೇವು ರೂಪಾಂತರ ಹೊಂದಿ ಜೆಟ್ಟಿ ಮೊದಲಾದವುಗಳ ಬಗ್ಗೆ ಮಾಡಿದ ಖರ್ಚು ಸಹಾ ವ್ಯರ್ಥವಾಗುವದೆಂಬದು ನಿಶ್ಚಯ. ಆದರೆ ಮಳೆಗಾಲದ ಮೊದಲೂ ಮಳೆಗಾಲದ ನಂತರವೂ ರೇವನ್ನು ಮಾರ್ಗವನ್ನೂ ಕಟ್ಟಿಸಿದರೆ ನಷ್ಟವಾಗುವ ರೀತಿಯಲ್ಲಿ ರೇವು ಮಾರ್ಪಡುವುದೋ ಎಂಬ ವಿಷಯವನ್ನು ಸರಕಾರದ ಕಡೆಯಿಂದ ಅನುಭವಶಾಲಿಗಳು ಸ್ವತಃ ಬಂದು ಪರಿಶೋಧಿಸಿದ ನಂತರ ಸರಕಾರದವರು ಈ ಅಭಿಪ್ರಾಯವನ್ನು ಪಟ್ಟಿರುವರೋ ಏನೆಂಬದು ತಿಳಿಯುವುದಕ್ಕಿಲ್ಲ. ರೇವಿನ ಸ್ಥಿತಿಯನ್ನು ನೋಡಿಕೊಂಡಿರುವ ಜನರ ಮಾಹಿತಿ ಪ್ರಕಾರ ಇತ್ತಲಾಗೆ ಕೆಲವು ವರುಷಗಳಿಂದ ಈ ರೇವು ಮಾರ್ಪಡಲಿಲ್ಲವೆಂದಾಗಿಯೂ ಹಾಗೆ ಮಳೆಗಾಲದ ನೆರೆ ಬಿರುಘಾಳಿಗಳಿಂದ ರೇವು ಮಾರ್ಪಡದಂತೆ ಇದರ ದುರುಕಡೆಯಲ್ಲಿರುವ ಬಾಪ್ರಗವು ಮಳೆ ತುಂಬಿದ ಬಿರುಘಾಳಿಯ ಏರಿಗೆ ಬಹಳಮಟ್ಟಿಗೆ ತಡಕಟ್ಟುವುದರಿಂದ ರೇವು ರೂಪಾಂತರ ಪಡುವುದು ಅಸಂಭವವೆಂತಲೂ ತಿಳಿಯುತ್ತೇವೆ. ಆದರೆ ಈ ವಿಷಯವಾಗಿ ಖಂಡಿತ ಅಭಿಪ್ರಾಯವನ್ನು ಒಳ್ಳೆ ಮಾಹಿತಿದಾರರಾದ ಇಂಜಿನಿಯರುಗಳೇ ಇದನ್ನು ಪರಿಶೋಧಿಸಿ ಹೇಳಲಿಕ್ಕೆ ಸಾಧ್ಯ ಹೊರತು ಸಾಮಾನ್ಯರಿಗೆ ಇತರರಿಗೆ ಇದು ಸಾಧ್ಯವಲ್ಲ.

ಈ ಬಂದರಿಗೆ ಬಂದಿಳಿಯುವ ಯಾ ಹೋಗಬೇಕಾಗುವ ಸ್ಟೀಮರು ಪ್ರಯಾಣಸ್ಥರಿಗೂ ವ್ಯಾಪಾರ ಸರಕುಗಳ ಪಯ್ಯೋಣಕ್ಕೂ ಬಂದೊದಗುವ ಅನನುಕೂಲತೆಗಳನ್ನು ಇಲ್ಲಿ ಬಹಳವಾಗಿ ವರ್ಣಿಸಬೇಕಂತಿಲ್ಲ. ಯಾಕಂದರೆ ಸ್ಥಳೀಕ ಅಧಿಕಾರಿಗಳೇ ಇವೆಲ್ಲವನ್ನು [illegible] ಉಪಾಯ ಸೂಚನೆ ಬಗ್ಗೆ ಈ ವಿಷಯವನ್ನು ಸರಕಾರದ ಲಕ್ಷ್ಯಕ್ಕೆ ತಂದಿರುವರು. ಪ್ರಜೆಗಳು ಇದರಿಂದ ಪಡೆಯುವ ಸಂಕಷ್ಟಗಳು [illegible] ಅವುಗಳನ್ನು ನಿವಾರಿಸಲು ಸ್ಥಳೀಕ ಅಧಿಕಾರಸ್ಥರ [illegible] [illegible]

ಅಸಂಭವವೆಂತ ಕಂಡರೂ ಜೆಟ್ಟಿಯನ್ನು ಬಿಟ್ಟು ಮಾರ್ಗವನ್ನಾದರೂ ಹಾಕಿಸಬಹುದು. ಮಾರ್ಗದ ಖರ್ಚು ಬಹಳ ವಿಶೇಷವಾಗಲಿಕ್ಕಿಲ್ಲ. ಮತ್ತು ಒಂದು ವೇಳೆ ರೇವು ರೂಪಾಂತರ ಪಡದರೂ ಮಾರ್ಗವನ್ನು ಎರಡನೇ ಅಲ್ಪಸ್ವಲ್ಪ ದುರುಸ್ತಿ ಮಾಡಲಿಕ್ಕೆ ಬಹಳ ಹೆಚ್ಚು ಖರ್ಚು ತಗಲದಾದ್ದರಿಂದ ಮಲ್ಪೆ ಬಂದರಿನ ರೇವಿಗೆ ಅಲ್ಲಿಯ ಲೋಕಲ್ ಫಂಡಿನ ರಸ್ತೆಯಿಂದ ಮಾರ್ಗ ಹಾಕಿಸುವುದುಚಿತವೆಂತ ನಮಗೆ ತೋರುತ್ತದೆ. ಮಲ್ಪೆ ಬಂದರಿನಿಂದ ಸರಕುಗಳ ಪಯ್ಯೋಣದ ಅನನುಕೂಲತೆಯು ಕಲ್ಮಾಡಿ ನದಿಗೆ ಸಂಕ ಕಟ್ಟಿದಂದಿನಿಂದ ಕಡಿಮೆಯಾಗಿರುವುದು. ಈಗ ಈ ಮಾರ್ಗವನ್ನು ಹಾಕಿಸಿದರೆ ಪಯ್ಯೋಣ ಸೌಕರ್ಯಗಳು ಅಧಿಕವಾಗಿ ನಮ್ಮ ಜಿಲ್ಲೆಯ ಮುಖ್ಯ ಪಟ್ಟಣಗಳಲ್ಲಿ ಎರಡನೇದಾದ ಉಡುಪಿ ಪಟ್ಟಣವೂ ಮಲ್ಪೆ ಬಂದರವೂ ವ್ಯಾಪಾರ ವಹಿವಾಟಗಳಲ್ಲಿ ಅಭಿವೃದ್ಧಿ ಹೊಂದುವವು.

ನ್ಯೂ ಇಂಗ್ಲಿಷ್ ಸ್ಕೂಲ್ ಕುಮಟಾ, ಉತ್ತರ ಕನ್ನಡ

ಉತ್ತರ ಕನ್ನಡಾ ಜಿಲ್ಲೆಯ ಎಲ್ಲಾ ಜಾತಿಯ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಕುಮಟೆಯಲ್ಲಿಯ ಕೆಲವು ಗೌರವಾರ್ಹ ಸಜ್ಜನರು ಈ ಶಾಲೆಯನ್ನು ಸ್ಥಾಪಿಸಿ ಇದಕ್ಕೆ ಯಾ ಮೂರು ವರುಷಗಳಾದವು. ಶಾಲೆಯು ಮಧ್ಯದಿ ವಿದ್ಯಾಭ್ಯಾಸವುಳ್ಳವರಿಂದ ನಡಿಯುವದಾಗಿ ಸ್ಥಾಪಿಸಲ್ಪಟ್ಟಿರುವುದೆಂಬದನ್ನು ಈ ಮೊದಲು ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿರುವೆವು. ಕಳೆದ ವಾರದಲ್ಲಿ ಈ ಶಾಲೆಯ ಸುವ್ಯವಸ್ಥೆಗೆ ಮುಖ್ಯ ವಿಚಾರಕರ್ತರಾದ ಮ ರಾ ನಾರಾಯಣ ಸುಬ್ರಾಯ ಕಾಮತರವರು ನಮಗೆ ಕಳುಹಿಸಿರುವ ಇಂಗ್ಲಿಷ ಭಾಷೆಯ ಶಾಲಾ ಸಂಬಂಧ ಶಾಲೆಯ ಇತರ ವೃತ್ತಾಂತವನ್ನು ಸೂಚಿಸುವ ಪ್ರಕಟಣಾ ಪತ್ರವನ್ನು ಓದಿ ಪಾಠಕರ ಸಲುವಾಗಿ ಇದರ ಕನ್ನಡದಲ್ಲಿ ಮುದ್ರಿಸಿರುವೆವು. ಇದರಲ್ಲಿ ತೋರುವಂತೆ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಆಸಕ್ತಿಯನ್ನೂ ಶ್ರದ್ಧೆಯನ್ನೂ ಹುಟ್ಟಿಸುವಂತೆ ಜಾಗ್ರತೆಯಿಂದಲೂ ವಿವೇಕದಿಂದಲೂ ಶಾಲಾ ಪಾಠಗಳನ್ನು ಕಲಿಸಲು ಸಮರ್ಥರಾದ ರಾ ನಾರಾಯಣ ಸುಬ್ರಾಯ ಕಾಮತರವರು ಶಾಲೆಯ ವಿಚಾರಕರ್ತರೂ, ಶಾಲೆಯ ಅಧ್ಯಾಪಕರೂ ಆಗಿರುವರೆಂದು ತಿಳಿದು ಸಂತೋಷಪಡುತ್ತೇವೆ. ಇಂಗ್ಲಿಷ್, ಸಂಸ್ಕೃತ, ಮರಾಠಿ ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದು ಬಿ ಎ ಪರೀಕ್ಷೆ ಪಾಸಾದ ಗೋಕರ್ಣದ ಬಾಲಕೃಷ್ಣ ಶಿರ್ಸಿಕರರವರು ಶಾಲೆಯ ಮುಖ್ಯೋಪಾಧ್ಯಾಯರಾಗಿರುವರು. ಬಿ ಎ ಪರೀಕ್ಷೆ ಪಾಸಾದ [illegible] ಯವರೂ ಇತರ ಪರೀಕ್ಷೆಗಳನ್ನು ಪಾಸಾದವರೂ ಸಹಾಯಕ ಉಪಾಧ್ಯಾಯರಾಗಿರುವರಲ್ಲದೆ ಪರ್ಶಿಯನ್, ಗುಜರಾತಿ, ಮರಾಠಿ, ಕನ್ನಡ ಮತ್ತು ಇಂತಹ ಭಾಷೆಗಳನ್ನು ಕಲಿಸುವ ತರಬೇತಿ ಹೊಂದಿದ ಪಂಡಿತರು ಈ ಶಾಲೆಯಲ್ಲಿರುವರು. ಶಾಲೆಯ ಎಲ್ಲಾ ವರ್ಗಗಳಲ್ಲಿಯೂ ಧರ್ಮ ಶಿಕ್ಷಣವನ್ನು ಕೊಡುವ ಏರ್ಪಾಡಿರುವುದು. ಬಿ ಎ ಪರೀಕ್ಷೆ ಪಾಸಾದ ಶಾಲಾ ಉಪಾಧ್ಯಾಯರ ಮೇಲ್ವಿಚಾರಣೆಯಲ್ಲಿರುವ ವಿದ್ಯಾರ್ಥಿ ಭವನವು ಈ ಶಾಲೆಗಿರುವುದು. ಇನ್ನು ವಿದ್ಯಾಭ್ಯಾಸದಲ್ಲಿ ಮುಂದುವರಿಯುವವರಿಗೂ ಮೆಟ್ರಿಕ್ಯುಲೇಷನ್ ಕ್ಲಾಸಿಗೆ ಯಾ ಶಿಕ್ಷಣದಲ್ಲಿ [illegible] ಜಾತಿಯ ಮಗೂ ಶಾಲಾ ಸಂಬಳದಲ್ಲಿ ವಿಶೇಷ ರಿಯಾಯತಿಯು ತೋರಿಸಲ್ಪಡುವುದು. ಪ್ರಕಟಣಾ ಪತ್ರದಲ್ಲಿ ತೋರುವಂತೆ ಶಾಲೆಯನ್ನು ಉತ್ಕೃಷ್ಟ ರೀತಿಯಲ್ಲಿ ವ್ಯವಸ್ಥೆಪಡಿಸಿರುವರು. ಸರ್ವರೂ ಏಕಪ್ರಕಾರವಾಗಿ ವಿದ್ಯಾಲಾಭವನ್ನು ಕೊಡುವ ಈ ಸಂಸ್ಥೆಗೆ ಉತ್ತರೋತ್ತರ ಅಭಿವೃದ್ಧಿಯನ್ನು ಬಯಸಿರುವೆವು.

ಟ್ರಸ್ಟೀ ಯಾ ಅಕ್ಷೇಪದಾರಿಯು

ಕಳೆದ ಸಂಚಿಕೆಯಿಂದ ಮುಂದುವರಿದುದು

ನೀಲಕಂಠನು ಮನೆಬಿಟ್ಟು ಹೋದನು. ಬ್ರಹ್ಮಯ್ಯನವರಿಗಾದರೋ ಇಂತಹ ಪುತ್ರವಿಯೋಗ ದುಃಖದಿಂದ ಮನಕೆಡದು. ದುರ್ಬಾಧೆಯ ಶೋಕಕ್ಕೆ ತಡೆಕಟ್ಟುವಷ್ಟು ಮನೋದಾರ್ಢ್ಯವನ್ನು ಬ್ರಹ್ಮಯ್ಯನವರು ಸಾಧಿಸಿಕೊಂಡಿದ್ದರು. ಮಗನಗಲಿಕೆಯಿಂದ ಮನೆಖರ್ಚು ಕಡಿಮೆಯಾಯಿತು. ದಿವಸಕ್ಕೆ ಸರಾಸರಿ ಮೇಲೆ ಗಳಿ ಅಣೆ ಪ್ರಕಾರ ತಿಂಗಳು ಒಂದಕ್ಕೆ ರೂ ೩—೭—೦ ವರುಷದಲ್ಲಿ ರೂ ೪೦ ಉಳಿಸಿದಂತಾಗುವುದು. ಬಡ್ಡಿಗೆ ಕೊಡಲಿಕ್ಕೆ ಇನ್ನಷ್ಟು ಹಣ ಅಧಿಕವಾಗಿ ಸಿಕ್ಕಿದಂತಾಯಿತು. ಖರ್ಚು ಕಡಮೆಯ ಲೆಕ್ಕವನ್ನು ಮನಸ್ಸಿನಲ್ಲಿ ಈ ರೀತಿ ಗುಣಿಸಿ ಗಣಿಸಿ ಬ್ರಹ್ಮಯ್ಯನವರು ಬಹಳ ಆನಂದಪಡುತ್ತಿದ್ದರು. ತನ್ನ ವರ್ತನೆಯಲ್ಲಿ ಅಸಂತುಷ್ಟಿಪಡುವ ಮಗನು ವಿಷಪ್ರಯೋಗದಿಂದ ತನ್ನನ್ನು ಘಾತಿಸಿ ತಾನು ಸಂಚಯಿಸಿಟ್ಟ ದ್ರವ್ಯರಾಶಿಯನ್ನು ವ್ಯಯ ಮಾಡುವನೋ ಎಂಬ ಸಂಶಯವನ್ನು ಪೂರ್ಣವಾಗಿ ಬಿಟ್ಟುಬಿಡಲು ಬ್ರಹ್ಮಯ್ಯನವರಿಗೆ ಸಾಧ್ಯವಾಯಿತು. ಪ್ರಾಣ ರಕ್ಷಣೆಗೋಸ್ಕರ ಮಾಡುವ ಹಗಲೂ ರಾತ್ರಿನ ಒಂದೂಟವನ್ನು ಪೂರ್ಣ ಸಮಾಧಾನದಿಂದ ಮಾಡಲು ಅವಕಾಶವಾಯಿತು. ಸೊಸೆಯು ಮರಣಪಟ್ಟ ನಂತರ ವಿಷಪ್ರಯೋಗದ ಭೀತಿಯು ಬ್ರಹ್ಮಯ್ಯನವರಲ್ಲಿ [illegible] [illegible]

ತಂದೆಯು ಮಂಥರವನ್ನು ಬಿಟ್ಟು ಹೋಗುವಾಗ ನೀಲಕಂಠನೊಬ್ಬನೇ ಹೋಗಲಿಲ್ಲ. ಆತನ ನಾಲ್ಕು ವರುಷ ಪ್ರಾಯದ ಬಾಲಕನಾದ ಭವಾನಿ ಪ್ರಿಯನನ್ನು ತನ್ನ ಸಂಗಡಲೇ ತಕ್ಕೊಂಡು ಹೋಗಿದ್ದನು. ಭವಾನಿ ಪ್ರಿಯನ ಊಟ ಉಪಚಾರಗಳ ಖರ್ಚು ಮುದುಕ ಬ್ರಹ್ಮಯ್ಯನವರ ಪ್ರೀತಿಯನ್ನು ಎದುರಾಡುವಷ್ಟು ಅಧಿಕವಾಗದಿದ್ದದ್ದರಿಂದ ಭವಾನಿ ಪ್ರಿಯನು ತನ್ನೊಂದಿಗೆ ಇದ್ದರಾಗಬಹುದಿತ್ತೆಂಬ ಮನೋಭಾವನೆಯು ಬ್ರಹ್ಮಯ್ಯನವರ ಹೃದಯ ಶಾಂತತೆಯನ್ನು ಒಮ್ಮೊಂದೊಮ್ಮೆ ಕದಡಿಸುತ್ತಿತ್ತು. ಊಟ ಆಟಗಳನ್ನು ಆಡುತ್ತಿದ್ದ ಭವಾನಿ ಪ್ರಿಯನು ಮನೆಯಲ್ಲಿಲ್ಲದೆ ಇಡೀ ಮನೆಯನ್ನು ಬರಿದಾಗಿ ಕಂಡು ಮನೆಯಲ್ಲಿ ನಿವಾಸವೇ ಕ್ರಮಶಃ ಅಸಾಧ್ಯವೆಂತ ಬ್ರಹ್ಮಯ್ಯನವರಿಗೆ ತೋಚುತ್ತಿತ್ತು. ದೇವಪೂಜೆಯನ್ನು ಮಾಡುತ್ತಿದ್ದಾಗ ಪೂಜೆಸಾಮಾನುಗಳನ್ನು ಹಿಡಕೊಂಡು ಓಡುವ ಮಕ್ಕಳ ಕಾಟವು ಬ್ರಹ್ಮಯ್ಯನವರಿಗಿರಲಿಲ್ಲ. ಊಟ ಮಾಡುವುದರಲ್ಲಿ ಬ್ರಹ್ಮಯ್ಯನವರ ಅನ್ನಪದಾರ್ಥಗಳನ್ನೆಲ್ಲ ತಟ್ಟೆಯಿಂದ ಎಳೆದೊಯ್ದು ತಿನ್ನುವವರ್‍ಯಾರೂ ಈಗ ಮನೆಯಲ್ಲಿ ಇಲ್ಲ. ತನ್ನ ದಿನಂಪ್ರತಿಯ ಲೆಕ್ಕಾಚಾರಗಳನ್ನು ಬರೆಯುತ್ತಿದ್ದಾಗ ಮಸಿ ದವತಿಯನ್ನು ಎತ್ತಿಕೊಂಡು ಓಡಿಹೋಗುತ್ತಿದ್ದ ಮೊಮ್ಮಗನ ಕುಚೇಷ್ಟೆ ಏನೂ ಇಲ್ಲದೆ ಆ ವೃದ್ಧನ ಮನಮರುಗುತ್ತಿತ್ತು. ಈ ಉಪದ್ರಗಳೇನೂ ಇಲ್ಲದ ದೆಸೆಯಿಂದ ದಿನನಿತ್ಯದ ಕೆಲಸಗಳೆಲ್ಲವನ್ನು ತುಸುಹೊತ್ತಿನಲ್ಲಿಯೇ ಮುಗಿಸಿ ಬಿಟ್ಟ ನಂತರ ಭವಾನಿ ಪ್ರಿಯನೇ ಆತನ ಸ್ಮರಣೆಯಲ್ಲಿದ್ದನು. ಕೂತುಕೊಳ್ಳುವಂಥಾ ಜಾಗೆಯಲ್ಲಿ ಭವಾನಿ ಪ್ರಿಯನು ಬರೆಯುವ ಸೀಸಕಡ್ಡಿಗಳಿಂದ ಮಾಡಿದ ಕೂತಗಳೂ(?) ಆತನು ಗೀಚಿ ಹಾಕಿದ ಚಿತ್ರಗಳೂ ಬಹಳ ರಮಣೀಯವಾಗಿ ಬ್ರಹ್ಮಯ್ಯನಿಗೆ ಕಂಡು ಬಂದವು. ಈ ಚಿತ್ರಗಳನ್ನೆಲ್ಲ ಬಿಡಿಸಿದ ಕರ್ತೃವು ಮನೆಯಲ್ಲಿಲ್ಲದ್ದರಿಂದ ಆ ಮುದುಕನು ಆ ಚಿತ್ರಗಳನ್ನು ನೋಡಿ, ಪದೆ ಪದೆ ನೋಡಿ ಬಹಳ ವ್ಯಾಕುಲಪಡುತ್ತಿದ್ದನು. ಒಮ್ಮೆ ಭವಾನಿ ಪ್ರಿಯನಿಗೆ ತಂದ ಕೊಟ್ಟಿದ್ದ ವೇಷ್ಟಿಯನ್ನು ಭವಾನಿಪ್ರಿಯನು ಬಹಳ ಸ್ವಲ್ಪ ಸಮಯದಲ್ಲಿಯೇ ಅಂದರೆ ಎರಡು ವರುಷಗಳಲ್ಲಿಯೇ ಹರಿದು ಬಿಟ್ಟದ್ದರಿಂದ ಬ್ರಹ್ಮಯ್ಯನವರು ಈತನನ್ನು ಬೈದು ಗದರಿಸಿದ್ದರು. ಈ ವೇಷ್ಟಿಯ ಹರುಕು ಚಿಂದಿಗಳನ್ನು ಮೊಮ್ಮಗನು ಮಲಗುವ ಕೋಣೆಯಲ್ಲಿ ನೋಡಿ ದುಃಖಾತಿಶಯದಿಂದ ಬ್ರಹ್ಮಯ್ಯನಿಗೆ ಕಣ್ಣೀರು ಬರುತ್ತಿತ್ತು. ಈ ಚಿಂದಿಗಳನ್ನು ಭದ್ರವಾಗಿ ತೆಗೆದಿಟ್ಟು ಭವಾನಿ ಪ್ರಿಯನು ಪುನಹ ಮನೆಗೆ ಬಂದಲ್ಲಿ ವರುಷ ಒಂದಕ್ಕೆ ಒಂದು ಧೋತಿಯಂತೆ ಹರಿದು ಬಿಸಾಡಿದರೂ ಆತನಿಗೆ ಗದ್ದಲ ಕೂಡಾ ಮಾಡಕೂಡದೆಂದಾಗಿ ಬ್ರಹ್ಮಯ್ಯನು ನಿಶ್ಚಯಿಸಿಕೊಂಡನು.

ಆದರೆ ಭವಾನಿ ಪ್ರಿಯನು ಪುನಹ ಮನೆಗೆ ಬರಲೇ ಇಲ್ಲ. ಬ್ರಹ್ಮಯ್ಯನವರಿಗೆ ಈ ವ್ಯಾಕುಲದಿಂದ ವೃದ್ಧಾಪ್ಯವು ಬಹುಬೇಗನೇ ಅಧಿಕವಾಗುತ್ತ ಬಂತು. ಆತನ ನಿವಾಸಿಗಳಿಲ್ಲದ ಮನೆಯು ದಿವಸ ಹೋಗುತ್ತಾ ಇದ್ದಷ್ಟು ಭೀಕರವಾಗಿ ಬಂತು.

ಮನಸ್ಸನ್ನು ಸಮಾಧಾನಪಡಿಸಿಕೊಂಡು ಮನೆಯಲ್ಲಿ ಇರುವುದೇ ಮುದುಕನಿಗೆ ಅಸಾಧ್ಯವಾಯಿತು. ಊರಿನ [illegible] ಮಧ್ಯಾಹ್ನ ಊಟಮಾಡಿಕೊಂಡು ವಿರಮಿಸುವ ಬದಲು [illegible] ಈತನು ಕೈಯಲ್ಲಿ ತಂಬಾಕು ಸೇದುವ ಚಿಲಿಮೆಯನ್ನು ಹಿಡಕೊಂಡು ಚಿತ್ರಿತ(?) ಮನಸ್ಸಿನವನಾಗಿ ತಿರುಗಾಡುತ್ತಿದ್ದನು. ಅಲ್ಲಲ್ಲಿ ನೆರಳಲ್ಲಿ ಆಡುತ್ತಿದ್ದ ಹುಡುಗರು ಆತನ ದೇಹವನ್ನು ನೋಡಿ ಆಟವನ್ನು ಬಿಟ್ಟು ನಾಚಿಕೆಯಿಂದ(?) ದೂರ ನಿಂತು, ಆ ಊರ ಒಬ್ಬ ಕವಿಯು ಬ್ರಹ್ಮಯ್ಯನ ವಿಲಕ್ಷಣವಾದ ವರ್ತನೆಯನ್ನು ವರ್ಣಿಸಿ ಕಟ್ಟಿರುವ ಪದ್ಯಗಳನ್ನು ಹಾಡಿ ಕುಚೋದ್ಯ ಮಾಡುತ್ತಿದ್ದರು. ಬ್ರಹ್ಮಯ್ಯನ ಹೆಸರು ಸ್ಮರಿಸಿದ ದಿನ ಅನ್ನ ದೊರೆಯದೆಂದು ಊರಿನವರು ತಿಳಕೊಂಡಿದ್ದದ್ದರಿಂದ ಬ್ರಹ್ಮಯ್ಯನಿಗೆ ನಾನಾ ವಿಧದ ಹೆಸರುಗಳನ್ನಿಟ್ಟು ಕರೆಯುತ್ತಿದ್ದರಲ್ಲದೆ ಬ್ರಹ್ಮಯ್ಯನೆಂಬ ಹೆಸರನ್ನು ಸಹಾ ತೆಗೆಯುತ್ತಿದ್ದಿಲ್ಲ.

ಒಂದು ದಿನ ಬ್ರಹ್ಮಯ್ಯನು ಯಥಾಪ್ರಕಾರ ಚಿತ್ರಿತ(?) ತಿರುಗಾಡುತ್ತಿರುವಾಗ ಎಲ್ಲಾ ಹುಡುಗರ ನಾಯಕನಾಗಿ ಬ್ರಹ್ಮಯ್ಯನಿಗೆ ಆ ದಿನ ಮಾಡಬೇಕಾದ ಕುಚೋದ್ಯದ ವಿಧಾನವನ್ನು ಒಬ್ಬ ಅಸಾಧಾರಣ ಹುಡುಗನು ತನ್ನ ಗೆಳೆಯರಿಗೆಲ್ಲ ವಿವರಿಸುವದನ್ನು ಬ್ರಹ್ಮಯ್ಯನು ನೋಡಿದನು. ಬ್ರಹ್ಮಯ್ಯನನ್ನು ನೋಡಿ ಇತರ ಹುಡುಗರು ಓಡಿಹೋದ ರೀತಿಯಲ್ಲಿ ಈತನು ಓಡಿಹೋಗಲಿಲ್ಲ. ಬ್ರಹ್ಮಯ್ಯನು ಹುಡುಗನ(?) ಕಡೆ ಹೋಗಿ ಆತನ ಹತ್ತಿರಸಾರಿ ತನ್ನ ಹೆಗಲಮೇಲಿರುವ ಬೈರಾಸನ್ನು ಸರಿಮಾಡಿಕೊಳ್ಳುವಂತೆ ನಟಿಸಿದನು. ಬೈರಾಸಿನಲ್ಲಿದ್ದ ಹಲ್ಲಿಯು ಅದರಿಂದ ಬ್ರಹ್ಮಯ್ಯನ ಹೆಗಲನ್ನು ಸೇರಿ ಆತನ ಬೆನ್ನಿನ ಮೇಲಿನಿಂದ ಕೆಳಗೆ ಇಳಿದುಹೋಯಿತು. ಬ್ರಹ್ಮಯ್ಯನು ಬೆನ್ನಿನ ಮೇಲೆ ಚಲಿಸುವ ಜಂತುವು ಏನೆಂದು ತಿಳಿಯಲಾರದೆ ಗಾಬರಿಯಿಂದ ನಡುಗುತ್ತಿರುವಾಗ ಹುಡುಗರೆಲ್ಲರೂ ದೂರ ನಿಂತು ಹೋ ಹೋ ಎಂತ ನಗಾಡಿದರು. ತನ್ನ ಹೆಗಲಮೇಲಿರುವ ಧೋತ್ರದಲ್ಲಿಯೇ ಈ ಹಲ್ಲಿಯು ಬಂದು ಕೂತುಕೊಂಡಿತ್ತೆಂತ ಧೋತ್ರವನ್ನು ಕುಡಿಸು(?) ಬೈಯುತ್ತಿರುವಾಗ ಧೋತ್ರವು ಫಕ್ಕನೆ ಅದೃಶವಾಗಿ ಮುಂಡಾಸಿನ ರೂಪಗೊಂಡು ಈ ಅಸಾಧಾರಣ ಹುಡುಗನ ತಲೆ ಮೇಲೆ ಕಾಣುತ್ತಿತ್ತು.

ಹುಡುಗರ ಇಂಥ ಅಪರೂಪ ಉಪಚಾರ ಸಾಧನೆಯು ಬಹಳ ಸಮಯದಿಂದಿರಲಿಲ್ಲವಾದ್ದರಿಂದ ಈ ಉಪಚಾರವಿಧಿ ಭೇದದಿಂದ ಬ್ರಹ್ಮಯ್ಯನಲ್ಲಿ ನವೀನ ಭಾವನೆಗಳಗವಾಗಿ(?) [illegible] ತನ್ನ ಧೋತ್ರವನ್ನು ಕೊಡಬೇಕೆಂದು ಈ ಹುಡುಗನನ್ನು [illegible] ಈತನು ಬ್ರಹ್ಮಯ್ಯನ ಹತ್ತಿರ ಸಾರಿದನು. ಇಬ್ಬರಿಗೂ ಸಂಭಾಷಣೆ [illegible] ಈ ಚಿಕ್ಕ ವ್ಯಕ್ತಿಯ ತಂದೆಯು ಶಾಲೆಗೆ ಹೋಗಲು ಒತ್ತಾಯಪಡಿಸಿದ್ದರಿಂದ ಮನೆಯಿಂದ ಪಲಾಯನಸೂಕ್ತ ಹಿಡಿದು ಇಲ್ಲಿಗೆ ಬಂದದ್ದೆಂಬದಾಗಿ ತಿಳಿಯಬಂತು. ತನ್ನ ಮನೆಗೆ ಬಂದು ಇಚ್ಛಾನುಸಾರ ಉಳಕೊಳ್ಳಬಹುದೆಂದು ಇವನನ್ನು ಬ್ರಹ್ಮಯ್ಯನವರು ಆಮಂತ್ರಿಸಲು ಬಹಳ ಸಂತೋಷದಿಂದ ಬ್ರಹ್ಮಯ್ಯನವರ ಆಮಂತ್ರಣವನ್ನು ಈತನು ಸ್ವೀಕರಿಸಿದನು.

(ಮುಂದೆ ಸಾಗುವುದು)

ನನ್ನ ಪರಿಚಿತಿಯನ್ನು ಹೇಳುವಿರಾ?

ಅಹಾ! ನಾನು ಸಕಲವಲಯಗಳಲ್ಲಿಯೂ ವ್ಯಾಪಿಸಿಕೊಂಡಿರುವೆನು. ನಾನು ಸಿಕ್ಕದಿರುವ ಸ್ಥಳವೇ ಇಲ್ಲವೆಂದು ಹೇಳಬಹುದಲ್ಲದೆ ಎಲ್ಲಿ ಜವುಗು ಭೂಮಿ ಉಂಟೋ ಎಲ್ಲಿ ಜಲಪ್ರದೇಶ ಉಂಟೋ ಅಲ್ಲಿ ನಾನಿರುವೆನು. ಬ್ರಿಟಿಷ್ ಸಾಮ್ರಾಜ್ಯಕ್ಕೆ ಹೇಗೆ ಸೂರ್ಯನು ಮುಳುಗುವುದಿಲ್ಲವೋ ತದ್ರೀತಿ(?) ನನ್ನ ಇಳೆಯಲ್ಲಿಯೂ ಸೂರ್ಯಾಸ್ತಮಾನ [illegible] ಇಲ್ಲ.

ನನ್ನ ಜನ್ಮಕಥೆಯನ್ನು ಕೇಳುವಿರೋ? ನಿಮ್ಮ ಹಾಗೆ ನನ್ನ ತಾಯಿಯು ತನ್ನ ಮಗುವಿನ್ನಿಟ್ಟು(?) ನನ್ನನ್ನು ಸಾಕಲಿಲ್ಲ. ಮೊಲೆ ಉಣ್ಣಿಸಲಿಲ್ಲ. ಬರೇ ಕೆಲವು ಕರೀಯ ಗುಳಿಗೆಗಳನ್ನು ನೀರಲ್ಲಿ ಹಾಕಿ ಬಿಟ್ಟಳಂತೆ. [illegible] ನಾನು ಅದರೊಳಗಿಂದ ಹೊರಟು ಬಂದೆ. ನಿಮ್ಮ ಹಾಗೆ ಪೂರ್ಣ ಅವಯವುಳ್ಳವನಾಗಿ ಹುಟ್ಟಲಿಲ್ಲ. ದೊಡ್ಡ ತಲೆಗೆ ಸಣ್ಣ ಮೈಗಾಗಲು(?) ಒಂದು ಉದ್ದವಾದ ಬಾಲ(?) ಬಾಲವಿತ್ತಷ್ಟೆ! ಹೀಗೆಯೇ ನೀರಲ್ಲಿ ಈಜಾಡುತ್ತಾ ನೀರಾಟ ಹಾಕಿ ಮೊಳಕೆದವುಗಳನ್ನು(?) ತಿನ್ನುತ್ತಾ ಒಂದೆರಡು ತಿಂಗಳು ಕಳೆಯಲು ಬಾಲದ ಬಳಿ ಮಗ್ಗುಲಲ್ಲಿ ಒಂದು ಗುಳ್ಳೆ ಆಚೆ ಮಗ್ಗುಲಲ್ಲಿ ಒಂದು ಗುಳ್ಳೆಗಳು ಎದ್ದವು. ಏನು ಹೇಳಲಿ ಬಿಡಿ! ನಿಮ್ಮ ಹಾಗೆ [illegible] ಪಂಡಿತರನ್ನಾಗಲೀ ವಿಲಾಯತಿ ಡಾಕ್ಟರರನ್ನಾಗಲೀ ಕರೆಯುವವರ್‍ಯಾರೂ ಇರಲಿಲ್ಲ. ಆ ಶಕ್ತಿಯೂ ನನಗಿಲ್ಲ.

ಅಹಾ! ನನ್ನ ಅದೃಷ್ಟವೇ! ಗುಳ್ಳೆಗಳು ದೊಡ್ಡದಾದವು. ಕುತ್ತಿಗೆಯ ಎಡಬಲ ಕಡೆಗಳಲ್ಲಿಯೂ ಎರಡು ಗುಳ್ಳೆಗಳು ಕಾಣಿಸಿದವು. ಬಾಲವು ಬಿದ್ದು ಹೋಯಿತು.

ಅಹಾ! ನನ್ನ ಸಂತೋಷ ಏನೆಂತ ಹೇಳಲಿ! ಬಾಲದ ಬದಲಿಗೆ ಹಿಂದೆ ೫ ಬೆರಳುಗಳೂ ಮುಂಗಡೆ ೪ ಬೆರಳುಗಳೂ ಹುಟ್ಟಿದವು. ಬೆರಳುಗಳ ಮಧ್ಯೆ ಬಾತುಕೋಳಿಯ ಹಾಗೆ ಪರೆಯೂ ಮೂಡಿತು. ನಿಮ್ಮ ಹಾಗೆ ನೀರಿಗೆ ಮುಳುಗಿದರೆ ಗುಳುಗುಳುನಾದವು ಬಂದು ಅಲ್ಲಿಯೇ ಮರಣವನ್ನು ಹೊಂದುವೆನೆಂಬ ಭಯವೇ ಇಲ್ಲ. ನನಗೆ ಈಜಾಡಲಿಕ್ಕೆ ಬಹಳ ಖುಷಿ. ಕುರ್ಚಿಯ ಮೇಲೆ ಕೂತು ಮೇಜಿಮೇಲೆ ಕಾಲಿಟ್ಟು ಕೂತುಕೊಳ್ಳುವ ಅಭ್ಯಾಸವೇ ನನಗಿಲ್ಲ. ನನ್ನ ಪೃಷ್ಠವನ್ನು ಭಗವಂತನು ಮಾಡಿದ ಅಂದ ಚಂದವಾಗ ನೆಲದ ಮೇಲೆ ಊರಿ ಕೂತುಕೊಳ್ಳುವದೇ ನನಗಿಷ್ಟ!

ಅಹಾ! ನನ್ನ ತಲೆ ದೊಡ್ಡದು. ತ್ರಿಕೋಣದ ಆಕಾರ. ಸಪೂರವಾದ ಕುತ್ತಿಗೆ ಇಲ್ಲ. ಬಾಯಿ ದೊಡ್ಡದು. [illegible] ಕಣ್ಣುಗಳು. ಎಸ್ ಎ. ಬಿ. ಎಲ್‌ಗಳು ಇಡುವ ಸೋಡಾ [illegible] ಕಟ್ಟಿದ ಕನ್ನಡಕದ ಹಾಗೆ ನನ್ನ ಕಣ್ಣುಗಳ ಬದಿ ಹಳದಿ ಬಣ್ಣವಾಗಿದೆ. ಅವರ ಹಾಗೆ ನನ್ನ ಕಣ್ಣುಗಳಿಗೆ ಕಾಂತಿ ಮಾತ್ರ ಇಲ್ಲ. ಅವರಿಗೆ ಬುದ್ಧಿ ಹೆಚ್ಚು. ಆದರೆ ನನ್ನ ಕಣ್ಣುಗಳು ತಲೆಯ ಮೇಲೆಯೇ ಇದ್ದು ತಲೆಯ ಹೆಚ್ಚಿನ ಭಾಗವನ್ನು ಆಕ್ರಮಿಸಿಕೊಂಡು ಮಿದುಳಿಗೆ ಜಾಗ ಕೊಡುವದಿಲ್ಲವಾದ್ದರಿಂದ ನಾನು ಸ್ವಲ್ಪ ಹೆಡ್ಡ ಜಂತು ಇದೇ ನನ್ನ ಕುಂದು.

ನನ್ನ ನಾಲಿಗೆಯು ಕೆಳಗಿನ ದವಡೆಯ ಮುಂಭಾಗಕ್ಕೆ ಅಂಟಿಕೊಂಡು ಹಿಂಭಾಗದಲ್ಲಿ ಬಿಡಿ ಆಗಿರುವದು. ಬೇಕಾದಾಗ ನಾಲಿಗೆಯನ್ನು ಉದ್ದವಾಗಿ ಹೊರಗೆ ಚಾಚಿ ಸುಮ್ಮನೆ ಬಿದ್ದುಕೊಳ್ಳುವೆನು. ಹುಳಗಳು ಮೆಲ್ಲನೆ ಬಂದು ನನ್ನ ನಾಲಿಗೆಯ ಮೇಲೆ ಕೂತುಕೊಳ್ಳುವವು. ನನ್ನ ನಾಲಿಗೆಯ ಅಂಟಾದ ದ್ರವವು ಹುಳಗಳನ್ನು ಅಲ್ಲಿಯೇ [illegible] ಬಿಡುವದು. ಕೂಡಲೇ ನಾಲಿಗೆಯನ್ನು ಒಳ ಎಳೆದು ನನ್ನ ಹೊಟ್ಟೆ ತುಂಬಿಸಿಕೊಳ್ಳುವೆನು. ತಲೆಯಲ್ಲಿ ಮಿದುಳಿಲ್ಲದಿದ್ದರೂ ನನ್ನ ನಾಲಿಗೆಯನ್ನು ಭಗವಂತನು ಆಶ್ಚರ್ಯಕರವಾಗಿ ನಿರ್ಮಿಸಿರುವುದರಿಂದ ನಿಮ್ಮಗಳ ಹಾಗೆ ಯಾರಾರ ತಲೆ ಹೊಡದು ಮನೆ ನುಂಗಿ ಬಿಡುವ ಅವಶ್ಯವೇ ನನಗಿಲ್ಲ.

ನನಗೆ ಕೆಳ ದವಡೆಯಲ್ಲಿ ಹಲ್ಲುಗಳಿಲ್ಲ. ನನಗೆ ಮೇಲಿನ ದವಡೆಯಲ್ಲಿ ಹರಿತವಾದ ಮೊನೆಯುಳ್ಳ ಹಲ್ಲುಗಳಿವೆ. ದೊಡ್ಡ ಪ್ರಾಣಿಗಳನ್ನು ನುಂಗುವಾಗ ಮಾತ್ರವೇ ಈ ಹಲ್ಲುಗಳು ನನಗೆ ಪ್ರಯೋಜನಕ್ಕೆ ಬೀಳುತ್ತವೆ. ಸಣ್ಣ ಪ್ರಾಣಿಗಳನ್ನು ನುಂಗುವದೇ ನನ್ನ ಕೆಲಸ. ನುಂಗುವಾಗ ನನ್ನ ಮುಂದಿನ ಕಾಲಿನಿಂದ ಆಹಾರವನ್ನು ಒಳಕ್ಕೆ ನೂಕಿಕೊಳ್ಳುವೆನು. ಬಾಯಿಂದ ಜಾರದ ಹಾಗೆ ಹಲ್ಲುಗಳು ಹಿಡಿದುಕೊಳ್ಳುತ್ತವೆ. ಆಹಾರ ಹಿಡಿಯಲಿಕ್ಕೆ ಮುಖ್ಯ ಸಾಧನೆ ನಾಲಿಗೆಯೇ, ಇದೇ ನನ್ನಲ್ಲಿ ಬಹೂ ಆಶ್ಚರ್ಯಕರ!

ನನ್ನ ಬಣ್ಣ ಕಂದು ಅಥವಾ ಹಸರು ಮಿಶ್ರವಾದ ಹಳದಿ. [illegible] ಭಾಗ ಹಳದಿ ಮಿಶ್ರವಾದ ಬಿಳಿ ಬಣ್ಣ. ನನ್ನ ಚರ್ಮವು [illegible]

[illegible] ನೀರಿಲ್ಲದ ಬಣಪ್ರದೇಶದಲ್ಲಿ ನನ್ನನ್ನು ಬಿಟ್ಟರೆ ನನ್ನ ಚರ್ಮವು [illegible] ವರುಷದ ಮುದುಕರಂತೆ ತೋರುವೆನು ಕಡೇಗೆ ಸಾಯುವೆನು ನನಗೆ ಸರದಾರರ ಹಾಗೆಯೇ ಶಿಖೆ ಆಗುವದಿಲ್ಲ ಶಿಖೆ ಕಾಲದಲ್ಲಿ ಸರದಾರರು ಕುದುರೆ ಮುಬಳೇಶ್ವರ ನೀಲಗಿರಿಗೋ ಹೋಗುವರು ನಾನಾದರೋ ಶಿಖೆ ಕಾಲದಲ್ಲಿ ಎಲೆಗಳ ಅಡಿಯಲ್ಲಾಗಲೀ ತಂಪಾದ ಬೇರೆ ಸ್ಥಳಗಳಲ್ಲಾಗಲೀ ಅಡಗಿಕೊಳ್ಳುವೆನು ಇದೇ ಕಾರಣದಿಂದ ನಾನು ಯಾವಾಗಲೂ ಕೆರೆಗಳ ಬದಿಯಲ್ಲಾಗಲೀ ತೋಟಗಳ ಸಮೀಪವಾಗಲೀ ವಾಸಮಾಡುವೆನು ಕೆರೆಗಳೇ ನನಗೆ ಅರಮನೆ! ತೋಟಗಳೇ ನನ್ನ ಅಂತಃಪುರ!

ಅಹಾ! ಹುಡುಗರೆಲ್ಲಾ ನನ್ನ ಮೈಮೇಲೆ ಸ್ನೇಹಯುಕ್ತವಾದ ದುರ್ಗಂಧ ದ್ರವ ಇದೆ ಎಂದು ನನಗೆ ನಖಶಿಖಾಂತವಾಗಿ [illegible] ಇದೇ ನನಗೆ [illegible] ಆದರೂ ನಾನು [illegible] ಚಿರಳೆ ನೊಣ, ಸುಂಬಳ ಹುಳ ಮೊದಲಾದವುಗಳನ್ನು ತಿಂದು [illegible] ದಿಂದ ತೋಟಗಾರನು ನನ್ನನ್ನು ಸ್ನೇಹಿತನೆಂದು ಕರೆಯುವನು ಇದೇ ನನ್ನ [illegible]

ನನಗೆ ಪಕ್ಕೆಲುಬುಗಳು ಇಲ್ಲದಿದ್ದರೂ ಬೆನ್ನೆಲುಬಿನ [illegible] ಮಿಂದಲೂ ಗಿಡ್ಡಾದ ಎಲುಬುಗಳು [illegible] ನಿಮ್ಮ [illegible] ರಕ್ತಾಶಯ (heart) ಮೊದಲಾದ ಒಳಗಿನ ಕರಣಗಳುಳ್ಳವನಾಗಿ [illegible] ವೆನು ಆದರೂ ಕೆಮ್ಮು ಕಫದ ಉಪದ್ರವ [illegible] ಮೊದಲಾದವುಗಳು ಹುಟ್ಟುವದು ಬಹಳ ಕಮ್ಮಿ!

ಮಕ್ಕಳೇ! ನಾನೇ ಕಪ್ಪೆ! ಕಪ್ಪೆಯೆಂದು ತಾತ್ಸಾರ ಮಾಡಬೇಡಿರಿ ನಾನು ತೋಟಗಾರನ ಸ್ನೇಹಿತನಲ್ಲದೆ ಅನೇಕ ಸಂಗತಿಗಳಲ್ಲಿ [illegible] S. E. I.

ಸ್ವೇಚ್ಛಾವ್ಯಾಯಾಮಿಯು ಟೀಕಗಳು

ಪತ್ರ ಸ ಪ್ರದಾನ

ಕೆಲವು ತಿಂಗಳ ಮೊದಲು ಪತ್ರಿಕಾಂತರ [illegible] ಕಮಿಟಿಯನ್ನು ಫಸರ್ಜಿಸಿದ ವಿಷಯದಲ್ಲಿ ಪತ್ತನ [illegible] ದೂರು ಕೊಟ್ಟಾಗ ಪ್ರಮುಖ [illegible] ಲುಗಳನ್ನು ತೀರ್ಮಾನಮಾಡಿದ [illegible] ಸಂಗತಿಗಳಲ್ಲಿಯೂ ಯಾರ ಕೃತಜ್ಞತಾಭಾವವು [illegible] ರೀತಿಯಲ್ಲಿ ಅಲ್ಪಸ್ವಲ್ಪ ಕಡಿಮೆಮಾಡಿದ ತೆರಿಗೆಗಳ ಕುರಿತು ಪೂರ್ಣ ಸಮಾಧಾನಪಟ್ಟು ಸಮ್ಮತಪಟ್ಟ ವ್ಯಕ್ತಿಗಳು ತಾತರ ಸಭೆಯ ಮುಂದೆ [illegible] ವ್ಯಕ್ತಿಗಳ ದೂರು ಮನ್ನಿಸಿ ಅವರಿಗೆ ನಿವೃತ್ತಿ ಕೊಡಲು [illegible] ಪರಂತು ತಾತಾಗ್ರೇಸರರು ಕಟಿಬದ್ಧರಾಗಿ ನಿಂತು ತನ್ನ ಕೈಲಾಗುವಷ್ಟರಮಟ್ಟಿಗೆ ಸಂಪೂರ್ಣವಾಗಿ ಆಶಾಭಂಗದಲ್ಲಿ ಅವರ ಅಪೀಲುಗಳು ಪರಿಣಮಿಸುವಂತೆ ಪ್ರತಿಭಟಿಸಿದರು. ಅವರ ಸಹಾಯಕ್ಕೆ ಹೆಚ್ಚುಮಂದಿ ಕೌನ್ಸಿಲರು ಕೂಡಿದರು ತಾತಾಗ್ರೇಸರನ್ನು [illegible] ಸಾಹೇಬರ ಸನ್ನಿಧಿಗ [illegible] ತಾತಾಗ್ರೇಸರರನ್ನು [illegible] ಇಂಥ ವಿಷಯಗಳಲ್ಲಿ ಪ್ರವೇಶಿಸಲು ತನಗೆ ಸ್ವತಂತ್ರವಿಲ್ಲವೆಂದು [illegible] ಉತ್ತರಕೊಟ್ಟರು [illegible] ಹವಿಲ್ಲದ ಸಂಗತಿಯಾದ [illegible] ವ್ಯಾಜ್ಯ ಮಾಡಲು ಸಿದ್ಧರಾಗಿರುತ್ತೇವೆಂದು ಆ ಜನರು ವಕೀಲ ನೋಟೀಸುಗಳನ್ನು ತಾತಾಗ್ರೇಸರಿಗೆ ಕಳುಹಿಸಿಕೊಟ್ಟರು [illegible] ಮುಂದೆ ಅವುಗಳ ಕುರಿತು [illegible] ನಡೆಯಿತು [illegible] ಸಮುಚ್ಚಯದಲ್ಲಿ [illegible] ಅವರು ಸಹಾ ಹಿಂದಿನ [illegible] ಕೌನ್ಸಿಲರರಲ್ಲಿ ಅಧಿಕ ಮಂದಿ ನೋಟೀಸು ಕೊಟ್ಟವರ ದೂರು [illegible] ಅವರ ತೆರಿಗೆ ವಿಧಿಸುವಾಗ ನ್ಯಾಯಾನ್ಯಾಯ ಪರಿಶೀಲನವಾಗಲು [illegible] ಅವರ ದೂರು ಅಪೀಲು ಪರಿಮುಖ [illegible] ಸಮಯದಲ್ಲಿ ಅವರಿಗೆ ನ್ಯಾಯವಾಗಿ ದೊರಕಬೇಕಾಗಿ ತೋರಿಬರುವ ನಿವೃತ್ತಿಯು ದೊರೆಯುವ ಹಾಗಿನ ಅನುಕೂಲ್ಯಗಳೇ ಅಡಗಿಹೋದವೆಂದೂ ತಿಳಕೊಳ್ಳುವವರ ಸಂಖ್ಯೆಯು ಬೇರೆ ಕೌನ್ಸಿಲರರ ಸಂಖ್ಯೆಗೆ ಮಿಕ್ಕಿದ ದೆಸೆಯಿಂದ ಹಟಸಾಧನೆ ಮಾಡಲು ಬದ್ಧಕಂಕಣರಾದವರ ಯುಕ್ತಿಗಳು ನಡೆಯಲು ಅವಕಾಶವೇ ಸಿಕ್ಕದೆ ಹೋಯಿತು ಕೊನೆಗೆ ಅಪ್ಪಿಲಾಂಟರ ದೂರು [illegible] ಸರಿಯಾದದ್ದು ಯಾವ ಸ್ವಭಾವದ ನಿವೃತ್ತಿ ಅವರಿಗೆ ಸಿಕ್ಕಬೇಕೆಂಬದರ ಕುರಿತು ವಿಮೋಚನೆ ನಡಿಸಿ ತಮ್ಮ ಅಭಿಪ್ರಾಯವನ್ನು ಸಭೆಗೆ ತಿಳಿಸಬೇಕಾಗಿ ಬಹು ಭಾಗದವರು ನಿರ್ಣಯಮಾಡಿದರು. ತಾತಾಗ್ರೇಸರರ ಸಹಕಾರಿಗಳ ಸಂಖ್ಯೆಯು ಕಡಿಮೆಯಾದ ದೆಸೆಯಿಂದ [illegible] ನಡೆಯಲಿಲ್ಲ ಜಿಕ್ಸನ್‌ಸಾಹೇಬರೂ ನೆಲ್ಲಿಕಾಯಿ ವೆಂಕಟ್ರಾಯರೂ [illegible] ವಕೀಲರೂ ಹೀಗೆ ಮೂರು ಮಂದಿ ಈ ಕುರಿತು ವಿಮರ್ಶೆ ನಡಿಸಿ ತಮ್ಮ [illegible] ಅಭಿಪ್ರಾಯವನ್ನು [illegible] ನಿರ್ಣಯವಾಯಿತು.

THE NEW ENGLISH SCHOOL, KUMTA.

We have the pleasure to inform the students' world and the public that Mr N S. Kamat is actively connected with the school, as a teacher and Superintendent, further, an experienced M. A. of the Bombay University—an efficient teacher of thirteen years' standing has also joined the staff of the school He is a specialist in English, Sanskrit, and Marathi We have also secured the help of a B A for teaching French, a wellread Persian Munshi for teaching Persian and an experienced First Class trained teacher to teach Kanarese The staff of the school, as it stands to day, is given overleaf & the special features of the school are given below

All particulars will be obtained from the Superintendent of the School to whom all communications may be addressed

Special Features—I Second Languages taught in the School are—(a) Classical (1) Sanskrit (2) French & (3) Persian (b) Vernacular (1) Kanarese (2) Marathi & (3) Gujarathi II Optional Groups for the School Final taught are—(1) Botany (2) Mathematics (3) Sanskrit (4) Persian (5) Drawing (6) Political Economy

N B The following optional Groups will also be introduced if there be sufficient number of boys for the same—(1) Typing and Shorthand (2) Agriculture (3) Chemistry (4) Book keeping and Commercial Correspondence

III Religious [illegible] and initiation in the study of Sanskrit is made from the lowest class IV The School Boarding is under the direct management of a Graduate teacher of the school who resides in the Boarding itself with the boarders V Students whose mother tongue is Marathi are as well looked after as those whose mother-tongue is Kanarese VI Boys of Backward Communities and those backward in English education will be given special concessions

Staff 1910 Superintendent—1 Mr Narayan Subrao Kamat Head Master—2 Mr Dwarkanath Balkrishna Redkar M A *English Sanskrit and Marathi*

Assistants—3 Mr Vishwanath Pandurang Prabhu B A—*English and Sanskrit* 4 Mr Shantaram Gundurao Watts B A *Physics and Chemistry Boarding Superintendent* 5 Mr Nagesh Sadashiv Wagh B A—*History and French* 6 Mr Martu Madhav Pai F E—*Mathematics* 7 Mr Baburao Mukund Nayak—U S F 8 Mr Hanuman Padmanatha Kamat U S F. 9 Mr Mahalleshwar Subrao Gaitonde—U S F 10 Mr Narayan Venkatraman Nayak—Matric 11 Mr Venkatesh Ramachandra Prabhu—*First Class Trained Kanarese Shastri* 12. Mr Shajauddin Shahabuddin—*Persian Certificate Holder Persian Munshi* 13 Mr Narayan Balkrishna Gavaskar—*Third Grade Arts Drawing Master* 14 Mr Narayan Subrao Chitrigi—*Candidate Gymnast*

Trustees.

ಪತ್ರವ್ಯವಹಾರ

ಪುತ್ತೂರು ಎಡ್ವರ್ಡ್ ಮೆಮೋರಿಯಲ್ ಮೀಟಿಂಗ್.

ಅಯ್ಯಾ ಪತ್ರಕರ್ತರೇ,

ನಮ್ಮ ಸ್ವರ್ಗಸ್ಥರಾದ ಎಡ್ವರ್ಡ್ ಸಾರ್ವಭೌಮರ ಸ್ಮರಣಾರ್ಥ ಧನ ಸಂಗ್ರಹದ ದಕ್ಷಿಣ ಕನ್ನಡಾ ಜಿಲ್ಲೆಯ ಕಮಿಟಿಯ ಅಪೇಕ್ಷೆಯ ಪ್ರಕಾರ ಪುತ್ತೂರು ಎಕ್ಸಿಕ್ಯೂಟಿವ್ ಕಮಿಟಿಯವರ ಸಭೆಯು ಇದೇ ತಿಂಗಳ ತಾರೀಕು 13ನೇ ಬುಧವಾರ ದಿವಸ ಪ್ರದೋಷ ಕಾಲದಲ್ಲಿ ಭಾಷ್ಯಮಯ್ಯಂಗಾರ್ ಮಂದಿರದಲ್ಲಿ ನೆರೆದು ಇಡೀ ತಾಲೂಕಿನ ಒಂದು ಸಾರ್ವಜನಿಕ ಸಭೆಯು ಇದೇ 25ನೇ ತಾರೀಕಿಗೆ ಭಾಷ್ಯ ಮಂದಿರದಲ್ಲೇ ಕೂಡಬೇಕೆಂದು ನಿರ್ಣಯಿಸಲಾಯಿತು ಆ ಮಹಾಸಭೆಯಲ್ಲಿ ತಾಲೂಕಿನ ಪ್ರತಿ ಒಬ್ಬ ಗೃಹಸ್ಥನೂ ತನ್ನ ಯಥಾನುಶಕ್ತಿ ವಂತಿಗೆಯನ್ನು ಕೊಡುವನೆಂದು ಕೋರುವೆವು.

ಇಲ್ಲಿ ವಂತಿಗೆಯಾಗುವ ಸ್ವಲ್ಪ ಹಣವನ್ನು [illegible] ಮೋರಿಯಲಿಗೂ, [illegible]

ನಮ್ಮ ದೇವಾಧೀನರಾದ ಎಡ್ವರ್ಡ್ ಸಾರ್ವಭೌಮರ ಹೆಸರನ್ನು ಸ್ಥಿರವಾಗಿ ಜ್ಞಾಪಕಗೊಳಿಸುವುದು ರಾಜಭಕ್ತರಾದ ನಮ್ಮಗಳ ಪ್ರಥಮ ಕರ್ತವ್ಯವಾಗಿರುವುದು. ಪುತ್ತೂರಿನ ವಿಕ್ಟೋರಿಯಾ ಔಷಧಾಲಯವು (Victoria Out-patients Dispensary) ಸ್ವರ್ಗೀಯ ವಿಕ್ಟೋರಿಯಾ ಚಕ್ರವರ್ತಿನಿಯವರ ದಯಾರ್ದ್ರತೆಯನ್ನೂ ಪ್ರಜಾವಾತ್ಸಲ್ಯವನ್ನೂ ಸದಾ ಜ್ಞಾಪಕಕ್ಕೆ ತರುವುದು

ತಾಲೂಕಿನ ಹಳ್ಳಿ ನಾಡುಗಳ ವ್ಯಾಪಾರಿಗಾರರು, ಅಥವಾ ಪರಸ್ಥಳದ ವರ್ತಕರು ಮೊದಲಾದವರು ಪುತ್ತೂರಿಗೆ ಬಂದರೆ ಅವರಿಗೆ ವಸ್ತಿ ಮಾಡುವರೆ ಯೋಗ್ಯವಾದ ಸ್ಥಳವಿಲ್ಲದೆ ಅತ್ಯಂತ ಕಷ್ಟವನ್ನು ಅನುಭವಿಸುವರು. ಇಷ್ಟು ಪುತ್ತೂರನ್ನು ಹುಡುಕಿದರೂ ತಟಕು ನೀರು ಬಾರದೆಂಬ ನುಡಿಯು ಎಲ್ಲರ ಬಾಯಿಯಲ್ಲಿಯೂ ಇದೆ. ಹಾಗೂ ಕ್ಷಣಕಾಲ ವಿಶ್ರಮಿಸಲಿಕ್ಕೂ ಬೇಯಿಸಲಿಕ್ಕೂ ಎಡೆಯಿಲ್ಲದಿರಲು ಪರಸ್ಥಳದವರ ಕಷ್ಟಕ್ಕೆ ಪಾರವೇ ಇಲ್ಲವಾಗುವುದು. ಹೀಗಿರಲು ಪರಲೋಕಸ್ಥರಾದ ಸಪ್ತಮ ಎಡ್ವರ್ಡ್ ಭೂಪತಿಗಳ ಅತ್ಯುನ್ನತವಾದ ನಾಮಕ್ಕೆ ಅಂಕಿತವಾಗಿ ಪುತ್ತೂರು ಟವುನಿನಲ್ಲಿ ಒಂದು ಯೋಗ್ಯವಾದ ಛತ್ರವನ್ನು ಕಟ್ಟಿಸುವುದು [illegible] ಸಾರ್ವಭೌಮರ ಸ್ಮರಣೆಯನ್ನು ಶಾಶ್ವತಗೊಳಿಸುವ ಅತ್ಯುತ್ತಮವಾದ ಉಪಾಯವೆಂದು ನಾವು [illegible]

ಹೀಗಾಗಿ ಉಪ್ಪಿನಂಗಡಿ ತಾಲೂಕಿನಿಂದ ಕೂಡಿಸಿದ ಪಂತಿಗೆ [illegible] ಭಾಗವನ್ನು ಮದ್ರಾಸು ಮೆಮೋರಿಯಲಿಗಾಗಿ ಕಳುಹಿಸಿ ಉಳಿದ ಮೊತ್ತವನ್ನು ತಾಲೂಕು ಜ್ಞಾಪಕಾರ್ಥಕ ಕಟ್ಟೋಣಕ್ಕೆ ಉಪಯೋಗಿಸುವುದು ಅತ್ಯುತ್ತಮವಾದುದು. ಇಂತಹ ಕಾರ್ಯಕ್ಕೆ ಹಿಂದಿನ [illegible] ವಿಕ್ಟೋರಿಯಾ ಚಕ್ರವರ್ತಿನಿಯವರು [illegible] ಸಮಯದಲ್ಲಿ 1901ನೇ ಇಸವಿ ಏಪ್ರಿಲ್ ತಾರೀಕು 11ನೇ [illegible] ಸೇರಿದ ಮಹಾಸಭೆಯಲ್ಲಿ [illegible] ರೂ. 3116 [illegible] 2950 [illegible] 21 [illegible] ಮಾತ್ರ ಮದ್ರಾಸ್ ಮೆಮೋರಿಯಲಿಗೂ [illegible] ಮಾತ್ರವಲ್ಲ, ಅದೇ ಸಮಯದಲ್ಲಿ [illegible] ಸಭೆಯಲ್ಲಿ ಒಟ್ಟು ಕೂಡಿಸಿದ [illegible] ವಿಕ್ಟೋರಿಯಾ ಔಷಧಾಲಯ ಫಂಡಿಗೆ ಕೊಟ್ಟು ಉಳಿದ [illegible] ಕಳುಹಿಸಿದ್ದರು.

ಸರ್ವ [illegible] ಛತ್ರವನ್ನು ಕಟ್ಟಿಸುವ ಸಮಯವು ಇದೇ [illegible] "[illegible] ಛತ್ರವನ್ನು" ತಾಲೂಕಿನ ಪ್ರಧಾನ [illegible] ಕಟ್ಟಿಸುವ [illegible] ತಾಲೂಕಿನ ಸರ್ವ ಜನರೂ [illegible] ನಾವು [illegible]

ಪುತ್ತೂರು [illegible]
10—7—1910)

ಬಿ ಹರ್ಷರಾಯರು

~~~~~~

ವಸ್ತಿಯ ಮಂದಿಗಳು

~~~~~~

ಅಯ್ಯಾ ಪತ್ರಕರ್ತರೇ,

"[illegible] ನಮ್ಮ [illegible] ತಾಲೂಕಿನ [illegible] ಗಳಲ್ಲಿ ಬೆಳೆ [illegible] ಘಟದ್ದು? [illegible] ಯಾ ದೂರಪಡಿಸಲಿಕ್ಕೆ [illegible] ಉಪಾಯವೆ [illegible] ಗೋಸ್ಕರ ಸರಕಾರದವರ [illegible] ಈ ಸಭೆಯವರು [illegible] ಮಹಾ ಸಭೆಯಲ್ಲಿ ಮಾಡಿ [illegible] ಸಿತ್ತು. ಈ [illegible] ಹುಳುಗಳ ನಿರ್ಮೂಲ ಮಾಡದೆ [illegible] ದೆಂಬ ಸಂಗತಿ ತಿಳಿಸಲಿಕ್ಕೆ [illegible] ಬಹುಕಾಲದಿಂದ ಇರುವ ಈ ಪೀಡೆಯು ಈಗ ನಮ್ಮ [illegible] ಸರಕಾರದವರ [illegible] ಹ್ಯಾಗಾದರೂ [illegible] "[illegible]" [illegible] ಟ್ಟದ್ದಕ್ಕೆ ನಾವು ತುಂಬಾ ಕೃತಜ್ಞರಾಗಿರುತ್ತೇವೆ. [illegible] ನಮ್ಮ [illegible] ಗಳನ್ನು ಕೂಡಾ ಅವರ ಕಡೆ [illegible] ಕೊಳ್ಳುತ್ತೇವೆ

ಈ [illegible] ಹುಳುಗಳು ಬೆಳೆಗೆ [illegible] ಬೇಕೆಂತ ಕೊಯಂಬತ್ತೂರಿನಲ್ಲಿರುವ ಸರಕಾರು ವನಸ್ಪತಿ ಶಾಸ್ತ್ರಜ್ಞರು (Government Botanist) [illegible] ಈ ಕುರಿತು ನಮ್ಮ ತಾಲೂಕಿನ ಎಲ್ಲಾ ವರ್ಗದಾರರು ಪೂರ್ಣ ತಾತ್ಪರ್ಯವಿಟ್ಟು ಬೆಳೆಗೆ ಹುಳು ಬಿದ್ದ ಒಡನೆ ವಿಳಂಬ ಮಾಡದೆ ನಮಗೆ ದಯವಿಟ್ಟು ತಿಳಿಸಬೇಕಾಗಿ ಈ ಮೂಲಕ ಪ್ರಾರ್ಥಿಸುತ್ತೇವೆ. ಈ ವಿಷಯದಲ್ಲಿ ಅಸಡ್ಡೆ ಮಾಡಿದರೆ ನಮ್ಮನ್ನೇ ನಾವು ದೂರಿಕೊಳ್ಳಬೇಕಷ್ಟೆ. ಇದು ಮನವರಿಕೆ ಇರಲಿ.

ಕೆಯೂರ ಸುಬ್ಬರಾವ್.
ಮೊಳಹಳ್ಳಿ ಶಿವರಾವ್.
ಪುತ್ತೂರು ವರ್ಗದಾರರ ಸಂಘದ ಕಾರ್ಯದರ್ಶಿಗಳು.

ಪುತ್ತೂರು,
ತಾರೀಕು 17—7—1910.

~~~~~~

ತೀರ್ವೆ ಮಾಫಿಯಾಗತಕ್ಕ ವಿಚಾರ.

~~~~~~

ಅಯ್ಯಾ ಪತ್ರಕರ್ತರೇ,

ನಮ್ಮ ಸಂಘದ ಕಳದ ಮಹಾ ಸಭೆಯಲ್ಲಿ ತೀರ್ವೆ ಮಾಫಿಯ ಕುರಿತು ಹೀಗೆ ನಿರ್ಣಯಮಾಡಿತ್ತು. "ನೆರೆ ನೀರಿನ ಸಂಬಂಧ ಮತ್ತು ಕಾಡು ಮೃಗಗಳ ಹಾವಳಿಯಿಂದ ಕೂಡ ಬೆಳೆಗಳು ನಾಶವಾದ ಸಂಗತಿಗಳಲ್ಲಿ ಸರಕಾರದವರು ವರ್ಗದಾರರಿಗೆ ತೀರ್ವೆಯಲ್ಲಿ ಮಾಫಿ ಕೊಟ್ಟು ನಿವೃತ್ತಿ ಹೊಂದಿಸಿಕೊಡಬೇಕಾಗಿ ಈ ಸಭೆಯವರು ಶಿಫಾರಸು ಮಾಡುತ್ತಾರೆ" ಈ ನಿರ್ಣಯದ ಪ್ರತಿಯನ್ನು ನಮ್ಮ ಕಲೆಕ್ಟರ್ ಧೊರೆಗಳವರ ಬಳಿಗೆ ಕಳುಹಿಸಿತ್ತು. ಅದಕ್ಕೆ ಈ ರೀತಿ ಉತ್ತರ ಬಂದದೆ.

ಪ್ರಕಟಣೆ.

—o—

ಇದರಿಂದ ಸಕಲ ಜನರಿಗೆ ತಿಳಿಯಪಡಿಸುವದೇನಂದರೆ --

ಕುಂದಾಪುರ ತಾಲೂಕು ನಾಲ್ಕತ್ತುನಾಡು ಮಾಗಣೆ ಹಾರದಾಳಿ ಮಂಡಾಡಿ ಗ್ರಾಮದಲ್ಲಿರುವ ಅರ್ಜಿದಾರರು ನಾಗಿ ಹೆಂಗಸಿನ ಮಕ್ಕಳು 1ನೇ ಚಿಕ್ಕಾ, 2ನೇ ಸುಬ್ಬಿ ಹೆಂಗಸು 3ನೇ ರುಕ್ಕು ಹೆಂಗಸು, 1—2 ವ 3ನೇ ಅರ್ಜಿದಾರರ ತಾಯಿ 4ನೇ ನಾಗಿ ಹೆಂಗಸು 2ನೇ ಅರ್ಜಿದಾರಳ ಮಕ್ಕಳು 5ನೇ ಮ್ಯಾನರ ಗಿತ್ರಿ ಯಾ 6ನೇ ಮ್ಯಾನರ ಮಂಜಿ (ಈ ಮ್ಯಾನರರ ಕ್ಷೇಮಚಿಂತಕ 1ನೇ ಅರ್ಜಿದಾರ ಚಿಕ್ಕಾ) ಈ 6 ಜನರು ತಮ್ಮ ಪೈಕಿ 1—2 ವ 3ನೇ ಅರ್ಜಿದಾರಳಿಗೆ ಪಾವ, 1ನೇ ಅರ್ಜಿದಾರರಿಗೆ ಖಾಸಾ ತಮ್ಮ ಕೂಡ ಬಗ್ಗೆ ಸ್ವಾತಪಟ್ಟ ಕ್ಷನರದ ರೇಸ್ ಯಡ್ಯಾಡಿ ಮತ್ತ್ಯಾಡಿ ಗ್ರಾಮದ ಅಬ್ಬಕ್ಕ ಶೆಟ್ಟಿ ಕೂಡ 4 ಜನರಿಂದ ರೂಪಾಯಿ 145—10—8ರ ಸಾಲವನ್ನು ವಸೂಲು ಮಾಡುವರೆ ತಾವು ಬಾಧ್ಯಸ್ತರೆಂತ 1889ನೇ ಇಸವಿ 7ನೇ ಆಕ್ಟು ಪ್ರಕಾರ ವಾರಿಸು ಸರ್ಟಿಫಿಕೇಟನ್ನು ತಮ್ಮ ಪೈಕಿ 1ನೇ ಅರ್ಜಿದಾರ ಚಿಕ್ಕನ ಹೆಸರಲ್ಲಿ ಕೊಡಬೇಕೆಂದು ಕುಂದಾಪುರದ ಡಿ ಮುನ್ಸಿಪ್ ಕೋರ್ಟಿನಲ್ಲಿ 1910ನೇ ಇಸವಿ ನಂಬ್ರ 31ನೇ ಮೂಲಕ ಅರ್ಜಿ ಕೊಟ್ಟಿರುವದರಿಂದ ಆ ಕುರಿತು ಆಕ್ಷೇಪ ಉಳ್ಳಂಥವರು 1910ನೇ ಇಸವಿ ಜುಲೈ ತಿಂಗಳು 16ನೇ ತಾರೀಕಿನೊಳಗೆ ಖುದ್ದಾಗಲಿ ವಕೀಲರ ಪರಿಮುಖವಾಗಲೀ ಆ ಕೋರ್ಟಿನ ಮುಂದೆ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬೇಕು.

ತಾರೀಕು 27ನೇ ಜೂನ್ 1910ನೇ ಇಸವಿ

K Venkat Rao-
ಅರ್ಜಿದಾರರ ವಕೀಲ.

ಶೇಕ್ಸಪಿಯರ್ ಮಹಾಕವಿಯವರ "ಸಿಂಬೆಲೈನ್" ಎಂಬ ನಾಟಕವನ್ನು ಹೋಲುವ, "ಇಂದಿರಾಬಾಯಿ" ಗ್ರಂಥಕರ್ತನಿಂದ ಬರೆಯಲ್ಪಟ್ಟ,

ಸೀಮಂತಿನಿ,

ಎಂಬ ಬಹು ಮನೋರಂಜನೀಯವಾದ ಹೊಸಗನ್ನಡ ನಾವೆಲ್,

ಸ್ತ್ರೀ ವೈದುಷ್ಯ, ಧರ್ಮಾಧರ್ಮ ವಿವೇಚನೆ, ವಿದ್ಯಾವಿಹೀನರ ದುರ್ಗತಿ, ಇವೇ ಮುಂತಾದ ಮಹತ್ವವಿಷಯಗಳನ್ನು ಹೃದಯಂಗಮವಾಗಿಯೂ ರಮ್ಯವಾಗಿಯೂ ವರ್ಣಿಸುವದು. ಇದು ಪುಸ್ತಕಕ್ಕೆ ತೊಡಗಿದರೆ ಕೊನೆ ಮುಟ್ಟುವ ವರೆಗೂ ಬಿಡಲು ಮನಸ್ಸಾಗದು. ಮೈಸೂರು ಗವರ್ನಮೆಂಟಿನವರಿಂದ ಪೋಷಿಸಲ್ಪಟ್ಟಿದೆ. ಮದ್ರಾಸು ಗವರ್ನಮೆಂಟಿನವರಿಂದ ಯುರೋಪಿಯನ್ ಮತ್ತು ಯುರೇಷ್ಯಿಯನ್ ಸಿವಿಲ್ ಆಫೀಸರುಗಳ ಪರೀಕ್ಷೆಗೆ ಪಠ್ಯಪುಸ್ತಕವಾಗಿ ನೇಮಿಸಲ್ಪಟ್ಟಿದೆ. ಅನೇಕ ಇಂಗ್ಲಿಷ ಕನ್ನಡ ವರ್ತಮಾನ ಪತ್ರಗಳ ಮೆಚ್ಚಿಕೆಯನ್ನು ಹೊಂದಿದೆ.

ಕ್ರಯ 12 ಆಣೆ. ಸ್ತ್ರೀಯರಿಗೆ ಮಾತ್ರ 10 ಆಣೆ. ಟಪ್ಪಾಲ್ ಖರ್ಚು ಬೇರೆ.

ಜಿ. ವೆಂಕಟರಾವ್, ಮಹಾದೇವ ಪೇಟ್ ಮಡಿಕೇರಿ.
ಇವರಲ್ಲಿ ಸಿಕ್ಕುವುದು.

~~~~~~

ನವೀನ ಶೃಂಗಾರ ಸ್ತ್ರೀ ಶುಕಸಪ್ತತಿ ಕಥೆ.

~~~~~~

ನೀವು? ಶೃಂಗಾರ ಮತ್ತು ಚಮತ್ಕಾರವಾಗಿರುವ ಕಥೆಯನ್ನು ಓದಬೇಕಾಗಿ ಅಭಿಲಾಷೆ ಇದ್ದರೆ ಮೇಲ್ಕಂಡ ಕಥೆಗೆ ಸಮಾನವಾದ ಕಥೆ ಯಾವದೂ ಇಲ್ಲ. ಕ್ರಯ ಪೋಸಲ್ ಸಹಾ ೧೦ ಆಣೆ

ಮತ್ತು ನಮ್ಮಲ್ಲಿ ಕನ್ನಡ, ತೆಲುಗು, ಸಂಸ್ಕೃತ ಪುಸ್ತಕಗಳು ಪರಮಾಯುಷ್ಯ ಊದುಬತ್ತಿಗಳು, ಹಸಿಗಂಧ ಹಸಿ ಬಿಲ್ಲೆಗಳು, ಪನ್ನೀರು, ತರಹೆವಾರಿ, ಜವಳಿ ಸಹಾ ದೊರಿಯುವದು ಅಲ್ಲದೆ, ಇತರ ಯಾವ ಪದಾರ್ಥಗಳು ಬೇಕಾದರೂ ನಂದಿಕೆಯಿಂದ ಕಮಿಷನಿಗೆ ರವಾನೆ ಮಾಡುವೆವು. ಒಂದಾವರ್ತಿ ತರಿಸಿ ನೋಡಿದರೆ [illegible] ನಮ್ಮ ಕಂಪೆನಿ ಕೆಟಲಾಗ್ ಮುಪತ್ತಾಗಿ ದೊರೆಯುವದು.

ಟಿ. ಯನ್. ಶ್ರೀನಿವಾಸ ಶೆಟ್ಟಿ [illegible]
[illegible]

[illegible] ಮನುಷ್ಯರಿಗೆ [illegible] ಯಿಂದ [illegible]
[illegible] ಮಾಡುವ ಯಾ ತಗ್ಗಿಸುವ ಕುರಿತು ಇರುವ ಬೋರ್ಡಿನವರ [illegible] (ಸಂಪ್ರ ಗಾನೇದು) ಲಗಾವ ಮಾಡಲಿಕ್ಕೆ ಅಗತ್ಯವಿರುವ ಸಂಗತಿಗ [illegible] ಮಾಡಲಿಕ್ಕೆ ತಪ್ಪಿದಂಥಾ ಯಾವದೊಂದೂ ದೃಷ್ಟಾಂತವನ್ನು ನೀವು [illegible]

[illegible] ಯಲ್ಲಿ ಯಾವ ಸಂಗತಿಯಲ್ಲಿಯೂ ತೀರ್ವೆ ಮಾಫಿ ಶಿಕ್ಕಲಿಕ್ಕಿಲ್ಲ [illegible] ಅನೇಕ ಜನರ ಗ್ರಹಿಕೆ ಇತ್ತು ಮತ್ತು ಈಗಲೂ ಇರಬಹುದು. [illegible] ಸಿದ ಹುಕುಮಿನ ಅಭಿಪ್ರಾಯದಿಂದ ಇದು ತಪ್ಪು ಗ್ರಹಿಕೆ ಎಂಬದು ಸ್ಪಷ್ಟ [illegible] ಈಗ ಮಳೆಗಾಲವಾಗಿ ಅನೇಕ ಕಡೆಗಳಲ್ಲಿ ನೆರೆ ನೀರು ತುಂಬಿ ಬೆಳೆಗಳು [illegible] ಸಮಯ. ಆದ್ದರಿಂದ ಮೇಲೆ ತೋರುವ ಕಲೆಕ್ಟರವರ ಹುಕುಂ ಎಲ್ಲಾ [illegible] ಬಗ್ಗೆ ಪ್ರಸಿದ್ಧಪಡಿಸಿದ್ದೇನೆ ನೆರೆ ನೀರಿನಿಂದಾಗಲೀ ಕಾಡು ಮೃಗ [illegible] ಯಿಂದಾಗಲೀ ನಿಜವಾಗಿ ಬೆಳೆಗಳು ಹಾಳಾದ ಸಂಗತಿಯಲ್ಲಿ ಕಲೆಕ್ಟರ್ [illegible] ಗೆ ನಷ್ಟ ಹೊಂದಿದ ರಯಿತರು ಅರ್ಜಿಯ ಮೂಲಕ ಅರಿಕೆಮಾಡಿಕೊಂಡಲ್ಲಿ ಅವರಿಗೆ ನಿವೃತ್ತಿ ಸಿಕ್ಕುವದೆಂತ ತೋರುತ್ತದೆ ಆದದರಿಂದ ಈ ವಿಶಯದಲ್ಲಿ ಸಂಕಷ್ಟ ಪಡುವವರು ಇನ್ನು ಮುಂದೆ ಗುಣುಗುಟ್ಟುತ್ತಾ ತಮ್ಮಷ್ಟಕ್ಕೆ ಸುಮ್ಮನಿರುವದು ಅಗತ್ಯ ವಿಲ್ಲ.

ಪುತ್ತೂರು,) ಕಾರ್ಯದರ್ಶಿ,
ತಾ. 13—7—1910) ಪುತ್ತೂರು ವರ್ಗದಾರರ ಸಂಘ

ಪ್ರಿಯ ಸ್ವದೇಶಾಭಿಮಾನಿ ಪತ್ರಾಧಿಪರೇ,

ಈ ಕೆಳಗಣ ಪದ್ಯಗಳು ಎಲಿಮೆಂಟರಿ ಶಾಲಾ ಬಾಲಕರ ಉಪಯೋಗಾರ್ಥ ವಾಗಿ ಕುಂದಾಪುರ ಸಬ್ ರೇಂಜಿನ ಶಾಲೆಗಳ ಸುಪರ್‌ವ್ಯಾಯಿಜರ್ ಮ| ರಾ| ಶ್ರೀ ಎಮ್ ರಘುನಾಥರಾಯರವರ ಆಜ್ಞಾನುಸಾರ ರಚಿಸಲ್ಪಟ್ಟು ಕಳದ ತಿಂಗಳಲ್ಲಿ ಬೈಂದೂರಲ್ಲಿ ನೆರದ ಉಪಾಧ್ಯಾಯರ ಸಭೆಯಲ್ಲಿ ಸದರಿಯವರಿಂದ ಮಂಜೂರು ಮಾಡಲ್ಪಟ್ಟು ಎಲ್ಲಾ ಶಾಲೆಗಳಲ್ಲಿಯೂ ಇದನ್ನು ಹುಡುಗರಿಗೆ ಕಂಠ ಪಾಠ ಮಾಡಿಸಬೇಕಾಗಿ ಅಜ್ಞಾಪಿಸೋ ಣಾಗಿರುತ್ತದೆ

ಆದ್ದರಿಂದ ಇದನ್ನು ತಮ್ಮ ಅಮೋಘವಾದ ಪತ್ರಿಕೆಯಲ್ಲಿ ಪ್ರಕಟಿಸಿ ತದ್ವಾರಾ ಎಲ್ಲಾ ಉಪಾಧ್ಯಾಯರ ಅವಗಾಹನೆಗೆ ತರೋಣಾಗ ಬೇಕಾಗಿ ಸವಿನಯದಿಂದ ಸಂಪ್ರಾರ್ಥಿಸುತ್ತೇನೆ.

ಎಮ್ ಸುಬ್ರಾಯ ಉಡುಪ
ಸ್ಕೂಲ್ ಮಾಸ್ತರ
ನಾಯಕನ ಕಟ್ಟೆ

ಬಾಲರ ದಿನಚರ್ಯೆ

ಭಾಮಿನಿ ಷಟ್ಪದಿ ಶ್ರೀಮದದ್ರಿಸುತಾ ಲತಾಶ್ರಯ| ಭೂಮಿಜನ ಭೂತಿ ಪ್ರದಾನಚತು| ಕಾಮದೇವನ ಭೀಕರಾಂಗನ ಭೀತಿ ಭಂಜನನಾ ॥ ಶ್ರೀ ಮಹಾಲಿಂಗೇಶ್ವರನ ಪದ| ತಾಮರಸಕಭಿ ನಮಿಸಿ ವರ್ಣಿಪೆ| ನೀಮಹಿಯ ಬಾಲರಿಗೆ ಗುರು ಬೋಧಿಸುವ ಸಂಗತಿಯೊ ॥

ರಾಗ ತ್ರಿಪುಟೆ

(ಧಾಟಿ—ಸ್ವಾಮಿ ದೇವನೆ ಲೋಕಪಾಲನೆ ನಿನ್ನ ಬಜಿಸುವೆ ಭಜಿಸುವೆ) ಎಂಬಂತೆ

ಬಾಲಕರೆ ನೀವರಣನುದಯದೊ ಳೇಳುವುದನಾಚರಿಸಿರೀ|
[illegible] ದೇವ [illegible] ಯ| [illegible]
ನಾಲಿಗೆಯ ಲಖಿಲೇಶ್ವರನ ನಾ| ಮಗಳನುಚ್ಚರಿಸಿರೀ|
ಪಾಲಿಸೆನುತಾ ಸ್ವಾಮಿ ಯೆಸಗಿದ| ಲೀಲೆಯನು ವಿಸ್ತರಿಸಿರೀ ॥ ೧ ॥
ಬಳಿಕ ನೀವ್ಮಲಗಿರ್ದ ಚಾಪೆಯ| ನಿಲಯದಲಿ ಮಡಿದಿರಿಸಿರಿ|
ಮಲ ವಿಸರ್ಜನೆ ಗೈದು ಮೃಜ್ಜಲ| ಗಳಲಿ ಶೌಚವಕರಿಸಿರೀ ||
ತೊಳೆದು ಕೈಕಾಲ್ಮೊಗವ ಕ್ರಮದಲಿ| ತಿಲಕವನು ಪಣೆಗಿರಿಸಿರೀ.
ಚಳಕದಲಿ ಪೆತ್ತವರ ಚರಣಂ| ಗಳಿಗೆ ಬಕ್ತಿಯಲೆರಗಿರೀ ॥ ೨ ॥
ಕರುಣದಲಿ ನಿಮ್ಮವ್ವೆಯಿಕ್ಕುವ| ಸರಸಭೋಜ್ಯನ ಬುಂಜಿಸೀ|
ಕರಗಳನು ತೊಳಕೊಂಡು ಪಿಲಾಂ| ಬರವನಂಗಕೆ ಸೇರಿಸೀ
ದರಿಸಿ ಪುಸ್ತಕಗಳನು ಪೋಗುವು| ದಿರದೆ ಶಾಲೆಗೆ ಜವದಲೀ
ಸ್ಮರಿಸಿಕೊಳ್ಳುತ ಕಲಿತ ಪಾಠದ| ಪರಿಯುನೆಲ್ಲವ ಮನದಲೀ ॥ ೩ ॥
ಗುರುಗಳಿಗೆ ವಂದಿಸುತ ವಾಗಿಂ| ಶ್ವರಿಯ ಚರಣವ ಬಜಿಸುತಾ
ತರಗತಿ ಸ್ಥಾನದಲಿ ತರಳರ| ಸರಣಿಯಲಿ ಕುಳಿತೆಸವುತಾ
ಗುರುಗಳಿಗೆ ನೀವ್ಕಲಿತ ಪಾಠವ ಮರವೆ ಗೊಳದೊಪ್ಪಿಸುವುದೂ
ಗುರುಗಳೀಯುವ ಬೇರೆ ಪಾಠವ| ಹರುಷದಲಿ ಕೈಕೊಂಬುದೂ ॥ ೪ ॥
ಆದರೊಳಗೆ ಸಂದೇಹ ಸಂಗತಿ| ಯೊದಗಿ ಬಂದರೆ ಗುರುವನು
ಆಧಿಕನಯದಿಂಕೇಳಿ ತಿಳಿಕೊ| ಳ್ವುದು ಯಥಾರ್ಥದ ಪರಿಯನೂ|
ಬಗಲು ಬುದ್ಧಿಯ ತರದೆಗುರುಪೇ| ಳಿದ ನಿರೂಪಣೆಯನುವನೂ|
ಹೃದಯದಲಿ ನೆನಪಿಟ್ಟು ಕಲಿಯಿರಿ ಪದುಳದಲಿ ಪಾಠಗಳನೂ ॥ ೫ ॥
ಇಂತು ಕಲಿವುತ ಶಾಲೆಯಿಹವರಿ| ಯಂತ ಮೊಂದೇ ಮನದಲೀ
ನಿಂತು ಮತ್ತಾಗುರುವಿನಾಜ್ಞೆಯ| ನಾಂತು ನಡೆಯುವಿ ಜವದಲೀ
ಸಂತಸದೊಳಾಲಯಕೆ ನೀವ್ಪದ| ನಂತರದೊಳೊಂದೆಡೆಯಲೀ
ನಿಂತು ನಿಮ್ಮೊಡವೆಗಳ ಕುರುಹರಿ| ವಂತೆ ಮಡಗಲು ಮನೆಯಲೀ ॥ ೬ ॥
ಬಳಿಕ ಮಜ್ಜನ ಗೈದು ನೀವ್ವಿ| ರ್ಮಲಿಸುವ ವಸನವದರಿಸುತಾ
ತಿಲಕವನು ಪಣೆಗಿಟ್ಟು ಹಿರಿಯರು| ಗಳನು ಕಂಡಭಿನಮಿಸುತಾ
ಕುಳಿತು ಹಿತಕರವಾದ ಭೋಜ್ಯಂ| ಗಳನು ಸುಖದಲಿ ಬುಂಜಿಸೀ
ಗಳಿಗೆಯೊಂದನು ಶ್ರಮವಿರಾಮಕೆ ಕಳೆಯಿರೊಯ್ಯನೆ ಮುಂದಿಸೀ ॥ ೭ ॥
ಹುಡುಗರಿರ ನೀವ್ಕಲಿತ ವಿದ್ಯೆಯ| ನಡಿಗಡಿಗೆ ಸ್ಮೃತಿ ಗೈವುತಾ
ಒಡನೆ ಶಾಲೆಗೆ ಹೋಗಿ ಕಲಿಯಿರಿ| ಹಿಡಿದ ಪಾಠವ ನೋಡುತಾ
ಪಡದು ಗುರುವಾಜ್ಞೆಯನು ಬಂದಾ| ಕುದುರಾಟವನಾಡಿರಿ
ಕಡೆಯ ಇನನಸ್ತಮಯ ಸಮಯವ ಹಿಡಿದು ನಿಲಯಕೆ ನಡೆಯಿರೀ ॥ ೮ ॥
ಚರಣ ಕರಗಳ ತೊಳೆದು ಬಂದೆಸೆ ದಿರುವ ದೀಪಕೆ ನಮಿಸಿರೀ
ಕರುಣೆಯಲಿ ಸಲಹೆನುತ ದೇವರ| ವರ ಚರಿತ್ರವ ಪಠಿಸಿರೀ|
ಹರುಷದಲಿ ನೀವುಂಡುತದನಂ| ತರದೊಳೀಶ್ವರ ನಂಘ್ರಿಯ|
ಸ್ಮರಿಸಿ ಮೃದುತರವಾದ ತಲ್ಪದ| ಲೊರಗಿ ನಿದ್ರೆಯ ಮಾಡಿರೀ ॥ ೯ ॥
ಇನಿತು ರೀತಿಯೊಳೊಂದನಾದರು| ಮನದೊಳಗೆ ನೀವ್ಮರೆಯದೇ|
ಅನವರತ ಮಾಚರಿಸುತಿರಿದು ದುರ್ಜನರ ಸಂಗವನೆರೆಯದೇ||
ತನುಜರನುತ್ಸಾಪೊರೆದ ಪರಿಯಲಿ| ಘನ ಕೃಪಾಳು ಶುಭಾಂಗನೂ
ಮನವೊಲಿದು ಸಲಹುವನು ನಿಮ್ಮನು| ಚಿನುಮಯಾತ್ಮಕ ಲಿಂಗನೂ ॥ ೧೦ ॥

ವಿದೇಶ ವೃತ್ತಾಂತ

—o—

[illegible] ಪಾರ್ಲಿಮೆಂಟಿನ ಪ್ರಭುಸದನದಲ್ಲಿ ಎಮ್ಟಿಲ್ [illegible] ಫ್ರಾನ್ಸ್‌ವಾಲ ಬಾರತೀಯರನ್ನು ಗಡಿಪಾರು [illegible] ಷಯವನ್ನು ತರ್ಕಿಸುವರಂತೆ

[illegible] ಕದ ಶಿಪರ್ಡ ಎಂಬವನು ಒಂದು ಸಾವಿರ [illegible] 2 ಮಿನಿಟು 12⅘ ಸೆಕುಂದಗಳಲ್ಲಿ ಓಡಿರು [illegible] ಭೂಲೋಕದಲ್ಲಿ ಒಂದು ಸಾವಿರ ಯಾ [illegible] ಅವನಿಗೆ ತಗಲಿದ ಸಮಯವೇ ಅತ್ಯಲ್ಪ [illegible]

[illegible] ವ್ಯಾಸರಾಯಿಗಳಾದ ಹಾ [illegible]

ಇಂಟರ್‌ನೆಷನಲ್ ಅಥವಾ ಆಯಾ ಜನಾಂಗಗಳ ಸರಕಾರದೊಳಗೆ ಉಂಟಾಗಬಹುದಾದ ವಿವಾಹದ ತೀರ್ಮಾನಗಳ ಪಂಚಾಯತಿ ಕೋರ್ಟಿಗೆ ಅಮೇರಿಕದ ಸಂಯುಕ್ತ ಸಂಸ್ಥಾನಗಳ ಮಾಜಿ ಪ್ರೆಸಿಡೆಂಟರಾಗಿದ್ದ ಮಿ| ರೊಸವೆಲ್ಟ ರವರನ್ನು ಅಧ್ಯಕ್ಷರನ್ನಾಗಿ ಮಾಡುವರೆ ಜರ್ಮನಿ, ಫ್ರಾನ್ಸ್ ಇಟಲಿ ಮತ್ತು ಜಪಾನ ದೇಶಗಳು ಸೂಚಿಸಿರುವರಾಗಿ ಕೇಳುತ್ತೇವೆ ರುಷ್ಯ ಮತ್ತು ಅಂಗ್ಲಾಳದ ಈ ವಿಷಯದ ಸಮ್ಮತಿಯು ತಿಳಿದುಬರಲಿಲ್ಲ ಈ ಪಂಚಾಯತಿ ಕೋರ್ಟಿಗೆ ಸಾಧಾರಣ ೨ ಲಕ್ಷ ಡೊಲ್ಲರುಗಳ ಖರ್ಚು ತಗಲುವುದೆಂದು ಅಂದಾಜು ಮಾಡಿರುವರು. ಇದರಲ್ಲಿ ವರುಷಕ್ಕೆ ೧೫ ಸಾವಿರ ಡೊಲ್ಲರುಗಳು ಅಧ್ಯಕ್ಷರಿಗೂ ಬಾಕಿ ೭ ಜನ ಜಡ್ಜರವರಿಗೆ ೧೦,೦೦೦ ಡೊಲ್ಲರುಗಳ ಪ್ರಕಾರವು ವಾರ್ಷಿಕ ವೇತನವು ದೊರೆಯುವುದು. ಈ ಖರ್ಚ [illegible]

ಜನರಲ್ಲಿ ಕವಿತೆಗಳ ಅಭಿರುಚಿಯನ್ನಭಿವೃದ್ಧಿಸಲಿಕೆ ಅಂಗ್ಲಾಳದಲ್ಲಿ ಒಂದು ಸಂಘವನ್ನು ಸ್ಥಾಪಿಸಿರುವರು ಕವಿಶ್ರೇಷ್ಠರು ತಮ್ಮ ಕವಿತೆಗಳಲ್ಲಿ ಹೇಳಿರುವ ಲೋಕಾನುಭವವನ್ನೂ ಇತರ ಸದ್ವಚನಗಳನ್ನೂ ಜನರಲ್ಲಿ ಪ್ರಚಾರ ಪಡಿಸುವುದೂ ಆಗಿಂದಾಗ್ಯೆ ಸಭೆಕೂಡಿ ಕವಿತೆಗಳ ಪಠಣಗಳಿಂದಲೂ ಅವುಗಳ ವಿಷಯ ವಾದ ನಡಿಸಿಯೂ ಕವಿತೆಗಳ ಜ್ಞಾನವನ್ನು ಅಭಿವೃದ್ಧಿಸುವುದೂ ಈ ಸಂಘದವರ ಮುಖ್ಯ ಉದ್ದಿಶ್ಯಗಳಾಗಿರುವವು. ಕೊಲ್ರೆರಿಜ್ ಪ್ರಭುಗಳು ಈ ಸಂಘದ ಅಧ್ಯಕ್ಷರಾಗಿರುವರು

ರಾಜದ್ರೋಹ ತಪ್ಪಿನ ತನಖಿ ಬಗ್ಗೆ ಸವಾರಕಾರ್ ಎಂಬವನನ್ನು ಹಿಂದೂಸ್ಥಾನಕ್ಕೆ ತರುವ ಬಗ್ಗೆ ಮಾರ್ಸೆಲ್ಸನ ಹತ್ತರವಿರುವ ಮೊರಿಯಾ ಎಂಬ ಸ್ಟೀಮರಿಗೆ [illegible]

ಆತನು ಹಾರಿದ್ದರಿಂದ ಈತನು ಕೆಳಗೆ ಇಳಿದದ್ದರ ವಿಷಯವಾಗಿ ಪೂರ್ಣ ವೃತ್ತಾಂತವನ್ನು ತಿಳಕೊಳ್ಳುವ ವರೆಗೆ ಈತನ ಮೊಕದ್ದಮೆಯ ತನಖಿಯನ್ನು ಮಾಡಕೂಡದೆಂಬದಾಗಿ ಬ್ರಿಟಿಷ್ ಸರಕಾರವನ್ನು ಫ್ರೆಂಚ ಸರಕಾರದವರು ವಿಜ್ಞಾಪಿಸಿಕೊಂಡಿರುವರಂತೆ 'ಇಂಟರ್‌ನೆಷನಲ್ ಲೊ' ಎಂಬ ಕಾನೂನುಗಳ ಮೇರೆಗೆ ಸಾವರಕಾರನನ್ನು ತಿರುಗಿ ಫ್ರಾನ್ಸ್ ದೇಶಕ್ಕೆ ತಂದು ತದನಂತರ ಆತನನ್ನು ಅಲ್ಲಿಂದ ತಕ್ಕೊಂಡು ಹೋಗಲಿಕ್ಕೆ ಪುನಹ ಅರ್ಜಿಮಾಡಿಕೊಳ್ಳಲಿಕ್ಕಿರುವುದಾಗಿ ಅಭಿಪ್ರಾಯ ಪಡುತ್ತಾರೆ

~~~~~~

ಪ್ರಿನ್ಸ್ ಒಫ್ ವೇಲ್ಸರವರ ೧೬ನೇ ಜನ್ಮ ದಿನವು ಕಳೆದ ತಿಂಗಳ ತಾ ೨೩ರಲ್ಲಿ ಆಚರಿಸಲ್ಪಟ್ಟಿತು.

~~~~~~

ನಾಸಿಕದಲ್ಲಿ ಕೊಲ್ಲಲ್ಪಟ್ಟ ಕಲೆಕ್ಟರ್ ಜಾಕಸನ್ ದೊರೆಗಳವರ ವಿಧವೆಗೆ ವರುಷ ಒಂದಕ್ಕೆ ೪೫೦ ಪವನುಗಳ ಪ್ರಕಾರವೂ ತಾಯಿಗೆ ೨೦೦೦ ಪವನುಗಳ ಪ್ರಕಾರವೂ ಪೆನಶನು ಕೊಡೋಣಾಗುತ್ತದೆಂದು ವಾಚಕರು ತಿಳಿದಿರಬಹುದು "ಹಿಂಗೆಯೇ" ಗುಂಡಿಸಲ್ಪಟ್ಟ ಆಂಗ್ಲೋ ಇಂಡಿಯನರ ವಿಧವೆಗಳು ಪೆನಶನು ಪಡೆಯುವ ಇನ್ನೆರಡು ಉದಾಹರಣೆಗಳಿರುವವು ಈ ವಿಧವೆಗಳು ಈಗಲೂ ಈ ಪೆನಶನುಗಳನ್ನು ಪಡೆಯುತ್ತಿರುವರು ೧೮೭೨ನೇ ಇಸವಿಯಲ್ಲಿ ಅಂಡಮಾನ್ ದ್ವೀಪವನ್ನು ಸಂದರ್ಶಿಸಲಿಕ್ಕೆ ಹೋದ ಮೆಯೋ ಪ್ರಭುಗಳು ಅಲ್ಲಿ ಕೊಲ್ಲಲ್ಪಟ್ಟದ್ದರಿಂದ ಅವರ ವಿಧವೆಯವರು ಇಂಡಿಯಾ ಸರಕಾರದಿಂದ ೨೦೦೦೦ ಪವನುಗಳನ್ನು ಪಡೆದದ್ದಲ್ಲದೆ ವರುಷಾವಧಿ ೧೦೦೦ ಪವನುಗಳ ಪ್ರಕಾರ ಪೆನಶನನ್ನು ಈಗಲೂ ಪಡೆಯುತ್ತಿರುವರು ಹೀಗೆ ಪೆನಶನನ್ನು ಪಡೆಯುವ ಎರಡನೇ ವಿಧವೆಯು ೧೮೭೯ರಲ್ಲಿ ಕಾಬೂಲಿನಲ್ಲಿ ಕೊಲ್ಲಲ್ಪಟ್ಟ ಸರ್ ಲೂಯಿಸ್ ಕವನ್ಯಾರಿಯವರ ಪತ್ನಿಯಾಗಿರುವರು ಇವರಿಗೆ ೫೦೦ ಪವನುಗಳ ಪ್ರಕಾರ ಪೆನಶನೂ, ಹೆಮ್ಟನ್ ಕೋರ್ಟ ಪೆಲ್ಯಾಸ್ ಎಂಬ ಅರಮನೆಯಲ್ಲಿ ಕಾಯಂ ನಿವಾಸಕ್ಕೆ ಸ್ಥಳವೂ ಕೊಡೋಣಾಗಿರುವುದು

~~~~~~

ಎಡಿನ್‌ಬರ್ಗ ಸರ್ವ ವಿದ್ಯಾಶಾಲೆಗೆ ಒಬ್ಬ ಸ್ವದೇಶೀಯ ಶಾಸ್ತ್ರ ಪಂಡಿತನ [illegible] ಸ್ಟ್ರತ್‌ಕೋನಾ ಪ್ರಭುಗಳು ೧೦,೦೦೦ ಪವನುಗಳನ್ನು ಉಚಿತಾರ್ಥವಾಗಿ ಕೊಟ್ಟಿರುವರು

~~~~~~

ಉತ್ತರ ಹಿಂದುಸ್ಥಾನ

~~~~~~

ಕಾಳೀ ದೇವತೆಗೆ ತನ್ನ ಮೊಮ್ಮಗನನ್ನು ಬಲಿಕೊಡಲು ಪ್ರಯತ್ನಿಸಿದ ಭಾರತ್ರಚಂದ್ರ ದೇ ಎಂಬುವರನ್ನು ಕಲ್ಕತ್ತೆಯಲ್ಲಿ ಪೋಲೀಸಿನವರು ಕೈದು ಮಾಡಿರುವರು.

~~~~~~

ಈ ತಿಂಗಳ ತಾ ೨೦ರಲ್ಲಿ ಕಲ್ಕತ್ತೆಯಲ್ಲಿ ಜಾರಿ ಮಳೆಯಾಗಿ ನೆರೆ ತುಂಬಿತು ಪಟ್ಟಣ ಸೈವಾಟವೆಲ್ಲವೂ ನೆರೆಯ ದೆಸೆಯಿಂದ ನಿಲ್ಲಿಸಲ್ಪಟ್ಟಿತ್ತು ಈ ರೀತಿ ಮಳೆಯು ಅಲ್ಲಿ ಇನ್ನೂ ಬರುವಂತಿದೆಯಂತೆ.

~~~~~~

ಬಂಗಾಳದ ಲೆಪ್ಟಿನೆಂಟ್ ಗವರ್ನರರವರ ಕಾರ್ಯನಿರ್ವಾಹ ಸಭೆ ಯಾ ಎಕ್ಸಿಕ್ಯೂಟೀವ್ ಕೌನ್ಸಿಲ್ ಇನ್ನೂ ಬೇಗನೇ ಸ್ಥಾಪಿಸಲ್ಪಡುವಂತಿದೆ ಈ ಕೌನ್ಸಿಲಿಗೆ ಮೆಂಬರರನ್ನಾಗಿ ಹ್ಯಾಕೋರ್ಟು ಜಡ್ಜರಾದ ಅಶುತೋಷ ಮುಕರ್ಜಿಯವರನ್ನು ನೇಮಿಸುವ ವರ್ತಮಾನವಿರುವುದು

~~~~~~

ಅಹಮ್ಮದಾಬಾದಿನಲ್ಲಿ ಪೋಲೀಸು ಸುಪರಿಂಟೆಂಡೆಂಟರವರು ಮೂರು 'ಬೊಂಬ'ಗಳ ಸಹಿತ ಐದು ಜನ ಹಿಂದುಗಳನ್ನು ಕೈದುಮಾಡಿರುವರು.

ಅಮೇರಿಕದ ಗೋಧಿ ಬೆಳೆಯು ಬಹಳ ಅಸಂತುಷ್ಟಿಕರವಾದ ಸ್ಥಿತಿಯಲ್ಲಿದ್ದದ್ದರಿಂದ ಪಂಜಾಬಿನಲ್ಲಿಯೂ ಗೋಧಿ ಬೆಳೆಸೋಣಾಗುವ ಇತರ ಪ್ರಾಂತ್ಯಗಳಲ್ಲಿಯೂ ಗೋಧಿ ಧಾರಣೆಯು ಚಡಾವಾಗುವ ಸಂಭವವಿರುವುದು. ಪಂಜಾಬಿನಲ್ಲಿ ಇದು ಈಗಲೇ ಚಡಾವಾಗಿರುತ್ತದೆ

~~~~~~

ಸಿಂಧು ನದಿಯಲ್ಲಿ ನೀರುಬ್ಬಿ ಡೇರಾಗಾಜಿಖಾನ್ ಎಂಬಲ್ಲಿ ನಿರ್ಗತಿಕರಾಗಿರುವ ಹಿಂದೂ ನಿವಾಸಿಕರ ರಕ್ಷಣಾರ್ಥವಾಗಿ ಹಿಂದೂ ನಿವಾಸಿಕರ ಸಂಕಷ್ಟ ನಿವಾರಣೆ ಸಭೆಯು ಇತ್ತಲಾಗೆ ಕೂಡಿತು ಸರ್ ಪಿ ಸಿ ಚಟರ್ಜಿಯವರು ಈ ಸಭೆಯ ಅಧ್ಯಕ್ಷರಾಗಿರುವರು ೧೯೦೮ನೇ ಇಸವಿಯಲ್ಲಿ ಕ್ಷಾಮನಿವಾರಣೆ ಬಗ್ಗೆ ಲಾಲಾ ಲಜಪತರೈಗಳು ಕೂಡಿಸಿದ ಫಂಡಿನಲ್ಲಿ ಖರ್ಚು ಕಳೆದು ಉಳಿದಿರುವ ರೂ ೩೧೦೦೦ವನ್ನು ಲಾಲಾ ಲಜಪತರೈಯವರು ಈ ಕಮಿಟಿಯವರ ಸ್ವಾಧೀನ ಕೊಟ್ಟಿರುವರು ಡೇರಾಗಾಜಿಖಾನಿನಲ್ಲಿ ಸಂಕಷ್ಟಪಡುವವರ ಬಗ್ಗೆ ಸಾಕಷ್ಟು ಹಣವನ್ನು ತೆಗೆದಿಟ್ಟಿರುವರು ಕಮಿಟಿಯವರು ಇನ್ನು ಐದು ಉದ್ದಿಷ್ಟಗಳನ್ನು ನೆರವೇರಿಸಬೇಕೆಂತ ನಿರ್ಧರಿಸಿಕೊಂಡಿರುವರು — (೧) ಕ್ಷಾಮನಿವಾರಣೆ (೨) ಹಿಂದೂ ಅನಾಥರ ರಕ್ಷಣೆ (೩) ಹಿಂದೂ ವಿಧವೆಯರ ರಕ್ಷಣೆ. (೪) ಸಂಕಷ್ಟಪಡುವ ಹಿಂದೂಗಳ [illegible]. (೫) ಪಂಜಾಬಿನಲ್ಲಿ ಸ್ಥಾಪಿತವಾದ ಪೀಡಿತ ಜನೋಪಕಾರ ಸಂಘದವರಿಗೆ [illegible] ವಿದ್ಯಾಭಿವೃದ್ಧಿ ಮೊದಲಾದವುಗಳಿಗೆ ಸಹಾಯ, ನರಸಿಂಗಾಬಾದಿನಲ್ಲಿರುವ ಆರ್ಯಸಮಾಜದ ಅನಾಥ ಬಾಲಿಕಾಶ್ರಮಕ್ಕೆ ತಿಂಗಳಿಗೆ ರೂ ೫೦ರ ಪ್ರಕಾರ ದ್ರವ್ಯ ಸಹಾಯ.

~~~~~~

ಬರುವ ಕಾಂಗ್ರೆಸು ಸಭೆಗೆ ಸರ್ ವಿಲಿಯಂ ವೆಡರ್ಬರ್ನರವರನ್ನೇ ಅಧ್ಯಕ್ಷರನ್ನಾಗಿ ಆರಿಸುವ ಸಂಭವ ಹೆಚ್ಚಿರುವುದು.

~~~~~~

ಟೀಸ್ಟ್ [illegible] ಕಳಿಸಿದ 'ಬೋದರ್‌ಕೆಂಬ' ಸ್ಕೀಮಿಗೆ ಸಹಾಯಾರ್ಥವಾಗಿ ಏರ್ಪಡಿಸಿದ ಫಂಡಿನ ಜಮಾ ಲಾ ರೂ ೧೧ ಲಕ್ಷ ಆಗಿರುತ್ತದೆ

~~~~~~

ಲಾಹೋರಿನಲ್ಲಿ ಕೂಡುವ 'ಸೆಂಟರಲ್ ರಿಲಿಜನ್' ಎಂಬ ಮತ ಸಮ್ಮೇಳನವಾದ ಕಾಂಗ್ರೆಸು ಸಭೆಗೆ ಹಿಂದೂಸ್ಥಾನದಿಂದ ಬ್ರಹ್ಮಸಮಾಜದವರ ಪ್ರತಿನಿಧಿಗಳಾದ ಘನ ಹೋದಿನ ಪಿ ಎಲ್ ಸೇನ್ ಪಂಡಿತ ಶಿವನಾಥ ಮತ್ತು ಎಚ್ ಸಿ ಮೈತ್ರರವರು ಹೋಗುವರೆಂದು ತಿಳಿದಿರುವರು ಎಚ್ ಸಿ ಮೈತ್ರರವರು ಈ ಕಾಂಗ್ರೆಸು ಸಭೆಯು ತೀರಿದ ನಂತರ ಆರು ತಿಂಗಳ ವರೆಗೆ ಅಮೇರಿಕಾ ಆಂಗ್ಲಾಂಡಗಳಲ್ಲಿ ಮತ ಪ್ರಸಂಗಗಳನ್ನು ಮಾಡಿ ಬರುವರಾಗಿ ತಿಳಕೊಳ್ಳುತ್ತೇವೆ

~~~~~~

ಸಿಡಿಸಿಯಸ್ ಮೀಟಿಂಗ್ ಆಕ್ಟಿನ ಅವಧಿಯು ಬರುವ ನವಂಬರ ತಿಂಗಳಲ್ಲಿ ಅಂತ್ಯವಾಗುವುದರಿಂದ ಈ ಆಕ್ಟನ್ನು ಬರುವ ಮಾರ್ಚಿ ತಿಂಗಳ ಅಂತ್ಯದ ವರೆಗೆ ಜ್ಯಾರಿಯಲ್ಲಿಡಲಿಕ್ಕೆ ಅಗತ್ಯವುಳ್ಳ ಕಾನೂನು ಮಸೂದೆಯು ಬರುವ ತಿಂಗಳ ತಾ. ೫ರಲ್ಲಿ ವ್ಯಾಸರಾಯ ಪ್ರಭುಗಳ ನ್ಯಾಯವಿಧಾಯಕ ಸಭೆಯ ಮುಂದೆ ಮಂಜೂರಾತಿ ಬಗ್ಗೆ ಇಡೋಣಾಗುವುದು

~~~~~~

ಪೂರ್ವಬಂಗಾಳದ ಹಲವು ಜಿಲ್ಲೆಗಳಲ್ಲಿ ವೀಳ್ಯದೆಲೆಗಳಲ್ಲಿ ವಿಷಮಯವಾದ ಹುಳಗಳು ಅಥವಾ ಎಲೆ ನಾಗಗಳು ಬಹಳವಾಗಿರುವುದರಿಂದ ಡಾಕ್ಕಾ ಮತ್ತು ಕೊಮಿಲ್ಲಾ **ಜಿಲ್ಲೆಗಳಲ್ಲಿ . ವೀಳ್ಯವನ್ನು ಹಾಕಿಕೊಂಡು ಕೆಲವು ಮರಣಗಳುಂಟಾದ್ದರಿಂದಲೂ ವೀಳ್ಯವನ್ನು ಅಗಿಯಬಾರದಾಗಿ ಆ ಜಿಲ್ಲೆಗಳಲ್ಲಿ ಸರಕಾರ ಹುಕುಂ ಆಗಿಯದಂತೆ.**

[illegible] ಬಕ್ಷಾರಿಸ್ತಿನ [illegible] ಕಾಸಿಯ ಸೆಂಟ್ರಲ್ ಹಿಂದೂ ಕಾಲೇಜಿನ [illegible] ರೂ ೫೦೦೦ರ ಪ್ರಕಾರ ದ್ರವ್ಯಸಹಾಯ ಮಾಡುತ್ತಿರುವರು.

~~~~~~

ಚಕ್ರವರ್ತಿಯವರ ಜನ್ಮದಿನಾಚರಣೆಯ ಬಹುಮಾನಾರ್ಥವಾಗಿ ಹೈದರಾಬಾದಿನ ನೈಜಾಮರವರಿಗೆ ಲೆಪ್ಟಿನೆಂಟ್ ಜನರಲ್, ಮೈಸೂರು ಮಹಾರಾಜರವರಿಗೆ ಕರ್ನೆಲ್, ಸಿರಮೂರಿನ ಮೆಜೊರ್ ವೀರ ವಿಕ್ರಮ ಸಿಂಗರವರಿಗೆ ಲೆಪ್ಟಿನೆಂಟ್ ಕರ್ನೆಲ್ ಎಂಬ ದಳವಾಯಿ ಬಿರುದುಗಳು ಕೊಡಲ್ಪಟ್ಟಿರುವವು.

~~~~~~

ಈಸ್ಟ್ ಇಂಡಿಯನ್ ರೈಲ್ವೆಯ ಜಮಲ್‌ಪುರ ಸ್ಟೇಶನಿನಲ್ಲಿ ರೈಲ್ವೆ ಗಾಡಿಗಳು ಓಡುತ್ತಿರುವಾಗ ಆಗುತ್ತಿರುವ ಕಳವಿನಲ್ಲೊಂದನ್ನು ಇತ್ತಲಾಗೆ ಪತ್ತೆಮಾಡಿರುವರು. ಕಳ್ಳನು ರೈಲ್ವೆಕಂಪೆನಿಯಲ್ಲಿಯೇ ಒಬ್ಬ ಕ್ಲಾರ್ಕನಾಗಿದ್ದನಂತೆ ಈತನು ಸ್ತ್ರೀವೇಷವನ್ನು ತಾಳಿ ಹಾದುಹೋಗುತ್ತಿರುವ ಪೆಸ್ಸೆಂಜರ ಗಾಡಿಗಳ ಸ್ತ್ರೀಯರಿರುವ ಕೋಣೆಯನ್ನು ಪ್ರವೇಶಿಸಿದನು ಈತನು ಪ್ರವೇಶಿಸಿದ ಗಾಡಿಯ ಕೋಣೆಯಲ್ಲಿ ಒಬ್ಬ ಬಂಗಾಳಿ ಸ್ತ್ರೀಯು ತನ್ನ ಮೂರು ಮಂದಿ ಮಕ್ಕಳೊಂದಿಗಿದ್ದಳು ಕಳ್ಳನು ಈ ಬಂಗಾಳಿ ಸ್ತ್ರೀಯ ಬಾಯಿಯನ್ನು ತುರುಕಿ ಅವಳನ್ನು ತಿವಿದು ಮಕ್ಕಳ ಸಹಿತ ಓಡುತ್ತಿರುವ ಗಾಡಿಯಿಂದ ಬಿಸಾಡಿಬಿಟ್ಟು ಅವರ ಮೈಮೇಲಿರುವ ಚಿನ್ನಾಭರಣಗಳೆಲ್ಲವನ್ನು ಕಿತ್ತುಕೊಂಡು ತಿನ್ಪಹಾರ್ ಎಂಬ ಸ್ಟೇಶನಿನಲ್ಲಿ ಇಳಿದು ಓಡುತ್ತಿದ್ದಾಗ ಒಬ್ಬ ಪ್ರೊಬೇಶನರ ಸುಪರಿಂಟೆಂಡೆಂಟರವರು ಈತನನ್ನು ಸಂಶಯದಿಂದ ಹಿಂಬಾಲಿಸಿಕೊಂಡು ಎರಡು ಜನ ಪೋರ್ಟರರವರ ಸಹಾಯದಿಂದ ಹಿಡಿದಿರುವರು ಪೋರ್ಟರರಲ್ಲೊಬ್ಬನನ್ನು ಈ ಕಳ್ಳನು ತಿವಿದಿರುವನು ರೈಲ್‌ಗಾಡಿಯಿಂದ ಹೊರಗೆ ಬಿಸಾಡಲ್ಪಟ್ಟ ಸ್ತ್ರೀಯನ್ನೂ ಮಕ್ಕಳನ್ನೂ ತರಿಸಿ ಚಿಕಿತ್ಸೆಯಲ್ಲಿಟ್ಟಿರುವರು ಮಕ್ಕಳಲ್ಲಿ ಒಂದು ಮಗುವು ಸತ್ತುಹೋಗಿರುವುದು ಮಕ್ಕಳ ತಾಯಿಯೂ ಪೋರ್ಟರನೂ ಬದುಕುವುದು ಕಷ್ಟವಂತೆ

~~~~~~

ಕೆಲವು ಆಕ್ಷೇಪಕರವಾದ ಪದಗಳನ್ನು ನೂಲಿನಲ್ಲಿ ನೈದಿದ್ದ ಧೋತಿಗಳನ್ನು ಬಂಗಾಳ ಸರಕಾರದವರು ಸರಕಾರಕ್ಕೆ ಬಿಟ್ಟುಕೊಡಬೇಕೆಂತ ಆಜ್ಞಾಪಿಸಿರುವರೆಂಬದಾಗಿ ಹಿಂದಿನ ಒಂದು ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ಪೋಲೀಸಿನವರು ಈ ವಿಷಯದಲ್ಲಿ ಇನ್ನಷ್ಟು ಸಾಹಸವು ಅತ್ಯವಂತ ಕಂಡು ಧೋತಿಗಳ ಮೇಲೆ ಈ ಪದಗಳನ್ನು ನೇಯುವ ಆಲೋಚನೆಯು ಯಾರಿಂದ ಪ್ರಥಮದಲ್ಲಿ ಹೊರಟಿತೆಂಬದನ್ನು ಪರಿಶೋಧಿಸಲು ಪ್ರಯತ್ನ ನಡಿಸಿದರು. ಪರಿಶೋಧನೆಯ ಪ್ರಾರಂಭದಲ್ಲಿ ಆಕ್ಷೇಪಕರ ಹಾಡಿರುವ ಧೋತಿಯನ್ನುಟ್ಟುಕೊಂಡ ಒಬ್ಬ ಸ್ತ್ರೀಯನ್ನು ಕೈದುಮಾಡಿ ಅವಳನ್ನು ವಿಚಾರಿಸಲು ಅವಳು ಈ ಪದಗಳು ಮೊಜಾಫರಪುರದ ಕೊಲೆಗಾತಕಿ ಖುದಿರಾಮಬೋಸನಿಂದ ರಚಿಸಲ್ಪಟ್ಟವೆಂಬದಾಗಿ ವಾಙ್ಮೂಲ ಕೊಟ್ಟಳಂತೆ. ರಾಮಜಿ ಭವಪುರ ಮಾರ್ಕೆಟಿನಲ್ಲಿ ನೇಯುತ್ತಿದ್ದ ನೂರು ಜನ ನೇಯಿಗೆಯವರನ್ನು ಕೈದು ಮಾಡಲು ಅವರಲ್ಲೊಬ್ಬನು ತನಗೆ ಈ ಪದಗಳನ್ನು ನೇಯಲಿಕ್ಕೆ ಒಬ್ಬ ಗಿರಾಕಿಯು ಬರೆದುಕೊಟ್ಟದ್ದನೆಂತಲೂ ಆತನ ಪರಿಚಿತಿಯು ತನಗಿರುವುದಿಲ್ಲವೆಂತಲೂ ತಾನು ನಿರಕ್ಷರಕುಕ್ಷಿಯಾಗಿ ಪದದ ಅರ್ಥವು ತನಗೆ ತಿಳಿಯದೆ ಅದನ್ನು ಇದ್ದಂತೆಯೇ ನೋಡಿ ನೇಯಿದೆನೆಂಬದಾಗಿಯೂ ಹೇಳಿರುವನಂತೆ. ಮಿಡ್ನಾಪುರದ ರಾಮಜೀವನಪುರದ ಮಾರ್ಕೆಟನ್ನು ಅಲ್ಲಲ್ಲಿ ಜಡ್ತಿಮಾಡಿ ನೋಡಿ ಪದಗಳನ್ನು ನೇದಿರುವ ಅನೇಕ ಧೋತಿಗಳನ್ನೂ [illegible] ಅಲ್ಲದೆ ಈ ಧೋತಿಗಳಿರುವ ಒಬ್ಬ ದೊಡ್ಡ [illegible] ನಲ್ಲಿಯೂ ಕಲ್ಕತ್ತೆಯಲ್ಲಿಯೂ [illegible]
~~~~~~

[illegible] ಬಡವರಿಗೆ [illegible] ಕಾಣಬರಲಿಲ್ಲ [illegible] ಪುಸ್ತಕಗಳನ್ನು ಪೋಲೀಸಿನವರು ಪರಿಶೋಧನೆಗೆ ತಕ್ಕೊಂಡುಹೋಗಿರುವರಂತೆ.

ಮುಂಬಯಿಯ ಮಹಾಂಡ್ವಿಯಲ್ಲಿ ಬೆಂಕಿಬಿದ್ದು ಒಳಹೊಕ್ಕು ನಷ್ಟವಾದದ್ದಲ್ಲದೆ ಸುಟ್ಟುಹೋದ ಕಟ್ಟೋಣಗಳಲ್ಲಿ [illegible] ಜನರು ಹೊರಗೆ ಬರಲಿಕ್ಕೆ ಉಪಾಯಕಾಣದೆ [illegible] ಮೃತಪಟ್ಟಿರುವರು

ಪಂಜಾಬಿನ ಸರಹದ್ದುಗಳಲ್ಲಿ ವಾಸಿಸಿಕೊಂಡಿರುವ ಹಿಂದುಗಳ ಸಂಕಷ್ಟಗಳನ್ನು ಆಗಿಂದಾಗ್ಯೆ ತಿಳಿಯಪಡಿಸುವ ಬಗ್ಗೆ ಪಂಜಾಬ 'ಎಡ್ವೋಕೇಟ್' ಎಂಬ ದೇಶಭಾಷಾ ಪತ್ರವನ್ನು ಪ್ರಕಟಿಸುತ್ತಿರುವರು ಈ ಪತ್ರಕ್ಕೆ ರೇವಣಾತಿಯಾಗಿ ರೂ ೨೦೦೦ವನ್ನು ಅಧಿಕಾರಿಗಳು ಕೇಳಿದ್ದರಿಂದ ರೂ. ೨೦೦೦ದ ರೇವಣಾತಿಯ ಜವಾಬ್ದಾರಿಯನ್ನು ಸಹ ಕೊಟ್ಟಿರುವರು

ಮುಂಬಯಿಯ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರವರ ವಾರಂಟುಗಳಿಗನುಗುಣವಾಗಿ ಪ್ರಕಾರ ಪುರಾಣಿಕ ಕಂಪೆನಿ, ಹಿಂದೂ ಏಜನ್ಸಿ ಗುರುದತ್ತ ಕಂಪೆನಿ, ಮಾಧವ ರಾಮಚಂದ್ರ ಸೊಡ್ಡಿಲ್ಕಾರ್ ತುಕಾರಾಮ ಫುಂಡ್ಲಿಕ್ ಮೊದಲಾದ ಇನ್ನು ಎರಡು ಮೂರು ಮರಾಟಿ ಪುಸ್ತಕಗಳನ್ನು ಮಾರಾಟ ಮಾಡುವ ಕಂಪೆನಿಯವರ ಅಂಗಡಿಗಳನ್ನು ಜಪ್ತಿ ಮಾಡಿ ತಿಲಕ ಹಾಡುಗಳೇ ಮೊದಲಾದ ಒಂದೆರಡು ಸಾವಿರ ಪುಸ್ತಕಗಳನ್ನು ಪೋಲೀಸಿನವರು ಹಿಡಿದುಕೊಂಡು ಹೋಗಿರುವರಂತೆ ಸರಕಾರದವರ ಅಜ್ಞೆಯನ್ನು ನಿರೀಕ್ಷಿಸಿಕೊಂಡು ಈ ಪುಸ್ತಕಗಳನ್ನು ಮೇಜಿಸ್ಟ್ರೇಟರವರ [illegible]ಸಿನಲ್ಲಿಯೇ ಇರಿಸಲಿಕ್ಕೆ ಅಜ್ಞೆಯಾಗಿರುವುದು

—

ಕಲಿಕತ್ತೆಯಲ್ಲಿ ರಾಜದ್ರೋಹ ತಪ್ಪಿನಾರೋಪಣೆಯ ಮೇಲೆ ಇಬ್ಬರು ಮಾನ್ಯ ಬಂಗಾಳಿ ಗೃಹಸ್ಥರನ್ನು ಕೈದು ಮಾಡಿರುವರು ಕಲಿಕತ್ತೆಯಲ್ಲಿ ಒಬ್ಬ ದೊಡ್ಡ ಪುಸ್ತಕ ವ್ಯಾಪಾರಿಯಾದ ಹರಿದಾಸ ಚಟರ್ಜಿಯವರು ಇವರಲ್ಲೊಬ್ಬರು, ನೊಬ್ಬ ಭಾರತ ಛಾಪಖಾನೆಯ ಮಾಲಿಕರಾದ ದೆ ವಿ ಪ್ರಸನ್ನ ರೊಯಿ ಚೌಧರಿಯವರು ಇನ್ನೊಬ್ಬರಾಗಿರುವರು ಇವರಿಬ್ಬರನ್ನೂ ಜಾಮೀನಿನ ಮೇಲೆ ಬಿಟ್ಟಿರುವರು

ದಕ್ಷಿಣ ಹಿಂದುಸ್ಥಾನ

ಕಲಿಕೋಟೆಯ ಮುನಿಸಿಪಾಲಿಟಿಯ ಚೇಯರ್ಮೆನರೂ ಮದ್ರಾಸು ನ್ಯಾಯವಿಧಾಯಕ ಸಭೆಗೆ ದಕ್ಷಿಣಕನ್ನಡ ಮತ್ತು ಮಲಬಾರ ಜಿಲ್ಲೆಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳೂ ಆದ ದಿ|| ಬ|| ಮಾನವಿಕ್ರಮ ಕೃಷ್ಣನ್ನಾಯರರವರು ಈ ತಿಂಗಳ ತಾರೀಕು ೨೧ರಲ್ಲಿ ಕಲಿಕೋಟೆಯಿಂದ ತಿರುವಾಂಕೋಡು ಸಂಸ್ಥಾನದ ಹ್ಯಾಕೋರ್ಟಿನ ಚೀಫ್ ಜಡ್ಜ ಕೆಲಸವನ್ನು ವಹಿಸಿಕೊಳ್ಳುವರೆ ತಿರುವಾಂಕೋಡಿಗೆ ಹೋಗುವರು ಎಲ್ಲಾ ಜಾತಿಯವರೂ ವಿವಿಧ ವೃತ್ತಿಯವರೂ ಇವರನ್ನು ಸನ್ಮಾನಿಸುವುದಕ್ಕಾಗಿ ಕಲಿಕೋಟೆಯಲ್ಲಿ ತಕ್ಕ ಏರ್ಪಾಡು ನಡಿಸುವರಾಗಿ ಕೇಳುತ್ತೇವೆ

ಕಳೆದ ಶುಕ್ರವಾರ ಸಂಜೆಗೆ ಕೂನೂರಿನಿಂದ ಎಚ್ ಬಿ ನೋರ್ಮನ್ ಎಂಬ ಯೂರೋಪಿಯ ಪ್ಲಾಂಟರರೊಬ್ಬರು ಕಲ್ಲಿಕೋಟೆಗೆ ಬಂದು ತಮ್ಮ ಪತ್ನಿಸಮೇತ ಮಹಮ್ಮದಿ ಮತವನ್ನು ಸೇರಿದರು ನೋರ್ಮನರವರಿಗೆ ಅಬ್ದುಲ್ಲಾ ಎಂಬ ಹೆಸರೂ ಅವರ ಪತ್ನಿಯರಿಗೆ ಅಮೀನಾ ಎಂಬ ಹೆಸರೂ ಕೊಡಲ್ಪಟ್ಟಿರುವುದು

[illegible]ನಲ್ಲಿ ಎಡ್ವರ್ಡ್ ಮೆಮೋರಿಯಲ್ ಫಂಡಿಗೆ [illegible] ರೂ. 15,000 ದೊರಕುವದಾಗಿ ಅಂದಾಜು [illegible]

ರಾಜಮಹೇಂದ್ರಿಯಲ್ಲಿ ಕಳೆದ ಶನಿವಾರ ರಾತ್ರಿ ರಾಮಕುಂದಿರವೆಂಬದನ್ನು ಪೋಲೀಸು ಸುಪರಿಂಟೆಂಡೆಂಟರವರು ೩ ಜನ ಸಬ್ ಇನ್ಸ್ಪೆಕ್ಟರರೊಂದಿಗೆ ಪ್ರವೇಶಿಸಿ ಅಲ್ಲಿ ಆಗುತ್ತಿದ್ದ ಭಜನೆಯನ್ನು ನಿಲ್ಲಿಸಿಬಿಟ್ಟು ಬಜನೆಯ ಸಾಹಿತ್ಯಗಳನ್ನೂ ಮೂರು ವಾಹನಗಳನ್ನೂ ಪೋಲೀಸು ಸ್ಟೇಶನಿಗೆ ಕೊಂಡುಹೋಗಿರುವರಂತೆ ಅಲ್ಲಿರುವ ಪೈಕಿ ೧೫ ಜನರನ್ನು ಮರುದಿನ ಜೋಯಿಂಟ್ ಮೇಜಿಸ್ಟ್ರೇಟರ ಮುಂದೆ ಹಾಜರಾಗಲಿಕ್ಕೆ ಜಾಮೀನು ತಕ್ಕೊಂಡು ಬಿಟ್ಟಿರುವರಂತೆ

ಮದ್ರಾಸು ಹ್ಯಾಕೋರ್ಟು ಈ ತಿಂಗಳ ತಾ 18ಕ್ಕೆ ಶಿಶಿರಕಾಲದ ರಜೆ ನಂತರ ಪ್ರಾರಂಭವಾಗಿರುವುದು

ತಿರುವಾಂಕೋಡು ಮತ್ತು ಕೊಚ್ಚಿ ಸಂಸ್ಥಾನಗಳ ಬ್ರಿಟಿಷ್ ರಸಿಡಂಟರಾದ ಮಿ ಆರ್ ಸಿ ಸಿ ಕಾರ್ರವರು ಫರ್ಲೋ ಮೇಲೆ ಹೋಗುವರು

ದಕ್ಷಿಣ ಕನ್ನಡ

WANTED.

Four experienced Salesmen who can read and write English and Canarese Cash security of Rs 100 or Personal security of Rs 200 is required Salary Rs 8 rising Rs 12 For further particulars see in person Applications to be made to M Ebrahim Elias, General Merchant, Mangalore on or before the 31st instant,

ಸ್ವದೇಶಾಭಿಮಾನಿಯು ಈ ಸಂಚಿಕೆಯ ಪತ್ರವ್ಯವಹಾರ ಭಾಗದಲ್ಲಿ ಪುತ್ತೂರು ವರ್ಗದಾರರ ಸಂಘದ ಕಾರ್ಯದರ್ಶಿಗಳು ಕಳುಹಿಸಿಕೊಟ್ಟಿರುವ ಎರಡು ಲೇಖನಗಳನ್ನು ಪ್ರಕಟಿಸಿರುವೆವು ಈ ಎರಡು ಲೇಖನಗಳನ್ನು ಓದಿ ಉಪ್ಪಿನಂಗಡಿ ತಾಲೂಕಿನ ವರ್ಗದಾರರೆಲ್ಲರೂ ಕಾರ್ಯದರ್ಶಿಗಳು ಸೂಚಿಸಿರುವ ರೀತಿಗಳಲ್ಲಿ ವರ್ತಿಸಿಕೊಂಡು ಬೇಗ ಹುಲುಗಳು ವಿದ್ಯೋದನೆಯೇ ಕಾರ್ಯದರ್ಶಿಗಳಿಗೆ ಬರಕೊಳ್ಳುವಲ್ಲದೆ ನೆರೆ ನೀರಿನ ಸಂಬಂಧ ಮತ್ತು ಕಾಡು ಮೃಗಗಳ ಹಾವಳಿಯಿಂದ ಕೂಡ ಬೆಳೆಗಳು ನಾಶವಾದ ಸಂಗತಿಯಲ್ಲಿ ತಕ್ಕ ನಿವೃತ್ತಿ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಬರಕೊಳ್ಳುವುದಗತ್ಯ ಈ ಎರಡು ಲೇಖನಗಳಿಗೂ ಉಪ್ಪಿನಂಗಡಿ ತಾಲೂಕಿನ ವರ್ಗದಾರರೆಲ್ಲರೂ ತಕ್ಕ ಗಮನಕೊಡುವರೆಂಬದಾಗಿ ನಂಬಿದ್ದೇವೆ

ಸ್ವೀಕಾರ ವಳಾಡಿ ಹಿರಿಯಣ್ಣ ಹೆಬ್ಬಾರರಿಂದ ರಚಿಸಲ್ಪಟ್ಟ ವಿಶ್ವಾಮಿತ್ರ ಪ್ರತಾಪ ದುಷ್ಯಂತ ಚರಿತ್ರವೆಂಬ ಯಕ್ಷಗಾನ ಪ್ರಸಂಗವು ಅಭಿಪ್ರಾಯವನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುವೆವು

ಮಂಗಳೂರು ಈ ತಿಂಗಳ ತಾ 25ಕ್ಕೆ ಇಟ್ಟಿರುವ ನಾಗಪ್ಪ ಹಂದೆಯವರ ಫೋರ್ಜರಿ ಮೊಕದಮೆಯನ್ನು ಡಿಸ್ಟ್ರಿಕ್ಟ್ ಜಡ್ಜರವರು ಬರುವ ತಿಂಗಳ ತಾ 8ಕ್ಕೆ ಮುಂದರಿಸಿಟ್ಟಿರುವರು ನಾಗಪ್ಪ ಹಂದೆಯವರು 3 ವಾರಗಳ ತನಕ ಕಾಹಿಲೆ ದೆಸೆಯಿಂದ ಕೋರ್ಟಿಗೆ ಬರಕೂಡದದ್ದು ಅವಶ್ಯವಾಗಿರುವರೆಂಬ ಡಿಸ್ಟ್ರಿಕ್ಟ್ ಮೆಡಿಕಲ್ ಸೆನಿಟರಿ ಆಫೀಸರರ ಸರ್ಟಿಫಿಕೇಟು ಪಡದ್ದರಿಂದ ಹಂದೆಯವರನ್ನು ಜಾಮೀನಿನ ಮೇಲೆ ಬಿಟ್ಟಿರುವರು ಮೊಕದಮೆಯನ್ನು ಮುಂದರಿಸಿಡುವರೆ ಸಹಾ ಇದೇ ಕಾರಣವಾಯಿತೆಂಬದಾಗಿ ತಿಳಕೊಳ್ಳುತ್ತೇವೆ. ಇದೇರೀತಿ 3ನೇ ನಾಲ್ಕನೇ ಮುದ್ದೆಯಾಲೆಗಳು ಸಹಾ ಜಾಮೀನಿನ ಮೇಲೆ ಬಿಡಬೇಕೆಂತ ಅರ್ಜಿಮಾಡಿಕೊಂಡಿದ್ದರು [illegible] ಜಡ್ಜರವರು [illegible] ಅರ್ಜಿ [illegible]

[illegible] ಹೊಸದುರ್ಗದ ಮೇಜಿಸ್ಟ್ರೇಟರವರಿಂದ ಸೆಶನ್ಸಿಗೆ ಕಮಿಟುಮಾಡಲ್ಪಟ್ಟ ದರೋಡೆ ಕಳವಿನ ಮೊಕದಮೆಯು ತನಖಿಯು ಸೆಶನ್ಸ್ ಜಡ್ಜರವರಿಂದ ಈ ತಿಂಗಳ ತಾ. 18ರಲ್ಲಿ ಮಾಡಲ್ಪಟ್ಟಿತು ಈ ಮೊಕದಮೆಯ ತನಖಿಯು ಇನ್ನೂ ಪೂರ್ಣವಾಗಲಿಲ್ಲ ಇದರಲ್ಲಿ ಅಪರಾಧಿಗಳೆಲ್ಲವರೂ ಮಾಪಿಳ್ಳೆಯವರಾಗಿರುವರು ಕಾಸರಗೋಡು ತಾಲೂಕಿನ ಕೊಡಕಟ್ ಗ್ರಾಮದ ಗೋವಿಂದ ಇಂಬ್ರಾಂದ್ರಿ ಎಂಬವನ ಮನೆಯನ್ನು ಕಳೆದ ಫೆಬ್ರವರಿ ತಿಂಗಳ ತಾ. 8ರಲ್ಲಿ ಪ್ರವೇಶಿಸಿ ಸುಮಾರು ರೂ 4000 ಕ್ರಯ ಬಾಳುವ ಸೊತ್ತನ್ನು ಲೂಟಾಯಿಸಿ ತಕ್ಕೊಂಡು ಹೋಗಿರುವರಂತಲೂ ಸೊತ್ತು ತಕ್ಕೊಂಡು ಹೋಗುವಾಗ ಎದುರಾಡಿಸಿದ ಮನೆ ನಿವಾಸಿಗಳನ್ನು ಹೊಡದು ನಿವಾಸಿಗಳಲ್ಲೊಬ್ಬನನ್ನು ಮರಣಪಡುವ ರೀತಿ ತಿವಿದು ಇರುವರೆಂತಲೂ ಈ ಮುದ್ದೆಯಾಲೆಗಳ ಮೇಲೆ ಆರೋಪಿಸೋಣಾಗಿರುವ ತಪ್ಪಿತಗಳಾಗಿರುವವು ತಿವಿಯಲ್ಪಟ್ಟ ಮನೆನಿವಾಸಿಕನು ಡಾಕ್ಟರರಿಂದ ತಕ್ಕದಾದ ಕಾಲದಲ್ಲಿ ಚಿಕಿತ್ಸೆಯನ್ನು ಪಡದ್ದರಿಂದ ಜೀವಿತನಾಗಿರುವನು

ಇತ್ತಲಾಗೆ ಜಡ್ಜರವರಿಂದ ತೀರ್ಮಾನಿಸಲ್ಪಟ್ಟ ಕಾರ್ಕಳ ಕೊಲೆ ಮೊಕದಮೆಯಲ್ಲಿ ೩ ಜನ ಅಪರಾಧಿಗಳನ್ನು ಗಾಸಿಗೆ ಕೊಡಬೇಕೆಂತಲೂ ಬಾಕಿ ಇಬ್ಬರಿಗೆ ಜೀವಾಂತ [illegible] ಶಿಕ್ಷೆಯೆಂತಲೂ ವಿಧಿಸಲ್ಪಟ್ಟಿರುವುದು ಈ ಮೊಕದಮೆಯಲ್ಲಿ ಕೊಲೆಯ ಸರ್ಟಿಫಿಕೇಟನ್ನು ಕೊಡುವಾಗ ಬಂಟ್ವಾಳದ ಸಿವಿಲ್ ಏಪೋತ್ಕೆರಿಯವರು ಮೃತನ ಪುರಾವು ಉಸುರು ಕಟ್ಟಿ ಉಂಟಾಗಿದ್ದದೆಂತಲೂ [illegible], ಎಲುಬು ತುಂಡಾದ್ದವಾಗಲಿ ಮೃತನಲ್ಲಿ [illegible] ಇಲ್ಲವೆಂತಲೂ ಬರೆದದ್ದಲ್ಲದೆ ಖಂಡಿತವಾಗಿ ಮೇಜಿಸ್ಟ್ರೇಟರವರ ಮುಂದೆಯೂ, ಸೆಶನ್ಸ್ ಜಡ್ಜರವರ ಮುಂದೆಯೂ ಈ ರೀತಿ ವಾಙ್ಮೂಲಗಳನ್ನು ಕೊಟ್ಟಿರುವರಾದಾಗ್ಯೂ ಮೊಕದಮೆಯ ಸಾಕ್ಷಿ ವಿಚಾರಣೆಗಳಿಂದ [illegible] ಒಡೆದ ಗಾಯವೂ ಎಡ ಮುಂಗೈಯು ತುಂಡಾದದ್ದೂ ಕುತ್ತಿಗೆ ಹಿಚಿಕಿ ಮೃತನು ಮರಣ ಉಂಟಾಯಿತೆಂದೂ ತೋರುವುದರಿಂದಲೂ ಏಪೋತ್ಕೆರಿಯವರು ಸುಳ್ಳು ವಾಙ್ಮೂಲ ಯಾ ಸರ್ಟಿಫಿಕೇಟು ಕೊಟ್ಟಿರುವರೆಂಬದಾಗಿ ಸೆಶನ್ಸ್ ಜಡ್ಜರವರು ಅಭಿಪ್ರಾಯಪಟ್ಟು ಪಿನೆಲ್ ಕೋಡಿನ ೧೯೫ನೇ ಪ್ರಕರಣ ಪ್ರಕಾರ ಕ್ರಿಮಿನಲ್ ವ್ಯವಹರಣೆಯನ್ನು ಇವರ ಮೇಲೆ ಯಾಕೆ ನಡಿಸಕೂಡದೆಂಬ ವಿಷಯದಲ್ಲಿ ತನಖಿ ನಡಿಸಿ ಕ್ರಿಮಿನಲ್ ಮೊಕದಮೆ ನಡಿಸಲಿಕ್ಕೆ ತಕ್ಕ ಸಬಬುಗಳುಂಟೆಂತ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರರವರಿಗೆ ತನಖಿ ಬಗ್ಗೆ ಈ ಮೊಕದಮೆಯನ್ನು ರಿಫರ್ ಮಾಡಿರುವರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರು ಇದನ್ನು ತನಖಿ ಬಗ್ಗೆ ಕುಂದಾಪುರ ಡಿವಿಜನಿನ ಸಬ್ ಕಲೆಕ್ಟರರಾದ ಪ್ರಕೃತ ಇಲ್ಲಿಯೇ ಖಚೇರಿ ಮಾಡಿಕೊಂಡಿರುವ ಮಿ| ಹೆಮಿಂಗ್ವೇರವರಲ್ಲಿ ಇದನ್ನು ರವಾನಿಸಿರುವರು ಮೊಕದಮೆಯು ಇದೇ ತಿಂಗಳ ತಾ. ೨೫ಕ್ಕೆ ತನಖಿ ಬಗ್ಗೆ ಇಟ್ಟಿರುತ್ತದೆ ಏಪೋತ್ಕೆರಿಗಳಾದ ಆರ್. ಎಸ್ ವಿಟ್ಟಲರಾವರವರು ಹ್ಯಾಕೋರ್ಟಿನಲ್ಲಿ ರಿವಿಜನ್ ಅರ್ಜಿ ಮಾಡಿರುವರೆಂದೂ ಅರ್ಜಿಯ ಫಲವು ತಿಳಿಯುವ ತನಕ ವ್ಯವಹರಣೆಯು ನಡಿಸಲ್ಪಡದಂತೆ ಹ್ಯಾಕೋರ್ಟಿನ ಅಪ್ಪಣೆಯಾಗಬೇಕೆಂದು ಮನವಿಮಾಡಿರುವರೆಂದೂ ಕೇಳುತ್ತೇವೆ

ಕಳೆದ ವಾರ ಮುನಿಸಿಪಾಲಿಟಿಯಲ್ಲಿ ೧ ಸಿಡುಬ್ಬು ರೋಗದ ಮರಣ ಮಾತ್ರ ಇತ್ತು

ಟ್ರೆಜರಿ ಡಿಪ್ಯುಟಿ ಕಲೆಕ್ಟರರವರ ಆಫೀಸಿನಲ್ಲಿ ಎಕೌಂಟಂಟರಾದ ಮ| ರಾ| ರಾ| ಕಾಲೀಸ್ ರುಸಾರಿಯೊ ಎಂಬವರು ೨ ತಿಂಗಳ ರಜೆಯಮೇಲೆ ಹೋಗುವದರಿಂದ ಇವರ ಕೆಲಸಕ್ಕೆ ಕೆಲವು ದಿವಸಗಳ ಹಿಂದೆ ಇಲ್ಲಿಯ ತಾಲೂಕು ಆಫೀಸಿನಲ್ಲಿ ಹೆಡ್ ಎಕೌಂಟಂಟ್ ಕೆಲಸದ ಮಾಹಿತಿಯನ್ನು ಪಡಿಯುವರೆ ಬಂದಿದ್ದ [illegible]

[illegible] ದೊರೆಗಳವರು ಈ ತಿಂಗಳ ತಾ. [illegible]ರಲ್ಲಿ ಮಂಗಳೂರಿನಿಂದ ಮಂಜೇಶ್ವರಕ್ಕೆ ಸರ್ಕೀಟಿನ ಮೇಲೆ ಹೋಗಿ ತಾ. ೨೫, ೨೬ ಈ ಎರಡು ದಿನ ಮಂಜೇಶ್ವರದಲ್ಲಿದ್ದು ೨೭ನೇಗೆ ಮಂಗಳೂರಿಗೆ ತಿರಿಗಿ ಬರುವರು

ಮ| ಏ ಎಮ್. ಫರ್ನಾಂದೀಸರ ಬದಲಿಗೆ ಉಪ್ಪಿನಂಗಡಿ ತಾಲೂಕ ತಹಸೀಲದಾರ ಕೆಲಸ ನೋಡುತ್ತಿದ್ದ ಮ| ಬಿ. ಎಸ್. ಅಲ್ಬುಕರ್ಕರವರು ಒಂದು ತಿಂಗಳ ಹಕ್ಕಿನ ರಜೆಯನ್ನು ಪಡಕೊಂಡಿರುವರು.

ಪುತ್ತೂರಿನ ಆಕ್ಟಿಂಗ್ ಸ್ಪೇಶಲ್ ಮೇಜಿಸ್ಟ್ರೇಟರವರಾದ ಮ| ರಾ| ಬಿ ಕೃಷ್ಣಯ್ಯನವರು ಎರಡುವರೆ ತಿಂಗಳಿನ ಹಕ್ಕಿನ ರಜೆ ಪಡಕೊಂಡಿರುವುದರಿಂದ ಇವರ ರಜಾ ಕಾಲದಲ್ಲಿ ಈ ಕೆಲಸವನ್ನು ನೋಡಲಿಕ್ಕೆ ಮ| ರಾ| ಟಿ ಭವಾನಿ ಶಂಕರರಾವರನ್ನು ನೇಮಿಸಿರುವರು

ಸರಕಾರಿ ನೌಕರರಿಗೆ ಕೊಡೋಣಾಗುವ ಮುಂಗ್ಯ ಭತ್ತೆಯು ಜುಲಾಯಿ ಮತ್ತು ಆಗೋಸ್ತು ತಿಂಗಳುಗಳಿಗೆ ಸಂಕ್ಷನಾಗಿರುವದು

ಇಲ್ಲಿಯ ಡಿಸ್ಟ್ರಿಕ್ಟ್ ಮೆಡಿಕಲ್ ಸನಿಟರಿ ಆಫೀಸರರಾಗಿರುವ ಕೆಪ್ಟನ್ ರಜಾಕ್ ಐ ಎಮ್ ಎಸ್‌ರವರನ್ನು ಇಲ್ಲಿಯ ಮುನ್ಸಿಪಲ್ ಕೌನ್ಸಿಲರರನ್ನಾಗಿ ನೇಮಿಸಿರುವರು

~~~~~

ಹೊಸದುರ್ಗ ಕಳೆದ ಕುಮಾರು ೩ ವಾರಗಳ ಈಚೆಗೆ ಮಳೆಯು ತೋರಲಿಲ್ಲ ಆಷ್ಟತ್ರಿ ಮುಂತಾದ ಕೆಲವು ದೊಡ್ಡ ದೊಡ್ಡ ಕಪ್ಪೋಣಗಳಲ್ಲಿ ಮಳೆ ನೀರು ಸೋರದೆ ಸ್ವಲ್ಪ ಸುಖ ತೋರಿದಾಗ್ಯೂ ರೈತರು ಮಳೆ ಇಲ್ಲದೆ ಮುಂದಿನ ಬೆಳೆ ರಹಿತರಾಗುವರೋ ಏನೋ ತಿಳಿಯದು

ಬರುವ ಖಾನೆಶುಮಾರಿಯ ಪ್ರೀವಾರಿಯು ತೊಡಗಿ ಆದೆ. ನಿನ್ನೆ ಮಂಗಳವಾರ ಪ್ರಥಮ ದ್ವಾದಶಿ ದಿನ ಹಗಲು ಕುಮಾರು ೨|| ಘಂಟೆ ಸಮಯ ಒಂದು ದೊಡ್ಡ ಕಾಡು ಹಂದಿಯು ಸುಮಾರು ೮ ಮೈಲು ದೂರವಿರುವ ತನ್ನ ಮನೆಯನ್ನು ಬಿಟ್ಟು ಪೇಟೆ, ಕಚೇರಿ ಅತ್ತ ಪಯಣ ಬೆಳೆಸಿ ಎದುರಿಗೆ ಶಿಕ್ಕಿದ ಮನುಷ್ಯರನ್ನು ಇರಿದು ತಿರುಗಿ ಸಂಜೆಗೆ ತನ್ನ ಊರನ್ನು ಸೇರಿತು ಇಬ್ಬರು ಕಠಿಣ ಜಖಂ ಪಡೆದು ಆಸ್ಪತ್ರಿಗೆ ನೈಯ್ಯಲ್ಪಟ್ಟಿದ್ದಾರೆ ಈ ಜನರು ಬರುವ ಖಾನೆಶುಮಾರಿ ಲೆಖ್ಖಕ್ಕೆ ಕೂಡುವರೋ ಎಂಬುದು ಸಂಶಯ

~~~~~

ಕಾಸರಗೋಡು ಇಲ್ಲಿ ಇನ್ನೂ ಮಳೆ ಹನಿಯು ಇಲ್ಲದೆ ಸೂರ್ಯನ ಪ್ರಕಾಶ ಜ್ವಾಲೆಯು ಹೆಚ್ಚುತ್ತಾ ಇರುತ್ತದೆ. ರಾತ್ರಿ ಕಾಲದಲ್ಲಿ ವಸಂತ ಕಾಲದಂತೆ ಬೆಳದಿಂಗಳು ಪ್ರಕಾಶಿಸುತ್ತದೆ ಇನ್ನು ಮುಂದೆ ಯಾವ ಸ್ಥಿತಿ ಒಂದೊದಗುವದೋ ದೇವರೇ ಬಲ್ಲ!

ಕಳೆದ ವರುಷ ಇಲ್ಲಿಯ ಪೋಲೀಸ್ ಕಾನ್ಸಟೇಬಲರ ಬಗ್ಗೆ ಸರಕಾರದವರು ಹತ್ತು ಬಿಡಾರಗಳ ಸಾಲು 1ನ್ನು ಕಟ್ಟಿಸಿಟ್ಟದ್ದರಿಂದ ಈವೇಗೆ ಬಿಡಾರದ ಬಗ್ಗೆ ಅಲೆದಾಡುವದನ್ನು ಬಿಟ್ಟು ತಮ್ಮ ಕೆಲಸದಲ್ಲಿಯೇ ಮನಸ್ಸಿಟ್ಟು ಸುಖವಾಗಿ ವಸ್ತಿಮಾಡಿಕೊಳ್ಳುವಂತೆ ಇವರಿಗೆ ಬಿಡಾರ ದೊರಕಿತು ಆದರೆ 2 ತಿಂಗಳೀಚೆಗೆ ಈ ನಮ್ಮ ಕಸಬಾ ಸ್ಟೇಶನಿನಲ್ಲಿ ಈ ತಾಲೂಕಿನ 4 ಸ್ಟೇಶನುಗಳು ತೆಗೆದು ಹಾಕಲ್ಪಟ್ಟು ಅಲ್ಲಿರುವ ಕನ್ಸಟೇಬಲರು ಸಹ ಇಲ್ಲಿಗೆ ವರ್ಗಾಯಿಸಲ್ಪಟ್ಟು ಬಂದಿರುವ ಕಾರಣ ಅಂಥವರಿಗೆ ಈಗ ವಾಸ್ತವ್ಯಕ್ಕೆ ಬಿಡಾರಗಳು ಇಲ್ಲದೆ ಪುನಹ ಇನ್ನೂ 1|| ಬಿಡಾರಗಳು (ಲೈನು) ಕಟ್ಟಿಸುವರೆ ಸರಕಾರದವರು ಆಲೋಚಿಸಿ ಸೆಂಕ್ಷನ್ ಮಾಡಿದ್ದಾರಾಗಿ ಕೇಳುತ್ತೇನೆ ಈ ಬಗ್ಗೆ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಧೊರೆಗಳೂ, ಸರಕಾರಿ ಕಟ್ಟೋಣಗಳ ಇಲಾಖೆಯ ಸಬ್ ಇಂಜಿನಿಯರರೂ ಇದೇ ತಾ. 17ನೇ ಆದಿತ್ಯವಾರ ಮಧ್ಯಾಹ್ನಕ್ಕೆ ಇಲ್ಲಿ ಬಂದು ಮೊದಲು ಕಟ್ಟಿರುವ ಪೋಲೀಸ್ ಲೈನಿನ [illegible] ಸ್ಥಳ ನೋಡಿಕೊಂಡು ಹೋಗಿರುತ್ತಾರೆ. ಈ ಲೈನಿನ ಕೆಲಸವನ್ನು ಸದ್ಯದಲ್ಲಿಯೇ ಸುರುಮಾಡುವರಾಗಿ ಕೇಳುತ್ತೇನೆ

ಇದೇ ತಾ. 18ನೇ ಸೋಮವಾರ ದಿವಸ ನಮ್ಮ ತಾಲೂಕ್ ಹೆಡ್ ಅಕೌಂಟಂಟರಾದ ಮ ರಾ. ಕೆ ಸುಬ್ರಾಯರವರು ಬೇರೆ ಕೆಲಸದಿಂದ ನಿವೃತ್ತರಾಗಿ ಇಂದು ಆಕ್ಟಿಂಗ್ ಕೆಲಸ ನೋಡುತ್ತಿದ್ದ ಮ. ರಾ ಉ ರಾಮನ್ನಾಕರಿಂದ ಚಾರ್ಜು ವಹಿಸಿಕೊಂಡಿರುತ್ತಾರೆ ಸದರಿ ರಾಮನ್ನಾಕರು ಈಗ ಮಂಜೇಶ್ವರ ಡಿವಿಜನ್ ರೆವಿನ್ಯು ಇನ್ಸ್‌ಪೆಕ್ಟರ ಕೆಲಸಕ್ಕೆ ವರ್ಗಪಟ್ಟಿರುವರಂತೆ

ಇದೇ ಕಳೆದ ಸೋಮವಾರ ದಿವಸ ಇಲ್ಲಿಯ ಸರಕಾರಿ ಮುಖ್ಯ ಉದ್ಯೋಗಸ್ಥರೂ, ವಕೀಲರೇ ಮುಂತಾದ ಗೃಹಸ್ಥರೂ ಮುನ್ಸಿಪ್ ಕೋರ್ಟಿನ ಹತ್ತಿರವಿರುವ ವಕೀಲರ ಯೂನಿಯನ್ ಕ್ಲಬಿನಲ್ಲಿ ಸಭೆಕೂಡಿ ದಿವಂಗತ ನಮ್ಮ ಎಡ್ವರ್ಡ ಚಕ್ರವರ್ತಿಗಳವರ ಸ್ಮಾರಕ ಫಂಡಿನ ವಿಷಯ ದ್ರವ್ಯ ಸಂಗ್ರಹಿಸುವ ಏರ್ಪಾಡು ಮಾಡಿರುವರಂತೆ

—·—

ಪುತ್ತೂರು ಇಟ್ಟಿದು ಕಸಬಾ ಗ್ರಾಮದ ಕೊಲ್ಲೆ ನರಸಿಂಹ ಬಟ್ಟರಿಗೆ ಮಾರಾಟಿ ಅಮ್ಮು ಎಂಬವನು ರಾತ್ರಿ ಕಾಲ ಕತ್ತಿಯಿಂದ ಕಡಿದು ಕಠಿಣ ಗಾಯ ಪಡಿಸಿ ಪರಾರಿಯಾಗಿದ್ದಾನಂತೆ ನರಸಿಂಹ ಬಟ್ಟರ ಮರಣಕಾಲದ ಹೇಳಿಕೆ ಪಡಿಯುವರೆ ಇಲ್ಲಿಯ ಮೇಜಿಸ್ಟ್ರೇಟರು ವ ಪರೀಕ್ಷೆ ಬಗ್ಗೆ ದಾಕ್ತಾರರು ಹೋಗಿದ್ದರು ನರಸಿಂಹ ಬಟ್ಟರನ್ನು ಚಿಕಿತ್ಸೆಗೆ ಇಲ್ಲಿಯ ಆಸ್ಪತ್ರೆಗೆ ತಂದಿರುವರು

ಇಲ್ಲಿಯ ಮುನ್ಸಿಫರು ೧೦ ದಿವಸಗಳ ರಜೆಯ ಮೇಲೆ ಮಂಗಳೂರಿಗೆ ಹೋದ್ದರಿಂದ ವ್ಯಾಜ್ಯಗಳ ತನಿಖೆಯು ತಾರೀಕಿಕ್ಕೆ ಮುಂದರಿಸಿಟ್ಟಿರುವರು.

ಇತ್ತಕಡೆ ಕೆಲವು ದಿವಸಗಳಾರಬ್ಯ ಮಳೆ ಇಲ್ಲದೆ ಬಾವಿಗಳ ನೀರು ಇಳಿದು ಹೋಗಿರುವದರಿಂದ ಅನೇಕರು ಮುಂದೆ ಬರಗಾಲ ಬರುವದು ಖಂಡಿತ ಎಂತ ಊಹಿಸುವರು ಈಗಲೆ ಸುಗ್ಗಿ ಅಕ್ಕಿಗೆ ರೂ ೪-೬ ೦ ದರ ಏರುತ್ತಾ ಬಂದದೆ ಮುಂದೇನು ಗತಿ ಎಂಬುದು ತಿಳಿಯುವದಿಲ್ಲ

ಉಪ್ಪಿನಂಗಡಿ ತಾಲೂಕಿನ ೧೯೧೦ ೧೧ನೇ ವರುಷದ ಜಮಾಬಂದಿ ಇಂದಿನಿಂದ ಬರುವ ಆಗೋಸ್ತು ತಾ ೧೫ರ ಲ್ಲು ಬೆಳ್ಳಂಗಡಿ ತಾ ೧೬ಲ್ಲು ಪುತ್ತೂರು ಮೊಕ್ಕಾಮಿನಲ್ಲಿಯೂ ನಮ್ಮ ಡಿವಿಜನ್ ಡಿಪ್ಯುಟಿ ಕಲೆಕ್ಟರವರಿಂದ ನಡೆಸ ಲ್ಪಡು ಮಾದರಿ ನಿಶ್ಚಯಿಸಿರುವರು.

~~~~~

ಬಂಟವಾಳ ಇಲ್ಲಿಯ ಡಿಪ್ಯುಟಿ ತಹಸಿಲ್‌ದಾರರವರ ಆಫೀಸಿನ ಹೆಡ್ ಕ್ಲಾರ್ಕರಾದ ಮ ರಾ ರಾ ಎಮ್ ರಾಘವೇಂದ್ರರಾಯರವರು ಗಲಭೆ ಮೊಕದಮೆಗಳನ್ನು ಪಡಿಚಾವಮಾಡುವದರಲ್ಲಿ ಸ್ವಲ್ಪ ವಿಳಂಬ ಮಾಡಿದ್ದರಿಂದ ನಮ್ಮ ಕಲೆಕ್ಟರ್ ಧೊರೆಗಳವರು ಇವರನ್ನು ೩ ತಿಂಗಳು ಅವಮಾನತು ಪಡಿಸಿದ್ದಾರೆ ಇವರ ಕೆಲಸಕ್ಕೆ ಮಂಗಳೂರು ತಾಲೂಕು ಆಫೀಸು ಕ್ಲಾರ್ಕರಾದ ಮ| ರಾ| ರಾ ಎಮ್ ನಾರಾಯಣ ಬಟ್ಟರನ್ನು ರೂ ೩೦ ತಲಬಿನಮೇಲೆ ನೇಮಕ ಮಾಡಿದ್ದಾರೆ

~~~~~

ಮುಲ್ಕಿ ಪುನರ್ವಸು ನಕ್ಷತ್ರದ ಮಳೆಯಲ್ಲಿ ಹೆಗ್ಗುಸುವದು ಕಷ್ಟ ಎಂಬ ಮಾತಿಗೆ ವ್ಯತಿರಿಕ್ತವಾಗಿ ಸದರಿ ನಕ್ಷತ್ರದ ಮಳೆಯು ತಟಕಾದರೂ ಸುರಿಯದೆ ಈ ಕಾಲದ ಬಿಸಲಲ್ಲಿಯೆ ಹೆಗ್ಗುಸುದಬಹುದೆಂಬದಾಗಿರುವುದರಿಂದಲೂ ಬಿತ್ತಿದ ಗದ್ದೆಗಳ ಪೈರೆಲ್ಲಾ ಹಾಳಾಗುವ ಸ್ಥಿತಿಯಲ್ಲಿರುವದರಿಂದಲೂ ಒಕ್ಕಲಿಗರೆಲ್ಲಾ ಕಕ್ಕಾವಿಕ್ಕಿಯಾಗಿರುವರು ವ್ಯಾಪಾರಸ್ಥರು ಮಾತ್ರ ಮುಗುಳುನಗೆಯುಳ್ಳವರಾಗಿ ಅಕ್ಕಿ ಧಾರಣೆ ಏರಿಸುವ ಚಳವಳಿಯಲ್ಲಿರುವರು ಸುರತಕಲ್, ಗುರುಪುರ, ಸ್ಟೇಶನುಗಳನ್ನು ತೆಗೆದಿದ್ದಾರೆ ಇಲ್ಲಿಯ ಸ್ಟೇಶನಿನಲ್ಲಿಯ ಕನ್‌ಸ್ಟೇಬಲರ ಸಂಖ್ಯೆಯನ್ನು ತುಸ ಹೆಚ್ಚಿಸಿರುವರಾದರೂ ತೆಗೆದ ಸ್ಟೇಶನುಗಳು ಇರುವಾಗ ಇದ್ದ [illegible] ಕಳವುಗಳು ಕಡಿಮೆಯಾಗುತ್ತಿದ್ದು [illegible] ಗಳನ್ನು ಅನುಭವಿಸುತ್ತಿರುವರು. ಮುಂದಿನ [illegible] ಸಾರವಾಗಿ ಏನಾದರೂ ಒಂದು ಕಳವು [illegible] ಪಕ್ಷಕ್ಕೆ ಕೂಡ್ಲೇ ಹತ್ತರದ ಸ್ಟೇಶನುಗಳಿಗೆ ಬಂದು [illegible] ವಿಲೆವಾರಿ ಮಾಡಬಹುದಿತ್ತು ಈಗಲಾದರೆ [illegible] ಸುಮಾರು ೨೭ ಮೈಲು ದೂರ ಇರುವ ಸಾಣೂರು [illegible] ನಮ್ಮ ಸ್ಟೇಶನ್ ಫಿರ್ಕೆಗೆ ಬಿದ್ದಿರುವದು. ಸದರಿ ಸ್ಥಳದಲ್ಲಿ ಒಂದು ಖೂನಿ ಆದರೆ ಪಟೇಲರ ರಿಪೋರ್ಟು ಬರಗಿ [illegible] ಕನ್‌ಸ್ಟೇಬಲರು ಹೋಗ ಒಂದುವರೆ ದಿನ, ವೈದ್ಯ ಪರೀಕ್ಷೆಗೆ ನೈಯ್ಯಲಿಕ್ಕೆ ಒಂದೆರಡು ದಿನಗಳು ಆಗಿ, ಕೊಳೆತು ನಾರುವ ಹೆಣವನ್ನು ವೈದ್ಯರು ಹೇಗೆ ಪರೀಕ್ಷಿಸುವರೋ ಯಾವ ವಿಧದಿಂದ ಸರ್ಟಿಫಿಕೇಟು ಹಾಜರು ಪಡಿಸುವರೋ ಎಂಬದಾಗಿಯೂ ಜನರಲ್ಲಿ ಮಾತು ಎದ್ದಿರುವದಲ್ಲದೆ ಈ ಸ್ಟೇಶನುಗಳ ಮಾರ್ಪಾಟಿದಿಂದ ಹಳ್ಳಿ ನಿವಾಸಿಗಳು ಕಂಗಾಲಾಗಿ ಮೇಲಾಫೀಸರುಗಳಿಗೆ ವಿನಂತಿ ಬರಕೊಳ್ಳುವರೆಂಬ ವಾರ್ತೆ ಇರುವದು ಆದ್ದರಿಂದ ಇಲಾಖೆಯ ಮೇಲಾಫೀಸರರು ಅಲ್ಲಲ್ಲಿ ಸ್ಟೇಶನುಗಳನ್ನು ತೆಗೆದ ಮಾರ್ಪಾಟವು ಜನರಿಗೆ ಉಪಕಾರವೋ ಅಪಕಾರವೋ ಎಂಬದನ್ನು ಚೆನ್ನಾಗಿ ಆಲೋಚಿಸಿ ಬೇಗನೇ ತಕ್ಕ ವಿಲೆವಾರಿ ಮಾಡುವದು ವಿಹಿತವಲ್ಲವೇ?

~~~~~

ವಿವಿಧ ವಿಷಯಗಳು

~~~~~

ಮದ್ರಾಸು ಪಟ್ಟಣದ ಕಿಲ್ಪಾಕೆಂಬ ಸ್ಥಳದಲ್ಲಿ ವಿ ಡಬ್ಲ್ಯು ಎನ್ ಪಾರ್ಗ್ಸನ್ ಎಂಬುವರೊಬ್ಬರು ಇರುತ್ತಾರೆ. ಇವರು ಜಮೀನಿನ ಯಾವ ಭಾಗದಲ್ಲಿ ಬಾವಿಗಳನ್ನು ತೋಡಿದರೆ ನೀರು ತಪ್ಪದೆ ಯಥೇಚ್ಛವಾಗಿ ಸಿಕ್ಕುತ್ತದೆಯೋ ಅದನ್ನು ಹೇಳಲು ಶಕ್ತಿ ಉಳ್ಳವರಾಗಿರುತ್ತಾರಂತೆ. ಫೀಜು ಕೊಟ್ಟರೆ ಬೇಕಾದವರಿಗೆ ಇವರ ಸಹಾಯ ದೊರಿಯುತ್ತೆ.

ಮಿ| ಪಾರ್ಗ್ಸನ್‌ರವರು ಕಯ್ಯಲ್ಲಿ ಒಂದು ಕಡ್ಡಿಯನ್ನು ಹಿಡಿದುಕೊಂಡು ಜಮೀನಿನಲ್ಲಿ ನಿಂತಾಗ ಆ ಕಡ್ಡಿಯು ತಿರುಗುವ ರೀತಿಯಿಂದ ಜಲವಿರುವದು ಅಥವ ಇಲ್ಲದೆ ಇರುವವನ್ನು ಗೊತ್ತುಮಾಡುತ್ತಾರಂತೆ

~~~~~

ಬಂಕಬತ್ತವನ್ನು ಕುಟ್ಟುವದರಿಂದ ಕರಗುವದಿಯಾಗುವಷ್ಟು ಅಕ್ಕಿಯು ಇನ್ನಾವತರಹದ ಬತ್ತದಿಂದಲೂ ಆಗುವದಿಲ್ಲವೆಂದು ಮದರಾಸಾಧಿಪತ್ಯದ ವ್ಯವಸಾಯ ಇಲಾಖೆಯ ಮಿ ಎಚ್ ಸಿ ಸಾಂಪ್‌ಸನ್ ಎಂಬುವರು ತಿಳಿಸಿರುತ್ತಾರೆ ಈ ಬತ್ತದ ಮೊಳಕೆಗಳನ್ನು ಒಂದೊಂದು ಅಥವ ತಂಡ ತಂಡವಾಗಿ ಹೇಗೆ ನಾಟಿದರೂ ಒಳ್ಳೆ ಫಸಲಾಗುತ್ತೆ; ಮುಂಗಾರು ಮಳೆ ಪ್ರಾರಂಭವಾಗುತ್ತಲೆ ಬಿತ್ತಿದರೆ, ೪-೪|| ತಿಂಗಳುಗಳಲ್ಲಿ ಫಸಲು ಕಟಾವಿಗೆ ಸಿದ್ಧವಾಗುತ್ತೆ. ನೀರು ಹಾಯಿಸದೆ ಹೋಗುವದರಿಂದ ಬೆಳೆಯೇನೂ ಕೆಡುವದಿಲ್ಲಾ. ಜನವರಿಯಿಂದ ಮೇ ತಿಂಗಳು ವರಿಗಿನ ಮಧ್ಯಕಾಲದಲ್ಲಿ ಮಾತ್ರ ಬಂಕು ಬತ್ತವು ಸಾಗುವಳಿ ಮಾಡತಕ್ಕದ್ದಲ್ಲ

~~~~~

ಜೀವಸುಗಳ ಧಾರಣೆ, ಮಂಗಳೂರು (ರಖಂ)

~~~~~

ಕೂಳೂರು ಮಸ್ಕತಿ ಅಕ್ಕಿ	4-11—0
ಗುತ್ತು ಮಸ್ಕತಿ ,,	4—6—0
ಮಸ್ಕತಿ ಮಧ್ಯಮ ,,	4—5—0
ವಳ್ಳ ಸುಗ್ಗಿ ,,	4—4—0
ಸುಗ್ಗಿ ಮಧ್ಯಮ ,,	4—2—0
ಮಸ್ಕತಿ ಬೆಳ್ತಿಗೆ ,,	5—8—0
ರಂಗೂನ್ ಬೆಳ್ತಿಗೆ ಗೋಣಿ	7-14—0
ಹುರುಳಿ ಗೋಣಿ ೧ ಮುಡಿ ೨೦	6—2—0
ಉಪ್ಪು ಗೋಣಿ ೧೦	3-12—0
ಕೊಬ್ರಿ ಖಂಡಿ ೧೦	107—8—0
ಕೊಬ್ರಿ ಎಣ್ಣೆ ಮಣ	6-14—0
ಕಾಫಿ ಖಂಡಿ ೧೦	175—0—0
ಕಾಳು ಮೆಣಸು ಖಂಡಿ	1[illegible]0—[illegible]
[illegible]	[illegible]
[illegible]	[illegible]
[illegible]	[illegible]
~~~~~

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಎಣ್ಣೆ. ಇದರ ವಾಸನೆಯು ಶಾಂತಕರವಾಗಿಯೂ ಸುಸೋಕರವಾಗಿಯೂ ಇದೆ

ಬಾಟ್ಲಿ ಒಂದರ ೪ ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ ನಯವಾಗಿಯೂ, ಕಪ್ಪಾಗಿಯೂ, ಬೆಳೆಯುವವು ಇದರ ಪರಿಮಳವು ಹೆಚ್ಚು ದಿವಸ ವರೆಗೆ ಹೋಗುವದಿಲ್ಲ

ಬಾಟ್ಲಿ ಒಂದರ ೬ ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ರೆ ಹತ್ತುವದು

ಬಾಟ್ಲಿ ಒಂದರ ೬ ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ ಇದರಿಂದ ಮೆದುಳು ತಂಪಾಗುವದು ಇದು [illegible] ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನ ವರೆಗೆ ಹೋಗುವದಿಲ್ಲ

ಬಾಟ್ಲಿ ಒಂದರ ೬ ಆಣೆ

ಮಾಲತಿ ಅತ್ತರು.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು ಇದರ ಪರಿಮಳವು ಹೆಚ್ಚು ದಿವಸಗಳ ವರೆಗೆ ಹೋಗುವದಿಲ್ಲ ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿಯಬರುವದು ಎಲ್ಲಾ ಅತ್ತರುಗಳಿಗಿಂತ ಇದು ಉತ್ತಮ ಬಾಟ್ಲಿ ಒಂದರ ಕಿಮ್ಮತ್ತು 1—12—0

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕೆ

ಕೆ. ಗೋಪಾಲ್ ರಾವ್,

ನಂಬ್ರ 3 ಕಂಟ್ರಾಕ್ಟರ್ ಬಿಲ್ಡಿಂಗ್ [illegible] ಮುಂಬಯಿ

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವ ದರ

	೧ ಸಾರಿ	[illegible]	[illegible] ಸಾರಿ	[illegible]	[illegible]
ಇಡೀ ಪಾನು	ರೂ [illegible]	[illegible]	ರೂ [illegible]	[illegible]	ರೂ [illegible]
ಅರ್ಧ ಪಾನು	[illegible]	[illegible]	[illegible]	[illegible]	[illegible]
ಕಾಲು ಪಾನು	[illegible]	[illegible]	[illegible]	[illegible]	[illegible]
ಅರೆಕಾಲು ಪಾನು	[illegible]	[illegible]	[illegible]	[illegible]	[illegible]

ಸೂಚನೆ —ಎಲ್ಲಾ ಪ್ರಕಟಣೆಗಳಿಗೂ ಒಂದು [illegible] ಪ್ರಕಟಣೆಗಳ ಕಂಟ್ರಾಕು [illegible] ಬೇರೆ [illegible] ಸ್ವದೇಶಾಭಿಮಾನಿ ಮಂಗಳೂರು [illegible] ಎಲ್ಲಾ ಪ್ರಕಟಣೆಗಳ ಪೀಸನ್ನು ಮುಂದ [illegible]

ಸ್ವದೇಶಾಭಿಮಾನಿಯ ಚಂದಾ ನಿರ್ಣಯ

ಟಪ್ಪಾಲು ಹಾಸಲು ಸೇರಿ ೧ ವರುಷಕ್ಕೆ ರೂ ೨ ಆ [illegible] ಟಪ್ಪಾಲು ಹಾಸಲು ಇಲ್ಲದೆ ೧ ರೂ ೪ ಆ ಮೂರು ಮಾಸಿಕ ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ ಅಂತ ಪ್ರತಿ ಸೇರಿ ೧ ರೂ [illegible] ಟಪ್ಪಾಲು ಹಾಸಲು ಸಹಿತ ಅರೆ ವರುಷಕ್ಕೆ ೧ ರೂ ೨ ಆ

ಅನುಪಾನಪತ್ರ ಬಾಟ್ಲಿಯೊಂದಿಗಿರುವುದು

ಸಿದ್ಧಲಕ್ಷ್ಮೀ ವಿಲಾಸ.

ಕ್ರಯ ಬಾಟ್ಲಿಗೆ 12 ಆಣೆ

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು (ಆಸನದಲ್ಲಿ) ಗುದದ್ವಾರದ ಹತ್ತರ ಬೀಳುವಂಥಾ ತೂತುಗಳೂ, ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವ್ರಣಾದಿ ಬಾವುಗಳೂ, ಹಿಜ್ಜೆ ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು ರಕ್ತಶುದ್ಧಿಗೆ ಇದು ದಿವ್ಯ ಔಷಧವಾಗಿರುವದು

ಈ ಔಷಧಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು. ಮುಲ್ಕಿ ಸುಬ್ರಾಯ ಮುಕುಂದ ಪ್ರಭು ಮತ್ತು ಕಂಪೆನಿ, ಮಂಗಳೂರು. ಕುಂದಾಪುರ ರಾಮ [illegible] ಶೇರೆಗಾರ [illegible] ದೊರಕುವದು.

BERNA WATCH COMPANY.

ಬರ್ನಾ ವಾಚು ಕಂಪೆನಿ.

ಕಿರಿ ಗಡಿಯಾರುಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿ [illegible] ಗ್ಯಾರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದು ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾಗಿದ್ದಲ್ಲಿ [illegible] ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿ ಕೊಡುವವು

ನಮ್ಮ 'ಮೆಕ್ಸಿಮ' ವಾಚನ್ನು ಬರವಸೆಯಿಂದ ಕೊಂಡುಕೊಳ್ಳಿರಿ
ನಿಕಲ್ ಕೇಸಿನಲ್ಲಿ ರೂ ೧೦-೦-೦
ಬೆಳ್ಳಿ ಕೇಸಿನಲ್ಲಿ ರೂ ೧೫-೦-೦
ನಮ್ಮ ನ್ಯೂ ಡಿ ಪಿ
ನಿಕಲ್ ಕೇಸಿನಲ್ಲಿ ರೂ ೧೩-೦-೦
ಬೆಳ್ಳಿ ಕೇಸಿನಲ್ಲಿ ರೂ ೧೮-೦-೦
ಕಿಟಿಗಾರನ್ನು ಒಚಿತವಾಗಿ ಕಳುಹಿಸಿ ಕೊಡುವೆವು



ನಮ್ಮ 'ಚಾರ್ಮರ್'
ನಿಕಲ್ ಕೇಸಿನಲ್ಲಿ ರೂ ೧೭-೦-೦.
ಬೆಳ್ಳಿ ಕೇಸಿನಲ್ಲಿ ರೂ ೨೧-೦-೦.
ನಮ್ಮ 'ವರ್ಡಲಿ.'
ನಿಕಲ್ ಕೇಸಿನಲ್ಲಿ ರೂ ೧೮-೦-೦.
ಸಿಲ್ವರ್ ಕೇಸಿನಲ್ಲಿ ರೂ ೨೩-೦-೦.
ನಮ್ಮ 'ಬೆಸ್ಟ್'
ನಿಕಲ್ ಕೇಸಿನಲ್ಲಿ ರೂ. ೨೧-೦-೦.
ಬೆಳ್ಳಿ ಕೇಸಿನಲ್ಲಿ ರೂ ೨೭-೦-೦.

ಎಲ್ಲಾ ಗಡಿಯಾರುಗಳು ಜಂಟ್ಸ್ ಸ್ಯಾಜಿನಲ್ಲಿರುವವು ವಾಚುಗಳನ್ನು ೪ ಆಣೆ ಕೆಚ್ಚಿಗೆ ಖರ್ಚಿನಲ್ಲಿ ವಿ ಪಿ ಮಾಡಿ ಕಳುಹಿಸುವೆವು ನಂಬ್ರ 59 ಎಸ್ಪ್ಲೆನೇಡ್ ರೋಡ್ ಮುಂಬಯಿ ಆಫೀಸಿನಲ್ಲಿಯೂ ಮತ್ತು ಹಿಂದೂಸ್ಥಾನದಲ್ಲಿರುವ ಎಲ್ಲಾ ವಾಚು ಮಾರಾಟದವರಲ್ಲಿಯೂ ಕ್ರಯಕ್ಕೆ ದೊರಕುವವು.

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಳಾವಂದ ತೈಲವು.** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬೆಳ್ಳಿಯ ಪದಕಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ [illegible] ರೂ ೧೦ ಆಣೆ,

೨ ಪ್ರಮೇಹರಿಪು ಬಿಂದು [illegible] ನ್ನೂ [illegible] ವನ್ನೂ ಕೂಡಲೇ [illegible] ಚಿತವಾಗಿ [illegible] ಕೊಡುವದು. ಬಾಟ್ಲಿಗೆ [illegible] ರೂ

೩. **ಕಾಮೇಶ್ವರ ಮಾತ್ರೆ** ಧಾತು ವರ್ಧಕವೂ ಉತ್ತೇಜಕವೂ [illegible] ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ [illegible] ರೂ

೪. ಪಂಚಜೀರಕ ಪಾಕ [illegible] ಗಳನ್ನೂ ಬಂಜೆತನವನ್ನೂ ತಪ್ಪದೆ [illegible] ರಾತಲಿಗೆ [illegible] ರೂ

೫ ಸೂರಣಾವ ಲೇಹ [illegible] ಮೇಲೆ ಅತ್ಯುತ್ತಮವು [illegible] ರೂ

೬ ಪ್ಲೀಹೋದರಾರಿ ಚೂರ್ಣ [illegible] ದಾರುಣವಾದ [illegible] ವನ್ನೂ ತತ್ಕಾ[illegible] ವಿಕಾರಗಳನ್ನೂ [illegible] ಪಡಿಸುವದು. [illegible] ೩ ರೂ [illegible]

೭ ಜಗನ್ಮೋಹನ ದಂತಮಂಜನ [illegible] ಬಾಧೆಗಳನ್ನು ಪರಿಹರಿ[illegible] ಅನೇಕ ವನೌಷಧ[illegible] ೧೦ ಆಣೆ

೮ ಸರಳಭೇದಿ ಮಾತ್ರೆ [illegible] ವಿರೇಚಕವು ತೊಲೆಗೆ [illegible] ರೂ

೯ **ಮಹಾಜ್ವರಾಂಕುಶ ಮಾತ್ರೆ.** ಚಳಿಜ್ವರ, ಮರಿಸೆಯ ಜ್ವರ **ಮುಂತಾಗಿ** ಎಲ್ಲಾ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦ ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ **ಮೇಲೆ** ರಾಮಬಾಣವು. ರಾತಲಿಗೆ ೩ ರೂ

೧೧ ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ [illegible] ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿ[illegible]ಗಳನ್ನು ಕೊಡುವದು. ರಾತಲಿಗೆ ೨ ರೂ.

೧೨ ವಾತಮುರಾರಿ ಬಾಮ್. ತಲೆನೋವು, ಎದೆನೋವು, **ಸೊಂಟ** ನೋವು, ಉಳುಕು, ಬೀಗು, ವಾತ[illegible]ಗಳನ್ನೂ ಕೂಡಲೆ ಗೆಲ್ಲುವದು. **ಬಾಟ್ಲಿಗೆ** ೬ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೩ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು [illegible] ಲೇಪನದೊಳಗಾಗಿ ಗೆಲ್ಲುವದು. ಉರಿಯು [illegible] ಸುವಾಸಿಕವಾಗಿದೆ. [illegible] ೪ ಆಣೆ. ೩ ಕರಡಿಗೆಗೆ ೧೧ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲಾ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ [illegible] ಮಾಡುವದು. ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, [illegible] ಸ್ಮರಣಶಕ್ತಿಯನ್ನು ಬೆಳೆಯಿಸುವದು, [illegible] ಕಂಠಸ್ವರವನ್ನು ಮಧುರವಾಗಿರಿಸುವದು. [illegible] ಅತ್ಯುತ್ತಮವು. ೧೦ ತೊಲೆಗೆ ೨ ರೂ ೮ ಆಣೆ

[illegible] ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯ [illegible] ದೊರೆಯುವವು. ನಮ್ಮ ದೊಡ್ಡ ಕನ್ನಡ [illegible] ಕಳುಹಿಸುವವರ ರೋಗ [illegible] ನಮ್ಮೊಡನೆ ಕನ್ನಡದಿಂದ [illegible] ನಡೆಯಿಸುವೆವು

ನಮ್ಮ ವಿಳಾಸ :—

B M. Nathu & Co,
Ayurvedic Chemists,
Vepery Post, MADRAS.

[illegible]

ಮನೋಹರ ಅತ್ತರು.

[illegible]

ಕೆ. [illegible] ರಾವ್,

[illegible]

Royal Indian Balm Depot.

ರೊಯಲ್ ಇಂಡಿಯನ ಬಾಮ್.

[illegible]

ತಲೆನೋವು [illegible]

ಎದೆನೋವು [illegible]

ಉಳುಕು, [illegible]

ಈ ನಮ್ಮ [illegible] ಖಾತ್ರಿಯಿಂದ ನಿಲ್ಲುವದು [illegible] ಬಾಟ್ಲಿಗಳಿಗೆ 1—6—0 6 ಬಾಟ್ಲಿಗಳಿಗೆ 2-1-0 [illegible] ಮಾರಾಟಕ್ಕೆ ದೊರಕುವದು

ಏಜಂಟರು, ಮನೋಹರ ಕಂಪನಿ, ಗಿರಗಾಂ ಮುಂಬಯಿ.

Sole agent for M Taluq

ಶರ್ಮ ಎಂಡ್ ಸನ್ಸ್ ಮಂಗಳೂರು.

ಬೇಕಲ ವೆಂಕಟ ರಾವ್, ಉಡುಪಿ.

ಕೆ. ಎಸ್. ಶೆಣೈ ಕಂಪೆನಿ, ಕುಂಬಳೆ.

ರಾ[illegible]ರಾವ್ ನಾನಾಬಾಯಿ ಕಾಳೆ ಇವರ,



ಸುರಂಗಿ ಅತ್ತರು

ಇದು [illegible] ತಯಾರಿಸಲ್ಪಟ್ಟ ಅತಿ ಸುವಾಸಿಕ ಮತ್ತು ಮನೋಹರವಾದ ಅತ್ತರು. ಇಂಗ್ಲಿಷು ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು. ಇದರ ಸುವಾಸಿಕವಾದ ಮತ್ತು ಮನೋಹರವಾದ ಪರಿಮಳವು ಹೆಚ್ಚು ಸಮಯದ ವರೇಗೆ ಹೋಗುವದಿಲ್ಲ. ಈ ನಮ್ಮ ಅತ್ತರನ್ನು ಪರೀಕ್ಷಿಸದ ಜನರು ಹಾಗೆ ಒಂದು ಸಾರಿ ಪರೀಕ್ಷಿಸಿ ನೋಡಬಹುದು. ಬಾಟ್ಲಿ ಒಂದರ ಕಿಮ್ಮತ್ತು ೧—೪—೦.

ದಿಲ್ ಖುಷ್. ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಈ ಅತ್ತರನ್ನು [illegible] ಇದಕ್ಕೆ ಮನೋಹರವಾದ ಪರಿಮಳವು ಬರುತ್ತದೆ. [illegible] ಕಿಮ್ಮತ್ತು ೧—೦—೦

ಜುಯಿ. ಈ ಅತ್ತರಿನ ವಿಷಯವಾಗಿ ಹೆಂಗಸರೂ ಗಂಡಸರೂ ಬಹಳವಾಗಿ ಕೊಂಡಾಡುತ್ತಾರೆ. ಇದರ ಮನೋಹರವಾದ ಸುವಾಸನೆಯು ಹೆಚ್ಚು ದಿವಸಗಳ ವರೇಗೆ ಇರುತ್ತದೆ. ಬಾಟ್ಲಿ ಒಂದರ ಕಿಮ್ಮತ್ತು ೦—೧೪—೦

ನಾವು ತಯಾರಿಸುವ ಅತ್ತರುಗಳಲ್ಲಿ ಸ್ಪಿರಿಟ್ ವಗೈರೆ ಏನೂ ಇಲ್ಲದೆ ಕಾಚಾ ಬಟ್ಟಿ ಇಟ್ಟು ತೆಗೆದದ್ದಾಗಿರುತ್ತದೆ.

ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು,

ಎಲ್ಲಾ ಮಾಹಿತಿಗೂ, ಅತ್ತರುಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರದಲ್ಲಿ ಸಿಕ್ಕುವದು

ಸೋಲ್ ಏಜಂಟ್ ದಕ್ಷಿಣ ಕನ್ನಡಕ್ಕೆ

ಕೆ. ಗೋಪಾಲ್ ರಾವ್,

[illegible] 3 [illegible]

ಅಬಲಾ ಸಂಜೀವಿನೀ ಗುಳಿಗೆಗಳು.

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮ ಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ. ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ, ಅಥವಾ ಅಕ್ರಮವಾಗಿ ಬಂದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ. ಗರ್ಭಕೋಶದ ರೋಗರುಜಿಗಳಲ್ಲಿ ಈ ಔಷದವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ ದೇಹದಲ್ಲಿ ಯಾವದೊಂದು ಅಕ್ರಮ ಗುರ್ತು ಕಂಡುಬಂದಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು ಉಪಯೋಗಿಸಿದವರು ಅವುಗಳ ಬಗ್ಗೆ ಶಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ ವಿಶೇಷ ಮಾಹಿತಿಯು ಕೇಟಲಾಗನ್ನು ಉಚಿತವಾಗಿ ಕಳುಹಿಸುವೆವು. ಔಷಧಿ ಕ್ರಯ ೧ ರೂ ವಿ. ಪಿ. ಅಂಚೆ ಹಾಸಲು ೪ ಅಣೆ

ಮಿಡ್ ವ್ಯಾಫರಾದ ಕಮಲಾಬಾಯಿ, ಜ ಎಮ್.

ಕಲ್ಬಾದೇವಿ ರೋಡ್ ಮುಂಬಯಿ

THE HINDU SOAP MANUFACTURING CO,
ಹಿಂದೂ ಸೋಪ್ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಸುಲಭ ಚರಬಿ ವಿರಹಿತವಾದದ್ದು. ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು

ದಿ ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-8 0

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರ 2—8—0

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ ವಿ ಪಿ ಖರ್ಚು ಪ್ರತ್ಯೇಕ

ಶ್ರೀ ಬಾಬುರಾಯರ
ಆಯುರ್ವೇದಿಕ್ ಔಷಧಾಲಯ,
ನೆಟ್ಟಾರ್ ಮಾರ್ಕೆಟ್ ರಸ್ತೆ ಮಂಗಳೂರು, ದ ಕ

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಪುಉತ್ತರ ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಖಿಮಿಶನ ಮೂಲಕ ರವಾನಿಸುತ್ತೇವೆ ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ

ವಿಳಾಸ — ರಂಗಪ್ಪಾ ರಾಮಕೃಷ್ಣ ಕವಿ,

ವ ನೋಹ ಬಿಲ್ಡಿಂಗ್ ಲವ ಚಾಲ ಮುಂಬಯಿ

ಕವಿ ಎಂಡ್ ಸನ್ಸ್ ಜನರಲ್ ಮರ್ಚೆಂಟ್ಸ್,

ಮಂಗಳೂರು, ದ ಕ

ನಮ್ಮಲ್ಲಿ ಎಲ್ಲಾ ತರದ ಚೀಟು ಎಷ್ಟಿ ವ ಕೋಟಿಂಗ್, ಸ್ಟೆಶನರಿ, ಕಟ್ಲೆರಿ, ಗ್ಲಾಸವೆರ, ಒಯಲಮೆನ ಸ್ಟೋರ್ಸ್ ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳಗಾಲಕ್ಕೆ ಉಪಯೋಗವಾಗುವ ಫ್ಲೆನೆಲು, ಎಲ್ಲಾ ಜಾತಿಯ ಕೊಡೆಗಳು ರಖಂ ಅಗಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

ಡಾಕ್ಟರ್ ವಾಮನ ಗೋಪಾಲರವರ
ಐಯೊಡಾಯ್ಡಿನಿಂದ ಕೂಡಿರುವ

ಸರ್ಸಪರಿಲ್ಲಾ.

ರಕ್ತಶುದ್ಧಿ ಬಗ್ಗೆ ಅತ್ಯುತ್ಕೃಷ್ಟವಾದ ಔಷಧಿಯು ಸಾವಿರಾರು ಜನರು ಇದನ್ನು ಸೇವಿಸಿದ ಅನುಭವದಿಂದ ಅತ್ಯಂತ ಗುಣಕಾರಿಯೆಂದು ಕಂಡುಕೊಂಡಿರುವರು ಬಹುಕಾಲದ ವಾತ, ಚರ್ಮರೋಗಗಳು, ಗಂಟುಮಾಲೆ, ಪಕ್ಷವಾತ, ಅಶುದ್ಧರಕ್ತದಿಂದ ಉಂಟಾಗಬಹುದಾದ ಇತರ ರೋಗಗಳು, ಬಲಹೀನತೆ ಮುಂತಾದ ಎಲ್ಲಾ ರೋಗಗಳಿಗೆ ಖಾತ್ರಿಯಾದ ಔಷಧಿಯೆಂದು ಕಳೆದ ಐವತ್ತು ವರುಷಗಳಿಂದ ಎಲ್ಲಾ ರಕ್ತಶುದ್ಧಿಯ ಔಷಧಿಗಳಲ್ಲಿ ಶ್ರೇಷ್ಠವಾದುದೆಂತ ಭೂಲೋಕದಲ್ಲೆಲ್ಲಾ ಕೀರ್ತಿಗೊಂಡಿರುವುದು. ಧಾತುಪುಷ್ಟಿಗೆ ಉತ್ತಮವಾಗಿರುವುದರಿಂದ ಇದರ ಪ್ರತಿನಿತ್ಯದ ಸೇವನೆಯು ಆಲೋಚನಾಶಕ್ತಿಯನ್ನು ಬಲಗೊಳಿಸಿ ಶರೀರದಲ್ಲಿ ಚೈತನ್ಯವನ್ನುಂಟುಮಾಡುವುದು.

ಕ್ರಯ ಬಾಟ್ಲಿ ಒಂದಕ್ಕೆ ರೂ. ೧ ಆ. ೪, ವಿಸಹಾ ಟಪ್ಪಾಲು ದಸ್ತೂರಿ ೫ ಅಣೆ.

[illegible] ಮುಲಾಮು4— ಅಣೆ. ಟೂತ್ ಪೌಡರ್ ಅಣೆ 3.

[illegible]

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯನ್ಯಾಯದಿಂದ ಮಾರುವ ಅಗರ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ, ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಅಣೆ ಮಕ್ಕಳಿಗೆ ಬರುವ ಬಾಲಗ್ರಹ (ಫಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಅಣೆ

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ — ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೆಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಶೇಷ ಸೂಚನೆ — ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಳ್ಳಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜೆಂಟ್ ಮಂಗಳೂರು, ದ ಕನ್ನಡ

ಬಹುಮಾನ! ಬಹುಮಾನ! ಬಹುಮಾನ!

THE KALA-NIDHI MANGALORE

(ಪುಟ್ಟ 1 ಕ್ಕೆ 3 ಸ್ಟ)

ಬರುವ ದಶಂಬರ ತಿಂಗಳ ವರೆಗೆ ಮಾತ್ರ ೪ ರೂಪಾಯಿಗಳ ಶಾಯಿ ಪೊಟ್ಟಣಗಳನ್ನು ತೆಗದುಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಕೀಲೆಸ್ ಘಡಿಯಾರವು

[illegible]

ಬಹುಮಾನಗಳ ವಿವರ [illegible]

[illegible]

ವಿಳಾಸ — ಕಲಾನಿಧಿ ಮಂಗಳೂರು

ಅಥವಾ ದಿ ಊಲನ್ ಮಾರ್ಟ್ ನಂಬ್ರ ೧ ಮಂಗಳೂರು (ದ ಕ.)

THE ROYAL SNUFF TRADING Cos,

ಮದ್ರಾಸು ನಶ್ಯದ ಪುಡಿ



ಇದು ಸಾಧಾರಣವಾಗಿ ಎಲ್ಲರೂ ಉಪಯೋಗಿಸುವ ಹುಡಿನಶ್ಯವಾಗಿದ್ದರೂ ಇದರ ಖಾರವೂ ಇದರ ಗುಣವೂ ಒಂದೇಸರ್ತಿ ಉಪಯೋಗಿಸಿ ನೋಡಿದರೆ ಎಂತವರಿಗೂ ಆಶ್ಚರ್ಯವಾಗಬಹುದು ಅದ್ದರಿಂದಲೇ ಜಮೀನ್‌ದಾರರೂ, ವಕೀಲರೂ, ಉದ್ಯೋಗಸ್ತರೂ ವ್ಯಾಪಾರಸ್ತರು ಮತ್ತು ಎಲ್ಲಾ ರೀತಿಯ ಮನುಷ್ಯರು ನಮ್ಮ ರಾಯಲ್ ನಶ್ಯವನ್ನೆ ಉಪಯೋಗಿಸುತ್ತಾರೆ. ಅನ್ಯ ದೇಶದವರಿಗೂ ಈ ನಶ್ಯ ಬಹಳ ಪ್ರಯೋಜನವಾಗಿರುವದೆಂದು ಹೇಳುವದಕ್ಕೆ ಸಂದೇಹವಿಲ್ಲ. ಇದರ ಖಾರವು 3 ತಿಂಗಳ ವರಿಗೂ ಕೆಟ್ಟುಹೋಗದು. ಕ್ರಯ ಡಬ್ಬಿ 1ಕ್ಕೆ 2 ಅಣೆ ಟಪ್ಪಾಲು ಖರ್ಚು 1ರಿಂದ 6 ಡಬ್ಬಿ ವರೇಗೆ 5 ಅಣೆ ಅಲ್ಲಾದಾ.

ವಿಳಾಸ:— ದಿ. ಊಲನ್ ಮಾರ್ಟ್,
[illegible]ಬಜಾರು,
ಮಂಗಳೂರು.

SMALL-POX BALM

ಶಿಡುಬು ರೋಗಕ್ಕೆ ಮುಲಾಮು.

ಅತ್ಯಲ್ಪ ಕಾಲದಲ್ಲಿಯೇ ಹಲವರಿಂದ ಉಪಯೋಗಿಸಲ್ಪಟ್ಟು ವಿಶೇಷ ಗುಣಕಾರಿ ಎಂದು ಹೆಸರು ಪಡೆದಿರುವದು.

ಶಿಡುಬು ರೋಗದ ಚಿಕಿತ್ಸೆ ನಡೆಸುವ ವಿವಿಧ ವೈದ್ಯರಿಂದ ಖಾತ್ರಿಯಾದ ಔಷಧಿ ಎಂದು ಮನ್ನಿಸಲ್ಪಟ್ಟಿರುವುದು.

ಮೈಲಿನಲ್ಲಿ ಕೀವು ತುಂಬುತ್ತಿರುವಾಗ ಬರುವ ಜ್ವರವನ್ನು ಶಮನಿಸುವದು.

ಶಿಡುಬುರೋಗದ ಅಂಟುವ ಸ್ವಭಾವವು ಎಲ್ಲರಿಗೂ ತಿಳಿದಿರುವ ಪ್ರತ್ಯಕ್ಷಪ್ರಮಾಣ. ಶಿಡುಬು ಶರೀರದಲ್ಲೆಲ್ಲಾ ಕಾಣಿಸಿಕೊಂಡ ನಂತರ ಇದರ ಸೋಂಕು ಇನ್ನಷ್ಟು ಪ್ರಬಲವಾಗುವುದು. ರೋಗಿಗೆ ಒಂದು ಸ್ನಾನದ ನಂತರ ಕೀವು ತುಂಬಿರುವ ಮೈಲೆಯು ಒಣಗುತ್ತ ಬಂದು ಪೊರೆಪೊರೆಯುಳ್ಳದ್ದಾಗುವುದು. ಈ ಪೊರೆಗಳು ರೋಗಿಯು ಅತ್ತಿತ್ತ ಚಲಿಸುತ್ತಿರುವಾಗ್ಯೆ ಅಲ್ಲಲ್ಲಿ ಬಿದ್ದು ಗಾಳಿಯಿಂದ ಸರ್ವ ಕಡೆಗಳಲ್ಲಿಯೂ ಪ್ರಸರಿಸಲ್ಪಟ್ಟು ಪೊರೆಗಳಲ್ಲಿರುವ ರೋಗ ಅಣುಗಳಿಂದ ರೋಗದ ಸೋಂಕು ಸರ್ವತ್ರ ಹಬ್ಬುವುದು.

ಮೈಲೆಯ ದುರ್ವಾಸನೆಯನ್ನು ಹೋಗಗೊಳಿಸಿ, ಬಿಡಿಯ ಕಲೆಗಳು ವಿಕಾರ ಹೊಂದದಂತೆ ಮಾಡಿ, ಉಜ್ಜಿಯಿಂದ ಶರೀರದಲ್ಲಿ ಉಂಟಾಗುವ ತುರಿಸುವಿಕೆಯನ್ನು ನಿಲ್ಲಿಸಿ ರೋಗಜನಿತವಾದ ಹುಣ್ಣುಗಳು ಯಾವರೀತಿಯಲ್ಲಿಯಾದರೂ ವಿಶೇಷ ಪರಿಣಾಮ ಹೊಂದದಂತೆ ಈ ಮುಲಾಮಿನ ಲೇಪನದಿಂದ ಸಾಧ್ಯವಾಗುವುದು. ರೋಗದ ಸೋಂಕನ್ನು ಸಹಾ ಇದರ ಲೇಪನವು ತಡೆಕಟ್ಟುವುದರಿಂದ ರೋಗ ತಗಲಿದ ಸರ್ವರೂ ಇದನ್ನು ಪರೀಕ್ಷಾರ್ಥ ಉಪಯೋಗಿಸಬಹುದು.

ಹೊಮಿಯೋಪತಿಕ್, ಟಿಸ್ಯುರೆಮಿಡಿಸ್, ಆಯುರ್ವೇದಿಕ್ ಅಥವಾ ಎಲೋಪತಿಕ್ ಈ ಎಲ್ಲಾ ವಿಧಾನಗಳಿಂದ ಚಿಕಿತ್ಸೆ ಹೊಂದುವ ರೋಗಿಗಳಿಗೆ ಈ ಮುಲಾಮಿನ ಲೇಪನವು ಏಕ ರೀತಿಯಲ್ಲಿ ಗುಣಕಾರಿಯಾಗಿರುವುದರಿಂದ ಎಂಥಾ ಚಿಕಿತ್ಸೆಯಲ್ಲಿಯಾದರೂ ಇದರ ಲೇಪನವು ಆಕ್ಷೇಪಕರವಲ್ಲ.

ಮುಲಾಮನ್ನು ರೋಗತಗಲಿದ ೭ನೇ ದಿನದಿಂದ ಹಚ್ಚಲು ಪ್ರಾರಂಭಿಸಬಹುದು. ಹಚ್ಚುವ ಕ್ರಮ ಮುಂತಾದವುಗಳು ಕರಡಿಗೆಯ ಲೇಬಲಿನಲ್ಲಿರುವವು.

ಸರ್ವರಿಗೂ ಇದನ್ನು ಕ್ರಯಕ್ಕೆ ಪಡೆಕೊಳ್ಳುವರೆ ಸಾಧ್ಯವಾಗುವಂತೆ ಮುಲಾಮಿಗೆ ಹೆಚ್ಚು ಕ್ರಯದ ಔಷಧಿಗಳು ಬಿದ್ದರೂ ಕ್ರಯವನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆಯಾಗಿಟ್ಟಿರುವೆವು.

ಕ್ರಯ ಡಬ್ಬಿ ಒಂದಕ್ಕೆ ಸ್ಮಾಲ್ ಸೈಜು ೫ ಆಣೆ. ದೊಡ್ಡದು ೮ ಆಣೆ.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ (ಮಂಗಳೂರು ವ್ಯಾಪಾರ ಸಂಘ.)

ರಥಬೀದಿ, ಮಂಗಳೂರು ಇವರಲ್ಲಿ ದೊರೆಯುವುದು.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್ ಕವರ್	ಹಾಫ್ ಬೈಂಡ್	ಫುಲ್ ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ)	(ಪೂರ್ಣ ಚರ್ಮ)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು

3 × 8¼ 3′ × 5¼, 8¼′ × 6″ 6′ × 4 ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕರ ವ ಆಫೀಸರರುಗಳಿಗೆ **ಬೇಕಾದ** ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೇಗೆ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸೈಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ **ಮೊದಲಾದವುಗಳಿಂದ** ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ **ಮೆನೇಜರ್,**

ಶಾರದಾ ಮುದ್ರಾಲಯ, ಮಂಗಳೂರು.

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸೈಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು.

Printed by V. S. Kamath, at the [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾ ನಿರ್ಣಯ — ವರ್ಷಕ್ಕೆ ರೂ 1 4 0 ಟಪಾಲು ಹಾಸಲು ಸೇರಿ ರೂ 2 1 0

ಪುಸ್ತಕ 4 | ವರ್ಷ ೩೮, ತಾರೀಕು 29ನೇ ಶುಕ್ರವಾರ ಜುಲೈ 1910 | ಸಂಚಿಕೆ 30

Amrutanjan Depot Fort Bombay.

ಅಮೃತಾಂಜನ

Trade Mark Registered

ಹಿಂದೂಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ದೇಶೀಯ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಘೂರ್ಣ, ಅರ್ಧಾಂಗವಾಯು, ಸೊಂಟನೋವು, ಗಂಟಲುನೋವು, ಜಾಡ್ಯ, ಉಳುಕು, ಘಾಯ, ಶೀತ, ಈ ಎಲ್ಲಾ ತರದ ರೋಗಗಳು ಪೂರ್ಣವಾಗಿ ಗುಣವಾಗುವವು. ಇದು ಸಣ್ಣ ಮಗುವಿನ ಮೇಲೆ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪುರದ ಮಹಾ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಬಂಗಾರದ ಬಹುಮಾನದ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಮಾಟಾಕೆ ನಗರದ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು. ಬಾಟ್ಲಿ ಒಂದರ ಕಿಮ್ಮತ್ತು ೯ ಆಣೆ

ಗಜಕರ್ಣದ ಮುಲಾಮು.

ಕಿಮ್ಮತ್ತು ಆರು ಆಣೆ ಈ ನಮೂನೆ ಡಬ್ಬಿ

ಕಿಮ್ಮತ್ತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಚ್ಚಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ೩ ಅಥವಾ ೪ ಸಾರಿ ಹಚ್ಚಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿ ಒಂದರ ಕಿಮ್ಮತ್ತು 6 ಆಣೆ ೧೨ ಡಬ್ಬಿ ರೂ 4

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ಒಂದರ ಕಿಮ್ಮತ್ತು ೨ ಆಣೆ

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮೆಯಿಸ ಕೊಕೊ ಲೆಸೆತಿನ್ ಎಂಬ ಧಾತು ಪುಷ್ಟಿ ಔಷದಗಳಿವೆ. ೨೦ ಗುಟಿಕೆಗಳ ಡಬ್ಬಿ ಒಂದರ ಕಿಮ್ಮತ್ತು ರೂ 1

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ಹಚ್ಚಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳೆಯುವವು. ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ. ಬಾಟ್ಲಿ ಒಂದರ ಕಿಮ್ಮತ್ತು ರೂ 1

ಸುಂದರಿ ತೈಲ.

ಇದನ್ನು ಮೋರೆಗೆ ಹಚ್ಚಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು. ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ

ಖಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತ್ತು 3 ಆಣೆ

ಜುಲಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ

ವಿಳಾಸ:— ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:— "ಅಮೃತಾಂಜನ", ಮುಂಬಯಿ.

ಕರ್ನಾಟಕ ಪ್ರಕಾಶಿಕಾ ಪುಸ್ತಕಶಾಲೆ,

ಬೆಂಗಳೂರು.

ಅಪೂರ್ವ ಪುಸ್ತಕಗಳು.

1.	ವೃದ್ಧಚಾಣಿಕ್ಯಾ ಸುಭಾಷಿತ (ಕನ್ನಡ ಟೀಕು)	0—2—0
2.	ನಕ್ಷತ್ರ ಚೂಡಾಮಣಿ	0—4—0
3.	ಬಾಲಗ್ರಹ ಚಿಕಿತ್ಸೆ (ಮಕ್ಕಳ ವೈದ್ಯ)	0—2—0
4.	63 ಶಿವಾಶರಣರ ಕಧೆ	1—8—0
5.	ಜ್ಞಾನಸಿಂಧು	0 12—0
6.	ರಾಜಶೇಕರ ವಿಲಾಸ	0—8—0
7.	ವೀರಶೈವ ಮತಸಾರ	0—6—0
8.	ಅಖಂಡೇಶ್ವರ ವಚನಾ	0—6—0
9.	ಕೈವಲ್ಯ ಕಲ್ಪವಲ್ಲರಿ	0 10—0
10.	ಅನುಭವಸಾರ ..	0—8—0
11.	ವೈದ್ಯಸಾರ ಸಂಗ್ರಹ ಅಪೂರ್ವವಾದ ಅತ್ಯುಪಯೋಗವಾದ ಗ್ರಂಥ (ಕ ಟೀ)	3—0—0
12.	ಶ್ರೀವಿಷ್ಣುಸಹಸ್ರನಾಮ ಸ್ತೋತ್ರ (ತ್ರಿಮತ ಟೀಕಾ ತಾತ್ಪರ್ಯ)	3—0—0
13.	ಶಿವಾನಂದಲಹರಿ (ಕನ್ನಡ ಟೀಕು ತಾತ್ಪರ್ಯ ಸಹಿತ) ..	0—6—0
14.	ಉದಕಶಾಂತಿ ಮಂತ್ರ	0—2—0
15.	ಕಾಲಾಮೃತ (ಕ ಟೀ) ಉತ್ತಮ ..	0-12—0
	,, ,, ಸಾದಾ	0—8—0

ಇವುಗಳಲ್ಲದೆ ಇನ್ನೂ ನೂರಾರು ಇತರ ಪುಸ್ತಕಗಳು ದೊರೆಯುವವು

ವಿಳಾಸ — ಮ್ಯಾನೇಜರ್,

ಕನ್ನಡ ಪ್ರಕಾಶಿಕಾ ಪುಸ್ತಕಶಾಲೆ, ಬೆಂಗಳೂರು

ಮುಹುತ್ತು ೧೯೧೦ನೇ ವರುಷದ ಕ್ಯಾಲೆಂಡರು ಮುಹುತ್ತು

ಕಾನಪೂರ್ ಉಲನ್ ಚೌಕಗಳು.

ಸೈಜು 40×40, ನೀಲಿ, ಗುಲಾಬಿ ಬೂದ, ಹಸರು, ಕರೀದು, ಕೇಸರಿ, ಬಿಳಪು, ಚಾಸ್ ಮತ್ತು ಇತರ ರಂಗುಗಳಲ್ಲಿಯೂ 1ಕ್ಕೆ ರೂ 1—4—0

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಮ್ಮತು 0—4—0.

ಶಹಲುಗಳು.

ಉದ್ದ 6 ಮೊಳ ಅಗಲ 3 ಮೊಳ ಎಲ್ಲಾ ರಂಗುಗಳಲ್ಲಿಯೂ 1ನೇ ನಂಬರು 1ಕ್ಕೆ ರೂ. 4 4-0. 2ನೇ ನಂಬರು ರೂ. 3—12—0. 3ನೇ ನಂಬರು 3—8—0.

ರೇಷ್ಮೆ ಅಂಚು ಕಟ್ಟಿಸುವದಕ್ಕೆ 1ಕ್ಕೆ ಕಮ್ಮತು 0—4—0.

ಸಾದಾ ಒಳ್ಳೇ ಕಲಾವತ್ತು "ಜರಿ"

ಕಾಲು ಇಂಚು, ಅರ್ಧ ಇಂಚು, ಮುಕ್ಕಾಲು ಇಂಚು.

1ನೇ ನಂಬರು 0—10—0, 1—1—0,

2ನೇ ನಂಬರು 0—14—0, 1—8 0, 2—4—0.

ರೇಷ್ಮೆ ಸಮುಕಟ್ಟುಗಳು.

ಕೆಂಪು, ಪೂದಾ, ನೀಲಿ, ರೋಜಾ, ಹಸರು, ಮೊದಲಾದ ರಂಗುಗಳಲ್ಲಿ ಸೈಜು ಉದ್ದ 5–6 ಮೊಳ, ಅಗಲ 1 ಇಂಚು, 1ಕ್ಕೆ ರೂ. 1 4–0. 1-8 0, 2-4 0, 2–8-0, 3 0-0

ಚಿತ್ರಾಪನ 3 0-0, 4 0 0, 5-0-0, 6 0 0.

ಡಿಪ್ಪೊ ಗಜ 1ಕ್ಕೆ 1-8-0.

ರೇಷ್ಮೆ ಅಂಚುಗಳು ಗಜ 1ಕ್ಕೆ ಆಣೆ 2, 3, 4, 5

ಮಕ್‌ಮಲ್ ಅಂಚು ಗಜ 1ಕ್ಕೆ ಆಣೆ 4, 5, 6

ದೇವರುಗಳಿಗೆ ಉಪಯೋಗಿಸುವ ರೇಷ್ಮೆ ಗುಲಾಬಿ, ಕೆಂಪು, ಬೂದ, ಹಸರು ರಂಗುಗಳಲ್ಲಿ ಗಜ 1ಕ್ಕೆ ರೂ 1-6-0, 2 8 0, 3-0 0

ದಾರದ ಬನೀನುಗಳು 1ಕ್ಕೆ ಆಣೆ 4, 5, 6, 7, 8

ಉಲನ್ ಬನೀನುಗಳು 1ಕ್ಕೆ ರೂ 2 4-0, 2 8 0, 3-0-0, 3-8-0.

ಪಿಲ್ಟ್ ಕ್ಯಾಪ್‌ಗಳೂ ಕ್ರಿಸ್ತಿಸ್ 1ಕ್ಕೆ ರೂ. 1 12 0, 2 4 0, 2 8-0 2–12–0

ಇಟಲಿ ಕ್ಯಾಪ್‌ಗಳು 1ಕ್ಕೆ ರೂ 0-12 0. 1-0-0, 1 4-0, 1-8-0.

ಹಾಸನದ ಟೋಪಿಗಳು ಡಜನ್ 1ಕ್ಕೆ ರೂ 4-0-0. 4-4-0, 4-8-0, 5–8–0, 6-0 0, 7 0 0, 8 0-0, 9 0 0, 10-0-0, 12-0-0,

ಪೇಟ ಕಟ್ಟುವ ತರಹೆವಾರಿ ರಂಗುಗಳ ಬಟ್ಟೆ ಗಜ 1ಕ್ಕೆ 0-6-0, 0-8-0, 0-10-0, 0-12-0.

ಕುಪ್ಪಸಕ್ಕೆ ಮತ್ತು ಪರಕಾರಕ್ಕೆ ಉಪಯೋಗಿಸುವ ಚೀಟುಗಳು ಗಜ 1ಕ್ಕೆ ಆಣೆ 6, 8, 10, 12.

ಕೇಶರಂಜನ ತೈಲ ಬಾಟ್ಲೆ 1ಕ್ಕೆ ರೂ. 0—11—0.
ಕುಂತಳ ಕೌಮುದಿ ತೈಲ ,, ,, 0—12—0.
ಕಮೋನಿಯಾ ಓಯಿಲ್ ,, ,, 1—0—0.
ಭೃಂಗಾಮಲಕ ತೈಲ ಸೀಸೆ ,, ,, 0—4—0, 0–8–0, 1–0–0
ಕಸ್ತೂರಿ ಮಾತ್ರೆ ಸೀಸೆ 0—4—0.

ಎಲ್. ಎ. ಶೋರುವಾಲ್

[illegible]

ಚಾತಕ ಫಲ ಚಿಂತಾಮಣಿ

ಎಂಬೀ ಪುಸ್ತಕವು ಕರ್ಣಾಟಕ ದೇಶೀಯರೆಲ್ಲರ ಉಪಯೋಗಕ್ಕಾಗಿ ಪಂಡಿತರಿಂದ ತಾತ್ಪರ್ಯ ಸಹಿತವಾಗಿ ಬರೆಯಿಸಿ ಬಿಕರಿಗೆ ಸಿದ್ಧವಾಗಿದೆ. ಕ್ರಯ 0—12— ಹಾಸಲು ಚಾರ್ಜು 0—3—0. 3 ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಚಿ ತ್ರಾಂಕವಾದ ಮಹಾಲಕ್ಷ್ಮಿ ಎಂಬ ಕಥೆ ಇನಾಮಾಗಿ ದೊರೆಯುತ್ತೆ.

ಹೆಚ್ ಎನ್. ರಾವ್ ಬ್ರದರ್ಸ್,

ಚಿಕ್ಕಪೇಟೆ ಬೆಂಗಳೂರು ಸಿಟಿ.

"ವಿದ್ಯಾನಂದ" ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಭಾವಾರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ಗ ಪ್ರಿಂಟಾಗಿ ಸಿದ್ಧವಾಗಿದೆ. ಬೆಲೆ 1—0—0.

ಮುಕುಂದಮಾಲಾ ಸ್ತೋತ್ರ

ಮೇಲ್ಕಂಡ ಪಾಠಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಇರುತ್ತದೆ. ಬೆಲೆ 0—4—0.

ವಿಳಾಸ- ಮ್ಯಾನೇಜರ್,

ವಿದ್ಯಾನಂದ ಆಫೀಸು,

ಚಿಕ್ಕಪೇಟೆ ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಮೆನ್‌ಸಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಬಲ್ಲೆನು

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸಬಹುದು.

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತ ಉಪಯುಕ್ತವಾದದ್ದು. ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ. ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ್.

216 ಕಾರ್ನವಾಲಸ್ ಬೀದಿ ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. ಶೋರುವಾಲ್ ಎಂಡ್ ಕೊ,

[illegible]

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಖು 2[illegible]ನೇ ಜುಲಾಯಿ 1910

ವೈದಿಕರ ಕರ್ತವ್ಯ.

ಪ್ರಕೃತ ಕಾಲದಲ್ಲಿ ವೈದಿಕ ವೃತ್ತಿಯು ಗೌರವವನ್ನು ಬಹಳಮಟ್ಟಿಗೆ ಕಳೆಕೊಂಡಿರುವುದು. ಯಾವ ವೃತ್ತಿಯಾದರೂ ಗೌರವಾಸ್ಪದವಾಗುವುದೂ ಅಥವಾ ಗೌರವವನ್ನು ಕಳಕೊಳ್ಳುವುದೂ ಅದನ್ನವಲಂಬಿಸಿದ ವ್ಯಕ್ತಿಗಳ ವರ್ತನೆಯನ್ನನುಸರಿಸಿರುವುದು. ವೈದಿಕರು ತಮ್ಮ ಗೌರವವನ್ನುಳಿಸಿಕೊಳ್ಳುವ ಉಪಾಯಗಳನ್ನು ಕಾಣದ್ದರಿಂದಲೇ ವೈದಿಕ ವೃತ್ತಿಯು ಹೀನದೆಸೆಗಿಳಿದಿರುವುದು. ತಮ್ಮ ಜೀವನದ ಉದ್ದಿಷ್ಟ ಕರ್ತವ್ಯಗಳನ್ನು ನಡೆಸುವುದಕ್ಕಿಂತಾ [illegible] ಸಂಖ್ಯೆಯು ಈ ವರ್ಗದವರಲ್ಲಿ ಅಧಿಕವಾಗುತ್ತಿದ್ದು ಮುಕ್ಯ ಸಮಾಜಕ್ಕೆ ಇವರಿಂದ ದೊರೆಯುವ ಉಪಕಾರ [illegible] ಕ್ಷೀಣವಾಗುತ್ತ ಬಂದಿರುವುದರಿಂದಲೇ ಸಮಾಜದಲ್ಲಿ ವೈದಿಕ ವರ್ಗಕ್ಕೆ ದೊರೆಯುವ ಆದರಣೆಯು ಕಡಿಮೆಯಾಗಿರುವುದು. ತಾರತಮ್ಯವಿಲ್ಲದ ಬಾರಿದಕ್ಷಿಣೆಯಿಂದ ತಮ್ಮ ದ್ರವ್ಯಕೋಶಗಳನ್ನು ತುಂಬಿಕೊಳ್ಳುವುದಲ್ಲದೆ ವೃಥಾ ಸಮಯವನ್ನು ನಷ್ಟಗೊಳಿಸುವವರಿಗೆ ದ್ರವ್ಯಸಹಾಯ ದೊರೆಯುವುದರಿಂದ ಆ ವರ್ಗದಲ್ಲಿ ಆಲಸ್ಯದಿಂದುಂಟಾಗುವ ದುರ್ಗುಣಗಳೆಲ್ಲವುಗಳಿಗೂ ಆಶ್ರಯ ಕೊಡಿಸುವಂತಾಗುವುದೆಂಬ ಸಂಶಯಾಸ್ಪದ ಭಾವನೆಯಿಂದಲೂ ಜನಸಾಮಾನ್ಯರಲ್ಲಿ ಒಂದೊದಗಿದ ಬಡತನದಿಂದಲೂ ಬ್ರಾಹ್ಮಣ ದಕ್ಷಿಣೆಯು ಕಾಲಾಣೆ ಸೀಮಾಣೆಗಳಿಗೆ ಇಳಿದಿರುವುದು. ಈ ವಿದ್ಯಮಾನಗಳಲ್ಲಿ ವೈದಿಕ ವೃತ್ತಿಯನ್ನೇ ನಂಬಿಕೊಂಡಿರುವುದು ದುಸ್ಸಾಧ್ಯವೆಂತ ಕಂಡು ವೈದಿಕರಲ್ಲಿ ಹಲವರು ಇತರ ಉದ್ಯೋಗಗಳಲ್ಲಿ ಜೀವನದ ಬಗ್ಗೆ ಬೇರೆ ವೃತ್ತಿಗಳನ್ನವಲಂಬಿಸಿಕೊಳ್ಳುತ್ತಿರುವರು. ಈ ಅವಸ್ಥೆಯಿಂದ ವೈದಿಕ ವರ್ಗವನ್ನು ಉದ್ಧರಿಸುವುದಕ್ಕೆ ಸಮಾಜ ಹಿತೈಷಿಗಳಾದವರ ಸಾಹಸ ಸಹಕಾರ ಪ್ರಯತ್ನಗಳು ಬೇಕಾಗಿರುವವು. ಸಮಾಜ ಸೇವಾಸಕ್ತಿಯು ಭರತಖಂಡದ ಆ ಆ ಪ್ರಾಂತ್ಯಗಳಲ್ಲಿ ಬೆಳೆಯುವುದನ್ನು ನೋಡಿ ಹಿಂದೂ ಸಮಾಜದ ಶಿರಃಪ್ರಾಯವಾದ ಈ ವರ್ಗದವರೂ ಸಹ ಈ ಸೇವಾಶಕ್ತಿ [illegible] ಚೇತನಗೊಂಡು ಪ್ರಕೃತ ಕಾಲದಲ್ಲಿ ಅತಿ ತುಲ್ಯವಾಗಿ [illegible] ತಮ್ಮ ಕರ್ತವ್ಯ ಜವಾಬ್ದಾರಿಗಳನ್ನು ವಹಿಸಿಕೊಳ್ಳಬೇಕಾಗಿರುವುದು.

ಜೈನ, ಬೌದ್ಧ ಮತಗಳು ಅವಂತರಗಳನ್ನು ನಮ್ಮ ಪೂರ್ವ [illegible] ಜನಕ ಮಹರ್ಷಿಗಳಿಂದ ಪ್ರಾರಂಭವಾಗಿ [illegible] ಹಿಂದೂಧರ್ಮಶಾಸ್ತ್ರಗಳಲ್ಲಿ ಬೋಧಕವಾಗಿರುವ ಸನಾತನ ಧರ್ಮವನ್ನು ನಂಬಿರುವ ಭಾರತೀಯರ ಪುರಾತನ ನಾಗರಿಕತೆಯ ಮೂಲತತ್ತ್ವಗಳನ್ನು ಕಾಪಾಡಿಕೊಂಡು ಬರುವ ಪ್ರಯತ್ನಗಳಂತೆಯೂ ಈಗಿನ ಕಾಲದಲ್ಲಿ ಹೆಚ್ಚು ಸಾಹಸವು ಬೇಕಾಗಿದೆ. ಯಾಕೆಂದರೆ ಹಿಂದೂ ಮತವು ಎದುರಿಸಬೇಕಾದ ಕ್ರೈಸ್ತ ಮತ್ತು ಮಹಮ್ಮದಿ ಮತಗಳ ಪರ್ವತಸ್ವವು ಜೈನ, ಬೌದ್ಧ ಮತಗಳಿಗಿಂತ ಅಧಿಕವಾಗಿರುವುದು. ವೇದಗಳಿಂದ ಉಪನಿಷತ್ತು [illegible] ಪ್ರತಿಪಾದಿಸಲ್ಪಟ್ಟಂತೆ ಇವರ ಮತಗಳು ಕೊರಾನ್ ಬೈಬಲ್ ಮೊದಲಾದ ಶಾಸ್ತ್ರಗ್ರಂಥಗಳಿಂದ ಪ್ರತಿಪಾದಿಸಲ್ಪಟ್ಟಿರುವವು. ಹಿಂದೂ ಮತಾನುಯಾಯಿಗಳಿಗೆ ತಮ್ಮ ಮತ ಪ್ರಸರಣೆಯಲ್ಲಿ ಉಂಟಾಗಿರುವ ಅಭಾವದೆಸೆಯಿಂದ ಮಹಮ್ಮದಿ ಮತ್ತು ಕ್ರೈಸ್ತ ಮುಖ್ಯವಾಗಿ ಕ್ರೈಸ್ತಮತ ಪ್ರಸಂಗಿಗಳು ಪ್ರಕೃತ ಕೀಳು ಜಾತಿಯ ಎಂದೆನಿಸುವವರನ್ನಾದರೂ ಮತಾಂತರಗೊಳಿಸುವರು. ಒಬ್ಬ ಪಾಶ್ಚಾತ್ಯ ಲೇಖಕರು ಅಂದವಾಗಿ ಆನೆಯ ಕಾಲು ಮೊಸಳೆಯ ಬಾಯಿಗಳಲ್ಲಿ ಸಿಕ್ಕೊಂಡಂತೆ ಹಿಂದೂಸಮಾಜದ ಕೀಳು ಜಾತಿಯವರು ಪರ ಮತಸ್ಥರ ಪಾಶಗಳಲ್ಲಿ ಬಿದ್ದುಹೋಗುತ್ತಿರುವರು. ಕಾಲಸ್ಥಿತಿ ಹೀಗಿರುವದರಿಂದ ಹಿಂದೂಧರ್ಮ ಪರಿಪಾಲಕರಾದ ವೈದಿಕವರ್ಗವನ್ನು ಸೇರಿರುವ ಮತನಾಯಕರು ಇದಷ್ಟು ಬೇಗದಲ್ಲಿ ತಮ್ಮ ಧರ್ಮೋಜ್ಜೀವನವನ್ನು ಮಾಡುವುದು ಅತ್ಯಗತ್ಯ.

ಧರ್ಮಾಚಾರಂಗಳಲ್ಲಿ ಜನಸಾಮಾನ್ಯರೆಲ್ಲರಿಗೆ ಮಾರ್ಗದರ್ಶಿಗಳಾಗಿ ಬಹಳ ಪೂರ್ವಕಾಲದಿಂದಿದ್ದು ಪ್ರಕೃತ ಕಾಲದಲ್ಲಿ ಸಹ ಪೂರ್ವಜರು ತಮಗೆ ಬಿಟ್ಟಿಟ್ಟ ಈ ಪದವಿಯ ಪ್ರಯೋಜನವನ್ನು ವೈದಿಕ ವರ್ಗವು ಈಗಲೂ ಪಡಕೊಳ್ಳಬಹುದು. ಓದು ಬರಹಗಳ ಪ್ರಾಪ್ತಿಯೇ ಜನರಲ್ಲಿ ದುರ್ಲಭ. ಸಂಸ್ಕೃತ ಭಾಷಾ ಜ್ಞಾನವು ಅವರಲ್ಲಿ ಇನ್ನಷ್ಟು ಅಪರೂಪ. ನಿರಕ್ಷರಕುಕ್ಷಿಗಳ ಸಂಖ್ಯೆಯು ಸಮಾಜದಲ್ಲಿ ಮುಕ್ಕಾಲಂಶಕ್ಕಿಂತ ಅಧಿಕವಾಗಿರುವದರಿಂದ ವೈದಿಕ ವರ್ಗಕ್ಕೆ ಮೇಲೆ ಹೇಳಿರುವ ತಮ್ಮ ಪದವಿಯಿಂದ ಪ್ರಯೋಜನ ಪಡುವ ಸಂದರ್ಭವು ಇನ್ನಷ್ಟು ಅಧಿಕವಾಗಿದೆ. ಸಂಸ್ಕೃತ ಪಂಡಿತನೂ ಅನೇಕ ಧರ್ಮಶಾಸ್ತ್ರ ಪಠಣಗಳನ್ನು ಮಾಡಿ ಶಾಸ್ತ್ರಾಚಾರ ವಿಷಯಗಳಲ್ಲಿ ಒಳ್ಳೇ ಮಾಹೀತಿದಾರನೂ ಆದರೂ ಆತನು ಇಂಗ್ಲಿಷ್ ವಾಙ್ಮಯವನ್ನು ಕಲಿತ ಮಾತ್ರದಿಂದ ಅಂಥಾ ಲೌಕಿಕನ ಶಾಸ್ತ್ರಾಚಾರ ಅಭಿಪ್ರಾಯಗಳು ಅಕ್ಷರಭ್ಯಾಸವಿಲ್ಲದ ಈ ಜನರಾಶಿಯಿಂದ ಮನ್ನಿಸಲ್ಪಡಲಾರವು. ಇದರಿಂದ ವೈದಿಕ ವರ್ಗದ ಕರ್ತವ್ಯ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಇತರರ್ಯಾರಿಗೂ ಅಸದಳವಾಗಿ ಇವರೇ ಇದನ್ನು ಪೂರ್ಣವಾಗಿ ನಿರ್ವಹಿಸಬೇಕಾಗಿದೆ. ಈ ಮೊದಲು ಹೇಳಿರುವ ಪದವಿಯ ಪ್ರಯೋಜನವನ್ನು ಪಡದು ಜನರಾಶಿಯನ್ನು ಸಾರ್ಥಕವಾದ ರೀತಿಗಳಲ್ಲಿ ವರ್ತಿಸುವಂತೆ ಮಾಡಿ ವೈದಿಕರೆಂಬ ನಾಮವನ್ನು ಸಮರ್ಥಿಸಲು ಕಾಲವು ಒಂದೊದಗಿರುವುದು. ಈ ಸಂದರ್ಭದಲ್ಲಿ ವೈದಿಕರು ತಮ್ಮ ಪೂರ್ವಜರಾದ ಋಷಿ, ಆಚಾರ್ಯವರ್ಯರ ಸ್ವಾರ್ಥತ್ಯಾಗ, ಮೊದಲಾದ ಸುಗುಣರಾಶಿಯಿಂದ ಸಮಾಜದ ಮಾರ್ಗದರ್ಶಿಗಳಾಗಲೂ ಬಹುದು. ಅಥವಾ ಅಲ್ಪಜ್ಞಾನತೃಷ್ಣರಾಗಿ ತಮ್ಮ ಸ್ವಾರ್ಥಗಳನ್ನು ಜನರಲ್ಲಿರುವ ಅಜ್ಞಾನದಿಂದ ಸಾಧಿಸಿಕೊಂಡು ಸಮಾಜ ಶತ್ರುಗಳಾಗಿಯೂ ವರ್ತಿಸಬಹುದು.

ಮೇಲೊಂದಾವರ್ತಿ ವ್ಯಕ್ತಪಡಿಸಿದಂತೆ ವೈದಿಕರ ಕತ [illegible] ಕರ್ಮಗಳು ಅತಿ ತುಲ್ಯವಾಗಿವೆ. ಪೂರ್ವಜರು ಬಿಟ್ಟಿಟ್ಟ ಅರ್ಥ [illegible] ಯನ್ನು ಜನ್ಮಸಿದ್ಧವೆಂದು ವಹಿಸಿಕೊಳ್ಳುವವರ ಸಂಖ್ಯೆಯು ಲೋಕದಲ್ಲಿ [illegible] ಸಿಕ್ಕಬಹುದು. ಆದರೆ ಅರ್ಥ ದಾಯಾದಿಗಳು ಪ್ರಪಂಚದಲ್ಲಿ ಹೆಚ್ಚಿರುವರು. ಆದರೆ [illegible] ಧರ್ಮ ದಾಯಾದಿಗಳು ಅತಿ ವಿರಳ. ಇವರ ಜನ್ಮ [illegible] ಕಷ್ಟಕರ. ಸಂಸ್ಕೃತ ವಿದ್ಯಾಜ್ಞಾನವನ್ನು ಪಡೆದು [illegible] ಶಾಸ್ತ್ರ [illegible] ಅವುಗಳು ಸ್ಪಷ್ಟವಾಗದಂತೆ ಕಾಲಕ್ಕೆ ತಕ್ಕ ರೀತಿಯಲ್ಲಿ [illegible] ಉಪನ್ಯಾಸ ಸಕಲರಲ್ಲಿಯೂ ಅವನ್ನು [illegible] ಸನಾತನಧರ್ಮವನ್ನು [illegible] ವೈದಿಕರು ನಮ್ಮ ಪ್ರಾಚೀನ ಋಷಿ ಆಚಾರ್ಯವರ್ಯರ ಧರ್ಮದಾಯಾದಿಗಳಾಗಿರುವರು. ಈ ರೀತಿಯಲ್ಲಿ ಸನಾತನ ಧರ್ಮವನ್ನು ಕಾಪಾಡುವುದೇ ವೈದಿಕರ [illegible] ಧರ್ಮವಾಗಿರುತ್ತದೆ.

ಪುರಾತನ ಕಾಲದಲ್ಲಿ ಧರ್ಮಸಂರಕ್ಷಣೆಯನ್ನು ಮಾಡುವ ಸೌಕರ್ಯಗಳು ಹೆಚ್ಚಾಗಿದ್ದವು. ಧರ್ಮ ಪರಿಪಾಲನೆಯನ್ನು ರಾಜರುಗಳೇ ಶಾಸನಮೂಲಕ ಮಾಡಿಸುತ್ತಿದ್ದರು. ಆದರೆ ಪರ ಜನಾಂಗದ ಪ್ರಕೃತ [illegible] ಪುಸ್ತಕಗಳಿಂದ ಕೂಡಿದ್ದು ನಮ್ಮ ರಾಜರುಗಳು ಯಾವುದಾದರೂ ಒಂದೇ ಮತ ಪ್ರತಿಪಾದನೆಯನ್ನು ಇಟ್ಟುಕೊಳ್ಳುವದಸಂಭವವಾದುದರಿಂದ ಆ ಧರ್ಮ ಪರಿಪಾಲನೆಗಳಿಗೆ ಬೇಗಡ [illegible] ರಾಜಶಾಸನಗಳನ್ನು ಮಾಡುವ ಉಪಾಯವಿಲ್ಲ. ಇದರಿಂದ ವೈದಿಕ ವರ್ಗದಲ್ಲಿ ಧರ್ಮ ಪ್ರಸರಣೆಯ ಆಸಕ್ತಿಯು ಮೊದಲಿಗಿಂತ ಪ್ರಕೃತ ಹೆಚ್ಚಾಗಿ ಬೇಕಾಗಿದೆ.

ಮತ ಸ್ವಾತಂತ್ರ್ಯಗಳನ್ನು ತಮ್ಮ ಪ್ರಜೆಗಳಿಗೆ ಕೊಟ್ಟ ಬ್ರಿಟಿಷ್ ಸರಕಾರದ ಆಳುವಿಕೆಯಿಂದಲೇ ದೈವವಶಾತ್ ಹಿಂದೂಸ್ಥಾನದಲ್ಲಿ ಐಕ್ಯಭಾವವು ಅಲ್ಲಲ್ಲಿ ತೋರುತ್ತಿರುವುದು. ಆ ಆ ಮತ ನಾಯಕರು ಈ ಐಕ್ಯವನ್ನು ಅಭಿವೃದ್ಧಿ ದೇಶದಲ್ಲಿ ಮತ ವೈಷಮ್ಯಗಳು ಬದಲಾಗಿ ಮತ ಔದಾರ್ಯವನ್ನುಂಟುಮಾಡಲು ಪ್ರಯತ್ನಿಸುವರು. ಹಿಂದೂ ಸಮಾಜದ ವೈದಿಕ ವರ್ಗದವರು ತಮ್ಮ ಸಮಾಜದ ಪಾರಮಾರ್ಥಿಕ ಅಭಿವೃದ್ಧಿಗೆ ಗಮನಕೊಡುತ್ತಿರುವಾಗ ಸಮಾಜದ ಆಯಾ ಜನಗಳಲ್ಲಿ ಈ ಐಕ್ಯ ಔದಾರ್ಯ ಭಾವನೆಗಳು ಉಂಟಾಗುವಂತೆ ಪ್ರಯತ್ನಿಸಿ ಪರ ಮತ ದ್ವೇಷಕ್ಕೆ ಅವಕಾಶ ಉಂಟಾಗದಂತೆ ವರ್ತಿಸುವುದು ಅಗತ್ಯ. ಈ ಐಕ್ಯಭಾವವು ಹಿಂದೂಸ್ಥಾನದಲ್ಲಿ ನೂತನವಲ್ಲ. ಮಹಾಭಾರತದಲ್ಲಿ ಹೇಳಲ್ಪಟ್ಟ ವರ್ಣಾಶ್ರಮಧರ್ಮಗಳು ವೇದವ್ಯಾಸ ಮುನಿಗಳಿಂದ ವ್ಯಕ್ತಪಡಿಸಿದಂತೆ ಈ ಏಕೀಭಾವವನ್ನು ಸೂಚಿಸುವುದು. ವ್ಯಾಸ ಮುನಿಗಳು ವರ್ಣಭೇದಗಳು ಒಂದೇ ಜಾತಿಯಲ್ಲಿರಬಹುದೆಂದು ವ್ಯಕ್ತಪಡಿಸಿರುವರು. ಹುಟ್ಟು ಬ್ರಾಹ್ಮಣರಲ್ಲಿ ಯೋಗ್ಯತೆಯಲ್ಲಿ ಶೂದ್ರರಕ್ಕಿಂತಲೂ ಕೀಳಾದವರಿರಬಹುದು. ಶೂದ್ರರಲ್ಲಿ ಸರ್ವ ಯೋಗ್ಯತೆಗಳುಳ್ಳ ಬ್ರಾಹ್ಮಣರಿರಬಹುದು. ಹೀಗೆ ಯೋಗ್ಯತೆಗಳಿಂದಲೂ ಜನ್ಮದಿಂದಲೂ ಉಂಟಾಗುವ ವರ್ಣಭೇದಗಳನ್ನು ವ್ಯಾಸ ಮುನಿಗಳು ಅಂಗೀಕಾರ ಮಾಡಿರುವರು. ಜಾತಿ ಯಾ ತರಗತಿಯ ತಾರತಮ್ಯಗಳಿಲ್ಲದೆ ಸರ್ವರೂ ಮೋಕ್ಷಾರ್ಹರಾಗಿರುವರೆಂತ ವೇದಾಂತಸಿದ್ಧಾಂತವಾಗಿರುವುದು. ಚತುರ್ವರ್ಣಗಳು ಮಾತ್ರವಲ್ಲ ಇಡೀ ಮಾನವ ಜಾತಿಯೇ ಈ ಸಿದ್ಧಾಂತಗಳಿಗೆ ಒಳಪಟ್ಟಿರುವುದೆಂದು ಹಿಂದೂ ಶಾಸ್ತ್ರಗ್ರಂಥಗಳಿಂದ ವ್ಯಕ್ತವಾಗುವುದರಿಂದ ಜಾತಿ ವೈಷಮ್ಯವೂ ಜನಾಂಗ ವೈಷಮ್ಯಗಳೂ ಹಿಂದೂ ಧರ್ಮಶಾಸ್ತ್ರಗಳಿಗೆ ವಿರೋಧವಾಗಿರುವವು. ಆದ್ದರಿಂದ ಮುಸಲ್ಮಾನರೊಂದಿಗಾಗಲಿ ಕ್ರೈಸ್ತರೊಂದಿಗಾಗಲಿ ವೈಷಮ್ಯವಿರಲಿಕ್ಕೆ ನಮಗೆ ಕಾರಣವಿಲ್ಲ. ಹಿಂದೂ ಸಮಾಜದಲ್ಲಿರುವ ವರ್ಣಭೇದವು ಪರಸ್ಪರ ಸಂಪರ್ಕಕ್ಕೂ, ಮೈತ್ರಿಗೂ ಎಡೆಗೊಡದಂತೆ ಏರ್ಪಟ್ಟಿರುವುದೆಂಬದನ್ನು ಸಹಾ ನಾವು ಗ್ರಹಿಸುವುದು ತಪ್ಪು. ಪ್ರಕೃತಿಯಲ್ಲಿಯೂ ಸ್ವಭಾವದಲ್ಲಿಯೂ ಭೇದವುಳ್ಳ ಬೇರೆಬೇರೆ ಜನಾಂಗದವರು ಒಂದೇ ಸಮಾಜದ ವಿವಿಧ ಜಾತಿಗಳಲ್ಲಿ ತಂತಮ್ಮೊಳಗೆ ವಿವಾಹ ಮೊದಲಾದವುಗಳನ್ನು ಮಾಡಿಕೊಂಡು ಪ್ರಜೋತ್ಪತ್ತಿಗೆ ಕಾರಣವಾದ ವರ್ಣಸಂಕರಕ್ಕೆ ಅವಸರಗೊಡದಂತೆ ಮಾತ್ರ [illegible]

ಗಳನ್ನು ರಚಿಸಿದವರು. ಬ್ರಿಟಿಷ್ ಆಳುವಿಕೆಯಿಂದ ಇಂಥಾ ಪರಸ್ಪರ ಮೈತ್ರಿಗೂ ಐಕ್ಯಕ್ಕೂ ಅವಕಾಶ ದೊರಕಿರುವುದರಿಂದ ಈ ಐಕ್ಯಕ್ಕೂ ಮಿತ್ರತ್ವಕ್ಕೂ ಅಡ್ಡಬರುವವರು ಮಹಾ ಪಾತಕಿಗಳಾಗಿರುವರು. ಇಂಥ ವಿದ್ಯಮಾನಗಳಲ್ಲಿ ಪ್ರಕೃತ ವೈದಿಕರಲ್ಲಿ ಹಲವರು ಸಮಾಜ ಭೇದಗಳನ್ನು ಆದರಿಸಿ ಅವುಗಳಿಂದ ಪ್ರಯೋಜನ ಪಡೆಯುವುದು ಅತಿ ದುಃಖಕರ ವಿಷಯವಾಗಿರುತ್ತದೆ. ಕಾಲವನ್ನತಿಕ್ರಮಿಸಲು ಪ್ರಯತ್ನಿಸುವ ಇಂಥವರಿಂದ ಸನಾತನಧರ್ಮ ರಕ್ಷಣೆಯು ಹ್ಯಾಗೆ ಸಾಧ್ಯ? ಇಂಥಾ ದುರ್ಗುಣಕ್ಕೆ ಒಳಬೀಳದಂತೆ ವೈದಿಕರು ಎಚ್ಚರ್ತಿರಬೇಕಾಗಿರುವುದು.

ತಮ್ಮ ಕರ್ತವ್ಯಗಳನ್ನು ಚೆನ್ನಾಗಿ ತಿಳಿದುಕೊಂಡು ವೈದಿಕ ವೃತ್ತಿಯಲ್ಲಿಯೇ ಇವರಿಗೆ ಆಸಕ್ತಿಯುಂಟಾಗುವಂತೆ ಮಠಾಧಿಪತಿಗಳೂ ದೇವಸ್ಥಾನಗಳೂ ಅಲ್ಲಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ಏರ್ಪಡಿಸುವುದು ಆಗತ್ಯ. ಆದರೆ ಇಂಥಾ ಪಾಠಶಾಲೆಗಳಲ್ಲಿ ಶಾಸ್ತ್ರಗಳನ್ನು ಪಠಿಸಿ ಬರಿಯ ಕಂಠಶೋಷಣೆಯಿಂದ ಪ್ರಯೋಜನವಿಲ್ಲ. ಅವುಗಳ ಅರ್ಥಜ್ಞಾನವನ್ನು ಕಾರಣಸಹಿತವಾಗಿ ಕಲಿಯುವಂತೆ ತಕ್ಕ ಏರ್ಪಾಡಿರತಕ್ಕದ್ದು. ಆ [illegible] ದಿನಿಂದಲೂ ಇವರ ಶಿಕ್ಷಣವು ಪೂರ್ಣವಾಗದು. ಈಗಿನ ಕಾಲದ ವಿಜ್ಞಾನವೂ ಸಾಹಿತಿಯೂ, ಅನ್ಯಮತಗಳ [illegible] ಅನ್ಯ ಶಾಸ್ತ್ರ ಪಾಠಿತಿಯೂ [illegible] ಬೋಧಿಸಬೇಕು. [illegible] ಈ ದಿನಗಳಲ್ಲಿ ವೈದಿಕರು ಸಹಾ [illegible] ಅತ್ಯಗತ್ಯ. [illegible] ಶಿಕ್ಷಣವನ್ನು [illegible] ಪಂಡಿತರು [illegible] ಗಳಲ್ಲಿ ಇವರಿಗೆ ಸನ್ಮಾನವೂ ಪ್ರದರ್ಶನವೂ ದೊರಕುವವು. [illegible] ಯೂ ಲೌಕಿಕರು ಇವರ ಅಭಿಪ್ರಾಯವನ್ನು ಮನ್ನಿಸುವರು. ವೈದಿಕ ವೃತ್ತಿಗೆ [illegible] ಗೌರವವೂ ಉಂಟಾಗುವುದು.

ಕೊಬ್ಬರಿ ವ್ಯಾಪಾರವು

[illegible] 11902 [illegible] ಕೊಬ್ಬರಿಯು [illegible] ಪ್ರಕಟಿಸಲ್ಪಟ್ಟ ಈ ಸಂಸ್ಥಾನದ [illegible] ತಿಳಿಯುತ್ತದೆ. ಇದೇ ಸಂಸ್ಥಾನದಿಂದ [illegible] 217 [illegible] 7411 ಲಕ್ಷ ರೂಪಾಯಿಗಳ [illegible] ದೇಶಗಳಿಗೆ ರವಾನೆಯಾದವೆಂತ ತಿಳಿದುಬರುತ್ತದೆ. ಈ [illegible] ಮೌಲ್ಯವು 50 ಯಾ 52 ಲಕ್ಷಗಳಿಗೆ [illegible].

ಹೀಗೆ [illegible] ದೇಶಗಳಿಗೆ [illegible] ರವಾನೆಯಾಗ[illegible] ಕಾರಣಗಳಿವೆ. [illegible] ಸಂಸ್ಥಾನದಲ್ಲಿ [illegible] ಗಳಿಗೆ [illegible] ವಾದದ್ದಲ್ಲ [illegible] ತೆಂಗಿನ ಎಣ್ಣೆ [illegible] ಮೊದಲು [illegible] ಉಪಯೋಗಿಸುತ್ತಿದ್ದರು. [illegible] ಕೊಬ್ಬರಿಯ [illegible] ರುವರು. ಇದರಲ್ಲಿ [illegible] ಈ ಎಣ್ಣೆಯು [illegible] ಬೆಣ್ಣೆಗಿಂತ ಕೆಲವು [illegible] ಯೂರೋಪಿನಲ್ಲಿ [illegible] ಈ ಬೆಣ್ಣೆಯು ಫ್ರಾನ್ಸ್ ದೇಶದಲ್ಲಿ [illegible] ಇದಕ್ಕೆ [illegible] ರೂ 375 ಕ್ರಯವಿರುವುದು. ಈ [illegible] ದೇಶಗಳಲ್ಲಿ ಅಧಿಕವಾದದ್ದಲ್ಲದೆ ಅಲ್ಲಿ [illegible] ಉಪಯೋಗಿಸಲ್ಪಡುವ [illegible] ಯಾ ಇಪ್ಪೆಮರದ ಎಣ್ಣೆ ಮತ್ತು [illegible] ಉಪಯೋಗಿಸಲ್ಪಡುವ [illegible] ಎಣ್ಣೆ ಈ ಎರಡು ಎಣ್ಣೆಗಳ [illegible] ಕಡಿಮೆಯಾಗಿ ತೆಂಗಿನ ಎಣ್ಣೆಯೇ ಅಲ್ಲಿ ಉಪಯೋಗಕ್ಕೆ [illegible] ಬೇಕಾಯಿತು.

ಹೀಗೆ ವಿದೇಶಗಳಲ್ಲಿ ಕೊಬ್ಬರಿಯು ಕೆಲವು ಉಪಯೋಗಗಳನ್ನು ಕಂಡುಕೊಂಡಿರುವುದರಿಂದ ಇನ್ನು ಮುಂದಿನ ವರುಷಗಳಲ್ಲಿಯೂ ಕೊಬ್ಬರಿಯ ಈ ರಫ್ತು ವ್ಯಾಪಾರವು ಹೆಚ್ಚುತ್ತಾ ಬರಲಿಕ್ಕೆ ಬಹಳ ಅವಕಾಶವಿದೆ. ಇದರಿಂದ ತೆಂಗಿನಕಾಯಿ ಕೊಬ್ಬರಿ ಎಣ್ಣೆ ಮೊದಲಾದವುಗಳ ಕ್ರಯವು ಈಗಿಂದಾಗ್ಯೆ ಹೆಚ್ಚುಕಮ್ಮಿ [illegible] ವಾಗುವುದು. ಆದರೆ ತೆಂಗಿನಕಾಯಿಗಳಿಗೆ ಹೀಗೆ ಗಿರಾಕಿ ಉಂಟಾಗುವಂತೆ ಪ್ರಕೃತವಿರುವ ತೋಟಗಳಲ್ಲಿ ಇನ್ನು ಹೆಚ್ಚು ಸಸಿಗಳನ್ನಿಟ್ಟು ತೆಂಗಿನಕಾಯಿ [illegible] ನೋಡುವುದು ಅಷ್ಟೊಂದು ಲಾಭಕರವಾಗಲಿಕ್ಕಿಲ್ಲ. ಯಾಕೆಂದರೆ ಮೊದಲಿನ ತೋಟದಲ್ಲಿಯೇ ಸಸಿಗಳೂ ಮರಗಳೂ ಹೆಚ್ಚಾಗಿ ಒಂದು ವೇಳೆ ಕೆಲವು ಸಮಯಕ್ಕೆ ಇವುಗಳಿಂದ ಒಳ್ಳೇ ಉತ್ಪತ್ತಿಯು ಸಿಕ್ಕಬಹುದಾದರೂ ಕ್ರಮೇಣ ತೋಟವು ಇದರಿಂದ ನಿಸ್ಸಾರವಾಗಿ ಕೆಟ್ಟು ಹೋಗುವುದು. ಆದರೆ ಮೊದಲಿನ ತೆಂಗಿನಕಾಯಿ ತೋಟಗಳಲ್ಲದೆ ಬೇರೆ ಹೊಸ, ಅದರ ಬೆಳವಣಿಗೆಗೆ ಒಳ್ಳಿತಾದ ಸ್ಥಳದಲ್ಲಿ ಸಸಿಗಳನ್ನಿಟ್ಟು ತೋಟಗಳನ್ನು ಮಾಡಿದರೆ ಇದರಲ್ಲಾಗುವ ತೆಂಗಿನಕಾಯಿಗಳಿಂದ ಲಾಭ ಪಡೆಯಬಹುದು.

ತೆಂಗಿನಕಾಯಿ ತೋಟಗಾರರಿಗೆ ಈ ರಫ್ತು ವ್ಯಾಪಾರದಿಂದ ಅಲ್ಪಸ್ವಲ್ಪ ಮುನಾಫೆಯು ದೊರಿಯಬಹುದಾದರೂ ಕೊಬ್ಬರಿಯಿಂದ ವಿವಿಧ ಪದಾರ್ಥಗಳನ್ನು ತಯ್ಯಾರಿಸುವ ಕಾರ್ಖಾನೆಗಳನ್ನು ನಮ್ಮ ದೇಶದಲ್ಲಿಯೇ ಸ್ಥಾಪಿಸುವಂತೆ ಪ್ರಯತ್ನಿಸಿದರೆ ತೋಟಗಾರರ ಫಾಯಿದೆಗಿಂತೆ ಶತಾಂಶ ಮುನಾಫೆಯು ಈ ಕೈಗಾರಿಕೆಗಳಿಂದ ನಮಗೆ ದೊರಕುವುದಲ್ಲದೆ ದೇಶದ ಸಂಪತ್ತೂ ಅಭಿವೃದ್ಧಿಸುವುದು. ಕೊಬ್ಬರಿಯ ರಫ್ತು ವ್ಯಾಪಾರವು ಇನ್ನಷ್ಟು ಅಧಿಕವಾದರೆ ನಮ್ಮ ಊರಲ್ಲಿ ಅಲ್ಲಲ್ಲಿ ಸ್ಥಾಪಿತವಾದ ತೆಂಗಿನ ಎಣ್ಣೆಯ ಕೈಗಾರಿಕೆಯೂ ನಿಶ್ಚಯವಾಗಿಯೂ ಕೆಡುವುದು.

ಟ್ರಸ್ಟೀ ಯಾ ನಿಕ್ಷೇಪಧಾರಿಯು.

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

ಬ್ರಹ್ಮಯ್ಯನವರಿಂದ ಆಮಂತ್ರಣ ಪಡೆದು ಅವರ ಮನೆಯಲ್ಲಿ ನಿವಾಸಿಸಿಕೊಂಡಿದ್ದ ಆ ದುರ್ದೈವದ ಚಿಕ್ಕ ಕುಚೋದ್ಯಗಾರನ ಹೆಸರು ಶಕ್ತಿನಾಥನು. ಬ್ರಹ್ಮಯ್ಯನವರು ಆತನಿಗೆ ಬಹಳ ಚಲೋದಾದ ರೀತಿಯಲ್ಲಿ ಆತಿಥ್ಯ ಸತ್ಕಾರಗಳನ್ನು ಮಾಡುವುದನ್ನು ನೋಡಿ ನೆರೆಯವರೆಲ್ಲರೂ ಆಶ್ಚರ್ಯಪಡುತ್ತಿದ್ದರು. ಮುದುಕನಿಗೆ ಸಾವೆಂತೂ ಸಮೀಪಿಸಿರುವುದು—ಆ ಅಪರಿಚಿತ ಬೆವಾರಿಸಿಗೆ ತನ್ನ ಸಂಪಾದನೆಯನ್ನೆಲ್ಲವನ್ನು ಬಿಟ್ಟು ಬಿಡುವನೆಂತ ಕಾಣುತ್ತದೆ. ಆ ಸೀಚನು ಬ್ರಹ್ಮಯ್ಯನವರಿಗೆ ಎಲ್ಲಿಂದ ಪ್ರಾಪ್ತವಾದನೋ—ನೆರೆಯಲ್ಲಿದ್ದ ಚಿಕ್ಕ ಮನಸ್ಸಿನವರು ಶಕ್ತಿನಾಥನಿಗೆ ದೊರಿಯಬಹುದಾದ ಸಂಪತ್ತನ್ನೆಣಿಸಿಕೊಂಡು ಅಸೂಯಾಭಾವನೆಗಳಿಂದ ಈ ರೀತಿ ಅಂದುಕೊಳ್ಳುತ್ತಿದ್ದರು. ನೆರೆಯವರಲ್ಲಿ ಈ ಅಸೂಯಾಭಾವವು ಇನ್ನಷ್ಟು ಹೆಚ್ಚಾಗಿ ಹುಡುಗನಿಗೇನಾದರೂ ಅಪಾಯ ಬರುವ ಸಂದರ್ಭಗಳನ್ನು ನೋಡಿ ಬ್ರಹ್ಮಯ್ಯನವರು ಹೆಚ್ಚಿನ ಜೋಪಾಸನೆಯಿಂದ ಈ ಹುಡುಗನನ್ನು ರಂಡಕ್ಷಿಸಿಕೊಂಡಿದ್ದರು.

ಶಕ್ತಿನಾಥನು ಆಗಿಂದಾಗ್ಯೆ ತಾನ ಈಗಲೇ ಮನೆಬಿಟ್ಟು ಹೋಗುವೆನೆಂತ ಹೆದರಿಸಿದ ಕೂಡಲೇ ಬ್ರಹ್ಮಯ್ಯನವರು ಈತನಿಗೆ ತನ್ನ ಹತ್ತರವಿರುವ ಎಲ್ಲಾ ಐಶ್ವರ್ಯವನ್ನು ಕೊಟ್ಟು ಬಿಡುವೆನೆಂದು ಆಶೆ ಹುಟ್ಟಿಸುವ ರೀತಿಯಲ್ಲಿ ತಿಳಿಯಹೇಳಿ ಶಕ್ತಿನಾಥನು ತನ್ನೊಡನೆ ಉಳಕೊಳ್ಳುವಂತೆ ಆತನನ್ನು ಸಮಜಾಯಿಸುತ್ತಿದ್ದರು. ಶಕ್ತಿನಾಥನು ಚಿಕ್ಕ ಪ್ರಾಯದವನಾದರೂ ಐಶ್ವರ್ಯದ ಮಹತ್ವಿಕೆಯನ್ನು ಚನ್ನಾಗಿ ತಿಳಕೊಳ್ಳುತ್ತಿದ್ದನು.

ಬ್ರಹ್ಮಯ್ಯನವರ ನೆರೆಯಲ್ಲಿದ್ದವರು ಶಕ್ತಿನಾಥನ ತಂದೆಯು ಎಲ್ಲಿರಬಹುದೆಂಬುದನ್ನು ಕೇಳಿ ವಿಚಾರಿಸಲು ತೊಡಗಿದರು. ಹುಡುಗನನ್ನು ಕಾಣದೆ ಈತನ ತಾಯಿ ತಂದೆಗಳೆಷ್ಟು ದುಃಖದಿಂದ ಮರುಗುತ್ತಿರುವರೋ ಎಂದು ಯೋಚಿಸಿ ತಂದೆ ತಾಯಿಗಳನ್ನು ದುಃಖಕ್ಕೆ ಗುರಿಪಡಿಸಿದ ಈ ಬಾಲಕನು ಎಂತವನೋ ಎಂತ ಶಕ್ತಿನಾಥನನ್ನು ನಾನಾರೀತಿಗಳಲ್ಲಿ ತಪ್ಪೆಣಿಸುತ್ತಿದ್ದರು. ಆದರೆ ನೆರೆಯವರ ಈ ತುಚ್ಛೀಕಾರ ಮಾತುಗಳು ನೀತಿಪರವಾದವುಗಳಂತೆ ಅವರು ನಟಿಸಿದಾಗ್ಯೂ ನೀತಿಕ್ಕಿಂತ ಮುದುಕನ ಐಶ್ವರ್ಯವು ಶಕ್ತಿನಾಥನ ಪಾಲಾಗುವದೆಂಬ ಅಸೂಯೆಯೇ ಈ ಮಾತುಗಳಿಗೆ ಸ್ವಲ್ಪ ವಿಶೇಷವಾಂತರಿಕ ಕಾರಣವಾಗಿಂದು.

[illegible] ಬ್ರಹ್ಮಯ್ಯನವರು ಸೋಮನಾಥನು ತನ್ನ ಮಗನನ್ನು ಅನೇಕ ಕಡೆಗಳಲ್ಲಿ ಹುಡುಕಿ ಈ ಊರ ಮಾರ್ಗವಾಗಿ ಬರುತ್ತಿದ್ದನೆಂದು ಒಬ್ಬ ಪ್ರಯಾಣಿಕನಿಂದ ತಿಳಕೊಂಡರು. ಶಕ್ತಿನಾಥನು ಈ ವರ್ತಮಾನವನ್ನು ಕೇಳುತ್ತಲೇ ಸಿಡಿಮಿಡಿಗೊಂಡು ತನಗೆ ಮುಂದಕ್ಕೆ ಸಿಕ್ಕಬಹುದಾದ ದ್ರವ್ಯವನ್ನು ತನ್ನಷ್ಟಕ್ಕೆನೇ ಬಿಟ್ಟು ಓಡಿಹೋಗಬೇಕೆಂದು ಯೋಚಿಸುತ್ತಿದ್ದಾಗ—“ಯಾರೂ, ಈ ಊರಿನವರು ಸಹಾ ನಿನ್ನನ್ನು ಹುಡುಕಿ ತೆಗಿಯಲಾರದಂತೆ ಬಹಳ ಅಂತರಂಗವಾದ ಸ್ಥಳದಲ್ಲಿ ನಿನ್ನನ್ನು ಅಡಗಿಸಿ ಕೂತುಕೊಳ್ಳಿರಿಸುವೆ. ತಂದೆಯೂ ನಿನ್ನನ್ನು ಹುಡುಕಿ ತೆಗಿಯುವನೆಂಬ ಯೋಚನೆಯ ನೀನು ಎಂದಿಗೂ ಮಾಡಬೇಡ” ವೆಂತ ಶಕ್ತಿನಾಥನು ಮನೆ ಬಿಟ್ಟು ಹೋಗದೆ ಅಲ್ಲಿಯೇ ನಿಲ್ಲುವಂತೆ ಆತನಿಗೆ ಪದೇ ಪದೇ ಬ್ರಹ್ಮಯ್ಯನವರು ಹೇಳುತ್ತಿದ್ದರು.

ಬ್ರಹ್ಮಯ್ಯನವರು ಗುಪ್ತವಾದ ಅಂತರಂಗ ಸ್ಥಳದ ವಿಷಯ ಮಾತಾಡಿದೊಡನೆಯೇ ಅಂಥಾ ಸ್ಥಳವು ಎಲ್ಲಿರುವುದೆಂಬುದನ್ನು ನೋಡುವ ಕುತೂಹಲವನ್ನು ಶಕ್ತಿನಾಥನು ತಡೆಯಲಾರದೆ ಬ್ರಹ್ಮಯ್ಯನವರನ್ನು ಈ ಸ್ಥಳವನ್ನು ತನಗೆ ತೋರಿಸಬೇಕೆಂತ ಉಪದ್ರಗೊಳಿಸುತ್ತಿದ್ದನು.

“ಅಜ್ಜಯ್ಯಾ, ನೀವು ಹೇಳಿದ ಸ್ಥಳವು ಎಲ್ಲಿರುವುದು? ಒಂದು ಸರ್ತಿ ಅದನ್ನು ನನಗೆ ತೋರಿಸಿಬಿಡಿರಿ”

“ಈಗ ಹಗಲೊತ್ತಿನಲ್ಲಿ ಆ ಸ್ಥಳವು ಎಲ್ಲಾವುದೆಂತ ನಿನಗೆ ತೋರಿಸಿದರೆ ಜನರೆಲ್ಲರೂ ಅದನ್ನು ತಿಳಕೊಳ್ಳುವರು. ರಾತ್ರಿಯಾಗುವ ತನಕ ಸ್ವಲ್ಪ ಸಮಾಧಾನದಲ್ಲಿರು” ಎಂತ ಶಕ್ತಿನಾಥನನ್ನು ಕುರಿತು ಬ್ರಹ್ಮಯ್ಯನು ಹೇಳುವವನಾದನು.

ಹೀಗೆಂದುಕೊಂಡು ಶಕ್ತಿನಾಥನು ಮನೆಯಲ್ಲಿ ಭದ್ರವಾಗಿರುವಂತೆ ಮನೆ ಬಾಗಿಲು ಕಿಟಿಕಿಗಳನ್ನೆಲ್ಲಾ ಮುಚ್ಚಿಬಿಟ್ಟು ಎದುರಿನ ಬಾಗಲಿಗೆ ಬೀಗ ಹಾಕಿ ಬ್ರಹ್ಮಯ್ಯನವರು ಮಧ್ಯಾಹ್ನ ಹೊತ್ತಿನಲ್ಲಿ ಮನೆಬಿಟ್ಟು ಹೋಗಿ ಒಂದೆರಡು ತಾಸುಗಳಲ್ಲಿಯೇ ಮನೆಗೆ ಹಿಂತಿರುಗಿ ಬರುವವರಾದರು.

ಹೊಸತಾದ ಅಡಗಿ ಕೂತುಕೊಳ್ಳುವ ಸ್ಥಳವನ್ನು ಕಂಡುಕೊಳ್ಳುವ ಮನೋಲ್ಲಾಸವು ಈ ಬಾಲಕ ಶಕ್ತಿನಾಥನಲ್ಲಿ ಅನೇಕ ಭಾವನೆಗಳಿಗೆಡೆಕೊಡುತ್ತಿತ್ತು. “ತಂದೆಯು ನನ್ನನ್ನು ಎಂದೂ ಈ ಸ್ಥಳದಿಂದ ಹುಡುಕಿ ತೆಗಿಯಲಾರದೆ ಹಿಂತಿರುಗಿ ಹೋದ ಕೂಡಲೇ ಊರ ಹುಡುಗರೊಂದಿಗೆ ಅಡಗಿ ಹುಡುಕುವ ಆಟವನ್ನು [illegible] ಈ

ಸ್ಥಳದಲ್ಲಿ ಬಚ್ಚಿಟ್ಟುಕೊಂಡರೆ ಯಾರು ನನ್ನನ್ನು ಹಿಡಿಯಲಾಪರು? ಈ ಬಗ್ಗೆ ಹುಡುಗರೊಂದಿಗೆ ಪಂಥವನ್ನು ಹಾಕಿಕೊಳ್ಳಬಹುದು. ನೂರಾರು ಜನ ಹುಡುಗರನ್ನು ಈ ಪಂಥದಾಟದಲ್ಲಿ ಸೋಲಿಸಿಬಿಡುವೆನು. ಅಹಾ! ಆಟಗೆಲವಿನ ಸಂಭ್ರಮವೇ!". ಶಕ್ತಿನಾಥನ ಉಲ್ಲಾಸಕ್ಕೆ ಮಿತಿಯೇ ಇರಲಿಲ್ಲ.

ಸಾಯಂಕಾಲವಾಯಿತು. "ಅಜ್ಜಯ್ಯನವರೇ ಹೊತ್ತು ಕಂತಿತು, ಈಗ ಹೋಗಬಾರದೆ?"

"ರಾತ್ರೆಯಾಗಲಿಲ್ಲ, ಸ್ವಲ್ಪ ಸುಮ್ಮನಿರು."

ರಾತ್ರಿ ೮ ಘಂಟೆಯಾಗುತ್ತಲೇ ಇನ್ನೊಮ್ಮೆ ಶಕ್ತಿನಾಥನು ಆ ನೂತನ ಸ್ಥಳಕ್ಕೆ ಹೋಗುವದರ ಕುರಿತು ಬ್ರಹ್ಮಯ್ಯನವರನ್ನು ಕೇಳಿಕೊಂಡನು. ಆದರೆ ಊರ ಜನರೆಲ್ಲರೂ ಮಲಗಿಕೊಂಡ ನಂತರ ಹೊರಡುವದೆಂದು ಶಕ್ತಿನಾಥನು ಬ್ರಹ್ಮಯರಿಂದ ತಿಳಿಕೊಂಡನು.

ಊರ ಜನರ ನಿದ್ರಾ ಸಮಯ, ಅಂದರೆ ಸಾಧಾರಣ ರಾತ್ರಿ ಹತ್ತು ಹದಿನೆರಡು ತಾಸುಗಳು ದಾಟಬೇಕು. ಆ ತನಕ ನಿದ್ದೆ ಹೋಗದೆ ರಾತ್ರೆಯಲ್ಲಿ ಎಚ್ಚರವಿರಬೇಕಾಯಿತು. ರಾತ್ರೆಯ ಮೊದಲಿನ ಜಾವದಲ್ಲಿಯೇ ಮಲಗಿ ನಿದ್ದೆಹೋಗುವ ಬಾಲಕನಾಗಿದ್ದ ಶಕ್ತಿನಾಥನಿಗೆ ಮಧ್ಯರಾತ್ರಿ ತನಕ ಜಾಗ್ರತೆ ಮಾಡಲಿಕ್ಕೆ ಬಹಳ ಪ್ರಯತ್ನ ಬೇಕಾಯಿತು. ತೂಕಡಿಕೆಯಿಂದ ಆಗಿಂದ್ದಾಗ್ಗೆ ಕಣ್ಣು ಮುಚ್ಚಿ ತಲೆತೂಗುತ್ತಿದ್ದನಾದರೂ ನೂತನಆಟ ಸ್ಥಳವು ತನಗೆ ದೊರಿಯುವದೆಂಬ ವಿನೋದಕಾಂಕ್ಷೆಯು ಪಾಪ! ಆ ಬಾಲಕನಿಗೆ ಪೂರ್ಣವಾಗಿ ನಿದ್ದೆ ಹತ್ತಲು ಬಿಡುತ್ತಿದ್ದಿಲ್ಲ. ಮಧ್ಯರಾತ್ರೆಯು ದಾಟಿತು. ಬ್ರಹ್ಮಯ್ಯನು ನಿದ್ದೆಯಿಂದ ತಲೆತೂಗುತ್ತಿರುವ ಈ ಹುಡುಗನ ಕೈಯನ್ನು ಹಿಡಕೊಂಡು ಮನೆ ಬಿಟ್ಟು ಹೊರಡುವವನಾದನು. ನಿಶಕಾಲ ಬ್ರಹ್ಮಯ್ಯನವರು ಹುಡುಗನೊಂದಿಗೆ ಊರ ಬೀದಿಗಳನ್ನು ದಾಡುಹೋಗುತ್ತಿದ್ದರು. ಸುತ್ತಲೆಲ್ಲಾ ಕಗ್ಗತ್ತಲೆ, ಊರ ಜನರ ಸುಖ ನಿದ್ರೆಯ ಗುರುಗುಟ್ಟು. ಮುದುಕನೂ ಬಾಲಕನೂ ಹೋಗುತ್ತಿದ್ದಾಗ ಆ ಅಪರಾತ್ರೆಯಲ್ಲಿ ಆಗುವ ಪಾದಪತನ ಶಬ್ದದಿಂದ ಮರ ಕೊಂಬೆಗಳಲ್ಲಿ ಗೂಡುಗಳಲ್ಲಿ ನಿಶ್ಚಿಂತವಾಗಿ ಕುಳಿತಿದ್ದ ಪಕ್ಷಿಗಳು ಹೆದರಿ ಕೊಂಬೆಯಿಂದ ಕೊಂಬೆಗೆ ಹಾರುತ್ತಿದ್ದಾಗ ಅವುಗಳ ರೆಕ್ಕೆಗಳಿಂದುಂಟಾಗುವ ಪಟಪಟ, ಚಿಲ್ಲಕ್ಕಿ ಕೂಗುವ ಒಂಟಿ ನಾಯಿಯ ಬೊಗಳುವಿಕೆಯನ್ನು ಕೇಳಿ ಬೌ ಬೌ ಎಂತ ಸಹಕಾರ ಧ್ವನಿಯನ್ನು ಮಾಡುವ ಹಲವು ನಾಯಿಗಳ ಗದ್ದಲಗಳಿಂದ ಆ ನಿಶೀಥಕಾಲದ ಪ್ರವಾಸವು ಇನ್ನಷ್ಟು ಭಯಂಕರವಾಗಿ ಪರಿಣಮಿಸಿತು. ಶಕ್ತಿನಾಥನು ಹೆದರಿಕೆಯಿಂದ ಹಿಂದಿಂದೆ ಸರಿದಿದ್ದರೂ ಬ್ರಹ್ಮಯ್ಯನವರು ಆತನ ಕೈ ಹಿಡಿದು ಆತನನ್ನು ಎಳೆದೊಯ್ಯುತ್ತಿದ್ದರು.

ಬೀದಿಗಳನ್ನೂ ಹಲವು ಗದ್ದೆಗಳನ್ನೂ ದಾಟಿ ಒಂದು ಕಾಡನ್ನು ಸೇರಿದರು. ಕಾಡಿನಲ್ಲಿ ಸ್ವಲ್ಪ ದೂರ ಮುಂದರಿಸುವಷ್ಟರೊಳಗೆ ಹಾಳಾದ ಗೋಪುರವೊಂದನ್ನು ಕಂಡು ಅದನ್ನು ಪ್ರವೇಶಿಸುವವರಾದರು. ಗೋಪುರವನ್ನು ನೋಡುತ್ತಲೇ ಶಕ್ತಿನಾಥನಿಗೆ ಆಶಾಭಂಗವಾಯಿತು. ಒಡಿಯ ನಾಲ್ಕು ಗೋಡೆಗಳುಳ್ಳ ಈ ಗೋಪುರದಲ್ಲಿ ಅಡಗಿ ಕೂತುಕೊಂಡರೆ ಯಾರಿಗೂ ಒಂದು ಹಿಡಿಯಲಿಕ್ಕೆ ಸಾಧ್ಯ. ಇದೆಂಥಾ ಅಂತರಂಗದ ಸ್ಥಳ? ಈ ರೀತಿ ಶಕ್ತಿನಾಥನು ಭಾವಿಸುವಷ್ಟರಲ್ಲಿಯೇ ಬ್ರಹ್ಮಯ್ಯನವರು ಆ ಗೋಪುರದ ನೆಲಕ್ಕೆ ಮುಚ್ಚಿರುವ ಒಂದು ಶಿಲೆಕಲ್ಲನ್ನು ತೆರೆದರು. ಒಂದು ದೊಡ್ಡ ಗವಿಯು ಇದರಡಿಗಿತ್ತು. ಗವಿಯಲ್ಲಿ ಒಂದು ಕಂಚು ದೀಪವು ಉರಿಯುತ್ತಿತ್ತು. ಇಷ್ಟನ್ನೆಲ್ಲಾ ನೋಡುತ್ತಲೇ ಶಕ್ತಿನಾಥನಲ್ಲಿ ಭಯಮಿಶ್ರವಾದ ಕೌತುಕವು ಉಂಟಾಯಿತು. ಗವಿಯಲ್ಲಿ ಕೆಳಗಿಳಿಯಲಿಕ್ಕಿಟ್ಟಿದ್ದ ಏಣಿಯಲ್ಲಿ ಬ್ರಹ್ಮಯ್ಯನವರೂ ಶಕ್ತಿನಾಥನೂ ಕೆಳಗಿಳಿದರು.

ಗವಿಯಲ್ಲಿ ಒಂದು ಸಾಲಿನಲ್ಲಿ ಹಲವು ಕಂಚಿನ ಗುಡಾಣಗಳಿದ್ದವು. ಈ ಗುಡಾಣಗಳೆದುರಿನಲ್ಲಿ ಆಸನವೂ ಪೂಜಾ ಸಾಮಗ್ರಿಗಳೂ, ಪುಷ್ಪ ಗಂಧಾಕ್ಷತೆಗಳೂ ಇಡಲ್ಪಟ್ಟಿದ್ದವು. ಗುಡಾಣಗಳಲ್ಲಿ ಏನಿರುವುದೆಂಬದನ್ನು ಪರೀಕ್ಷಿಸಲಿಕ್ಕೆ ಶಕ್ತಿನಾಥನು ಅವುಗಳೊಂದರಲ್ಲಿ ಕೈಹಾಕಲು ಅವುಗಳಲ್ಲಿ ಚಿನ್ನದ ಮೊಹರುಗಳೂ ರೂಪಾಯಿಗಳೂ ಇದ್ದವೆಂತ ತಿಳಕೊಂಡನು.

ಇಷ್ಟರೊಳಗೆ "ಶಕ್ತಿನಾಥನೇ, ನನ್ನ ಹತ್ತಿರವಿರುವ ದ್ರವ್ಯವೆಲ್ಲವನ್ನೂ ನಿನಗೆ ಕೊಡುತ್ತೇನೆಂದು ಭಾಷೆ ಕೊಟ್ಟಿರುವೆನಲ್ಲ. ನೋಡು ನನ್ನ ಹತ್ತಿರ ಇಷ್ಟೇ ಧನವಿರುವುದು, ಹೆಚ್ಚೇನೂ ಇಲ್ಲ. ಈ ದಿನ ಇದೆಲ್ಲವನ್ನೂ ನಿನ್ನ ವಶ ಮಾಡಿ ಬಿಡುವೆನು" ಎಂದು ಬ್ರಹ್ಮಯ್ಯನವರು ಗುಡಾಣಗಳಿಗೆ ಕೈತೋರಿಸಿ ಹೇಳಿದ್ದನ್ನು ಕೇಳಿ ಶಕ್ತಿನಾಥನು ಸಂತೋಷದಿಂದ ಕುಣಿದಾಡಿದನು.

"ನೀವು ಇದರಲ್ಲಿ ಒಂದು ಚಿಕ್ಕಾಸನ್ನಾದರೂ ಅಪೇಕ್ಷಿಸುವದಿಲ್ಲವಲ್ಲ, ಇದೆಲ್ಲವೂ ನನ್ನದಾಗುವುದೋ?"

"ಹೌದು, ಇದೆಲ್ಲವೂ ನಿನ್ನದಾಗುವುದು. ಇದರಿಂದ ಒಂದು ಕಾಸನ್ನಾದರೂ ನಾನು ತೆಗದರೆ ನನ್ನ ಕೈಗೆ ಕುಷ್ಠ ಹತ್ತಲಿ! ಆದರೆ ಒಂದು ಶರ್ತವಿರುವುದು. ಮುಂದಕ್ಕೆ ಯಾವಾಗಲಾದರೂ ನನ್ನ ಮೊಮ್ಮಗ ಭವಾನಿಪ್ರಿಯ ಅಥವಾ ಆತನ ಸಂತತಿಯವರಾದರೂ ಈ ಸ್ಥಳವನ್ನು ಹಾದುಹೋಗುವುದನ್ನು ನೀನು ಕಂಡರೆ ನೀನು ಇದೆಲ್ಲವನ್ನೂ ಅವರಿಗೆ ಬಿಟ್ಟುಕೊಡಬೇಕು".

ವಿನೋದಬುದ್ಧಿ ಭ್ರಾಂತಿಯಿಂದ ಬ್ರಹ್ಮಯ್ಯನು ಮಾತಾಡುತ್ತಿರುವನೆಂದು ಗ್ರಹಿಸಿ ಹಾಗೇ ಮಾಡುವೆನೆಂದಾಗ ಶಕ್ತಿನಾಥನು ಬ್ರಹ್ಮಯ್ಯನಿಗೆ ಮಾತುಕೊಟ್ಟನು. ಶಕ್ತಿನಾಥನಿಂದ ಈ ಸಂಪತ್ತೆಲ್ಲವೂ ಭವಾನಿಪ್ರಿಯ ಯಾ ಆತನ ಸಂತತಿಯವರಿಗೆ ಕೊಡೋಣಾಗುವುದೆಂಬ ಮಾತು ದೊರಕಿದೊಡನೆಯೇ ಬ್ರಹ್ಮಯ್ಯನು ಶಕ್ತಿನಾಥನನ್ನು ಅಲ್ಲಿದ್ದ ಆಸನದ ಮೇಲೆ ಕುಳ್ಳಿರಿಸಿ ಗಂಧಾಕ್ಷತೆಗಳನ್ನು ಆತನ ಹಣೆಯಲ್ಲಿ ಹಚ್ಚಿ ಕೆಲವು ಮಂತ್ರಗಳನ್ನು ಹೇಳಿ ಶಕ್ತಿನಾಥನಿಗೆ ಪೂಜೆಮಾಡಲು ಪ್ರಾರಂಭಿಸಿದನು. ಈ ಪೂಜಾವಿಧಿಗಳೆಲ್ಲವನ್ನು ನೋಡಿ ಶಕ್ತಿನಾಥನು ಕಂಗೆಟ್ಟು ಬ್ರಹ್ಮಯ್ಯನವರನ್ನು ನೋಡಿ, ಅಜ್ಜಯ್ಯ, ಎಂತ ಎಷ್ಟು ಸರ್ತಿ ಕರದರೂ ಬ್ರಹ್ಮಯ್ಯನವರು ಆತನ ಮಾತಿಗೆ ಕಿವಿಕೊಡಲಿಲ್ಲ. ಮಂತ್ರೋಚ್ಚಾರಣೆಯಲ್ಲಿಯೇ ಬ್ರಹ್ಮಯ್ಯನವರು ಮಗ್ನರಾಗಿದ್ದರು. ಪೂಜಾವಿಧಿಯು ಮುಗಿಯಿತು. ಕಂಚಿನ ಗುಡಾಣಗಳೆಲ್ಲವನ್ನು ಎಳದು ಶಕ್ತಿನಾಥನ ಮುಂದಿರಿಸಿ ತನ್ನ ಮೊಮ್ಮಗನಾದ ಭವಾನಿಪ್ರಿಯನಿಗೆ ಯಾ ಆತನ ಸಂತತಿಯವರಿಗೆ ಬಿಟ್ಟುಕೊಡುವೆನೆಂತ ಈ ಗುಡಾಣಗಳ ಮೇಲೆ ಕೈ ಇಟ್ಟು ಶಕ್ತಿನಾಥನಿಂದ ಪ್ರಮಾಣ ಮಾಡಿಸಿದನು. ಪ್ರಮಾಣವಚನಗಳನ್ನು ಮೂರು ಬಾರಿ ಹೇಳಿ ಮುಗಿಸುವಷ್ಟರೊಳಗೆ ಆ ಗಾಳಿಯಾಡದ ಗವಿಯಲ್ಲಿ ದೀಪದ ಜ್ಯೋತಿಯಿಂದ ಗಾಳಿ ಹೊಗೆ ಕಪ್ಪು ಹೊಗೆ ಉಸಿರಾಡಲಾರದೆ ತುಟಿ ಕಟ್ಟಿಹೋಗಲು ಶಕ್ತಿನಾಥನಿಗೆ ಪ್ರಾಣಸಂಕಟವಾಯಿತು. ದೀಪದ ಜ್ಯೋತಿಯು ಕುಂದುತ್ತ ಬಂದು ಅದು ಕಡೆಗೆ ಪೂರ್ಣ ನಂದಿ ಹೋಯಿತು. ಕತ್ತಲೆಯಲ್ಲಿ ಗವಿಯ ಏಣಿ ಮೆಟ್ಟುಗಳನ್ನು ಹತ್ತಿ ಹೋಗುತ್ತಿದ್ದ ಬ್ರಹ್ಮಯ್ಯನವರನ್ನು ಕೂತಕೊಂಡಲ್ಲಿಯೇ ನೋಡುತ್ತಿದ್ದನು. ಆದರೆ ಕೈಕಾಲು ಅಲ್ಲಾಡಿಸಲು ಸಾಮರ್ಥ್ಯವಿರಲಿಲ್ಲ. "ಅಜ್ಜಯ್ಯ, ನೀನು ಎಲ್ಲಿಗೆ ಹೋಗುವಿ" ಎಂತ ಆ ಹುಡುಗನು ಬ್ರಹ್ಮಯ್ಯನವರನ್ನು ವಿಚಾರಿಸಿದನು.

"ನಾನು ಇಲ್ಲಿಂದ ಈಗ ಹೋಗಿಬಿಡುತ್ತೇನೆ. ನೀನು ಇಲ್ಲಿಯೇ ಇದ್ದುಕೊ. ಬ್ರಹ್ಮಯ್ಯನ ಮೊಮ್ಮಗ, ನೀಲಕಂಠನ ಮಗ ಭವಾನಿಪ್ರಿಯ. ಈ ಹೆಸರನ್ನು ಎಂದೂ ಮರೆತುಬಿಡಬೇಡ" ಎಂತ ಹೇಳಿ ಗವಿಯ ಬಾಗಿಲನ್ನು ಬ್ರಹ್ಮಯ್ಯನವರು ತಪ್ಪಿಸಿಬಿಟ್ಟರು.

"ಅಯ್ಯೋ! ನನ್ನ ತಂದೆಯು ಎಲ್ಲಿ! ಅವನ ಹತ್ತಿರ ನನಗೆ ಹೋಗಬೇಕು ಅಜ್ಜಯ್ಯ, ನನ್ನನ್ನು ಇಲ್ಲಿಂದ ತೆಗಿ, ರಕ್ಷಿಸು! ತಂದೆಯೇ, ನೀನೆಲ್ಲಿರುವಿ!" ಎಂತ ಮುದುಕನನ್ನು ಶಕ್ತಿನಾಥನು ಎಷ್ಟು ಬೇಡಿಕೊಂಡರೂ ಫಲವಿಲ್ಲದೆ ಹೋಯಿತು.

ಮುದುಕ ಬ್ರಹ್ಮಯ್ಯನವರು ಗವಿಯಿಂದ ಮೇಲಕ್ಕೆ ಏರುತ್ತಲೆ ಗವಿಯ ಬಾಯಿಗೆ ಮೊದಲಿದ್ದ ಶಿಲೆಕಲ್ಲನ್ನು ಮುಚ್ಚಿಬಿಟ್ಟು ಅದರ ಮೇಲೆ ಮೊಗಕಾಲೂರಿ ಶಿಲೆಕಲ್ಲಿಗೆ ಕಿವಿಯನ್ನಿರಿಸಲು ಶಕ್ತಿನಾಥನು, "ತಂದೆಯೇ!" ಎಂಬನ್ನ ಆರ್ತಧ್ವನಿಯು ಬ್ರಹ್ಮಯ್ಯನವರಿಗ ಕೇಳಿಸಿತು. ಅನಂತರದಲ್ಲು ಬಾರಬಾರಿ ಮತ್ತೂ ಕೆಲಕ್ಕೆ ಬಿದ್ದಂತೆ 'ದಬಂ' ಎಂಬ ಶಬ್ದವು ಕೇಳಿಸಿತು! ಆ ಮೇಲೆ ಗವಿಯಿಂದ ಶಬ್ದವೇನೂ ಕೇಳಿಸಲಿಲ್ಲ. ಎಲ್ಲವೂ ಶಾಂತವಾಗಿತ್ತು!

ಈ ರೀತಿ ಶಕ್ತಿನಾಥನನ್ನು ಪ್ರೇತ ರೂಪದಲ್ಲಿ ತನ್ನ ದ್ರವ್ಯಕ್ಕೆಲ್ಲಾ ದೃಷ್ಟಿಯಾ ನಿಕ್ಷೇಪಧಾರಿಯನ್ನಾಗಿ ಮಾಡಿ ಆ ಗವಿಯ ಮೇಲೆ ಕಲ್ಲುಮಣ್ಣನ್ನು ಹಾಕಿ ಗಿಡಪೊದೆಗಳನ್ನು ನಟ್ಟನು. ಈ ರೀತಿ ಕಲ್ಲುಮಣ್ಣನ್ನು ಗವಿಯ ಮೇಲೆ ಹಾಕುತ್ತಿದ್ದಾಗ ಗವಿಯಿಂದ ಶಬ್ದವೇನಾದರೂ ಕೇಳಿಸುತ್ತದೊ ಎಂತ ಆಗಿಂದಾಗ್ಗೆ ಗವಿಯ ಮೇಲೆ ಕಿವಿಯಿಟ್ಟು ನೋಡುತ್ತಿದ್ದನು. "ತಂದೆಯೇ!" ಎಂಬ ಶಬ್ದವು ಸ್ಪಷ್ಟವಾಗಿಯೂ ಆ ಗವಿಯಿಂದ ಕೇಳಿಸದಿದ್ದರೂ ಭ್ರಮೆಯಲ್ಲಿ ಆತನಿಗದು ಕೇಳಿದ ಹಾಗಾಗುತ್ತದೆಂತ ಕಾಡಿನಲ್ಲಿ ಸೂರ್ಯೋದಯವಾಗುವ ವರಿಗೂ ಗವಿಯ ಮೇಲೆ ಮಣ್ಣನ್ನು ಹಾಕುತ್ತಾ ಇದ್ದು ಸೂರ್ಯೋದಯವಾದ ನಂತರ ಅಲ್ಲಿಂದ ಮನೆಗೆ ತೆರಳಿದನು. ಮನೆಗೆ ಹೋಗುತ್ತಿದ್ದಾಗಲೂ "ತಂದೆಯೇ" "ತಂದೆಯೇ" ಎಂಬ ಶಬ್ದವು ಆತನಿಗೆ ಆಗಿಂದಾಗ್ಗೆ ಕೇಳಿಸುತ್ತಿತ್ತು.

ಕಾಡಿನಿಂದ ಗದ್ದೆಮಾರ್ಗವಾಗಿ ಸ್ವಲ್ಪ ದೂರ ಹೋಗುವಷ್ಟರಲ್ಲಿಯೇ ಬ್ರಹ್ಮಯ್ಯನವರನ್ನು ನಿಜವಾಗಿಯೂ ಯಾರೋ ಹಿಂದಿನಿಂದ "ತಂದೆಯೇ" ಎಂತ ಕರೆದುಬಿಟ್ಟರು. ಹಿಂತಿರುಗಿ ನೋಡಲು ತನ್ನ ಮಗನಾದ ನೀಲಕಂಠನು ಆತನ ಹಿಂದಕಡೆ ಇದ್ದನು.

"ತಂದೆಯೇ ನನ್ನ ಮಗ ಭವಾನಿಪ್ರಿಯನು ನಿಮ್ಮೊಡನೆ ವಾಸಿಸಿಕೊಂಡಿರುವನೆಂದು ಕೇಳಿರುವೆನು. ಆತನನ್ನು ಹಿಂದಕ್ಕೆ ನನ್ನೊಡನೆ ತಕ್ಕೊಂಡು ಹೋಗಲಿಕ್ಕೆ ಬಂದಿರುತ್ತೇನೆ" ಎಂದು ನೀಲಕಂಠನು ಬ್ರಹ್ಮಯ್ಯನವರಿಗೆ ತಿಳಿಸಲು—"ಏನು! ನಿನ್ನ ಮಗ" ಎಂತ ವಿಕಾರ ಆಕೃತಿಯನ್ನು ಹೊಂದಿ ಕಣ್ಣುಗಳನ್ನು ಗರಗರನೆ ತಿರುಗಿಸಿ ಬ್ರಹ್ಮಯ್ಯನವರು ನೀಲಕಂಠನನ್ನು ದಿಟ್ಟಿಸುತ್ತಿದ್ದರು.

"ನನ್ನ ಮಗ, ಭವಾನಿಪ್ರಿಯನು. ಅವನಿಗೆ ಶಕ್ತಿನಾಥನೆಂಬ ಹೆಸರನ್ನಿಟ್ಟಿರುವೆನು. ನಾನು ಸೋಮನಾಥನೆಂಬ ನಾಮವನ್ನು ಧಾರಣೆಮಾಡಿಕೊಂಡಿರುವೆನು. ನಿನ್ನ ಅತುಳ ಕೀರ್ತಿಯು ನೆರೆಯಲ್ಲೆಲ್ಲಾ ಬೀರಿರುವುದರಿಂದ ನಮ್ಮ ಮೂಲವನ್ನೇ ಅಡಗಿಸಿಕೊಂಡು ಹೆಸರುಗಳನ್ನು ಬದಲಾಯಿಸಿಕೊಂಡಿರುವೆವು. ನಾವು ನಿನ್ನವರೆಂದು ಜನರು ತಿಳಕೊಂಡರೆ ನಮಗೆ ನೀರುನೆಳಲೂ ಸಹಾ ದೊರಕದು ಏನಹಾ ನಮ್ಮ ಹೆಸರುಗಳನ್ನು ಸಹಾ ತೆಗಿಯುವುದು ಅಪಶಕುನವೆಂದರಿಯುವರು."

ಈ ಮಾತುಗಳನ್ನು ಕೇಳುತ್ತಲೇ ಬ್ರಹ್ಮಯ್ಯನು ಸಿಡಿಲುಬಡಿದವನ ಹಾಗೆ ಮೂರ್ಛಿತನಾಗಿ ನೆಲಕ್ಕೆ ಬಿದ್ದನು. ಸ್ಮೃತಿಯನ್ನು ಹೊಂದಿದ ನಂತರ ಮಗನೊಂದಿಗೆ ಆ ಗವಿ ಇದ್ದಲ್ಲಿಗೆ ಹೋಗಿ ಮಗನಿಗೆ ಆ ಗವಿಯಿಂದ "ತಂದೆಯೇ!" ಎಂಬ ಆರ್ತಧ್ವನಿಯು ಕೇಳಿಸುತ್ತದೋ ಎಂತ ಕೇಳಿದನು. ಆದರೆ ಅಂಥಾ ಧ್ವನಿ ಏನಾದರೂ ಕೇಳಿಸುವುದಿಲ್ಲ ಎಂತ ಮಗ ನೀಲಕಂಠನಿಂದ ನಿರ್ಧರಿಸಿಕೊಂಡು ಮನೆಗೆ ಅಲ್ಲಿಂದ ಹೊರಟುಹೋದನು.

ಅಂದಿನಿಂದ ನಾಲ್ಕಾರು ವರುಷಗಳವರೆಗೆ [illegible] ದಿನಗಳಲ್ಲಿ ಅತ್ತ ಹೋಗಿ ಶಕ್ತಿನಾಥ [illegible] ತಂದೆಯೇ ಎಂಬ ಆರ್ತಧ್ವನಿಯು [illegible]

ಎಂತ ಕೇಳುತ ಕೇಳುತ ಸರ್ವರ ಪರಿಹಾಸ್ಯ ನಿಂದೆಗೂ ಅಸಹ್ಯವಾದ ಪಾಪರಾಶಿಗೂ ಗುರಿಯಾಗಿ ಅಲೆದಾಡುತ್ತಿದ್ದನು. ನಾಲ್ಕೈದು ವರುಷಗಳಲ್ಲಿ ಒಂದಾನೊಂದು ದಿನ ಬ್ರಹ್ಮಯ್ಯನವರು ತಮ್ಮ ನಿರ್ಜನವಾದ ಮನೆಯಲ್ಲಿ ಮರಣ ಸಂಕಟದಲ್ಲಿದ್ದಾಗ ಗವಿಯಲ್ಲಿ ಶಕ್ತಿನಾಥನಿಗೆ ಆದಂತೆಯೇ ಈ ಪ್ರಪಂಚದ ಬೆಳಕು ಅವರ ದೃಷ್ಟಿಗೆ ಅಗೋಚರವಾಗುತ್ತ ಮೊಬ್ಬು ಹೆಚ್ಚಾಗಿ ಕವಿಯುತ್ತ ಒಂದು ಉಸಿರು ಕಟ್ಟಿ ಹೋಗಿ ಪ್ರಾಣೋತ್ಕ್ರಮಣವಾಗುವ ವೇಳೆಯಲ್ಲಿ ಭ್ರಮೆಯಿಂದ ಹಾಸಿಗೆ ಮೇಲೆ ಎದ್ದು ಕೂತುಕೊಂಡು ಕೈಯನ್ನು ಮೇಲೆಕ್ಕೆತ್ತಿ "ಶಕ್ತಿನಾಥನೇ, ಆ [illegible] ಎಲ್ಲಿರುವುದು" ಎಂದು ಕೂಗಿಟ್ಟರು.

ಬ್ರಹ್ಮಯ್ಯನು ಬಿದ್ದಿದ್ದ ಈ ಭಯಂಕರವಾದ [illegible]ಯಿಂದ ಮೇಲಕ್ಕೆ [illegible] ಯನ್ನು ಕಾಣದೆ, ದೃಷ್ಟಿಗೋಚರವಾಗುವ ಬೆಳಕೂ ಉಸಿರಾಡಲಿಕ್ಕೆ ಬೇಕಾದ ಪ್ರಾಣವಾಯುವೂ ಇಲ್ಲದೆ, [illegible] ಅಂತ್ಯವಿಲ್ಲದ [illegible] ಈ ಪ್ರಪಂಚದ [illegible]

ಕಿಂಡರ್‌ಗಾರ್ಟನ್ ಕ್ರಮ

[illegible] ಮಕ್ಕಳಿಗೆ [illegible] ತಮ್ಮ [illegible] ಗ್ರಾಹ್ಯವಾ[illegible] ಕಿಂಡರ್‌ಗಾರ್ಟನ್ [illegible] ಪಂಚೇಂದ್ರಿ[illegible] ಮಕ್ಕಳ [illegible] ಪ್ರಯತ್ನಿಸ[illegible]

[illegible] ಈ ಕ್ರಮವನ್ನು [illegible] ಈ ಕ್ರಮವು [illegible] ಗಳಲ್ಲಿ ಈ ಕ್ರಮವ[illegible] ಆದ್ದರಿಂದ ಕಿಂಡರ್‌ಗಾರ್ಟನ್ ಕ್ರಮವನ್ನು ಕುರಿತು ಪ್ರಸ್ತಾಪಿಸುವುದು ಸರ್ವರಿಗೂ ಉಪಯೋಗಕರವೇ [illegible]

ಭೃಂಗಾಮಲಕ ತೈಲ ಸೀಸೆ	„	[illegible] 1-0-0
ಕಸ್ತೂರಿ ಮಾತ್ರೆ ಸೀಸೆ	„	0—[illegible]

ಎಲ್. ಎ. ಶ್ರೋರುವಾಲ್

ಪೇಟೆ, ಬೆಂಗಳೂರು ಸಿಟಿ.

ಜಾತಕ ಫಲ ಚಿಂತಾಮಣಿ

[illegible] ಪುಸ್ತಕವು ಕರ್ನಾಟಕ ದೇಶೀಯರೆಲ್ಲರ ಉಪಯೋಗಕ್ಕಾಗಿ ಪಂಡಿತರಿಂದ ತಾತ್ಪರ್ಯ ಸಹಿತವಾಗಿ [illegible] ಸಿದ್ಧವಾಗಿದೆ ಕ್ರಯ 0—12—0 ಪೋಸ್ಟು ಚಾರ್ಜ 0—1—0 [illegible] ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಕ್ರಮ [illegible] ದೊರೆಯುತ್ತೆ

ಹೆಚ್ ಎನ ರಾವ್ ಬ್ರದರ್ಸ್,

[illegible] ಬೆಂಗಳೂರು ಸಿಟಿ.

"ವಿದ್ಯಾನಂದ" ಗ್ರಂಥಮಾಲಾ

[illegible]

"ರಘುವಂಶ ಮಹಾಕಾವ್ಯ"

[illegible] ಸಂಸ್ಕೃತ [illegible] ಶಬ್ದ ಅನ್ವ [illegible] ವ್ಯಾಕರಣ ವಿ [illegible] ಪ್ರತಿ [illegible] 1—[illegible]—0

ಮುಕುಂದಮಾಲಾ ಸ್ತೋತ್ರ

[illegible] ಪ್ರತಿ [illegible] ತಾತ್ಪ [illegible] 0—1—0

ವಿಳಾಸ [illegible] ಮ್ಯಾನೇಜರ್

ವಿದ್ಯಾನಂದ ಆಫೀಸು,

[illegible] ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ.

[illegible] ಮಹಾರಾಣಿಯವರು—ಅವರು ಉಪಯೋಗಿಸ[illegible] ತೈಲಗಳಲ್ಲೆಲ್ಲಾ ಇದೇ [illegible]

[illegible] ಮಹಾರಾಣಿಯವರು—ಅವರು ಇನ್ನು [illegible] ಉಪಯೋಗಿಸುತ್ತಾರೆ

[illegible] ಮಹಾರಾಣಿಯವರು—ಇದನ್ನು ಅವರ [illegible] ಉಪಯೋಗಿಸುತ್ತಾರೆ

[illegible] ತಿಲಕರವರು—ಇದು ಅನೇ [illegible] ಶಿಫಾರಸು ಮಾಡ [illegible]

[illegible] ಯವರು—ನಾನು ಉಪಯೋಗಿ[illegible] ಇವನ್ನು ಉಪಯೋ [illegible]

ಕುಂತಳ ಕೌಮುದಿ ತೈಲ ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ [illegible] ಅತ್ಯಂತ [illegible] ಅತ್ಯಾಶ್ಚರ್ಯ ಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ [illegible] ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳ ದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು [illegible] ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್ ಸಿ ಸೆನ್, ಎಲ್. ಎಮ್. ಎಸ್,

216 ಕಾರನ್‌ವಾಲಸ್ ಬೀದಿ ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ — "ಕೌಮುದಿ"

ಮೈಸೂರು ಪ್ರಾಂತಕ್ಕೆ ಏಜಂಟರು:—ಎಲ್. ಎ. ಶ್ರೋರುವಾಲ್ ಎಂಡ್ ಕೊ,

ಪೇಟೆ, ಬೆಂಗಳೂರು.

ದಕ್ಷಿಣ ಕನ್ನಡಕ್ಕೆ ಏಜಂಟರು:—ಮೆ| ರಾ| ರಾ| ಸಿ ಆರ್. ಕಾಮತರು,

[illegible] ಮಂಗಳೂರು.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್

1897ರಲ್ಲಿ ಸ್ಥಾಪಿಸಲ್ಪಟ್ಟಿತು.

ವಿಲಾಯತಿ ಔಷಧ ವ್ಯಾಪಾರಸ್ಥರು.

ದಿವಸ ರಾತ್ರಿಗಳ ಎಲ್ಲಾ ಸಮಯದಲ್ಲಿಯೂ ಡಾಕ್ಟರರುಗಳಿಂದ ಸಮೂದಿಸಲ್ಪಡುವ ವಿಧಾನದಲ್ಲಿ ಔಷಧಿಗಳ ಮಿಶ್ರಣಗಳನ್ನು ಉತ್ಕೃಷ್ಟವಾದ ರೀತಿಗಳಲ್ಲಿ ಮಾಡಿಕೊಡುವರು

ಪ್ರಖ್ಯಾತ ಜಿಲ್ಲಾ ಡಾಕ್ಟರರುಗಳಿಂದ [illegible] ಡಾಕ್ಟರ್ ಸಂಜಾನಾ ಅವರು ಟ್ರೇಡಿಂಗ್ ಎಸೋಸಿಯೇಶನ್ ವಿಷಯ ಈ ರೀತಿ ಬರೆಯುವರು:

I have had dealings with the Mangalore Trading Association as chemists during my stay at Mangalore and it gives me pleasure to certify that the Association has given me every satisfaction. My prescriptions have been [illegible] and the drugs supplied have been of very good quality.

Mangalore
20th March 190[illegible]

K C SANJANA Lt Col I. M S.
[illegible] Medical Sanitary Officer,
S. CANARA.

ಫಲ್ಲ್ಯಾ ಸೀರಪ್, [illegible] ಸೀರಪ್, [illegible] ಮೊದಲಾದ ವಿಲಾಯತಿ [illegible] ತಯ್ಯಾರಿಸಲ್ಪಟ್ಟ ಪೇಟೆಂಟ್ ಯಾ [illegible] ಔಷಧಿಗಳು, [illegible], [illegible], ನೆಸಲ್ಸ್ ಮಿಲ್ಕ್ ಮೊದಲಾದ ಆಹಾರ ಸಂಗ್ರಹಗಳು, [illegible] ಮೊದಲಾದ [illegible] ಸಾಮಾನುಗಳು ಟ್ರೇಡಿಂಗ್ ಎಸೋಸಿಯೇಶನಲ್ಲಿ ಕ್ರಯಕ್ಕೆ ದೊರೆಯುತ್ತವೆ.

ಔಷಧಿ ಮಿಶ್ರಣಗಳ ತಯ್ಯಾರಿ ಮೊದಲಾದವು [illegible] ಡಾಕ್ಟರರ [illegible] ಮಾಡಲ್ಪಡುವವು.

ರೋಗಿಗಳು ನಮ್ಮ [illegible] ತಮ್ಮ ರೋಗ [illegible] ಅನುಸರಿಸಬೇಕಾದ ಚಿಕಿತ್ಸಾ ನಿಯಮಗಳನ್ನು ನಮ್ಮ ಡಾಕ್ಟರುಗಳಿಂದ [illegible] ಮಾಡಿಕೊಡುತ್ತೇವೆ.

ನಮ್ಮ [illegible] — ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
[illegible] ಮಂಗಳೂರು, ದ. ಕ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ ಇತ್ತ ಕಡೆ ಲಕ್ಷ ಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್ ಕವರ	ಹಾಫ್ ಬೈಂಡ	ಫುಲ್ ಬೈಂಡ್
(ಪಕ್ಕೆ ಮಾರ್ಬಲ್ [illegible])	([illegible])	(ಪೂರ್ಣ ಚರ್ಮ.)

[illegible]

[illegible] ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಡುವವು

[illegible]

[illegible] ತಯ್ಯಾರಿಸಲ್ಪಟ್ಟಿರುತ್ತವೆ
[illegible] ಪುಸ್ತಕಗಳನ್ನು [illegible] ತಯ್ಯಾರಿಸುವವು

ಲೆಕ್ಕದ ಪುಸ್ತಕಗಳನ್ನು [illegible]

ಸಾಹುಕಾರರಿಗೆ ಬೇಕಾದ ಮಾಹಿತಿ:

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗಿ ತರಿಸಿದ ಉತ್ಕೃಷ್ಟವಾದ [illegible] ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ [illegible] ತಯ್ಯಾರಿಸಿಕೊಡುವೆವು

ನಮ್ಮ ದರಗಳಿಗೆ [illegible] ಮೆನೇಜರ್,
ಶಾರದಾ ಮುದ್ರಾಲಯ, ಮಂಗಳೂರು.

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.
ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ವಾಚುಗಳಲ್ಲಿ ಅಚ್ಚು ಹಾಕುವುದು
ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಜಿಸ್ಟರುಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.
ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರೆಯುವ ವಿಳಾಸ:— [illegible] ಮ್ಯಾನೇಜರ್,
ಮಂಗಳೂರು [illegible] ಎಸೋಸಿಯೇಶನ್. ಮಂಗಳೂರು.

Printed by V. S. Kamath, at the Mangalore Trading Association's Sharada Press Mangalore,

ಸ್ವದೇಶಾಭಿಮಾನಿ

ಪ್ರತಿಶುಕ್ರವಾರವೂ ಪ್ರಕಟಿಸಲ್ಪಡುವುದು.

ಮುಂದೆಗಡದ — ವರ್ಷಕ್ಕೆ ರೂ 1 4 0 ಟಪ್ಪಾಲು ಹಾಸಲು ಸೇರಿ ರೂ 2 1 0

[illegible] 4 ಮಂಗಳೂರ ತಾರೀಕು 12ನೇ ಶುಕ್ರವಾರ ಅಗೋಸ್ತು 1910 ಸಂಚಿಕೆ 32

Amrutanjan Depot Fort Bombay.

ಅಮೃತಾಂಜನ

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಯ ಮುಲಾಮು ಇದರಿಂದ ವಾತ ಸಂಧಿವಾತ, ತಲೆನೋವು ಶಿರಶೂಲೆ ಉಬ್ಬಸ ಗಂಟಲು ನೋವು ಬೆನ್ನು ಸೊಂಟದ ನೋವು ಜಜ್ಜು ಉಳುಕು ಘಾಯ ಶೀತ ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು. [illegible] ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪುರದ ಮಹಾ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಬಂಗಾರದ ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಲ್ಲಾ ಊರಿನ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು. [illegible] ಗದ ಕಿಮ್ಮತ್ತು ೬ ಆಣೆ

ಗಜಕರ್ಣದ ಮುಲಾಮು.

ಕಿಮ್ಮತ್ತು ಆರು ಆಣೆ ಈ ನಮೂನೆ ಡಬ್ಬಿ

ಕಿಮ್ಮತ್ತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಗಜ್ಜಿಯು ನಾಶವಾಗುವದು. ಇದರಿಂದ ಉರಿಯು ಬರುವದಿಲ್ಲ, ಬಟ್ಟೆ ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿಯಬರುವದು. ನೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿಗೆ ಕಿಮ್ಮತ್ತು 6 ಆಣೆ ೧೨ ಡಬ್ಬಿ ರೂ 4

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿನೋಡಿದಲ್ಲಿ [illegible] ಡಬ್ಬಿಗದ ಕಿಮ್ಮತ್ತು [illegible] ಆಣೆ

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ಹಾಗಿಸುವದರಿಂದ ಕೂದಲುಗಳು ಕಪ್ಪಾಗಿ [illegible]ವಾಗಿಯೂ ಬೆಳೆಯುವವು. ಇದಕ್ಕೆ ಮನೋಹರವಾದ ಪರಿಮಳ [illegible] ಇದೆ. ಬಾಟ್ಲಿ ಒಂದರ ಕಿಮ್ಮತ್ತು ರೂ 1

ಖಜ್ಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತ್ತು 3 ಆಣೆ

ವಜ್ರಗುಟಿಕೆ

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ. ರಕ್ತ ಶುದ್ಧವಾಗಿ ದೇಹದಲ್ಲಿ [illegible] ಕೊಡುತ್ತದೆ. [illegible]ದಲ್ಲಿ ಹೆವೆಯಿಸ ಕೊಕೊ ಲೆಸೆತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ. ೫೦ ಗುಟಿಕೆಗಳ ಡಬ್ಬಿಗದ ಕಿಮ್ಮತ್ತು ರೂ. 1

ಸುಂದರಿ ತೈಲ.

ಇದನ್ನು ಮೋರೆಗೆ ಹಾಗಿಸುವದರಿಂದ ಮುದ್ದುಗಳೂ ಕಪ್ಪು [illegible] ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು. ಬಾಟ್ಲಿ ಒಂದರ ಕಿಮ್ಮತ್ತು ೬ ಆಣೆ

ಗುಲಾಬು ಮಾತ್ರೆ

ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ.

[illegible] — ಅಮೃತಾಂಜನ ಡಿಪೋ ಫೋರ್ಟ್, ಮುಂಬಯಿ.

ಬೆಂ[illegible]

ನವೀನ ಶೃಂಗಾರ [illegible] ಕಥೆ.

ನೀವು? ಶೃಂಗಾರ ಮತ್ತು ಚಮತ್ಕಾರವಾಗಿರುವ ಕಥೆಯನ್ನು ಓದಬೇಕಾಗಿ ಅಭಿಲಾಷೆ ಇದ್ದರೆ ಮೇಲ್ಕಂಡ ಕಥೆಗೆ ಸಮಾನವಾದ ಕಥೆ ಯಾವುದೂ ಇಲ್ಲ. ಕ್ರಯ ಹಾಸಲ್ ಸಹಾ [illegible] ಆಣೆ

ಮತ್ತು ನಮ್ಮಲ್ಲಿ ಕನ್ನಡ, ತೆಲುಗು, ಸಂಸ್ಕೃತ ಪುಸ್ತಕಗಳು, ಶತಮಾಯಿಯಿಂದ ಊದಬತ್ತಿಗಳು, ಹುಸಿಗಂಧ [illegible], ಪನ್ನೀರು, ತರಹವಾರಿ, ಜವಳಿ ಸಹಾ ದೊರಿಯುವದು ಅಲ್ಲದೆ, ಇತರ ಯಾವ ಪದಾರ್ಥಗಳು ಬೇಕಾದರೂ ನಂಬಿಕೆಯಿಂದ ಕಮಿಷನಿಗೆ ರವಾನೆ ಮಾಡುವೆವು ಒಂದಾವರ್ತಿ ತರಿಸಿ ನೋಡಿದರೆ ಗೊತ್ತಾಗುತ್ತೆ. ನಮ್ಮ ಕಂಪೆನಿ ಕೆಟಲಾಗ್ ಮುಫತ್ತಾಗಿ ದೊರಯುವದು

ಜಿ ಯನ್ ಶ್ರೀನಿವಾಸ ಶೆಟ್ಟಿ, ಬುಕ್‌ಡಿಪೋ,
ಚಿಕ್ಕಪೇಟೆ, ಬೆಂಗಳೂರು ಸಿಟಿ

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ - ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯುಳ್ಳವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನಗಳುಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೆ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ, ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ — ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ ನಾನಾತರದ ದೃಷ್ಟಿ ಚಕ್ರಗಳನ್ನು ಅಲ್ಪ ಪೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜೆಂಟ್, ಮಂಗಳೂರು, ದ ಕನ್ನಡ.

ಎಂಬ ಗುಣಕಾರಿ ದಂತಮಂಜನವು

ದಂತೆಗಳ ವಸಡಿಯಲ್ಲಿ ಆಗುವ ವ್ರಣ ಹಲ್ಲುಗಳನ್ನು ಹುಳು ತಿನ್ನುವುದು ಹಲ್ಲುನೋವು, ದಂತಮಾಲೆಗಳ ಎಡೆಯಿಂದ ರಕ್ತ ಬರುವದು, [illegible] ಮೊದಲಾದ ರೋಗ ಬಾಧೆಗಳನ್ನು ದಂತಕಾಂತಿ ಚೂರ್ಣದ [illegible] ಉಪಯೋಗದಿಂದ ನಿಶ್ಚಯವಾಗಿ ಹೋಗಲಾಡಿಸಿಕೊಳ್ಳಬಹುದು ಹಲ್ಲುಗಳಲ್ಲಿ [illegible] ಮೊದಲಾದ್ದು ಈ ಚೂರ್ಣ ಉಪಯೋಗದಿಂದ [illegible] ಜನಿಸುವುದು. ಹಲ್ಲುಗಳು ತಮ್ಮ [illegible] ಬಾಯಿಯು ಇದರಿಂದ ಉಂಟಾಗುವುದು [illegible] ಹುಳುಗಳ ಪೀಡೆಯೂ ಇದರ [illegible] ಚೂರ್ಣವು ಹಲ್ಲುಗಳನ್ನು ಕೊರೆಯುವ [illegible] ಕೂಡಿಲ್ಲದೆ [illegible] ವಾಗಿರುವಂತೆ ತಯ್ಯಾರಿಸಲ್ಪಟ್ಟಿರುವುದರಿಂದ [illegible] ಹಲ್ಲುಗಳು ಸವೆಯುವು [illegible] ಹಲ್ಲುರೋಗಗಳ ಕ್ರಿಮಿಗಳನ್ನು ಈ ಚೂರ್ಣದ [illegible] ಗೊಳಿಸುವುದು ದಂತಕಾಂತಿ ಚೂರ್ಣಕ್ಕೆ [illegible] ವಾಗಿದ್ದು ಬಾಯಿಯ ಶ್ವಾಸಕ್ಕೆ [illegible] ಕರು ಈ ಚೂರ್ಣವನ್ನು ಉಪಯೋಗಿ [illegible] ಹಲ್ಲುಗಳು ಬಹಳ ಘಟ್ಟಿಯಾಗಿರುವವು

ಕರಡಿಗೆ ಒಂದಕ್ಕೆ		4 [illegible]
ಒಂದು ಡಜನ್ ಕರಡಿಗೆಗೆ		[illegible] 12
ಟಪ್ಪಾಲು ವ ಪ್ಯಾಕಿಂಗ್ [illegible] 1 ಕರಡಿಗೆ		[illegible]
	12	11

☞ ಅಚ್ಚಿನಲ್ಲಿರುವುದು !

ಇನ್ನು ಸ್ವಲ್ಪ ಸಮಯದಲ್ಲಿ [illegible]

ರೋಗಗಳ [illegible]

ಈ ಗ್ರಂಥ [illegible] ಪ್ರತಿ [illegible] ಈ ಕೆಳಗಿನ [illegible]

ಟಿ ಎಸ್ ಸುಬ್ರಮಣ್ಯಮ್ [illegible]

[illegible]

1888ನೇ [illegible] ವ್ಯಾಪಾರ [illegible] ಉತ್ತರ ವ ದಕ್ಷಿಣ [illegible] ವ್ಯಾಪಾರ [illegible] ತ್ತದೆ ಎಲ್ಲಾ ತರದ ಸಾಮಾನುಗಳನ್ನು [illegible] ವಿಶೇಷ ಮಾಹಿತಿಗೆ [illegible] ಸ್ಟಾಂಪು [illegible] ಪತ್ರವ್ಯವಹಾರ ನಡಿಸಿ ದಲ್ಲಿ ಖಾತ್ರಿಯಾಗುತ್ತದೆ

ವಿಳಾಸ — ರಂಗಪ್ಪಾ ರಾಮಕೃಷ್ಣ ಕವಿ,
[illegible] ಬಿಲ್ಡಿಂಗ್ [illegible]

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,

ಮಂಗಳೂರು, ದ ಕ

ನಮ್ಮಲ್ಲಿ ಎಲ್ಲಾ ತರದ ಚೀಟು ಒಟ್ಟ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸ ವೇರ, ಒಯಲ್‌ಮೆನ್ ಸ್ಟೋರ್ಸ ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು, ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

ಬಹುಮಾನ! ಬಹುಮಾನ! ಬಹುಮಾನ!

THE KALA-NIDHI MANGALORE,

(ಪ್ರೈಜ್ 1ಕ್ಕೆ [illegible])

ಬರುವ ದಶಂಬರ ತಿಂಗಳ ವರೆಗೆ ಮಾತ್ರ ೪ ರೂಪಾಯಿಗಳ ಶಾಯಿ ಪೊಟ್ಲಗಳನ್ನು ತೆಗದುಕೊಳ್ಳುವವರಿಗೆ ಒಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ ಕೇಲೆ [illegible]

[illegible] ಶಾಯಿಯು ಮೇಲ್ಗಡೆ ಬೂಚು [illegible] ವದು

ಬಹುಮಾನಗಳ ವಿವರ [illegible] ವವರಿಗೆ ಸುಗಂಧ ದಂತ [illegible] ಫೇಬರ್ ಪೆನ್ಸಿಲ್ ಡಜನ್ ೧, [illegible] ಬನಿಯನ್ ೧; [illegible] ರೂಪಾ [illegible] ೧, ೪ ರೂಪಾಯಿಗಳದ್ದು [illegible] ಕಿಸ ಘಡಿಯಾರವು ಗ್ಲಾಸ್ [illegible]

[illegible] ಶಾಯಿಯ [illegible] ಪ್ರತ್ಯೇಕ

[illegible] — ಕಲಾನಿಧಿ ಮಂಗಳೂರು

ಅಡವಾ ದಿ [illegible] ನಂಬ ೧ ಮಂಗಳೂರು (ದ ಕ)

ಪೈಟ್ ಪೆರಲ್

([illegible])

[illegible] ಇರುವೆದ್ದು ನೋಟಕ್ಕೆ ರಮ್ಯವಾಗಿ, [illegible] ದಿವ್ಯಾಭರಣ ವಾಗಿ ಶೋಭಿಸುವುದು [illegible] ಸುಂದರವಾಗಿ, ಥಳಥಳಿಸುವ ಈ ಸರಪಣಿ ಪ್ರತಿಯೊ [illegible] ಇಲ್ಲದಿದ್ದರೆ ಶಾಂ [illegible] ಇಲ್ಲದ ಮುಖದಂತೆ ತೋರಾಯುವಮಾನವಾಗಿರದು ಇದರ ಗುಣದಲ್ಲಿ ಎಳ್ಳಷ್ಟೂ ಸಂದೇಹ ಪಡಬೇಕಾದಿಲ್ಲ

ಸಂತೋಷಕರವಾದ ಕಾಂತಿ!
ಎಂದಿಗೂ ಕೆಡದ ಗುಣ!
ಅಂತ್ಯಂತ ಅಗ್ಗವಾದ ಬೆಲೆ!

ಸರಪಣಿ 1ಕ್ಕೆ ಕ್ರಯ 0—8—0 ಚಿಕ್ಕಸೈಜು ಧಾರಳಿ ವಾಚು 1ಕ್ಕೆ 3—8—0. ರಾಸ್ಕೋಪ್ ಲಿವರ್ ವಾಚು 1ಕ್ಕೆ 2—8—0.

ವಿಳಾಸ — [illegible]
ಆಸ್ಪತ್ರಿ ಎದುರು,
ಮಂಗಳೂರು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಖು 12ನೇ ಆಗೋಸ್ತು 1910

ವ್ಯಾಪಾರ ಅಭಿವೃದ್ಧಿ

ವ್ಯಾಪಾರ ಅಭಿವೃದ್ಧಿಯು ಪ್ರಯತ್ನಗಳು [illegible] ಸಮರ್ಪಕವಾಗಿ ನಡಿಯುವಂತೆ ತೋರುವುದಿಲ್ಲ. ಪಾಶ್ಚಾತ್ಯರ ಮೇಲುವಿಚಾರಣೆಯಲ್ಲಿರುವ ಕೆಲವು ವ್ಯಾಪಾರ-ಭಂಡಸಾಲೆಗಳ ಹೊರತು ಸ್ವೇರಿ ವ್ಯಾಪಾರವನ್ನು ನಡಿಸುವ ಕೆಲವು ವರುಷಗಳ ಬಾಳಿಕೆ ಇದ್ದ ದೇಶೀಯ ಭಂಡಸಾಲೆಗಳ ಸಂಖ್ಯೆಯು ಅತ್ಯಲ್ಪವಾಗಿರುವುದು. ಭಂಡಸಾಲೆಯ ಧನಿಯು ತನ್ನ ವೈವಾಟದ [illegible], [illegible] ಸ್ಥಿತಿಯಲ್ಲಿರುವುದು, ಗಿರಾಕಿಗಳು [illegible] ಸಾಮಾಗ್ರಿಗಳನ್ನು ಕೈದರೆ ಮಾತ್ರ ಸಾಕೋ, ಹಣ ವಸೂಲಿ ಹ್ಯಾಗೆ [illegible] ಯಾವ [illegible]ಡುಗಳನ್ನು [illegible], ಲೆಕ್ಕ [illegible] ಕ್ರಮವೇನು, [illegible] ವಿಚಾರಗಳನ್ನು ತುಸ ಸಮಯವಾದರೂ ಮಾಡದೆ ನಾಲ್ಕಾರು [illegible]ನರನ್ನು ಮೇಸ್ತ್ರಿಗಳ ಸಹಾಯಕ್ಕಾಗಿ ಕೊಟ್ಟು ವ್ಯಾಪಾರಕ್ಕೆ [illegible] ಅವರ ಸರ್ವ ವಿಷಯಗಳನ್ನು ಬಿಟ್ಟುಬಿಟ್ಟು ವೈವಾಟ ನಡಿಸುವವರು ಕೆಲವರುಂಟು. ಸಮಯಾನುಸಾರ ಯಜಮಾನನ ಮನೆ ಆಡಳಿತೆಯನ್ನು ಸಹಾ ಈ ಮೇಸ್ತ್ರಿಗಳೇ ನೋಡಿಕೊಳ್ಳುವರು. ತಾವು ಬೇಸದಿಂಯಿರುವ ತನಕ [illegible] ತಾವು ಕೈಕೊಂಡಿರುವ ವ್ಯಾಪಾರ ವೃತ್ತಿಯನ್ನು ಉಚ್ಚ ಸ್ಥಿತಿಗೆ ತಂದು, ತಮ್ಮ ನಂತರ ಸಹಾ ತಮ್ಮ ಭಂಡಸಾಲೆಯ ವೈವಾಟಗಳು ಸರಿಯಾಗಿ ನಡಿಯುವಂತೆ ಮಾಡಬೇಕಾದ ಏರ್ಪಾಡುಗಳನ್ನು ಮಾಡುವಷ್ಟು ದೂರದೃಷ್ಟಿಯಿಲ್ಲದವರು ಕೆಲವರುಂಟು. ಇವರಿಗೆ ವ್ಯಾಪಾರ ಮಹಿಮೆ ಏನು, ವ್ಯಾಪಾರದಿಂದ ಅನ್ಯ ಜನಾಂಗಗಳು ಪ್ರಸ್ತುತದಲ್ಲಿ ಎಂಥಾ ಅಸಮಾನ ಶ್ರೇಷ್ಠತೆಯನ್ನು ಹೊಂದಿರುವರು. ದೇಶಾಭಿವೃದ್ಧಿಗೆ ವ್ಯಾಪಾರವು ಹ್ಯಾಗೆ ಮುಖ್ಯ ಕಾರಣವಾಗಿರುವುದೋ ವಿಷಯಗಳು ತಿಳಿಯಲಶಕ್ಯವಾಗಿರುವವು. ಯಾವ ವೃತ್ತಿಯನ್ನು ಮಾಡಲು ನಾಯಿವೋ ತಕ್ಕ [illegible] ಇಲ್ಲದ ಇನ್ನು ಅನೇಕರು ವ್ಯಾಪಾರಕ್ಕೆ ತರಬೇತಿ ಮೊದಲಾದವುಗಳು ಅನಾವಶ್ಯಕವೆಂತ ಅಭಿಪ್ರಾಯಪಟ್ಟು ಈ ವೃತ್ತಿಯನ್ನವಲಂಬಿಸಿ ಒಂದೆರಡು ವರುಷಗಳಲ್ಲಿ ತಮ್ಮ ಈ ನೂತನ ವೃತ್ತಿಯನ್ನು ಕೊನೆಗಾಣಿಸುವರು. ಇಂಥವರ ಸಂಖ್ಯೆಯು ವ್ಯಾಪಾರ ವರ್ಗದಲ್ಲಿ ಅಧಿಕವಾಗಿರುವುದು.

ವ್ಯಾಪಾರ ಶಿಕ್ಷಣ [illegible] ನಮ್ಮಲ್ಲಿಯ ವ್ಯಾಪಾರದ [illegible] ಕಾರಣಗಳಲ್ಲಿ ಮುಖ್ಯವಾಗಿರುವುದು. ವ್ಯಾಪಾರ [illegible] ನಮಗೆ ಇರುವುದು. ನಮ್ಮ ದೇಶದಲ್ಲಿ ವ್ಯಾಪಾರ ಸೌಕರ್ಯಗಳು [illegible] ಅನ್ಯ ಜನಾಂಗದವರು ವ್ಯಾಪಾರದಿಂದ ಪಡದಿರುವ ಉನ್ನತಿಯನ್ನು ನಮಗೆ ಇಷ್ಟೆಲ್ಲಾ ಅನುಕೂಲತೆಗಳಿದ್ದರೂ, ನಾವು ಪಡದಿರುವುದಿಲ್ಲವೆಂಬುದು ಸಹಾ ನಮಗೆ ಚನ್ನಾಗಿ ಗೊತ್ತಿರುವುದು. ಆದರೆ ವ್ಯಾಪಾರ ಶಿಕ್ಷಣದಿಂದ ಸಾಧಿಸಬಹುದಾದ [illegible] ವಿಶ್ವಾಸ ಮೊದಲಾದವುಗಳ ಮಾಹಿತಿಯು ನಮಗಿರುವುದಿಲ್ಲ.

ಪಾಶ್ಚಾತ್ಯ ದೇಶಗಳಲ್ಲಿ ವ್ಯಾಪಾರ ಕೈಗಾರಿಕೆಗಳು [illegible] ಅವುಗಳ ಅಭಿವೃದ್ಧಿಗೆ ಯಾವ [illegible] ಅವರಿಗೆ ಇದ್ದವೋ ಅವೇ ನಮಗೆ ಪ್ರಸ್ತುತ ಸಂಭವಿಸಿರುವವು. ತನ್ನ [illegible] ಪ್ರಯತ್ನಪಟ್ಟು ವ್ಯಾಪಾರ ವೈವಾಟಗಳನ್ನು ನಡಿಸಿ ಒಳ್ಳಿತಾದ ವ್ಯಾಪಾರ ಭಂಡಸಾಲೆಯನ್ನು ಸ್ಥಾಪಿಸಿದ ವರ್ತಕನ ಮಗನಿಗೆ ಆತನು ಪಡದ ಯುನಿವರ್ಸಿಟಿ ಶಿಕ್ಷಣದಿಂದ [illegible] ಮೊದಲಾದ ಪರೀಕ್ಷೆಗಳನ್ನು ಪಾಸಾದದ್ದರಿಂದ ವ್ಯಾಪಾರದಲ್ಲಿ ಅಭಾವವುಂಟಾಗಿ, ತಂದೆಯ ವೃತ್ತಿಯಲ್ಲಿ ಈತನಿಗೆ ಕ್ರಮೇಣ ದ್ವೇಷ ತೋರುವುದು. ಹೀಗೆ ವರ್ತಕನ ನಂತರ ಆತನ ಭಂಡಸಾಲೆ ಮೊದಲಾದವುಗಳು ಜೀರ್ಣ ಸ್ಥಿತಿಯನ್ನು ಹೊಂದುವವು. ಕೆಲವು ಸಂದರ್ಭಗಳಲ್ಲಿ ಇಂತಹ ಸಾವುಕಾರರ ಮಕ್ಕಳು ಎಲ್ಲಾ ವಿಧದ ವಿದ್ಯಾಭ್ಯಾಸವನ್ನು ತೊರೆದು, ತಿರುಕರಂತೆ ತಿರುಗಾಡಿ, ತಮ್ಮ ತಂದೆಯು ಅವಸಾನವಾಗುತ್ತಲೇ ಮನಸ್ಸಿಯಾದ ರೀತಿಯಲ್ಲಿ ವೈವಾಟವನ್ನು ನಡಿಸಿ, ದುಂದುಗಾರಿಕೆಯಿಂದ ಸರ್ವನಾಶವನ್ನು ಹೊಂದುವುದೂ ಉಂಟು. ಹೀಗೆ ಪಾರಂಪರ್ಯವಾಗಿ ನಡಿಸಿಬರುವ ವ್ಯಾಪಾರ ಅನುಭವವೂ, ಅದರ ಪ್ರಯೋಜನವೂ ನಮ್ಮ ಸಾಹುಕಾರರಿಗೆ ಇರುವುದಿಲ್ಲ. ಜೀವನ ಮೇಲಾಟದ ಈ ದಿನಗಳಲ್ಲಿ ಅತಿ ಸೂಕ್ಷ್ಮಬುದ್ಧಿಯವರೂ ವಿದ್ಯಾವಂತರೂ ಆದ ಇತರ ಜನಾಂಗಗಳೊಡನೆ ವ್ಯಾಪಾರ ವೈವಾಟಗಳಲ್ಲಿ ಹೋರಾಡಬೇಕಾಗಿ ಬಂದಿರುವುದರಿಂದ ಇತರ ಜನಾಂಗಗಳಂತೆಯೇ ನಾವು ಸಹ ಪ್ರಕೃತಕಾಲಕ್ಕನುಗುಣವಾದ ರೀತಿಯಲ್ಲಿ ವರ್ತಿಸುವುದು ಅಗತ್ಯ.

ಕಾಲೇಜುಗಳಲ್ಲಿ ಡಿಗ್ರಿಗಳನ್ನು ಪಡದವರಿಗೆ ಇವರ ಹೆತ್ತವರ ವೃತ್ತಿಯಲ್ಲಿ ಅನುರಾಗ ಇಲ್ಲದಿರುವುದು ಸಹಜ. ಸಾಧಾರಣ ಓದುಬರಹಗಳನ್ನು ಕಲಿತಾದೊಡನೆಯೇ ವ್ಯಾಪಾರ ಶಿಕ್ಷಣವು ಇವರಿಗೆ ದೊರಕುವಂತೆ ಮಾಡಿದರೆ ತಂದೆಯ ವ್ಯಾಪಾರ ವೃತ್ತಿಯಲ್ಲಿ ಇವರಿಗೆ ಅಭಿರುಚಿಯುಂಟಾಗುವುದು ಮಾತ್ರವಲ್ಲ, ಇವರು ಪಡದ ಶಿಕ್ಷಣ ಗುಣದಿಂದ ಅದನ್ನು ಅಭಿವೃದ್ಧಿಪಡಿಸಲು ಗೊತ್ತಾಗುವುದು.

ವ್ಯಾಪಾರ ಶಿಕ್ಷಣದ ವಿಷಯ ಹಲವರಲ್ಲಿ ಕೆಲವು ತಪ್ಪು ಗ್ರಹಿಕೆಗಳಿರುವವು. ವ್ಯಾಪಾರ ಅಂಗಡಿ ಭಂಡಸಾಲೆಗಳಲ್ಲಿ ಮಕ್ಕಳನ್ನು ತರಬೇತು ಮಾಡಿಸಿದರೆ ಸಾಕಾಗುವುದೆಂದು ಹಲವರು ಭಾವಿಸುವರು. ಆದರೆ ಸಾವಿರಾರು ಜನರು ಕೆಲಸ ಗೈಯುವ ಪಾಶ್ಚಾತ್ಯರ ಭಂಡಸಾಲೆಗಳನ್ನು ಹೋಗಿ ನೋಡಿದರೆ ಮೇಲೆ ಹೇಳಿದ ರೀತಿಯಲ್ಲಿ ತರಬೇತಿ ಪಡದಂಥವನು ದೊಡ್ಡದೊಡ್ಡ ವೈವಾಟಗಳನ್ನು ನಡಿಸಲು ಹ್ಯಾಗೆ ಅಸಮರ್ಥನೆಂಬುದು ತಿಳಿದುಬರುವುದು. ಸಾವಿರಾರು ಜನರನ್ನು ತನ್ನ ಕೈಕೆಳಗೆ ನಡಿಸಿ, ಇಡೀ ಪ್ರಪಂಚದಲ್ಲಿ ತಯ್ಯಾರಾಗುತ್ತಿರುವ ಸಾಮಾಗ್ರಿ [illegible] ಮೊದಲಾದವುಗಳ ಪರಿಮಿತಿಯನ್ನು ವಿಚಾರಕ್ಕೆ ತಂದು ಲಾಭಕರವಾದ ರೀತಿಯಲ್ಲಿ ವ್ಯಾಪಾರ ನಡಿಸುವುದು—ಈ ಬಗ್ಗೆ ವಿಶೇಷವಾದ ಶಿಕ್ಷಣ ಪಡದ ವಿನಹಾ ಅಸಾಧ್ಯವೆಂತ ತೋರುವುದು.

ವ್ಯಾಪಾರ ಶಿಕ್ಷಣದ ಚರಿತ್ರಾಂಶವನ್ನು ಪರಿಶೀಲಿಸಿದ್ದಲ್ಲಿ ಈ ಶಿಕ್ಷಣದಿಂದ ಅನ್ಯ ದೇಶಗಳು ಹ್ಯಾಗೆ ಉನ್ನತಿಯನ್ನೂ ಖ್ಯಾತಿಯನ್ನೂ ಪಡೆದಿರುವವು [illegible] ವ್ಯಕ್ತವಾಗದಿರದು. ವ್ಯಾಪಾರ ಶಿಕ್ಷಣವನ್ನು ಕ್ರಮಪಡಿಸಿ, ಈ ಬಗ್ಗೆ [illegible] ಮೊದಲು ಸ್ಥಾಪಿಸಿದವರು [illegible] [illegible] ಸ್ವೀಡರ್ [illegible] ಮೊದಲಾದ ಪಾಶ್ಚಾತ್ಯ ಪಟ್ಟಣಗಳು [illegible] ಪಟ್ಟಣಗಳಲ್ಲಿ [illegible] ವ್ಯಾಪಾರ ಶಿಕ್ಷಣಶಾಲೆಗಳನ್ನು [illegible]ದವು. ಅಮೇರಿಕದಲ್ಲಿಯೂ [illegible] ದೇಶದ [illegible]ನಿನಲ್ಲಿಯೂ [illegible] ವ್ಯಾಪಾರ ಶಿಕ್ಷಣದ ಬಗ್ಗೆ ಶಾಲೆಗಳು [illegible] ಅನೇಕ ದೇಶಗಳಲ್ಲಿ ಈ ಶಿಕ್ಷಣ ಏರ್ಪಾಡಿನಿಂದ [illegible] ಯತೋ[illegible] ತಮ್ಮತಮ್ಮ ದೇಶಗಳ ಎಲ್ಲಾ ಕಡೆಗಳಲ್ಲಿ ಸ್ಥಾಪಿಸಲ್ಪಟ್ಟುವಂತೆ ಪ್ರಯತ್ನ [illegible] ವ್ಯಾಪಾರದಲ್ಲಿಯೂ ಕೈಗಾರಿಕೆಗಳಲ್ಲಿಯೂ ಪ್ರಥಮ ಸ್ಥಾನವನ್ನು [illegible] ಅನ್ಯದೇಶೀಯರು ಆಕ್ರಮಿಸುವುದನ್ನು [illegible] ವ್ಯಾಪಾರ ಅಭಿವೃದ್ಧಿಗೆ ಮುಖ್ಯ ಕಾರಣವಾದ ವ್ಯಾಪಾರ ಶಿಕ್ಷಣ [illegible] ಪ್ರೋತ್ಸಾಹಾಗುವಂತೆ [illegible] ವ್ಯಾಪಾರ ಶಿಕ್ಷಣಕ್ಕೆ [illegible] ಗಮನಕ್ಕೊಟ್ಟು [illegible] ಇಂಗ್ಲೆಂಡಿನಲ್ಲಿ [illegible] ವ್ಯಾಪಾರ ಶಿಕ್ಷಣವು ಬಹಳ ಪ್ರಾಶಸ್ತ್ಯಕ್ಕೆ ಬಂದಿರುವುದು.

ಹಿಂದೂಸ್ಥಾನದಲ್ಲಿ ಈ ಶಿಕ್ಷಣವನ್ನು [illegible] ಬಿಟ್ಟುಬಿಟ್ಟಿದ್ದೇವೆ. ಪಾಶ್ಚಾತ್ಯರ [illegible] ಪರೀಕ್ಷೆ ಮೊದಲಾದವುಗಳ [illegible] ಶಿಕ್ಷಣ [illegible] ಅಗತ್ಯವೋ, ಹಾಗೆಯೇ ವ್ಯಾಪಾರ ವೃತ್ತಿಗೆ ಸಹಾ ಅಗತ್ಯ. ಪಾಶ್ಚಾತ್ಯ ದೇಶಗಳ ವ್ಯಾಪಾರ ಮೇಲಾಟವು ನಮ್ಮನ್ನು ಕಲ್ಲುಗಾಗಿಸುವುದರಿಂದ ಈ ಮೇಲಾಟದಲ್ಲಿ ಹಿಂದೆ ಹೋಗದೆ ನಮ್ಮ ಸ್ವಾಭಿಮಾನವನ್ನೂ, ದೇಶಾಭಿಮಾನವನ್ನೂ ಉಳಿಸಿಕೊಳ್ಳಬೇಕಾದರೆ ಅವರಂತೆಯೇ ಈ ಕಾಲದ ಶಿಕ್ಷಣ ಪದ್ಧತಿ ಮೊದಲಾದವುಗಳ ಪ್ರಯೋಜನ ಪಡಿಯಬೇಕು. ಆಗ್ಯೆ ನಮ್ಮ ವ್ಯಾಪಾರವು ಅವರಂತೆಯೇ ಅಭಿವೃದ್ಧಿ ಹೊಂದುವುದು.

ತಿಬೇತಿನಲ್ಲಿಯ ಅವಸ್ಥೆ

ಹಿಂದೂಸ್ಥಾನದ ಉತ್ತರ ಸರಹದ್ದಿನಿಂದ ತಿಬೇತಿನ ದಳೈಲಾಮರವರು, ಕೆಲವು ತಿಂಗಳುಗಳ ಹಿಂದೆ ಓಡಿ ಬಂದು ಹಿಂದೂಸ್ತಾನದ ಪ್ರಜೆಗಳನ್ನು ಸಂದರ್ಶಿಸಿ, ದಾರ್ಜಿಲಿಂಗ್‌ನಲ್ಲಿ ಈಗಲೂ ಉಳಕೊಳ್ಳುತ್ತಿರುವರೆಂಬುದು ವಾಚಕರಿಗೆ ಗೊತ್ತಿರಬಹುದು. ಅಂದಿನಿಂದ ತಿಬೇತಿಯರ ಮತ್ತು ಚೀನಿಯರೊಳಗೆ ವೈಷಮ್ಯವು ದಿನೇ ದಿನೇ ಅಧಿಕವಾಗಿ ಬರುತ್ತಿರುವುದರಿಂದ, ಬ್ರಿಟಿಷ್ ವ್ಯಾಪಾರ [illegible]ಗಳನ್ನು ಉಭಯಕಡೆಯವರ ಉಪಟಳಗಳಿಂದ ರಕ್ಷಿಸುವರೆ ಇಂಡಿಯಾ ಸರಕಾರದವರು ತಿಬೇತಿಗೆ [illegible] ಹೋಗುವರೆ ಸನ್ನದ್ಧರಾಗಲಿಕ್ಕೆ ಗುರ್ಖರವರ ಕಾಲ್ಬಲವನ್ನು [illegible]ಸುವರಾಗಿ ಕಳದ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು.

ಇತ್ತಲಾಗೆ ಇಂಗ್ಲೇಂಡಿನಲ್ಲಿ ಬ್ರಿಟಿಷ, ತಿಬೇತಿಯರ ಮತ್ತು ಚೀನಿಯರ ಪರಸ್ಪರ ರಾಜಕೀಯ ಸಮ್ಮಂಧಗಳ ವಿಷಯವಾಗಿಯೂ, ದಳೈಲಾಮರವರು ಮಿಂಟೋಪ್ರಭುಗಳಿಗೆ ಸಂದರ್ಶನಕಾಲದಲ್ಲಿ ಮಾಡಿಕೊಂಡ ವಿಜ್ಞಾಪನೆಯ ವಿಷಯವಾಗಿಯೂ, 'ಬ್ಲುಬುಕ್' ಎಂಬ ಪ್ರಕಟಣೆಯು ಪ್ರಕಟಿಸಲ್ಪಟ್ಟಿರುವುದು. ಅಂಗ್ಲೊ ತಿಬೇತಿಯರೊಳಗೆ 1904ನೇ ಸಪ್ಟಂಬರದಲ್ಲಿ ಆದ ಒಪ್ಪಂದವೂ, ಚೀನಿಯರ ಕೂಡೆ 1906ರಲ್ಲಿ ಆದ ತೀರ್ಮಾನದ ಶರ್ತಗಳೂ, 1907ನೇಯಲ್ಲಿ ಅಂಗ್ಲಾ ಳ ರುಶ್ಯಗಳೊಳಗೆ ಆದ ಕನ್ವೆಷನ್ ಯಾ ಒಪ್ಪಂದದಲ್ಲಿ ತಿಬೇತಿ ಸಮ್ಮಂಧವಾದ ಶರ್ತಗಳೂ, ಈ ಪ್ರಕಟಣೆಯಲ್ಲಿ ನಮೂದಿಸೋಣಾಗಿರುತ್ತವೆ. ತಿಬೇತಿಯರ ಮತ್ತು ಅಂಗ್ಲೇಯರೊಳಗಾದ ಒಪ್ಪಂದದ ಶರ್ತಗಳನ್ನು ಅಂಗ್ಲೊ ಚೀನಾ ತಹನಾಮೆಯಲ್ಲಿ ಚೀನಿಯರು ಒಪ್ಪಿಕೊಂಡಿರುವರಾಗಿ ತೋರಿಬರುವುದಲ್ಲದೆ, ಈ ಕೆಳಗಿನ ಶರ್ತವು ಸಹ ಅದೇ ತಹನಾಮೆಯಲ್ಲಿರುವುದು:—ಬ್ರಿಟಿಷ ಸರಕಾರದವರು ತಿಬೇತು ದೇಶವನ್ನು ತಮ್ಮ ಸ್ವಾಸ್ಥ್ಯಗಳಿಗೆ ಕೂಡಿಸಿಕೊಳ್ಳಲೂ, ಅಥವಾ ತಿಬೇತಿನ

[illegible]ಯಲ್ಲಿ ಕೈಹಾಕಲೂ ಯೋಚಿಸುವುದಿಲ್ಲ. ಚೀನಾ ಸರಕಾರದವರು ಅನ್ಯ [illegible]ಕದ ಯಾವ ಸರಕಾರದವರಾಗಲಿ, ತಿಬೇತಿನ ಸ್ವಾಧೀನತೆಯಲ್ಲಿಯೂ ಆಡಳಿತೆಯ [illegible]ಯೂ ಕೈ ಹಚ್ಚಲು ಬಿಡಕೂಡದು

ಚೀನಿಯರು ತಿಬೇತನ್ನು ತಮ್ಮ ಸ್ವಾಧೀನತೆಯಲ್ಲಿ ಕಾರ್ಯತಃ ಒಳಪಡಿಸುವುದಕ್ಕೆ ಪ್ರಯತ್ನಿಸುವರೆಂಬದಕ್ಕೆ ಅನುಮಾನವಿಲ್ಲ ೧೯೧೦ನೇ ವರುಷದ ಜನವರಿ ತಿಂಗಳಲ್ಲಿ ತಿಬೇತಿಯರು ಬ್ರಿಟಿಷರಿಗೆ ಪರಿಹಾರ ದ್ರವ್ಯದ ಕಡೆಯ ಕಂತನ್ನು ಕೊಟ್ಟಾದ ನಂತರ ಪೆಕಿಂಗ್ ಪಟ್ಟಣಕ್ಕೆ ಓಡಿಹೋಗಿದ್ದ ಡೆಲೈಲಾಮರವರು ಲಾಹಾಸ್ಸಾ ಪಟ್ಟಣಕ್ಕೆ ತೆರಳಿ [illegible] ಬಂದರೆ ತಮ್ಮಿಂದ ಏನೂ ಆತಂಕವು ಉಂಟಾಗಲಿಕ್ಕಿಲ್ಲವೆಂತ ಬ್ರಿಟಿಷರು ತಿಳಿಸಿದ ಮೇಲೆ ಡೆಲೈಲಾಮರವರು ಈ ವರುಷದ ಜನವರಿ ತಿಂಗಳಲ್ಲಿ ಲಾಹಾಸ್ಸಾಕ್ಕೆ ಒಂದು ತಲ್ಪಿದರು ತಲ್ಪಿದೊಡನೆಯೇ ತಿಬೇತಿನಲ್ಲಿರುವ ಚೀನಿಯ ಫೌಜಿನ ವರ್ತನೆಯ ವಿಷಯ ಅಸಂತುಷ್ಟರಾಗಿ ಬ್ರಿಟಿಷರ ಸಹಾಯವನ್ನು ಕೇಳಿ ಫೆಬ್ರುವರಿ ತಿಂಗಳಲ್ಲಿ ಹಿಂದುಸ್ಥಾನಕ್ಕೆ ಓಡಿಬಂದರು ಡಲೈಲಾಮರವರನ್ನು ಅವರ [illegible]ಯಿಂದ ತಳ್ಳಿಹಾಕಿ [illegible] ಯರ ತೀರ್ಮಾನವು ಅದೇ ತಿಂಗಳ ಆ ತ್ಯ[illegible]ದಲ್ಲಿ ಪ್ರಕಟಿಸಲ್ಪಟ್ಟಿತು

ಚೀನಿಯರ ಈ ವರ್ತನೆಯಿಂದ [illegible] ಪಾತ್ರವಲ್ಲ ತಿಬೇತಿನ [illegible] ಹೆಚ್ಚು ಜನರು ಅಸಂತುಷ್ಟರಾಗಿರುವ[illegible] ತೋರುತ್ತಿದೆ [illegible] ನಿರ್ಬಂಧಗಳೇನೂ ಇಲ್ಲದೆ ಸ್ವತಂತ್ರ [illegible] ತಿಬೇತಿಯರ [illegible] ಸ್ಥಾನದ ಸರಕಾರ [illegible] ಬ್ರಿಟಿಷರು [illegible] ಮಾಡಿದ [illegible] ದಂತೆಯೇ ಒಂದು [illegible] ತಿಬೇತಿನ [illegible] ಇಂಡಿಯಾ ಸರಕಾರ[illegible] ವನ್ನು ಕೇಳಿಕೊಂಡರ [illegible] ವತಿ [illegible] ವುದು ಚೀನಾ ಸರಕಾರದೊಂದಿ[illegible] ಸೆಕ್ರೆಟರಿಗಳು ತಿಬೇತಿನ [illegible] ಚೀನಾ ಮತ್ತು ಬ್ರಿಟಿಷ್ ಸರ[illegible] ನೋಡುವವು [illegible] ಕೈಹಾಕಲಿಕ್ಕಿಲ್ಲವೆಂತ ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿ[illegible] ವರು

ತಿಬೇತಿನ ಮೇಲ[illegible] ಬ್ರಿಟಿಷರು [illegible] ಆದರೆ [illegible] ಸಿಕ್ಕಿಂ, ಭೂತಾನ [illegible] ಮೊದಲಾದ ಸಂಸ್ಥಾನಗಳಿಗೂ, [illegible] ಗುವ ರೀತಿಯಲ್ಲಿ ತಿಬೇತಿನ [illegible] ಊರ್ಜಿತವಿರಿಸಬೇಕೆಂತ ಬ್ರಿಟಿಷ[illegible] ವರು ಚೀನಿಯರ ಈ [illegible] ತಿಳಿಸಿರುವರು

ಹೀಗೆ ನಮ್ಮ ಸರಕಾರ[illegible] ಮುದೆ ವ್ಯಾಪಾರ [illegible] ಮಾತ್ರ ಮಾಡಿರುವರು

"The Golden Temple of Amritsar"
«ಸುವರ್ಣ ದೇವಾಲಯವು

[illegible]

ಈರೀತಿಯಾಗಿ [illegible] ಸ್ವಲ್ಪಸ್ವಲ್ಪವಾಗಿ [illegible] ಹೋಗಿ [illegible] ನಮ್ಮ ಕಾಲುಗಳ [illegible] ದೇವಸ್ಥಾನದ ವರೆಗ [illegible] ಮಾಡಲ್ಪಟ್ಟಿರುವುದೋ [illegible] ಕಟ್ಟಲ್ಪಟ್ಟಿವೆ [illegible] ಸೇತುವೆಯ ಪಕ್ಕಗಳಲ್ಲಿ ದೀಪ[illegible] ಆ ಸೇತುವೆಯ ಮೇಲೆ ರಾತ್ರಿ ದೀಪಗಳನ್ನು ಹಚ್ಚಿದ[illegible] ದೃಶ್ಯವಾಗಿರುವುದು ಆ ಸೇತುವೆಯನ್ನು ದಾಟಿ ದೇವಸ್ಥಾನದೊಳಗೆ ಪ್ರವೇಶಿಸಿದ[illegible] ನಾವು ಅಪೂರ್ವವಾದ [illegible] ಹೋಗಿರುವೆವೆಂದು ತೋರುವದು [illegible] ಒಳಗಡೆಯಲ್ಲಿಯೂ, ಹೊರಗಡೆಯಲ್ಲಿಯೂ [illegible] ಕಿಂದ ತುಂಬಿರುವ ದೇವಸ್ಥಾನದ ಹೆಚ್ಚು ಕಾಂತಿಯು [illegible] ಮಧುರವಾದ [illegible] ನಾದಗಳೂ ಚಿತ್ತವನ್ನು ಆಕರ್ಷಿಸುವ ಸಂಗೀತವೂ [illegible] ಹೂದ್ದುಕೊಂಡು ಬೇರೆಬೇರೆ ಬಣ್ಣದ ವಸ್ತ್ರಗಳನ್ನು ಧರಿಸಿಕೊಂಡು ಅಲ್ಲಿ ತಿರುಗಾಡುತ್ತಿರುವ ಜನರನ್ನು ನೋಡಿ, ಹೊಸದಾಗಿ ಅಲ್ಲಿಗೆ ಹೋಗಿರುವವನು ತನ್ನನ್ನು ತಾನೇ ಮರೆಯುವನು!!

"ದೇವಸ್ಥಾನವು ಎರಡಂತಸ್ತಿರುವುದು ೩೦-೩೫ ಅಡಿ ಎತ್ತರವಿರುವುದು ಅದರ ಮುಖ್ಯ ಭಾಗವು [illegible] ಚತುಷ್ಕೋಣಾಕೃತಿಯಾಗಿ, ೬೫ ಚದರಡಿ ವಿಶಾಲವಿರುವುದು. ದೇವಸ್ಥಾನದ [illegible]ಗಳೇ ಮೊದಲಾದವು ಬಂಗಾರದಿಂದ ಹೆಚ್ಚು ಮನೋಹರವಾಗಿ ಮಾಡಲ್ಪಟ್ಟು, ಶಿಲ್ಪಿಯ ನೈಪುಣ್ಯಾತಿಶಯವನ್ನು ಹೊಗಳುವಂತೆ ಕಾಣುತ್ತಿರುವುದು. ಕೆಳಗಿನ ಅಂತಸ್ತಿನಲ್ಲಿಯೂ, ಮೇಲಿನ ಅಂತಸ್ತಿನಲ್ಲಿಯೂ [illegible] ಅಂಕಣಗಳಿರುವುವು. ಮೇಲಂತಸ್ತಿನ ಮಧ್ಯಭಾಗದಲ್ಲಿ ಅಂಕಣ ಮೊದಲಾದುವಿಲ್ಲದೆ, ಹಾಗೆಯೇ ಉದ್ದಕ್ಕಿರುವುದು ಆದರಿಂದ ಕೆಳಗಿರುವ "ಗ್ರಂಥಸಾಹೇಬ್" ಇರುವ ಸ್ಥಳವನ್ನೂ, ಅಲ್ಲಿ ನಡೆಯುವ ಪೂಜೆ ಮೊದಲಾದ ಉತ್ಸವಗಳನ್ನೂ ಮೇಲಿನ ಅಂತಸ್ತಿನಿಂದ ನೋಡಬಹುದು ಮೇಲಂತಸ್ತಿನ ಒಂದು ಭಾಗದಲ್ಲಿ ಗುರುರಾಮದಾಸನ ಸಮಾಧಿ ಇರುವುದು ಕೆಳಗಣ ಅಂತಸ್ತಿನಲ್ಲಿ ಮಂಟಪವಿರುವುದು ಅಲ್ಲಿ "ಗುರನಾನಕ್" ಗುರುಗೋವಿಂದ" ಇವರ ಗ್ರಂಥಗಳಿರುವುವು ಅವು ಜರೀ ವಸ್ತ್ರದಲ್ಲಿ ಸುತ್ತಲ್ಪಟ್ಟು ಸುವರ್ಣಮಯವಾ[illegible]ತರ ಪೀಠದಲ್ಲಿ ಇಡಲ್ಪಟ್ಟಿರುವುದು ಈ ಪೀಠದ ಮೇಲೆ ಸುಂದರವಾದ [illegible] ಹೊದಿಕೆ [illegible] ಅದಕ್ಕೆ ರತ್ನಗಳಿಂದಲೂ, ಮುತ್ತುಗಳಿಂದಲೂ, ಕೂಡಿದ [illegible] ನಮ್ಮವರು ವಿಗ್ರಹವನ್ನು ದೇವರೆಂದು ಭಾವಿಸಿ, ಆದಕ್ಕೆ ಅನೇಕ [illegible] ವಂತೆ ಸಿಕ್ಕರು ಅವರ ಗ್ರಂಥವನ್ನು ದೇವರೆಂದು [illegible] ಈ ಮಂದಿರವು ಸುವರ್ಣದಿಂದ ದೇದೀಪ್ಯಮಾನವಾಗಿ [illegible] ನವರು ತಾವು ಕುಬೇರನ ಮನೆಯಲ್ಲಿರುವೆವೆಂದೂ [illegible]

ಈ ದೇವಸ್ಥಾನ[illegible] ಆಚಾರವಾಗಲೀ, ಜಾತಿ ವಿಮರ್ಶೆಯಾಗಲಿ ಇಲ್ಲ [illegible] (ಯಾರು ಬೇಕಾದರೂ) ಒಳಗೆ ಹೋಗ[illegible] ಹೋಗಿ ನೋಡಿಕೊಂಡು ಬರುವರು ದೇವಸ್ಥಾನ[illegible] ರೆಂದು ಹೆಸರು ಪ್ರೇಕ್ಷಕರನ್ನು ಈ ಅಕಾ[illegible] ಹೋಗಿ [illegible]ಲ್ಲವನ್ನೂ ತೋರಿಸುವರು [illegible] ರಕ್ಷೆಯನ್ನು ಹೊರಗೆ ಬಿಡಬೇಕು ಪ್ರೇಕ್ಷಕರು ಯಾವ [illegible] ಗ್ರಂಥದಾಹಕ್ಕೆ ಸ್ವಲ್ಪ ಕಾಣಿಕೆಯನ್ನು ಕೊಡಬೇಕು [illegible] ಹೂವುಗಳಿಂದ ಪೂಜೆ ಮಾಡುವರು [illegible] ಪ್ರಸಾದವಾಗಿ ಕೊಡುವರ [illegible] ನೇ ಕಾಂಗ್ರೆಸ್ ಸಭೆಯು ಲಾಹೋರಿನಲ್ಲಿ [illegible] ದಾದಾ[illegible] ಬಾಯಿ ನವರೋಜಿಯವರು ಆ ಸಭೆಯ [illegible] ಅವರ ಅಮೃತಸರಕ್ಕೆ ಹೋಗಿ, ದೇವಾಲಯವನ್ನು ನೋಡಿಕೊಂಡು [illegible] ರೂ ಕಾಣಿಕೆಯನ್ನು ಕೊಟ್ಟರಂತೆ ಆ [illegible] ಕಾಣಿಕೆಯನ್ನು [illegible]ಸುತ್ತಿರುವರಂತೆ!

ಸಿಕ್ಕರ [illegible] ಪ್ರಖ್ಯಾತಿ [illegible] ಹೊಗಲು ಕಾರಣವೊಂದಿರುವುದು ಅವರ [illegible] ಇಹಲೋಕವನ್ನು [illegible] ಅವಶ್ಯಕವಿಲ್ಲ, ಈ ಗ್ರಂಥವೇ [illegible] ಪೂಜಿಸುತ್ತಾ ಇರುವುದು" [illegible] ಸಿಕ್ಕರಿಗೆ ಆ ಗ್ರಂಥವೇ ಗುರುವಾಯಿತು

ಈ ದೇವಸ್ಥಾನ[illegible] ಕೊಳವಿರುವುದು ಇದು ಅತ್ಯಂತ ಪವಿತ್ರ[illegible] ಸಿಕ್ಕರು ಸ್ನಾನಮಾಡುವರು ಈ ಪುಣ್ಯತೀರ್ಥ[illegible] ಅದು ಪಂಜಾಬಿನ ಎಲ್ಲಾ ಪಟ್ಟಣ[illegible] ಕೊಳದ ಸುತ್ತಲೂ ಅನೇಕ ರಾಜರೂ, [illegible] ಸುಂದರವಾದ ಮಂದಿರಗಳನ್ನು ಕಟ್ಟಿಸಿರುವರು ಅವು ನೋಡ[illegible] ರೀತಿಯಾಗಿ ಕೊಳದ ಸುತ್ತಲೂ ಇರುವುದರಿಂದ, ದೇವಸ್ಥಾ[illegible] ಕಟ್ಟಿರುವ ಕೋಟೆಯಂತೆ ಕಾಣುವುದು ಈ [illegible] ನೋಡಿದ್ದಾದರೆ ನದಿಯ ನೀರಿನಿಂದ [illegible] ಕಲಶದಂತೆ ಕಾಣುವುದು ಆ ಕಲಶದ [illegible] ಪ್ರತಿಬಿಂಬಿತವಾದಾಗ, ನೋಡುವುದರಿಂದ [illegible]

ಈ ದೇವಸ್ಥಾ[illegible] ಇಂಪಾದ ಗಾನವು ಅಹೋರಾತ್ರಿ [illegible] ಸಂಗೀತ ಶಾಸ್ತ್ರಜ್ಞರು ಅದ[illegible] ಪ್ರಕಾರ ಬಹಳ ಗಾನಮಾಡುತ್ತಿರುವರು ಹೀಗೆ [illegible] ಸಂಗೀತ ಸೇವೆ ನಡೆಯುತ್ತಿರುವ ದೇವಸ್ಥಾನವು ಮತ್ತೊಂದು ನಮ್ಮ ಹಿಂದೂದೇಶದಲ್ಲಿರುವಂತೆ ತೋರ[illegible]ಲ್ಲ ಪಂಢರಾಪುರದಲ್ಲಿ ಮಾತ್ರ "ವಿಠಲ್ ವಿಠಲ್" ಯೆಂದು ನಾಮಸ್ಮರಣೆಯೂ, ತಂಬೂರಿ ಧ್ವನಿಯೂ ರಾತ್ರಿಯೆಲ್ಲಾ ಕೇಳಬರುತ್ತಿರುವುದಂತೆ

ಸಿಕ್ ಮತದಲ್ಲಿ ಮುಖ್ಯ ಸಿದ್ಧಾಂತಗಳ ಕೆಲವನ್ನು ಇದರಡಿ ಬರೆಯುವೆವು:— "ದೇವರು ಒಬ್ಬನೇ, ಆತನು ಮನುಷ್ಯರೆಲ್ಲರನ್ನೂ ಸಮಾನವಾಗಿ ಸೃಷ್ಟಿಸಿದನು, ಅವರಲ್ಲಿ ಜಾತಿಭೇದವಿಲ್ಲ ಜಾತಿಭೇದವನ್ನು ದೂಷಿಸುವುದು (ಮಹಾ ಪಾಪವು) ದ್ರೋಹವು." ವಿಗ್ರಹಾರಾಧನೆಯನ್ನು ಮಾಡುವುದರಿಂದ ದೇವರಿಗೆ ಕೋಪ ಬರುವುದು! ಆದ್ದರಿಂದ ಅದನ್ನು ಬಿಡಬೇಕು [illegible] ದೇವಲೋಕದಲ್ಲಿ ಅಪ್ರತಿಮ [illegible]ವು ಲಭಿಸುವುದು. ಗೋಮಾಂಸವನ್ನು ತಿನ್ನಕೂಡದು. ಬಡವರಿಗೆ ದಾನವನ್ನು ಮಾಡಬೇಕು, ಅದರಲ್ಲಿಯೂ [illegible]ವನ್ನು ನೋಡಿ ಕೊಡಬೇಕು [illegible] ಬಾಲ್ಯಕ್ಕೆ ಆದರ[illegible]

ಮತ ಸಂರಕ್ಷಣಾರ್ಥವಾಗಿ ಪ್ರಾಣವನ್ನೂ ಧನವನ್ನೂ ನೂರೆ ಮಾಡಿದರೆ, ಅದು ದೇವರಿಗೆ ಸಮ್ಮತವಾಗಿರುವುದು. ತನ್ನ ಮತದ ಅಜ್ಞಾನವನ್ನು ತಿಳಿದುಕೊಂಡು, ಈ ಮತಕ್ಕೆ ಸೇರಬೇಕೆಂದು ಅಪೇಕ್ಷೆ ಪಡುವವರು, ಯಾವ ಮತದವನಾದರೂ ಈ ಮತಕ್ಕೆ ಸೇರಬಹುದು."

ಈ ಮತಸಿದ್ಧಾಂತವನ್ನು ಅನುಸರಿಸಿ, ಕೆಲವು ವರುಷಗಳ ಕೆಳಗೆ ಪಾಟಿಯಾಲಾ ಸಂಸ್ಥಾನದ ರಾಜರು ಒಬ್ಬ ಯೂರೋಪಿಯನ್ ಸ್ತ್ರೀಯನ್ನು ಮದುವೆಯಾದಾಗ ಆಕೆಗೆ ಮೊದಲು ಸಿಕ್ ಮತದ ದೀಕ್ಷೆಯನ್ನು ಮಾಡಿಸಿದರಂತೆ!!

ಎಂ ಬಿ ವಲ್ಲಭವಯ್ಯಂಗಾರ್,
ಬೇರೂರು

ಭಾರತ ಧರ್ಮ

ಅನ್ಯಾನ್ಯ ದೇಶಗಳಲ್ಲಿ ಜ್ಞಾನೋದಯವಾಗುವುದಕ್ಕಿಂತಲೂ ಬಹುಕಾಲ ಪೂರ್ವವೇ ಯಾವದೇಶದಲ್ಲಿ ಜ್ಞಾನಪ್ರಕಾಶವಾಗಿದ್ದಿತೋ, ಯಾವ ಭೂಮಿಯು ಸ್ಮೃತಿಕರ್ತೃ ಶ್ರೇಷ್ಠತಮರಾದ ಮಹಾತ್ಮರುಗಳ ಪಾದಸಂಸ್ಪರ್ಶದಿಂದ ಪವಿತ್ರವಾಗಿದೆಯೋ, ಯಾವ ಭೂಖಂಡದ ಧರ್ಮ ಮತ್ತು ತತ್ವದರ್ಶನಗಳ ಸರ್ವೋತ್ಕೃಷ್ಟವಾದ ಆದರ್ಶಗಳೆಲ್ಲವೂ ಹಿಂದೊಂದು ಸಮಯದಲ್ಲಿ ಸಮಸ್ತ ಜಗತ್ತಿನೆಲ್ಲ ಆದರಣೀಯವಾಗಿದ್ದುವೋ, ಯಾವ ಕರ್ಮ ಭೂಮಿಯಿಂದ ಧರ್ಮ ಮತ್ತು ದಾರ್ಶನಿಕ ತತ್ವಸಮೂಹವು ವನ್ಯಾಕಾರವಾಗಿ ಪ್ರವಹಿಸುತ ಪ್ರಪಂಚವನ್ನೆಲ್ಲಾ ಪ್ಲಾವಿತವಾಡುತ್ತಿರುವುದೋ, ಯಾವ ಭೂಪ್ರದೇಶವು ಶತಶತ ಶತಾಬ್ದಿಗಳ ಅತ್ಯಾಚಾರಗಳನ್ನೂ, ಅಸಂಖ್ಯ ವೈದೇಶಿಕ ಆಕ್ರಮಣಗಳನ್ನೂ, ಸಹಸ್ರಾರು ವಿಧರ್ಮಿಗಳ ಧೂರ್ತತೆಯನ್ನೂ, ನೂರಾರು ವಿಧವಾದ ರೀತಿ ನೀತಿ ಆಚಾರ ವ್ಯವಹಾರಗಳ ವಿಪರ್ಯವನ್ನೂ ಸಹಿಸಿಕೊಂಡಿದ್ದರೂ, ತನ್ನ ವಿಶೇಷತ್ವವನ್ನು ರಕ್ಷಿಸಿಕೊಂಡಿರುವುದೋ, ಯಾವ ಪ್ರತಿಷ್ಠಾಂಶವು ತನ್ನ ಅವಿಚ್ಛಿನ್ನವಾದ ಶಕ್ತಿಯನ್ನೂ ಜೀವನವನ್ನೂ ಕಾಪಾಡಿಕೊಂಡು ಪರ್ವತದ ಹಾಗೆ ದೃಢಭಾವದಲ್ಲಿ ಈಗಲೂ ನಿಶ್ಚಲವಾಗಿ ನಿಂತಿರುವುದೋ ಅದೇ ಈ ಭಾರತಭೂಮಿ. ನಮ್ಮ ಮಾತೃ ಭೂಮಿಯು ಶಾಸ್ತ್ರೋಪದಿಷ್ಟವಾದ ಆತ್ಮದ ಹಾಗೆ ಅಚ್ಛೇದ್ಯವೂ, ಅದಾಹ್ಯವೂ, ಸ್ಥಿರವೂ, ಅಚಲವೂ, ಅವ್ಯಕ್ತವೂ, ವಿಕಾರರಹಿತವೂ, ಅಮೃತಸ್ವರೂಪವೂ ಆಗಿರುವುದು. ಈ ಭೂಮಿಯೇ ಸಕಲ ಧರ್ಮಗಳಿಗೂ ಮಾತೃಸ್ಥಾನ

ಧರ್ಮವೇ ನಮ್ಮ ಸಮ್ಮಿಳನ ಭೂಮಿ. ಈ ಸಮ್ಮಿಳನ ಭೂಮಿಯಲ್ಲಿಯೇ ನಮ್ಮಗಳ ಜನಾಂಗಜೀವನಭಿತ್ತಿಯು ಸ್ಥಾಪಿತವಾಗಿರುವುದು. ಯೂರೋಪ್ಯ ದೇಶದಲ್ಲಿ ರಾಜನೀತಿಯೇ ಜನಾಂಗದ ಏಕತಾಭಿತ್ತಿ, ಆದರೆ ಭಾರತಧರ್ಮವು ಈ ಐಕ್ಯತೆಗೂ ಮೂಲ ಮತ್ತು ಭಿತ್ತಿ ಸ್ವರೂಪವಾಗಿರುವುದು. ಇದಲ್ಲದೆ, ಜಾತಿ ಅಥವಾ ಸಾಮಾಜಿಕ ವಿಷಯಕವಾದ ವಾಗ್ವಾದವು ಉಪಸ್ಥಿತವಾದರೆ, ಧರ್ಮಸಮ್ಮಿಳನ ಕಾರಣೀಶಕ್ತಿಯೇ ಅದನ್ನು ಪರಿಹರಿಸುವುದೆಂಬದನ್ನು ಈ ಭಾರತಖಂಡದಲ್ಲಿ ನೋಡಬಹುದು. ಧರ್ಮಕ್ಕಿಂತಲೂ ಉಚ್ಚತರವಾದ ವಸ್ತುವು ಮತ್ತೊಂದಿಲ್ಲವೆಂಬುದೇ ಭಾರತ ಸಿದ್ಧಾಂತ. ಇದೇ ಭಾರತೀಯ ಜೀವನದ ಮೂಲಮಂತ್ರ—ಇದೇ ಭಾರತೀಯ ಭವಿತವ್ಯತೆಯ ಚರಮ ಪಂಥ. ಇಂತಹ ಪಂಥವು ಈಚೀಚೆಗೆ ಶಿಥಿಲವಾಗುತ್ತಿರುವುದು ಬಹು ವಿಷಾದಕರವಾದ ವಿಷಯ.

ಆದರೆ ಕಾರ್ಯಕ್ಷೇತ್ರದಲ್ಲಿ ಪ್ರವೇಶಿಸಿ ಸನಾತನಧರ್ಮವನ್ನು ಈ ಶೈಥಿಲ್ಯದಶೆಯಿಂದ ಉದ್ಧಾರಮಾಡಬೇಕಾದರೆ, ನಮಗೆ ಯಾವ ಯಾವ ಉಪಾದಾನಗಳು ಅವಶ್ಯಕವೆಂಬುದನ್ನು ಈಗ ಯೋಚಿಸೋಣ. ಮೊದಲು ಧರ್ಮಭಿತ್ತಿಯನ್ನು ಸ್ಥಾಪಿಸದೆ ಯಾವ ಕಾರ್ಯವನ್ನೆಸಗಿದರೂ ಕೊನೆಗೆ ಅದು ನಿಷ್ಫಲವಾತ್ರವಾಗುವುದು. ತೋಟಕ್ಕೆ ಬೇಲಿಯನ್ನು ಹಾಕದೆ ಅದರಲ್ಲಿ ಉತ್ತಮವಾದ ಮಾವಿನ ಗಿಡಗಳನ್ನು ನಟ್ಟರೆ ದನಕರುಗಳು ಬಂದು ಆ ಸಸಿಗಳನ್ನು ಮುರಿದು ಹೇಗೆ ನಷ್ಟಪಡಿಸುವುವೋ, ಹಾಗೆ ಧರ್ಮವೆಂಬ ಬೇಲಿಯನ್ನು ಮೊದಲು ಹಾಕದಿದ್ದರೆ ಸರ್ವನಾಶವು ಪ್ರಾಪ್ತವಾಗುವುದು. ಎಲೈ, ನವೀನ ಧರ್ಮಪ್ರವರ್ತಕರೆ! ನಿಮ್ಮ ಸಮಸ್ತ ಕರ್ಮವೂ ಧರ್ಮದಲ್ಲಿಯೇ ನಿಹಿತವಾಗಿದೆ ಎಂಬುದನ್ನು ಮರೆತಿರುವಿರೇಕೆ? ನಮಗೆ ಜೀವನದಲ್ಲಿ ಧರ್ಮ— ಮರಣದಲ್ಲಿ ಧರ್ಮ— ನಾವು ಏನೇನು ಮಾಡುವೆವೋ, ಅದೆಲ್ಲದರಲ್ಲಿಯೂ ಧರ್ಮವೇ ಮೂಲವಾಗಿರುವುದು. ಜಗತ್ತಿನಲ್ಲಿ ಧರ್ಮವನ್ನು ಬಿಟ್ಟು ಏನನ್ನೂ ಮಾಡಲಾಗುವುದಿಲ್ಲ. ಜಲವು ಶೀತಲವಾಗಿರುವುದು. ಶೈತ್ಯವೇ ಅದಕ್ಕೆ ಧರ್ಮವಾಗಿರುವುದರಿಂದಲ್ಲವೆ? ಆದಕಾರಣ ಯಾವುದನ್ನು ಮಾಡುವೆವೋ, ಯಾವುದನ್ನು ನೋಡುವೆವೋ, ಯಾವುದನ್ನು ಕೇಳುವೆವೋ ಅದೆಲ್ಲದರಲ್ಲಿಯೂ ಧರ್ಮವೇ ಮೂಲವಾಗಿರುವುದು. ಈ ಧರ್ಮಸಮ್ಮಿಳನವೇ ನಮ್ಮಗಳ ಭವಿಷ್ಯತ್ತೇತು. ಧರ್ಮವನ್ನು ಪೃಷ್ಠವಂಶ (back-bone) ವಾಗಿ ಭಾವಿಸಿ ಕಾರ್ಯವನ್ನೆಸಗಬೇಕು. ಪೃಷ್ಠವಂಶವು ಶರೀರಕ್ಕೆ ಹೇಗೆ ಆಧಾರವಾಗಿದೆಯೋ ಧರ್ಮವೂ ಕೂಡ ಅದೇ ರೀತಿಯಾಗಿ ಜನಾಂಗಜೀವನಕ್ಕೆ ಅಧಿಷ್ಠಾನವಾಗಿರುವುದು. ಈ ಧರ್ಮಸಮ್ಮಿಳನವನ್ನು ಮೇರುದಂಡವಾಗಿ ನಿಲ್ಲಿಸಿದರೆ ತತ್ಕ್ಷಣವೇ ಅನ್ಯಾನ್ಯ ವಿಷಯಗಳಲ್ಲಿ ಉನ್ನತಿಯು ತನಗೆ ತಾನೇ ಆಗುವುದು. ಧರ್ಮಸಮ್ಮಿಳನ ಕಾರಿಣೀಶಕ್ತಿಯನ್ನು ಲಕ್ಷ್ಯವಾಗಿ ನಿಲ್ಲಿಸಿಕೊಂಡರೆ ಉನ್ನತ್ಯ ಶಿಖರವನ್ನೇರುವೆವು. ದೇಹದಲ್ಲಿ ರಕ್ತವು ಶುದ್ಧವಾಗಿದ್ದರೆ ಯಾವ ರೋಗಗಳಿಗೂ ಹೇಗೆ ಅವಕಾಶವಿಲ್ಲವೋ ಹಾಗೆ ಧರ್ಮಬಲದಿಂದ ಬಲ [illegible] ಧರ್ಮಸಮ್ಮಿಳನ ಕಾರಿಣೀಶಕ್ತಿಯು ದೃಢವಾಗಿದ್ದರೆ, [illegible] [illegible] ಧರ್ಮವೇ ಜನಾಂಗಜೀವನಕ್ಕೆ ಶೋಣಿತ ಸ್ವರೂಪವಾಗಿರುವುದು. ರಕ್ತವಿಲ್ಲದಿದ್ದರೆ ದೇಹದಲ್ಲಿ ಬಲವು ಹೇಗೆ ಕಡಿಮೆಯಾಗುವುದೋ ಹಾಗೆ ಧರ್ಮಸಮ್ಮಿಳನ ಕಾರಿಣೀಶಕ್ತಿಯು ಶೂನ್ಯವಾದರೆ ಜನಾಂಗಜೀವನವೂ ಜರ್ಜರಿತವಾಗುವುದು.

ಇದಲ್ಲದೆ, ಈ ಧರ್ಮ ರೂಪವಾದ ಶೋಣಿತ ಪ್ರವಾಹವು ವಿಶುದ್ಧವೂ ಸತೇಜವೂ ಆಗಿದ್ದರ ರಾಜನೈತಿಕ, ಸಾಮಾಜಿಕ ಅಥವಾ ಮತ್ತಾವ ವಿಧವಾದ ಬಾಹ್ಯದೋಷವೂ—ಅಷ್ಟೇಕೆ—ನಮ್ಮ ದೇಶದ ಘೋರ ದುಃಖಕರವಾದ ದಾರಿದ್ರ್ಯ ದೋಷವೂ ನಮ್ಮನ್ನು ಸ್ಪರ್ಶಿಸಲಾರದು. ವ್ಯಾಧಿಬೀಜರೂಪವಾದ ಅಣುವು ಶರೀರದಿಂದ ಪರಿತ್ಯಕ್ತವಾದರೆ ಆ ವಿಶುದ್ಧವಾದ ಸತೇಜವಾದ ರಕ್ತದಲ್ಲಿ ಮತ್ತಾವ ಕುಸಂಸ್ಕಾರ ಪ್ರಭೃತಿ ದೂಷಿತವಾದ ಬಾಹ್ಯ ವಸ್ತುವು ಹೇಗೆತಾನೆ ಪ್ರವೇಶಮಾಡಬಲ್ಲುದು? ಯಾವ ಪರ್ಯಂತ ಶರೀರವು ಸತೇಜವಾಗಿರುವುದೋ, ಆಗುಪರ್ಯಂತ ಅಣುಗಳು ಶರೀರದಲ್ಲಿ ಪ್ರವೇಶಮಾಡಲಾರವು. ದುರ್ಬಲವಾದ ಕೂಡಲೆ ಆ ಬೀಜರೂಪವಾದ ಅಣುಗಳು ಶರೀರದಲ್ಲಿ ಪ್ರವೇಶಿಸಿ ಉತ್ಕಟವಾದ ರೋಗವನ್ನು ಉತ್ಪಾದನೆ ಮಾಡುವುವು. ಆದಕಾರಣ ವ್ಯಾಧಿಗೆ ಮೂಲಕಾರಣವೇನೆಂಬುದನ್ನು ವಿಚಾರಮಾಡಬೇಕು, ಮತ್ತು ರಕ್ತದ ಮಾಲಿನ್ಯತೆಯನ್ನು ತೊಲಗಿಸಲು ಪ್ರಯತ್ನಿಸಬೇಕು. ರಕ್ತವನ್ನು ವಿಶುದ್ಧಮಾಡಿ, ಶರೀರವನ್ನು ಸತೇಜವಾಡಿ, ಮನಸ್ಸನ್ನು ಏಕಾಗ್ರಗೊಳಿಸಿ, ನಮ್ಮಲ್ಲಿ ಅಡಗಿರುವ ದಿವ್ಯ ಕುಂಡಲಿನೀ ಶಕ್ತಿಯನ್ನು ವಿಕಾಸಪಡಿಸಿದರೆ, ಆಗ ಧರ್ಮವೇ ನಮಗೆ ತೇಜಸ್ಸಾಗುವುದು. ಧರ್ಮವೇ ನಮಗೆ ವೀರ್ಯವೆಂಬುದೂ ಗೊತ್ತಾಗುವುದು.

ನಾವುಗಳು ಈ ಧರ್ಮಬಂಧನದಿಂದ ಚಿರಾಬದ್ಧರಾಗಿರುವೆವು. ಈ ಧರ್ಮಬಂಧನವನ್ನು ಸಡಲಿಸಿದರೆ, ನಮ್ಮಗಳ ಜನಾಂಗತ್ವವೂ, ನಮ್ಮಗಳ ಅಸ್ತಿತ್ವವೂ ಚೂರ್ಣವಿಚೂರ್ಣವಾಗಿ ಲೋಪ ಹೊಂದುವುವು. ಆದಕಾರಣ ನಮ್ಮಗಳ ಜನಾಂಗಜೀವನ ಸ್ವರೂಪವಾಗಿ ಯಾವ ಧರ್ಮವಿದೆಯೋ, ಅದನ್ನು ದೃಢವಾಗಿ ನಿಲ್ಲಿಸಬೇಕು. ಶತಶತ ಶತಾಬ್ದಿಗಳಿಂದಲೂ ಪ್ರಾಪ್ತವಾಗುತ್ತಿರುವ ಅತ್ಯಾಚಾರ, ಉತ್ಪೀಡನೆಗಳನ್ನು ಸಹಿಸಿಕೊಂಡು ಈ ದಶಾಧಾಮದಲ್ಲಿ ಈ ವರೆಗೂ ನಾವು ನಿಂತಿರುವುದು ಯಾರ ಪ್ರಭಾವದಿಂದ? ಅದು ಕೇವಲ ನಮ್ಮಗಳ ಧರ್ಮಸಮ್ಮಿಳನಕಾರಿಣೀ ಶಕ್ತಿಯ ಮಹಿಮೆಯಿಂದಲ್ಲವೆ? ನಮ್ಮಗಳ ಪ್ರಾಚೀನ ಪುರುಷರು ಈ ಧರ್ಮರಕ್ಷಣೆಗೆ ಸಲುವಾಗಿ ಎಷ್ಟೋ ಶ್ರಮಪಟ್ಟಿರುವರು—ಅಷ್ಟೇ ಅಲ್ಲ—ಅವರು ಧರ್ಮಕ್ಕೋಸ್ಕರ ಪ್ರಾಣವನ್ನು ಕೂಡ ಹೋಯುವೆಂದು ಉಪೇಕ್ಷಿಸಿರುವರು. ಯಾವ ಕಾಲದ ಸಾಧ್ವಿಯರು ಸತೀತ್ವವೆಂಬ ಧರ್ಮರಕ್ಷಣೆಗೆ ಸಲುವಾಗಿ ಚಿತಾನಲದಲ್ಲಿ ತಂತಮ್ಮ ಪ್ರಾಣವನ್ನು ವಿಸರ್ಜಿಸಿ ಸತೀತ್ವ ಧರ್ಮವನ್ನು ರಕ್ಷಿಸಿಕೊಂಡರೋ, ಆ ಕಾಲದ ಭಾರತವರ್ಷವೇ ಇದು. ಈ ವಿಷಯದಲ್ಲಿ ಚಿತ್ತೂರು ಜ್ವಲಂತಾಕ್ಷರದಲ್ಲಿ ಜಗತ್ತಿಗೆಲ್ಲ ಸಾಕ್ಷ್ಯವನ್ನು ನುಡಿಯುತ್ತಿರುವುದು.

ಆದಕಾರಣ, ಪಾಠಕಮಹಾಶಯರೆ, ನಮ್ಮ ಧರ್ಮಸಮ್ಮಿಳನಕಾರಿಣೀ ಶಕ್ತಿಯು ವಿಕಸಿಸುವುದಕ್ಕೆ ನಿಮ್ಮ ಹೃದಯಹರ್ಮ್ಯದಲ್ಲಿ ಅಲ್ಪಸ್ವಲ್ಪವಾದರೂ ಸ್ಥಾನವನ್ನನುಗ್ರಹಿಸಿರಿ. ನಮ್ಮ ಪೂರ್ವಜರ ಕೀರ್ತಿಸ್ತಂಭವನ್ನು ಸ್ಥಾಪಿಸುವುದಕ್ಕೆ ಸಲುವಾಗಿ ಕರ್ಮಕ್ಷೇತ್ರದಲ್ಲಿ ಉತ್ತೀರ್ಣರಾಗಿರಿ. ಶಾಸ್ತ್ರಕಾರರು "ಯೇನಾಸ್ಯ ಪಿತರೋಯಾತಾ ಯೇನ ಯಾತಾ ಪಿತಾಮಹಾಃ । ತೇನಂಯಾಯಾತ್ ಸತಾಂ ಮಾರ್ಗಂ ತೇನ ಗಚ್ಛನ್ ಕರಿಷ್ಯತೇ ।" ಎಂದು ಸಾರಿ ಹೇಳಿರುವರು. ಯಾವ ಪಥದಲ್ಲಿ ನಮ್ಮ ನಮ್ಮ ಪಿತೃಗಳು ಗಮನ ಮಾಡಿರುವರೋ, ಆ ಪೂರ್ವ ಪುರುಷರಿಂದ ಪರೀಕ್ಷಿತವಾದ ಆ ಪವಿತ್ರ ಪಥದಲ್ಲಿ ಪದಾರ್ಪಣ ಮಾಡಿದರೆ ಪಾಪಸ್ಪರ್ಶ ಶಂಕೆಯಿಲ್ಲ—ದೋಷವಿಲ್ಲ, ಅಪಜಯ ಅಪಕಾರಗಳ ಭಯವಿಲ್ಲ. ಆದುದರಿಂದ—"ಮಹಾಜನೋ ಯೇನ ಗತಸ್ಸ ಪಂಥಾಃ"—ಮಹಾತ್ಮರು ಯಾವ ಪಥದಲ್ಲಿ ಸಂಚರಿಸಿರುವರೋ ಅದೇ ಪಥದಲ್ಲಿ ಉತ್ತೀರ್ಣರಾಗಿರಿ. ನಮ್ಮ ದೀನೆಯೂ, ಮಲಿನೆಯೂ, ದಾರಿದ್ರ್ಯದುಃಖಿನಿಯೂ ಆದ ಭಾರತ ಭೂಮಾತೆಯು ಪುನಃ ಸಸ್ಯಶ್ಯಾಮಲೆಯೂ, ಧನಧಾನ್ಯ ಪೂರ್ಣೆಯೂ ಆಗುವಳು. ಜನಾಂಗೋನ್ನತಿಯನ್ನು ಮಾಡಬೇಕಾದರೆ—ಸ್ವದೇಶೋನ್ನತಿಯನ್ನು ಸಾಧಿಸಬೇಕಾದರೆ—ಸ್ವಸಮಾಜೋನ್ನತಿಯು ಸಿದ್ಧಿಸಬೇಕಾದರೆ—ಸ್ವಗ್ರಾಮೋನ್ನತಿಯು ಘಟಿಸಬೇಕಾದರೆ—ಮೊದಲು ಧರ್ಮಪ್ರಾಣವನ್ನು ಚೇತನಗೊಳಿಸಿರಿ. ಧರ್ಮಸಮ್ಮಿಳನ ಕಾರಿಣೀಶಕ್ತಿ ವಿನಾ ಮತ್ತಾವುದರಿಂದಲೂ ಉನ್ನತಿಯಾಗಲಾರದು. ಧರ್ಮವನ್ನು ಪುನರ್ಜೀವಿತ ಮಾಡುವುದಕ್ಕೋಸುಗ ಏಳಿರಿ, ಇನ್ನು ನಿದ್ರೆಯನ್ನು ತಳ್ಳಿರಿ! ನಮ್ಮ ಪೂರ್ವಜರು ಸಾರಿ ಹೇಳಿದ "ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿಬೋಧತ!!!" ಎಂಬ ಸದುಪದೇಶವನ್ನು ಸಾರ್ಥಕಗೊಳಿಸಿರಿ! ಧರ್ಮದಲ್ಲಿ ನಿಮಗೆ ಪೂರ್ಣ ವಿಶ್ವಾಸವಿದೆಯೆಂಬುದನ್ನು ಪ್ರಪಂಚಕ್ಕೆಲ್ಲಾ ಈಗ ಪ್ರದರ್ಶಿಸಿರಿ! ಧರ್ಮವನ್ನು ಪುನರ್ಜೀವಿತ ಮಾಡುವ ಶಕ್ತಿಯು ನಿಮ್ಮಲ್ಲಿದೆಯೆಂಬುದನ್ನು ತೋರಿಸಿರಿ! ನಾವು ದುರ್ಬಲರೆಂಬುದನ್ನು ದೂರೀಕರಿಸಿರಿ. ಸರ್ವ ಶಕ್ತಿಯೂ ನಮ್ಮಲ್ಲಿಯೇ ಅಡಗಿದೆ. ಧರ್ಮಸಮ್ಮಿಳನಕಾರಿಣೀ ಶಕ್ತಿಯನ್ನು ವಿಕಾಸಪಡಿಸುವ ಸಮಯವು ಈಗ ಸನ್ನಿಹಿತವಾಗಿದೆ. ಎಲೈ, ನವೀನ ಕರ್ಣಧಾರಕರೆ! ಈಗ ಈ ಶುಭ ದಿನದಲ್ಲಿ, ಈ ಶುಭಕ್ಷಣದಲ್ಲಿ ಸನಾತನಧರ್ಮ ಸೇವೆಗೋಸುಗ ಸನ್ನದ್ಧರಾಗಿರಿ! ಆದರೆ ಧರ್ಮವಿನಾ ಬೇರೆ ಮಾರ್ಗವಿಲ್ಲವೆಂಬುದನ್ನು ಮಾತ್ರ ಸ್ಮೃತಿಯಲ್ಲಿಡಿರಿ!

ಪತ್ರವ್ಯವಹಾರ.

(ಪತ್ರವ್ಯವಹಾರಕರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ)

American Sweet Potato.

ಅಮೇರಿಕದ ಶೀ ಗೆಣಸು

ಸ್ವದೇಶಾಭಿಮಾನಿ ಕರ್ತರಿಗೆ,

ನಮ್ಮ ಜಿಲ್ಲೆಯಲ್ಲಿ ಶೀಗೆಣಸು ಅನೇಕ ಕಡೆಯಲ್ಲಿ ಬೆಳಿಸುತ್ತಾರೆ ಇವರಲ್ಲಿ ಎರಡು ಜಾತಿಯ ಗೆಣಸುಗಳುಂಟು. ಒಂದು ಬಿಳೇದು, ಇನ್ನೊಂದು ಕೆಂಪು ಪರಂತು ಈ ಎರಡು ಜಾತಿಯ ಗೆಣಸುಗಳು ಕಡದರೆ ಒಳಗೆ ಬಿಳೇದಾಗಿರುತ್ತದೆ ಇವು ತಿನ್ನುವಾಗ ಕೆಂಪು ಗೆಣಸು ಬಿಳೇ ಗೆಣಸಿಗಿಂತ ಹೆಚ್ಚು ಶೀ ಇರುವದಾಗಿ ಎಲ್ಲರಿಗೆ ಗೊತ್ತಿರುತ್ತದಷ್ಟೆ. ಅಮೇರಿಕಾ ದೇಶದಲ್ಲಿ ಬೆಳಿಸುವ ಈ ಶೀ ಗೆಣಸು ಮೇಲೆ ನಮೂದಿಸಿದ ಊರು ಗೆಣಸಿಗಿಂತಲೂ ಹೆಚ್ಚು ಫಸಲು ಶಿಕ್ಕುತ್ತದೆಂಬದರಿಂದ ಅದನ್ನು ಹಿಂದುಸ್ಥಾನಕ್ಕೆ ತರಿಸಿ ಸರಕಾರದವರು ಕೆಲವು ತಮ್ಮ ಮಾದರಿ ಫಾರ್ಮುಗಳಲ್ಲಿ ಬೆಳಿಸುವ ವರ್ತಮಾನವು ಮೈಸೂರು ರೆವೆನ್ಯು ಮತ್ತು ವ್ಯವಸಾಯ ಗಜೇಟಂಬ ಪಂಪ್ರವಾಸ ಪತ್ರದಲ್ಲಿ ಪ್ರಕಟಿಸಿರುವದನ್ನು ಓದಿ ಮಾಂಜರಿ ಎಂಬ ಫಾರ್ಮಿನ ಸುಪರಿಂಟೆಂಡೆಂಟರವರಿಂದ ಈ ಅಮೇರಿಕದ ಶೀ ಗೆಣಸಿನ ಬಳ್ಳಿಯ ತುಂಡುಗಳನ್ನು ತರಿಸಿ ಈ ಪಾರ್ಸೆಲಿನಲ್ಲಿ ಸಿಕ್ಕಿದೆ ಇದು ತಲಪುತ್ತಾ ಹೆಚ್ಚು ಕಾಲ ಗತಿಸಿದ ಕಾರಣ ಒಂದು ಮೂರು ಭಾಗದ ಬಳ್ಳಿಯಲ್ಲಿ ೪—೫ ತುಂಡುಗಳು ಮಾತ್ರ ಜೀವ ಇದ್ದದ್ದು ಶಿಕ್ಕಿದವು ಕಳೆದ ಮಳೆಗಾಲ ಅವನ್ನು ಹೆಚ್ಚು ಜಾಗರೂಕತೆಯಿಂದ ಬೆಳೆಸಿ ಕಳೆದ ದಶಂಬರ ತಿಂಗಳಲ್ಲಿ ಅದನ್ನು ತೆಗದು ಮೆಣಸಿನ ಗಿಡಗಳ ಸಾಲಿನಲ್ಲಿ ತುಂಡುಗಳನ್ನು ಮಾಡಿ ನಟ್ಟು, ಕಳೆದ ಎಪ್ರಿಲ ತಾರೀಕು ೬ಕ್ಕೆ ಅಗ್ಗೆದು ನೋಡಲಾಗಿ ೪—೫ ಸೇರು ಗೆಣಸು ಶಿಕ್ಕಿತು ಇದು ಹೊರಗೆ ಬಿಳಿದೆ ಇದೆ ಆದರೆ ಒಳಗೆ ಬಟಾಟೆ ನಮೂನೆಯಲ್ಲಿ ಅರಸಿನ ಇರುವದಲ್ಲದೆ ಮೇಲೆ ಹೇಳಿದ ಎರಡು ಜಾತಿಯ ಗೆಣಸಿಗಿಂತಲೂ ಹೆಚ್ಚು ಶೀ ಇರುತ್ತದೆ ಅದಕಾರಣ ನಮ್ಮ ಊರಿನ ಗೆಣಸು ಬೆಳಿಸುವವರು ಈ ಗೆಣಸನ್ನು ಬೆಳೆಸಿದರೆ ಹೆಚ್ಚು ಲಾಭಕರವೆಂತ ತೋರುತ್ತದೆ

ಈ ಬಗ್ಗಾಗಿ ನಮ್ಮ ಜಿಲ್ಲೆಯ ವ್ಯವಸಾಯ ಸಂಘದವರು ತರಿಸಿ ಅದರ ವ್ಯವಸಾಯವನ್ನು ನಮ್ಮ ಜಿಲ್ಲೆಯಲ್ಲಿ ಪ್ರಚಾರಕ್ಕೆ ತರಬಹುದಾಗಿ ತೋರಿಬರುವ ಅಭಿಪ್ರಾಯವನ್ನು ಈ ಮೂಲಕ ತಮ್ಮ ಪತ್ರದ ವಾಚಕರ ತಿಳುವಳಿಕೆಗೆ ತರುವದೆ ಸಂತೋಷಪಡುತ್ತೇನೆ.

ಎಲ್ಲೂರು ಸುಬ್ಬರಾವ್

ಕಲಾಯಿ ಎಸ್ಟೇಟ್

೨

ಅಯ್ಯಾ ಪತ್ರಿಕಾಕರ್ತರೇ,

ಹೊಸದುರ್ಗದಲ್ಲಿ ಕಳ್ಳರ ಉಪದ್ರವನ್ನು ತಾಳುವದು ಲಾಕಷ ಈ ಊರಿನ ನಿಜಸ್ಥಿತಿಯನ್ನು ಒರ್ಣಿಸುವದ ಗದ್ಯದಿಂದ ಅಸಾಧ್ಯವೆಂತ ತೋರಿ ಪದ್ಯರೂಪದಲ್ಲಿ ವರ್ಣಿಸಿರುವುದನ್ನು ತಮ್ಮ ಪತ್ರಿಕೆಯಲ್ಲಿ ದಯವಾಡಿ ಪ್ರಕಟಿಸಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇನೆ —

ಹೊಸದುರ್ಗ ಊರಿನ ಚೋರರ ಉಪಟಳ

ದ್ವಿಪದ । ಅರುಹುವೆನು ಹೊಸದುರ್ಗ ಪುರದ ಸಂಗತಿಯಾ
ಕರಕರಿಸುವದು ಮನವು । ಬರೆವುದಕೆ ಸ್ಥಿತಿಯಾ ॥ ೧ ॥
ಚೋರರುಪಟಳ ಪೆರ್ಚಿ ದಿನದಿನಕೆ ಬರುತಾ ।
ಘೋರತ್ವದಿ ಕಳವು ಕನ್ನಗಳ ಇರುತಾ ॥ ೨ ॥
ಸೀಮೆಯ ಮನೆಗಳಲ್ಲಿ ಹೋಗೆ ಸಾರಿನಲೀ ।
ನಿರತ ಎನ್ನ ಮನೆಗಳು ಬಲು ಭೀತಿಗಳಲೀ ॥ ೩ ॥
ಕೋಲು ದೊರೆತಾ ಸ್ಥಳ । ಅಳುಗಳೆಲ್ಲಾ
ಮೇಲೆ ನಡದ ನಿಶಿ ಕಾವಲಾಯ್ತೆಲ್ಲಾ ॥ ೪ ॥
ಮಂಗಳಾಂಗಿಯ ದ ಸಕ ಲಂಗ ವರದಾ
ಮಂಗಳಾಕ್ಷರ ಬ್ಯಾಂಕು ಹೊದ್ದಿತೀ ಕರುಣಾ ॥ ೫ ॥
ಹುಂಡ್ಯನವ್ಯಾತು ಗಲು ನರರ ಚಿಂತ್ಯೆಯೊಳೂ ।
ಹಿಂಡು ಚೋರರ ಬಯ ದರಿಶಿ ಮನಸಿನೊಳೂ ॥ ೬ ॥
ಗಾಳಿಮಳೆಯೊಳು ಇರುಳು ಕಾಲ ರವಿವಾರಾ ।
ಕೇಳು ಚೋರರ ಧೈರ್ಯ । ಪೇಳಲೇನ್ ಸಾರಾ ॥ ೭ ॥
ನ್ಯಾಯಸ್ಥಾನವು ಮುಂದೆ ಇರುತ ಬಯಪಡದೇ ।
ಆಯುದಿಂ ಕನ್ನ ಕೊರೆವುತ । ದಯವು ಇಡದೇ ॥ ೮ ॥
ನಿದ್ದೆಹೋಯ್ತುವರ ದೆಶೆ । ಯಿಂದ ಜನಕೆಲ್ಲಾ ।
ಉದ್ದುರುಟು ಮಾತಾಡಿ । ಕಳೆವರ್ ನಿಶಿಯೆಲ್ಲಾ ॥ ೯ ॥
ಮುಂದೇನು ಇದಕೆ । ಹದನವನೊಂದನರಿಯೆ ।
ಸಿಂಧು ಶಯನನೆ ನೀನು । ಬಲ್ಲನಿದ ಖರೆಯೇ [illegible] ॥ ೧೦ ॥

ದಿ ನೋರ್ದರ್ನ್ ಸರ್ಕಾರ್ಸ್
ಲೈಫ್ ಇನ್ಸುರೆನ್ಸ್ ಕಂಪನಿ
ಲಿಮಿಟೆಡ್, ವಿಶಾಖಪಟ್ಟಣ.

ವಿವಾಹ ಸಂಘವನ್ನೂ ಸೇರಿರುತ್ತದೆ ಗವರ್ನಮೆಂಟ್ ಸೆಕ್ಯೂರಿಟಿ ಉಳ್ಳದ್ದು.

ತಿಂಗಳಿಗೆ ಬರೀ ಒಂದು ರೂಪಾಯಿ ಮಾತ್ರ.

ವಿವಾಹ ಸಂಘದಲ್ಲಿ ವಿವಾಹವಾಗುವ ಪರಿಯಂತ್ರವೂ ಮರಣ ಸಂಘದಲ್ಲಿ ಮರಣದ ಪರಿಯಂತ್ರ ಮಾತ್ರ ಕರೆಯ ಪ್ರೀಮಿಯಂ ಅನ್ನು ವಸೂಲುಮಾಡಲಾಗುವದು

ನಿಯುಕ್ತರಿಗೆ ಸಹಾಯ ಧನವಾಗಿ ನಾಲ್ಕು ಲಕ್ಷ ರೂಪಾಯಿ ಕೊಡಲ್ಪಟ್ಟಿತ್ತು

ಸದರಿ ಕಂಪನಿಯ ದಕ್ಷಿಣ ಕನ್ನಡ ಜಿಲ್ಲೆಯ ಜನರಲ್ ಏಜಂಟ್ ಕಟೀಲ ಮುಕುಂದ ಪೈ ಮಂಗಳೂರು, ಈ ಮೂಲಕ ತಿಳಿಯಪಡಿಸುವದೇನಂದರೆ ಸದರಿ ಕಂಪೆನಿಯಲ್ಲಿ ಈ ಮೊದಲು ಶೇರಿದ ಕರೆಯ ಪ್ರೀಮಿಯಂ ಕೊಡದೆ ಬಾಕಿ ಮಾಡಿಕೊಂಡಿರುವ ಎಲ್ಲಾ ಮೆಂಬರರು ಇದೇ ಇಸವಿ ಆಗೋಸ್ಟು ತಾ ೨೫ರ ವಳಗೆ ಪೂರಾ ಪ್ರೀಮಿಯಂ ಅನ್ನು ಒಂದೇ ಸಲ ತಂದು ಕೊಟ್ಟಲ್ಲಿ ಅಂಥಾ ಮೆಂಬರರನ್ನು ಯಾವತ್ತೂ ತರದ ಶಿಕ್ಷೆಗಳಿಂದ ವಿಮೋಚಿಸಿ (Penalty and non publication) ಕ್ರಮ ಪ್ರಕಾರವಾಗಿ ಕರೆಯ ಪ್ರೀಮಿಯಂ ಅನ್ನು ಕಂಪನಿಗೆ ವಸೂಲು ಕೊಟ್ಟ ಮೆಂಬರರ ತರದಲ್ಲಿಯೇ ಪುನಹ ಶೇರಿಸಿಕೊಳ್ಳಲಾಗುವದು ಹಾಗಲ್ಲದೆ ಶಿಕ್ಷೆಗಳನ್ನು ಕೈಗೊಳ್ಳುವರೆ ಯೋಗ್ಯವುಳ್ಳ ಮೆಂಬರರನ್ನು ಅನಂತರವೂ ಶೇರಿಸಿಕೊಳ್ಳಲಾಗುವದು.

ಇತರ ಸಂಘಟದ ಮೆಂಬರ ಶೇರಿದ ಮತ್ತು ತಾವಾಗಿಯೇ ಶೇರಲ್ಪಟ್ಟ ಎಲಾ ಮೆಂಬರರು ಇದೇ ತಿಂಗಳ ತಾ ೨೦ರ ಒಳಗೆ ತಮ್ಮ ಹೆಸರು ಪೂರಾ ವಿಳಾಸ ವರ್ಗ ಮತ್ತು ನಂಬ್ರವನ್ನು ಸಹಾ ನನಗೆ ತಪ್ಪದೆ ತಿಳಿಸತಕ್ಕದ್ದು

ಹೊಸದಾಗಿ ಸೇರಲಿಕ್ಕೆ ಅಪೇಕ್ಷೆಯುಳ್ಳವರು ಸ್ವತಹಾ ಅಗಲೀ, ಪತ್ರಮುಖಾಂತರವಾಗಲೀ ಬರಲೂ ಬಹುದು ಹೆಚ್ಚಿನ ಮಾಹಿತಿಗಳ ಬಗ್ಗೆ ನಮ್ಮ ವಿಳಾಸಕ್ಕೆ ಅರ್ಧಾಣೆ ಟಪ್ಪಾಲ ಚೀಟು ರವಾನಿಸಿದ್ದಲ್ಲಿ ಬೇಕಾಗಿರುವ ಅನುಭವಗಳು ಕೊಡಲಾಗುವದು. ಪತ್ರವ್ಯವಹಾರಗಳನ್ನು ಕನ್ನಡದಲ್ಲಿಯೂ ಇಂಗ್ಲೀಷಿನಲ್ಲಿಯೂ ನಡಿಸಬಹುದು.

ಜಿಲ್ಲೆಯ ಎಲ್ಲಾ ಕಡೆಗೆ ಸ್ಥಳೀಯ ಏಜಂಟರು ಬೇಕು ಒಳ್ಳೇ ಕಮಿಶನು ದೊರಿಯುವದು

ಕಟೀಲ್ ಮುಕುಂದ ಪೈ,
ಏಜಂಟ್, ಮಂಗಳೂರು

ಶೆಕ್ಸಪಿಯರ್ ಮಹಾಕವಿಯವರ "ಸಿಂಬೆಲೈನ್" ಎಂಬ ನಾಟಕವನ್ನು ಹೋಲುವ "ಇಂದಿರಾಬಾಯಿ" ಗ್ರಂಥಕರ್ತನಿಂದ ಬರೆಯಲ್ಪಟ್ಟ,

ಸೀಮಂತಿನಿ,

ಎಂಬ ಬಹು ಮನೋರಂಜನೀಯವಾದ ಹೊಸಗನ್ನಡ ನಾವೆಲ್,

ಸ್ತ್ರೀ ವೈದುಷ್ಯ, ಪರ್ದಾದ ಪ್ರಪಂಚ ವಿದ್ಯಾವಿಹೀನರ ದುರ್ಗತಿ, ಇವೇ ಮೊದಲಾದ ವಿಷಯಗಳನ್ನು ಹೃದಯಂಗಮವಾಗಿಯೂ ರಮ್ಯವಾಗಿಯೂ ವರ್ಣಿಸಿದ್ದು ಪುಸ್ತಕ್ಕ ತೊಡಗಿದರೆ ಕೊನೆ ಮುಟ್ಟುವ ವರೆಗೂ ಬಿಡಲು ಮನಸಾಗದು ಮೈಸೂರು ಗವರ್ನಮೆಂಟಿನವರಿಂದ ಪೋಷಿಸಲ್ಪಟ್ಟಿದೆ ಮದ್ರಾಸು ಗವರ್ನಮೆಂಟಿನವರ ಯುರೋಪಿಯನ್ ಮತ್ತು ಯುರೇಷ್ಯಿಯನ್ ಸಿವಿಲ್ ಆಫೀಸರುಗಳ ಪರೀಕ್ಷೆಗೆ ಪಠ್ಯಪುಸ್ತಕವಾಗಿ ನೇಮಿಸಲ್ಪಟ್ಟಿದೆ ಅನೇಕ ಇಂಗ್ಲಿಷ ಕನ್ನಡ ವರ್ತಮಾನ ಪತ್ರಗಳ ಮೆಚ್ಚಿಕೆಯನ್ನು ಹೊಂದಿದೆ

ಕ್ರಯ ೧೨ ಆಣೆ ಸ್ಟ್ರೀಯರಿಗೆ ಮಾತ್ರ ೧೦ ಆಣೆ ಟಪ್ಪಾಲ್ ಖರ್ಚು ಬೇರೆ.

ಜಿ ವೆಂಕಟರಾವ್, ಮಹಾದೇವ ಪೇಟ್ ಮಡಿಕೇರಿ

ಇವರಲ್ಲಿ ಸಿಕ್ಕುವುದು.

ದಯವಿಟ್ಟು ಓದಿರಿ ! ಸೌಖ್ಯವನ್ನು ಹೊಂದಿರಿ !!

ಕಾಮ ಶಾಸ್ತ್ರ

ಜುಪಿಟರ್ ಆಫೀಸಿನಿಂದ ಕನ್ನಡದಲ್ಲಿ ಈ ಪುಸ್ತಕವು ಅಚ್ಚಾಗುತ್ತಾ ಇರುವದು ಇದನ್ನೋದುವದರಿಂದ ದೇಹ ಮನಸ್ಸಂಬಂಧಗಳಾದ ಸಕಲ ಬಾಧೆಗಳೂ ಪರಿಹಾರವಾಗುವವ ಆರೋಗ್ಯ ಸಂಪದಗಳುಂಟಾಗುವವು!!

ಆತಂಕ ನಿಗ್ರಹ ಮಾತ್ರೆ

ಊಟವಾದ ಬಳಿಕ ಹಗಲಿರುಳೂ ಸೇವಿಸಬೇಕಾದದ್ದು ! ಆರೋಗ್ಯಶಾಲಿಗಳಿಗೂ ರೋಗ ಪೀಡಿತರಿಗೂ ಉಪಯುಕ್ತವಾದದ್ದು

ಈ ಮಾತ್ರೆಗಳು —

(೧) ಜೀರ್ಣಕೋಶ ಸಂಬಂಧವಾದ ವ್ಯಾಧಿಗಳನ್ನೆಲ್ಲಾ ಪರಿಹರಿಸುವದು. (೨) ನರಗಳನ್ನು ದೃಢಪಡಿಸುವದು. (೩) ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸುವದು. (೪) ಮೆದುಳನ್ನು ಸರಿಪಡಿಸುವದು. (೫) ಶಕ್ತಿಯನ್ನುಂಟುಮಾಡುವದು. (೬) ಸ್ತ್ರೀಶರೀರಾಧಾರಗಳಿಂದ ಅಂಗಗಳನ್ನು ಬಲಪಡಿಸುವದು. (೭) ನಷ್ಟವಾದ ಶಕ್ತಿಯನ್ನು ಮತ್ತೆ ವೃದ್ಧಿಗೊಳಿಸುವದು. ೩೨ ಮಾತ್ರೆಗಳಿರುವ ಡಬ್ಬಿಗೆ ಕ್ರಯ ರೂ. ೧—೦—೦.

ಆತಂಕನಿಗ್ರಹ ಔಷಧಾಲಯ [illegible]

ವೈದ್ಯ ಶಾಸ್ತ್ರಿ, [illegible]

ವಿದೇಶ ವೃತ್ತಾಂತ.

ಐದು ವರುಷಗಳಿಂದ ಇಟೇಲಿಯಲ್ಲಿ ರಿಯಾ ಎಂಬವ ಸ್ತ್ರೋಬ್ಬನು ತನ್ನ ೧೧ ಜನ ಮಕ್ಕಳನ್ನೂ ಒಬ್ಬ ಹೆಂಡತಿಯನ್ನೂ ನೇಪಲ್ಸ ಪಟ್ಟಣದ ಹತ್ತರವಿರುವ ಒಂದು ಒಕ್ಕಲು ಮನೆಯ ಹನ್ನೆರಡು ಕೋಣೆಗಳಲ್ಲಿ ಹಾಕಿ ಕೈದುಮಾಡಿದ್ದನು. ಹೀಗೆ ಏಕಾಂತದಲ್ಲಿರಿಸಿದ್ದ ಈ ಹನ್ನೆರಡು ಜನರಿಗೂ ತಂತಮ್ಮ ಕೋಣೆಯ ಪರಿಚಯವಲ್ಲದೆ ಒಕ್ಕವರು ಎಲ್ಲಿರುವರೆಂಬದು ಐದು ವರುಷಗಳ ಪರಿಯಂತರವೂ ಗೊತ್ತಾಗಲಿಲ್ಲ ಅಷ್ಟು ಜಾಗ್ರತೆಯಿಂದ ರಿಯಾಯು ತನ್ನ ಹೆಂಡತಿ ಮಕ್ಕಳ ಬಂದಿಖಾನೆಯನ್ನು ಕಾಯುತ್ತಿದ್ದನು ಇತ್ತಲಾಗೆ ಆತನ ಮಕ್ಕಳಲ್ಲಿ ಎರಡು ಜನರಿಗೆ ಈತನು ಬಂದಿಖಾನೆಯ ಅತ್ತಿತ್ತ ತಿರುಗಾಡುವ ಸ್ವತಂತ್ರವನ್ನು ಕೊಟ್ಟಿದ್ದನು. ಈ ಇಬ್ಬರು ಮಕ್ಕಳು ತಮ್ಮ ಈ ಸಂಕಷ್ಟಗಳನ್ನು ತಡಿಯಲಾರದ ತಂದೆಯ ವರ್ತನೆಯನ್ನು ಕುರಿತು ಪೋಲೀಸಿನವರಿಗೆ ದೂರು ಕೊಟ್ಟರು ಪೋಲೀಸಿನವರು ಈ ೧೩ ಜನರನ್ನು ಕೈದಿನಿಂದ ಬಿಡಿಸಿ ಆತನ ಮೇಲೆ ಮೊಕದಮೆಯನ್ನು ನಡಿಸುತ್ತಿರುವರಂತೆ

~~~~~~

ಹಿಂದೂಸ್ಥಾನದಲ್ಲಿ ಬರುವ ದಶಂಬರ ತಿಂಗಳಲ್ಲಿ ಜರಗುವ ರಾಷ್ಟ್ರೀಯ ಯಾ ಕಾಂಗ್ರೆಸು ಸಭೆಯ ಅಧ್ಯಕ್ಷತನವನ್ನು ಸರ್ ವಿಲಿಯಂ ವೆಡರ್‌ಬರ್ನರವರು ವಹಿಸಿಕೊಳ್ಳುವರೆ ಸಮ್ಮತಿಸಿರುವರು ಹಿಂದೂಸ್ಥಾನದ ಪರವಾಗಿ ಹೋರಾಡುತ್ತಿರುವ ಇಂಗ್ಲೀಷ ಉದಾರಮತಿಗಳಲ್ಲಿ ಇವರೊಬ್ಬರಾಗಿರುವರು 1885ನೇ ವರುಷದ ಕಾಂಗ್ರೆಸು ಸಭೆಯಲ್ಲಿ ಇವರು ಹಾಜರಾಗಿದ್ದರಲ್ಲದೆ 1889 ರಲ್ಲಿ ಸಭೆಯ ಅಧ್ಯಕ್ಷಪದವಿಯನ್ನು ವಹಿಸಿದ್ದರು 1904 ನೇ ವರುಷದಲ್ಲಿ ಮುಂಬಯಿಯಲ್ಲಿ ಸರ್ ಹೆನ್ರಿ ಕೋಟನರವರ ಅಧ್ಯಕ್ಷತೆಯಲ್ಲಾದ ಕಾಂಗ್ರೆಸು ಸಭೆಗೆ ಇವರು ಸಹ ಬಂದಿದ್ದರು ವಿಲಾಯತಿಯಿಂದ ದಶಂಬರ ತಿಂಗಳ ತಾ. 2ನೇಗೆ ಸರ್ ಚಾರ್ಲ್ಸ ಸ್ಕ್ವಾಯರ್ ಎಂಬವರೊಡನೆ ಹಿಂದೂಸ್ಥಾನಕ್ಕೆ ತೆರಳುವರಾಗಿ ತಿಳಿಯುತ್ತೇವೆ

~~~~~~

ಟ್ರಾನ್ಸವಾಲಿನಲ್ಲಿ ಭಾರತೀಯರು ಅಲ್ಲಿಯ ಸರಕಾರದವರಿಂದ ಪಡಿಯುತ್ತಿರುವ ಗಡಿ ಪಾರು ಮೊದಲಾದ ಅನ್ಯಾಯದ ಪೀಡನೆಯನ್ನು ಕುರಿತು ಪ್ರತಿವಾದಿಸುವರೆಯೂ ಅಲ್ಲಿ ಭಾರತೀಯರ ದೀನಸ್ಥಿತಿಯನ್ನು ಹೋಗಲಾಡಿಸುವರೆಯೂ ತಕ್ಕ ಚಳವಳಿಯನ್ನುಂಟುಮಾಡಿ ಕಾರ್ಯ ಪ್ರಯತ್ನಗಳನ್ನು ನಡಿಸಲಿಕ್ಕೆ ಲಂಡನ್ ಪಟ್ಟಣದಲ್ಲಿ ಒಂದು ಸಭೆಯು ಜರಗಿತು ಸರ್ ಎಮ್ ಬೌನಾಂಗ್ರಿಯವರು ಸಭೆಯ ಅಧ್ಯಕ್ಷರಾಗಿದ್ದರು ಅನೇಕ ಜನ ಇಂಗ್ಲೀಷರೂ ಬಿಪಿನ್ ಚಂದ್ರಪಾಲ ಮೊದಲಾದ ಭಾರತೀಯರೂ ಸಭೆಯಲ್ಲಿ ಹಾಜರಿದ್ದರು

~~~~~~

ಹಿಂದೂಸ್ಥಾನದ ಹೊಸ ವೈಸರಾಯಿ ಪ್ರಭುಗಳಾಗಿ ಬರುವ ಹಾರ್ಡಿಂಗ್ ಪ್ರಭುಗಳಿಗೆ ತಿರಿಗೊಮ್ಮೆ ಚಕ್ರವರ್ತಿಗಳ ಸಂದರ್ಶಣೆಯಾಯಿತು

~~~~~~

ಟ್ರಾನ್ಸವಾಲ ಭಾರತೀಯರಿಗೆ ಅವರ ಸಂಕಷ್ಟಗಳಲ್ಲಿ ಅವರನ್ನು ಎದೆಗುಂದಲು ಬಿಡದೆ ಸಹಾನುಭೂತಿಯನ್ನು ಪ್ರದರ್ಶಿಸಲು ಅವರ ಹಿತೇಚ್ಛುಗಳವರ ಪರವಾಗಿ ಮಿ| ರಿಚ್ ಎಂಬವರು ಸದ್ಯದಲ್ಲಿ ದಕ್ಷಿಣ ಆಫ್ರಿಕಕ್ಕೆ ತೆರಳುವರು

~~~~~~

ಜೋರ್ಜ ಚಕ್ರವರ್ತಿಗಳವರು ತಮ್ಮ ಪತ್ನಿಯರ ಸಹಿತ ಜಪಾನ ವಸ್ತುಪ್ರದರ್ಶನವನ್ನು ಸಂದರ್ಶಿಸಿದರು

~~~~~~

ಮಹಾರಾಜ [illegible] ಯವರ [illegible] ಮಹಾರಾಣಿಯವರು [illegible]

[illegible]

ಜರ್ಮನಿನ ಯುವರಾಜರವರು [illegible] ಮತ್ತು ಹಿಂದೂಸ್ಥಾನವನ್ನು ಸಂದರ್ಶಿಸುವರೆ ಸದ್ಯದಲ್ಲಿ ತೆರಳುವರಾಗಿ ಕೇಳುತ್ತೇವೆ.

~~~~~~

ಕಳೆದ ಆದಿತ್ಯವಾರ ಮಿ| ಮೆಕರ್ನೆಸ್‌ರವರನ್ನು ಅವರ ಭಾರತೀಯ ಸ್ನೇಹಿತರು ಒಂದು ಫಲಾಹಾರ ಕೊಟ್ಟು ಉಪಚರಿಸುವವರಾದರು ಮೆಕರ್ನೆಸರವರು ಹಿಂದೂಸ್ಥಾನದ ಪೋಲೀಸಿನವರ ವಿಷಯ ಬರೆದ ಪುಸ್ತಕವನ್ನು ಇಂಡಿಯಾ ಗವರ್ನಮೆಂಟಿನವರು ಸರಕಾರಕ್ಕೆ ಬಿಟ್ಟುಕೊಡಬೇಕೆಂದು ಕೊಟ್ಟಿರುವ ಆಜ್ಞೆಯ ಮೇಲೆ ಕಲಿಕತ್ತೆಯ ಹೈಕೋರ್ಟಿನಲ್ಲಿ ಅಪೀಲು ಮಾಡುತ್ತೇನೆಂಬದಾಗಿ ಈ ಸಂದರ್ಭದಲ್ಲಿ ತಿಳಿಸುವವರಾದರು

~~~~~~

ಪಾರ್ಲಿಮೆಂಟಿನ ಅಂಡರ್ ಸಕ್ರೆಟರಿಗಳಾದ ಮೊಂಟೇಗರವರನ್ನು ಮಿ ಮೆಕರ್ನೆಸರವರು ತನ್ನ ಪುಸ್ತಕದಲ್ಲಿರುವ ನ್ಯೂನತೆಗಳನ್ನು ತೋರಿಸಿಕೊಡಲು ಕೇಳಿದ್ದಲ್ಲಿ ಮಿ ಮೊಂಟೇಗರವರು ಯಾವ ನ್ಯೂನತೆಗಳನ್ನಾದರೂ ಸೂಚಿಸಲಿಕ್ಕೆ ಅಶಕ್ಯರಾದರಂತೆ

~~~~~~

ಉತ್ತರ ಹಿಂದುಸ್ಥಾನ

ಯುವರಾಜ ಪ್ರಭುಗಳವರು ಬರುವ ನವಂಬರ ತಿಂಗಳ ತಾ 2ಕ್ಕೆ ಸಿಮ್ಲಾದಿಂದ ಹೊರಟು ರಾಮಪುರ ಅಲ್ಲಹಾಬಾದ್ ಮತ್ತು ಬನಾರಸ್ ಪಟ್ಟಣಗಳನ್ನು ಸಂದರ್ಶಿಸಿ ಅದೇ ತಿಂಗಳ ತಾ 12ಕ್ಕೆ ಕಲಿಕತ್ತೆಗೆ ಬಂದು ತಲ್ಪುವರು

~~~~~~

ಕಳೆದ ತಿಂಗಳ ತಾ ೨೪ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದೂಸ್ಥಾನದಲ್ಲಿ 707 ಜನರು ಪ್ಲೇಗು ರೋಗದಿಂದ ಮೃತಪಟ್ಟಿರುವರು ಈ ಪೈಕಿ ಸಿಂದ ಮತ್ತು ಮುಂಬಯಿ ಸಂಸ್ಥಾನದಲ್ಲಿ 28[illegible], ಮದ್ರಾಸಿನಲ್ಲಿ ೩[illegible], ಬಂಗಾಳದಲ್ಲಿ ೩೧, ಯುನ್ಯಾಯಿಟಿಡ್ ಪ್ರೊವಿನ್ಸಸ್ [illegible]4, ಪಂಜಾಬು 12, ಬರ್ಮಾ 61 ಸೆಂಟ್ರಲ್ ಪ್ರೊವಿನ್ಸುಗಳು 40 ಮೈಸೂರು ಸಂಸ್ಥಾನದಲ್ಲಿ 47 ಈ ರೀತಿ ಮರಣಗಳಿದ್ದವು

———

ಸಂಯುಕ್ತ ಬಂಗಾಳ ಕಾಂಗ್ರೆಸು ಕಮಿಟಿಯವರು ಕಾಂಗ್ರೆಸು ಸಭೆಯ ಸಂಸ್ಥಾಕ್ರಮ ಮೊದಲಾದವುಗಳನ್ನು ವಿಚಾರಿಸುವ ತಮ್ಮ ನಿರ್ಣಯಗಳು ಇತರ ಕಾಂಗ್ರೆಸು ಸಭೆಯ ಪ್ರಾಂತಿಕ ಕಮಿಟಿಗಳಿಂದ ಮಂಜೂರುಮಾಡಲ್ಪಡಲಿಲ್ಲವಾದರೆ ಈ ನಿರ್ಣಯಗಳನ್ನು ಕಾಂಗ್ರೆಸು ಸಭೆಯ ಮುಂದಿಡುವರಾಗಿ ಕೇಳುತ್ತೇವೆ

———

ಕಲಿಕತ್ತೆಯಲ್ಲಿ ರಾಜದ್ರೋಹದ ತಪ್ಪಿನ ಅನುಮಾನದ ಮೇಲೆ ಮನೆಗಳನ್ನು ಝಡ್ತಿಮಾಡುವುದೂ ಆಸಾಮಿಗಳನ್ನು ಕೈದುಮಾಡುವುದೂ ನಡಿಯುತ್ತಿರುವುದು ಪಟ್ಟಣದ ಉತ್ತರ ಭಾಗದಲ್ಲಿ ಅರಮನೆಗಳನ್ನು ಝಡ್ತಿಮಾಡಿದ್ದಲ್ಲಿ ಉಭಯ ಬಂಗಾಳಗಳಲ್ಲಿಯೂ ಆದ ರಾಜದ್ರೋಹದ ಅನಾಹುತಗಳ ಕುರಿತಾದ ಕಾಗದ ಪತ್ರಗಳು ದೊರಕಿವೆಯಂತೆ ಈ ಮನೆಗಳ ಪೈಕಿ ಒಂದರಲ್ಲಿ ಸಿಡಿಮದ್ದಿನ ತೋಟೆಗಳನ್ನು ತಯ್ಯಾರಿಸುವ ಯಂತ್ರವನ್ನು ಹಿಡಿದಿರುವರೆಂತ ಸಹಾ ವರ್ತಮಾನವಿರುವುದು ಇನ್ನು ಕೆಲವರು ಹೀಗೆ ಪೋಲೀಸಿನವರಿಗೆ ಝಡ್ತಿಯಲ್ಲಿ ಸಿಕ್ಕಿದ್ದು ತೋಟೆಗಳ ಯಂತ್ರಗಳಲ್ಲ, ಇತರ ಕಬ್ಬಿಣದ ಸಾಹಿತ್ಯವೆಂತಲೂ ಹೇಳುವರು

~~~~~~

ನಾಸಿಕದ ಒಂದನೇ ತರಗತಿಯ ಮೇಜಿಸ್ಟ್ರೇಟರರ ಕೈಕೆಳಗೆ ಕೈದಿಯಲ್ಲಿರುವ ಸವಾರಕಾರ ಎಂಬವನನ್ನು ಕಂಡು ಮಾತಾಡಲಿಕ್ಕೆ ಬ್ಯಾರಿಷ್ಟರ್ ಬೆಪ್ಟಿಸ್ಟಾರವರಿಗೆ [illegible] ಮತ್ತು [illegible]

[illegible]

[illegible] ತಿಳಿಸಲ್ಪಟ್ಟಿರುವರು. ಸವಾರಕಾರನು ವಕೀಲರ ಸಹಾಯವನ್ನು ಕೇಳಲಿಲ್ಲವೆಂತ ಸಹ ಮೇಜಿಸ್ಟ್ರೇಟರವರಿಂದ ತಿಳಿದ ಮೇಲೆ, ಸವಾರಕಾರನ ಪತ್ನಿಯ ಪರವಾಗಿ ಬ್ಯಾರಿಷ್ಟರ್ ಬೆಪ್ಟಿಸ್ಟಾರವರನ್ನು ಸವಾರನ ಕೂಡೆ ಮಾತಾಡಬಿಡಬೇಕೆಂದು ಕೇಳಿರುವರು ಫ್ರೆಂಚ ಸರಕಾರದವರು ಸವಾರಕಾರನನ್ನು ತಮ್ಮ ವಶಕ್ಕೆ ಬಿಟ್ಟುಕೊಡಬೇಕೆಂಬುದನ್ನು ಸವಾರಕಾರನಿಗೆ ತಿಳಿಸುವ ಮುಖ್ಯ ವಿಷಯವಾಗಿರುವದೆಂದು ಸಹ ಈ ಸೋಲಿಸಿಟರವರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರಿಗೆ ತಿಳಿಸಿರುತ್ತಾರೆ

~~~~~~

ಪೂರ್ವ ಬಂಗಾಳದಲ್ಲಿಯ ಮಾಣಿಕಗಂಜ ಎಂಬಲ್ಲಿ ನೆರೆಯಿಂದ ಪಟ್ಟಣದಲ್ಲೆಲ್ಲಾ ನೀರು ತುಂಬಿ ಹೋಗಿರುವುದು ಬೆಳೆಯು ಬಹಳವಾಗಿ ನಾಶವಾಗಿ ಹೋದದ್ದಲ್ಲದೆ ಅನೇಕ ಮನೆಗಳು ಸಹಾ ಬಿದ್ದು ಹೋಗಿಯವೆ.

~~~~~~

ಮುಂಬಯಿಯ ಗವರ್ನರವರ ಕಾರ್ಯನಿರ್ವಾಹ ಕಮಿಟಿಯ ಮೆಂಬರರಾದ ಸರ್ ಜೋನ್ ಮುಯಿರ ಮೆಕೆಂಜಿಯವರ ಕೆಲಸದವಧಿಯು ಮುಗಿಯುವುದರಿಂದ ಮುಂಬಯಿಯ ಸರಕಾರದ ಪ್ರಕೃತ ಚೀಫ್ ಸೆಕ್ರೆಟರಿಗಳಾಗಿರುವ ಮಿ| [illegible] ಎಂಬವರನ್ನು ಕಾರ್ಯನಿರ್ವಾಹಕ ಕಮಿಟಿಯ ಮೆಂಬರರಾಗಿ ನೇಮಿಸಿರುವರು

~~~~~~

ಅಲ್ಲಹಾಬಾದಿನ [illegible] ಸೆಶನ್ಸ್ ಜಡ್ಜರವರು ಒಂದು ದೊಡ್ಡ ದರೋಡೆ ಮೊಕದಮೆಯ ತನಿಖೆ ನಡಿಸುತ್ತಿರುವರು ಈ ಮೊಕದಮೆಯಲ್ಲಿ 22 ಜನ ಮುದ್ದೆಯಾಲೆಗಳೂ ಅವರು ಕಡೆಯಿಂದಲೂ 212 ಜನ ಸಾಕ್ಷಿಗಾರರೂ ಹಾಜರಾಗ್ಯ ಇರುವರು 1908 ನೇ ವರುಷದಲ್ಲಿ ಮುರಾದಾಬಾದ ಜಿಲ್ಲೆಯಲ್ಲಿ ಆದ ದರೋಡೆ ಕಳವಿನ ಅಪರಾಧಿ ಭೋಂಜ [illegible] ಎಂಬವನಿಗೆ ಜನ್ಮಾಂತ ದೇಶಾಂತರ ಶಿಕ್ಷೆಯು ವಿಧಿಸಲ್ಪಟ್ಟು ಈತನನ್ನು ಅಂಡಮಾನ ದ್ವೀಪಗಳಿಗೆ ಒಯ್ಯುತ್ತಿರುವಾಗ ಈತನು ತಾನು ಹಲವು ವರುಷಗಳಿಂದ ದರೋಡೆ ಕಳವುಗಳನ್ನು ಮಾಡುವರೆ ಏರ್ಪಟ್ಟ ಹಲವು ಜನರು ಸೇರಿರುವ ಪಂಗಡವೆಂತಲೂ ಈ ಪಂಗಡದವರಿಗೆಲ್ಲಾ ಒಬ್ಬ ದೊಡ್ಡ ಜಮೀನುದಾರನ ಸಹೋದರನು ಆಯುಧ ಮೊದಲಾದವುಗಳನ್ನು ಸಂಗ್ರಹಿಸಿ ಕೊಡುತ್ತಿರುವನಲ್ಲದೆ ದರೋಡೆ ಕಳ್ಳರ ಪಂಗಡವನ್ನೆಲ್ಲಾ ಸಾಕುತ್ತಿರುವನೆಂತಲೂ ಪೋಲೀಸಿನವರ ಹತ್ತರ ಬಾಯಿಬಿಟ್ಟು ಹೇಳಿದ್ದರಿಂದ ಈತನನ್ನು ಮಾಫಿ ಸಾಕ್ಷಿ ಯಾ ಎಪ್ರೂವರನನ್ನಾಗಿ ಮಾಡಿ ಈ ಮೊಕದಮೆಯ ತನಿಖೆಯು ನಡಿಯುತ್ತಿರುವುದು

~~~~~~

ಮುಂಬಯಿ ಪಟ್ಟಣದಲ್ಲಿ ಹುಚ್ಚು ನಾಯಿಗಳ ಸಂಖ್ಯೆಯು ಬಹಳ ಹೆಚ್ಚಿರುವುದಂತೆ ಪ್ರತಿ 35ರಲ್ಲಿ 22 ನಾಯಿಗಳಿಗೆ ಈ ರೋಗ ಬಾಧೆಯು ತಗಲಿರುವುದು

~~~~~~

ವೈಸರಾಯ ಪ್ರಭುಗಳ ಕಾರ್ಯನಿರ್ವಾಹ ಸಭೆಯ ಮೆಂಬರರಾದ ಸರ್ ಫ್ಲೀಟ್‌ವೂಡ್ ವೆಲ್ಸನರವರು, ವೈಸರಾಯ ಪ್ರಭುಗಳ ನ್ಯಾಯವಿಧಾಯಕ ಸಭೆಯ ಪ್ರಜಾ ಕಡೆಯ ಮೆಂಬರರಿಗೂ ಇತರ ಕೆಲವು ಸ್ನೇಹಿತರಿಗೂ ಒಂದು ಔತಣವನ್ನು ಕೊಡುವವರಾದರು ಬಹುಮಾನಪಟ್ಟ ಗೋಖಲೆಯವರು, ಭೂಪೇಂದ್ರನಾಥ ಬಾಸು, ಅಬ್ದುಲ್ ಹಮೀದ್, ಪಂಡಿತ ಮಲವಿಯಾ, ರಾವ್ ಬಹದೂರ್ ಆರ್ ಎನ್ ಮೂಡಹೋಲ್ಕರ್, ಎನ್. ಸುಬ್ಬರಾವ್, ಸೈಂಟ್ ನಿಹಾಲ್ ಸಿಂಗ್ ಮೊದಲಾದವರು ಆಮಂತ್ರಿಸಲ್ಪಟ್ಟ ಅತಿಥಿಗಳಲ್ಲಿ ಕೆಲವರಾಗಿರುವರು.

———

[illegible] 1907ನೇ [illegible]

[illegible]

ವರ್ತಮಾನದಿಂದ ತಿಳಿದು ಬರುತ್ತದೆ. ಹಾವಳಿಯು ಬಹಳ ವಿಪರೀತವಾಗಿದ್ದೀತೆಂತ ಯೋಚಿಸುತ್ತಿರುವರು ಗ್ಯಾಲೆಂಡ್ ಎಂಬ ಪಟ್ಟಣವು ನೆರೆಯ ನೀರಿನ ಹೊಡತದಿಂದ ಜರಿದು ಹೋಗುತ್ತಿರುವುದು ರೈಲ್ವೆ ಬಂಡಿಗಳ ಓಡ್ಯಾಟವು ಸಹಾ ತಡಿಯಲ್ಪಟ್ಟಿರುವುದು

ಯುರೋಪದಲ್ಲಿ ಗೋಧಿಯ ಧಾರಣೆಯು ಬಹಳ ತಗ್ಗಿರುವುದರಿಂದ ಕರಾಚಿಯಿಂದ ಯುರೋಪಿಗೆ ರಫ್ತಾಗುವ ಗೋಧಿಯು ಕಡಿಮೆಯಾಗಿರುವುದು ಮಳೆಯು ಈ ವರೇಗೆ ಚನ್ನಾಗಿ ಬಂದಿರುವುದರಿಂದ ಗೋಧಿಯ ಬೆಳೆಯ ಫಸಲು ಚಲೋದಾಗುವುದೆಂಬುವ ನಿರೀಕ್ಷಣೆ ಇರುವುದು.

ಯುನೈಟೆಡ್ ಪ್ರೊವಿನ್ಸುಗಳಲ್ಲಿ ಗತಿಸಿದ ಚಕ್ರವರ್ತಿ ಎಡ್ವರ್ಡ ರಾಜರವರ ಸ್ಮರಣಾರ್ಥವಾಗಿ ಕ್ಷಯರೋಗಿಗಳ ಒಂದು ಚಿಕಿತ್ಸಾಲಯವನ್ನು ಹಿಮಾಲಯದಲ್ಲಿ ಸ್ಥಾಪಿಸುವರೆ ನಿಶ್ಚಯಿಸಿರುವರು

ಧಾರಾವಾಡಿನ ತಾಲೂಕು ಬೋರ್ಡಿನವರು ನ್ಯಾಯ ಉಂಟಾದ ಸ್ಥಾನಿಕ ಬೋರ್ಡಿನ ತಾಲೂಕು ಬೋರ್ಡನ್ನು ಎರಡು ವರುಷಗಳ ಪರ್ಯಂತರ ಅನಾಮತು ಪಡಿಸಿರುವರು. ಈ ಎರಡು ವರುಷಗಳ ವರೇಗ ಅಲ್ಲಿಯ ಅಸಿಸ್ಟಾಂಟ ಕಲೆಕ್ಟರರವರು ತಾಲೂಕು ಬೋರ್ಡ ಸಂಬಂಧವಾದ ಕೆಲಸಗಳನ್ನು ನಿರ್ವಹಿಸುವರೆ ಅಪ್ಪಣೆಸಿರುವರು

ಸೆಡಿಸಿಯಸ್ ಮಿಟಿಂಗ್ಸ್ ಅಕ್ಟ (ರಾಜದ್ರೋಹದ) ಸಭೆಗಳನ್ನು ಕೂಡದಂತೆ ನಿರ್ಬಂಧಿಸುವ ಕಾನೂನು ಇದೇ ಬರುವ ಆಕ್ಟೋಬರ ತಿಂಗಳಲ್ಲಿ ಅಂತ್ಯವಾಗುವುದನ್ನು ತಿರಿಗಿ ಬರುವ ಮಾರ್ಚ ತಿಂಗಳ ಅಂತ್ಯದ ವರೆಗೆ ಜಾರಿಯಲ್ಲಿರಬೇಕೆಂದು ಕಳೆದ ತಾ 5ರಲ್ಲಿ ಕೂಡಿದ ನ್ಯಾಯವಿಧಾಯಕ ಸಭೆಯಲ್ಲಿ ಮುಂದಿಡೋಣಾದ ಕಾನೂನು ಮಸೂದೆಯು ಮಂಜೂರು ಮಾಡಲ್ಪಟ್ಟಿತು ಪ್ರಜಾಪ್ರತಿನಿಧಿಗಳಲ್ಲಿ ಕೆಲವರು ಇಂಥಾ ಕಾನೂನಿನ ಜ್ಯಾರಿಯು ಪ್ರಕೃತ ಸಮಯದಲ್ಲಿ ಅನುಚಿತವೆಂದ ಭಾಷಣಗಳನ್ನು ಮಾಡಿದರು ಇದೇ ಸಮಯದಲ್ಲಿ ಮೂಲಸಾರಶಾಲಾ ಶಿಕ್ಷಣ ಮೊದಲಾದವುಗಳ ಕುರಿತು ಪ್ರಜಾಕಡೆಯಿಂದ ಹಲವು ಪ್ರಶ್ನೆಗಳು ಕೇಳಲ್ಪಟ್ಟವು ವಾಡಿಕೆ ಮೇರೆಗೆ ಈ ವಿಷಯಗಳೆಲ್ಲವು ಸರಕಾರದವರಿಂದ ಪರ್ಯಾಲೋಚಿಸಲ್ಪಡುತ್ತಿರುವವೆಂತ ಉತ್ತರಗಳು ದೊರಕೋಣಾದವು

ಸರಕಾರಿ ಕಚೆಯಿಂದ ಸಪ್ಟಂಬರ ತಿಂಗಳ ಆಖೈರ ವರೆಗೆ ಬರುವ ಮಳೆಯ ಕುರಿತು ಈ ರೀತಿ ಪ್ರಕಟಣೆಯು ಪ್ರಕಟಿಸಲ್ಪಟ್ಟಿರುವುದು ಮಳೆಯ ಸಾಧಾರಣ ಸ್ಥಿತಿಯು ಅನುಮಾನಕರವೆಂತ ತೋರಿಬಂದರೂ ಆಗೋಸ್ತು ಮತ್ತು ಸಪ್ಟಂಬರ ತಿಂಗಳುಗಳಲ್ಲಿ ಮಳೆಯು ಎಷ್ಟು ಕಡಿಮೆಯಾದೀತೆಂತ ಹೇಳಲು ಕಾರಣವಿಲ್ಲ ಒಂದೇ ರೀತಿ ಮಳೆಯಾಗುವುದಿಲ್ಲವಾದರೂ ಕೆಲವು ಸಮಯ ಮಳೆಯು ಬಿರುಸಾಗಿ ಬರುವ ಮತ್ತು ತನ್ಮಧ್ಯ ಮಳೆ ಕಟ್ಟಿನಿಂತಿರುವ ಸಂಭವವಿರುವುದೆಂತ ಸೂಚಿಸಿರುವರು

ಸಭೆಕೂಡಿ ಉಪವಾಸವನ್ನು ಮಾಡಿ ಬಂಗಾಳದಲ್ಲಿ ಬಹಿಷ್ಕಾರ ದಿನಾಚರಣೆಯು ಸರಕಾರಿ ಅಪ್ಪಣೆ ಮೇರೆಗೆ ಅಸಾಧ್ಯವಾದುದರಿಂದ ಪ್ರತಿಯೊಂದು ಬಂಗಾಳಿಯವರ ಮನೆಯಲ್ಲಿ ಈ ದಿನವನ್ನು ಆಚರಿಸಬೇಕೆಂತ ವರ್ತಮಾನ ಪತ್ರಗಳಲ್ಲಿ ಸೂಚಿಸಲ್ಪಟ್ಟಿರುವುದು ವಿದೇಶಿ ವಸ್ತುಗಳ ಎಡೆಯಲ್ಲಿ ಸ್ವದೇಶದಲ್ಲಿ ತಯ್ಯಾರಾದವುಗಳನ್ನೇ ಉಪಯೋಗಿಸಿ ದೇಶೀಯ ಕೈಗಾರಿಕೆಗಳನ್ನು ಪೋಷಿಸುವೆವೆಂದು ನಿಶ್ಚಲವಾದ ನಿರ್ಧಾರಗಳನ್ನು ಮಾಡಿಕೊಳ್ಳಬೇಕೆಂದು 'ಬಂಗಾಳಿ' ಪತ್ರಿಕೆಯು ಸೂಚಿಸಿರುವುದು.

ಹಿಂದುಸ್ಥಾನದಲ್ಲಿ ಎಲ್ಲಾ ಇಂಗ್ಲೀಷ ಪತ್ರಗಳಿಗಿಂತ ಮೊದಲು ಹೊರಡಿಸಲ್ಪಟ್ಟ 'ಇಂಡಿಯನ್ ಮಿರರ್' ಎಂಬ ಕಲಿಕತ್ತೆಯ ಪತ್ರದ ಜುಬುಲಿಯನ್ನು ನೆರವೇರಿಸುವ ವಿಷಯವನ್ನು ಆಲೋಚಿಸಲು ಕಲಿಕತ್ತೆಯಲ್ಲಿ ಈ ತಿಂಗಳ ತಾ. 8ಕ್ಕೆ ಒಂದು ಸಭೆಯು ಕೂಡಿಸಲಿಕ್ಕಿತ್ತು

ಫರಿದಪುರದಲ್ಲಿ ಜನರು ಸಭೆ ಸ್ಥಾನಗಳನ್ನು ಮಾಡಿ ಸ್ವದೇಶಿ ವಸ್ತುಗಳನ್ನೇ ಕೊಂಡುಕೊಳ್ಳುವೆವೆಂಬ ಪ್ರಮಾಣವನ್ನು ಒಪ್ಪೊತ್ತಿರಾಗ ಮಾಡಿ ಬಹಿಷ್ಕಾರ ದಿನವನ್ನಾಚರಿಸಿದರೆಂತಲೂ, ದಿನಾಜಪುರದಲ್ಲಿ ದೊಡ್ಡ ಸಭೆ ಕೂಡಿ ಭಾಷಣಗಳನ್ನು ಕೊಟ್ಟು ವಿದೇಶ ವಸ್ತುಗಳಿಗೆ ಬಹಿಷ್ಕಾರ ವಿತರಬೇಕೆಂಬುವ ನಿರ್ಧಾರಗಳನ್ನು ಸಭೆಯಲ್ಲಿ ಮಾಡಿ ಈ ದಿನವನ್ನಾಚರಿಸಿದರೆಂದ ಗಿಯೂ ಬಂಗಾಳಿ ಪತ್ರಿಕೆಯಿಂದ ತಿಳಿದು ಬರುತ್ತದೆ

ಕಲ್ಕತ್ತೆಯ ಹೈಕೋರ್ಟಿನ ಚೀಫ್ ಜಸ್ಟೀಸರಾದ ಸರ್ ಲಾರೆನ್ಸ್ ಜೆಂಕಿನ್ಸರವರು ರಜೆಯಮೇಲೆ ಕಲ್ಕತ್ತೆಯಿಂದ ವಿಲಾಯತಿಗೆ ತೆರಳಿರುವರು

ಬಂಗಾಳದ ಲೆಫ್ಟಿನೆಂಟ್ ಗವರ್ನರರವರ ಕಾರ್ಯನಿರ್ವಾಹಕ ಸಭೆಗೆ ಹೈಕೋರ್ಟಿನ ಜಡ್ಜರಾದ ಬಹುಮಾನವಂತ ಶಾಮಪ್ರಸಾದರವರನ್ನು ಮೆಂಬರರಾಗಿ ನೇಮಿಸುವ ಸಂಭವವಿರುವುದು

ಮುಂಬಯಿ ಪ್ರಾಂತ್ಯಗಳಲ್ಲಿ ವಿಶೇಷವಾಗಿ ಗಾಳಿ ಮಳೆಯು ಬರುತ್ತಿರುವುದು ಮುಂಬಯಿಯಿಂದ 34 ಮೈಲುಗಳ ದೂರವಿರುವ ಕಲ್ಯಾಣ ಎಂಬಲ್ಲಿ ಮಳೆನೀರಿನಿಂದ ನೆರೆಬಂದು ನಿವಾಸಿಗಳು ಪಟ್ಟಣದಲ್ಲಿ ಅತ್ತಿತ್ತ ತಿರುಗಾಡುವರೆ ಚಿಕ್ಕ ದೋಣಿಗಳನ್ನು ಉಪಯೋಗಿಸುತ್ತಿರುವರಂತೆ

ಮುಂಬೊ ಪ್ರಜೆಗಳು ಸಿಮ್ಲದಿಂದ ಅಲ್ಲಹಾಬಾದಿಗೆ ಬಂದಾಗ ಅಲ್ಲಿಯ ನವೀನ 'ಮಿಂಟೊಪಾರ್ಕ' ಎಂಬ ಉದ್ಯಾನವನದ ಮುಹೂರ್ತ ಸಂಪ್ರಮವನ್ನು ನೆರವೇರಿಸಿಕೊಡುವರು

ಕಂಚಿ ಕಾಮಕೋಟಿ ಶ್ರೀ ಶಂಕರಾಚಾರ್ಯ ಶ್ರೀ ಸ್ವಾಮಿಗಳವರು ವೈಶ್ಯಪ್ರಕಾರದ ಪರವಾಗಿ ಬ್ರಾಹ್ಮಣರು ಅನುಸರಿಸಬೇಕಾದ ಧರ್ಮಮಾರ್ಗವನ್ನು ಇತ್ತಲಾಗಿ ಪ್ರಕಟಿಸಿರುವರು — ಬ್ರಾಹ್ಮಣ ಗೌರವವನ್ನು ನಿರಂತರ ಪ್ರಯತ್ನಗಳಿಂದಲೂ ಸಾಧಿಸಿ ಸದಾ ವೃದ್ಧಿಸಲು ಮನಸ್ಸುಕೊಡುವವರಾಗಬೇಕು ಬ್ರಾಹ್ಮಣ ಜಾತಿ ಎಲ್ಲವೂ ಅವರ ಧರ್ಮಕ್ಕನುಕೂಲವಾಗಿ ಇತರ ಜಾತಿಯವರಿಗೆ ವಿದ್ಯಾಭ್ಯಾಸವನ್ನು ಕೊಡುವುದರಿಂದ ದೇಶಕ್ಕೆ ಸಮಯಗಳಲ್ಲಿ ಕೆಲವು ದಾಸುಗಳನ್ನು ಕೈಕೊಂಡು ನಿಸಿಪೋಗದೆ ಒಂದು ರೀತಿಗೆ ಸಹಕಾರಿಗಳಾಗುವರೆಂದು ಗೊತ್ತಿದ್ದೇವೆ ಪಂಚ ಮಹಾಯಜ್ಞಗಳನ್ನು ಬ್ರಾಹ್ಮಣರು ಬಿಟ್ಟು ಬಿಟ್ಟಿರುವುದರಿಂದ ದೇಶದ ಆಯಾ ಕರ್ತವ್ಯ ಸಾಧ್ಯವಾಗುವ ಬರಲಿಗೆ ಇವರು ನಷ್ಟದರಾಗಿರುವರೆಂಬ ವಿಷಯಕ್ಕೆ ಬ್ರಾಹ್ಮಣರು ತಕ್ಕ ನಿವಾರಣೋಪಾಯವನ್ನು ಚಿಂತಿಸಿ, ಬ್ರಾಹ್ಮಣರ ಸರ್ವರ ಒಳಿತಕ್ಕಾಗಿ ಮಾಡಬೇಕಾದ ಸ್ವಾರ್ಥತ್ಯಾಗ ಇಷ್ಟರಿಂದ ಬ್ರಾಹ್ಮಣರ ಶ್ರೇಷ್ಠತೆಯು ರಹಿತವಾಗಿರುವುದರಿಂದ ಇಂಥ ಶ್ರೇಷ್ಠತೆಯು ಇತರರಿಂದ ಮನ್ನಿಸಲ್ಪಡದು ಬ್ರಾಹ್ಮಣರು ತಮ್ಮ ಪೂರ್ವದ ರೀತಿಗಳನ್ನು ಕೈಕೊಂಡು ಭಕ್ತಿ, ಜ್ಞಾನ ಮತ್ತು ವಿದ್ಯೆಗಳೊಂದಿಗೆ ವಿನಯವನ್ನು ಅಭ್ಯಾಸಿಸಿ ದರೆ ನಮ್ಮ ಪೂರ್ವದ ಧರ್ಮೋನ್ನತಿಯನ್ನುಜ್ಜೀವಿಸುವುದರಲ್ಲಿ ಸಹಾಯಕರಾಗುವರು

ದಕ್ಷಿಣ ಹಿಂದುಸ್ಥಾನ.

ಮಾಜಿ ಮುನ್ಸೀಫರಾಗಿದ್ದ ಮಂಗಳೂರು ಜೋಸೆಫ್ ಲೋಬರವರ ಮಗ ಬ್ಯಾರಿಸ್ಟರ್ ಮೆ| ಪಿ| ಸಿ| ಲೋಬರವರು ಒಂದನೇ ಗ್ರೇಡ್ ವೆಲ್ಲೂರು ಡಿಸ್ಟ್ರಿಕ್ಟ್ ಮುನ್ಸೀಫರಾಗಿ ನೇಮಿಸಲ್ಪಟ್ಟಿರುವರು.

ತಂಜಾವೂರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರ ಕಚೇರಿಯಲ್ಲಿ 'ವೆಸಲಿಯನ್ ಮಿಶನರಿಗಳಾದ ರೆವರೆಂಡ್ ಜೆ. ಜಿ. ಎಲೀಸ್ ಮತ್ತು ರೆವರೆಂಡ್ ಇ. ವೆಬ್ಸ್ಟರ್ ಇವರ ಮೇಲೆ ಉ. ಗುರುಸ್ವಾಮಿ ನ್ಯಾಡು ಎಂಬ ಕಂಟ್ರಾಕ್ಟರರೊಬ್ಬರು ಮೈಮೇಲೆ ಬಿದ್ದು ಬೈದದ್ದಕ್ಕಾಗಿ ಫಿರ್ಯಾದು ದಾಖಲು ಮಾಡಿರುವರು.

ಮದ್ರಾಸು ಸರಕಾರದ ಅಂಡರ್ ಸೆಕ್ರೆಟರಿಗಳಾಗಿ ಸದ್ಯದಲ್ಲಿಯೇ ಪ್ರೊವಿನ್ಸಿಯಲ್ ಸರ್ವಿಸಿನಲ್ಲಿರುವ ಇಬ್ಬರು ದೇಶೀಯರನ್ನು ನೇಮಿಸುವ ಸಂಭವವು ಉಂಟೆಂಬದಾಗಿ ತೋರುತ್ತದೆ

ತಿರುವಾಂಕೋಡು ಮತ್ತು ಕೊಚ್ಚಿಯ ಕಾಯಂ ರೆಸಿಡೆಂಟರಾಗಿರುವ ಮೆ ಸಿ ಸಿ ಕಾರರವರು ತಾವು ಪ್ರಕೃತ ಪಡದಿರುವ ಆರು ತಿಂಗಳ ರಜೆ ನಂತರ ಗವರ್ನಮೆಂಟ ಸೆಕ್ರೆಟರಿಯಟ್‌ನಲ್ಲಿ ಅಥವಾ ಮದ್ರಾಸು ರೆವಿನ್ಯು ಬೋರ್ಡ ಮೆಂಬರರಾಗಿ ನೇಮಿಸಲ್ಪಡುವರಂತೆ

ದಕ್ಷಿಣ ಆಫ್ರಿಕದಿಂದ ಗಡಿಪಾರು ಮಾಡಲ್ಪಟ್ಟು ಪ್ರಕೃತ ಮದ್ರಾಸಿನಲ್ಲಿರುವ ನೂರಾರು ಜನ ಟ್ರಾನ್ಸವಾಲ ಭಾರತೀಯರಿಗೆ ಮುಂಬಯಿಯಲ್ಲಿ ಮುಂಬಯಿ ಸರಕಾರದವರು ಸಹಾಯಮಾಡಿದ ರೀತಿಯಲ್ಲಿಯೇ ಉದರ ಪೋಷಣದ ಸಹಾಯಕ್ಕಾಗಿ ದಕ್ಷಿಣ ಆಫ್ರಿಕದ ಭಾರತೀಯರ ಸಹಾಯಾರ್ಥ ಸಂಘದ ಸೆಕ್ರೆಟರಿ ರಾ ಜಿ ಎ ನಟೇಸನರವರು ಸರಕಾರದವರಿಗೆ ಮನವಿಮಾಡಿಕೊಂಡಿದ್ದರು. ಯತೋಚಿತ ಸಹಾಯವನ್ನು ಮಾಡುವದು ಮದ್ರಾಸು ಸರಕಾರದವರಿಗೆ ಅನುಕೂಲವಾಗಿದ್ದರೂ ಅಂಥಾ ಸಹಾಯವನ್ನು ಮಾಡದೆ ಮನವಿಯನ್ನು ಇಂಡಿಯಾ ಸರಕಾರದವರ ಪರ್ಯಾಲೋಚನೆ ಬಗ್ಗೆ ಕಳುಹಿಸಿಕೊಟ್ಟಿರುವರಂತೆ.

ಮೈಸೂರು ಸಂಸ್ಥಾನವು ವಿದ್ಯಾವಿಷಯಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವುದೆಂಬುದು ಈ ಕೆಳಗಿನ ವೃತ್ತಾಂತದಿಂದ ತೋರಿಬರುವುದು ವಿದ್ಯಾಶಾಲೆಗಳು ಕಳೆದ ವರುಷದ ವರದಿಯಲ್ಲಿ 4146ರಿಂದ 4310ಕ್ಕೆ ಹೆಚ್ಚಿರುವವೆಂಬದಾಗಿಯೂ ಈ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆಯು 123,000ರಿಂದ 139000ಕ್ಕೆ ಅಧಿಕವಾಗಿರುವದೆಂಬದಾಗಿಯೂ ವ್ಯಕ್ತವಾಗುವುದು ಹಳ್ಳಿಯ ಎಲಿಮೆಂಟರಿ ಶಾಲೆಗಳಲ್ಲಿ ಶಾಲಾ ಫೀಸುಗಳನ್ನು ವಸೂಲು ಮಾಡುವುದಿಲ್ಲವಾದ್ದರಿಂದ ಪ್ರ್ಯಾಮರಿ ಮತ್ತು ಮಿಡ್ಲ್ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆಯು ಬಹಳವಾಗಿ ಹೆಚ್ಚಿರುವುದು ಸ್ತ್ರೀ ವಿದ್ಯಾಭ್ಯಾಸಕ್ಕೆ ಸಹಾ ಮೈಸೂರು ಸರಕಾರದವರು ಇದೇ ರೀತಿ ಗಮನಕೊಡುತ್ತಿರುವರೆಂತ ಈ ವರದಿಯಿಂದ ತೋರಿಬರುವುದು ಹುಡುಗಿಯರ ಶಾಲೆಗಳ ಸಂಖ್ಯೆಯು 259ರಿಂದ 272 ಆಗಿರುವುದು. ಈ ಶಾಲೆಗೆ ಬರುತ್ತಿರುವ ಬಾಲಿಕೆಯರು ಸಂಖ್ಯೆಯಲ್ಲಿ 19,000ರಿಂದ 21,400ಕ್ಕೆ ಹೆಚ್ಚಿರುವರು ಸಂಸ್ಥಾನದ ಸರಕಾರದವರು ಹಳ್ಳಿಯ ಶಾಲೆಗಳ ಅಭಿವೃದ್ಧಿಗೆ ಒಂದು ಲಕ್ಷ ರೂಪಾಯಿಗಳನ್ನು ಸೆಂಕ್ಷನ್ ಮಾಡಿರುವರು. ಸರಕಾರಿ ಶಾಲೆಗಳಲ್ಲಿ ಧರ್ಮಶಿಕ್ಷಣವು ಕೊಡೋಣಾಗುವ ಏರ್ಪಾಡು ಸಹ ಮಾಡಲ್ಪಟ್ಟಿರುವುದು

ದಕ್ಷಿಣ ಕನ್ನಡ.

WANTED.

Four experienced salesmen who can read and write English and Canarese. Cash security of Rs 100 or Personal security of Rs 200 is required. Salary Rs. 8 rising Rs. 12. For further particulars see in person. Applications to be made to M. Ebrahim Elias, General Merchant, Mangalore on or before the 31st instant.

ನೋಟೀಸು.

ಉಡುಪಿ ತಾಲೂಕು ಪಾರಂಪಳ್ಳಿ ಗ್ರಾಮದ ಮಂಜುನಾಥ ಉಪಾಧ್ಯನ ವಿಧವೆ ಕಾವೇರಮ್ಮನು ತನ್ನ ಗಂಡನಿಗೆ ಬರತಕ್ಕ ಡಿಕ್ರಿಸಾಲ ವಸೂಲಿ ಬಗ್ಗೆ ವಾರಿಸಿನ ಸರ್ಟಿಫಿಕೆಟ್ ಅಪೇಕ್ಷಿಸಿ ಕುಂದಾಪುರ ಡಿ। ಮು। ಕೋರ್ಟಿನಲ್ಲಿ ಕೊಟ್ಟ ಸಿ. ಸಿ. ನಂಬ್ರ $\frac{42}{1910}$ ನೇ ಅರ್ಜಿ ಇದೇ ಅಗೂಸ್ತು ತಾರೀಕು ೨೬ಕ್ಕೆ ತನ್ಸಿಗೆ ಇಟ್ಟಿದೆ. ಆಕ್ಷೇಪ ಇದ್ದವರು ಜಾಹಿರು ಮಾಡ ಬಹುದು.

ತಾ. 5—8—10 ಕುಂದಾಪುರ. U Subbannayya *Pleader*

ಸೂಚನೆ ಬರುವ ಶುಕ್ರವಾರ ತಾ ೧೯ ಯುಗುಪಾಕರ್ಮ ವ್ರತಾಚರಣೆ ದಿನವಾದ್ದರಿಂದ ಸ್ವದೇಶಾಬಿಮಾನಿ ಆಫೀಸಿಗೆ ರಜೆ ಇರುವುದು ತಾ ೧೯ರ ಸ್ವದೇಶಾಭಿಮಾನಿಯ ಸಂಚಿಕೆಯನ್ನು ಮರುದಿನ ತಾ ೨೦ರಲ್ಲಿ ಪ್ರಕಟಿಸುವೆವು

ಮಂಗಳೂರು ಕಳೆದ ವಾರದಲ್ಲಿ ಪ್ಲೇಗು ಯಾ ಕಡುಬು ರೋಗದ ಮರಣಗಳಿದ್ದಿಲ್ಲ

ಮಂಗಳೂರು ಟೌನ್ ಸ್ಟೇಶನ್ ಹಿಂದಗಡಯಿಂದ ಕಸಾಯಿಗಲ್ಲಿಗಾಗಿ ರಥಬೀದಿಗೆ ಒಂದು ಹೊಸ ಮಾರ್ಗವನ್ನು ಹಾಕಿಸಲು ಮುನಿಸಿಪಾಲಿಟಿಯವರು ಕೆಲಸ ಪ್ರಾರಂಭಿಸಿರುವರು ಈ ಮಾರ್ಗದ ಸಲುವಾಗಿ ರೂಪಾಯಿ ೮೦,೦೦೦ ಸೆಂಕ್ಷನಾಗಿರುವುದು

ಮೂಡಬಿದ್ರೆ ಫಿರ್ಕಿನ ಪುತ್ತಿಗೆ ಗ್ರಾಮದ ಪಟೇಲ ಕುಷ್ಣಣ್ಣ ಸೆಟ್ರರವರು ಇತ್ತಲಾಗೆ ಸರಕಾರದವರಿಂದ ಪಟೇಲರಲ್ಲಿ ಇರಿಸ್ಪೋಣಾದ ಸರ್ಪ ಕಡಿತದ ಔಷದಿ ಪ್ರಯೋಗದಿಂದ ಸರ್ಪ ಕಚ್ಚಿದ ಒಬ್ಬನನ್ನು ಉಳಿಸಿರುವರಾಗಿ ಕೇಳುತ್ತೇವೆ.

ಹೆಡ್ ಸರ್ವೆಯರ್ ವ ಸಬ್ ಆಸಿಸ್ಟಾಂಟರ ಪರೀಕ್ಷೆ ಕೊಟ್ಟು ಮೂರಾವರ್ತಿ ಸಹಾ ಪಾಸಾಗದ ಉಮೇದ್ವಾರರು ಈ ಪರೀಕ್ಷೆಗಳನ್ನು ಹೀಗೆ ಮುಂದಕ್ಕೆ ಕೊಡಬೇಕಾದರೆ ರೂ. ೧೦ನ್ನು ಸರಕಾರಕ್ಕೆ ತೆರಬೇಕಾಗಿ ವಿಧಿಸಲ್ಪಟ್ಟಿರುವುದು.

ನಮ್ಮ ಚಂದಾದಾರರಲ್ಲೊಬ್ಬರಾದ ಮೆ। ಜೆ ಎಮ್ ಲಿಂಡಸ್‌ರವರು ಮಡಿಕೇರಿ ಗುಡ್ಡೆ ಶಾಲಾ ಕಮ್ಪೋಣದಲ್ಲಿ ಇಂಗ್ಲೀಷು ಬಾರದವರಿಗ ಇಂಗ್ಲೀಷನ್ನು ಧರ್ಮಾರ್ಥ ಕಲಿಸುವರೆ ಒಂದು ರಾತ್ರೆ ಶಾಲೆಯನ್ನು ಸ್ಥಾಪಿಸಿರುವರೆಂಬದನ್ನು ತಿಳಿಸಲು ಸಂತೋಷ ಪಡುತ್ತೇವೆ.

ಕುಂದಾಪುರ ಡಿವಿಜನಿನ ಹೆಡ್ ಅಸಿಸ್ಟಾಂಟ ಕಲೆಕ್ಟರರಾದ ಮೆ। ಹೆಮಿಂಗ್‌ವೇಯವರು ಕೆಲವು ದಿನಗಳ ರಜೆ ಪಡದು ಖಾಸಗಿ ಕೆಲಸ ನಿಮಿತ್ಯ ಕೊಯಂಬುತ್ತೂರತ್ತಕಡೆ ಹೋಗಿರುವರು ಕುಂದಾಪುರ ಮತ್ತು ಉಡುಪಿ ಡಿವಿಜನುಗಳ ಚಾರ್ಜನ್ನು ಇವರು ಬರುವ ತನಕ ಇಲ್ಲಿಯ ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರವರು ನೋಡುತ್ತಿರುವರು

ಸೇಂದಿ ಅಂಗಡಿಗಳ ಏಲಂ ಮಂಗಳೂರಲ್ಲಿ ಇದೇ ತಿಂಗಳ ೨೫ನೇ ತಾರೀಕಿನಲ್ಲಿಯೂ ಮೂಡಬಿದ್ರಿಯಲ್ಲಿ ತಾ. ೨೦ರಲ್ಲಿಯೂ ತಾ ೭ನೇ ಬರುವ ಸಪ್ಟಂಬರ ಬಂಟ್ವಾಳದಲ್ಲಿಯೂ ನಡಿಸೋಣಾಗುವುದು. 'ಮುತೆ'ಯ ದರಗಳು ಕಳದ ವರುಷದಷ್ಟೇ ಆಗಿರುವವು

ಸರ್ಕಿಟಿನ ಮೇಲೆ ಇರುವಾಗ ತಹಸೀಲದಾರ, ಡಿಪ್ಯುಟಿ ತಹಸೀಲದಾರ ವ ರೆವಿನ್ಯು ಇನ್ಸಪೆಕ್ಟರರವರು ಅಗತ್ಯವಿದ್ದಲ್ಲಿ ಕಾಡುಮೃಗಗಳ ಸಿಕಾರಿಯನ್ನು ಮಾಡಬಹುದಾಗಿ ಹುಕುಂ ಆಗಿದೆಂಬದಾಗಿ ಕೇಳುತ್ತೇವೆ.

ಪುತ್ತೂರು ಜನರಲ್ ಡ್ಯೂಟಿ ಡಿಪ್ಯುಟಿ ಕಲೆಕ್ಟರರವರು ಪಿಟ್ಹಾಪುರದ ದಿವಾನರ ಕೆಲಸಕ್ಕೆ ನೇಮಕಪಟ್ಟು ಗೋದಾವರಿ ಜಿಲ್ಲೆಗೆ ವರ್ಗಾಯಿಸಲ್ಪಟ್ಟಿರುವರು.

ಡಿಪ್ಯುಟಿ ಕಲೆಕ್ಟರರ ಹುದ್ದೆಗೆ ಇಷ್ಟರ ತನಕ ಸಂಬಳದ [illegible] ರೂ. [illegible] ಇತ್ತದಾದ [illegible] ಏರ್ಪಾಡುಗಳ ಪ್ರಕಾರ ಈ ತರಗತಿಯನ್ನು ಹೆಚ್ಚಿಸಿ ರೂ. ೮೦೦ ಸಂಬಳದ ಎರಡು ಡಿಪ್ಯುಟಿ ಕಲೆಕ್ಟರರವರ ಹುದ್ದೆಗಳನ್ನು ಹೊಸತಾಗಿ ಏರ್ಪಡಿಸಿರುವರು.

ಇಲ್ಲಿಯ ಪೋರ್ಟು ಆಪೀಸರರು ಈ ತಿಂಗಳ ೧೩ನೇ ತಾರೀಕಿನಿಂದ ಹದಿನೆರಡು ದಿವಸಗಳ ರಜೆಯ ಮೇಲೆ ಹೋಗುವುದರಿಂದ ಇವರು ಪುನಹ ಬರುವ ತನಕ ಪೋರ್ಟಾಪಿಸ್ ಚಾರ್ಜು ಕಸ್ಟಮ್ಸ್ ಕಲೆಕ್ಟರರವರು ವಹಿಸಿಕೊಳ್ಳುವರು

ಕೆನರಾ ಗರ್ಲ್ಸ್ ಸ್ಕೂಲ್ ಎಂಬ ಬಾಲಿಕಾ ಪಾಠಶಾಲೆಯಲ್ಲಿ ಬಾಲಿಕೆಯರಿಗೆ ಇನಾಮು ಹಂಚೋಣವು ನಾಳೆ ಶನಿವಾರ ಕೆನರಾ ಹ್ಯಾ ಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ನೆರವೇರುವುದು ಈ ಸಂದರ್ಭದಲ್ಲಿ ನೆರೆಯುವ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವರೆ ಮ।ರಾ।ರಾ ತಲಚೇರಿ ಬವಾನಿರಾಯರ ಧರ್ಮಪತ್ನಿ ಶ್ರೀಮತಿ ಅಂಬಾಬಾಯಿಯವರು ಒಪ್ಪಿರುವರು

ಹೊಸದುರ್ಗ ಇಲ್ಲಿ ಕಳವು ದಿನೇ ದಿನೇ ಹೆಚ್ಚುತ್ತಲೇ ಇದೆ ಏನೂ ಗತಿ ಇಲ್ಲದೆ ಅವಲಕ್ಕಿ ಕುಟ್ಟಿ ಜೀವನ ಗೈಯುವ ಇಬ್ಬರು ಹೆಂಗಸರ ಮನೆಗಳಲ್ಲಿಯ ಗುಜಾಣ ಚೆತ್ತ ವಗೈರೆ ಕಳವು ಮಾಡಲ್ಪಟ್ಟಿದೆ ಎಂದು ವರ್ತಮಾನವಿದೆ

ಕಳದ ಆದಿತ್ಯವಾರ ರಾತ್ರಿ ಪೇಟೆಯ ಮಧ್ಯವೂ ಖಜೇರಿಯ ಎದುರಿಗೂ ಇರುವ ಜಾನ ಲಕ್ಷ್ಮಣನ ಅಂಗಡಿಗೆ ಕನ್ನ ಹಾಕಿ ಅದರೊಳಗಿನ ಸಾಮಾನು ವಗೈರೆಯನ್ನು ಕಳವು ಮಾಡಿರುತ್ತಾರೆ ಕಳವು ಇನ್ನೂ ಪತ್ತೆಯಾಗಲಿಲ್ಲ ಸದರಿ ಕಳವು ಅಂಗಡಿಯವನ ಗೈರ್ಹಾಜರಿನ ಸಮಯದಲ್ಲಿ ಸಂಭವಿಸಿದ್ದರಿಂದ ಕದ್ದು ಹೋದ ಸೊತ್ತುಗಳ ಕ್ರಯವು ಇಂತಿಷ್ಟು ಎಂದು ಇನ್ನೂ ತಿಳಿಯದಿಲ್ಲ

ಇಲ್ಲಿಯ ದೊಡ್ಡ ಚೋರರು ಕಳವಿನ ಉದ್ದಿಶ್ಯವೇ ಒಂದು ಸಂಘವನ್ನು ಏರ್ಪಡಿಸಿ ದೊಡ್ಡ ಚೋರಿ ದರೋಡೆಗಳನ್ನು ನಡಿಸುತ್ತಲೇ ಇದ್ದಾರೆ ಈ ಸಂಘದಲ್ಲಿಯ ಏರ್ಮುಲ್ಲಾನೆ ಇಬ್ರಾಹಿಂಸೆ ಎಂಬಿಬ್ಬ ಚೋರಿ ಪ್ರಿಯರನ್ನು ಬಲು ಪ್ರಯತ್ನದಿಂದ ಪೋಲಿಸ್ ಸಬ್ ಇನ್ಸಪೆಕ್ಟರ್ ಚಾಮಾನ್ನಡರು ಕೊಚ್ಚಿ ಪಟ್ಟಣದ ಪೇಟೆಯಲ್ಲಿ ಹಿಡಿದು ಅವರ ಮೇಲೆ ನಡಿಸಿದ ಮೊಕದಮೆಯಲ್ಲಿ ಇಬ್ಬರಿಗೂ ಏಳೇಳು ವರುಷಗಳ ಶಿಕ್ಷೆಯು ವಿಧಿಸೋಣಾಯಿತು ಬಾಕಿ ಉಳಿದ ಕಳ್ಳರನ್ನು ಸಹ ಹಿಡಿಯಬೇಕೆಂಬ ಕುತೂಹಲದಿಂದ ರಾತ್ರೆ ಹಗಲು ಚಿಂತಿಸುತ್ತಿರುವ ಚಮ್ಮಾಡರ ಪ್ರಯತ್ನಗಳು ಸಫಲವಾಗದೆ ಇರಲಾರವು ಯತಾರ್ಥದಿಂದಲೂ ಮರ್ಯಾದೆಯಿಂದಲೂ ಪ್ರವರ್ತಿಸುವವರ ಪ್ರಯತ್ನಗಳೆಲ್ಲೆಲ್ಲಿಯೂ ನೆರವೇರುವವು

ಒಳ್ಳೇದಿದ್ದಲ್ಲಿ ಕೆಟ್ಟದು ಬೆರಿಕೆ ಇದೆ ಎಂಬದನ್ನು ನಿರ್ಧರಿಸಲು ಧಾರಾಳವಾಗಿ ಸುರಿಯುತ್ತಾ ಇರುವ ಮಳೆಯನ್ನು ರೈತರೇ ಮೊದಲಾದವರು ಆದರಪೂರ್ವಕವಾಗಿ ಸ್ವೀಕರಿಸುತ್ತಲಿರುವಾಗ ನಮ್ಮ ಆಸ್ಪತ್ರಿಯ ವೈದ್ಯ ಉದ್ಯೋಗಸ್ಥರು ಮದ್ದಿನ ಕೋಣೆಯಲ್ಲಿಯೇ ಮಳೆ ನೀರು ಸೋರುವದರಿಂದ ತುಂಬಾ ಅಸಮಾಧಾನ ಪಡುತ್ತಲಿದ್ದಾರೆ

ಕಾಸರಗೋಡಿನಲ್ಲಿ ಮಿಶನ್ನವರು ಸೆಕೆಂಡರಿ ಶಾಲೆಯನ್ನು ಏರ್ಪಡಿಸುವದಾಗಿ ಇರುವ ವರ್ತಮಾನವು ನಿಜವಾಗಿದ್ದ ಪಕ್ಷದಲ್ಲಿ ಇಲ್ಲಿಯ ಸೆಕೆಂಡರಿ ಶಾಲೆಯು ದಿನಗಳು ತೀರುವವೋ ಏನೋ ತಿಳಿಯದು

ವಿಷ ಜಂತುಗಳ ಕಡಿತಕ್ಕೆ ದಿವ್ಯ ಔಷಧವನ್ನು ಸರಕಾರದವರು ಇಲ್ಲಿಯ ವೈದ್ಯ ಉದ್ಯೋಗಸ್ಥರಿಗೆ ಕಳುಹಿಸಿ ಕೊಟ್ಟದ್ದರಿಂದ ವಿಷ ಜಂತುಗಳು ಕಚ್ಚಿದೊಡನೆಯೇ ವೈದ್ಯ ಉದ್ಯೋಗಸ್ಥರ ಸಹಾಯವನ್ನು ಪಡೆದರೆ ಈ ವಿಷದಿಂದ ಹಾನಿಬರಲಾರದು. ಆದರೆ ಎಂದಿನಂತೆ ಪದೇ ಪದೇ ಕಾಸರಗೋಡಿನಿಂದ ಬೇರೆ ಬೇರೆ ಕಡೆಗೆ [illegible] ವೈದ್ಯ ಉದ್ಯೋಗಸ್ಥರು [illegible] ವೈದ್ಯ ಉದ್ಯೋಗಸ್ಥರ [illegible] ಕ್ರಯ [illegible] ಮದ್ದು ಇದ್ದೇನು ಗುಣ ಇಲ್ಲದಿದ್ದರೇನು ಕೇಡೆಂಬದೊಂದು ಸವಾಲು ಬರುತ್ತದೆ.

ಕಾಸರಗೋಡು. ಮಳೆಯು ಸಾಧಾರಣವಾಗಿ ಚನ್ನಾಗಿ ಆಯಿತು ರೈತರಿಗೆಲ್ಲಾ ತಕ್ಕ ಮಟ್ಟಿನ ಸಮಾಧಾನ ಉಂಟಾದರೂ ಇಲ್ಲಿಯ ವೃತ್ತಿಹೀನ ವ್ಯಕ್ತಿಗಳು ಹಲವರು ಮಳೆ ದೆಸೆಯಿಂದ ಅತ್ತಿತ್ತ ಹೋಗುವರೆ ಉಪಾಯವಿಲ್ಲದೆ ಜುಗಾರಾಟದಲ್ಲಿ ನಿರತರಾಗಿ ತಮ್ಮ ಕಾಲಕ್ಷೇಪ ಮಾಡುತ್ತಿರುವುದರಿಂದ ಜುಗಾರಿನ ಕಿರಿಯ ಸಹೋದರಿ ಚೋರಿಯು ನಮ್ಮ ಪಟ್ಟಣವನ್ನು ಇನ್ನು ಬೇಗನೇ ಬಂದು ಸಂದರ್ಶಿಸುವಳೆಂಬ ಅಂಜಿಕೆಯು ಉಂಟಾಗಿರುತ್ತದೆ. ಪೋಲೀಸಿನವರು ಇದಕ್ಕೆ ತಕ್ಕ ಏರ್ಪಾಡನ್ನು ಮಾಡಿದರೆ ಅವಿಹಿತೆಂಬದಾಗಿ ತೋರುತ್ತದೆ

ಇಲ್ಲಿಯ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಮುಳಿಯಾರ ಗ್ರಾಮದ ನಾರಾಯಣ ಉಳಿಯತ್ತಾಯರೆಂಬ ವೃದ್ಧ ಶಿವಳ್ಳಿ ಬ್ರಾಹ್ಮಣರೊಬ್ಬರು ಅದೇ ಗ್ರಾಮದ ಕಣ್ಣನ್ ನಾಯರ್ ಎಂಬವನಿಗೆ ರೂ ೬೦೦ಕ್ಕೆ ಸ್ಥಿರಾಸ್ತಿ ಆಧಾರ ದಸ್ತಾವೇಜನ್ನು ಬರೆದುಕೊಟ್ಟು ದಸ್ತಾವೇಜನ್ನು ರಿಜಿಸ್ಟ್ರಿ ಬಗ್ಗೆ ತರುವಾಗ ಮಧ್ಯದಾರಿಯಲ್ಲಿ ಕಣ್ಣನ್‌ನಾಯರನು ದಸ್ತಾವೇಜು ಮತ್ತು ಇತರ ದಾಖಲೆಗಳ ಸಹಿತ ಪರಾರಿಯಾಗಿ ವಂಚನೆ ಮಾಡಿದ ತಪ್ಪಿನಾರೋಪಣೆಯ ಮೊಕದ್ದಮೆಯು ತನಖಿಯಾಗುತ್ತಿರುವುದು

ಕಾರ್ಕಳ ಇತ್ತಲಾಗೆ ಪೋಲೀಸು ಇಲಾಖೆಯಲ್ಲಿ ಜ್ಯಾರಿಗೆ ಬಂದ ನವೀನ ವ್ಯವಸ್ಥೆ ಪ್ರಕಾರ ಪೋಲೀಸು ಸ್ಟೇಶನುಗಳಲ್ಲಿ ಪೋಲೀಸು ಪೇದೆಗಳ ಸಂಖ್ಯೆಯು ಅದಿಕವಾಗಿದ್ದರೂ ಈ ನಮ್ಮ ಚಿಕ್ಕ ಪಟ್ಟಣವಾದ ಕಾರ್ಕಳದಲ್ಲಿ ಆಗುವ ಚೋರಿ ಮೊದಲಾದವುಗಳು ಪತ್ತೆಯಾಗದಿರುವುದು ಪರಮಾಶ್ಚರ್ಯವೇ ಸರಿ ಕಳದ ಹಪ್ತೆಯಲ್ಲಿ ಇಲ್ಲಿಯ ಪೋಲೀಸು ಸ್ಟೇಶನಿಂದ ಎರಡು ಫರ್ಲಾಂಗು ಸಹಾ ದೂರವಿಲ್ಲದ ಸುತ್ತಲಿರುವ ಕಸಬಾ ಪೇಟೆಯಲ್ಲಿ ಹೆಚ್ಚುಕಡಿಮೆ ಆರೇಳು ಕಳವುಗಳೂ ಮನೆಗಳಿಗೆ ಕನ್ನ ಕೊರಿಯುವ ಪ್ರಯತ್ನಗಳೂ ನಡೆದಿದ್ದವು ರಾತ್ರಿಕಾಲದಲ್ಲಿ ದೀಪಸ್ತಂಭಗಳ ಅತ್ಯಲ್ಪ ಪ್ರಕಾಶವುಳ್ಳ ಬೀದಿಗಳಲ್ಲಿರುವ ಲಾಟೆನುಗಳನ್ನು ಈ ಕಳ್ಳರು ಪ್ರಥಮತಃ ಎತ್ತಿ ಹಾಕಿ ತಮ್ಮ ಕಾರ್ಯಸಾಧನೆಯನ್ನು ಪ್ರಾರಂಭಿಸಿರುವರು ಸರಸ್ವತಿ ಸದನವೆಂಬ ಇಲ್ಲಿಯ ವಾಚನ ಮಂದಿರದ ಒಳನುಗ್ಗಿ ಅಲ್ಲಿರುವ ಚಿತ್ರಪಟಗಳನ್ನೂ ಕನ್ನಡಿಗಳನ್ನೂ ತಕೆಕೊಂಡುಹೋಗಿರುವರು ಪೋಲೀಸಿನವರ ದೃಷ್ಟಿಯು ಮುಂದಕಡೆಯಲ್ಲೆಂಬಂತೆ ಇಂಥಾ ಕಳವಾದದ್ದು ಆಶ್ಚರ್ಯ. ಇತ್ತಲಾಗೆ ಇಲ್ಲಿಂದ ಸಮೀಪವಿರುವ ಸೂಡವೆಂಬಲ್ಲಿಯ ದೇವಸ್ಥಾನಕ್ಕೆ ಕಳ್ಳರು ರಾತ್ರಿಕಾಲ ಪ್ರವೇಶಿಸಿ ಹೆಚ್ಚು ಕಡಿಮೆ ೧೦೦೦ ರೂಪಾಯಿಗಳ ಸೊತ್ತನ್ನು ಕೊಂಡು ಹೋಗಿರುವರಂತೆ ಇಲ್ಲಿಂದ ಮೂರು ಮೈಲು ದೂರವಿರುವ ಬಿಯಾರಹಳ್ಳಿಯಿಂದ ಸಹಾ ಕಳ್ಳರ ಬಾಧೆಯ ವಿವರ್ಯವು ಕೇಳಿಸುತ್ತಿರುವುದು ನೆಮ್ಮದಿಯನ್ನು ಕಾಪಾಡುವುದಕ್ಕೆ ಕಟಿಬದ್ಧರಾದ ಉದ್ಯೋಗಸ್ಥರು ತಮ್ಮ ಕಾರ್ಯನಿರ್ವಾಹಗಳಲ್ಲಿ ಇನ್ನಷ್ಟು ಎಚ್ಚರವುಳ್ಳವರಾಗದಿದ್ದರೆ ನಿವಾಸಿಗಳಿಗೆ ಬದ್ರತೆಯು ದೊರಕದು ಜಿಲ್ಲಾ ಪೋಲೀಸು ಸುಪರಿಂಟೆಂಡೆಂಟರು ಈ ವಿಷಯಕ್ಕೆ ತಕ್ಕ ಗಮನ ಕೊಟ್ಟು ಅಗತ್ಯವುಳ್ಳ ಕಾರ್ಯಸಾಧನೆಯನ್ನು ಮಾಡಿಸುವರಾಗಿ ನಂಬಿದ್ದೇವೆ

ಇಲ್ಲಾಗುವ ಸಣ್ಣ ಕಳವುಗಳು ಜುಗಾರಾಟದವರ ಪ್ರಯತ್ನಫಲಗಳೆಂಬದಾಗಿ ತೋರುತ್ತದೆ ಜುಗಾರಾಟವು ಸರ್ವಸಾಧಾರಣವಾಗಿ ಕಳವಿಗೆ ಪ್ರೇರೇಪಕವಾಗಿರುವುದು.

ಪುತ್ತೂರು. ಉಪ್ಪಿನಂಗಡಿ ತಾಲೂಕು ಪುತ್ತೂರು ಮೊಕ್ಕಾಮಿನ ಶೇಂದಿ ಅಂಗಡಿಗಳನ್ನು ಅಗೋಸ್ತು ತಾ. ೧೮ಕ್ಕೆ ಏಲಂ ಮಾಡುವ ಬದಲಿಗೆ [illegible] ಸೋಮವಾರ ಏಲಂ [illegible]

ಇದೇ ತಿಂಗಳಲ್ಲಿ ಕುರಿಯ ಗ್ರಾಮದ ಸುಬ್ರಾಯ ಪುಣಚಿತ್ತಾಯರಲ್ಲಿ ಕೆಮ್ಮಿಂಜ ಗ್ರಾಮದ ಕೊಂಬರಂಬೆ ಇಬ್ರಾಹಿಂ ಸಾಬ ಎಂಬವನು ಚಿಲ್ಲರೆ ಕಳವು ನಡಿಸಿದ್ದರ ಸಂಬಂಧ ಈತನ ಮನೆ ಜಡ್ತಿ ಒಗ್ಗೆ ಪುತ್ತೂರು ಸ್ಟೇಶನ್ ಸಬ್ ಇನ್ಸ್‌ಪೆಕ್ಟರ ರಾ। ಕೆ। ಬಾಲಯ್ಯನವರು ವ ತೆ ಕೊ। ವಗ್ಗಿರರು ಹೋಗಿ ಜಡ್ತಿ ಮಾಡಿದಾಗ್ಯೆ ಈ ಮೊದಲು ಕಳೆದ ಮೇ ತಿಂಗಳಲ್ಲಿ ಪುತ್ತೂರು ಬೋರ್ಡ ಕಂಟ್ರಾಕ್ಟರ್ ರಾ ರಂಗಪ್ಪ ಕಮ್ತಿಯವರ ಮನೆಯಲ್ಲಿ ಕಳವಾದ ಚಿನ್ನಾಭರಣದ ನಗಗಳು ವಗೈರೆ ಸಾಮಾನುಗಳು ಇನ್ನೂ ಬೇರೆ ಕಳವಿನ ಸೊತ್ತುಗಳು ಸಿಕ್ಕಿದ್ದರಿಂದ ಮುದ್ದೆಯಾಳಿ ಇಬ್ರಾಹಿಂಸಾಬು ಮತ್ತು ಶೇಕಮುಸೇನ ಸ್ವಾ[illegible] ಎಂಬವನನ್ನೂ ಹಿಡಿದು ಕೈದು ಮಾಡಿರುವರು. ಇವರ ಜೊತೆ [illegible] ರಿದ್ದಾರೆಂತ ವರ್ತಮಾನ ಇರುವದರಿಂದ ಅವರ ತಲಾಶಿ ಮೇಲೆ ಇರುವರು. ಈ ಕಳ್ಳರು ದಿನಸಿತ್ತ [illegible] ಹುಲ್ಲು ವಿಕ್ರೀತಕ್ಕೆ ತರುವವರು. ಈ ರೀತಿ ಇವರು ಮಾಡಿದ ಅನೇಕ ಕಳವುಗಳು [illegible]

ಅಬ್ಕಾರಿ ಮೊಕದ್ದಮೆ [illegible] ವರ್ತಮಾನ [illegible] ಗೌಡ ಎಂಬವ [illegible] ಕೋರ್ಟಿನಲ್ಲಿ ನಡೆಯುತ್ತಿದ್ದ ಮೊಕದ್ದಮೆಯು [illegible] ಇಲ್ಲವೆಂತ ಮುದ್ದೆಯಾಳಿಯನ್ನು ವಿಮೋಚನೆ ಮಾಡಿರುವರು.

ನಮ್ಮ [illegible] ಕಲೆಕ್ಟರಾದ ಮಿ। ರಾ। ರಾ। [illegible] ಶ್ರೀತಲ [illegible] ಪರೀಕ್ಷ [illegible] ಸಮಿಂತಿ [illegible]

~~~~~~

ಯಮಾರ್ಗಳ [illegible] ತ್ರಗೆ ಪರೀಕ್ಷೆ [illegible]

ಸ್ವದೇಶಾಭಿಮಾನಿ ಪತ್ರಿಕೆಯ [illegible] ಇಲ್ಲಿಯ [illegible] ಪ್ರತ್ಯಕ್ಷ [illegible] ಹಂಗಾಮಿ [illegible] ಮೊಕದ್ದಮೆ ಮಾಡಿದ್ದ [illegible] ರಿಗೆ [illegible] ದರೂ [illegible] ಯೊಂ [illegible] ಲೂ ಈ [illegible] ಟಪ್ಪಾಲು ಕೆಲಸ [illegible] ರಾಮರಿ [illegible] ಜನರೂ ಹಾಸ್ಯಸುತ್ತಾ [illegible]

ಉಪ್ಪಿ ಮತ್ತು ಕುಂದಾಪುರ [illegible] ಅಸಿಸ್ಟೆಂಟ್ ಇನ್ಸಪೆಕ್ಟರರಾದ [illegible] ವಿಶ್ವೇಶ್ವರ [illegible] ಈ [illegible] ಗಳನ್ನು ಪರೀಕ್ಷಿಸಿ [illegible] ಬೋರ್ಡು [illegible] ಶಾಲೆಯನ್ನು [illegible] ಈಗಿನ [illegible] ಧ್ಯಾಯರು [illegible] ಎಂಬವರಿಗೆ [illegible] ಬಾಪರು

~~~~~~

ಮುಲ್ಕಿ [illegible] ಗಳು ಅನೇಕ ಕಡೆಗಳಲ್ಲಿ ಹುಚ್ಚು ಹುಚ್ಚಾಗಿರುವದರಿಂದ [illegible] ಜಟಕಾ ಬಂಡಿಗಳಿಗೂ ಬಹು ಸಂಕಟ [illegible] ೧೦-೧೨ ಜನರನ್ನು ತುಂಬಿಸಿಕೊಂಡು [illegible] ಕಾಲದ ಮರ್ಯಾದೆಯನ್ನು ಈ [illegible] ಯಾದರೂ ಬಿಟ್ಟರರಕಟಾ!

ಇಲ್ಲಿಯ ಚಿತ್ರಾಪುರ ಹೊಳೆಯ ದಡದಲ್ಲಿ ಈಚೆಗೆ ಗುರುತು ಪರಿಚಯೂ ಇಲ್ಲದ ಒಬ್ಬನ ಶವವು ಬಿದ್ದಿತ್ತೆಂತಲೂ ಯಾವ ಊರಿನವನೆಂಬದಾಗಿ ಇಷ್ಟರ ವರೆಗೆ ಗೊತ್ತಾಗಲಿಲ್ಲ ಎಂಬದಾಗಿಯೂ ವಾರ್ತೆ ಇರುವದು.

ಗಂಗೊಳ್ಳಿ. ಕಳೆದ ತಿಂಗಳ ತಾ. ೨೯ರಲ್ಲಿ ಗೌಡ ಸಾರಸ್ವತಬ್ರಾಹ್ಮಣರ ಸಭೆಯು ಗಂಗೊಳ್ಳಿಯಲ್ಲಿ ಕೂಡಿತು. ಸಭೆಯಲ್ಲಿ ದೇವಸ್ಥಾನದ ವ ಶಾಲೆಯ ಕುರಿತು ಹಲವು ನಿರ್ಣಯಗಳಾದವು. ಶಾಲಾ ವಂತಿಗೆಯನ್ನು ಎಲ್ಲಾ ತರದ ತಗಾದೆಯಿಂದ ಮೆನೇಜರರು ವಸೂಲು ಮಾಡಬೇಕೆಂದು ನಿರ್ಣಯಿಸಲ್ಪಟ್ಟದ್ದಲ್ಲದೆ ಶಾಲಾ ಮೆನೇಜಿಂಗ್ ಕಮಿಟಿ ಮೆಂಬರರು ಸಹ [illegible] ಮ। ರಾ। ರಾ। [illegible] ಪ್ರೆಸಿಡೆಂಟ್ ರಾ। ಗಂಗೊಳ್ಳಿ [illegible] ವೈಸ್ ಪ್ರೆಸಿಡೆಂಟರು, ರಾ [illegible] ಸುಬ್ರಾಯ [illegible] ರಾ ಸಂಕೇರಿ [illegible] ನಾರಾಯಣ [illegible] ರಾ [illegible] ರಾ ತ್ರಾಸಿ ಪದ್ಮನಾಭ [illegible] ನಾಯಕರು, ರಾ ಗಂಗೊಳ್ಳಿ ತಿಮ್ಮಪ್ಪ ನಾಯಕರು, ರಾ [illegible] ನಾಯಕರು, ರಾ [illegible] ನಾಯಕರು, [illegible] ಮತ್ತು [illegible] ನಾಯಕರು [illegible] ಈ ರೀತಿ ಶಾಲಾ ಮೆಂಬರರ ಚುನಾವಣೆಯು ಆಗಿರುವುದು.

~~~~~~

ವಿವಿಧ ವಿಷಯಗಳು

~~~~~~

ತಂಗಿನ ತೋಟಗಳಲ್ಲಿ [illegible] ಅವರ [illegible] ಇಟ್ಟು, ಅವರ ಗಿಡಗಳನ್ನು ಸೊಪ್ಪು ಸಹಿತ [illegible] ಉತ್ತು ಬಿಟ್ಟರ ತೆಂಗು ಗಿಡಗಳು ಅತಿ [illegible] ಬೆಳವಣಿಕೆ ಹೊಂದುವವು.

[illegible] ಅಧಿಕಸ್ಥರಲ್ಲಿ [illegible] ಸುಮಾರು [illegible] ಲಕ್ಷ ಎಕ್ಕರೆ [illegible] ಈ ವರ್ಷ [illegible] ವರುಷಕ್ಕಿಂತ [illegible] ಮತ್ತು [illegible] ಉತ್ಪತ್ತಿಯು ಸುಮಾರು ೫೦ ಸಾವಿರ ಟನ್‌ನಿನಷ್ಟು ಅಂದಾಜಾಗಿರುತ್ತೆಂತಲೂ [illegible] ಬೋರ್ಡ ನವರು [illegible] ಮಾಡಿರುತ್ತಾರೆ.

ಮದುರ ಮತ್ತು ಕೊಯಮತ್ತೂರು ಅಗ್ರಿಕಲ್ಚರಲ್ [illegible] ಗಳು ಭಾವಿಗಳನ್ನು ತೋಡುವ ಯಂತ್ರಗಳನ್ನು ಅನೇಕವಾಗಿ ಕೊಂಡುಕೊಂಡು ಅನುಭವಶಾಲಿಗಳ [illegible] ಮೇಸ್ತ್ರಿಗಳನ್ನು [illegible] ಆಗಿಯುವ ಕೆಲಸವನ್ನು ನಡಿಸುವದರಿಂದ [illegible] ಉಪಯುಕ್ತವಾದ [illegible] ಪ್ರವೇಶಿಸಿರುತ್ತವೆ. ಇದು ವರೆಗೆ [illegible] ಪ್ರಯತ್ನಗಳು ಬಹಳ ಸಫಲಗಳಾಗಿವೆ. ಅನೇಕ ಸ್ಥಳಗಳಲ್ಲಿ ಬಾವಿಗೆ ಹಾಕಿ ನೀರಿನ ಸರಬರಾಯಿಯನ್ನು ನವರ ವಿಧಾನದಿಂದ ಇನ್ನೂ ವಿಶೇಷವಾಗಿ ಉತ್ತಮ ಪಡಿಸಿ [illegible]

~~~~~~

[illegible] — ಕೆಲವು ರಂಗೂ ಅಕ್ಕಿಗಳು ಇತರ [illegible] ಪುಷ್ಟಿಕರವಾಗಿರುತ್ತವೆ [illegible] ಗಿರುವುದು [illegible] ಅಕ್ಕಿಗಳ [illegible] ಸ್ವಭಾವವೆಂದರಿಯ [illegible] ಅಕ್ಕಿಯು ನೋಟಕ್ಕೆ ಮಾತ್ರ ಚನ್ನಾಗಿರುವ [illegible] ಪುಷ್ಟಿಕರವಾಗಿರುವದೆಂಬದೂ ಇಲ್ಲ. ಅಕ್ಕಿ [illegible] ರಸಾಯನ ಶಾಸ್ತ್ರರೀತ್ಯಾ ಪರೀಕ್ಷಿಸಿ ನೋಡಿದ್ದರಲ್ಲಿ [illegible] ಉತ್ತಮವಾದ ಗೊಬ್ಬರವನ್ನು ಹಾಕದ [illegible] ಅಕ್ಕಿಯ ಪೌಷ್ಟಿಕಗುಣವು ಹೆಚ್ಚುವ [illegible] ಬಂದಿರುತ್ತೆ.

~~~~~~

ದನವಿನ ಸಗಣಿಯನ್ನು ಬೆರಣಿಮಾಡಿ ಉರಿಸುವುದು — ಪೂನಾವ್ಯವಸಾಯ ಕಲಾಶಾಲೆಯ ಪ್ರೊಫೆಸರ್ ಜೆ ಬಿ ನೈಟ್ ಎಂಬವರು ದನಗಳ ಸಗಣಿಯನ್ನು ಬೆರಣಿಮಾಡಿ ಕಟ್ಟಿಗೆಗೆ ಬದಲಾಗಿ ಉರಿಸುವದರಿಂದ ಉಂಟಾಗುವ ನಷ್ಟವನ್ನು ಕುರಿತು ಹೇಳಿರುವದೇನೆಂದರೇ—ಮಸಲಾ ನಮ್ಮಲ್ಲಿ ಒಂದು ಜೊತೆ ಎತ್ತುಗಳಿವೆಯೆಂದು ಅಂದುಕೊಳ್ಳೋಣ. ಈ ಜೊತೆಯು ದಿನ ಒಂದಕ್ಕೆ ೨೦ ಪೌಂಡು ಸಗಣಿಯನ್ನು ಹಾಕುವದು. ಈ [illegible] ೧೧ ಪೌಂಡು ಗೊಬ್ಬರದ ಪುಡಿಯು ಸಿಗುವದು. ಇದರಿಂದ ಸುಮಾರು ೨ಔನ್ಸು ಯುವಕ್ಷಾರ ಸಿಕ್ಕಬಹುದು. ಹೀಗೆ ಒಂದು ವರುಷಕ್ಕೆ ೪೫ ಪೌಂಡು ಯುವಕ್ಷಾರ ಸಿಕ್ಕುವದು. ಇಷ್ಟು ಯುವಕ್ಷಾರವುಳ್ಳ ಗಾಣದ ಹಿಂಡಿ ರೂ ೨೨—೧೨—೦ಗೆ ಸಿಕ್ಕುತ್ತೆ. ಅಂತು ಸಗಣಿಯಲ್ಲಿರುವ ಇತರ ಸಸ್ಯಾಹಾರಗಳೆಲ್ಲಾ ಸೇರಿ ಒಂದು ಜೊತೆ ಎತ್ತಿನ ಗೊಬ್ಬರದಿಂದ ಸುಮಾರು ೨೫ ರೂಪಾಯಿಗೆ ಕಮ್ಮಿ ಇಲ್ಲದೆ ಸಂಪಾದನೆ ಬರಬಹುದಾಗಿದೆ. ಇನ್ನು ಬೆರಣಿಮಾಡಿ ಉರಿಸುವದರಿಂದ ಉಂಟಾಗುವ ಫಲಿತಾಂಶವನ್ನು ನೋಡೋಣ. ದಿನ ಒಂದಕ್ಕೆ ೧೧ ಪೌಂಡಿನಂತೆ ವರುಷಕ್ಕೆ ೪೧೧೫ ಪೌಂಡು ಬೆರಣಿಯಾಗುತ್ತೆ. ಹಾಸಿಗೆ ಒಂದು ಪೌಂಡು ಬೆರಣಿಯಂತೆ ಒಂದು ವರುಷಕ್ಕೆ ೨೧ ರೂಪಾಯಿ ಸಂಪಾದನೆ ಆಗಿ ೪ ರೂಪಾಯಿನಷ್ಟು ನಷ್ಟವಾಗುವುದು. ಕೆರೋಸಿನ್ ಎಣ್ಣೆ, ಕಟ್ಟಿಗೆ ಮುಂತಾದವುಗಳನ್ನೂ ಬೆರಣಿಯನ್ನೂ ಬೇರೆ ಬೇರೆ ಉರಿಸಿ ಇವುಗಳಲ್ಲಿ ಯಾವದು ಬಹಳ ಪ್ರಿಯವಾದದ್ದೆಂದು ನೋಡಿದ್ದರಲ್ಲಿ ಬೆರಣಿಯನ್ನು ಉರಿಸುವದರಿಂದ ಬಹಳ ಲುಕ್ಸಾನಾಗುವದೆಂದು ಕಂಡುಬಂದಿರುತ್ತೆ. ಆದ್ದರಿಂದ ದನಗಳ ಸಗಣಿಯನ್ನು ಗೊಬ್ಬರಕ್ಕಾಗಿಯೇ ಉಪಯೋಗಿಸುವುದು ಬಹಳ ಲಾಭಕರವಾಗಿರುತ್ತದೆ. ರೆ ಗ

—

ವಿದ್ಯಾಭ್ಯಾಸದ [illegible] ಬೇರೆ ಬೇರೆ ರಾಜ್ಯಗಳನ್ನು [illegible] ಹಿಂದೂಸ್ಥಾನದ ಪ್ರತಿನಿಧಿ ಸಂಸ್ಥಾನಗಳಲ್ಲಿ ಸರಕಾರದವರು (ಮುನಿಸಿಪಾಲಿಟಿಗಳು ಕೂಡಿ) ವಿನಿಯೋಗಿಸುವ ದ್ರವ್ಯದ ಸಂಖ್ಯೆಯನ್ನು ಇತ್ತಲಾಗೆ ವ್ಯಾಸರಾಯ ಪ್ರಭುಗಳ [illegible] ಸೂಚಿಸಿದ್ದರು. ಇದರ ಮೇರೆಗೆ [illegible] ವಿದ್ಯಾಭ್ಯಾಸಕ್ಕೋಸ್ಕರ 3·57 ಕೋಟಿ ರೂಪಾಯಿಗಳನ್ನೂ [illegible] ಶಾಲೆಗಳ ಬಗ್ಗೆ 1 12 ಕೋಟಿ ರೂಪಾಯಿ [illegible] ಹಿಂದೂಸ್ಥಾನದಲ್ಲಿ [illegible] ಮಾಡುವದಾಗಿ ತಿಳಿದು ಬರುತ್ತದೆ. ಆಯಾ ಸಂಸ್ಥಾನಗಳಲ್ಲಿ ಸರಾಸರಿ ಮೇರೆ ಪ್ರತಿಯೊಬ್ಬ ನಿವಾಸಿಕನ ಲೆಕ್ಕದಲ್ಲಿ ವಿದ್ಯಾಭ್ಯಾಸದ ಖರ್ಚು ಈ ರೀತಿಯಾಗಿರುವುದು. —

	ಆ ಪೈ.
ಮುಂಬಯಿ	5—7
ಬರ್ಮಾ	4—3
ಮಧ್ಯ ಸಂಸ್ಥಾನಗಳು	3—2
ಪಂಜಾಬ	2—8
ಮದ್ರಾಸು	2—2
ಬಂಗಾಳ	2-11
ಪೂರ್ವ ಬಂಗಾಳ	1-10
ಯುನೈಟೆಡ್ ಪ್ರೊವಿನ್ಸಸ್	1-10
ವಾಯುವ್ಯ ಗಡಿಪ್ರದೇಶದ ಸಂಸ್ಥಾನ	1—7

~~~~~~

ಜೀವನಗಳ ಧಾರಣೆ ಮಂಗಳೂರು (ರಖಂ)

ಕೂಳೂರು ಮಸ್ಕತಿ ಅಕ್ಕಿ ..	4-13—0
ಗುಡ್ಡ ಮಸ್ಕತಿ ,,	4—8—0
ಮಸ್ಕತಿ ಮುಯಂ ,,	4—8—0
ವಕ್ಲ ಸುಗ್ಗಿ ,,	4—7—0
ಸುಗ್ಗಿ ಮುಯಂ ,, ...	4—4—0
ಮಸ್ಕತಿ ಬೆಳ್ತಿಗೆ ,, ...	5-11—0
ರಂಗೂನ್ ಬೆಳ್ತಿಗೆ ಗೋಣಿ ..	8—0—0
ಕುರುಳಿ ಗೋಣಿ ೧ ಮುಡಿ ೨ರ .	6—2—0
ಉಪ್ಪು ಗೋಣಿ ೧ರ ...	3-12—0
ಕೊಬ್ರಿ, ಖಂಡಿ ೧ರ . .	110—0—0
ಕೊಬ್ರಿ ಎಣ್ಣೆ ಮಣ	7—0—0
ಕಾಫಿ ಖಂಡಿ ೧ರ	175—0—0
ಕಾಳು ಮೆಣಸು ಖಂಡಿ	120—0—0
ಹೊಸ ಬಿಳಿ ಗೋಟು ಅಡಿಕೆ	78—0—0
ಕರಿ ಗೋಟು	82—0—0
ಏಲಕ್ಕಿ ಮಣ ೧ರ ...	28—0—0

Printed & published by [illegible]
~~~~~~

1.	[illegible] ಸುಭಾಷಿತ (ಕನ್ನಡ ಟೀಕು)	0—2—0
2.	[illegible] ಚೂಡಾಮಣಿ	0—4—0
3.	ಬಾಲ[illegible] ಚಿಕಿತ್ಸೆ (ಮಕ್ಕಳ ವೈದ್ಯ)	0—2—0
4.	[illegible] ಕಥೆ... ...	1—8—0
5.	[illegible]ನಸಿಂಧು ...	0-12—0
6.	[illegible]ಶೇಕರ ವಿಲಾಸ	0—8—0
7.	ವೀರಶೈವ ಮತಸಾರ	0—6—0
8.	[illegible]ದೇಶ್ವರ ವಚನಾ	0—6—0
9.	ಕೈವಲ್ಯ ಕಲ್ಪವಲ್ಲರಿ	0 10—0
10.	ಅನುಭವಸಾರ	0—8—0
11.	ವೈದ್ಯಸಾರ ಸಂಗ್ರಹ ಅಪೂರ್ವವಾದ ಅತ್ಯುಪಯೋಗವಾದ ಗ್ರಂಥ (ಕ ಟಿ)	3—0—0
12.	ಶ್ರೀವಿಷ್ಣುಸಹಸ್ರನಾಮ ಸ್ತೋತ್ರ (ತ್ರಿಮತ ಟೀಕಾ ತಾತ್ಪರ್ಯ)	3—0—0
13.	ಶಿವಾನಂದಲಹರಿ (ಕನ್ನಡ ಟೀಕು ತಾತ್ಪರ್ಯ ಸಹಿತ)	0—6—0
14.	[illegible]ಶಾಂತಿ ಮಂತ್ರ ...	0—2—0
15.	[illegible]ಲಾಮೃತ (ಕ ಟಿ) ಉತ್ತಮ	0-12—0
	,, ,, ಸಾದಾ	0—8—0

ಇವುಗಳಲ್ಲದೆ ಇನ್ನೂ ನೂರಾರು ಇತರ ಪುಸ್ತಕಗಳು ದೊರೆಯುವವು

ವಿಳಾಸ:— ಮ್ಯಾನೇಜರ್,

ಕನ್ನಡ ಪ್ರಕಾಶಿಕಾ ಪುಸ್ತಕಶಾಲೆ.

ಬೆಂಗಳೂರು ಸಿಟಿ.

[illegible]ವಾಯಿಸಿ ನೋಡಿರಿ, ಧಾರಣೆ ಸುಲಭ.

ಲೆವು ಉತ್ತಮವಾದ ಕೆಂಪು ರಬ್ಬರಿನಲ್ಲಿ ತಯ್ಯಾರಿಸಿದ, ಫೂಟ್‌ಬೋಲ್ [illegible]ಡರ್‌ಗಳನ್ನು ಮತ್ತು ನಯವಾಗಿಯೂ ಮಜಬೂತಾಗಿಯೂ ಮಾಡಿರುವ ಕವರು ಗಳನ್ನು ನೇರವಾಗಿ ವಿಲಾಯತಿಯಿಂದ ತರಿಸುತ್ತೇವೆ

1ನೇ ನಂ.	ಫೂಟ್‌ಬೋಲ್ 1ಕ್ಕೆ	2—8—0,	ಗಾಲಿ ಬ್ಲ್ಯಾಡರ್ 1ಕ್ಕೆ	1—0—0
2 ,,	,, ,, 1ಕ್ಕೆ	3—0—0,	,, 1ಕ್ಕೆ	1—4—0
3 ,,	,, ,, 1ಕ್ಕೆ	4—0—0,	,, 1ಕ್ಕೆ	1—8—0
4 ,,	,, ,, 1ಕ್ಕೆ	4-12—0,	,, 1ಕ್ಕೆ	1 12—0
5 ,,	,, ,, 1ಕ್ಕೆ	5 12—0,	,, 1ಕ್ಕೆ	2—0—0

ಫೂಟ್‌ಬೋಲ್ ಇನ್‌ಪ್ಲಾಟರುಗಳು 1ಕ್ಕೆ 1-4 0, 1 8-0, 1-12-0, 2—4—0, 2—8—0, 3—0—0, 3—8—0, 4—0—0

ಛಳಿಕಾಲಕ್ಕೆ ಶಾಕವಾಗಿಯೂ, ಬಹಳ ನಯವಾಗಿಯೂ, ಬಹುಕಾಲ ಬಾಳಿಕೆ ಬರುವ ವಿಲಾಯತಿ ಉಲನ್ ರಗ್ಸ್

	ಸೈಜು	60×100	62×110
K.	ನಂಬ್ರ	6—8—0,	7—0—0
R	ನಂಬ್ರ	8-12—0,	9—8—0.
S.	ನಂಬ್ರ	12—8—0	13—8—0
J	ನಂಬ್ರ	13—8 0	14 8—0
L.	ನಂಬ್ರ	16—8—0	18—0 0

ಬಹಳ ನಯವಾಗಿ ನೇಯಿರುವ ಬಣ್ಣದ ಚಿತ್ರಗಳುಳ್ಳ (ವೇಲ್ವಾರಿ, ಬುಟ್ಟಾ ದಾರಿ) ಪ್ಲಿಂಟೀ ಕೂದಲು ರಗ್ಸ್

A	ನಂಬ್ರ 1ಕ್ಕೆ	12—14—0,	60×90	
E.	ನಂಬ್ರ 1ಕ್ಕೆ	16—10—0,	60×90	
,,	,,	17—0—0,	60×90	ಬಹಳ ನಯವಾದದ್ದು
F.	ನಂಬ್ರ 1ಕ್ಕೆ	22—0—0,	60×90	

ನಮ್ಮಲ್ಲಿ ಅಲ್ಯೂಮಿನಿಯಮ್ ಪಾತ್ರೆಗಳು ಬಹಳ ರಖಂ ವುಂಟು. ಗಂಜಿಪಾತ್ರೆ ಗಳು, ದಕ್ಷಾಗಳು, ಲೋಟಾಗಳು, ಕೊಂಬು ಲೋಟಾಗಳು, ಸಾದ ಟಂಬ್ಲರುಗಳು, [illegible]ಜಾಗಳು, ತಟ್ಟೆಗಳು ವಗೈರೆ ಸಾಮಾನುಗಳು ಬಹಳವಾಗಿವೆ

ಅವ್ವಲ್	ರಖಂ ಪೌಂಡು ತೂಕಕ್ಕೆ	1-10—0.
ದುಯಂ	,, ,, ,,	1—7—0.
ಸಾಧಾರಣ	,, ,, ,,	1—4—0.

ಎಲ್. ಎ. ಶೋರುವಾಲ್ ಕಂಪೆನಿ.

ಬೆಂಗಳೂರು ಸಿಟಿ.

[illegible]

ಎಂದೀ ಪುಸ್ತಕವು ಕರ್ನಾಟಕ ದೇಶೀಯರೆಲ್ಲರ ಉಪಯೋಗಕ್ಕಾಗಿ ಪಂಡಿತರಿಂದ ತಾತ್ಪರ್ಯ ಸಹಿತವಾಗಿ ಬರೆಯಿಸಿ ಬಿಕರಿಗೆ ಸಿದ್ಧವಾಗಿದೆ. ಕ್ರಯ 0—12—0. ಹಾಸಲು ಚಾರ್ಜು 0—3—0. 3 ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ಚಮತ್ಕಾರವಾದ ಮಹಾಲಕ್ಷ್ಮಿ ಎಂಬ ಕಥೆ ಇನಾಮಾಗಿ ದೊರೆಯುತ್ತೆ.

ಹೆಚ್. ಎನ್. ರಾವ್ ಬ್ರದರ್ಸ್,

ಚಿಕ್ಕಪೇಟೆ ಬೆಂಗಳೂರು ಸಿಟಿ.

"ವಿದ್ಯಾನಂದ" ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ಗ ಪ್ರಿಂಟಾಗಿ ಸಿದ್ಧವಾಗಿದೆ. ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

ಹೆಚ್ಚು ಪಾಠಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಇರುತ್ತದೆ. ಬೆಲೆ 0—4—0

ವಿಳಾಸ:— ಮ್ಯಾನೇಜರ್,

ವಿದ್ಯಾನಂದ ಆಫೀಸು,

ಚಿಕ್ಕಪೇಟೆ ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು

ಮೈಮೆನ್‌ಸಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಲ್ಪಿನು

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮಿದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರೆಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೇನ್, ಎಲ್. ಎಮ್. ಎಸ್.

216 ಕಾರನ್‌ವಾಲಿಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ.—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. ಶೋರುವಾಲ್ ಎಂಡ್ ಕೋ,

[illegible] ಬೆಂಗಳೂರು.

[illegible] ಏಜಂಟರು—[illegible]

ಅನುಭವಸಿದ್ಧವಾದ ವನೌಷಧಗಳು

೧. **ಕುಂತಳಾನಂದ ತೈಲವು** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ ೧೦ ಆಣೆ.

೨ ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ

೩. **ಕಾಮೇಶ್ವರ ಮಾತ್ರೆ** ಧಾತು ವರ್ಧಕವೂ ಉತ್ತೇಜಕವೂ [illegible]ಕವೂ **ನಪುಂಸಕತ್ವ** ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ

೪. **ಪಂಚಜೀರಕ ಪಾಕ.** ಎಲ್ಲ ಪ್ರದರ[illegible]ಗಳನ್ನೂ ಮುಟ್ಟು ಕಟ್ಟಿ[illegible] ದೋಷ**ಗಳನ್ನೂ** ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತ[illegible] ರೂ

೫. **ಸೂರಣಾವ ಲೇಹ** ರಕ್ತ [illegible] ಮೊಳಕೆ[illegible] ಮೂಲವ್ಯಾಧಿಯ **ಮೇಲೆ ಅತ್ಯುತ್ತಮವು** ಪೌಷ್ಟಿಕವಾಗಿದೆ. ರಾತ[illegible] ರೂ

೬. **ಪ್ಲೀಹೋದರಾರಿ ಚೂರ್ಣ** [illegible] **ಧಾರುಣವಾದ** ಜ್ವರದ ಗಡ್ಡೆಯನ್ನೂ ತತ್ಸಂ[illegible] ಇತರ ವಿಕಾರ[illegible]ಗಳನ್ನೂ [illegible] **ಪಡಿಸುವದು.** ತಿಂಗಳ ಔಷದಕ್ಕೆ ಒಟ್ಟು ೩ ರೂ ೮ ಆಣೆ

೭. **ಜಗನ್ಮೋಹನ ದಂತಮಂಜನ** ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂ[illegible] ನಪಪ್ಟ[illegible] ಸೋ[illegible] ಹಲ್ಲು ಪುಡಿ. ಅನೇಕ **ವನೌಷಧಗಳಿಂದ** ತಯಾರಿಸಿಯದೆ. ೧೦ ತೊ[illegible] ೧೦ [illegible]

೮ **ಸರಳಭೇದಿ ಮಾತ್ರೆ** [illegible] **ತೊಲೆಗೆ** ೨ ರೂ

೯ **ಮಹಾಜ್ವರಾಂಕುಶ ಮಾತ್ರೆ** ಚಳಿಜ್ವರ, ವರಿಸಯ ಜ್ವರ[illegible] ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ **ತೊಲೆಗೆ** ೨ ರೂ.

೧೦ ವಾಸಾವ ಲೇಹ ಕೆಮ್ಮು, ಗುರ್ಲುಬ್ಬಸ, ಕಫ [illegible] ರಾಮಬಾಣವು. ರಾತಲಿಗೆ ೨ ರೂ

೧೧ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ **ಧಾತುಪತನ,** [illegible] ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು [illegible] ಗೂಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೩ ರೂ

೧೨ ವಾತಮುರಾರಿ ಬಾಮ್ ತಲೆನೋವು, ಎದೆನೋವು, [illegible] ನೋವು, ಉಳುಕು, [illegible], ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. **ಬಾಟ್ಲಿಗೆ** ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೩ ಗಜಕರ್ಣ ಕೇಸರಿ ಮುಲಾಮು ಹುಳುಕಡ್ಡಿ, **ತುರಿಗಜ್ಜಿ ಮುಂ**ತಾದ ಚರ್ಮವ್ಯಾಧಿಗಳನ್ನು [illegible] ಲೇಪನದೊಳಗಾಗಿ ಗೆಲ್ಲುವದು. **ಉರಿಯು**ವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ ೩ ಕರಡಿಗೆಗೆ ೧೧ **ಆಣೆ.**

೧೪ ನಯನಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು [illegible] ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, **ಉಗ್ಗುಮಾ**ತು, ಬುದ್ಧಿಮಾಂದ್ಯಗಳನ್ನು [illegible] ಸ್ಮರಣ ಶಕ್ತಿಯನ್ನು **ಬೆಳೆಯಿಸುವದು.** ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು **ಮಧುರವಾಗಿರಿಸುವದು.** ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ ೮ ಆಣೆ

☞ ಮೇಲಿನ ಬೆಲೆ[illegible] ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ **ಶಾಸ್ತ್ರೀಯ**ವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ [illegible] ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ **ರೋಗ** ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ **ಕನ್ನಡದಿಂದ**ಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ —

B M Nathu & Co,

Ayurvedic Chemists,

Vepery Post, MADRAS.

ಕಮ್ಮಿ ಕ್ರಯ! ಸಪ್ಟಂಬ್ರ 30ನೇ ತಾರೀಖಿನ ವರೆಗೆ [illegible] ಕ್ರಯ.

ಅತ್ತರುಗಳಲ್ಲಿ ಪರಿಮಳವು ಅತ್ತರ [illegible]

ಮನೋಹರ ಅತ್ತರು.

ಸುವಾಸಿಕ ಪರಿಮಳ ಉಳ್ಳದ್ದು [illegible] **ಬಾಟ್ಲಿ** ಒಂದರ 0—10—0 [illegible] ಬಾಟ್ಲಿಗೆ 1—1—0 [illegible] ಬಾಟ್ಲಿಗಳಿಗೆ 3—4—0 [illegible]

ಕೆ. ಗೋಪಾಲ್ ರಾವ್,

[illegible]

[illegible]

Royal Indian Balm Depot.

ರೊಯಲ್ ಇಂಡಿಯನ್ ಬಾಮ್.

ವಾತದ ನಿವಾರಣೆಯಲ್ಲಿ [illegible] ಪೊಂದಿದೆ

ತಲೆನೋವು, [illegible] ಮೊದಲಾದುದಕ್ಕೆ [illegible]

ಎದೆನೋವು, ಗೊಂಟಿನನೋವು ಇವುಗಳಿಗೆಲ್ಲಾ [illegible]

ಉಳುಕು, [illegible] ಮೊದಲಾದುದಕ್ಕೆ ದಿವ್ಯೌಷಧ!

ಈ ನಮ್ಮ ರೊಯಲ್ ಇಂಡಿಯನ್ ಬಾಮಿನಿಂದ ಎಲ್ಲಾ ತರದ ನೋವುಗಳು ಮಾತ್ರೆಯಿಂದ ನಿಲ್ಲುವದು. ಬಾಟ್ಲಿ ಒಂದರ ಕಿಮ್ಮತ್ತು 0—8—0 3 ಬಾಟ್ಲಿಗಳಿಗೆ 1—6—0 6 ಬಾಟ್ಲಿಗಳಿಗೆ 2—10—0 ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು.

ಏಜಂಟರು.— ಮನೋಹರ ಕಂಪೆನಿ, ಗಿರಗಾಂ ಮುಂಬಯಿ

Sole agent for M Taluq

ಪರ್ಲ ಎಂಡ್ ಸನ್ಸ್ ಮಂಗಳೂರು.

ಬೇಕಲ ವೆಂಕಟ್ರಾವ್, ಉಡುಪಿ.

ಕೆ. ಎಸ್. [illegible], [illegible].

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

[illegible]

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, **ಒರ್ಕಣ್ಣ** [illegible]ವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, [illegible] ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ **ಆಗುವ ಎಲ್ಲಾ** ತರದ ನೋವುಗಳು [illegible] ನಿಲ್ಲುವವು. ಡಬ್ಬಿ ೧ರ ಕ್ರಯ 0—8—0.

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ 2—8—0.

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ **ಬರೆಯಿರಿ.**

[illegible] ಟಿ. ಬಾಬುರಾಯರ

ಆಯುರ್ವೇದಿಕ್ ಔಷಧಾಲಯ,

[illegible], ಮಂಗಳೂರು ದ. ಕ.

ನೇತ್ರಬಿಂದು

ಇದು ಕಣ್ಣಿನ [illegible] ಕಣ್ಣಿನ ನೋವು, ಕಣ್ಣಿನ **ಮೂಲೆ ತುರಿ**ಕೆ ಕೆಂಗಣ್ಣು, ರೆಪ್ಪೆ ಉದುರುವಿಕೆ [illegible] ರೋಗಗಳಿಗೆ ಸಿದ್ಧೌಷಧವು. ಇದು **ವಿನಹ ಇಲ್ಲಿ** ಆಸವಗಳೂ, ಅರಿಷ್ಟಗಳೂ, ಘೃತಗಳೂ, **ಲೇಹಗಳೂ,** ಚೂರ್ಣಗಳೂ, ತೈಲ್ಯಗಳೂ, **ಮಾತ್ರೆಗಳೂ,** [illegible]ಗಳೂ ವಗ್ಯರೆ ದೊರೆಯುತ್ತವೆ.

ಸಿದ್ಧಲಕ್ಷ್ಮೀವಿಲಾಸ—ಇದು [illegible] ಮಾಡುತ್ತದೆ.

ವಿಳಾಸ— **ಧನ್ವಂತರಿ ಆಯುರ್ವೇದಿಕ ಔಷಧಾಲಯ,** **ಮಂಗಳೂರು.**

ಸ್ವದೇಶಾಭಿಮಾನಿ

ಪ್ರತಿಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ವರ್ಷ ೧ಕ್ಕೆ ರೂ 1-4-0 ಟಪ್ಪಾಲು ಹಾಸಲು ಶೇರಿ ರೂ. 2-1-0

ಪುಸ್ತಕ 4 ಮಂಗಳೂರು, ತಾರೀಕು 20ನೇ ಶನಿವಾರ ಅಗೋಸ್ತು 1910 ಸಂಚಿಕೆ 33

Amrutanjan Depot Fort Bombay.

ಅಮೃತಾಂಜನ

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು, ಗಂಟ್ಲ ನೋವು, ಜಖಮು, ಉಳುಕು, ಘಾಯ. ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು. ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು. ಬಾಟ್ಲಿ ೧ರ ಕಿಮ್ಮತು 8 ಆಣೆ

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ	SAFE ★ EFFICACIOUS ★ SURE ★ PILLS ★ OINTMENTS ★ POWDERS — WILLIAM & Co. BOMBAY	ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಹಿಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿ ರೂ 4

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು ೨ ಆಣೆ

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪ್ಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮೆಯಿನ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ಹಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳೆಯುವವು. ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ. ಬಾಟ್ಲಿ ಒಂದರ ಕಿಮ್ಮತು ರೂ 1

ಸುಂದರಿ ತೈಲ.

ಇದನ್ನು ಮೋರೆಗೆ ಹಾಗಿಸುವದರಿಂದ ಮುದ್ದುಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು. ಬಾಟ್ಲಿ ಒಂದರ ಕಿಮ್ಮತು ೬ ಆಣೆ

ಖಜ್ಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತು 3 ಆಣೆ

ಗುಲಾಬು ಪೂತ್ರೆ.

ಬಾಟ್ಲಿ ಒಂದರ ಕಿಮ್ಮತು 8 ಆಣೆ

ವಿಳಾಸ:— ಅಮೃತಾಂಜನ ಡಿಪೊ, ಫೋರ್ಟು, ಮುಂಬಯಿ.

[illegible]

ದಂತಕಾಂತಿ ಚೂರ್ಣವು

[illegible] ಗುಣಕಾರಿ [illegible]

ದಂತಗಳ ಸಸಿಯಲ್ಲಿ [illegible] ಹಲ್ಲುಗಳನ್ನು [illegible] ತಿನ್ನುವುದು, ಹಲ್ಲು ನೋವು, ದಂತಸಾಲಿನ [illegible] ಬಾಯಿಯ ದುರ್ವಾಸನೆ ಮೊದಲಾದ ರೋಗ ಬಾಧೆಗಳನ್ನು ದಂತಕಾಂತಿ ಚೂರ್ಣದ ನಿತ್ಯ ಉಪಯೋಗದಿಂದ ನಿಶ್ಚಯವಾಗಿ ಹೋಗಲಾಡಿಸಿಕೊಳ್ಳ [illegible] ಹಲ್ಲುಗಳಲ್ಲಿ [illegible] ಕಣ್ಣಿ ಮೊದಲಾದ್ದು ಈ ಚೂರ್ಣ ಉಪಯೋಗದಿಂದ [illegible] ಮುತ್ತಿನೋಪಾದಿ ಕಾಂತಿಯು ಜನಿಸುವದು [illegible] ಬಹಳ ರುಚಿಯು ಇದರಿಂದ [illegible] ಹಲ್ಲು [illegible] ಗುಳ್ಳೆಗಳೂ [illegible] ತಡೆಯಲ್ಪಡುವವು ಈ ಚೂರ್ಣವು ಹಲ್ಲುಗಳನ್ನು [illegible] ಪದಾರ್ಥಗಳಿಂದ ಕೂಡಿಲ್ಲದೆ ಬಹಳ [illegible] ನಯವಾಗಿರುವಂತೆ [illegible] ಹಲ್ಲುಗಳನ್ನು ತಿಕ್ಕಿ ದರೆ ಹಲ್ಲುಗಳು [illegible] ನಾನಾ ವಿಧ ಹಲ್ಲುರೋಗಗಳ [illegible] ಉಪಯೋಗದ [illegible] ನಾಶ ಗೊಳಿಸುವುದು ದಂತಕಾಂತಿ [illegible] ವಾಗಿದ್ದು ಬಾಯಿಯ [illegible] ಕರು ಈ ಚೂರ್ಣವನ್ನು [illegible] ಹಲ್ಲುಗಳು ಬಹಳ [illegible]

ಕರಡಿಗೆ ಒಂದಕ್ಕೆ	4 ಆಣೆ
ಒಂದು ಡಜನ್ ಕರಡಿಗೆಗೆ	ರೂ 2 12 ,,
ಟಪ್ಪಾಲು ವ ಪ್ಯಾಕಿಂಗ್ ಚಾರ್ಜ 1 ಕರಡಿಗೆ	3 ,,
,, ,, 12 ,,	11 ,,

☞ ಅಚ್ಚಿನಲ್ಲಿರುವುದು !

ಇನ್ನು ಸ್ವಲ್ಪ ಸಮಯದಲ್ಲಿಯೇ ಪ್ರಕಟಿಸಲ್ಪಡುವದು !

ರೋಗಗಳ ಮತ್ತು [illegible] ಕನ್ನಡ ಭಾಷೆಯ [illegible] ಗ್ರಂಥವು

ಈ ಗ್ರಂಥದ ಉಚಿತ ಪ್ರತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಟಿ ಎಸ್ ಸುಬ್ರಮಣ್ಯಮ್ [illegible] ಕೊ

[illegible] ಲಿಮೋಸಿಯನ್ ರಸ್ತೆ, ಮದ್ರಾಸು

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಮಿಮಿಶನ ಮೂಲಕ ರವಾನಿಸುತ್ತೇವೆ ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ

ವಿಳಾಸ.— ರಂಗಪ್ಪಾ ರಾಮಕೃಷ್ಣ ಕವಿ,

ಮನೋಹರ ಬಿಲ್ಡಿಂಗ್ ಲವರಚಾಳ, ಮುಂಬಯಿ.

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,

ಮಂಗಳೂರು, ದ ಕ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಿಲ್‌ಮೆನ್ ಸ್ಟೋರ್ಸ್ ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ [illegible] ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ [illegible]

ನವೀನ ಶೃಂಗಾರ ಸ್ತ್ರೀ ಶುಕಸಪ್ತತಿ ಕಥೆ.

ನೀವು? ಶೃಂಗಾರ ಮತ್ತು ಚಮತ್ಕಾರವಾಗಿರುವ ಕಥೆಯನ್ನು [illegible] ಅಭಿಲಾಷೆ ಇದ್ದರೆ ಮೇಲ್ಕಂಡ ಕಥೆಗೆ ಸಮಾನವಾದ ಕಥೆ ಯಾವದೂ ಇಲ್ಲ. ಕ್ರಯ ಟಪಾಸಲ್ ಸಹಾ ೧೦ ಆಣೆ.

ಮತ್ತು ನಮ್ಮಲ್ಲಿ ಕನ್ನಡ, ತೆಲುಗು, ಸಂಸ್ಕೃತ ಪುಸ್ತಕಗಳು ಪರಮಾಯಿದ ಊದಬತ್ತಿಗಳು, ಹಸಿಗಂಧ ಹಸಿ ಬಿಲ್ಲೆಗಳು, ಪನ್ನೀರು, ತರಹೆವಾರಿ, ಜವಳಿ ಸಹಾ ದೊರೆಯುವದು ಅಲ್ಲದೆ, ಇತರ ಯಾವ ಪದಾರ್ಥಗಳು ಬೇಕಾದರೂ ನಂಬಿಕೆಯಿಂದ ಕಮಿಷನಿಗೆ ರವಾನೆ ಮಾಡುವೆವು ಒಂದಾವರ್ತಿ ತರಿಸಿ ನೋಡಿದರೆ ಗೊತ್ತಾಗುತ್ತೆ. ನಮ್ಮ ಕಂಪನಿ ಕೆಟಲಾಗ್ ಮುಫತ್ತಾಗಿ ದೊರೆಯುವದು.

ಟಿ. ಯನ್ ಶ್ರೀನಿವಾಸ ಶೆಟ್ಟಿ, ಬುಕ್‌ಡಿಪೊ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ

ಲಿಮಿಟೆಡ್.

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ — ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯುವರಿಗೂ ಕೇವಲ [illegible] ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಬದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಬದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ —ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜೆಂಟ್, ಮಂಗಳೂರು, ದ. ಕನ್ನಡ.

ಬಹುಮಾನ! ಬಹುಮಾನ! ಬಹುಮಾನ!

THE KALA-NIDHI MANGALORE,

(ಫೋಟೋ 1ಕ್ಕೆ [illegible])

ಬರುವ ದಶಂಬರ ತಿಂಗಳ ವರೆಗೆ ಮಾತ್ರ ೪ ರೂಪಾಯಿಗಳ ಶಾಯಿ ಫೋಟೋಗಳನ್ನು ತೆಗದುಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಕೀಲಿನ ಘಡಿಯಾರವು

[illegible] ಮೇಲ್ಗಡೆ ಬಾಜು [illegible] ಅತಿ [illegible]

ಬಹುಮಾನಗಳ ವಿವರ. [illegible] ಫೋಟೋಗಳನ್ನು ತೆಗೆದುಕೊಳ್ಳುವವರಿಗೆ ಸುಗಂಧ ದಂತ [illegible] ಪೆನ್ಸಿಲ್ ಡಜನ್ ೧; ೧ [illegible] ಫೋಟೋಗಳನ್ನು [illegible] ಒನಿಯನ್ ೧, ೩ ರೂಪಾಯಿದ್ದನ್ನು [illegible] ೧ ಕಿಸೆ [illegible] ೧, ೪ ರೂಪಾಯಿಗಳದ್ದು ತರಿಸಿಕೆ [illegible] ಸಿಲ್ವರ್ [illegible] ಕೀಲಿನ ಕಿಸೆ ಘಡಿಯಾರವು ಗ್ಲಾಸ್ [illegible] ಸಹಿತ

[illegible] ಶಾಯಿಯ [illegible] ಪ್ರತ್ಯೇಕ

ವಿಳಾಸ — ಕಲಾನಿಧಿ, ಮಂಗಳೂರು

ಅಥವಾ ದಿ ಊಲನ್ ಮಾರ್ಟ ನಂಬ್ರ ೧ ಮಂಗಳೂರು (ದ. ಕ)

ವೈಟ್ ಮೆಟಲ್

(ರಜತ ಲೋಹದ ಸರಪಣಿ)

ಕತ್ತಲೆಯಲ್ಲಿಯೂ ಇದರ ಹೊಳಪು ಚಂದ್ರನಕಾಂತಿಯಂತೆ ಇರುವದು, ನೋಟಕ್ಕೆ ರಮ್ಯವಾಗಿ, ಮನಸ್ಸಿಗೆ ಉಲ್ಲಾಸಕರವಾಗಿ, ಕಿರೆಗಡಿಯಾರಕ್ಕೆ ದಿವ್ಯಾಭರಣವಾಗಿ ಶೋಭಿಸುವುದು ಎಂತಹ ಪೋಶಾಕ್‌ಗಳು ಧರಿಸಿದರೂ ಸುಂದರವಾಗಿ, ಥಳಥಳಿಸುವ ಈ ಸರಪಣಿ ಪ್ರತಿಯೊಬ್ಬರಲ್ಲಿಯೂ ಇಲ್ಲದಿದ್ದರೆ ತಾಂಬೂಲವಿಲ್ಲದ ಮುಖದಂತೆ ಶೋಭಾಯಮಾನವಾಗಿರದು. ಇದರ ಗುಣದಲ್ಲಿ ಎಳ್ಳಷ್ಟೂ ಸಂದೇಹ ಪಡಬೇಕಾದಿಲ್ಲ.

ಸಂತೋಷಕರವಾದ ಕಾಂತಿ!

ಎಂದಿಗೂ ಕೆಡದ ಗುಣ!

ಅತ್ಯಂತ ಅಗ್ಗವಾದ ಬೆಲೆ!

ಸರಪಣಿ 1ಕ್ಕೆ ಕ್ರಯ 1—8—0. ಚಿಕ್ಕಸೈಜು ಧಾರಥಿ ವಾಚು 1ಕ್ಕೆ 3—8—0. ರಾಸ್ಕೋಪ್ ಲಿವರ್ ವಾಚು1ಕ್ಕೆ. 2—8—0.

ವಿಳಾಸ:— ದಿ. ಊಲನ್ ಮಾರ್ಟ

ಆಸ್ಪತ್ರೆ ಎದುರು,

ಮಂಗಳೂರು.

ಸ್ವದೇಶಾಭಿಮಾನಿ

ಮಂಗಳೂರು, ಶನಿವಾರ ತಾರೀಕು ೨೦ನೇ ಆಗೋಸ್ತು ೧೯೧೧

ರೈ ಬಹದೂರ ಕ್ರಿಸ್ತೋದಾಸಪಾಲರವರ ಮರಣದಿನ ಆಚರಣೆಯು

ವಂಗಭೂಮಿಯಿಂದ 'ಬೋಂಬು' ಎಂಬ ... ದುಷ್ಕರ್ಮಗಳನ್ನು ಕೇಳಿದೆವು. ವಿಪರೀತವಾಗಿ ಅಲ್ಲಲ್ಲಿ ದರೋಡೆ ಕಳವುಗಳು ನಡೆಯುತ್ತಿರುವವೆಂದು ಸಮಾಚಾರ ಪತ್ರಗಳಿಂದ ಓದುತ್ತಿರುವೆವು. ರಾಜದ್ರೋಹ, ರಾಜ್ಯೋತ್ಪಾಟನ ಸಾಧನಗಳ ಪ್ರತಿಕ್ರಿಯೆಗಳಾಗಿ ವಿಶೇಷವಾದ ... ಮೊಕದ್ದಮೆಗಳು ನಡೆಯುತ್ತಿರುವವೆಂಬುದನ್ನೂ ಕೇಳಬಲ್ಲೆವು. ಹೇಯವಾದ ವರ್ತನೆಗಳನ್ನನುಸರಿಸುವಂಥಾ ವ್ಯಕ್ತಿಗಳು ಬಂಗಾಳಗಳಲ್ಲಿ ಸಂಖ್ಯೆಯಲ್ಲಿ ಅತ್ಯಲ್ಪವಾಗಿದ್ದರೂ, ಸಿಂಧೂ ಮೇಲ್ಭಾಗದಲ್ಲಿ ತೇಲಾಡುತ್ತಲಿರುವ ಲಘುತರವಾದ ಕಸಕಡ್ಡಿಗಳು ನೀರಿನ ಮೇಲ್ಭಾಗದಲ್ಲಿ ತೇಲಾಡುತ್ತಿರುವುದು ನೋಟಕರಿಗೆ ಸುಲಭವಾಗಿ ದೃಷ್ಟಿಗೋಚರವಾಗುವಂತೆ ಈ ತಪ್ಪಿತಸ್ಥರ ದುಷ್ಕೃತ್ಯಗಳು ಬಂಗಾಳದಿಂದ ಮುಖ್ಯವಾಗಿ ಸರ್ವರಿಗೂ ಕಾಣುತ್ತಿರುವವು. ಪ್ರಜೈಕ್ಯ, ರಾಜಭಕ್ತಿ ಮೊದಲಾದ ಪ್ರಜಾಶ್ರೇಯಸ್ಕರ ಗುಣಗಳನ್ನು ಬಂಗಾಳಿಯವರಲ್ಲಿ ನಾಟುವಂತೆ ಮಾಡುವ ಪ್ರಜಾಮುಂದಾಳುಗಳ ಸಾಧನಗಳು ಆ ವಂಗಭೂಮಿಯಲ್ಲಿಯೇ ಸಮಗ್ರವಾಗಿ ನಡೆಯುತ್ತಿರುವವೆಂಬದು ಕಳೆದ ತಿಂಗಳಲ್ಲಿ ಕಲ್ಕತ್ತೆಯಲ್ಲಿ ನೆರವೇರಿಸಿದ ರೈ ಬಹದೂರ ಕ್ರಿಸ್ತೋದಾಸಪಾಲರವರ ಮರಣದಿನಾಚರಣೆಯ ಸಂಕ್ಷೇಪ ವೃತ್ತಾಂತದಿಂದ ವಾಚಕರಿಗೆ ವ್ಯಕ್ತವಾಗದಿರದು. ನಿಶ್ಚಲವಾದ ರಾಜಭಕ್ತಿ ಮತ್ತು ಪ್ರಜೆಗಳ ನೀತಿಯಾಗಬೇಕೆಂಬ ಭಾವನೆಗಳಿಂದ ಪ್ರೇರಿತರಾಗಿ ಬಂಗಾಳಿಯ ಮುಂದಾಳುಗಳು ಸಂದರ್ಭದೊರಕಿದಂತೆ ವಿವಿಧ ವಿಧದ ಪ್ರಜಾವರ್ಗಗಳಲ್ಲಿರುವ ವೈಷಮ್ಯಗಳನ್ನು ಮಾರ್ಪಡಿಸಿ ಸರ್ವರಲ್ಲಿ ಅನುರಾಗವೂ ರಾಜನಿಷ್ಠೆಯೂ ಉಂಟಾಗುವಂತೆ ಸಾಹಸಪಡುತ್ತಿರುವರು.

ಈ ಸಂದರ್ಭದಲ್ಲಿ ರೈ ಬಹದೂರ ಕ್ರಿಸ್ತೋದಾಸಪಾಲರವರ ಪರಿಚಿತಿಯನ್ನು ವಾಚಕರಿಗೆ ಹೇಳಬೇಕಾಗಿರುವುದು. ಕ್ರಿಸ್ತೋದಾಸಪಾಲರವರು ೧೮೩೮ನೇ ಇಸವಿಯಲ್ಲಿ ಜನ್ಮವೆತ್ತಿ ೧೮೮೪ನೇ ವರುಷದ ಜುಲಾಯಿ ತಿಂಗಳು ತಾ. ೨೪ರಲ್ಲಿ ಮೃತಪಟ್ಟರು. ೧೮೫೭ನೇ ವರುಷದಲ್ಲಾದ ಸಿಪಾಯಿಗಳ ದಂಗೆ ಕಾಲದಲ್ಲಿ ಇವರಿಗೆ ೧೯ ವರುಷ ಪ್ರಾಯವಾಗಿತ್ತು. ಆ ಕಾಲದಲ್ಲಿ ಕಲ್ಕತ್ತೆಯಲ್ಲಿ ದೊರೆಯಬಹುದಾದ ಪ್ರೌಢ ವಿದ್ಯಾಭ್ಯಾಸವನ್ನು ಇವರು ಪಡದಿದ್ದರು. ಕಾಲೇಜು ವಿದ್ಯಾಭ್ಯಾಸವನ್ನು ಬಿಟ್ಟಾದ ನಂತರ ಕ್ರಿಸ್ತೋದಾಸಪಾಲರವರು ರಾಜಕೀಯ ವಿಷಯಗಳಲ್ಲಿಯೇ ಹೆಚ್ಚಿನ ಆಸಕ್ತಿ ಉಳ್ಳವರಾಗಿ ಪತ್ರ ರಚನಾಕಾರ್ಯಕ್ಕೆ ಬೇಕಾದ ಮಾಹಿತಿಯನ್ನು ಐದು ವರುಷಗಳಲ್ಲಿ ಪಡದು 'ಹಿಂದೂ ಪೇಟ್ರಿಯಟ್' ಎಂಬ ಪತ್ರದ ಸಂಪಾದಕರಾದರು. ೧೮೬೧ರಿಂದ ೧೮೮೪ರ ವರೆಗೆ ಪ್ರಜಾಹಿತದ ನಿರಂತರ ಪರಿಶ್ರಮಗಳಿಂದ ಇವರ ಜೀವಿತವು ಪರಿಪೂರ್ಣವಾಗಿತ್ತು. 'ಹಿಂದೂ ಪೇಟ್ರಿಯಟ್' ಪತ್ರದ ಸಂಪಾದಕ ಪದವಿಯನ್ನು ಪಡದಂದಿನಿಂದ ಕ್ರಿಸ್ತೋದಾಸಪಾಲರವರ ವರ್ಚಸ್ವದಿಂದ ಆ ಪತ್ರವು ಸರಕಾರದವರಿಂದಲೂ ಪ್ರಜೆಗಳಿಂದಲೂ ಏಕರೀತಿ ಮನ್ನಿಸಲ್ಪಟ್ಟಿತು. ಬಂಗಾಳ ಮತ್ತು ಇಂಡಿಯಾ ಸರಕಾರದವರ ನ್ಯಾಯವಿಧಾಯಕ ಸಭೆಗಳ ಮೆಂಬರರಾಗಿ ಜನರ ಮೇಲ್ಮೆಯನ್ನು ಸಾಧಿಸುತ್ತಿದ್ದರಲ್ಲದೆ ಸರಕಾರದವರಿಗೂ ಸಹ ಇವರ ವಿವೇಕಭರಿತವಾದ ಅನುಭವ ಪ್ರಯೋಜನವು ದೊರಕುತ್ತಿತ್ತು. ಬಹಳ ಕಾಲದ ವರೆಗೆ ಇವರು ಕಲ್ಕತ್ತೆಯ ಮುನಿಸಿಪಾಲಿಟಿಯ ಕೌನ್ಸಿಲರರಾಗಿದ್ದರು. ತನ್ನಿಂದಾಗುವ ಪ್ರಯತ್ನಗಳಿಂದ ಪಟ್ಟಣ ನಿವಾಸಿಕರ ಹಿತದ ಬಗ್ಗೆ ಪ್ರಯತ್ನಪಡುತ್ತಿದ್ದರು. 'ಬ್ರಿಟಿಷ್ ಇಂಡಿಯಾ ಎಸೋಸಿಯೇಶನ್' ಎಂಬ ಸಂಘದ ಉಪಕಾರ್ಯದರ್ಶಿಗಳಾಗಿ ಪ್ರಜಾಭಿಪ್ರಾಯಗಳನ್ನು ಈ ಸಂಘದ ಮುಖಾಂತರ ಬಲವತ್ತಾಗುವಂತೆ ಏಕೀಕರಿಸಿ ಅವುಗಳು ಮನ್ನಿಸಲ್ಪಡುವ ರೀತಿಯಲ್ಲಿಯೇ ವ್ಯಕ್ತಗೊಳಿಸುತ್ತಿದ್ದರು. ದೇಹಾರೋಗ್ಯಕ್ಕೆ ಸಹಾ ಗಮನಕೊಡದೆ ದೇಶ ಸೇವೆಯಲ್ಲಿಯೇ ನಿರತರಾದ್ದರಿಂದ ತಮ್ಮ ೪೬ನೇ ವಯಸ್ಸಿನಲ್ಲಿಯೇ ಕ್ರಿಸ್ತೋದಾಸಪಾಲರವರು ಮೃತಪಟ್ಟರು. ಇವರ ಸ್ಮರಣೆಯು ಚಿರಕಾಲ ಉಳಿಯುವಂತೆ ಇವರ ಪ್ರತಿಮೆಯನ್ನು ಕಲ್ಕತ್ತೆಯಲ್ಲಿ ಪ್ರತಿಷ್ಠಿಸಿರುವರು.

ಈ ಮಹಾತ್ಮರ ಮರಣದಿನವನ್ನು ಆಚರಿಸುವ ಬಗ್ಗೆ ಕಳೆದ ತಿಂಗಳ ೨೪ನೇ ತಾರೀಕಿನಲ್ಲಿ ಯುರೋಪಿಯನರು, ದೇಶೀಯರು, ಮಾರ್ವಾಡಿಗಳು, ವಕೀಲರು, ಕಾಲೇಜು ವಿದ್ಯಾರ್ಥಿಗಳು, ಉಪಾಧ್ಯಾಯರು, [illegible] ಮೊದಲಾದವರ್ನ್ನರು ಕಲಿಕತ್ತೆಯಲ್ಲಿ ಒಂದು ಸಭೆ ಕೂಡಿದ್ದರು. ದರ್ಭಂಗದ ಮಹಾರಾಜರವರು ಈ ಸಭೆಯ ಅಧ್ಯಕ್ಷರಾಗಿದ್ದರು. ವ್ಯಾಖ್ಯಾತೃ ಬಾಬು ಸರೋದ ಚರಣಮಿತ್ರರವರು ಕ್ರಿಸ್ತೋದಾಸಪಾಲರವರ ಜೀವನ ವೃತ್ತಾಂತವನ್ನು ಕುರಿತು ಒಂದು ಉಪನ್ಯಾಸವನ್ನು ಕೊಟ್ಟರು. ಬಾಬು ಸುರೇಂದ್ರನಾಥ ಬೆನರ್ಜಿ, 'ಸ್ಟೇಟ್ಸ್‌ಮನ್' ಎಂಬ ಆಂಗ್ಲೋ ಇಂಡಿಯನ್ ಪತ್ರಿಕಾಕರ್ತರಾದ ಮಿ| ಹೂರ್ನಿಮನರವರು ಮತ್ತು ಮಿ| ಪ್ರಿಮಿಯರ್ಸ್ ಎಂಬವರು ಸಹ ಪಾಲರವರ ಗುಣಾತಿಶಯಗಳನ್ನು ಶ್ಲಾಘಿಸಿ ಚಿಕ್ಕ ಚಿಕ್ಕ ಭಾಷಣಗಳನ್ನು ಸಭೆಯಲ್ಲಿ ಮಾಡುವವರಾದರು.

ರೈ ಬಹದೂರ್ ಕ್ರಿಸ್ತೋದಾಸಪಾಲರವರು ಕಾಲವಾಗಿ ೨೭ ವರುಷಗಳಾದರೂ ಈ ವರುಷದಲ್ಲಿ ಮಾತ್ರ ಅವರ ಮರಣದಿನಾಚರಣೆಯನ್ನು ಮಾಡಲು ಪ್ರಾರಂಭಿಸಿರುವರು. ಇದರಿಂದಲೇ ದರ್ಭಂಗದ ಮಹಾರಾಜರವರು ಅಪ್ಪಣೆಕೊಡಿಸಿದಂತೆ ಕ್ರಿಸ್ತೋದಾಸರವರು ತಮ್ಮ ಜೀವಮಾನದಲ್ಲಿ ಉದಹರಿಸಿದ ಸದ್ಗುಣಗಳನ್ನು ದೇಶಹಿತಾರ್ಥವಾಗಿ ಅನುಸರಿಸಲಿಕ್ಕೆ ಪ್ರಕೃತ ಕಾಲವೇ ಉಚಿತವಾಗಿರುವುದೆಂತ ತೋರುವುದು. ಸರ್ವಜನ ಪ್ರಯೋಜನಾರ್ಥವಾಗಿ ಮಾಡುವ ತ್ಯಾಗಶೀಲತೆಯ ನಿರಂತರ ಪ್ರಯತ್ನಗಳಿಂದ ಜಯಹೊಂದುವುದು ಹ್ಯಾಗೆಂಬುವದು ಪಾಲರವರ ಚರಿತ್ರೆಯಿಂದ ತಿಳಿದುಬರುವುದು. ಸಮಾಜ ತರಗತಿಯಲ್ಲಿ ನಡುತರದವರಾದರೂ ಬಡವರನ್ನೂ ಶ್ರೀಮಂತರನ್ನೂ ದಯಾಭಾವದಿಂದ ಕಂಡು ಸಂಕಷ್ಟದಲ್ಲಿರುವವರಿಗೆ ಒಳ್ಳೆ ಸಹಕಾರ ಸ್ವೀಕರಿಸುತ್ತಿದ್ದರು.

ಬಾಬು ಸರೋದ ಚರಣಮಿತ್ರರವರು ಕ್ರಿಸ್ತೋದಾಸಪಾಲರವರ ಜೀವನವೃತ್ತಾಂತವನ್ನು ತಿಳಿಸಿ ಹೇಳುವಾಗ ಈ ಮಹನೀಯರ ಜೀವಮಾನಕಾಲದ ಒಂದೊಂದು ಅಂಶಗಳಾಗಿ ಬಂಗಡಿಸಿ ಸಭೆಯಲ್ಲಿ ಕೂಡಿರುವ ಎಲ್ಲಾ ವರ್ಗಗಳವರಿಗೂ ಬೋಧಕವಾಗುವಂತೆ ಒಂದೊಂದಂಶವನ್ನೂ ಈಗಿನ ಕಾಲದ ವಿದ್ಯಮಾನಗಳ ಮೂಲಕ ಅಳೆದು ಪರಿಶೋಧಿಸಿ ತೋರಿಸಿದರು. ಕುಶಾಗ್ರಬುದ್ಧಿಯಿಂದ ಸಿರಪ್ರಯತ್ನದಿಂದ ಜ್ಞಾನ ಸಂಪಾದನೆಯಿಂದ ಶಾಲಾ ವಿದ್ಯಾರ್ಥಿಯಾಗಿದ್ದಾಗ ಬಡತನದಲ್ಲಿದ್ದರೂ ಎಷ್ಟು ಕಷ್ಟ ತೊಂದರೆಗಳಿಗೆ ಒಳಪಟ್ಟರೂ, ವಿದ್ಯೆಯನ್ನು ಹ್ಯಾಗೆ ಸಂಪಾದಿಸಿಕೊಂಡರೆಂಬ ವಿಷಯವು ಎಂಥಾ ವಿದ್ಯಮಾನಗಳ ವಿದ್ಯಾರ್ಥಿಗಳಲ್ಲಿಯಾದರೂ ವಿದ್ಯಾ ಪ್ರೋತ್ಸಾಹವನ್ನು ಉಂಟುಮಾಡದಿರದು. ಈ ಸಂದರ್ಭದಲ್ಲಿ ಆ ಕಾಲದ ಕಲಿಕತ್ತೆಯ ವಿದ್ಯಾಶಾಲೆಗಳ ಆಂಗ್ಲ ಪಂಡಿತರಾದ ಡೇವಿಡ್ ಹೇರ್, ಕ್ಯಾಪ್ಟನ್ ರಿಚರ್ಡ್‌ಸನ್ ಮೊದಲಾದ ಆಂಗ್ಲೇಯ ಉಪಾಧ್ಯಾಯರ ಮತ್ತು ಅವರ ವಿದ್ಯಾರ್ಥಿಗಳೊಳಗಿದ್ದ ಪ್ರೀತಿಯನ್ನೂ ಮಮಕಾರವನ್ನೂ ವಿವರಿಸಿ ಹೇಳಿ ಅಂಥಾ ಪ್ರೀತಿಯೂ, ಮಮಕಾರವೂ ಈಗಿನ ಆಂಗ್ಲ ಪಂಡಿತ ಮತ್ತು ವಿದ್ಯಾರ್ಥಿಗಳೊಳಗೆ ವಿರಳವೆಂದ ಸಭೆಯಲ್ಲಿ ಸರೋದ ಚರಣಮಿತ್ರರವರು ಸೂಚಿಸುವವರಾದರು. ಆಂಗ್ಲೇಯರಿಗೆ ತಮ್ಮ 'ಸ್ವದೇಶ'ದಲ್ಲಿ ತೋರಿಬರುವ ಸೌಕರ್ಯಗಳು ಈಗ ಹೆಚ್ಚು ಬಹಳ ಸಮಯದ ವರೆಗೆ ಹಿಂದುಸ್ಥಾನದಲ್ಲಿಯೇ ಇದ್ದುಕೊಂಡು ಈ ದೇಶದ ವಿದ್ಯಮಾನಗಳಿಗನುಸಾರವಾಗಿ ದೇಶೀಯರೊಡನೆ ವಿನೋದ ಪಡುವ ಸಂದರ್ಭಗಳು ಬಹಳ ಅಪರೂಪವಾಗಿ ಹೋದುದರಿಂದಲೂ ಇನ್ನು ಕೆಲವು ಕಾರಣಗಳಿಂದಲೂ ಆಂಗ್ಲೇಯರ ಮತ್ತು ದೇಶೀಯರೊಳಗೆ ಅಭಾವವೂ ವೈಷಮ್ಯವೂ ಈಗೀಗ ತಲೆದೋರುವುದು ವಿಷಾದಕರವೆಂತ ಅಪ್ಪಣೆಕೊಟ್ಟರು. ಆದರೆ ಇಂತಹ ಭಾವನೆಗಳು ಉಭಯತರಿಂದ ಕ್ರಮೇಣ ಅದೃಶ್ಯವಾಗುವವೆಂತಲೂ ಅವು ಅದೃಶ್ಯವಾಗುತ್ತಿರುವವೆಂತಲೂ ಅಜ್ಞಾಪಿಸಿದರು.

ಕಲಿಕತ್ತೆಯ ಮತ್ತು ಬಂಗಾಳದ ನ್ಯಾಯವಿಧಾಯಕ ಸಭೆಗಳಲ್ಲಿ ತಮ್ಮ ಪಾಂಡಿತ್ಯದಿಂದ ಕ್ರಿಸ್ತೋದಾಸಪಾಲರವರು ಪ್ರಜಾಸೇವೆಯನ್ನು ಹ್ಯಾಗೆ ಗೈದರೆಂಬದನ್ನು ನಂತರದಲ್ಲಿ ಬಾಬು ಸರೋದ ಚರಣಮಿತ್ರರವರು ವ್ಯಕ್ತಪಡಿಸಿದರು. ಆ ಕಾಲದ ಸೌಮ್ಯಪಕ್ಷದವರಲ್ಲಿ ಪಾಲರವರು ಅತಿ ಸೌಮ್ಯರಾಗಿದ್ದರೂ ಪ್ರಕೃತ ಕಾಲದಲ್ಲಿ ಅವರಿರುತ್ತಿದ್ದರೆ ಅವರನ್ನು ತೀಕ್ಷ್ಣಪಕ್ಷದವರಂತೆಯೇ ಗ್ರಹಿಸುತ್ತಿದ್ದರಾಗಿ ಮಿತ್ರರವರು ಅಭಿಪ್ರಾಯಪಟ್ಟರು. ದೇಶದಲ್ಲಿ ಶಾಂತತೆಯೂ, ಅಭಿವೃದ್ಧಿಯೂ ಬ್ರಿಟಿಷರ ಅಧೀನತೆಯಿಂದಲೇ ನಮಗೆ ಪ್ರಾಪ್ತವಾದ್ದರಿಂದ ಅಂಥಾ ರಾಜರಲ್ಲಿ ವಿಶ್ವಾಸವೂ, ಭಕ್ತಿಯೂ, ಅಭಿಮಾನವೂ ನಿಶ್ಚಲವಾಗಿ ಉಳ್ಳವರಾಗಿರಬೇಕೆಂಬುವುದು ಪಾಲರವರ ಸಿದ್ಧಾಂತವಾಗಿತ್ತೆಂದು ತಿಳಿಸಿದ್ದಲ್ಲದೆ ಪ್ರತಿ ಭಾರತೀಯರೂ ಅಂಥಾ ಸಿದ್ಧಾಂತಗಳುಳ್ಳವರಾಗಬೇಕೆಂದು ಸರೋದ ಚರಣಮಿತ್ರರವರು ವಿಜ್ಞಾಪಿಸಿಕೊಂಡರು. ಸರಕಾರದವರು ಪ್ರಜೆಗಳಿಗೆ ಮೊದಲಾಗಿ ಕೊಟ್ಟ ಹಕ್ಕು ಸ್ವಾತಂತ್ರ್ಯಗಳನ್ನು ಅತಿಕ್ರಮಿಸುತ್ತಿದ್ದರೆಂತ ಪಾಲರವರಿಗೆ ಕಂಡಲ್ಲಿ ತಮ್ಮ ಪತ್ರದಲ್ಲಿಯೂ ನ್ಯಾಯವಿಧಾಯಕ ಸಭೆಗಳಲ್ಲಿಯೂ ಧೀರತನದಿಂದಲೂ, ಸಾವಧಾನದಿಂದಲೂ ಪ್ರಜೆಗಳಿಗೆ ನೀತಿಯಾಗಬೇಕೆಂಬ ಭಾವನೆಯಿಂದ ಸೆಣದಾಡುತ್ತಿದ್ದರು. ಆದರೆ ಇವರ ವಾದಗಳಲ್ಲಿ ವೈಷಮ್ಯವಿರಲಿಲ್ಲ, ಪಕ್ಷಪಾತವಿರಲಿಲ್ಲ, ವ್ಯಕ್ತಿಪರವಾದ ಸ್ವಾರ್ಥನ್ಯಾಯಗಳಿರಲಿಲ್ಲ. ಈ ಕಾರಣದಿಂದ ಸರಕಾರದವರ ಮತ್ತು ಪ್ರಜೆಗಳ ಪ್ರೀತಿಗೂ ಮನ್ನಣೆಗೂ ಪಾಲರವರು ಪಾತ್ರರಾಗಿದ್ದರು.

ಕ್ರಿಸ್ತೋದಾಸಪಾಲರವರು ನಿಷ್ಕಳಂಕ 'ಸ್ವದೇಶಿ'ಗಳಾಗಿದ್ದರೆಂದು ಸರೋದ ಚರಣಮಿತ್ರರವರು ರುಜುಪಡಿಸಿರುವರು. ೧೮೭೪ನೇ ವರುಷದಲ್ಲಿ ವಿದೇಶಗಳಿಂದ ಈ ದೇಶಕ್ಕೆ ಆಮದಾಗುವ ವಸ್ತ್ರಗಳ ಮೇಲಿರುವ ಸುಂಕವನ್ನು ತಗ್ಗಿಸಿದಾಗ ಹಿಂದೂಸ್ಥಾನದಲ್ಲಿಯ ಅರಳೆ ಕೈಗಾರಿಕೆಗೆ ಈ ಸುಂಕವನ್ನು ಹೀಗೆ ತಗ್ಗಿಸಿದ್ದಲ್ಲಿ ಬಹಳ ಆಪತ್ತುಂಟಾಗುವುದೆಂತ ವಾದಿಸ್ತುವವರಾದರು. ಬ್ರಿಟಿಷರ ಆಳುವಿಕೆಯಿಂದ ಹಿಂದೂಸ್ಥಾನದ ವ್ಯಾಪಾರ ಅಭಿವೃದ್ಧಿಯಾಗಿರುವದೆಂಬುದನ್ನು ಕೃತಜ್ಞತೆಯಿಂದ ಒಪ್ಪಿಕೊಂಡು, ಈ ಅಭಿವೃದ್ಧಿಯು ಆಂಗ್ಲೇಯ [illegible]

ಮುಂದೆ ಸಾಗಿಸಲ್ಪಟ್ಟ ಆಂಗ್ಲೇಯ ವ್ಯಾಪಾರಿಗಳು ಬಿಡುವುದಿಲ್ಲವೆಂಬದಾಗಿಯೂ ಇಂತಹ ಕಾರ್ಯದಿಂದ ಭಾರತೀಯರಿಗೆ ನಷ್ಟ ಉಂಟಾಗುವುದೆಂಬದಾಗಿಯೂ ರೈಬಹದೂರರವರು ವಾದಿಸಿದ್ದರು. ಕ್ರಿಸ್ತೋದಾಸಪಾಲರವರು ದೀರ್ಘಕಾಲ ಬದುಕುತ್ತಿದ್ದರೆ ವಂಗವಿಭಜನೆಯು ಆಗಲಿಕ್ಕಿಲ್ಲವೆಂತ ಸರೋದ ರಣಮಿತ್ರರವರು ಅಭಿಪ್ರಾಯಪಡುವರು.

ಆಂಗ್ಲೋ ಇಂಡಿಯಾನ್ ಪತ್ರಗಳ ಕಡೆಯಿಂದ ಸ್ಟೇಟ್ಸ್‌ಮನ್ ಪತ್ರಿಕೆಯ ಪ್ರತಿನಿಧಿಗಳಾದ ಮೆ| ಹೊರ್ನಿಮೆನ್‌ರವರು ಪಾಲರವರ ವರ್ತನೆಯನ್ನೂ ಗುಣಾತಿಶಯಗಳನ್ನೂ ಹೊಗಳಿ ಇಡೀ ಭೂಲೋಕದಲ್ಲಿ ಇಷ್ಟರ ವರೆಗೆ ಪತ್ರಸಂಪಾದಕರ ಸ್ಮರಣಾರ್ಥವಾಗಿ ಪ್ರತಿಮೆಗಳು ಸ್ಥಾಪಿಸಲ್ಪಡಲಿಲ್ಲವೆಂಬದಾಗಿಯೂ, ಕ್ರಿಸ್ತೋದಾಸಪಾಲರವರಿಗೆ ಅವರ ಯೋಗ್ಯತಾನುಸಾರವಾಗಿ ಇಂದಾ ಅಪೂರ್ವ ಬಹುಮಾನವು ದೊರಕಿರುವುದಾಗಿಯೂ ಭಾಷಣ ಮಾಡಿದರು. ಸರಕಾರದ ಕಾರ್ಯಗಳನ್ನು ಪಾಲರಂತೆ ಟೀಕಿಸುವಂಥವರು ರಾಜನಿಷ್ಠೆಯುಳ್ಳವರು ಮಾತ್ರವಲ್ಲ, ಸರಕಾರದ ಸಹಕಾರಿಗಳಾಗಿರುವರೆಂದು ಹೇಳಿದರು. ನಂತರದಲ್ಲಿ ಮೆ| ಸಿನ್ಹೆ ಪ್ರಿಮರ್ಸ್‌ರವರು ನಾವೆಲ್ಲರೂ ಒಂದೇ ಜನ್ಮಸ್ಥಾನದ ಪ್ರಜೆಗಳಾಗಿರುವುದರಿಂದ ಗುಣದೋಷಗಳನ್ನು ತೋರಿಸುವಿಕೆ ಐಕ್ಯಮತದಿಂದಲೂ ಪರಸ್ಪರ ಪ್ರೀತಿಯಿಂದಲೂ ಇರಬೇಕೆಂದು ಸಕಲರನ್ನು ವಿಜ್ಞಾಪಿಸಿಕೊಂಡರು.

~~~~~~~~

ಹಿಂದುಸ್ಥಾನದಿಂದ ಬ್ರಿಟಿಷ್ ಸಾಮ್ರಾಜ್ಯಕ್ಕಿರುವ ವಿಶೇಷ ಪ್ರ

~~~~~~~~

ಕರ್ಜನ್ ಪ್ರಭುಗಳ ಲೇಖ

'ನೋರ್ತ್ ಅಮೇರಿಕನ್ ರಿವ್ಯೂ' ಎಂಬ ಪತ್ರದಲ್ಲಿ ಹಿಂದುಸ್ಥಾನದ ಮಾಜಿ ವೈಸ್‌ರಾಯಿಗಳಾದ ಕರ್ಜನ್ ಪ್ರಭುಗಳು ಪ್ರಕಟಿಸಿರುವ 'ಹಿಂದುಸ್ಥಾನದ ಬ್ರಿಟಿಷರ ಆಧಿಪತ್ಯ' ಎಂಬ ಲೇಖದ ಮೊದಲನೇ ಭಾಗದ ಕೆಲವಂಶಗಳ ಸಾರಾಂಶದಿಂದ ಹಿಂದುಸ್ಥಾನದಿಂದ ಬ್ರಿಟಿಷ್ ಸಾಮ್ರಾಜ್ಯಕ್ಕಿರುವ ಪ್ರಯೋಜನದ ಮಹಾ ವಿಶೇಷತ್ವವನ್ನು ವಾಚಕರು ತಿಳಕೊಳ್ಳಬಹುದು. ಬ್ರಿಟಿಷ್ ಆಧಿಪತ್ಯದ ಪ್ರಯೋಜನವು ಕೇವಲ ಬ್ರಿಟಿಷರಿಗಿರುವದೆಂಬ ಭಾವನೆಯು ಹಿಂದುಸ್ಥಾನದಲ್ಲಿರಬಹುದು. ಆದರೆ ಅಂಥಾ ಪ್ರಯೋಜನವು ಭಾರತೀಯರಿಗೆ ಹೆಚ್ಚಾಗಿರುವುದೆಂತ ಆಂಗ್ಲೇಯರು ಬಲ್ಲರು. ಈ ದೃಷ್ಟಿಯಿಂದ ಉಭಯ ದೇಶಗಳಿಗೂ ಹಿಂದುಸ್ಥಾನದ ಬ್ರಿಟಿಷ್ ಆಧಿಪತ್ಯದಿಂದ ಉಂಟಾಗುವ ಪ್ರಯೋಜನಗಳನ್ನು ತಿಳಿಯಪಡಿಸಲು ಉಭಯ ದೇಶಗಳ ಈ ವಿಷಯಗಳಲ್ಲಿ ಪಕ್ಷಪಾತವಿಲ್ಲದ ಅಭಿಪ್ರಾಯಗಳನ್ನು ಮಾಡಿಕೊಳ್ಳಬೇಕೆಂದು ನಿರೂಪಿಸಿ ತಮ್ಮ ಲೇಖವನ್ನು ಪ್ರಾರಂಭಿಸಿರುವರು.

"ಬ್ರಿಟಿಷ್ ದ್ವೀಪಗಳಿಗೂ ಬ್ರಿಟಿಷ್ ಸಾಮ್ರಾಜ್ಯದ ಇತರ ಪ್ರಾಂತ್ಯಗಳಿಗೂ ಹಿಂದುಸ್ಥಾನದಿಂದ ಏನೇನು ದೊರಕುವುದೆಂದು ಸಂಕ್ಷೇಪದಲ್ಲಿ ಹೇಳಲು ಪ್ರಯತ್ನಿಸುವೆನು. ರಾಜಕೀಯ ಮತ್ತು ಸಾಂಪತ್ತಿಕ ಪ್ರಯೋಜನಗಳು ಹಿಂದುಸ್ಥಾನದಿಂದ ಬ್ರಿಟಿಷ್ ಸಾಮ್ರಾಜ್ಯದ ಇತರ ಪ್ರಾಂತ್ಯಗಳಿಗೆ ಹೇರಳವಾಗಿ ದೊರಕುತ್ತಿರುವುದು ನನ್ನ ಮನವೊಚ್ಚುವ ಸಿದ್ಧಾಂತವಾಗಿರುವುದು. ಬೇರೆ ಬೇರೆ ಹವಾಗುಣಗಳುಳ್ಳ ಸಾಮ್ರಾಜ್ಯದ ಸ್ವಾಸ್ಥ್ಯಗಳನ್ನು ಆ ಪ್ರದೇಶಗಳಲ್ಲಿ ಹಿಂದುಸ್ಥಾನದ ಅಗಣಿತ ಜನರಾಶಿಯಿಂದ ಸಂಗ್ರಹಿಸಲ್ಪಟ್ಟ ಕೂಲಿಯಾಳುಗಳಿಂದ ಅಭಿವೃದ್ಧಿ ಪಡಿಸಲಾಗಿ ಮಾಡಲ್ಪಟ್ಟಿರುವವು. ಈ ಕೂಲಿಯಾಳುಗಳ ಇಂತಹ ಚಾಕರಿಯು ವಿಶೇಷತ್ವವುಳ್ಳದ್ದು. ಆದರಿಂದ ದೊರೆಯುವ ಪ್ರಯೋಜನದ ವಿಷಯ ಪೂರ್ಣ ವಿಚಾರವನ್ನು ಮಾಡಬೇಕಾಗಿರುವದು. ಗುಲಾಮತನದ ನೌಕರಿಯು ತೆಗೆದುಹಾಕಲ್ಪಟ್ಟ ಮೇಲೆ ಹಿಂದುಸ್ಥಾನದ ಕೂಲಿಯಾಳುಗಳ ಚಾಕರಿಯು ದೊರಿಯದಿರುತ್ತಿದ್ದರೆ 'ವೆಸ್ಟ್ ಇಂಡೀಸ್' ಎಂಬ ದ್ವೀಪಗಳಲ್ಲಿ ಹಲವು ದ್ವೀಪಗಳು ನಿರ್ಜನ ಪ್ರದೇಶಗಳಾಗಿ ಬಿಡಲ್ಪಟ್ಟು ಇತರ ಪ್ರಾಂತ್ಯಗಳ ಪಾಲಾಗುತ್ತಿದ್ದವು. ತ್ರಿನಿದಾದಿನಲ್ಲಿ 86000 ಜಮೈಕದಲ್ಲಿ 10000 ಹಿಂದುಸ್ಥಾನದ ಕೂಲಿಯಾಳುಗಳು ಕೆಲಸಮಾಡುತ್ತಿರುವರು. ಪನಮಾ ಕಾಲುವೆಯು ತೆರಿಯಲ್ಪಟ್ಟ ಮೇಲೆ ವೆಸ್ಟ್ ಇಂಡೀಸ್' ದ್ವೀಪಗಳು ಸಾಂಪತ್ತಿಕ ಅಭಿವೃದ್ಧಿಯಲ್ಲಿ ಇನ್ನಷ್ಟು ಹೆಚ್ಚಿ ಯುದ್ಧ ಕಾಲಗಳಲ್ಲಿ ಸಹಾ ಅಧಿಕ ಪ್ರಯೋಜನವನ್ನು ಕೊಟ್ಟು ಸಾಮ್ರಾಜ್ಯ ಸ್ವಾಸ್ಥ್ಯಗಳಲ್ಲಿ ಪ್ರಥಮ ತರಗತಿಯದ್ದಾಗುವವು. ಹಿಂದುಸ್ಥಾನದ ಕೂಲಿಯಾಳುಗಳ ಚಾಕರಿಯು ದೊರೆಯದಿದ್ದರೆ ಮೋರಿಸಿಯಸ್ ದ್ವೀಪವು ಬಹುಶಃ ಫ್ರೆಂಚರ ವಶವಾಗಿ ಹಿಂದುಸ್ಥಾನದಲ್ಲಿ ಬ್ರಿಟಿಷರ ಶ್ರೇಷ್ಠತ್ವವು ಅಪಾಯದಲ್ಲಿರುತ್ತಿತ್ತು. ಈಗ ಮೋರಿಸಿಯಸ್ ದ್ವೀಪದಲ್ಲಿ ೨೬೬೦೦೦ ಹಿಂದುಸ್ಥಾನದ ಕೂಲಿಯಾಳುಗಳಿರುವರು. ದಕ್ಷಿಣ ಅಮೇರಿಕದಲ್ಲಿ ನಮ್ಮ ವಸಾಹತಿಯಾದ 'ಬ್ರಿಟಿಷ ಗಿಯಾನಾ'ವನ್ನು ಭಾರತೀಯ ಕೂಲಿಯವರ ಸಾಹಸದಿಂದಲೇ ರೂಪಕ್ಕೆ ತಂದಿರುವೆವು. ಅಲ್ಲಿರುವ ೩೦೮,೦೦೦ ನಿವಾಸಿಗಳಲ್ಲಿ ೧೦೫,೦೦೦ ಜನರು ಭಾರತೀಯರಾಗಿರುವರು. ಇತರ ರಾಜ್ಯಗಳಿಗೆ ಸಹಾ ಭಾರತೀಯರನ್ನು ಕೂಲಿಕೆಲಸಕ್ಕೆ ಕೊಡುವರೆ ನಮಗೆ ಸಾಧ್ಯವಾಗಿರುವುದು. ಫ್ರೆಂಚರಿಗೆ ರೆಯುನಿಯನ್ ಎಂಬಲ್ಲಿಯೂ, ಡಚ್ಚರಿಗೆ ಡಚ್ಚ ಗಿಯಾನಾದಲ್ಲಿಯೂ ಭಾರತೀಯ ಕೂಲಿಯವರನ್ನು ಕೆಲಸದ ಬಗ್ಗೆ ಕೊಟ್ಟಿರುವೆವು. ಭಾರತೀಯ ಕೂಲಿಗಳು ಶಾಂತಸಾಗರದ ಅತಿ ದೂರ ಪ್ರಾಂತ್ಯಗಳಲ್ಲಿ ಸಹಾ ಇರುವರು; ಫಿಜಿದ್ವೀಪಗಳಲ್ಲಿ ೧೫,೦೦೦ ಭಾರತೀಯರಿರುವರು. ಹಿಂದುಸ್ಥಾನಕ್ಕೆ ಬಹಳ ಸಮೀಪವಿರುವ ಆಫ್ರಿಕ ಖಂಡವೆಂತೂ ಸ್ವಭಾವಿಕವಾಗಿ ಭಾರತೀಯ ಕೂಲಿಯಾಳುಗಳಿಗೆ ಕೆಲಸ ದೊರಕುವ ಪ್ರಾಂತ್ಯವಾಗಿರುವುದು. ನೇಟಾಲದಲ್ಲಿಯ ಪ್ಲಾಂಟರುಗಳು ಭಾರತೀಯ ಕೂಲಿಯಾಳುಗಳ ಚಾಕರಿಯಿಂದಲೇ ಆ ವಸಾಹತಿಯನ್ನು ಅಭಿವೃದ್ಧಿ ಸ್ಥಿತಿಗೆ ತಂದಿರುವರು. ಇಲ್ಲಿ ಭಾರತೀಯ ಜನಸಂಖ್ಯೆಯು ಯೂರೋಪಿಯ ನಿವಾಸಿಗಳಿಗಿಂತ ಹೆಚ್ಚಾಗಿದ್ದು ಪ್ರಕೃತ ೧೧೫೦೦೦ ಆಗಿರುವುದು. ಉಗಾಂಡದಲ್ಲಿಯ ರೈಲ್ವೆಮಾರ್ಗದ ಕೆಲಸವು ೨೦೦೦೦ ಭಾರತೀಯರಿಂದ ನೆರವೇರಿಸಲ್ಪಟ್ಟಿತು. ಹೀಗೆ ಆಯಾ ಪ್ರಾಂತ್ಯಗಳಲ್ಲಿರುವ ಕೆಲಸ ದೊರೆಯುವ ಸ್ಥಳಗಳಿಗೆ ೧೫೦೦೦ ದಿಂದ ೨೦೦೦೦ ಕೂಲಿಯಾಳುಗಳು ಪ್ರತಿ ವರುಷವೂ ಹಿಂದುಸ್ಥಾನದಿಂದ ಹೋಗುತ್ತಿರುವರು."

"ಹೀಗೆ ಭಾರತೀಯ ಕೂಲಿಯಾಳುಗಳಿಗೆ ಇತರ ಪ್ರಾಂತ್ಯಗಳಲ್ಲಿ ಕೆಲಸ ದೊರೆಯುವುದರಿಂದ ಪ್ರಯೋಜನವು ಕೆಲಸ ಕೊಡುವವರಿಗೂ ಮಾಡುವವರಿಗೂ ದೊರಕುವುದು. ಹಿಂದುಸ್ಥಾನದಲ್ಲಿ ಕೆಲಸವಿಲ್ಲದ ಅನೇಕ ಮಂದಿ ಬಡಬಗ್ಗರಿಗೆ ಕೆಲಸ ದೊರಕ ಬೇಕಾದ್ದು ಸಹಾ ಆವಶ್ಯಕವಾಗುವುದು. ಬೂರರ ಯುದ್ಧಕಾಲದಲ್ಲಿ ಬ್ರಿಟಿಷ ಆಫೀಸರರಿಂದಲೂ ಬ್ರಿಟಿಷ ಸೇನೆಯಿಂದಲೂ ೧೩,೨೦೦ ಫೌಜನ್ನು ದಕ್ಷಿಣ ಆಫ್ರಿಕಕ್ಕೆ ಹಿಂದುಸ್ಥಾನದಿಂದ ನಾನು ಕಳುಹಿಸಿಕೊಟ್ಟಿದ್ದೆನು. ಈ ಫೌಜಿನ ಹಿಂದುಗಾವಲಿನವರಾಗಿ [illegible]೦೦೦ ಹಿಂದೂ ದೇಶೀಯರನ್ನು ಸಹಾ ಕಳುಹಿಸಿದ್ದೆನು. ಚೀನಾ ದೇಶಕ್ಕೆ ಹಿಂದುಸ್ಥಾನದ ಸೈನ್ಯದಿಂದ ೧[illegible]೦೦ ಬ್ರಿಟಿಷ ಆಫೀಸರರನ್ನೂ ೨೦೦೦೦ ದೇಶೀಯರ ಫೌಜನ್ನೂ ಆ ಫೌಜಿನ ಹಿಂದೂಗಾವಲಿಗಾಗಿ ೧೭,೫೦೦ ದೇಶೀಯರನ್ನೂ ನಾವು ಕಳುಹಿಸಿದ್ದೆವು. ಈ ವೇತನ ಪಡೆಯುವ ಫೌಜು ದೂರದಲ್ಲಿರುವ ಸಾಮ್ರಾಜ್ಯ ಸಂರಕ್ಷಣೆಗಾಗಿ ಯುದ್ಧಮಾಡುವದರ [illegible] ವಿಶೇಷವಾಗಿ ಕಳುಹಿಸಲ್ಪಟ್ಟಿದ್ದಿತು. ಬ್ರಿಟಿಷ್ ಸಾಮ್ರಾಜ್ಯದ ಯಾವ ಪ್ರಾಂತ್ಯದಲ್ಲಿಯಾದರೂ ಯುದ್ಧವು ತಲೆದೋರಿದರೆ ಹಿಂದುಸ್ಥಾನದ ಅಧಿಕಾರಿಗಳು ತಮ್ಮ ಖರ್ಚಿನಿಂದಲೇ ತಮ್ಮ ಸೇನೆಯನ್ನು ಸಾಮ್ರಾಜ್ಯದ ಸಂರಕ್ಷಣೆಗಾಗಿ ಕಳುಹಿಸಿಕೊಡುವರು. ೧೮೯೯ರಲ್ಲಿ ನೇಟಾಲಕ್ಕೆ ಫೌಜು ತಕ್ಕ ಸಮಯಕ್ಕೆ ಬೂರರನ್ನು ಹಿಂದಕ್ಕೆ ಓಡಿಸುವದರಲ್ಲಿ ಬ್ರಿಟಿಷ ಆಫೀಸರರೊಂದಿಗೆ ದೇಶೀಯರ ಸಿಪಾಯಿಗಳನ್ನು ನಿಲ್ಲಿಸಿಕ್ಕೆ ವಿಸ್ತರದಿಂದ ಇಂಡಿಯಾ ಸರಕಾರದವರನ್ನು ಬೇಗವಾಗಿ ಹಿಂದುಸ್ಥಾನದಲ್ಲಿ ದೂರುವದೆ ಕಾರಣವಾಯಿತು. ಸಾಮ್ರಾಜ್ಯದ ಯುದ್ಧಗಳಲ್ಲಿ ದೇಶೀಯರ ಫೌಜು ಕಾದಾಡಬೇಕೆಂಬುವ ಆಸಕ್ತಿಯು ದೇಶೀಯರಲ್ಲಿ ಬಹಳ ಹೆಚ್ಚಾಗಿರುವದೆಂತ ಇದರಿಂದ ವ್ಯಕ್ತವಾಗುವುದು. ಬೂರರ ಮತ್ತು ಚೀನಿಯರ ಯುದ್ಧ ಸಮಯಗಳಲ್ಲಿ ಹಿಂದುಸ್ಥಾನದಲ್ಲಿ ನಾನಿದ್ದೆನು. ಹೆಚ್ಚು ಕಡಿಮೆ ೬೦,೦೦೦ ಫೌಜು ದೇಶದಿಂದ ಹೊರಪ್ರಾಂತ್ಯಗಳಿಗೆ ಕಳುಹಿಸಲ್ಪಟ್ಟಿತ್ತಾದರೂ ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಪೂರ್ಣಶಾಂತತೆ ಇತ್ತು. ಯುದ್ಧ ಪ್ರಾರಂಭದಲ್ಲಿ ನಾವು ಅಪಜಯಪಡೆದಾಗ ಬ್ರಿಟಿಷರ ರಾಜ್ಯದ ಕೆಲವರಲ್ಲಿ ಸಂತೋಷಕ್ಕೆ ಅವಕಾಶ ದೊರಕಿದರೂ ನಮ್ಮ ಜಯ ವಾರ್ತೆಯು ಕೊನೆಯಲ್ಲಿ ಕೇಳಿದೊಡನೆ ಪ್ರಜಾಜನಗಳೆಲ್ಲರಲ್ಲಿಯೂ ಅತ್ಯಾನಂದವು ತೋರಕೊಂಡಿತು."

ಕರ್ಜನ್ ಪ್ರಭುಗಳು ಸಾಮ್ರಾಜ್ಯದ ಇತರ ಪ್ರಾಂತ್ಯಗಳೊಡನೆ ಇರುವ ಭರತಖಂಡದ ವ್ಯಾಪಾರ ಸಂಬಂಧಗಳನ್ನು ವಿವರಿಸಿರುವರು. ಸಾಮ್ರಾಜ್ಯದ ಎಲ್ಲಾ ದೇಶಗಳಿಗಿಂತ ಹಿಂದುಸ್ಥಾನವು ಜನಸಂಖ್ಯೆಗೆ ಬೇಕಾದ ದವಸುಧಾನ್ಯಗಳನ್ನೂ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಸಾಮಾಗ್ರಿಗಳನ್ನೂ ಬೆಳಿಸುವುದರಲ್ಲಿ ಒಂದನೇದಾಗಿರುವುದು. ಹಿಂದುಸ್ಥಾನದಿಂದ ಬ್ರಿಟಿಷ್ ದ್ವೀಪಗಳಿಗೆ ದವಸುಧಾನ್ಯಗಳು ಕೆನೆಡಾ ದೇಶದಿಂದ ಬರುವ ರಫ್ತಾಗುವವುಗಳಿಗಿಂತ ಹೆಚ್ಚಾಗಿರುವವು, ಆಸ್ಟ್ರೇಲ್ಯದಿಂದ ರಫ್ತಾಗುವವುಗಳಿಂತ ಇಮ್ಮಡಿಯಾಗುವವು. ಬ್ರಿಟಿಷ್ ಕೈಗಾರಿಕೆ ಚಂಡಸಾಲೆಗಳಲ್ಲಿ ತಯ್ಯಾರಾಗುವ ಸಾಮಾನುಗಳಿಗೆ ಹೆಚ್ಚಾಗಿ ವಸ್ತ್ರಕ್ಕೆ ಹಿಂದುಸ್ಥಾನದಲ್ಲಿ ಗಿರಾಕಿ ದೊರಕುವುದು. ಹೀಗೆ ಬ್ರಿಟಿಷ್ ದ್ವೀಪಗಳಿಂದ ರಫ್ತಾಗುವ ವಸ್ತ್ರಕ್ಕೆ ಸೇಕಡಾ ೩|೦ ಸುಂಕವು ವಿಧಿಸಲ್ಪಟ್ಟಿದ್ದರೂ ಈ ಸುಂಕವು ಬ್ರಿಟಿಷ್ ಕೈಗಾರಿಕೆಗಳಿಗೆ ಹಾನಿಕರವಾಗದಂತೆ ಹಿಂದುಸ್ಥಾನದಲ್ಲಿ ಹತ್ತಿ ಕಾರಖಾನೆಗಳಲ್ಲಿ ತಯ್ಯಾರಾಗುವ ಸಾಮಾಗ್ರಿಗಳ ಮೇಲೆ ಸಹಾ ಸುಂಕವು ವಿಧಿಸಲ್ಪಡುತ್ತದೆ. ಈ ಎಲ್ಲಾ ಪ್ರಯೋಜನಗಳಿಗಿಂತ ಅತ್ಯಧಿಕವಾದ ಪ್ರಯೋಜನವು ಹಿಂದುಸ್ಥಾನದ ಸಿವಿಲ್ ಸರ್ವಿಸಿನವರ ಮುಖಾಂತರ ಬ್ರಿಟಿಷ್ ಜನಾಂಗಕ್ಕೆ ದೊರೆಯುತ್ತದೆಂದು ಕರ್ಜನ್ ಪ್ರಭುಗಳು ವಾದಿಸಿರುವರು. ಈ ಅತ್ಯಧಿಕವಾದ ಪ್ರಯೋಜನವು ಸಾಂಪತ್ತಿಕವಲ್ಲ. ಬ್ರಿಟಿಷ ಜನಾಂಗದಿಂದ ಚುನಾಯಿಸಲ್ಪಟ್ಟು ಹಿಂದುಸ್ಥಾನಕ್ಕೆ ಉದ್ಯೋಗಾರ್ಥರಾಗಿ ಕಳುಹಿಸಲ್ಪಡುವ ಆಂಗ್ಲೇಯರಲ್ಲಿ ತ್ಯಾಗಶೀಲತೆ, ಋಣಧರ್ಮ, ಆಡಳಿತೆ ನಡಿಸುವದಕ್ಕೆ ಬೇಕಾದ ಶಕ್ತಿ ಮೊದಲಾದ ಬ್ರಿಟಿಷ್ ಜನಾಂಗದ ಮಹಿಮಾ ಗುಣಗಳು ಅಭಿವೃದ್ಧಿಯಾಗತಕ್ಕ ಅವಕಾಶವೇ ಈ ಅತ್ಯಧಿಕ ಪ್ರಯೋಜನವಾಗಿರುವುದೆಂದು ಕರ್ಜನ್ ಪ್ರಭುಗಳವರು ನಿರೂಪಿಸಿರುವರು.

~~~~~~~~

ಎಂಭತ್ತು ಸಾವಿರ ರೂಪಾಯಿ ವಜ್ರವು.

ಮದ್ರಾಸಿನಲ್ಲಿ ಸಾಹುಕಾರ್ ಪೇಟೆಯು ಲಕ್ಷ್ಮಿಗೆ ವಾಸಸ್ಥಳವು. ಸೂರ್ಯೋದಯ ಮೊದಲು ರಾತ್ರಿ 12 ಘಂಟೆಯ ವರೆಗೆ ಆ ಬೀದಿಯಲ್ಲಿ ಮನೆ ಮನೆಯಲ್ಲಿ ಲಕ್ಷ್ಮಿಯು ತಾಂಡವಾಡುತ್ತಿರುವಳು. ಅಲ್ಲಿ ಧನವಂತರಾದ ವೈಶ್ಯರೂ, ಗುಜರಾತಿಯವರೂ, ಮಾರ್ವಾಡಿಯವರೂ ಇವರಂತೆ ಧರ್ಮಿಯಾಗಿ, ವ್ಯಾಪಾರಕ್ಕೆ ಕಾಲುವಿನ ಯೊಂದು ಹೋಗದು [illegible] ಕೆಂಪು ಮೊದಲಾದವನ್ನು ನೇರಿನಿಂದ ಆಳೆಯುತ
~~~~~~~~

[illegible] ಬಂಗಾರದ ನಾಣ್ಯಗಳು ಘರ್ಷಿಸುವಾಗಲೂ "ಘಲ್ ಘಲ್" ಎಂಬದಾಗಿ ಶಬ್ದವಾಗುತ್ತಿರುವುದನ್ನು ಬೇರೆ ಹೇಳಬೇಕೇ?

ಒಂದು ದಿನ ಸಾಯಂಕಾಲ 8 ಘಂಟೆ ವೇಳೆ "ಧನಪಾಲಶೆಟ್ಟಿ" ಎಂಬ ಸಾಹುಕಾರನ 4 ಅಂತಸ್ತುಳ್ಳ ಅಂಗಡಿಯ ಮುಂದೆ ಎರಡು ಕುದುರೆಗಳು ಕಟ್ಟಿದ್ದ ಒಂದು ಗಾಡಿಯು ನಿಂತಿತು. ಆ ಬಂಡಿಯಲ್ಲಿ ಒಬ್ಬ ಯುವಕನೂ ಆತನ ಹೆಂಡತಿಯೂ ಕುಳಿತಿದ್ದರು. ಅವರೆದುರಿಗೆ 5–6 ತಿಂಗಳ ಮಗುವನ್ನು ಎತ್ತಿಕೊಂಡು ಒಬ್ಬ ದಾದಿಯು ಕೂತುಕೊಂಡಿದ್ದಳು. ಬಂಡಿಯ ಹಿಂಭಾಗದಲ್ಲಿ ಚಿತ್ರವಾದ ಉಡುಪುಗಳನ್ನು ಧರಿಸಿದ್ದ ಇಬ್ಬರು ಕುದುರೆಯವರು ನಿಂತಿದ್ದರು. ಬಂಡಿಯ ಮುಂಭಾಗದಲ್ಲಿ ಎತ್ತರವಾದ ಆಸನದ ಮೇಲೆ "ಕೋಚ್‌ಮ್ಯಾನ್" ಎಂದರೆ ಗಾಡಿ ಹೊಡೆಯುವವನು, ಅವನ ಪಕ್ಕದಲ್ಲಿ ಮತ್ತೊಬ್ಬ ಸೇವಕನು ಕುಳಿತಿದ್ದರು. ಬಂಡಿಯು ಬಂದು ನಿಂತಕೂಡಲೆ ಹಿಂದೆ ನಿಂತಿದ್ದ ಕುದುರೆಯವರು ಇಳಿದು ಮುಂದಕ್ಕೆ ಬಂದು ಕುದುರೆಯನ್ನು ಹಿಡಿದು ಗಾಡಿಯನ್ನು ನಿಲ್ಲಿಸಿದರು. ಮುಂಭಾಗದಲ್ಲಿ ಕುಳಿತಿದ್ದವನು ಎದ್ದು ಬಂದು, ಯಜಮಾನನ ಹತ್ತಿರಕ್ಕೆ ಬರಲು, ಆತನು ತನ್ನ ಜೇಬಿನಲ್ಲಿ ತನ್ನ ಹೆಸರಿನಲ್ಲಿದ್ದ ವಿಜಿಟಿಂಗ್ ಕಾರ್ಡನ್ನು ಅವನ ಕೈಯಲ್ಲಿ ಕೊಟ್ಟನು. ಕೂಡಲೆ ಅವನು ಅಂಗಡಿಯ ಬಾಗಿಲಲ್ಲಿ ಕುಳಿತಿದ್ದ ಸೇವಕನಿಗೆ ಕಾರ್ಡನ್ನು ಕೊಟ್ಟು ನಿನ್ನ ಯಜಮಾನನಿಗೆ ಈ ಕಾರ್ಡನ್ನು ತೋರಿಸೆಂದು ಹೇಳಿ ಕಳುಹಿಸಿದನು. ಸಾಹುಕಾರನು ಕಾರ್ಡನ್ನು ನೋಡಿ "ರಾಜಾ ಆಫ್ ಸನಾರ್ಪುರ್" ಎಂದು ಓದಿಕೊಂಡು, ಕೂಡಲೆ ಬಂಡಿಯ ಸಮೀಪಕ್ಕೆ ಬಂದನು. ಈ ವರ್ತಕನು ರತ್ನ ವ್ಯಾಪಾರಿಯೆಂದು ಖ್ಯಾತಿಯನ್ನು ಪಡೆದಿದ್ದನು. ವಜ್ರ ವೈಡೂರ್ಯ ಕೆಂಪು, ಪಚ್ಚೆ ಮೊದಲಾದ ವ್ಯಾಪಾರವನ್ನು ಹೇರಳವಾಗಿ ಮಾಡುತ್ತಿದ್ದನು. ಪುಷ್ಯರಾಗ, ಚಿನ್ನ, ಬೆಳ್ಳಿ ಮೊದಲಾದ ಕಡಿಮೆ ಬೆಲೆಯುಳ್ಳ ಸಾಮಾನುಗಳನ್ನು ಮುಟ್ಟನು. ಆತನಲ್ಲಿರುವ ಒಡವೆಗಳು ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕದ್ದಾಗಿದ್ದವು. ಅನೇಕ ರಾಜರು ಈತನಲ್ಲಿ ಒಡವೆಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಅವರಿಗೆ ತಕ್ಕಂತೆ ಮರ್ಯಾದೆ ಮಾಡಿ, ಹೆಚ್ಚಾಗಿ ತನ್ನಲ್ಲಿರುವ ಒಡವೆಗಳನ್ನು ತೆಗೆದುಕೊಳ್ಳುವಂತೆ ಪ್ರೇರೇಪಿಸುತ್ತಿದ್ದನು. ಆದ್ದರಿಂದಲೆ ಒಬ್ಬಾನೊಬ್ಬ ರಾಜನು ಬಂದನೆಂದು ತಿಳಿದ ಕೂಡಲೆ ಎದ್ದು ಹೋದನು. ಗಾಡಿಯ ಸಮೀಪಕ್ಕೆ ಬಂದ ಕೂಡಲೆ, ಸಮೀಪದಲ್ಲಿದ್ದ ಸೇವಕನು ಬಾಗಿಲನ್ನು ತೆಗೆದನು. ಜಮೀನ್‌ದಾರನು ಕೂಡಲೆ ಕೆಳಗಿಳಿದು ಸಾಹುಕಾರನಿಗೆ "ಷೇಕ್‌ಹ್ಯಾಂಡ್" ಕೊಟ್ಟು "ಧನಪಾಲಶೆಟ್ಟರು ನೀವೇನೆ?" ಎಂದನು.

ಸಾಹು:—ಹೌದು ಸ್ವಾಮಿಯವರೆ! ಜಮೀ—ನಿಮ್ಮ ದರ್ಶನವನ್ನು ಬಹಳ ಸಮಯದಿಂದಲೂ ಅಪೇಕ್ಷಿಸುತ್ತಿದ್ದೆ, ಈಗ ಲಭ್ಯವಾಯಿತು. ಕುಬೇರನ ತರುವಾಯ ತಾವೇ ಕುಬೇರನೆಂದು ತಿಳಿದಿರುವೆನು" ಎಂದನು.

"ತಮ್ಮಂತಹ ರಾಜಾಧಿರಾಜರ ಅನುಗ್ರಹವಿರುವ ನಾನು ಕುಬೇರನೇ! ಒಳಗೆ ದಯಮಾಡಿಸಬೇಕು" ಎಂದು ಬರಮಾಡಿಕೊಂಡು ಒಳಕ್ಕೆ ಹೋದರು. ಅವರ ಹಿಂದೆ ಜಮೀನ್‌ದಾರನ ಹೆಂಡತಿಯೂ ಮಗುವನ್ನೆತ್ತಿಕೊಂಡಿದ್ದ ದಾಸಿಯು ಒಳಗೆ ಹೋದರು. ಸಾಧಾರಣವಾಗಿ ಜಮೀನ್‌ದಾರರ ಹೆಂಗಸರಿಗೆ ಘೋಷಾ ಪದ್ಧತಿಯು ಇದ್ದರೂ, ಈತನು "ಇಂಗ್ಲಿಷ್‌ಫ್ಯಾಷನ್" ಆದ್ದರಿಂದ ಅದಕ್ಕೆ ಅವಕಾಶವಿಲ್ಲವೆಂದು ತೋರುತ್ತಿತ್ತು. ಆಕೆಯ ಮೈಮೇಲೆ ಬಹಳ ಬೆಲೆಯುಳ್ಳ ಆಭರಣಗಳಿದ್ದವು. ಮಗುವಿನ ಮೈಮೇಲೂ ಹೆಚ್ಚು ಆಭರಣಗಳನ್ನು ಅಲಂಕಾರ ಮಾಡಿದ್ದರು. ಮಗುವಿನ ಮೈಮೇಲಿರುವ ಆಭರಣಗಳು ಇವರ ಶ್ರೀಮಂತ ಲಕ್ಷಣವನ್ನು ತೋರಿಸುತ್ತಿತ್ತು.

ಅವರೆಲ್ಲರೂ ಒಳಕ್ಕೆ ಬಂದ ತರುವಾಯ ಸಾಹುಕಾರನು ರಾಜಠೀವಿಯಿಂದ ಸಿಂಗರಿಸಿದ್ದ ಬೆಲೆಯುಳ್ಳ ಕುರ್ಚಿಗಳಿಂದಲೂ, ಪಟಗಳಿಂದಲೂ ಸೋಫಾಗಳಿಂದಲೂ ಅಲಂಕರಿಸಲ್ಪಟ್ಟಿದ್ದ 'ಹೋಲಿ'ನೊಳಗೆ ಕರೆದುಕೊಂಡು ಹೋಗಿ, ಜಮೀನ್‌ದಾರನನ್ನು ಒಂದು ಕುರ್ಚಿಯ ಮೇಲೆ ಕುಳ್ಳಿರಿಸಿದನು. ಆತನ ಹೆಂಡತಿಗೆ ಸ್ವಲ್ಪ ದೂರದಲ್ಲಿದ್ದ ಒಂದು ಸ್ಥಳವನ್ನು ಕೂತುಕೊಳ್ಳುವುದಕ್ಕೆ ತೋರಿಸಿದನು. ತಾನು ಜಮೀನ್‌ದಾರನೆದುರಿಗೆ ಕುರ್ಚಿಯನ್ನು ಹಾಕಿಸಿಕೊಂಡನು. ಅವರ [illegible] ಸಂಭಾಷಣೆಯು ಈ ರೀತಿಯಾಗಿತ್ತು.

ಧನ:—ಅಯ್ಯಾ! ತಾವು ನಮ್ಮ ಮನೆಗೆ ದಯಮಾಡಿಸಿದ್ದು ನನ್ನ ಸುಕೃತ ವಿಶೇಷವು. ತಮ್ಮ ರಾಜಧಾನಿ ಯಾವ ಜಿಲ್ಲೆಯಲ್ಲಿರುವುದು?

ಜಮೀ:—ನಮ್ಮ ಸಂಸ್ಥಾನ ಗೋದಾವರಿ ಜಿಲ್ಲೆಯಲ್ಲಿರುವುದು. ಹೆಚ್ಚು ಗೌರವವುಳ್ಳ ಸಂಸ್ಥಾನ. ಇತರ ಜಮೀನ್‌ದಾರರಿಗಿಲ್ಲದ ಅನೇಕ ಮರ್ಯಾದೆಯು ನನಗಿರುವುದು. ಬೆಳ್ಳಿ ಕುರ್ಚಿಗಳ ಮೇಲೆ ನಾವು ಕುಳಿತುಕೊಳ್ಳುವೆವು. ಆದರೆ ಇಂಗ್ಲಿಷ್ ಎಜ್ಯುಕೇಟೆಡ್-ಜಂಟಲ್‌ಮೆನ್ (ಇಂಗ್ಲಿಷ್ ಕಲಿತವನು) ಆದ್ದರಿಂದ ನಮ್ಮ ಹಳೆ ಆಚಾರಗಳು ನನಗೆ ಸರಿಬೀಳದು. "ಟಟ್‌ನಾನ್ ಸೆನ್ಸ್" ಎಂದು ನಮ್ಮ ಹೆಂಗಸರಿಗೆ ಘೋಷಾ ಪದ್ಧತಿಯನ್ನು ತೆಗೆದುಹಾಕಿಸಿದೆನು. ಹಾಗೆ ತೆಗೆದುಹಾಕಿದ ಮೇಲೆ [illegible] ತಿಳಿದು, ನಮ್ಮವರು ಗಂಡಸರ ಜತೆಯಲ್ಲಿ ಕುಳಿತುಕೊಳ್ಳದೆ [illegible] ಕುಳಿತುಕೊಳ್ಳುವರು. ನಮ್ಮ ಆದಾಯವು [illegible] ಲಕ್ಷ [illegible] ಸಂಗತಿ [illegible] ನನ್ನ [illegible] ಜಮೀನ್‌ದಾರರು ನಿಮ್ಮಲ್ಲಿ [illegible]

[illegible] ತೆಗೆದುಕೊಂಡು ಹೋಗಿದ್ದನ್ನು [illegible] ಬಾಲ್ಯದಿಂದಲೂ ನಾವು ಅಣ್ಣತಮ್ಮಂದಿರಂತಿರುತ್ತೇವೆ.

ಧನ:—ಸೋಮಪುರದ ಜಮೀನ್‌ದಾರರಲ್ಲವೆ?

ಜ:—ಅಹುದು.

ಧನ:—ಆ ಜಮೀನ್‌ದಾರರಿಗೆ ನನ್ನಲ್ಲಿಯು ಹೆಚ್ಚಾದ ಪ್ರೀತಿಯು. ಈ ಸಂವತ್ಸರದಲ್ಲಿ ಹೆಚ್ಚು ಕಡಿಮೆ ಹತ್ತುಲಕ್ಷ ಜವಾಹಿರಿಗಳನ್ನು ಕೊಂಡು ಇರುವರು.

ಜ:—ವಜ್ರಗಳೆಂದರೆ ನಿಮ್ಮಲ್ಲಿರುವ ವಜ್ರವೇ ವಜ್ರ. ಎಷ್ಟು ಕಾಂತಿ! ಇದುವರೆಗೆ ಎಷ್ಟೋ ವಜ್ರಗಳನ್ನು ಕೊಂಡಿದ್ದೇನೆ, ನಿಮ್ಮಲ್ಲಿರುವುದಕ್ಕೆ ಎಣೆಯಾಗದು. ನಿಮ್ಮಲ್ಲಿ ಇನ್ನು ಅಂದ ವಜ್ರಗಳಿವೆಯೇ?

ಧನ:—ಎಷ್ಟು ಬೇಕಾದರೂ ಇವೆ, ಕೊಳ್ಳುವರಿದ್ದರೆ ವಜ್ರಗಳಿಗೇನು ಕಡಿಮೆ! ತರಿಸಲೆ?

ಜ:—ತರಿಸ ಬಹುದು.

ಧನಪಾಲಶೆಟ್ಟಿಯು ಎದ್ದು ಒಳಕ್ಕೆ ಹೋಗಿ ಸೇವಕನಿಂದ ದೊಡ್ಡ ಪೆಟ್ಟಿಗೆಯನ್ನು ಹೊರಿಸಿಕೊಂಡು ಬಂದು ಜಮೀನ್‌ದಾರನ ಮುಂದಿಟ್ಟನು. ಪೆಟ್ಟಿಗೆಯನ್ನು ತೆರೆದು ಅದರಲ್ಲಿ ಒಂದೊಂದಾಗಿ ಭರಣಿಯನ್ನು ತೆಗೆದು, ತೋರಿಸುತ್ತಾ ಬಂದನು. ಜಮೀನ್‌ದಾರನು ಇದು ಚೆನ್ನಾಗಿದೆಯೆಂದೂ ಇದು ಚೆನ್ನಾಗಿಲ್ಲವೆಂದೂ ಹೇಳುತ್ತಾ "ನೀವು ಸತ್ಯಸಂಧರು. ಸರಿಯಾದ ಬೆಲೆಯನ್ನು ಹೇಳುವರೆಂದು ನಮ್ಮ ಮಿತ್ರರು ತಿಳಿಸಿದ್ದಾರೆ. ಆದ್ದರಿಂದಲೇ ನಾನು ಬಂದದ್ದು. ಸರಿಯಾದ ಬೆಲೆಯನ್ನು ಹೇಳಬೇಕು" ಎಂದು ಮಧ್ಯದಲ್ಲಿ ಹೇಳುತ್ತಾ, ತನಗೆ ಚೆನ್ನಾಗಿದೆಯೆಂದು ತೋರಿದ ವಜ್ರವನ್ನು ತನ್ನ ಹೆಂಡತಿಗೆ ತೋರಿಸಿ ತರುತ್ತಾ, ಈ ರೀತಿಯಾಗಿ ಒಂದು ಗಂಟೆಯವರೆಗೂ ಪರೀಕ್ಷಿಸಿದನು. ಕೊನೆಗೆ ಹತ್ತು ಸಾವಿರ ರೂಪಾಯಿ ಬೆಲೆಬಾಳುವ ವಜ್ರವನ್ನು ವ್ಯಾಪಾರಮಾಡಿ ಅದನ್ನು ಬೇರೆ ತೆಗೆಸಿಟ್ಟನು. ವರ್ತಕನು ಬೆಲೆಯನ್ನು ಹೆಚ್ಚಾಗಿ ಹೇಳುತ್ತಿದ್ದರೂ ನಮ್ಮ ಜಮೀನ್‌ದಾರನು ಅದರ ಬೆಲೆಯನ್ನು ಚೆನ್ನಾಗಿ ತಿಳಿದವನಾದ್ದರಿಂದ ಹೇಳಿದ ಬೆಲೆಗೆ ಕೊಳ್ಳಲಿಲ್ಲ. ಸಾಹುಕಾರನು ಜಮೀನ್‌ದಾರನ ರತ್ನ ಪರೀಕ್ಷೆಗೆ ಆಶ್ಚರ್ಯಪಡುತ್ತ ಮಧ್ಯೆ ಅವನನ್ನು ಹೊಗಳುತ್ತಿದ್ದನು.

ಹೀಗೆ ಖರೀದಿಯಿಂದ ವಜ್ರವನ್ನು ಚಿಕ್ಕ ಗಂಟಾಗಿ ಕಟ್ಟಿ, ಜಮೀನ್‌ದಾರನು ತನ್ನ "ಮನಿಬಾಕ್ಸ್" (ಹಣದ ಚೀಲ)ನಲ್ಲಿ ಇಟ್ಟುಕೊಂಡನು.

ಜಮೀನ್:—ಸಾಹುಕಾರರೇ! ನನಗೆ ಸಾಲವೆಂದರೆ ಮೈಯುರಿ. ನಾನು ಕೊಳ್ಳುವುದು ಕೊಂಡ ಪದಾರ್ಥಕ್ಕೆ ಕೂಡಲೆ ಬೆಲೆಯನ್ನು ಕೊಡಬೇಕೆಂದೆ ನನ್ನ ಅಭಿಪ್ರಾಯ. ಆದರೆ ನಾವು ಮನೆಯಿಂದ ಹೊರಟಾಗ ಇಲ್ಲಿಗೆ ಬರಬೇಕೆಂಬ ತಾತ್ಪರ್ಯವಿರಲಿಲ್ಲ. ನಾಳೆ ದಿವಸ ಬರಬೇಕೆಂದು ಯೋಚಿಸಿದ್ದೆವು. ಮತ್ತೊಂದು ದಾರಿಗೆ ಹೋಗುತ್ತಿರುವಾಗ ತಮ್ಮ ಅಂಗಡಿ ಇದೇ ಎಂದು ನಮ್ಮ ಬಂಡಿಯಾಳು ಹೇಳಿದನು. ನಂತರ ತಮ್ಮನ್ನು ನೋಡಬೇಕೆಂದು ಬಂದೆವು. ಬರುವುದು ಗೊತ್ತಿಲ್ಲವಾದುದರಿಂದ ಹಣದ ಚೀಲವನ್ನು ತರಲಿಲ್ಲ. ನಮ್ಮವರು, ನಾನು ಬಂದು ಹಣವನ್ನು ತಂದು ಕೊಡುವವರೆಗೂ ಇಲ್ಲಿಯೇ ಇರುವರು.

ಧನ:—ಆಗಬಹುದು. ತಾವು ಮನೆಗೆ ಹೋಗಿ ತೆಗೆದುಕೊಂಡು ಬರಬಹುದು.

ಜ:—ಹಾಗಾದರೆ ಹೋಗಿ ತರುವೆನು.

ಹೀಗೆಂದು ಹೇಳಿದ ತರುವಾಯ ತನ್ನ ಹೆಂಡತಿಗೆ ತಾನು ಇಲ್ಲಿಗೆ ಬರುವವರೆಗೂ ಇಲ್ಲಿಯೇ ಇರಬೇಕೆಂದು ಹೇಳಿ ಗಾಡಿಯ ಮೇಲೆ ಕುಳಿತುಕೊಂಡು ಹೊರಟುಹೋದನು. ಜಮೀನ್‌ದಾರನು ತನ್ನ ಮನೆಯಲ್ಲಿ ಪತ್ನಿ ಪುತ್ರರನ್ನು ಬಿಟ್ಟು ಹೋಗುವುದಕ್ಕೆ ಒಂದು ಕಾರಣವನ್ನು ಹೇಳಿದರೂ ಸಾಹುಕಾರನು ಆ ಕಾರಣವನ್ನು ನಂಬಿ ಆತನು ಹೆಚ್ಚು ಮರ್ಯಾದೆಯುಳ್ಳವನಾದ್ದರಿಂದ ತನ್ನ ನಂಬಿಕೆಗಾಗಿ ಈ ರೀತಿ ಮಾಡಿರುವನೆಂದು ಊಹಿಸಿ, ಆತನ ಯುಕ್ತಿಗೂ ಮರ್ಯಾದೆಗೂ ಸಂತೋಷಿಸಿದನು.

ಜಮೀನ್‌ದಾರನು ಹೊರಟು ಅರ್ಧ ಗಂಟೆಯಾದ ಮೇಲೆ, ಆತನ ಸೇವಕನು ಜಾಗ್ರತೆಯಾಗಿ ಬಂದು, "ಅಮ್ಮಾ! ಖಜಾನೆಯ ಬೀಗದ ಗೊಂಚಲು ನಿಮ್ಮಲ್ಲಿದೆಯಂತೆ! ಯಜಮಾನರು ಮರೆತು ಮನೆಗೆ ಹೋದರು. ಸಾಹುಕಾರನಿಗೆ ಜಾಗ್ರತೆಯಾಗಿ ಹಣಕೊಡಬೇಕು. ಕೂಡಲೆ ತರಬೇಕೆಂದು ನನ್ನನ್ನು ಕಳುಹಿಸಿದ್ದಾರೆ ಕೊಡಿ!" ಎಂದನು. ಆಕೆಯು ಬೀಗದ ಕೈಗೊಂಚಲನ್ನು ಕೊಟ್ಟು, ಕಳುಹಿಸಿದಳು. ಅವನು ಹತ್ತು ಮಾರು ದೂರ ನಡೆದ ಕೂಡಲೇ ಅವನನ್ನು ಪುನಃ ಕರೆಸಿ, "ಗೊಂಚಲನ್ನು ಕೊಡು" ಎಂದು ತೆಗೆದುಕೊಂಡಳು, "ಕಾಲವು ಯಾರನ್ನೂ ನಂಬಲೀಸದು. ಲಕ್ಷಾಂತರ ರೂಪಾಯುಳ್ಳ ಖಜಾನೆಯ ಬೀಗದ ಕೈಯನ್ನು ಕಳುಹಿಸಲು ಇವನೇನು ಮಾಡುವನೋ? ಹಣವನ್ನು ಕಂಡರೆ ಎಂಥವರಿಗೂ ದುರ್ಬುದ್ಧಿ ಹುಟ್ಟದೆ ಇರುವದಿಲ್ಲ! ಸಾಹುಕಾರರೇ! ಈ ಮಾತು ನಿಜವೇ? ಎಂದು ಕೇಳಿದಳು. ಆತನು ನಿಜ! ನಿಜ!! ದುಡ್ಡಿನ ವಿಚಾರದಲ್ಲಿ ಬಹಳ ಜಾಗ್ರತೆ ಇರಬೇಕು" ಎಂದು ಗಂಭೀರ ವಾಕ್ಯದಿಂದ ನುಡಿದನು. "ಹಾಗಾದರೆ ನಾನೇ ಬೀಗದ ಕೈಗಳನ್ನು ತೆಗೆದುಕೊಂಡು ಹೋಗಿ, ನಿಮ್ಮ ಹಣವನ್ನು ತೆಗೆದುಕೊಂಡು [illegible] ಬರುವೆನು. ಮಗುವು ಹಾಲಿಗೆ ಅಳುವುದು. ಅದನ್ನು [illegible] ಹೋಗುತ್ತೇನೆ" ಎಂದು [illegible] "[illegible]!" ಎಂದು [illegible]

...ದಾಸಿಯು ಹೆಸರು ಸೀತೆ. ಯಜಮಾನಿಯ ಅಪ್ಪಣೆ ಕೊಡಲೇ ಮಗುವನ್ನೆತ್ತಿಕೊಂಡು ಹತ್ತಿರಕ್ಕೆ ಬಂದಳು. ಮಗುವಿನ ಶರೀರವೆಲ್ಲವೂ ಆಭರಣಗಳಿಂದ ಅಲಂಕೃತವಾಗಿದ್ದಿತು. ಮುಖದ ಮೇಲೆ ವಜ್ರದ ಪದಕವನ್ನು ಜೋಲಾಡುವಂತೆ ಹಾಕಿ, ಮುಸುಕು ಹಾಕಿದ್ದರು. ಮಗುವನ್ನು ಕರೆದುಕೊಂಡು ಬಂದ ಕೂಡಲೆ, ಎದೆ ಹಾಲನ್ನು ಕೊಟ್ಟು ಒಂದು ಚಿಕ್ಕ ಹಾಸಿಗೆಯಲ್ಲಿ ಮಲಗಿಸಿದಳು. ತನ್ನ ಮೇಲಿದ್ದ ಎಂಬತ್ತು ಸಾವಿರ ರೂಪಾಯಿ ನಗಗಳನ್ನು ಮಗುವಿನ ಪಕ್ಕದಲ್ಲಿಟ್ಟು, "ನಿಮ್ಮ ನಂಬಿಕೆಗೋಸ್ಕರ ಈ ನಗಗಳನ್ನು ಇಲ್ಲಿಟ್ಟಿರುವೆನು!" ಎಂದು ಸಾಹುಕಾರನ ಸಂಗಡ ಹೇಳಿದಳು. ಆತನು ನಕ್ಕು "ಕೋಟಿ ಬಾಳುವ ನಿಮ್ಮ ಕುಮಾರನನ್ನು ಇಲ್ಲಿ ಬಿಟ್ಟು ಹೋಗುವಾಗ್ಯೆ ಬೇರೆ ನಗಗಳನ್ನಿಡಬೇಕೇ? ಒಬ್ಬರಲ್ಲಿ ಒಬ್ಬರಿಗೆ ನಂಬಿಕೆ ಇಲ್ಲದಿದ್ದರೆ ನಡೆಯುವುದು ಹೇಗೆ? ನೀವು ಹೊರಡುವುದಕ್ಕೆ ನಮ್ಮ ಬಂಡಿಯನ್ನು ತರಿಸಲೇ?" ಎಂದು ಕೇಳಿದನು. ಆಗ ಅಲ್ಲಿದ್ದ ಸೇವಕನು "ನಾನು ಬೀಗದ ಕೈಗಳನ್ನು ತರಲಿಕ್ಕೆ ಬಂದಾಗ್ಯೆ ಜಾಗ್ರತೆಯಾಗಿ ಗಾಡಿಯಲ್ಲಿ ಬಂದನು. ಅದು ಸಿದ್ಧವಾಗಿರುವುದು—" ಸೇವಕನೂ, ನಂತರ ಯಜಮಾನಿಯೂ ಇಬ್ಬರೂ ಗಾಡಿಯಲ್ಲಿ ಕುಳಿತುಕೊಂಡು ಹೊರಟುಹೋದರು.

ಯಜಮಾನಿಯು ಹೊರಟ ಸ್ವಲ್ಪ ಹೊತ್ತಿನ ಮೇಲೆ ಆ ದಾಸಿಯು ಸಾಹುಕಾರನಲ್ಲಿಗೆ ಬಂದು 'ಅಯ್ಯೋ! ಬಡವಳಾದ ನನ್ನನ್ನು ಮರೆಯಬೇಡಿ. ನನ್ನ ಮೊರೆಗಳು ನಿಮ್ಮಲ್ಲಿ [illegible] ಕೇಳುತ್ತಿರುವರು! [illegible] ದಾಗ ನನಗೆ ಇನಾಮು ಕೊಡುವುದಿಲ್ಲವೇ? [illegible] ಹೇಳಿ ಇನ್ನೂ [illegible] ಗಳನ್ನು ತೆಗೆದುಕೊಳ್ಳುವಂತೆ ಮಾತನಾಡುತ್ತೇನೆ" ಎಂದು [illegible] ಮಾತನಾಡುತ್ತಾ, ಯಾರಿಗೂ ಕಾಣದ [illegible] 1 ರೂಪಾಯಿಯನ್ನು [illegible] ರೂಪಾಯಿ ಕೈಗೆ ಬಂದೊಡನೆಯೇ "ಅಯ್ಯಾ! ನಾವು ಚಿಕ್ಕವರು, ಬಡವರು, ಸಾರಾಯಿ [illegible] ಕುಡಿಯದೆ ಇರುವದಿಲ್ಲ. ನಮ್ಮ ಯಜಮಾನಿ, ಯಜಮಾನ ಇವರಿಬ್ಬರಿಗೂ ಇದನ್ನು ಕಂಡರಾಗದು. ತಿಂಗಳಿಂದ ಇಲ್ಲ! ಸಾಯುತ್ತಿದ್ದೇನೆ" ಅವರು [illegible] ನೀವು ದಯೆಯಿಟ್ಟು ಕೊಟ್ಟ 1 ರೂಪಾಯಿನಲ್ಲಿ 1 ಆಣೆ ಸಾರಾಯಿಯನ್ನು ಕುಡಿದು [illegible] ಆದು ವರೆಗ ಚಿಕ್ಕ ಯಜಮಾನನನ್ನು [illegible] ಸಿದ್ರೆಯ [illegible]" ಎಂದು ಹೇಳಿ ಸಾರಾಯಿಯಂಗಡಿಗೆ ಹೊರಟು ಹೋದಳು.

ಸಾಹುಕಾರನು [illegible] ಆ ದಿನ [illegible] ಯಜಮಾನನು ಬರುವದನ್ನು ಎದುರು ನೋಡುತ್ತಿದ್ದನು. "10 ಘಂಟೆ ಆಯಿತು" 12 ಘಂಟೆ ಸಮಯದಲ್ಲಿ "ಘಂ! ಘಂ!" ಎಂಬ [illegible] ಕೇಳಿಸಿತು. ಸಾಹುಕಾರನಿಗೆ [illegible] ವಾಗುತ್ತ ಬಂತು. [illegible] ತೊಟ್ಟಿಯಲ್ಲಿ ಕುಳ್ಳಿದ ಮಗುವನ್ನು, [illegible] ಬಿಟ್ಟು ಎಲ್ಲಿಗೆ ಹೋಗುವರು! ಎಂದು [illegible] ಸಮಾಧಾನಪಡುತ್ತಿದ್ದನು. [illegible] ಘಂಟೆಯಾಯಿತು! [illegible] ಆಯಿತು" ಮಲಗಿದ್ದ ಮಗುವು [illegible] ಇಲ್ಲ" [illegible] ಅಳಲಿಲ್ಲ. [illegible] ಮಲಗಿರುವುದೆಂದು ತಿಳಿದು, ಆ ಮಗುವನ್ನೆತ್ತಿಕೊಂಡನು. "ಆಶ್ಚರ್ಯ! ಅದು ಮಗುವಲ್ಲ" [illegible] ಒಂದು ಬೊಂಬೆ!!! ಆ ಸಾಹುಕಾರನ ಆಶ್ಚರ್ಯ [illegible], ಸೇವಕನನ್ನು ಕರೆದು ಮಗುವನ್ನು ತೋರಿಸಿದನು. ಕಡೆಗೆ [illegible] ಮೋಸ [illegible] ತಿಳಿದುಕೊಂಡರು. "ಆದರೇನು! ಬೇಕಾದಷ್ಟು ಒಡವೆಗಳಿವೆ!" ಎಂದು ಸಾಹುಕಾರನು ಹೇಳಿ, ಒಡವೆಗಳನ್ನು ನೋಡುವುದಕ್ಕಾರಂಭಿಸಿದನು. ಪ್ರತಿಯೊಂದು ಒಡವೆಯು ಗಿಲ್ಟು [illegible] ನಿರ್ಧರಿಸಲ್ಪಟ್ಟು, ನೂರು ರೂಪಾಯಿಗಿಂತ ಅಧಿಕ ಬೆಲೆ ಬಾಳದೆಂದು [illegible] ಮಾಡಿದರು. ಸಾಹುಕಾರನ ಎದೆಯು ಬಿಚ್ಚಿಹೋಯಿತು! ಎದೆ ಚಚ್ಚಿಕೊಂಡು ಅಳಲಾರಂಭಿಸಿದನು. ಕಡೆಗೆ ಸಮಾಧಾನಮಾಡಿಕೊಂಡು, ಪತ್ತೆದಾರರನ್ನೂ, ತನ್ನ [illegible] ಗಳನ್ನೂ ಕಳುಹಿಸಿದನು. ಅವರು ಗುಪ್ತವೇಷದಿಂದ ಹೋಗಿ, ನರ್ಸಾಪುರದ ಜಮೀನ್ದಾರನನ್ನು ಹುಡುಕಿ, ಹುಡುಕಿ, ಬೇಸತ್ತರು. ನರಸಾಪುರದವರು ತಮ್ಮೂರಿಗೆ ಜಮೀನ್ದಾರನೇ ಇಲ್ಲವೆಂದರು. ವಾಪಸು ಊರಿಗೆ [illegible]ದರು.

ಎಷ್ಟೋ ಜನರು ಈ ರೀತಿ ಮಾಡುತ್ತಿರುವರಂತ. ಇವರ ಮಾತಿಗೂ, ಉಡುಪಿಗೂ, ಬೆರಗಾಗುವರು" ನಮ್ಮ ಸಾಹುಕಾರನಿಗೆ ಯಾವ ಉಪಾಯವೂ ದೊರಿಯಲಿಲ್ಲ.

ಎಂ. ಟಿ ವಲ್ಲಬಯ್ಯಂಗಾರ್

ಬೀರೂರು

———o———

ಭೂಸಾರವನ್ನು ವೃದ್ಧಿಮಾಡುವುದು

ಭೂಮಿಯ ಸಾರವನ್ನು ವೃದ್ಧಿಮಾಡುವುದು ಹೇಗೆಂದು ಪ್ರತಿ ಒಬ್ಬ ರೈತನು ಕೇಳುವನು. ಪೈರನ್ನು ಬದಲಾಯಿಸಿ ಹಾಕುವುದು ಮೊದಲನೇ ಮಾರ್ಗವೆಂದು ಹೇಳಬಹುದು.

ರಾಗಿ, ಭತ್ತ ಮುಂತಾದ ಪೈರುಗಳು ಭೂಮಿಯಿಂದ ವಿಶೇಷವಾಗಿ ಫಾಸ್ಫರಸ್ ಎಂಬ ಪದಾರ್ಥವನ್ನು ಮತ್ತು ನೈಟ್ರೊಜನ್ ಎಂಬುವುದನ್ನು ಹೀರುವುವು. [illegible] ಹುಳಿ, ಹೆಸರು, ಉದ್ದು, ಅವರೆ ಮೊದಲಾದ ಪೈರುಗಳು ಭೂಮಿಯಿಂದ ಮುಖ್ಯವಾಗಿ

ದಿ ನಾರ್ದರ್ನ್ [illegible]

ಲೈಫ್ ಇನ್ಸುರೆನ್ಸ್ ಕಂಪನಿ

ಲಿಮಿಟೆಡ್, ವಿಶಾಖಪಟ್ಣ.

ವಿವಾಹ ಸಂಘವೂ ಸೇರಿರುತ್ತದೆ, ಗವರ್ನಮೆಂಟ್ ಸೆಕ್ಯೂರಿಟಿ ಉಳ್ಳದ್ದು.

ತಿಂಗಳಿಗೆ ಬರೀ ಒಂದು ರೂಪಾಯಿ ಮಾತ್ರ.

ವಿವಾಹ ಸಂಘದಲ್ಲಿ ವಿವಾಹವಾಗುವ ಪರಿಯಂತ್ರವೂ ಮರಣ ಸಂಘದಲ್ಲಿ ಮರಣದ ಪರಿಯಂತ್ರ ಮಾತ್ರ ಕರೆಯ ಐವೇಜನ್ನು ವಸೂಲುಮಾಡಲಾಗುವದು.

ನಿಯುಕ್ತರಿಗೆ ಸಹಾಯ ಧನವಾಗಿ ನಾಲ್ಕು ಲಕ್ಷ ರೂಪಾಯಿ ಕೊಡಲ್ಪಟ್ಟಿತು.

ಸದರಿ ಕಂಪನಿಯ ದಕ್ಷಿಣ ಕನ್ನಡಾ ಜಿಲ್ಲೆಯ ಜನರಲ್ ಏಜಂಟ್ ಕಟೀಲ ಮುಕುಂದ ಪೈ ಮಂಗಳೂರು, ಈ ಮೂಲಕ ತಿಳಿಯಪಡಿಸುವದೇನಂದರೆ-ಸದರಿ ಕಂಪೆನಿಯಲ್ಲಿ ಈ ಮೊದಲು ಸೇರಿದ ಕರೆಯ ಐವೇಜನ್ನು ಕೊಡದೆ ಬಾಕಿ ಮಾಡಿಕೊಂಡಿರುವ ಎಲ್ಲಾ ಮೆಂಬರರು ಇದೇ ಜನವರಿ ಆಗೋಸ್ತು ತಾ 25ರ ವಳಗೆ ಪೂರಾ ಐವೇಜನ್ನು ಒಂದೇ ಸಲ ತಂದು ಕೊಟ್ಟಲ್ಲಿ ಅಂಥಾ ಮೆಂಬರರನ್ನು ಯಾವತ್ತೂ ತರದ ಶಿಕ್ಷಣೆಗಳಿಂದ ವಿಮೋಚಿಸಿ (Penalty and unqualification) ಕ್ರಮ ಪ್ರಕಾರವಾಗಿ ಕರೆಯ ಐವೇಜನ್ನು ಕಂಪನಿಗೆ ವಸೂಲು ಕೊಟ್ಟ ಮೆಂಬರರ ತರದಲ್ಲಿಯೇ ಪುನಹ ಸೇರಿಸಿಕೊಳ್ಳಲಾಗುವದು. [illegible] ರುವವಾಸ [illegible] ಶಿಕ್ಷಣತೆಗಳನ್ನು ಕೈಗೊಳ್ಳುವರೆ ಯೋಗ್ಯವುಳ್ಳ ಮೆಂಬರರನ್ನು ಅನಂತರವೂ ಸೇರಿಸಿಕೊಳ್ಳಲಾಗುವದು.

ಇತರ ಏಜಂಟರ ಮುಖಾಂತರ ಸೇರಿದ ಮತ್ತು ತಾವಾಗಿಯೇ ಸೇರಲ್ಪಟ್ಟ ಎಲ್ಲಾ ಮೆಂಬರರು ಇದೇ ತಿಂಗಳ ತಾ 25ರ ಒಳಗೆ ತಮ್ಮ ಹೆಸರು ಪೂರ್ಣ ವಿಳಾಸ ವರ್ಗ ಮತ್ತು ನಂಬ್ರವನ್ನು ಸಹಾ ನನಗ ತಪ್ಪದೆ ತಿಳಿಸತಕ್ಕದ್ದು.

ಹೊಸದಾಗಿ ಸೇರಲಿಕ್ಕೆ ಅಪೇಕ್ಷೆಯುಳ್ಳವರು ಸ್ವತಹಾವಾಗಲೀ, ಪತ್ರಮುಖಾಂತರವಾಗಲೀ ಸೇರಲೂಬಹುದು. ಹೆಚ್ಚಿನ ಮಾಹಿತಿಗಳ ಬಗ್ಗೆ ನಮ್ಮ ವಿಳಾಸಕ್ಕೆ ಅರ್ಧಾಣೆ ಟಪ್ಪಾಲು ಚೀಟು ರವಾನಿಸಿದ್ದಲ್ಲಿ ಬೇಕಾಗಿರುವ ಅನುಭವಗಳು ಕೊಡಲಾಗುವದು. ಪತ್ರವ್ಯವಹಾರಗಳನ್ನು ಕನ್ನಡದಲ್ಲಿಯೂ ಇಂಗ್ಲೀಷಿನಲ್ಲಿಯೂ ನಡಿಸಬಹುದು.

ಜಿಲ್ಲೆಯ ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕು. ಒಳ್ಳೇ ಕಮಿಶನು ದೊರಿಯುವದು.

ಮೆಸರ್ಸ್ ರಾವ್ ಎಂಡ್ ಕೊ — ಕಟೀಲ್ ಮುಕುಂದ ಪೈ,

[illegible] ಏಜಂಟ್ಸ್, ಮದ್ರಾಸು — ಏಜಂಟ್, ಮಂಗಳೂರು.

ಶೇಕ್ಸಪಿಯರ್ ಮಹಾಕವಿಯವರ "ಸಿಂಬೆಲೈನ್" ಎಂಬ ನಾಟಕವನ್ನು ಹೋಲುವ, "ಇಂದಿರಾಬಾಯಿ" ಗ್ರಂಥಕರ್ತನಿಂದ ಬರೆಯಲ್ಪಟ್ಟ,

ಸೀಮಂತಿನಿ,

ಎಂಬ ಬಹು ಮನೋರಂಜನೀಯವಾದ ಹೊಸಗನ್ನಡ ನಾವೆಲ್,

ಸ್ತ್ರೀ ವೈದುಷ್ಯ, ಧರ್ಮಾಧರ್ಮವಿವೇಚನೆ, ವಿದ್ಯಾವಿಹೀನರ ದುರ್ಗತಿ, ಇವೇ ಮುಂತಾದ ವಿಷಯಗಳನ್ನು ಹೃದಯಂಗಮವಾಗಿಯೂ ರಮ್ಯವಾಗಿಯೂ ವರ್ಣಿಸುವದು. ಓದುವುದಕ್ಕೆ ತೊಡಗಿದರೆ ಕೊನೆ ಮುಟ್ಟುವ ವರೆಗೂ ಬಿಡಲು ಮನಸ್ಸಾಗದು. ಮೈಸೂರು ಗವರ್ನಮೆಂಟಿನವರಿಂದ ಪೋಷಿಸಲ್ಪಟ್ಟಿದೆ. ಮದ್ರಾಸು ಗವರ್ನಮೆಂಟಿನವರಿಂದ ಯುರೋಪಿಯನ್ ಮತ್ತು ಯುರೇಸ್ಯಿಯನ್ ಸಿವಿಲ್ ಆಫೀಸರುಗಳ ಪರೀಕ್ಷೆಗೆ ಪಾಠಪುಸ್ತಕವಾಗಿ ನೇಮಿಸಲ್ಪಟ್ಟಿದೆ. ಅನೇಕ ಇಂಗ್ಲಿಷ ಕನ್ನಡ ವರ್ತಮಾನ ಪತ್ರಗಳ ಮೆಚ್ಚಿಕೆಯನ್ನು ಹೊಂದಿದೆ.

ಕ್ರಯ 12 ಆಣೆ. ಸ್ತ್ರೀಯರಿಗೆ ಮಾತ್ರ 10 ಆಣೆ. ಟಪ್ಪಾಲ್ ಖರ್ಚು ಬೇರೆ.

ಜಿ ವೆಂಕಟರಾವ್, ಮಹಾದೇವ ಪೇಟ್ ಮಡಿಕೇರಿ.

ಇವರಲ್ಲಿ ಸಿಕ್ಕುವುದು.

ದಯವಿಟ್ಟು ಓದಿರಿ ! — ಸೌಖ್ಯವನ್ನು ಹೊಂದಿರಿ !!

ಕಾಮ ಶಾಸ್ತ್ರ

ಉಚಿತವಾಗಿ ಕಳುಹಿಸಲ್ಪಡುವುದು! ಕನ್ನಡದಲ್ಲಿ ಈ ಪುಸ್ತಕವು ಅಚ್ಚಾಗುತ್ತಾ ಇರುವದು. ಇದನ್ನೋದುವದರಿಂದ ದೇಹ ಮನಸ್ಸಂಬಂಧಗಳಾದ ಸಕಲ ಬಾಧೆಗಳೂ ಪರಿಹಾರವಾಗುವವು! ಆಯುರಾರೋಗ್ಯಸಂಪದಗಳುಂಟಾಗುವವು!

ಆತಂಕ ನಿಗ್ರಹ ಮಾತ್ರೆ.

ಊಟವಾದ ಬಳಿಕ ಹಗಲಿರುಳೂ ಸೇವಿಸಬೇಕಾದದ್ದು ! ಆರೋಗ್ಯಶಾಲಿಗಳಿಗೂ ರೋಗ ಪೀಡಿತರಿಗೂ ಉಪಯುಕ್ತವಾದದ್ದು.

ಈ ಮಾತ್ರೆಗಳು —

(೧) ಜೀರ್ಣಕೋಶ ಸಂಬಂಧವಾದ ವ್ಯಾಧಿಗಳನ್ನೆಲ್ಲಾ ಪರಿಹರಿಸುವದು. (೨) ನರಗಳನ್ನು ದೃಢಪಡಿಸುವದು. (೩) ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸುವದು. (೪) ಮೆದುಳನ್ನು ಸರಿಪಡಿಸುವದು. (೫) ಶಕ್ತಿಯನ್ನುಂಟುಮಾಡುವದು. (೬) [illegible] ಅಂಗಗಳನ್ನು ಬಲಪಡಿಸುವದು. (೭) [illegible] ವೃದ್ಧಿಗೊಳಿಸುವದು. ಈ ಮಾತ್ರೆಗಳಿರುವ ಡಬ್ಬಿಗಳ [illegible]

ಆತಂಕನಿಗ್ರಹ [illegible] — [illegible]

[illegible] — [illegible]

ಸುಣ್ಣವನ್ನು ತೆಗೆದುಕೊಳ್ಳುವೆವು. ಪ್ರತಿ ವರುಷವೂ ಭತ್ತವನ್ನೇ ಯಾ ರಾಗಿಯನ್ನೇ ಹಾಕಿದರೆ ವರುಷ ವರುಷಕ್ಕೂ ಒಂದು ವಿಧವಾದ ಪದಾರ್ಥವೇ ಪರಿಗ್ರಹಿಸಲ್ಪಡುತ್ತಿರುವುದು. ಈಗ ಭೂಮಿಯು ನಿಸ್ಸಾರವಾಗುವುದು ಆದಕಾರಣ ಪೈರುಗಳು ಕೆಟ್ಟು ಹೋಗಿ ಫಸಲು ಕಡಿಮೆಯಾಗುತ್ತಾ ಬರುವುದು. ಈ ರೀತಿ ಮಾಡದೆ ಧಾನ್ಯವನ್ನು ಬಿತ್ತಿದ ಮೇಲೆ ಕಾಳನ್ನು ಕಾಳಾದ ಮೇಲೆ ಧಾನ್ಯವನ್ನು ಒದಲಾಯಿಸಿ ಬಿತ್ತುತ್ತಾ ಬಂದರೆ ಮೇಲೆ ಹೇಳಿದಂತೆ ನಷ್ಟವು ಭೂಮಿಗೆ ಉಂಟಾಗುವುದಿಲ್ಲವು. ಭೂಮಿಯು ಕಾಲಕ್ರಮದಲ್ಲಿ ಬೇಕಾದ ನೂತನ ಪದಾರ್ಥಗಳನ್ನು ಸೃಷ್ಟಿಸಿಕೊಳ್ಳುವುದು.

ರಮೇಶನು ನಿಜವಾಗಿಯೂ ಆರು ಗಂಟೆಗೆ ತುಸ ಮೊದಲೇ ಬಂದಿದ್ದನು ಅದಕ್ಕೆ ಪ್ರತಿಯಾಗಿ ತನ್ನ ಪ್ರಿಯ ಕಲ್ಯಾಣಿಯು ತನಗೆ ಮಾಡಿದ ಸ್ತುತಿಯನ್ನು ಕಿವಿಯಾರೆ ಕೇಳಬೇಕಾಯಿತು ಆ ಮಾತು ಕಿವಿಗೆ ಬಿದ್ದೊಡನೆ ತಲೆ ತಿರುಗಿದಂತಾಗಿ ಒಮ್ಮಿಂದೊಮ್ಮೆ ಎದ್ದು ನೆಟ್ಟಗೆ ನಡದು ಮನೆಯನ್ನು ಸೇರಿದನು ಮನಸ್ಸಿನಲ್ಲಿ ರೋಷ, ವಿಷಾದ, ನಾಚಿಕೆ, ಆಶಾಭಂಗಗಳು ಒಂದರಮೇಲೊಂದು ಸಮುದ್ರದ ತೆರೆಗಳಂತೆ ಉಕ್ಕಿಬರುತ್ತಿದ್ದವು "ಹೊಲಸು ಅಸಹ್ಯ ವಾಮನ"ನೆಂಬ ಮೂರು ಶಬ್ದಗಳು ಕಿವಿಯಲ್ಲಿ ನಿರಂತರ ಪ್ರತಿಧ್ವನಿಸುತ್ತಿದ್ದವು ಆ ನಿಂದಾಸೂಚಕ ಕರ್ಕಶ ಸ್ವರವು ಹೃದಯವನ್ನು ಕೂರಲಗಿನಂತೆ ತಿವಿಯುತ್ತಿತ್ತು ರಮೇಶನು ಮೆಲ್ಲಮೆಲ್ಲನೆ ಕುರ್ಚಿಯಿಂದೆದ್ದು ಎದುರಿದ್ದ ನಿಡುಗನ್ನಡಿಯಲ್ಲಿ ಪ್ರತಿಬಿಂಬಿಸುವ ತನ್ನ ಪೂರ್ಣ ಪ್ರತಿಮೆಯನ್ನು ಪರಾಂಬರಿಸಿದನು ತಾನು ವಾಮನನೇನೋ ಹೌದು—ತನ್ನ ಮುಖ ಲಕ್ಷಣಗಳು ರಮಣೀಯವಲ್ಲದ್ದರಿಂದ ಸುಂದರಿಮಣಿಗೆ ಅವು ಅಸಹ್ಯ ಕಂಡಿರಲೂ ಬಹುದು ಆದರೆ ಹೊಲಸು! ತಾನೆಂದಿಗೂ ಆ ನಾಮಾಂಕಿತಕ್ಕೆ ಅರ್ಹನಲ್ಲ ಪರಿಮಳ ದ್ರವಗಳಿಂದ ಗಮಗಮಿಸುವೆನು" ಕ್ಷೌರಿಕ, ಮಡಿವಾಳ, ಚಿಪ್ಪಿಗ, ತೈನಿ ಇವರಲ್ಲಿ ರಮೇಶನು ಅತ್ಯುತ್ತಮರನ್ನು ದ್ವಿಗುಣ ಸಂಬಳಕ್ಕೆ ಇಟ್ಟುಕೊಂಡಿದ್ದಾನೆ ಒಹುಶಃ ತನ್ನ ಈ ಅತಿಶಯಾಡಂಬರವೇ ಕಲ್ಯಾಣಿಯ ಕಣ್ಣಿಗೆ ವಿಪರೀತ ತೋರಿರಬಹುದೆಂದು ಊಹಿಸಿದನು. ಇನ್ನು ಮುಂದೆ ತಾನು ಅಂತಹ ಒಯ್ಯಾರದಲ್ಲಿ ಕಾಲವನ್ನೂ ಹಣವನ್ನೂ ಕಳೆಯೆನೆಂದು ಆಣೆ ಇಟ್ಟನು ತನ್ನ ರೂಪ ಕುರೂಪಗಳಿಗಾಗಿ ಮನಸ್ಸು ಕದಲಗೊಡೆನೆಂದು ನಿರ್ಧರಿಸಿದನು ಕಲ್ಯಾಣಿಗೋಸ್ಕರವಾದರೂ ತಾನು ಮನಃಶಾಂತಿಯನ್ನು ಕಳಕೊಳ್ಳಲೊಲ್ಲೆನೆಂದನು ಆದರೆ ಆ ಸುಂದರಿಗೆ ಒಮ್ಮೆ ಅರ್ಪಿಸಿದ ಮನಸ್ಸು ಕೈಸೇರದಲ್ಲ! ಅವಳು ಕಡೆಗಾದರೂ ತನ್ನನ್ನು ವಂಚಿಸಲಿಲ್ಲ ತನ್ನಲ್ಲಿ ಪ್ರೇಮವಿಲ್ಲದಿದ್ದರೂ ತನ್ನ ಧನರಾಶಿಗೆ ಮೋಹಿಸಿ ತನ್ನ ಕೈಹಿಡಿಯಲೆಳಸಲಿಲ್ಲ

"ಹಾ ಮೋಹಿನಿ! ಸತ್ಯವೂ ರೂಪವೂ ನಿನ್ನಲ್ಲಿ ಕೂಡಿವೆ ನಿನ್ನ ತಾತನಾದ ಆ ಮುದಿ ಗೂವೆಯೇ ನನ್ನ ಶತ್ರು ಅವನೇ ನನಗೆ ನಿನ್ನ ನಿಜ ಅಂತರ್ಯವನ್ನು ಮರೆಮಾಡಿ ನಿನ್ನನ್ನು ಒತ್ತಾಯಪಡಿಸಿ ನನ್ನ ಕೊರಳಿಗೆ ಕಟ್ಟ ಬಿಗಿದನು" ಎಂದು ನೊಂದಲಾಗಿ ರಮೇಶನು ತನ್ನೊಳಗೆ ತಾನು ಹಂಬಲಿಸಿದನು ಹೀಗೆ ಮನುಷ್ಯನು ತನ್ನನ್ನು ವಶೀಕರಿಸಿದ ಪ್ರಿಯೆಯ ಅಪರಾಧಕ್ಕೆ ಕುರುಡನಾಗಿ ಅದನ್ನು ಕಂಡವರ ತಲೆಯಮೇಲೆ ಹೊರಿಸುವನು ಶ್ರೀಶಚಂದ್ರನ ಸ್ಥಿತಿ ಕೆಟ್ಟಿದೆಂದು ಗುಬುಗುಬು ವಾರ್ತೆಯನ್ನು ರಮೇಶನು ಮೊದಲು ಕೇಳಿದ್ದನು ಆದರೆ ಲಕ್ಷ್ಮೀವಿಲಾಸ (ಶ್ರೀಶಚಂದ್ರನ ಭವನದ ಹೆಸರು)ದಲ್ಲಿ ಇದರ ಕುರುಹು ಕಾಣುತ್ತಿದ್ದಿಲ್ಲ ಖರ್ಚು ಎಂದಿನಂತೆ ದರ್ಬಾರಿನಲ್ಲಿ ನಡಿಯುತ್ತಿತ್ತು ಯಾರ ಮೋರೆಯಲ್ಲಿಯೂ ಯೋಚನೆಯ ನೆಳಲು ಇರಲಿಲ್ಲ. ಹ್ಯಾಗೂ ರಮೇಶನು ತನ್ನ ಪ್ರೇಮವಿದ್ದಲ್ಲಿ ದುಡ್ಡಿನ ಮೋರೆ ನೋಡುವವನಲ್ಲ, ಹೀಗಿದ್ದು ಆ ಕುರಿತು ಮನಸ್ಸು ಕೊಡಲಿಲ್ಲ. ಮುದುಕನು ಮಗಳನ್ನು ಮಾರಿ ದಿವಾಳಿ ತಪ್ಪಿಸ ನೋಡುವವನೆಂದು ಅವನ ಬುದ್ಧಿಗೆ ಈಗ ಹೊಳೆಯಿತು ಈ ಅನುಮಾನವನ್ನು ಪರಾಂಬರಿಸಿ ನಿಶ್ಚಯಿಸಬೇಕೆಂದುಕೊಂಡನು

[illegible] ಸೋಮವಾರ ಅಪರಾಹ್ನ ೪ ಗಂಟೆ ಸಮಯಕ್ಕೆ ಒಬ್ಬ ಯುವತಿಯು [illegible] ಕೇರಿಯ ಅಂಗಡಿ ಸಾಲುಗಳನ್ನು ದಿಟ್ಟಿಸುತ್ತಾ ಮೆಲ್ಲಮೆಲ್ಲನೆ ಹೆಜ್ಜೆ ಇಡು ತ್ತಿದ್ದಳು. ಅವಳಿಗೆ ಸುಮಾರು ೧೬ ವರುಷ ಪ್ರಾಯವಾಗಬಹುದು ಮುಖದಲ್ಲಿ ಯೌವನವೂ ಸೌಜನ್ಯವೂ ಹೊಳೆಯುತ್ತಿದ್ದವು ಅಂಗೋಪಾಂಗಗಳು ಆರೋಗ್ಯ ದೃಢ ಕಾಯವನ್ನು ಸೂಚಿಸುತ್ತಿದ್ದವು. ಅವಳನ್ನು ಒಮ್ಮೆ ನೋಡಿದ ಪಥಿಕನು ಇನ್ನೊಮ್ಮೆ ನೋಡದ ಹೊರತು ಮುಂದರಿಸುತ್ತಿರಲಿಲ್ಲ ಇವಳ ಉಡುಪಿನಿಂದ ಆಕೆಯು ಸಾಮಾನ್ಯ ತರಗತಿಯವಳೆಂದು ಗೋಚರವಾಗುತ್ತಿತ್ತು ಆದರೆ ಯುವತಿಯ ದೃಷ್ಟಿ ಮಾತ್ರ ಏನೋ ಒಂದು ಯೋಚನೆಯಲ್ಲಿ ಮಗ್ನಳಾದವಳಂತೆ ತೋರುತ್ತಿತ್ತು ಬರ ಬರುತ್ತಾ ಸುಶೀಲೆಯು ಸುರೇಂದ್ರನಾಥನ ಮಹಾಲನ್ನು ಸಾರಿದಳು ಸುರೇಂದ್ರನಾದ ನೆಂದರೆ ಸರಾಫರಲ್ಲಿ ಅಗ್ರಗಣ್ಯನು ಆತನಲ್ಲಿ ಇದ್ದಷ್ಟು ಬೆಳ್ಳಿ ಬಂಗಾರ ನವರತ್ನಗಳ ವಿಧವಿಧ ಹೊಸಹೊಸ ಮಾದರಿ ಆಭರಣಗಳು ಬೇರೆಲ್ಲಿಯೂ ಇರಲಿಲ್ಲ ಅವುಗಳನ್ನು ಕ್ರಮವಾಗಿ ಇಟ್ಟ ಚಂದದಿಂದಲೋ, ನೀಳವಾದ ಅಚ್ಚ ಕನ್ನಡಿಗಳಿಂದ ಇಮ್ಮಡಿಸಿ ಬರುವ ಅವುಗಳ ಪ್ರಕಾಶದಿಂದಲೋ, ಬೇರೆ ಯಾವ ಕಾರಣದಿಂದಲೋ ಸುಶೀಲೆಯು ಮನ ಸೋತು ಆ ಮಹಾಲಿನೆದುರು ಬೇರಿಳಿದ ಮರದಂತೆ ನಿಂತುಬಿಟ್ಟಳು

"ಏನನ್ನು ಹಾರೈಸಿ ನಿಂತಿದ್ದೀಯೇ" ಎಂಬ ಸ್ವರವು ಕಿವಿಗೆ ಬಿದ್ದಾಗ ಬಾಲೆಯು ಎಚ್ಚತ್ತು ಹಿಂದೆ ನೋಡಲಾಗಿ ಒಬ್ಬ ತರುಣನನ್ನು ಹತ್ತಿರ ಕಂಡಳು ಅವನು ಅದೇ ಪ್ರಶ್ನೆಯನ್ನು ಮರಳಿ ಕೇಳಲು, "ನಾನೊಬ್ಬ ಸೊನೆಗಾರನ ಹುಡುಗಿ, ನಾಡದು ರಥೋ ತ್ಸವಕ್ಕೆ ಸರಿಯಾಗಿ ತನಗೊಂದು ಮುತ್ತಿನ ಸರ ಹೆಣೆದು ಕೊಡಬೇಕೆಂದು ಕಲ್ಯಾಣಿ ಒಡತಿಯ ಅಪ್ಪಣೆಯಾಗಿದೆ" ಅದಕ್ಕೋಸ್ಕರ ಮುತ್ತುಗಳನ್ನೂ ನಡುವೆ ಬೇಕಾದ ಕಲ್ಲುಗಳನ್ನೂ ಹುಡುಕ ಬಂದೆನೆಂದಳು "ಕಲ್ಯಾಣಿ ಯಾರು" ಅವಳನ್ನು ಒಡತಿ ಯೆಂದು ಯಾಕೆ ಕರೆಯುವೆ? "ಶ್ರೀಶಚಂದ್ರನ ಮಗಳು—ಲಕ್ಷ್ಮೀವಾಸದ ಬೆಳಕು— ನಮ್ಮ ಕುಟುಂಬದ ಜೀವನವು ಬಹುಪಕ್ಷ ಅವರಿಂದಲೇ ಸಾಗುವದು" ಎಂದು ವಿವರಿಸಿ ದಳು. ಅವಳನ್ನೇ ನೋಡುತ್ತಿದ್ದ ಆ ಯುವಕನು—ಅಂಗಡಿಗೆ ಬಾ ನಿನಗೆ ಬೇಕಾದ ರತ್ನಗಳನ್ನು ನಾನು ಕೊಡಿಸುವೆನೆಂದನು "ಅಯ್ಯೋ ಇವು ನನ್ನ ಕೈ ನಿಲುಕವು, ಜಾತಿ ರತ್ನಗಳು ಬೇಡವೆಂದು ಕಲ್ಯಾಣಿಯು ೨೦ ರೂಪಾಯಿಯೊಳಗೆ ಎಲ್ಲವನ್ನೂ ತೀರಿಸಬೇಕೆಂದಿದ್ದಾಳೆ" ಎನ್ನಲು ಯುವಕನು "ಇಲ್ಲಿ ರಕಾರಿ ವಸ್ತುಗಳು ಇರಬಹುದು ನೋಡುವಾ" ಎಂದು ಅವಳನ್ನು ಕರಕೊಂಡು ಅಂಗಡಿಯೊಳಗೆ ಹೋದನು ಅಲ್ಲಿ ಅವಳು ಕೇಳಿದ ರತ್ನಗಳಲ್ಲಿ ಉತ್ತಮತರದ್ದನ್ನು ಹೆಕ್ಕಿಕೊಟ್ಟು ಸರದಲ್ಲಿ ಮಧ್ಯ ಮಧ್ಯ ಹೆಣೆಯಲಿಕ್ಕೆ ನಾಲ್ಕು ಆಣೆ ಮುತ್ತುಗಳನ್ನೂ ನಡುವೆ ದೊಡ್ಡದೊಂದು ವಜ್ರವನ್ನೂ ಕೊಟ್ಟನು ಸರ ಕಟ್ಟುವ ಓಜೆಯನ್ನೂ ತಿಳಿಸಿದನು ಇದಕ್ಕೆಲ್ಲ ಪ್ರತಿಯಾಗಿ ಅವಳು ಆಭರಣವನ್ನು ಮಹಾಲಿನ ಒಂದು ಕೋಣೆಯಲ್ಲಿ ಕೂತು ಮಾಡಬೇಕೆಂದು ಮಾತು ಪಡೆದನು. ಈ ಅಪರಿಚಿತ ಪರಗೃಹಸ್ಥನು ತನ್ನಲ್ಲಿಟ್ಟ ತಾತ್ಪರ್ಯವನ್ನು ನೋಡಿ ಸುಶೀಲೆಯು ಸಹಜವಾಗಿ ಬೆರಗಾದಳು ಅವನು ಮಹಾಲಿನ ದನಿಯೆಂದು ಅವಳಿಗೆ ತೋರಿತು ಅವಳ ಮನಸ್ಸಿನಲ್ಲಿ ಏನೋ ಒಂದು ಆಶೆ ಅಂಕುರಿಸಿತು—ಆದರೂ ಮಾತಾಡದೆ ದೈವಗತಿಯನ್ನು ನಂಬಿ ಕೆಲಸದಲ್ಲಿ ಮನಸ್ಸಿಟ್ಟಳು ಹಾರವು ಎರಡು ದಿನದೊಳಗೆ ತಯ್ಯಾರಾಗಬೇಕು

(ಮುಂದೆ ಸಾಗುವದು)

ಗಿಡಗಳ ಅಭಿವೃದ್ಧಿ

ಯಾವದಾದರೂ ಒಂದು ಪ್ರದೇಶದ ಗಿಡ ವೃಕ್ಷಾದಿಗಳನ್ನು ನಾವು ಪರೀಕ್ಷಿಸಿದರೆ ವಿವಿಧ ಜಾತಿಯ ಅನೇಕ ಗಿಡಗಳಿರುವದಾಗಿ ನಮಗೆ ಪ್ರಥಮತಃ ಗೋಚರವಾಗುತ್ತದೆ ನಾವು ಸ್ವಲ್ಪ ತಿರುಗಾಡುವಷ್ಟರಲ್ಲಿಯೇ ಬೇಕೆಂತ ಹುಡುಕದೇನೇ ಒಂದು ದರ್ಜನ್ ಯಾ ೨೦ ತರದ ಗಿಡಗಳು ನಮ್ಮ ದೃಷ್ಟಿಗೆ ಬೀಳುತ್ತವೆ ಮತ್ತು ಇಷ್ಟೆಲ್ಲಾ ತರದ ಗಿಡಗಳು ಹ್ಯಾಗೆ ಉಂಟಾದವೆಂಬ ಆಶ್ಚರ್ಯವು ಸ್ವತೇವವಾಗಿ ನಮ್ಮ ಮನಸ್ಸಿನಲ್ಲಿ ಹುಟ್ಟುತ್ತದೆ. ಈ ತರದ ವಿವಿದ ಜಾತಿ ಗಿಡಗಳು ಹ್ಯಾಗ ಹುಟ್ಟಿದವೆಂಬದನ್ನು ಕಂಡು ಹಿಡಿಯಲಿಕ್ಕೆ ಕೂಡಾ ನಾವು ಪ್ರೇರೇಪಿಸಲ್ಪಡುತ್ತೇವೆ

ಅನೇಕ ಬೀಜಗಳಿರುವ ಒಂದು ಗಿಡವನ್ನು ಪ್ರಕೃತ "ಅಮರಾಂತಸ್" ಎಂಬುವ ಕೆಂಪು ಹರಿವೆಸೊಪ್ಪು ತಕ್ಕೊಳ್ಳುವಾ—ನಾನು ಇತ್ತಲಾಗೆ ಒಂದೇ ಗಿಡದಲ್ಲಿ ಒಂದಾ ವರ್ತಿ ೩೦,೦೦೦ ಬೀಜಗಳನ್ನು ಎಣಿಸಿದ್ದೇನೆ ಇವುಗಳೆಲ್ಲಾ ಏನಾಗುತ್ತವೆ? ಒಂದೂ ಇಲ್ಲದೇನೇ ಇರಬಹುದು ಅನೇಕಾವರ್ತಿ ಆ ಸ್ಥಳದಲ್ಲಿ ಒಂದು ಗಿಡವಿರುವದು, ಹಿರೇ ಗಿಡದ ಬೆಳೆಯಲ್ಲಿ ಬಹುಶಃ ಪ್ರಥಮತಃ [illegible] ಆದರೆ ಕೆಲವು ಕಾಲದ ನಂತರ ಒಂದೂ ಇಲ್ಲದೇನೇ ಹೋಗುವ ತನಕ [illegible] ಒಂದೊಂದಾಗಿಯೇ ಕಾಣದೇ ಹೋಗುವವು. ಅಂದರೆ ಅವುಗಳಿಗೆ ಜಾಗೆ ಇಲ್ಲದೆ ಹೋಗುತ್ತದೆ ಎಲ್ಲಾ ಗಿಡಗಳಲ್ಲಿಯೂ ಒಂದು ವರುಷದಲ್ಲಿ ಬೆಳೆದ ಸಮಸ್ತ ಬೀಜ ಗಳೂ ವೃದ್ಧಿಗೆ ಬಂದರೆ ನಮಗೆ ಸ್ವಾಸ ಬಿಡುವದಕ್ಕೆ ಕೂಡಾ ಸ್ಥಳ ಶಿಕ್ಕದೇನೇ ಹೋಗು ವದು ಹಾಗಾದರೆ ಇಷ್ಟೆಲ್ಲಾ ಬೀಜಗಳು ವ್ಯರ್ಥವಾಗುವದು ಯಾಕೆ?

ಯಾವ ಎರಡು ನೇಜಿಗಳಾದರೂ ಒಂದೇ ತರವಾಗಿರುವದಿಲ್ಲವೆಂಬುವದು ಚನ್ನಾಗಿ ಪರೀಕ್ಷಿಸಿ ನೋಡಿದರೆ ನಮಗೆ ತಿಳಿದುಬರುವದು. ಕೆಲವಕ್ಕೆ ಗಟ್ಟಿಯಾದ ದಂಟು ಗಳು ಇರುತ್ತವೆ, ಕೆಲವಕ್ಕೆ ಕಂತಾದ ಬೇರುಗಳು ಇರುವವು, ಕೆಲವಕ್ಕೆ ಹೆಚ್ಚು ಎಲೆ ಗಳು ಇರುವವು ಹೀಗೆ ಚನ್ನಾಗಿರುವಂಥ ಗಿಡಗಳಿಗೇನೇ ಜೀವನದ ಜಗಳಾಟದಲ್ಲಿ ಎಡೆ ಶಿಕ್ಕುವದು ಮತ್ತು "ಸ್ವಾಭಾವಿಕ ಆರಿಸೋಣ" ಎಂಬ ನೇಮದ ಉತ್ಪತ್ತಿ ಬೀಜ ವು ನಮಗ ಇಲ್ಲಿ ಕಂಡುಬರುವದು ಯಾಕಂದರೆ ಗಿಡಗಳೊಳಗೆ ಯಾವಾಗಲೂ ಕಠೀಣ ಜಗಳವು ನಡಿಯುತ್ತಾ ಇರುವದು ಮತ್ತು ಅತೀ ಉತ್ತಮವಾಗಿರುವಂಥವು ಗಳೇ ಜೀವಿಸಿರುವವು ಇದಕ್ಕೆ "ಅತೀ ಯುಕ್ತವಾಗಿದ್ದಂಥಾದ್ದರ ಇರುವಿಕೆ" ಎಂತ ಹೆಸರು ಪ್ರಕೃತಿಯು ಅನೇಕ ಗಿಡಗಳ ಪೈಕಿ ಅತೀ ಉತ್ತಮವಾದವುಗಳನ್ನೇ ಆರಿಸಿ, ಅವುಗಳನ್ನು ರಕ್ಷಿಸುತ್ತದೆ. ಯಾವಾಗಲೂ ಒಂದು ಜಾತಿಯ ಗಿಡಗಳು ಒಂದೇ ಸ್ಥಳ ದಲ್ಲಿ ಸಾಧಾರಣವಾಗಿ ಒಂದೇ ಸಂಖೆಯಷ್ಟು ಇರುವದನ್ನು ನಾವು ನೋಡಿದರೆ ಇದು ನಿಜವೆಂತ ನಮ್ಮ ಮನಸ್ಸಿಗೆ ಖಚಿತವಾಗುತ್ತದೆ ಪ್ರತಿ ಒಂದು ಗಿಡವು ಒಳ್ಳೇದಾಗಲೀ ಕಾಡು ಆಗಲೀ, ತನ್ನ ಜಾಗೆಯಲ್ಲಿ ತನ್ನ ಸಂತತಿಯ ಒಂದು ಗಿಡವನ್ನು ಬಿಟ್ಟರೆ ಸದರಿ ಗಿಡವು ತನ್ನ ಕೆಲಸವನ್ನು ತಾನು ಮಾಡಿತು ಎಂಬದಾಗಿ ನಾವು ಎಣಿಸಬಹುದು

ಸ್ವಾಬಾವಿಕ ಆರಿಸೋಣದರಲ್ಲಿ ಯಾವಾಗಲೂ ಎರಡು ಮುಖ್ಯ ನೇಮಗಳು ಕೆಲಸಮಾಡುತ್ತವೆ ಪ್ರತಿ ಒಂದು ಗಿಡವು ಅದರ ಹಿರೇ ಗಿಡದ ಹಾಗೆಯೇ ಇರು ವದು ನಮಗೆ ಯಾವಾಗಲೂ [illegible]ಾಗಿಯಿಂದ ರಾಗಿಯೂ ಕೆಂಪು ಹರಿವೆ ಸೊಪ್ಪಿನಿಂದ ಕೆಂಪು ಹರಿವೆ ಸೊಪ್ಪೂ ಶಿಕ್ಕುವದು ಆದರೆ ಯಾವ ಎರಡು ಗಿಡಗಳಾದರೂ ಒಂದ ರಂತೆಯೇ ಇನ್ನೊಂದು ಇರುವದಿಲ್ಲ ಹೀಗೆ ಒಂದಕ್ಕೊಂದು ಸ್ವಲ್ಪ ಬೇದವಿರುವ ಈ ಗಿಡಗಳ ಪೈಕಿ ಯಾವದು ತನ್ನ ಸುತ್ತುಮುತ್ತಲೂ ಇರುವ ಸ್ಥಿತಿಗೆ ಅತೀ ಅನುಕೂಲ ವಾಗಿರುವುದೋ ಅದೇ ಜೀವಿಸಿರುತ್ತದೆ ಹೀಗೆ ಗಿಡಗಳು ಮೆಲ್ಲಮೆಲ್ಲಗೆ ತಮ್ಮೊಳಗೆ ಒಂದಕ್ಕೊಂದು ವ್ಯತ್ಯಾಸವನ್ನು ಪಡೆದು ಸಾಧಾರಣವಾಗಿ ವೃದ್ಧಿ ಹೊಂದುತ್ತವೆ ಈ ಕೆಲಸವು ಬೇರೆಬೇರೆ ಸ್ಥಳಗಳಲ್ಲಿ ಒಂದೇ ಸಮಯದಲ್ಲಿ ನಡಿಯುತ್ತಾ ಹೋಗಲಾಗಿ ವಿವಿದ ಜಾತಿಯ ಗಿಡಗಳು ಹ್ಯಾಗೆ ಉಂಟಾಗುತ್ತವೆಂಬ ಸಂಗತಿಯು ನಿಮಗ ತಿಳಿಯು ತ್ತದೆ

ಆರಂಬದಲ್ಲಿ ಒಂದೇಯಾಗಿರುವ ಗಿಡಗಳು ಸಮಯ ಹೋಗುತ್ತಾ ಹೋಗುತ್ತಾ ಸುತ್ತುಮುತ್ತಲಿನ ವಿವಿಧ ಸ್ಥಿತಿಗಳಿಗೆ ಅನುಕೂಲವಾಗಿ ವಿವಿಧ ಗಿಡಗಳಾಗಿ ಪ್ರವರ್ತಿಸು ತ್ತವೆ ಆದರೆ ಇದಕ್ಕೆ ಹೆಚ್ಚು ಕಾಲ ಹೋಗುತ್ತದೆ ನಾವು ಮಾತ್ರ ಉತುವೇಗ ಪಡುತ್ತೇವೆ ಈ ನೇಮದ ಯಥಾರ್ಥವನ್ನು ಪರೀಕ್ಷಿಸಲಿಕ್ಕೆ ಒಬ್ಬನು ಹೆಚ್ಚು ಕಾಲ ಇರಲಿಕ್ಕೆ ಸಾಧ್ಯವಿಲ್ಲ ಆದರೂ ಸ್ವಲ್ಪ ಸಮಯದಲ್ಲೇ ಹೊಸ ಪೈರುಗಳು ಉಂಟಾ ಗುತ್ತವೆಂಬ ಸಂಗತಿಯು ಪೈರುಗಳ ಕುರಿತು ನಮಗಿರುವ ಸ್ವಾನುಬವದಿಂದ ಸ್ಪಷ್ಟ ವಾಗುತ್ತದೆ ನಾವು ಕಬ್ಬಿನ ಒಂದು ಪೈರನ್ನು ಬೆಳಸಿ ಗಿಡಗಳನ್ನು ಒಂದೊಂದಾಗಿ ಚನ್ನಾಗಿ ಪರೀಕ್ಷಿಸಿ ನೋಡಿದರೆ ವಿವಿಧವಾದ ಗಿಡಗಳನ್ನು ಆರಿಸಲಿಕ್ಕೆ ನಮಗೆ ಸಾಧ್ಯ ವಾಗುವುದು ಇವುಗಳಿಗೆ ನಾವು "ಸ್ಪೋರ್ಟ್ಸ್" ಅಂದರೆ ಆಕಸ್ಮಾತ್ತಾಗಿ ಹುಟ್ಟಿದ ಗಿಡವೆಂತ ಕರೆಯುತ್ತೇವೆ ಕಾಡುಗಿಡಗಳಲ್ಲಿಯೂ ಇದೇರೀತಿಯಾಗುತ್ತದೆ. ಇದುವೆ ಈ ವ್ಯತ್ಯಾಸವಿರುವದು ಕಬ್ಬಿನ ಗದ್ದೆಯಿಂದ ನಾವು ಹೊಸ ನಮೂನೆಯ ಕಬ್ಬು ಗಳನ್ನು ತೆಗೆದು ಜಾಗ್ರತೆಯಿಂದ ಅವುಗಳನ್ನು ಬೆಳೆಯಿಸಬಹುದು ಕಾಡುಗಿಡಗಳ ಲ್ಲಾದರೆ "ಸ್ಪೋರ್ಟ್"ಗಳು ತಮ್ಮ ಸಹೋದರ ಯಾ ಸಹೋದರಿ ಗಿಡಗಳಿಗಿಂತ ಬಲಿಷ್ಟವಾಗಿಲ್ಲದೇ ಹೋದರೆ ಅವುಗಳು ಬೇಗನೇ ಕಾಣೆಯಾಗಿ ಹೋಗುವವು. ಯಾವ ದಾದರೂ ಅಂಥಾ ಗಿಡಗಳು ಕಾಡುಸ್ಥಿತಿಯಲ್ಲಿ ಬೆಳೆಯುವದನ್ನು ನಾವು ನೋಡಿದರೆ "ಇಕೋ! ಇಲ್ಲಿ ಒಂದು "ಸ್ಪೋರ್ಟ್" ಎಷ್ಟು ಚಲೋದಾಗಿದೆ, ಎಷ್ಟು ಅತಿರೇಕ ವಾಗಿದೆ" ಎಂತ ಹೇಳುತ್ತೇವೆ ಇದು ಹೀಗೆಯೇ ಕೆಲವುಕಾಲವಿದ್ದು ನಂತರ ಕಾಣೆ ಯಾಗಿ ಹೋಗುತ್ತದೆ. ಈ ವಿಧವಾಗಿ ಹೊಸ ಜಾತಿ ಗಿಡಗಳು ಹುಟ್ಟುವ ಇನ್ನೊಂದು ಕ್ರಮವು ನಿಮಗೆ ತಿಳಿಯುವದು.

ಈ ಮೇರೆಗೆ ಹೊಸ ಜಾತಿ ಗಿಡಗಳು ಹುಟ್ಟುವ ಕ್ರಮಗಳು ಎರಡು ಇವೆ. ನಮ್ಮ ಪೈರುಗಳಲ್ಲಿ ಹೀಗೆ ಉಂಟಾಗುವ ವ್ಯತ್ಯಾಸಗಳನ್ನು ಉಪಯೋಗಿಸುವದರಿಂದ

[illegible] ವೃದ್ಧಿಗೆ ತರಬಹುದು. ಪ್ರಥಮ ಕ್ರಮಕ್ಕನುಗುಣವಾಗಿ ನಾವು [illegible]ಗೆ ಸಹಾಯಕ್ಕನವಾಗಿ ಯಾವಾಗಲೂ ಅತ್ಯುತ್ತಮವಾದ ಗಿಡವನ್ನು ಆರಿಸಿ ಅದರ ಬೀಜವನ್ನು ಬಿತ್ತಿ ನಮ್ಮ ಕೇವಜಾತಿ ಬೀಜವನ್ನು ಹೆಚ್ಚು ವೃದ್ಧಿಗೆ ತರಬಹುದು. ಎರಡನೇ ಕ್ರಮದಿಂದ ನಾವು ಯಾವಾಗಲೂ ಗದ್ದೆಗಳಲ್ಲಿ ನೋಡಿ ವಿಶೇಷ ತರದ ಯಾ ವಿವಿಧ ಜಾತಿಯ ಗಿಡಗಳನ್ನು ಆರಿಸಿ ಊರಿಗೆಲ್ಲಾ ಹೆಚ್ಚು ಉಪಯೋಗಕರವಾದ ಹೊಸತಾದ ಒಂದು ವಿಧದ ಗಿಡವನ್ನು ಕಂಡುಹಿಡಿಯ ಬಹುದು. ವೆಸ್ಟ್ ಇಂಡೀಸ್‌ನಲ್ಲಿ ಇದರ ದೃಷ್ಟಾಂತವನ್ನು ನಾನು ನೋಡಿದ್ದೇನೆ. ಸೇಂಟ್ ಕಿಟ್ಸ್ ಎಂಬ ದ್ವೀಪದಲ್ಲಿ ಒಂದು ತೋಟದ ಒಬ್ಬ ಮೇನೇಜರನು ಗದ್ದೆಯಲ್ಲಿ ಮುಂಚೆ ನೋಡದೇ ಇದ್ದ ಒಂದು ಕಬ್ಬನ್ನು ನೋಡಿದನು. ಇದು ಒಂದು ಆಶ್ಚರ್ಯದ ಸಂಗತಿ ಎಂದು ಆತನು ಈ ಕಬ್ಬನ್ನು ತನ್ನ ಸ್ವಂತ ತೋಟದಲ್ಲಿ ಬೆಳಿಸಿದನು. ಆತನು ಇದು ಚಲೋದಾಗಿ ಬೆಳೆಯುವುದನ್ನು ಕಂಡು ಇದನ್ನೇ ಒಂದು ಸಣ್ಣ ಜಾಗೆಯಲ್ಲಿ ಬೆಳಿಸಿದನು. ನಂತರ ಇದನ್ನು ಇತರರೂ ಬೆಳಸಲಿಕ್ಕೆ ಆರಂಭಿಸಿದರು. ನಾನು ಈ ದ್ವೀಪಕ್ಕೆ ಹೋದ ಸಮಯದಲ್ಲಿ ಅರೆವಾಸಿ ಗದ್ದೆಗಳಲ್ಲಿ ಈ ಹೊಸ ಕಬ್ಬಿನ ಪೈರನ್ನು ಬೆಳಿಸಿದ್ದರು. ಇದಕ್ಕೆ "ಕೆಲಿಡೋನಿಯನ್ ಕ್ವೀನ್" ಎಂತ ಹೆಸರು. ನನ್ನನ್ನು ಈ ದ್ವೀಪಕ್ಕೆ ಅಲ್ಲಿಯ ಕಬ್ಬಿನ ಬೆಳೆಗೆಲ್ಲಾ ಹಿಡಿದ ಕಠಿಣ ತರದ ಒಂದು ರೋಗವನ್ನು ಪರೀಕ್ಷಿಸುವ ಬಗ್ಗೆ ಕಳುಹಿಸಿದ್ದರು. ಸೇಂಟ್ ಕಿಟ್ಸ್ ಎಂಬಲ್ಲಿ ಕಬ್ಬು ಅಲ್ಲದೇ ಬೇರೇನೂ ಇಲ್ಲ. ಇಲ್ಲಿ ಹಳೇ ಬೂರ್ಬೋನ್ ಕಬ್ಬು ಎಲ್ಲಾ ಹೆಚ್ಚು ಕೆಟ್ಟುಹೋಗಿತ್ತು. ಆದರೆ ಕೆಲಿಡೋನಿಯನ್ ಕ್ವೀನ್ ಎಂಬ ಕಬ್ಬಿನ ಗದ್ದೆಗಳಲ್ಲಿ ಮಾತ್ರ ರೋಗವಿರಲಿಲ್ಲ. ಜಾಗರೂಕನಾದ ಈ ಮೇನೇಜರನು ಒಂದು ಸಂದರ್ಭವನ್ನು ನೋಡಿದ್ದರಿಂದಲೂ ಈ ಸಂದರ್ಭವನ್ನು ಜಾಗ್ರತೆಯಿಂದ ಉಪಯೋಗಿಸಿದ್ದರಿಂದಲೂ ಆತನಿಗೆ ತಿಳಿಯದೇನೇ ಅರ್ಧ ದ್ವೀಪದ ಸಾಗುವಳಿಯನ್ನು ಆತನು ನಾಶದಿಂದ ಕಾಪಾಡಿದನು. ಹಾಗಾದರೆ ಇದು ಒಂದು ಮುಖ್ಯವಾದ ಸಂಗತಿಯಾಗಿದೆ. ನೀವು ನಿಮ್ಮ ಪೈರುಗಳನ್ನು ಎರಡು ಉಪಾಯಗಳಿಂದ ವೃದ್ಧಿಗೆ ತರಬಹುದು. ಒಂದು ಯಾವದಂದರೆ ಉತ್ತಮವಾದ ಗಿಡಗಳಿಂದ ಉತ್ತಮವಾದ ಬೀಜಗಳನ್ನು ಜಾಗ್ರತೆಯಿಂದ ಆರಿಸಿ ಹೆಚ್ಚು ಲಾಭಕರವಾದ ವಿಧದ ಪೈರನ್ನು ಪಡೆಯಬಹುದು. ಇನ್ನೊಂದು ಯಾವದೆಂದರೆ ಗಿಡಗಳನ್ನು ನೀವು ಬಹಳ ಶ್ರದ್ಧೆಯಿಂದ ನೋಡುವ ಅಭ್ಯಾಸವನ್ನು ಬೆಳಸುವದರಿಂದಲೇ ಏನೂ ಕಷ್ಟವಿಲ್ಲದೇನೇ ಬಂದೇ ಲಾಭಕ್ಕೆ ಎಂಬುವಂತೆ ಆಕಸ್ಮಿಕವಾದ ಪ್ರಾಪ್ತಿಯಲ್ಲಿ ಒಂದು ಹೊಸ ಗಿಡವನ್ನು ಕಂಡುಹಿಡಿಯಬಹುದು. ನಿಮ್ಮ ಪೈರುಗಳನ್ನು ಒಂದಾವರ್ತಿ ನೀವು ಜಾಗ್ರತೆಯಿಂದ ನೋಡಲಿಕ್ಕೆ ಆರಂಭಿಸಿದರೆ ಹಿರೇ ಗಿಡಗಳಿಂದ ಪ್ರತಿರೋಧಕವಾದ ಎಷ್ಟು ಗಿಡಗಳಿವೆ ಎಂಬುದನ್ನು ನೋಡಿ ನೀವು ಆಶ್ಚರ್ಯಪಡುವಿರಿ.

ಸಿ. ಎ. ಬಾರ್ಬರ್,
ಗವರ್ನಮೆಂಟ್ ಬೊಟನಿಸ್ಟ್

〰〰〰

ಭಕ್ತಿ.

ಭಕ್ತಿಯೆಂದರೇನು? ಭಕ್ತಿ ಅಂದರೆ ನಮ್ಮನ್ನು ಸೃಷ್ಟಿಸಿದ ದೇವರ ವಿಷಯದಲ್ಲಿ ಪ್ರದರ್ಶಿಸಲ್ಪಡಬೇಕಾದ, ಮತ್ತು ಕೃತಜ್ಞತಾ ಪೂರ್ವಕವಾದ ಪ್ರೀತಿಯು. ನಿಶ್ಚಯವಾದ ಭಕ್ತಿಯುಳ್ಳವರು ಪವಿತ್ರವಾದ ಆಚರಣೆಯುಳ್ಳವರಾಗಿರಬೇಕು. ಭಕ್ತಿಯಲ್ಲಿ ಅನೇಕ ವಿಧಗಳಿದ್ದರೂ, ಪ್ರಸ್ತುತಕ್ಕೆ ಕೆಲವನ್ನು ಮಾತ್ರ ಬರೆಯುವೆವು. "ಮೂಢ ಭಕ್ತಿ, ದೈವಭಕ್ತಿ, ಪತಿಭಕ್ತಿ, ಗುರುಭಕ್ತಿ, ರಾಜಭಕ್ತಿ, ಮಾತೃ ಪಿತೃಭಕ್ತಿ" ಮುಂತಾದವುಗಳು. ಆತ್ಮನ ಬೋಧನೆಗೆ ಒಳಗಾಗುವುದೇ ಭಕ್ತರ ಲಕ್ಷಣವು. ಭಕ್ತರಂತೆ ನಟಿಸಿ, ದುಷ್ಕರ್ಮ ಮಾಡುವರು ಕಳ್ಳ ಭಕ್ತರೇ ಸರಿ.

ಯಾವ ಮತಾನುಸಾರವಾಗಿ ಜಗದೀಶ್ವರನ ಆರಾಧನೆಯನ್ನು ಮಾಡಿದರೂ, ಮನುಷ್ಯನು ಸದ್ಭಕ್ತಿ ಸಂಪನ್ನನಾದ ಹೊರತು, ಅವನ ಮನಸ್ಸಿನಲ್ಲಿ ಭಗವದಾರಾಧನೆ ಎಂಬ ಬೀಜವು ನಾಟದು. ಭಕ್ತಿಯೆಂದರೆ, ಸೃಷ್ಟಿ ಸ್ಥಿತಿ, ಲಯಗಳಿಗೆ ಕಾರಣನಾಗಿ, ಸರ್ವಾಂತರ್ಯಾಮಿಯಾಗಿ, ಜನನ ಮರಣ ರಹಿತನಾಗಿರುವ ಪ್ರಕಾಶಿಸುತ್ತಿರುವ ಪರಮಾತ್ಮನಲ್ಲಿ ಮನಸ್ಸಿಟ್ಟು, ಆ ಮಹಾಮಹಿಮನ ಆಜ್ಞೆಯನ್ನು ಮನಸ್ಸಾಕ್ಷಿಯಿಂದ ತಿಳಿದುಕೊಂಡು, ತದಾನುಸಾರವಾಗಿ ಪ್ರವರ್ತಿಸುವುದೇ. ಕೆಲವರು ಭಗವಂತನನ್ನು ಆರಾಧಿಸುವ ಸಮಯದಲ್ಲಿ ಮಾತ್ರ ಮನಸ್ಸು ನಿಲ್ಲಿಸಿ ಪತ್ರಪುಷ್ಪಾದಿಗಳಿಂದ ಚೆನ್ನಾಗಿ ಪೂಜಿಸಿ, ನಂತರ ಮನಬಂದಂತೆ ನಡೆಯುವುದು, ಅಂದರೆ ಸುಳ್ಳು ಹೇಳುವುದು, ಕೆಟ್ಟ ಆಲೋಚನೆಗಳನ್ನು ಮಾಡುವುದು, ಈ ರೀತಿಯಾಗಿ ಮಾಡುತ್ತಿರುವರು! ಮತ್ತೆ ಕೆಲವರು ಸರ್ವವ್ಯಾಪಿಯಾಗಿಯೂ, ಸರ್ವಜ್ಞನಾಗಿಯೂ, ಸರ್ವ ವ್ಯಾಪಾರಗಳನ್ನು ನಡಿಸುತ್ತಿರುವನಾಗಿಯೂ ಇರುವ ಪರಮಾತ್ಮನ ವಿಚಾರಗಳನ್ನು [illegible]ದ್ದಾನೆ? ನಮ್ಮನ್ನು ನೋಡಿ, ನಮ್ಮ ಹೃದಯವನ್ನು ಶೋಧಿಸುವನೇ? [illegible] ವಾಗಿ ತಿರುಗಾಡಿ ಕೊಂಡಿರುವವರಿಗೆ, ಅದು ಯಾವ ವಿಧವಾದ ಭಕ್ತಿಯೋ [illegible] ಹೀಗೆ ವಾದಿಸುವವರ ಭಕ್ತಿಯು ಭಕ್ತಿಯೆ? ಸಾವಿರವೇಕೆ? ಸಾಮಾನ್ಯವಾಗಿ [illegible] ಒಬ್ಬ ಸೇವಕನಿರುತ್ತಾನೆ. ಅವನು ನಮ್ಮಾಜ್ಞೆಗಳನ್ನು ಶಿರಸಾವಹಿಸಿ ನಡಿಸುತ್ತಿದ್ದರೆ ನಾವು ಅವನನ್ನು ಮಗನಂತೆ ಭಾವಿಸಿ, ಬಹಳ ಪ್ರೇಮದಿಂದ ಅವನಿಗೆ ಸುಖಸಾಧನಗಳನ್ನು ಆಲೋಚಿಸಿ, ಅವನನ್ನು ಕಾಪಾಡುತ್ತಿರುವೆವು. ಆದರೆ ನಮ್ಮನ್ನು ಸ್ತೋತ್ರ ಮಾಡುತ್ತ ಪ್ರತಿದಿನವೂ ಹೂವನ್ನು ತಂದು ನಮ್ಮೆದುರಿಗಿಟ್ಟು, ಸಾಷ್ಟಾಂಗ ನಮಸ್ಕಾರ ಮಾಡುತ್ತಾ, ಸಮಯ ಬಂದಾಗ ನಮ್ಮ ಇಷ್ಟಾನುಸಾರವಾಗಿ ನಡೆಯದಿದ್ದರೆ, ಅವನನ್ನು ಮೋಸಗಾರನೆಂದು ಭಾವಿಸುವೆವೇ ಹೊರತು ಅವನನ್ನು ವಿಶ್ವಾಸದಿಂದ ಕಾಣುವೆವೆ? ಯೋಚಿಸಿ! ಹೀಗೆಯೆ ನಾವು ಸೇವಕನ ಅಂತಃಕರಣ ಶುದ್ಧಿಯನ್ನು ಶೋಧಿಸುತ್ತಿರುವಾಗ, ಸರ್ವಜ್ಞನಾಗಿ ಸರ್ವಸಾಕ್ಷಿಯಾಗಿರುವ ಪರಮಾತ್ಮನು ಮನುಷ್ಯರ ಹೃದಯ ಶೋಧನೆಯನ್ನು ಮಾಡದಿರುವನೆ! ಹಸಿವಿಲ್ಲದಿದ್ದರೆ ಆಹಾರವು ನಾಲಿಗೆಗೆ ಹೇಗೆ ರುಚಿಸದೊ ಹಾಗೆಯೇ ಭಕ್ತಿಯಿಲ್ಲದಿದ್ದರೆ, ಆತನ ನಾಮಾಮೃತವು ರುಚಿಸದು. ಸೇವಕನಿಗೆ ನಮ್ಮಲ್ಲಿ ಭಯ ಭಕ್ತಿಗಳಿಲ್ಲದಿದ್ದರೆ ಅವನು ಮಾಡುವ ಕೆಲಸವು, ನಮ್ಮ ಮನಸ್ಸನ್ನು ಸಂತೋಷಪಡಿಸದು. ಭಯಪಟ್ಟುಕೊಂಡು ಕೆಲಸ ಮಾಡುವವನು ತನಗೆ ವಿಧಿಸಿದ ಕೆಲಸವನ್ನು ಒಡನೆಯೇ ಮಾಡಿ, ತನ್ನ ಯಜಮಾನನು ಕೋಪಿಸಿ ಏನನ್ನುವನೋ ಎಂದು ಹೆಚ್ಚು ಜಾಗರೂಕತೆಯಿಂದ ಮಾಡುವನು. ಅವನಿಗೆ ಭಯದ ಜೊತೆಗೆ ಭಕ್ತಿಯೂ ಉಂಟಾಗುವುದು. ಆಗ ಅವನು "ನನ್ನ ಧಣಿಗಳು ನನ್ನನ್ನು ತಮ್ಮ ಮಗನೋಪಾದಿಯಲ್ಲಿ ಕಾಪಾಡುತ್ತಿರುವರು. ಎಷ್ಟು ಕಷ್ಟಪಟ್ಟಾದರೂ, ಅವರ

ಶೇಕ್ಸಪಿಯರ್ ಮಹಾಕವಿಯವರ "ಸಿಂಬೆಲ್ಲೈನ" ಎಂಬ ನಾಟಕವನ್ನು ಹೋಲುವ, "ಇಂದಿರಾಬಾಯಿ" ಗ್ರಂಥಕರ್ತನಿಂದ ಬರೆಯಲ್ಪಟ್ಟ,

ಸೀಮಂತಿನಿ,

ಎಂಬ ಬಹು ಮನೋರಂಜನೀಯವಾದ ಹೊಸಗನ್ನಡ ನಾವೆಲ್,'

ಸ್ತ್ರೀ ವೈದುಷ್ಯ, ಧರ್ಮಾಧರ್ಮವಿವೇಚನೆ, ವಿದ್ಯಾವಿಹೀನರ ದುರ್ಗತಿ, ಇವೇ ಮುಂತಾದ ಮಹದ್ವಿಷಯಗಳನ್ನು ಹೃದಯಂಗಮವಾಗಿಯೂ ರಮ್ಯವಾಗಿಯೂ ವರ್ಣಿಸುವದು. ಓದುವುದಕ್ಕೆ ತೊಡಗಿದರೆ ಕೊನೆ ಮುಟ್ಟುವ ವರೆಗೂ ಬಿಡಲು ಮನಸಾಗದು. ಮೈಸೂರು ಗವರ್ನಮೆಂಟಿನವರಿಂದ ಪೋಷಿಸಲ್ಪಟ್ಟಿದೆ. ಮದ್ರಾಸು ಗವರ್ನಮೆಂಟಿನವರಿಂದ ಯುರೋಪಿಯನ್ ಮತ್ತು ಯುರೇಶ್ಯಿಯನ್ ಸಿವಿಲ್ ಆಫೀಸರುಗಳ ಪರೀಕ್ಷೆಗೆ ಪಾಠಪುಸ್ತಕವಾಗಿ ನೇಮಿಸಲ್ಪಟ್ಟಿದೆ. ಅನೇಕ ಇಂಗ್ಲಿಷ ಕನ್ನಡ ವರ್ತಮಾನ ಪತ್ರಗಳ ಮೆಚ್ಚಿಕೆಯನ್ನು ಹೊಂದಿದೆ.

ಕ್ರಯ 12 ಆಣೆ. ಸ್ತ್ರೀಯರಿಗೆ ಮಾತ್ರ 10 ಆಣೆ. ಟಪ್ಪಾಲ್ ಖರ್ಚು ಬೇರೆ.

ಜಿ. ವೆಂಕಟರಾವ್, ಮಹಾದೇವ ಪೇಟ್ ಮಡಿಕೇರಿ.

ಇವರಲ್ಲಿ ಸಿಕ್ಕುವುದು.

〰〰〰

ದಯವಿಟ್ಟು ಓದಿರಿ ! ಸೌಖ್ಯವನ್ನು ಹೊಂದಿರಿ !!

ಕಾಮ ಶಾಸ್ತ್ರ

ಉಚಿತವಾಗಿ ಕಳುಹಿಸಲ್ಪಡುವುದು! ಕನ್ನಡದಲ್ಲಿ ಈ ಪುಸ್ತಕವು ಅಚ್ಚಾಗುತ್ತಾ ಇರುವದು. ಇದನ್ನೋದುವದರಿಂದ ದೇಹ ಮನಸ್ಸಂಬಂಧಗಳಾದ ಸಕಲ ಬಾಧೆಗಳೂ ಪರಿಹಾರವಾಗುವವು! ಆಯುರಾರೋಗ್ಯ ಸಂಪದಗಳುಂಟಾಗುವವು!!

ಆತಂಕ ನಿಗ್ರಹ ಮಾತ್ರೆ

ಊಟವಾದ ಬಳಿಕ ಹಗಲಿರುಳು ಸೇವಿಸಬೇಕಾದದ್ದು! ಆರೋಗ್ಯಶಾಲಿಗಳಿಗೂ ರೋಗ ಪೀಡಿತರಿಗೂ ಉಪಯುಕ್ತವಾದದ್ದು.

ಈ ಮಾತ್ರೆಗಳು —

(೧) ಜೀರ್ಣಕೋಶ ಸಂಬಂಧವಾದ ವ್ಯಾಧಿಗಳನ್ನೆಲ್ಲಾ ಪರಿಹರಿಸುವದು. (೨) ನರಗಳನ್ನು ದೃಢಪಡಿಸುವದು. (೩) ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸುವದು. (೪) ಮೆದುಳನ್ನು ಸರಿಪಡಿಸುವದು. (೫) ಶಕ್ತಿಯನ್ನುಂಟುಮಾಡುವದು. (೬) ಪ್ರಾಣಾಧಾರಗಳಿಂದ ಅಂಗಗಳನ್ನು ಬಲಪಡಿಸುವದು. (೭) ನಷ್ಟವಾದ ಶಕ್ತಿಯನ್ನು ಮತ್ತೆ ವೃದ್ಧಿಗೊಳಿಸುವದು. ೩೨ ಮಾತ್ರೆಗಳಿರುವ ಡಬ್ಬಿಗೆ ರೂ. ೧—೦—೦.

ಆತಂಕನಿಗ್ರಹ ಔಷಧಾಲಯ }
ಜಾಮ್‌ನಗರ್ ಕಾಠಿಯವಾರ್ }

ವೈದ್ಯ ಶಾಸ್ತ್ರಿ,
ಮಣಿಶಂಕರ ಗೋವಿಂದಜೀ.

〰〰〰

[illegible] ತೀರದು, ಪ್ರೀತಿಪೂರ್ವಕ ನೆರವೇರಿಸುವನು. ಅಂತಹ [illegible] ನೋಡಿ ನಾವು ಸಂತೋಷಪಟ್ಟು, ಅವನು ಕೇಳದಿದ್ದರೂ, ಅವನಿಗೆ [illegible] ಸಹಾಯವನ್ನು ಮಾಡುತ್ತಿರುವೆವು. ಹಾಗೆಯೇ ನಾವು ಪ್ರೇಮಸ್ವರೂಪನಾದ ಭಗವಂತನಲ್ಲಿ ನಿಜವಾಗಿ ಭಯ ಭಕ್ತಿಯುಳ್ಳವರಾಗಿದ್ದರೆ, ನಾವು ಮಾಡುವ [illegible] ವ್ಯಾಪಾರಗಳು ಪ್ರಭುವಿನ ಆಜ್ಞಾನುಸಾರವಾಗಿದ್ದು ಪವಿತ್ರವಾಗಿರುವುದು. ನಾವು ಮಾಡುವ ವ್ಯವಹಾರದಲ್ಲಿ "ಒಳ್ಳೇದು ಯಾವುದು? ಕೆಟ್ಟದ್ದು ಯಾವುದು?" ಎಂಬದಾಗಿ ಕೆಲವರು ಪ್ರಶ್ನಿಸಬಹುದು. ನಾವು ಯಾವ ಕಾರ್ಯವನ್ನು ಮಾಡಿದರೂ ನಮ್ಮ ಮನಸ್ಸಿಗೆ ತಿಳಿಯದಂತೆ ಮಾಡುವೆವೋ? ಇಲ್ಲ! ಯಾವ ಕೆಲಸದಿಂದ ಮನಸ್ಸು ಶಾಂತಿಯಾಗಿರುವುದೋ, ಯಾವುದರಿಂದ ಅಸಂತೋಷವಾಗಿರುವುದೋ, ಚೆನ್ನಾಗಿ ಚರ್ಚಿಸಿ, ಸ್ವಾನುಭವದಿಂದಲೆ ಸುಲಭವಾಗಿ ತಿಳಿದುಕೊಳ್ಳಬಹುದು. ಇದನ್ನು ಪರಿಶೀಲಿಸುವರೆಂದು ಮತ್ತೊಂದಾವರ್ತಿ ಹೇಳುತ್ತೇನೆ. ಬಾಲಕರು ತಾವು ಯಾವುದಾದರೂ ತಪ್ಪು ಮಾಡಿದರೆ, ತಂದೆ ತಾಯಿಗಳು ಶಿಕ್ಷಿಸುವುದಕ್ಕೆ ಮುಂಚೆಯೇ, ತಮಗೆ ಯಾವ ಶಿಕ್ಷೆಯನ್ನು ವಿಧಿಸುವರೊ ಎಂದು ಹೆಚ್ಚಾಗಿ ಅಳುತ್ತಿರುವರು. ಆ ಸಮಯದಲ್ಲಿ ಅವರನ್ನು ನೋಡಿದರೆ ಭಯಕಂಪಿತರಂತೆ ಕಾಣುವರು! ತಾವು ಮಾಡಿದ ಕೆಲಸ ತಪ್ಪೆಂದು ತಿಳಿದಿದ್ದರೆ, ಅವರು ಹೀಗೆ ಮಾಡುತ್ತಲೂ, ಭಯಪಡುತ್ತಲೂ ಇರಲಿಕ್ಕಿಲ್ಲ! ನಮ್ಮ ಚಿಕ್ಕ ವಯಸ್ಸಿನಲ್ಲಿ ನಾವು ಮಾಡಿದ ಕೆಲಸಗಳನ್ನು ಮನಸ್ಸಿಗೆ ತಂದುಕೊಳ್ಳೋಣ. ಆಗ್ಯೆ ನಮಗೆ ವಿವೇಚನಾ ಶಕ್ತಿ ಇತ್ತೆ? ಇತ್ತು. ವಿಕಸಿಸದೆ ಇತ್ತು. ಜಗದೀಶನು ನಮ್ಮನ್ನು ಸೃಷ್ಟಿಸಿದಾಗಲೇ ಯುಕ್ತಾಯುಕ್ತ ವಿವೇಚನಾ ಶಕ್ತಿಯನ್ನು ಅನುಗ್ರಹಿಸಿಯೇ ಇರುವನು. ಇಂತಹ ಜ್ಞಾನದಿಂದ ಒಳ್ಳೇದು ಕೆಟ್ಟದನ್ನು ವಿಮರ್ಶಿಸಿ, ಮನಸಾಕ್ಷಿಯಿಂದ ತೋರಿಬರುವ ಒಳ್ಳೇ ದಾರಿಯಲ್ಲಿ ನಡೆವುದು ಮಾನವ ಕೃತ್ಯವು. ಇಂಥ ಸತ್ಪ್ರವರ್ತನೆ, ದೈವಭಕ್ತಿ ಉಂಟಾಗಿದ್ದುದರಿಂದಲೇ ಅನೇಕ ಭಕ್ತಶಿಖಾಮಣಿಗಳು ಪ್ರಖ್ಯಾತಿಯನ್ನು ಪಡೆದಿರುವರು. ಕಬೀರ, ಬೇಡರಕಣ್ಣಪ್ಪ, ಮುಂತಾದ ಮಹನೀಯರು ಎಷ್ಟು ಶಾಶ್ವತವಾದ ಕೀರ್ತಿಯನ್ನು ಪಡೆದಿರುತ್ತಾರೆ! ಆದುದರಿಂದ ವಿವೇಕ ಜ್ಞಾನವನ್ನು ಈಗಿನಿಂದಲೂ ಸ್ವಲ್ಪ ಸ್ವಲ್ಪಮಟ್ಟಿಗೆ ಅಭ್ಯಾಸಿಸುತ್ತಾ ಇದ್ದರೆ, ಮುಂದೆ ಬರುಬರುತ್ತಾ ಜ್ಞಾನಭಕ್ತಿಯುಂಟಾಗುವುದರಲ್ಲಿ ಸಂದೇಹವೇನು?

ಮೂಢ ಭಕ್ತಿ.

ಸಾಧಾರಣವಾಗಿ ನಮ್ಮ ದೇಶದಲ್ಲಿ ಮೂಢಭಕ್ತಿಯೇ ವಿಶೇಷವಾಗಿ ತುಂಬಿರುವುದು. ಹೇಗೆಂದರೆ ವಿಶೇಷ ಜನಗಳು ವಿಗ್ರಹವನ್ನು ಪೂಜಿಸುವುದೇ ವಾಡಿಕೆ. ಇದು ಸ್ವಹ ಒಳ್ಳೆಯದೆ! ನಿಜವಾದ ದೇವರನ್ನು ಕರ್ಮಜ್ಞಾನದಿಂದ ನಂಬುವುದಕ್ಕೆ ಸಾಧ್ಯವಲ್ಲದ್ದರಿಂದ ಮೂಢಭಕ್ತಿಯಿಂದ ಆರಾಧಿಸುತ್ತಿರುವೆವು. ಹೀಗೆ ಪೂಜಿಸುವುದು ಭಕ್ತಿಗೆ ಆಸ್ಪದವಾಗಿರುವುದು. ಇದರಿಂದಲೇ ಮೋಕ್ಷವಾಗುವುದರಲ್ಲಿ ಸಂದೇಹವಿಲ್ಲ. ಅರಣ್ಯದಲ್ಲಿ ಬೇಟೆಯಾಡಿಕೊಂಡು ಬರುತ್ತಿದ್ದ ಕಣ್ಣಪ್ಪನಿಗೆ ದೇವರ ಮೇಲೆ ಎಂಥ ಭಕ್ತಿ ಹುಟ್ಟಿತು? ಅವನು ತಂದ ಮಾಂಸವೇ ನೈವೇದ್ಯವಾಯಿತಲ್ಲವೆ? ತಲೆಯಲ್ಲಿ ಸಿಕ್ಕಿಸಿಕೊಂಡು ಬಂದ ಹೂಗಳೂ, ಬಾಯಲ್ಲಿ ತುಂಬಿಕೊಂಡ ನೀರೂ ಶ್ರೇಷ್ಠವಾಯಿತು!! ಕಾರಣವೇನು? ಅವನ ಮೂಢಭಕ್ತಿಯೇ ಕಾರಣವಲ್ಲವೆ? ನಿಶ್ಚಲ ಮನಸ್ಸಿರುವವರಿಗೆ ಸದ್ಗತಿ ದೊರೆಯದಿರಲಾರದು. ಮಿಕ್ಕುಳಿದ ಕೆಲವಂಶಗಳನ್ನು ಮುಂದೆ ವಿವರಿಸುವೆವು.

ಲೋಕದಲ್ಲಿರುವ ಪ್ರತಿಯೊಂದು ಪ್ರಾಣಿಯ ಮೇಲೆ ನೈಜವಾದ ಪ್ರೀತಿ ವಿಶ್ವಾಸಗಳಿದ್ದರೆ, ಅಂಥವರಿಗೆ ಭಕ್ತಿಯು ತಾನಾಗಿಯೇ ಹುಟ್ಟುವುದು. ಜನರಲ್ಲಿಯೇ ಅಭಿಮಾನವಿಲ್ಲದವನು ದೇವರನ್ನು ಪ್ರೀತಿಸುವನೇ? ಆದುದರಿಂದ ಈಶ್ವರ ಸೃಷ್ಟಿಯಲ್ಲಿರುವುದನ್ನು ಜ್ಞಾನಿಯಾದವನು ಪ್ರೀತಿಸುವನು. ದೇವರ ವಿಷಯದಲ್ಲಿ ಪ್ರತಿಯೊಂದು ಅಂಗವು ಮಾಡಬೇಕಾದ ಕೆಲಸವನ್ನು ಮಹನೀಯರು ಈ ರೀತಿಯಾಗಿ ಅಪ್ಪಣೆ ಕೊಡಿಸಿರುವರು.

ಶ್ಲೋ॥ ಜಿಹ್ವೇ! ಕೀರ್ತಯ [illegible] ಮುರರಿಪೋ [illegible]
ಜ ಶ್ರೀಧರಂ । ಪಾಣಿದ್ವಂದ್ವ! ಸಮರ್ಚಯಾಚ್ಯುತ ಕಥಾ [illegible]
ಶ್ರೋತ್ರದ್ವಯ! ತ್ವಂ ಶೃಣು । ಕೃಷ್ಣಂ ಲೋಕಯ ಲೋಚನ [illegible]
ದ್ವಯ ಹರೇರ್ಗಚ್ಛಾಂಘ್ರಿಯುಗ್ಮಾಲಯಂ............

ಈ ರೀತಿಯಾಗಿ ಅಪ್ಪಣೆ ಕೊಡಿಸಿರುವರು. ಆದುದರಿಂದ ಈ ಭಕ್ತಿ ವಿಷಯದ ಅಲ್ಪಜ್ಞನ ತಿಳುವಳಿಕೆ ಒಂದಿರುವುದನ್ನು ವಿವರಿಸಿ ಇಲ್ಲಿಗೆ ವಿರಮಿಸುತ್ತೇನೆ.

ಎಂ ಟಿ ವಲ್ಲಭ ಐಯ್ಯಂಗಾರ್,
ಬೀರೂರು.

ಸ್ವೇಚ್ಛಾವ್ಯಾಯಾಮಿಯ ಟೀಕೆಗಳು.

ಗ್ರಾಮ ಉದ್ಯೋಗಸ್ಥರು.

ರಾಜ್ಯ ಕರಣೆಯನ್ನು ಒಬ್ಬ ಪುರುಷನಿಗೆ ಹೋಲಿಸಿದರೆ ಸರ್ಕಾರ ಸಾಹೇಬರೇ ಶಿರಸ್ಸೆಂದೂ ಕಲೆಕ್ಟರರೇ ಮುಖವೆಂದೂ ತಹಶೀಲ್ದಾರರೇ ಕೈಯೆಂದೂ ಭಾವಿಸೋಣ. ಹಾಗಾದರೆ ಕೈಬೆರಳುಗಳೇ ಮುಖ್ಯವಾದ ಕಡೇ ಅಂಗವಷ್ಟೆ! ಈ ಅವಯವಕ್ಕೆ ಹೋಲಿಸಲು ಯೋಗ್ಯವಾದ ಉದ್ಯೋಗಸ್ಥರು ಪಟೇಲ ಶಾನಭಾಗರಾಗಿರುತ್ತಾರೆ. ರಾಜ್ಯಭಾರದ ಮೂಲ ರಂಗಶಿಲೆಯು ಗ್ರಾಮವಾಗಿರುತ್ತದೆ. ಅದನ್ನು ಆಳುವ ಪಟೇಲನೂ ಯಾ ಉದ್ಯೋಗಸ್ಥನ ಕರಣೀಕನಾದ ಶಾನಭಾಗನೂ ಇವರ ಜೇಟಿನಾದ ಉಗ್ರಾಣಿಯೂ ಒಟ್ಟುಗೂಡಿದರೆ ರಾಜ್ಯಾಧಿಕಾರದ ಮೂಲಸ್ಥಾನದಲ್ಲಿ ಪ್ರಕಾಶಕ್ಕೆ ಬಂದಿರುವ ಜ್ಯೋತಿಯು ಇಡೀ ಘಟದ ಪ್ರಾಣ ಕಳೆಯನ್ನು ಪೋಷಿಸುವ ಮೂಲಾಧಾರವಾಗಿರುತ್ತದೆ. ಅಂದರೆ ಇಂತಹ ಮುಖ್ಯಾಧಿಕಾರಿಗಳಿಗೆ ವೇತನವು ಹೆಚ್ಚಿರುವದಿಲ್ಲ. ಆನೆಯು ಸಪ್ಪು ತಿಂದು ಬದುಕುವ ರೀತಿಯಲ್ಲಿ ಅಲ್ಪ ದ್ರವ್ಯವನ್ನು ಪ್ರತಿ ಫಲವಾಗಿ ಪಡಕೊಂಡು ದೊಡ್ಡ ಅಧಿಕಾರವನ್ನು ಅವರು ನಡಿಸಿಕೊಂಡು ಬರಲು ಅವರಿಗೆ ಸಾಕಷ್ಟು ಉತ್ತೇಜನವು ದೊರಕಬೇಕಾದ್ದು ಅತ್ಯಾವಶ್ಯಕವೆಂದು ಪ್ರಭುಗಳು ತಿಳಿದವರಾಗಿದ್ದರು. ದ್ರವ್ಯಾನುಕೂಲದ ಕೊರತೆಯನ್ನು ಪರಿಹರಿಸಲು ಅವರು ಒಳ್ಳೇ ಉಪಾಯವನ್ನು ಹುಡುಕಿದರು. ಒಂದು ಗ್ರಾಮದಲ್ಲಿ ಚಂದಾಗಿ ದ್ರವ್ಯಾನುಕೂಲವಿದ್ದು ಹೆಸರು ಹೊಂದಿದ ಸದ್ಗೃಹಸ್ಥನ ಕುಟುಂಬದಲ್ಲಿ ಪಟೇಲ ಉದ್ಯೋಗಕ್ಕೆ ಯೋಗ್ಯವಾಗಿ ತೋರುವ ವ್ಯಕ್ತಿಯನ್ನು ಆರಿಸಿ ಆ ಉದ್ಯೋಗದಲ್ಲಿ ಪ್ರತಿಷ್ಠಿಸಬೇಕೆಂಬುದೇ ಗ್ರಾಮಾಧಿಕಾರದನುಷ್ಠಾನಕ್ಕೆ ಮೂಲಸೂತ್ರವಾಗಿ ಏರ್ಪಡಿಸೋಣಾಯಿತು. ಆ ವ್ಯಕ್ತಿಯ ನಂತರ ಅದೇ ಕುಟುಂಬದಲ್ಲಿ ಆ ಉದ್ಯೋಗವು ಪಾರಂಪರ್ಯವಾಗಿ ನಡದು ಬರುವದೆಂಬ ತೀರ್ಮಾನವು ಅಲ್ಪ ವೇತನದ ಕೊರತೆಯನ್ನು ಮಾಜಲಿಕ್ಕೆ ಸಾಕಾಯಿತು. ಈ ನಿರ್ಣಯವು ಇತ್ತೀಚೆಗೆ ರವಷ್ಟು ಸಮಯೋಚಿತ ಮಾರ್ಪಾಟುಗಳಿಗೆ ಒಳಪಡಿಸೋಣಾಗಿರುವದು ಅದರ ಶೈಥಿಲ್ಯವನ್ನು ಬಯಲು ಪಡಿಸುವದೆಂದು ಕೆಲವರು ದುರ್ವಾದ ಮಾಡ ಮನಸುಳ್ಳವರಾಗಿರುವರು. ಆದರೆ ಆ ಕುರಿತು ಉಭಯ ಕಡೆಯಿಂದಲೂ ಕೆಲವು ಪ್ರಸಕ್ತಿಗಳನ್ನು ನ್ಯಾಯವಾಗಿ ಚರ್ಚಿಸುವ ಮೊದಲೇ ಖಂಡಿತವಾದ ಅಭಿಪ್ರಾಯವನ್ನು ಕೊಡತೊಡಗುವದು ಅನುಚಿತವೆಂದು ನ್ಯಾಯಶಾಲಿಗಳು ಒಪ್ಪಿಕೊಳ್ಳುವರು. ಈ ಭಾಗದಲ್ಲಿ ಗ್ರಹಿಸಬೇಕಾದ ಮುಖ್ಯವಾದ ವಿಷಯವು ಯಾವದೆಂದರೆ—ಗ್ರಾಮ ಉದ್ಯೋಗಗಳನ್ನು ನೋಡುವವರು ಅಲ್ಪ ವೇತನದ ಸಮ್ಮಂಧ ಅತೃಪ್ತರಾಗಿ ಇತರ ವಿಧದ ಪಾಪದ್ರವ್ಯವನ್ನು ಆಶಿಸಿ ಅವರ ಉದ್ಯೋಗದ ಗೌರವವನ್ನೂ ಅವರ ಮೇಲೆ ಸರಕಾರದವರಿಗೆ ಇರಬೇಕಾದ ನಂಬಿಗೆಯನ್ನೂ ಕಳಕೊಳ್ಳುವದು ವಾಡಿಕೆಯಾಗಿದೆಯೋ ಅಂಥ ವಾಡಿಕೆಯು ಉಂಟೆಂದು ಊಹಿಸಲು ಆಸ್ಪದವಿರುವದಾದರೆ, ಅದರ ಕಾರಣಗಳೂ ನಿವಾರಣೋಪಾಯಗಳೂ ಮೊದಲಾದ ಮುಂಜಾಗ್ರತೆ ವಿಚಾರದಲ್ಲಿ ಅಮರಲು ತಕ್ಕ ಸಮಯವು ಒದಗಿಯದೋ ಎಂದು ನೋಡುವದು ನಿಜವಾಗಿಯೂ ಸದ್ವಿಚಾರ ಕರ್ತರ ಕರ್ತವ್ಯಾಂಶವಾಗಿರುತ್ತದೆ. ಈ ಪ್ರಮೇಯದ ನಿಷ್ಕರ್ಷ ತೊಡಗುವ ಮೊದಲು ಗ್ರಾಮ ಉದ್ಯೋಗಗಳು ಪಾರಂಪರ್ಯವಾಗಿ ಒಂದು ಕುಟುಂಬದಲ್ಲಿ ನಡಿಯಬೇಕೆಂಬ ಈ ಸಂಸ್ಥೆಯ ಅಸ್ತಿವಾರವು ಅದಿಯಲ್ಲಿ ಹಾಕೋಣಾದ ರೀತಿಯಲ್ಲಿ ಈಗಲೂ ಇದೆಯೋ ಮಾರ್ಪಾಟುಗಳು ನಡದಿವೆಯೋ ನಡದಿರುವದಾದರೆ ಯಾಕೆ ಎಂಬ ವಿಷಯದಲ್ಲಿ ತುಸು ವಿವೇಚನೆಯು ಅಗತ್ಯವದೆ. (ಮುಂದೆಸಾಗುವದು.)

ವಿದೇಶ ವೃತ್ತಾಂತ

ಬೆಲಜಿಯಮ್ ದೇಶದ ಮುಖ್ಯ ಪಟ್ಟಣಗಳಲ್ಲಿ ಒಂದಾದ ಬ್ರುಸೆಲ್ಸ ಎಂಬಲ್ಲಿ ಇತ್ತಲಾಗೆ ಒಂದು ವಸ್ತುಪ್ರದರ್ಶನವು ನಡೆಗಿತ್ತು. ಆಂಗ್ಲಾಳ ಮೊದಲಾದ ಪಾಶ್ಚಾತ್ಯ ದೇಶಗಳಿಂದ ದೇಶಾವೆ ಬಗ್ಗೆ ಅನೇಕ ಅಮೂಲ್ಯ ಒಡವೆಗಳನ್ನು ಕಳುಹಿಸಿದ್ದರು. ಈ ವಸ್ತುಪ್ರದರ್ಶನವಿದ್ದಲ್ಲಿ ಬೆಂಕಿಬಿದ್ದು [illegible] ಮಿಲಿಯ ಮೌಲ್ಯದ ಸಾಮಗ್ರಿಗಳು ನಾಶವಾಗಿಯವೆಂತ ಕೇಳುತ್ತೇವೆ. ವಸ್ತುಪ್ರದರ್ಶನದಲ್ಲಿ ಇಡಲ್ಪಟ್ಟ ಬ್ರಿಟಿಷರ ಅನೇಕ ಒಡವೆಗಳು ನಾಶವಾಗಿ ಹೋಗಿರುವವು. ಈ ನಷ್ಟವನ್ನು ಭರ್ತಿಮಾಡಲಿಕ್ಕೆ ಬ್ರಿಟಿಷ್ ವರ್ತಕರು ಬ್ರಿಟಿಷ ಪಾರ್ಲಿಮೆಂಟನ್ನು ಕೇಳಿಕೊಳ್ಳುವರಂತೆ.

ಬ್ರಿಟಿಷ ದ್ವೀಪಗಳ ಪೈಕಿ ಆಯರ್‌ಲೆಂಡಿನ ಬೆಂಟ್ರಿ ಎಂಬಲ್ಲಿ ಮೂರು ಜನ ಪಾರ್ಲಿಮೆಂಟಿನ ಮೆಂಬರರು ರಾಜಕೀಯ ವಿಷಯವಾಗಿ ಭಾಷಣ ಮಾಡಲು ಪ್ರಯತ್ನಿಸುವಾಗ ಜನರು ಕಲಹವೆಬ್ಬಿಸಿ ಇವರನ್ನು ಮಾತಾಡಲಿಕ್ಕೆ ಬಿಡದೆ ಗಲಾಟೆಯಾಯಿತು. ಈ ಕಲಹದಲ್ಲಿ ನಾಲ್ವತ್ತು ಜನರು ಘಾಯಪಟ್ಟರು. ಪಾರ್ಲಿಮೆಂಟ ಮೆಂಬರರು ಪೋಲೀಸಿನವರಿಂದ ರಕ್ಷಿಸಲ್ಪಟ್ಟು ರೈಲ್ವೆಬಂಡಿ ಏರಿ ಅಲ್ಲಿಂದ ಓಡಿಬಿಟ್ಟರು.

ಸ್ಪೈನ್ ದೇಶದಲ್ಲಿ ನವೀನ ವಿಧದ ಒಂದು ಮಾರಿ ರೋಗವು ತಲೆದೋರಿರುವುದು. ರೋಗವು ತಗಲಿದ ಕೆಲವು ಮಿನಿಟುಗಳಲ್ಲಿ ರೋಗಿಯು ಮರಣಪಡುವನು. ಎರಡು ದಿವಸಗಳಲ್ಲಿ ಐದು ಜನರು ಈ ರೋಗಕ್ಕೆ ತುತ್ತಾಗಿರು

[illegible] ಹಣಗಳನ್ನು ಪರೀಕ್ಷಿಸಿನೋಡಿದ್ದಲ್ಲಿ [illegible]ರ್ಧಾರವನ್ನು ಮಾಡುವುದು ಅಸಾಧ್ಯವೆಂತ ತೋರಿ[illegible] ರೋಗ ಪ್ರಾರಂಭವಾಗುವಾಗ ಮುಖದ ಮೇಲೂ, [illegible]ಗೆಯ ಮೇಲೂ ಎರಡು ಕೆಂಪು ಗುರುತುಗಳು ಕಾಣು[illegible]. ಈ ಗುರುತುಗಳು ಒಂದು ಜಾತಿಯ ನೊಣ ಕಡಿತ[illegible]ಂಟಾಗಬಹುದೆಂಬದಾಗಿ ಗ್ರಹಿಸುತ್ತಾರೆ.

~~~~~

ಸರ್ ಅರ್ನೆಸ್ಟ್ ಕೆಸ್ಸಲ್ ಎಂಬವರು ಎಡ್ವರ್ಡ್ ಚಕ್ರವರ್ತಿಗಳ ಸ್ಮರಣಾರ್ಥವಾಗಿ ವಿನಿಯೋಗಿಸಲಿಕ್ಕೆ ೨೦೦,೦೦೦ ಪವನುಗಳನ್ನು ಕೊಟ್ಟಿರುವರು. ಅಂಗ್ಲಾಳದಲ್ಲಿರುವ ಅನಾಥ ಜರ್ಮನಿಯವರನ್ನೂ ಜರ್ಮನಿಯಲ್ಲಿರುವ ಆಂಗ್ಲೇಯ ಅನಾಥರನ್ನೂ ಚಕ್ರವರ್ತಿಗಳ ಹೆಸರಲ್ಲಿ ಯಾವದಾದರೊಂದು ವಿಧದಲ್ಲಿ ಸಹಾಯಮಾಡಲಿಕ್ಕೆ ಈ ಹಣವನ್ನು ವಿನಿಯೋಗಿಸಬೇಕೆಂತ ಸರ್ ಅರ್ನೆಸ್ಟ್ ಕೆಸ್ಸಲ್‌ರವರು ಅಪೇಕ್ಷಿಸಿರುವರು. ಆಂಗ್ಲೇಯರ ಮತ್ತು ಜರ್ಮನಿಯವರೊಳಗೆ ಇದರಿಂದ ಪರಸ್ಪರ ಪ್ರೀತಿಭಾವನೆಗಳಿಗೆ ಅವಕಾಶವಾಗುವುದೆಂದು ಸರ್ ಅರ್ನೆಸ್ಟ್‌ರವರು ಕೋರುತ್ತಾರೆ. ಜೋರ್ಜ ಚಕ್ರವರ್ತಿಗಳೂ, ಚಕ್ರವರ್ತಿ ವಿಲಿಯಮರವರೂ ಈ ಫಂಡಿನ ಟ್ರಸ್ಟೀಗಳಾಗಿರುವರು.

~~~~~

ಚೀನಾ ದೇಶೀಯರು ಜರ್ಮನ ಯುವರಾಜರವರು ತಮ್ಮ ದೇಶವನ್ನು ಸಂದರ್ಶಿಸುವರೆ ಬರುವರೆಂತ ಕೇಳಿ ಯುವರಾಜರವರಿಗೆ ಸ್ವಾಗತವನ್ನು ತಂತೀ ಮೂಲಕ ತಿಳಿಸಿರುವರು.

~~~~~

ಉತ್ತರ ಹಿಂದುಸ್ಥಾನ.

ಕಲಿಕತ್ತೆಯ ಹ್ಯಾಕೋರ್ಟಿನ ಬಹುಮಾನಪಟ್ಟ ಜಸ್ಟೀಸ್ ಮುಕರ್ಜೀಯವರಿಗೆ ಬಂಗಾಳದಲ್ಲಿ ಏರ್ಪಡಲಿಕ್ಕಿರುವ ಲೆಫ್ಟಿನೆಂಟ್ ಗವರ್ನರರವರ ಕಾರ್ಯನಿರ್ವಾಹಕ ಸಭೆಯ ಮೆಂಬರುತನವು ಕೊಡಲ್ಪಟ್ಟರೂ ಅವರು ಅದನ್ನು ನಿರಾಕರಿಸಿರುವರಾಗಿ ತಿಳಿಯುತ್ತದೆ.

~~~~~

ವ್ಯಾಸರಾಯ ಪ್ರಭುಗಳ ಕಾರ್ಯನಿರ್ವಾಹಕ ಸಭೆಯ ಮೆಂಬರುತನಕ್ಕೆ ಮಿ। ಸಿಂಹರವರ ಬದಲಿಗ ಯಾರನ್ನು ನೇಮಿಸಿರುವರೆಂಬುದು ಇನ್ನು ಕೆಲವು ದಿವಸಗಳಲ್ಲಿಯೇ ಪ್ರಕಟಿಸಲ್ಪಡುವುದು. ಸಿಂಹರವರು ತಮ್ಮ ಹುದ್ದೆಯಿಂದ ನಿವೃತ್ತರಾದ ಮೇಲೆ ತಮ್ಮ ವಕೀಲ ಹುದ್ದೆಯನ್ನನುಸರಿಸುವರು.

~~~~~

ಪುಣೆಯಲ್ಲಿ ಒಬ್ಬ ಆರು ವರುಷ ಪ್ರಾಯದ ಹುಡುಗಿಯನ್ನು ಕೊಂದು ಅವಳ ಮೈಮೇಲಿರುವ ಆಭರಣಗಳನ್ನು ಅಪಹರಿಸಿದ ಮೊಕದ್ದಮೆಯು ಪುನಾ ಡಿಸ್ಟ್ರಿಕ್ಟ್ ಸೆಶನ್ಸ್ ಜಡ್ಜರಲ್ಲಿ ನಡಿಯುತ್ತಿರುವುದು. ಈ ಚಿಕ್ಕ ಹುಡುಗಿಯು ಒಬ್ಬ ಮಾರವಾರಿ ಶ್ರೀಮಂತನ ಮಗಳು. ಈಕೆಯು ತನ್ನ ಮನೆಯ ಎದುರ್ಗಡೆಯಲ್ಲಿರುವ ಒಬ್ಬ ಮುಸಲ್ಮಾನ ಹೆಂಗಸೂ, ಅವಳ ಮಗಳೂ ಇರುವ ಮನೆಗೆ ಆಗಿಂದಾಗ್ಯೆ ಹೋಗುತ್ತಿದ್ದಳು. ಹೋದ ಹೋದಾಗೆಲ್ಲಾ ಈ ಮಹಮ್ಮದಿಯ ಸ್ತ್ರೀಯು ಮಿಠಾಯಿ ಮೊದಲಾದ್ದನ್ನು ತಿನ್ನಲು ಕೊಡುವ ವಾಡಿಕೆ ಇತ್ತು. ಕಳೆದ ಎಪ್ರಿಲ್ ತಿಂಗಳಲ್ಲಿ ಸಾಧಾರಣ ರೂ. ೫೦ ಕ್ರಯ ಬಾಳುವ ಆಭರಣಗಳನ್ನು ಹಾಕಿಕೊಂಡ ಈ ಮಾರವಾರಿ ಹುಡುಗಿಯು ಕಾಣದೆ ಹೋದಳು. ಈತಳು ಎಲ್ಲಿರುವಳೆಂಬುದನ್ನು ಎಲ್ಲೆಲ್ಲಿಯೂ ಹುಡುಕಿಸಿದರೂ ಪ್ರಯೋಜನವಿಲ್ಲದೆ ಹೋಯಿತು. ಎರಡು ತಿಂಗಳ ನಂತರ ಮಾರವಾರಿ ಹುಡುಗಿಯು ಕಲಿಯಲಿಕ್ಕೆ ಹೋಗುತ್ತಿದ್ದ ಶಾಲೆಯ ಉಪಾಧ್ಯಾಯರೊಬ್ಬರಲ್ಲಿ ಅಡವು ಇಡಲಿಕ್ಕೆ ಒಬ್ಬ ಹಿಂದೂ ಹೆಂಗಸು ತಂದಿದ್ದ ಬೆಳ್ಳಿ ಬಳೆಯೊಂದನ್ನು ಮಾರವಾರಿ ಶ್ರೀಮಂತನ ಮಗಳದಾಗಿರಬಹುದೆಂದು ಆತನು ತೋರಿಸಲು ತಂದನು. ಇನ್ನು ಕೆಲವು ಆಭರಣಗಳನ್ನು ತಂದರೆ ೧೦ ರೂಪಾಯಿ ಇನಾಮು ಕೊಡಬಹುದೆಂತ ಈ ಹಿಂದೂ ಹೆಂಗಸಿಗೆ ಆಶೆತೋರಿಸಿ ಅವಳು ಒಂದು ತಿಂಗಳು ಕಳಿಯುವಷ್ಟರಲ್ಲಿಯೇ ಇನ್ನೊಂದು ಚಿನ್ನದ ಆಭರಣದ ತುಂಡನ್ನು ತಂದಳು. ಪೋಲೀಸಿನವರು ಈ ಮಹಮ್ಮದೀಯ ತಾಯಿ ಮತ್ತು ಮಗಳ ಮನೆಯನ್ನು ಜಪ್ತಿಮಾಡಿ ನೋಡಿದ್ದಲ್ಲಿ ಇನ್ನೂ ಕೆಲವು ಆಭರಣಗಳು ದೊರೆತವು. ಮನೆಯ ಅಂಗಳದಲ್ಲಿ ಒಂದು ಎತ್ತರವಾದ ಸ್ಥಳವನ್ನು ಅಗಿದುನೋಡಿದ್ದಲ್ಲಿ ಅಲ್ಲಿಯೇ ಈ ಚಿಕ್ಕ ಹುಡುಗಿಯ ಶವವೂ ಸಹಾ ಸಿಕ್ಕಿತು.

— —

ಅಜಿತ್‌ಸಿಂಗ ಮತ್ತು ಅವನ ಸಂಗಾತಿ ಅಂಬಾಪ್ರಸಾದ ಇವರಿಬ್ಬರು ಪ್ರಕೃತ ಟರ್ಕಿಯಲ್ಲಿರುವರಾಗಿ ಪಂಜಾಬಿನ ಒಂದು ದೇಶಭಾಷಾ ಪತ್ರದಿಂದ ತಿಳಿದುಬರುತ್ತದೆ.

~~~~~

ಸಿಮ್ಲದಲ್ಲಿ ಮಿಂಟೊ ಪ್ರಭುಗಳ ಬಗ್ಯೆ ಪಂಜಾಬಿನ ಮಹಮ್ಮದೀಯರು ಒಂದು 'ಗಾರ್ಡನ್ ಪಾರ್ಟಿಯನ್ನು' ಬರುವ ತಿಂಗಳ ೧೫ರಲ್ಲಿ ಏರ್ಪಡಿಸಿರುವರು.

~~~~~

ಗಡಿಪಾರು ಬಂಧದಿಂದ ವಿಮೋಚನೆಹೊಂದಿದ ಬಾಬು ಕೃಷ್ಣಕುಮಾರ ಮಿತ್ರರವರ ವಾಸ್ತವ್ಯವನ್ನು ಮೂರನೇ ಸಾರಿ ಪೋಲೀಸು ಅಧಿಕಾರಿಗಳು ಕಳೆದ ವಾರದಲ್ಲಿ ಜಪ್ತಿ ಮಾಡಿದರು. ಕೋವಿ, ಗುಂಡು, ಕೋವಿಮದ್ದು ಮೊದಲಾದವುಗಳನ್ನು ಅನ್ಯದೇಶಗಳಿಂದ ಒಳಸಂಚಿನಲ್ಲಿ ಹೇರಳವಾಗಿ ರಫ್ತುಮಾಡುವರೆಂದು ಕಲಿಕತ್ತೆಯ ಪೋಲೀಸಿನವರಿಗೆ ಸಿಕ್ಕಿದ ದಾಖಲೆಗಳಿಂದ ಕಂಡುಬಂದದ್ದರಿಂದಲೂ ಈ ಕೋವಿ ಮೊದಲಾದವುಗಳು ಕೃಷ್ಣಕುಮಾರ ಮಿತ್ರರವರಲ್ಲಿರಬಹುದೆಂತ ಪೋಲೀಸಿನವರಿಗೆ ತಿಳಿದುಬಂದ ಸಮಾಚಾರಗಳಿಂದ ಉಂಟಾದ ಸಂಶಯದಿಂದಲೂ ಬಾಬು ಕೃಷ್ಣಕುಮಾರರ ಮನೆಯು ಶೋಧಿಸಲ್ಪಟ್ಟಿತು. ರಾತ್ರೆ ಘಂಟೆ ೧೧ಕ್ಕೆ ಡಿಪ್ಯುಟಿ ಪೋಲೀಸು ಇನ್ಸಪೆಕ್ಟರ್ ಜನರಲರವರು ಕೆಲವು ಇನ್ಸಪೆಕ್ಟರ್ ಹಾಗೂ ಪೊಲೀಸರ ಸಹಿತ ಬಾಬು ಕೃಷ್ಣಕುಮಾರರ ಮನೆಜಪ್ತಿಯನ್ನು ಪ್ರಾರಂಭಿಸಿದರು. ಹೆಂಗಸರ ಕೋಣೆಗಳು ಸಹಾ ಪೋಲೀಸಿನವರ ಕಡೆಯ ಸ್ತ್ರೀಯರಿಂದ ಶೋಧಿಸಲ್ಪಟ್ಟವು. ಇದೇ ಮನೆಯಲ್ಲಿರುವ ಸಂಜೀವನಿ ಎಂಬ ಪತ್ರಿಕೆಯನ್ನು ಮುದ್ರಿಸುವಂಥಾ ಮುದ್ರಣಾಲಯವೂ ಜಪ್ತಿ ಮಾಡಲ್ಪಟ್ಟಿತು. ಆಯುಧ ಸಂಗ್ರಹವೇನೂ ದೊರಕಲಿಲ್ಲವಂತೆ. ಪೋಲೀಸಿನವರು ಅನೇಕ ಕಾಗದಪತ್ರ ಮೊದಲಾದವುಗಳನ್ನು ಹಿಡಿದು ತಕ್ಕೊಂಡುಹೋಗಿರುವರೆಂಬದಾಗಿ ಕೇಳುತ್ತೇವೆ. ಮಿ। ರಿಮ್ಸೆ ಮೆಕಡೊನಲ್ಡ್, ಅರ್ನೋಲ್ಡ ಲುಪ್ಟನ್ ಪಿ. ಎಚ್. ಮೋರಿಲ್ ಮೊದಲಾದ ಬ್ರಿಟಿಷ್ ಪಾರ್ಲಿಮೆಂಟ್ ಮೆಂಬರರೊಂದಿಗೆ ಬಾಬು ಕೃಷ್ಣಕುಮಾರ ಮಿತ್ರರವರು ಗಡಿಪಾರು ಮಾಡಲ್ಪಟ್ಟಾಗ ಅವರ ಪುತ್ರ ಸುಕುಮಾರ ಮಿತ್ರರವರು ನಡಿಸಿದ ಪತ್ರವ್ಯವಹಾರದಲ್ಲಿ ಬ್ರಿಟಿಷ್ ಪಾರ್ಲಿಮೆಂಟು ಸದಸ್ಯರಿಂದ ಪಡೆದ ಉತ್ತರ ಮೊದಲಾದವುಗಳು ಈ ಪೋಲೀಸಿನವರು ತಕ್ಕೊಂಡುಹೋದ ಪತ್ರರಾಶಿಯಲ್ಲಿರುವವೆಂಬದಾಗಿ ತಿಳಿಯುತ್ತೇವೆ. ಪೋಲೀಸು ಜಪ್ತಿಯು ಬೆಳಿಗ್ಯೆ ಘಂಟೆ ೩॥ ತನಕ ನಡಿಯಿತು.

~~~~~

ಮುದ್ರಣಾಲಯಗಳ ಹೊಸ ಶಾಸನಗಳಿಗನುಗುಣವಾಗಿ ಖುಲ್ನಾ ಎಂಬಲ್ಲಿಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರಿಗೆ 'ಪಾಲಿಚಿತ್ರ' ಮುದ್ರಣಾಲಯದಲ್ಲಿ ಒಂದು ಆಕ್ಷೇಪಕರವೆಂತ ಕಂಡುಬಂದ ಪದ್ಯವನ್ನು ಪ್ರಕಟಿಸಿದ್ದರಿಂದ ಮುದ್ರಣಾಲಯವನ್ನು ದಂಡವಾಗಿ ಸರಕಾರಕ್ಕೆ ಬಿಟ್ಟುಕೊಡಬೇಕೆಂದು ಆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರು [illegible]ದ್ದರು. ಈ ತೀರ್ಮಾನದ ಮೇಲೆ ಕಲಿಕತ್ತೆಯ [illegible]ರ್ಟಿಗೆ ಅಪೀಲು ಮಾಡಿತ್ತು. ಅಪೀಲು [illegible] ಈ ಅಪೀಲನ್ನು ವಿಚಾರಣೆ ಮಾಡಿದ ಉಭಯ [illegible] ಅಭಿಪ್ರಾಯ ಭೇದವು ಬಂದದ್ದರಿಂದ ಕಡೇ ತೀರ್ಮಾನಕ್ಕಾಗಿ ಈ ಅಪೀಲು ಮೊಕದ್ದಮೆಯು ಜಸ್ಟೀಸ್ ಮುಕರ್ಜೀಯರ ಮುಂದೆ ಇಡಲ್ಪಟ್ಟಿತು. ಪಾಲಿಚಿತ್ರ ಮುದ್ರಣಾಲಯದಲ್ಲಿ ಪ್ರಕಟಿಸಿದ ಪದ್ಯವು ಶಾಸನಕ್ಕೊಳಗಾಗುವುದಿಲ್ಲವೆಂತ ಜಸ್ಟೀಸ್ ಮುಕರ್ಜೀಯವರು ಅಭಿಪ್ರಾಯಪಟ್ಟು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರ ತೀರ್ಮಾನವನ್ನು ರದ್ದುಪಡಿಸಿರುವರು.

— o —

ನಾಸಿಕದಲ್ಲಿದ್ದ ಕೈದಿ ಸವಾರಕಾರ ಎಂಬವನನ್ನು ನಾಸಿಕದಿಂದ ಫ್ರಾನ್ಸಿಗೆ ಕಳುಹಿಸಿ ಕೊಟ್ಟಿರುವರೆಂಬದಾಗಿ ಮುಂಬಯಿಯಲ್ಲಿ ವರ್ತಮಾನವಿರುವುದಂತೆ. ಇನ್ನು ಕೆಲವರು ಸವಾರಕಾರನನ್ನು ಯೊರೋಡಾ ಜೈಲಿಗೆ ತಕ್ಕೊಂಡುಹೋಗಿರಬೇಕೆಂದು ಊಹಿಸುವರು.

~~~~~

ಕ್ರಿಸ್ತಮಸ್ ದಿನಗಳಲ್ಲಿ ಜರ್ಮನಿಯ ಯುವರಾಜರವರು ಕಲಿಕತ್ತೆಗೆ ಬಂದು ತರುವಾಯ ಬನಾರೀಸ್, ಅಲ್ಲಹಾಬಾದ್, ಲಕ್ನೌ, ಗ್ವಾಲಿಯರ್, ಆಗ್ರಾ, ಜೈಪುರ, ಹೈದರಾಬಾದ್, ಬಿಕಾನಿರ್, ಡಿಲ್ಲಿ ಮತ್ತು ಲಾಹೋರು ಮೊದಲಾದ ಪಟ್ಟಣಗಳನ್ನು ಸಂದರ್ಶಿಸಿ ಮುಂಬಯಿಗೆ ಬಂದು ಅಲ್ಲಿಂದ ಸ್ವದೇಶಕ್ಕೆ ತೆರಳುವರಂತೆ.

~~~~~

ಕಲಿಕತ್ತೆಯ ಪೋಲೀಸು ಕೋರ್ಟಿನ ರಿಕಾರ್ಡು ಕೋಣೆಗಳಿಂದ ೧೦೦ ರಿಕಾರ್ಡುಗಳು ಕಾಣೆಯಾಗಿರುವವು. ಆದರೆ ಈ ರಿಕಾರ್ಡುಗಳಲ್ಲಿ ರಾಜಕೀಯ ಮೊಕದ್ದಮೆಯುವುಗಳು ಯಾವವೂ ಇರುವುದಿಲ್ಲ.

~~~~~

ಲಕ್ಷ್ಮಣ ಬಲವಂತ ಬೂಪಾಟಕಾರ್ ಎಂಬವರಿಂದ ಮರಾಟಿ ಭಾಷೆಗೆ ಭಾಷಾಂತರಿಸಲ್ಪಟ್ಟ ಬೆಪಿನ್ ಚಂದ್ರ ಪಾಲರವರ ಭಾಷಣಗಳನ್ನೊಳಕೊಂಡಿರುವ ಕೆಲವು ಪುಸ್ತಕ ಮಾರಾಟದ ಅಂಗಡಿಗಳಲ್ಲಿರುವ ಮರಾಟಿ ಪುಸ್ತಕಗಳನ್ನು ಮುಂಬಯಿಯಲ್ಲಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರವರ ವಾರಂಟು ಮೇರೆಗೆ ಹಿಡಿದು ಮೆಜಿಸ್ಟ್ರೇಟರವರ ಆಪೀಸಿನಲ್ಲಿ ಸರಕಾರಿ ಹುಕುಂ ಈ ಬಗ್ಯೆ ಬರುವುದೆಂಬದರ ನಿರೀಕ್ಷಣೆಯಲ್ಲಿಟ್ಟಿರುವರು.

~~~~~

ಮಿಂಟೊ ಪ್ರಭುಗಳ ವ್ಯಾಸರಾಯ ಪ್ರಭುತ್ವದ ಸ್ಮರಣಾರ್ಥವಾಗಿ ತಕ್ಕ ಏರ್ಪಾಡನ್ನು ಮಾಡಬೇಕೆಂದು ಪಂಡಿತ ಮದನ ಮೋಹನ ಮಾಲವಿಯಾರವರು ಒಂದು ವಿಜ್ಞಾಪನಾ ಪತ್ರವನ್ನು ಪ್ರಕಟಿಸಿರುವರು. ಈ ವಿಜ್ಞಾಪನಾ ಪತ್ರದಲ್ಲಿ ಮಿಂಟೊ ಪ್ರಭುಗಳ ಆಳಿಕೆಯಲ್ಲಿ ಭಾರತೀಯರಿಗೆ ದೊರಕಿರುವ ಪ್ರಯೋಜನಗಳನ್ನು ವ್ಯಕ್ತಪಡಿಸಿ ಅಲ್ಲಹಾಬಾದಿನಲ್ಲಿ ಪ್ರಕೃತ ವಸ್ತುಪ್ರದರ್ಶನವು ಏರ್ಪಡಿಸಿದ ಸರಕಾರಿ ಸ್ಥಳದಲ್ಲಿ ಒಂದು ಉದ್ಯಾನವನವನ್ನು ಮಿಂಟೊ ಪ್ರಭುಗಳ ಹೆಸರಲ್ಲಿ ಸ್ಥಾಪಿಸಿ ಆ ವನದೊಳಗೆ ೧೮೫೮ನೇ ವರುಷದಿಂದ ಬ್ರಿಟಿಷ ಚಕ್ರವರ್ತಿಗಳವರು ಭಾರತೀಯ ಪ್ರಜೆಗಳಿಗೂ ಆಶ್ರಿತ ಅರಸರು ಮೊದಲಾದವರಿಗೂ ಆಗಿಂದಾಗ್ಯೆ ದಯಪಾಲಿಸಿದ ನಿರೂಪಗಳನ್ನು ದೇಶಭಾಷೆಯಲ್ಲಿಯೂ ಅಂಗ್ಲ ಭಾಷೆಯಲ್ಲಿಯೂ ಕೆತ್ತಿಸಿದ ಒಂದು ಸ್ತಂಭವನ್ನು ಸ್ಥಾಪಿಸಬೇಕೆಂತಲೂ ಈ ಸ್ತಂಭಕ್ಕೆ ಮಿಂಟೊ ಪ್ರಭುಗಳಿಂದಲೇ

[illegible]ಗಳನ್ನು ಹಾಕಿಸಬೇಕಾಗಿಯೂ ಸೂಚಿಸಿರುವರು. [illegible] ಅಲ್ಲಾಹಾಬಾದಿನ ಈ ಸ್ಥಳದಲ್ಲಿಯೇ ದರಬಾರು [illegible] ಮಾಡಿ ಹಿಂದೆ ೧೮೫೮ನೇ ವರುಷದಲ್ಲಿ ಸಿಪಾಯಿಗಳ ದಂಗೆ ನಂತರ ಕೆನಿಂಗ್ ಪ್ರಭುಗಳವರು ಕೀರ್ತಿಶೇಷ ವಿಕ್ಟೋರಿಯಾ ಮಾತೆಯವರಿಂದ ದಯಪಾಲಿಸಿದ ನಿರೂಪವನ್ನು ಓದಿ ಹೇಳಿದ್ದರು. ಮಿಂಟೊ ಪ್ರಭುಗಳ ಈ ಸ್ಮಾರಕ ಸಂಸ್ಥೆಗೆ ಮೂರು ಲಕ್ಷ ರೂಪಾಯಿ ಖರ್ಚು ತಗಲಬಹುದೆಂಬದಾಗಿ ಅಂದಾಜು ಮಾಡಿರುತ್ತಾರೆ.

ಬರುವ ನವಂಬರ ತಿಂಗಳ ತಾ ೧೫ರಲ್ಲಿ ಕಲಿಕತ್ತೆಯ ಭಾರತೀಯರೆಲ್ಲರು ಮಿಂಟೋ ಪ್ರಭುಗಳನ್ನು ಕಲ್ಕತ್ತೆಯ ಟೌನ್ 'ಹೋಲಿ'ನಲ್ಲಿ ಬಹುಮಾನಾರ್ಥವಾಗಿ ಉಪಚರಿಸುವರು.

ಕಲಿಕತ್ತೆಯ ನೆಷನಲ್ ಕೌನ್ಸಿಲ್ ಒಫ್ ಎಡ್ಯುಕೇಶನ್ ಯಾ ಕಲಾಶಿಕ್ಷಣದ ರಾಷ್ಟ್ರೀಯ ಕಮಿಟಿಯವರಿಂದ ವಿದ್ಯಾರ್ಥಿವೇತನಗಳನ್ನು ಪಡೆದ ೭ ಜನ ವಿದ್ಯಾರ್ಥಿಗಳು ಶಿಕ್ಷಣದ ಒಗ್ಗೆ ಅನ್ಯದೇಶಗಳಿಗೆ ಹೋಗಿರುವರು.

ಮುಂಬಯಿ ಹ್ಯಾಕೋರ್ಟಿನ ಜಡ್ಜರಾದ ಜಸ್ಟೀಸ್ ಎನ್. ಸಿ. ಮೆಕ್ಲಿಯೋಡರವರ ರಜಾ ಸಮಯದಲ್ಲಿ ಇವರ ಬದಲಿಗೆ ರಾ| ದಯಾರಾಮ ಗಿಡುಮಾಲ ಎಂಬವರನ್ನು ಹ್ಯಾಕೋರ್ಟು ಜಡ್ಜರಾಗಿ ಮುಂಬಯಿ ಗವರ್ನರರವರು ನೇಮಿಸಿರುವರು.

ಗಣಪತಿ ಚತುರ್ಥಿ ಹಬ್ಬವನ್ನು ಬರುವ ತಿಂಗಳ ತಾ ೭ರಲ್ಲಿ ಆಚರಿಸಲಿಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಲಿಕ್ಕೆ ಮರಾಟಿ ಗ್ರಹಸ್ಥರ ಸಭೆಯು ವಕೀಲ ಮಾಧವ ರಾಜಾರಾಮ ಬೋಲೆದಾಸ ಎಂಬವರ ಅಧ್ಯಕ್ಷತೆಯಲ್ಲಿ ಒರಗಿತು. ಸಭೆಯಲ್ಲಿ ರಾಜಕೀಯ ವಿಷಯಗಳಿಗೆ ಸಂಬಂಧ ಪಾಡು ಮೊದಲಾದವುಗಳನ್ನು ಹಾಕದೆ ಯುಕ್ತಕ್ಕನುಸಾರವಾದ ರೀತಿಗಳಲ್ಲಿಯೇ ಈ ಹಬ್ಬವನ್ನಾಚರಿಸಬೇಕೆಂತ ನಿರ್ಣಯಿಸಲ್ಪಟ್ಟಿತು.

ಗಣೇಶ ಚತುರ್ಥಿ ಹಬ್ಬದಾಚರಣೆಯನ್ನು ಯಾವ ರೀತಿ ಮಾಡುವರೆಂಬದನ್ನು ಪರೀಕ್ಷಿಸಲು ತಕ್ಕ ಏರ್ಪಾಡು ಮಾಡಲ್ಪಡುವುದಾಗಿಯೂ ಹಬ್ಬದಾಚರಣೆಯ ವಿಧಾನವು ರಾಜಭಕ್ತಿಹೀನತೆಯಿಂದ ಕೂಡಿದ್ದು ಆಕ್ಷೇಪಕರವಾದ್ದೆಂತ ಕಂಡುಬಂದಲ್ಲಿ ಅವುಗಳನ್ನು ನಿಲ್ಲಿಸಿ ಹೀಗಿನ ವಿಷಯವನ್ನು ಪರ್ಯಾಲೋಚಿಸುವ ಅವಶ್ಯವಿದ್ದೀತೆಂಬದಾಗಿಯೂ ಮತ ಸಮ್ಮಂಧವಾದ ಹಬ್ಬಗಳನ್ನು ರಾಜದ್ರೋಹ ಪ್ರಸರಣೆಯಾಗುವಂತೆ ಆಚರಿಸುವ ವಿಧಾನಗಳನ್ನು ಪೂರ್ಣವಾಗಿ ನಿಲ್ಲಿಸಿಬಿಡಬೇಕೆಂಬದಾಗಿಯೂ ಒಂದು ಸರಕಾರಿ ಹುಕುಮನ್ನು ಮುಂಬಯಿ ಸರಕಾರದವರು ಪ್ರಕಟಿಸಿರುವರು.

ಸರ್ ಎಂಡ್ರೂ ಫ್ರೇಜರರವರು ಬಂಗಾಳದ ಲೆಫ್ಟಿನೆಂಟ್ ಗವರ್ನರರಾಗಿದ್ದಾಗ ಆಕ್ಟಿಂಗ್ ಲೆಫ್ಟಿನೆಂಟ್ ಗವರ್ನರರ ಹುದ್ದೆಯನ್ನು ನೋಡುತ್ತಿದ್ದ ಬಹುಮಾನಪಟ್ಟ ಮಿ. ಬೋರ್ಡಿಲನ್‌ರಿಗೆ ಪಾದರಕ್ಷೆಯನ್ನು ಎಸದ ಪುರುಷೋತ್ತಮ ಬನಿಯಾ ಎಂಬವನನ್ನು ಹುಚ್ಚನೆಂತ ಕೆಲವು ವರುಷಗಳ ಹಿಂದೆ ಹುಚ್ಚರ ಚಿಕಿತ್ಸಾಲಯದಲ್ಲಿಟ್ಟಿದ್ದರು. ಇತ್ತಲಾಗೆ, ಈತನನ್ನು ತನಖಿ ಮಾಡಿ ಮೂರು ತಿಂಗಳ ಕಠಿಣ ಕಾಮಗಿರಿ ಶಿಕ್ಷೆಯನ್ನು ಈತನಿಗೆ ವಿಧಿಸಿರುವರು.

ಟೆಲಿಗ್ರಾಫ್ ಕ್ರಮಗಳಲ್ಲಿ ಮಾಡಿದೊಂದು ತಿದ್ದುಪಡಿಯನ್ನು ಈ ತಿಂಗಳ ತಾ ೨೦ರಲ್ಲಿ ಪ್ರಕಟಿಸಿರುವರು. ಎಕ್ಸ್‌ಪ್ರೆಸ್ ಟೆಲಿಗ್ರಾಮುಗಳನ್ನು ಸ್ವೀಕರಿಸುವ ಆಫೀಸು ಮುಚ್ಚಿದ್ದರೆ ಈ ಟೆಲಿಗ್ರಾಮುಗಳಿಗೆ ನಿಗಾ ಕೊಡಬೇಕಾದರೆ ಒಂದು ರೂಪಾಯಿಯನ್ನೂ ಟೆಲಿಗ್ರಾಮು ಹೋಗಿ ತಲ್ಪುವ ಆಫೀಸು ಸಹ ಮುಚ್ಚಲ್ಪಟ್ಟಿದ್ದರೆ ಎರಡು ರೂಪಾಯಿಗಳನ್ನೂ ಫೀಸಾಗಿ ಆಫೀಸುಗಳಲ್ಲಿರುವ ಟೆಲಿಗ್ರಾಫು ಬಿಡುವವನಿಗೆ ತೆರಬೇಕಾಗಿರುವುದು. ಒಬ್ಬನೇ ಹಲವು ಟೆಲಿಗ್ರಾಮುಗಳನ್ನು ಬಿಡುವುದಾದರೂ ಫೀಸು ಮೇಲೆ ಸೂಚಿಸಿದಂತೆ ಒಂದಾವರ್ತಿ ಒಂದು ರೂಪಾಯಿ ಮಾತ್ರವಾಗಿರುವುದು. ಒಂದು ವೇಳೆ ಟೆಲಿಗ್ರಾಫು ಬಿಡಬಹುದೆಂತ ಒಂದಾವರ್ತಿ ಫೀಸು ವಸೂಲಿ ಮಾಡಿ ನಂತರ ಟೆಲಿಗ್ರಾಫು ಬಿಡುವುದು ಅನನುಕೂಲವೆಂತ ಕಂಡು ಬಂದಲ್ಲಿ ತೆರೋಣಾದ ಫೀಸು ವಾಪಸು ದೊರೆಯಲಿಕ್ಕಿಲ್ಲ.

ಡಾಕ್ಕಾದ ಪುಲಿನ ಬಿಹಾರಿ ದಾಸ ಮೊದಲಾದ ರಾಜದ್ರೋಹ ಪಿತೂರಿಗಾರರ ಮೊಕದ್ದಮೆಯ ತನಖೆಯು ನಡಿಯುತ್ತಿರುವುದು. ಈ ಮೊಕದ್ದಮೆಯಲ್ಲಿ ೪೨ ಜನ ಕೈದಿಗಳಿರುವರು. ಸರಕಾರ ಕಡೆಯಿಂದ ರಾ| ಪಿ. ಎಲ್. ರಾಯಿಯವರು ಮೊಕದ್ದಮೆಯನ್ನು ನಡಿಸುತ್ತಿರುವರು. ಕಾಯಿದೆ ಪ್ರಕಾರ ದೇಶದಲ್ಲಿ ಸ್ಥಾಪಿಸಲ್ಪಟ್ಟ ಸರಕಾರದ ಉತ್ಪಾಟನವನ್ನು ಮಾಡುವುದು ಈ ಪಿತೂರಿಗಾರರ ಮುಖ್ಯ ಉದ್ದಿಶ್ಯವೆಂತ ರಾ. ಪಿ. ಎಲ್. ರಾಯಿಯವರು ತಿಳಿಯ ಹೇಳಿದರು. ಈ ಪಿತೂರಿಗಾರರು ತಮ್ಮ ಒಳ ಸಂಚಿನ ಕೂಟವನ್ನು ವಂಗ ವಿಭಜನೆಯ ಕಾಲದಲ್ಲಿ ಏರ್ಪಡಿಸಿ ಈ ತನಕವೂ ಅದನ್ನು ಊರ್ಜಿತವಿಟ್ಟು ನಡಿಸುತ್ತಾ ಬರುವದಲ್ಲದೆ ಈ ಕೂಟಕ್ಕೆ ಸಮ್ಮಂಧ ಪಟ್ಟವರು ಇನ್ನೂ ಹಲವರಿರುವರೆಂದೂ ತಮ್ಮ ಉದ್ದಿಶ್ಯಗಳನ್ನು ನೆರವೇರಿಸುವದಕ್ಕೆ ಈ ಕೂಟದವರು ವಿವಿಧ ಪ್ರಯತ್ನಗಳನ್ನು ಮಾಡುತ್ತಿರುವರೆಂತಲೂ ವಿಜ್ಞಾಪಿಸಿಕೊಂಡರು. ಕೆಲವು ಕಾಲದ ಹಿಂದೆ ಈ ಕೂಟದವರು ಬಾಬೂರ ಬಜಾರ ಎಂಬಲ್ಲಿ ಸಭೆ ಕೂಡಿ ರಾಜದ್ರೋಹ ಸಂಬಂಧವಾದ ಒಳಸಂಚಿನ ಪ್ರಯತ್ನಗಳನ್ನು ನಡಿಸುವ ಬಗ್ಗೆ ಪ್ರಯತ್ನಿಸಿದರು. ಈ ಸಭೆಯಲ್ಲಿ ತಮ್ಮ ದೇಶದ ವಾಸ್ತವ್ಯವನ್ನು ಸಹಾ ಕಳಕೊಳ್ಳುವರೆ ಸಿದ್ಧರಿರುವರೆಂತ ಹಲವರು ಪ್ರತಿಜ್ಞೆ ಮಾಡಿಕೊಂಡರೆಂತಲೂ ೬ ವಿಸಸಂಬಂಧಿಸಿದ ಅನುಶೀಲನ ಸಮಿತಿ ಎಂಬ ಸಂಘವನ್ನು ಏರ್ಪಡಿಸಿದರೆಂತಲೂ ಸರಕಾರಿ ಕಡೆಯಿಂದ ತಿಳಿಸೋಣಾಯಿತು. ಈ ಸಮಿತಿಗೆ ತಕ್ಕದಾದ ಒಂದು ಪುಸ್ತಕಾಲಯವನ್ನು ಏರ್ಪಡಿಸಿ ಚಿಕ್ಕ ಯುವಕರನ್ನು ಮರುಳು ಪಡಿಸುವ ರಾಜದ್ರೋಹಕರವಾದ ಪುಸ್ತಕಗಳನ್ನು ಆ ಪುಸ್ತಕಾಲಯದಲ್ಲಿರಿಸಿದರು. ಪುಸ್ತಕಾಲಯದಲ್ಲಿದ್ದ ಪುಸ್ತಕಗಳನ್ನು ಒಂದೊಂದಾಗಿ ವಿವರಿಸಿ ಅವುಗಳು ಯುವಕರನ್ನು ಯಾವ ರೀತಿ ಬುದ್ಧಿ ಭ್ರಂಶರಾಗಿ ಮಾಡುವವೆಂತ ಪಿ. ಎಲ್. ರಾಯಿಯವರು ವ್ಯಕ್ತ ಪಡಿಸಿದರು. ಈ ಸಂದರ್ಭದಲ್ಲಿ ಬಾಬು ಕೃಷ್ಣ ಕುಮಾರ ಮಿತ್ರರವರ ಪುತ್ರಿ ಸಂಜೀವಿನಿ ಪತ್ರದ ಸಂಪಾದಕರಾದ ಕುಮುದಿನಿ ಮಿತ್ರೆಯರವರಿಂದ ರಚಿಸಲ್ಪಟ್ಟು ಬಾಬು ಸುರೇಂದ್ರನಾಥ ಬೆನರ್ಜಿಯವರಿಂದ ಪ್ರಸ್ತಾವನೆಯು ಬರೆಯಲ್ಪಟ್ಟ ಸಿಕ್ಖರ ಮತ ಸಮ್ಮಂಧವಾದ ಪುಸ್ತಕದ ಪ್ರಸ್ತಾಪವು ಬಂತು. ಬಾಬು ಸುರೇಂದ್ರನಾಥ ಬೆನರ್ಜಿಯವರು ಇಂತಹ ಪುಸ್ತಕಕ್ಕೆ ಪ್ರಸ್ತಾವನೆಯನ್ನು ಬರೆದದ್ದು ಅನುಚಿತವೆಂತ ರಾಯಿಯವರು ತಿಳಿಯ ಹೇಳಿದರು. ಈ ಕೂಟದವರು ದರೋಡೆ ಕಳವು ಸುಲಿಗೆ ಮೊದಲಾದವುಗಳಿಂದ ತಮ್ಮ ಉದ್ದಿಶ್ಯ[illegible] ನೆರವೇರಿಸಲು ದ್ರವ್ಯ ಸಂಗ್ರಹವನ್ನು ಮಾಡುವರೆಂ[illegible] ಕೂಟದ ಮೆಂಬರರು ಅರಸಿನ ವರ್ಣದ ಉಡುಪುಗಳ[illegible] ದರಿಸಿಕೊಂಡು ಅಲ್ಲಲ್ಲಿ ಸಂಚರಿಸುತ್ತಿರುವರೆಂದೂ ಪಿ. ಎಲ್ ರಾಯಿಯವರು ವೇದ್ಯವರಿಸಿದರು. ರಾಯಿಯವರ ಸರಕಾರಿ ಕಡೆ ಹೋಳೋಣವು ಇನ್ನೂ ಮುಗಿಯಲಿಲ್ಲ.

ಸುರೇಂದ್ರನಾಥ ಬೆನರ್ಜಿಯವರು ರಾಯಿಗಳವರು ಕೋರ್ಟುಮುಂದೆ ಹೇಳಿದಂತೆ ಕುಮುದಿನಿ ಮಿತ್ರೆಯರವರ ಪುಸ್ತಕಕ್ಕೆ ತಾನು ಪ್ರಸ್ತಾವನೆಯನ್ನು ಬರಿಯಲಿಲ್ಲವೆಂಬದಾಗಿ ಪ್ರಕಟಿಸಿರುವರು. ಬಂಗಾಳಿ ಪತ್ರದಲ್ಲಿ ಈ ಪುಸ್ತಕ ವಿಷಯವಾಗಿ ತಾನು ಬರೆದ ಅಭಿಪ್ರಾಯವನ್ನು ಕುಮುದಿನಿ ಮಿತ್ರೆಯರು ತಮ್ಮ ಪುಸ್ತಕದಲ್ಲಿ ಸೇರಿಸಿ ಪ್ರಕಟಿಸಿರುವರಲ್ಲದೆ ಪ್ರಸ್ತಾವನೆಯನ್ನು ಬರೆದದ್ದು ತಾನಲ್ಲವೆಂತ ತಿಳಿಯಪಡಿಸಿದ್ದಾರೆ.

ಕುಮುದಿನಿ ಮಿತ್ರೆಯರು ಬಾಬು ಸುರೇಂದ್ರನಾಥ ಬೆನರ್ಜಿಯವರ ಮೇಲಿನ ಮಾತುಗಳನ್ನು ಸ್ಥಿರಪಡಿಸಿರುವರಲ್ಲದೆ ಪಿ. ಎಲ್ ರಾಯಿಯವರು ತನ್ನ ಪುಸ್ತಕವನ್ನು ಸಂಪೂರ್ಣವಾಗಿ ಓದಿಕೊಂಡು ನಂತರದಲ್ಲಿ ಈ ಪುಸ್ತಕವು ಅಪಾಯಕರವೋ ಏನೆಂಬ ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸಲು ವಿಜ್ಞಾಪಿಸಿಕೊಂಡಿರುವರು.

ಡಾಕ್ಕಾದಲ್ಲಿಯ ವಕೀಲರು ಡಾಕ್ಕಾ ರಾಜದ್ರೋಹ ಒಳಸಂಚಿನ ಮೊಕದ್ದಮೆಯಲ್ಲಿ ಅಪರಾಧಿಗಳ ಕಡೆಯಿಂದ ವ್ಯವಹರಿಸಲಿಕ್ಕೆ ಒಪ್ಪುವೆವೆಂಬದಾಗಿ ಹೇಳಿರುವರಂತೆ ಕೈದಿಗಳ ಸಮ್ಮಂಧಿಕರು ವಕೀಲರನ್ನು ತಕ್ಕೊಳ್ಳಬೇಕೆಂತ ಆ ವಕೀಲರನ್ನು ಕೇಳಿಕೊಂಡಲ್ಲಿ ವಕೀಲರು ನಿರಾಕರಿಸಿರುವರೆಂತ ಒಬ್ಬ ಬಾತ್ಮೀದಾರನು ಬರೆದಿರುವರು.

ದಕ್ಷಿಣ ಹಿಂದುಸ್ಥಾನ.

ಕಳೆದ ವಾರದಲ್ಲಿ ದಕ್ಷಿಣ ಹಿಂದುಸ್ಥಾನದ ಮಹಮ್ಮದೀಯರ ವಿದ್ಯಾಸಂಘದ ಪರವಾಗಿ ಮದ್ರಾಸು ಮಹಮ್ಮದೀಯ ನಿವಾಸಿಗಳ ಒಂದು ಸಭೆಯು ಮದ್ರಾಸಿನಲ್ಲಿ ಕೂಡಿತು. ಬಹುಮಾನಪಟ್ಟ ಮದ್ರಾಸು ಹ್ಯಾಕೋರ್ಟು ಜಡ್ಜರಾದ ಅಬ್ದುಲ್ ರಹೀಮರವರು ಸಭಾಧ್ಯಕ್ಷರಾಗಿದ್ದರು. ಮಹಮ್ಮದೀಯರ ಒಗ್ಗೆ ಪ್ರತ್ಯೇಕವಾದ ಒಂದು ಯುನಿವರ್ಸಿಟಿ ಯಾ ಸರ್ವ ವಿದ್ಯಾನಿಲಯದ ಬಗ್ಗೆ ತಕ್ಕ ಸಹಾಯವನ್ನು ಕೊಡಬೇಕೆಂಬುವ ವಿಷಯವು ಸಭೆಯಲ್ಲಿ ಭಾರತೀಯ ಸರ್ವ ಮಹಮ್ಮದೀಯರ ಸಂಘದ ಕಾರ್ಯದರ್ಶಿಗಳಿಂದ ಹೇಳಲ್ಪಟ್ಟಿತು. ಸಭಾಧ್ಯಕ್ಷರು ಈ ಕಾರ್ಯಕ್ಕೆ ತಕ್ಕ ಸಹಾಯವನ್ನು ಮಾಡುವುದು ಮಹಮ್ಮದೀಯರ ಧರ್ಮವಾಗಿರುವುದೆಂತ ತಿಳಿಯಹೇಳಿದರು.

ವನಿಯಂಬಾಡಿ ಎಂಬಲ್ಲಿಯ ಮಹಮ್ಮದೀಯ ವಿದ್ಯಾ ಸಂಘದವರಿಂದ ಸ್ಥಾಪಿಸಲ್ಪಟ್ಟ ಸೆಕಂಡರಿ ಶಾಲೆಯ ಸಹಾಯಾರ್ಥವಾಗಿ ಮಿ. ಹುಸೈದ್ ಬಾದಶಾ ಸಾಹೇಬರೆಂಬವರು 15000 ರೂಪಾಯಿಗಳನ್ನು ಕೊಟ್ಟಿರುವರೆಂತ ತಿಳಿಯುತ್ತೇವೆ.

ತಿರುವಾಂಕೋಡಿನ ಮಹಾರಾಜರವರ 25 ವರುಷಗಳ ಆಳುವಿಕೆಯ ಸಿಲ್ವರ್ ಜುಬುಲಿ ಮಹೋತ್ಸವವು

ಆ ಸಂಸ್ಥಾನದ ಪ್ರಜೆಗಳೆಲ್ಲ ವರಿಂದ ಬಹಳ ಸಂಭ್ರಮದಿಂದ ನೆರವೇರಿಸಲ್ಪಟ್ಟಿತು. ರಾಜರ ಮೇಲಣ ಭಕ್ತಿಯೂ ಪ್ರೀತಿಯೂ ಅವರ ಪ್ರಜೆಗಳಲ್ಲಿ ಅತಿಶಯವಾಗಿರುವುದೆಂತ ಅಲ್ಲಿಯ ಜುಬುಲಿ ವೃತ್ತಾಂತದಿಂದ ತಿಳಿಯಬರುತ್ತದೆ. ತಮ್ಮ ಆಳುವಿಕೆಯ 25 ವರುಷಗಳಲ್ಲಿ ತಮ್ಮ ಪ್ರಜೆಯವರ ಹಿತಾರ್ಥವಾಗಿ ರಾಜರವರು ಅನೇಕ ಏರ್ಪಾಡುಗಳನ್ನು ಮಾಡಿರುವರು. ಪ್ರಜೆಗಳಿಗೆ ವಿದ್ಯಾಪ್ರಚಾರದ [illegible] ಮೊದಲಿರುವ [illegible] ಉಗಿರುವುದು. ತಾವು ಸಿಂಹಾಸನವನ್ನು [illegible] ಕಂದಾಯವಾಗಿ [illegible] ಲಕ್ಷ ರೂಪಾಯಿಗಳನ್ನು ಪ್ರಜೆಗಳಿಗೆ ಬಿಟ್ಟಿರುವರು. [illegible] ಮಹಾರಾಣಿಯವರ [illegible] ತಿರುವಾಂಕೋಟಿನ [illegible] ಹೋಲನ್ನು ಸ್ಥಾಪಿಸಿದ್ದಲ್ಲದೆ, [illegible] ರಿಯಾ 'ಮೆಡಿಕಲ್ ಸ್ಕೂಲ್' ಮತ್ತು ಹಾಸ್ಪಿಟಲ್ [illegible] ಸ್ತ್ರೀಯರ [illegible] ವೈದ್ಯ [illegible] ಯನ್ನೂ [illegible] 1[illegible] [illegible] ಮಾತೆಯವರ [illegible] ವಾಗಿ [illegible] ಪುಸ್ತಕಾಲಯವನ್ನೂ [illegible] ದರು. ಮಹಾರಾಜರವರ 25 ವರ[illegible] ಯಲ್ಲಿ ತಿರುವಾಂಕೂರ ಸಂಸ್ಥಾನದ ನ್ಯಾಯವಿಧಾಯಕ ಸಭೆಯೂ [illegible] ಟ್ಟಿವೆ. [illegible] ವಾಗಿರುವುದು.

~~~~~~

ಮದ್ರಾ[illegible] ಗಿರುವ [illegible] ಕಲೆಕ್ಟರ್ [illegible] ನೇಮಿಸುವರಾಗಿ [illegible]

~~~~~~

[illegible] ದ್ರಾಸು ನ್ಯಾಯ[illegible]

~~~~~~

ಟ್ರಾನ್ಸ್[illegible] ತೇಯರ [illegible] ಕನ್ [illegible] ತೇಯ [illegible] ಸಹಾಯವ[illegible] ವಿಜ್ಞಾಪನೆ[illegible] ನೆಗೆ ಕಳು[illegible] ಮದ್ರಾಸು ಸರಕಾರದ[illegible] ಆಜ್ಞೆಯನ್ನು ಕೊಟ್ಟಿರುವರೆಂ[illegible] ತಿಳಿಯುತ್ತೇವೆ. ಆವು ಈ ಮೊದಲು ಈ ವಿಷಯವಾಗಿ [illegible] ಹಲವು ಕಾರಣಗಳಿಂದ ಸಮರ್ಥಿಸಿ [illegible] ಲ್ಪಟ್ಟ ಟ್ರಾನ್ಸ್ವಾಲ ಹಿಂದೂಗಳನ್ನು ಮೂರು [illegible] ವಾಗಿ ಮಾಡಿ ಅವರ ತಾರತಮ್ಯಾನುಸಾರ [illegible] ಮಾಡುವೆವೆಂಬದಾಗಿ [illegible]ಪಿಸಿರುವರೆಂತ ತಿಳಿಯುತ್ತೇವೆ.

~~~~~~

ಮೈಸೂರು ಸರಕಾರದ ನ್ಯಾಯವಿಧಾಯಕ ಸಭೆಯ ಮುಂದೆ ಪತಿದಾಯ್ಯಭಾಗ ವಿಧಿ ಎಂಬ ಕಾನೂನನ್ನು ಸಭೆಯಲ್ಲಿ ಪರ್ಯಾಲೋಚನೆ ಬಗ್ಗೆ ತರಬಾರದೆಂತ ನಿರ್ಣಯಿಸಿ ಈ ಕಾನೂನು ಮಸೂದೆಯನ್ನು ತೆಗದುಹಾಕಿರುತ್ತಾರೆ.

ದಕ್ಷಿಣ ಕನ್ನಡ

~~~~~~

ಮೂಲಗೇಣಿ [illegible] ಹೆಚ್ಚಿದ ತೀರ್ವೆಯನ್ನು [illegible] ಕೊಡಬೇಕೆಂದು ನಿರ್ಣಯಿಸಲ್ಪಟ್ಟ ಮದ್ರಾಸು ಹೈಕೋರ್ಟಿನ ಫುಲ್‌ಬೆಂಚ್ ತೀರ್ಮಾನವನ್ನು ನಮ್ಮ [illegible] ಬರುವ ಸಂಚಿಕೆಯಲ್ಲಿ ಪ್ರಕಟಿಸುವೆವು.

ಸ್ವೀಕಾರ. [illegible] ಡಿಸ್ಟ್ರಿಕ್ಟ್ ಬೋರ್ಡ್ [illegible] ಹೋಸಪೇಟೆ ತಾಲೂಕಿನ [illegible] ರಾಮಸ್ವಾಮಯ್ಯಂಗಾರ [illegible] ಕನ್ನಡ ವಾಕ್ಯ [illegible] ಮೂರು ಚಿಕ್ಕ ಪುಸ್ತಕ [illegible] ಕಳುಹಿಸಿರುವರು. [illegible] ಪ್ರಕಟಿಸುವೆವು.

ಮಂಗಳೂರು 'ಕೆನರಾ [illegible] ಸ್ಕೂಲ್' [illegible] 1909-10 ನೆಯ ವರುಷದ ಸಮಾಚಾರವು ನಮ್ಮ ಹಸ್ತಗತವಾಗಿರುವುದು. ಮುಂದಿನ [illegible] ಇದನ್ನು [illegible]ವೆವು.

The first of a short series of articles criticising journalism in Malabar and stating the qualifications of candidates who stand up for the ensuing election for the membership in the Legislative Council written by a Malayalee is just to hand.

[illegible] ಪ್ರಾಂತ್ಯ[illegible] ವರ್ತಮಾನಪತ್ರಗಳ ಪ್ರಚಾರ [illegible] ಕುರಿತಾಗಿಯೂ ಮದ್ರಾಸು ನ್ಯಾಯವಿಧಾಯಕ ಸಭೆ [illegible] ಮಲಬಾರ ಮತ್ತು ದಕ್ಷಿಣ ಕನ್ನಡ [illegible] ಉಮೇದ್ವಾರರಾಗಿರುವವರ ಯೋಗ್ಯತೆಗಳ ವಿಷಯವಾಗಿಯೂ ಒಬ್ಬ ಮಲಯಾಳಿಯು ಬರೆದಿರುವ [illegible] ಲೇಖ[illegible] ನಮ್ಮ ಹಸ್ತಗತವಾಗಿರುವವು.

~~~~~~

ಸೂಚನೆ.

~~~~~~

ಮೆಸ್ಸರ್ ಡಿ ವಾಸ್ ಎಂಡ್ ಸನ್ಸ್ ಇವರ ಮೂಲಕ [illegible] ತಿಳಿಯಪಡಿಸುವದೇನಂದರೆ — ಇದೇ [illegible] ನಮ್ಮ [illegible] ಕೆಲಸ ಮಾಡುತ್ತಿದ್ದ ಚಿನ್ನಪ್ಪ ನಾಲಿನ್ಸ [illegible] ಕೆಲಸಗಾರನನ್ನು ಬಿಟ್ಟಿರುವೆವು [illegible] ಕೆಲಸಗಾರನ ಕೂಡ [illegible] ಸಲ್ಲತಕ್ಕ [illegible] ನಮ್ಮಿಂದ ಕೊಡತಕ್ಕ [illegible] ಕೆಲಸವಾದ [illegible] ಕೊಟ್ಟ ಪಕ್ಷಕ್ಕೆ ನಾವು ಜವಾಬುದಾರರಲ್ಲ [illegible] ವ್ಯಾಪಾರ[illegible] ವಿಲ್ಲ.

ಡಿ ವಾಸ್ ಎಂಡ್ ಸನ್ಸ್

~~~~~~

ಮಂಗಳೂರು ಡಿಸ್ಟ್ರಿಕ್ಟ್ ಬೋರ್ಡು ಮತ್ತು ಜಿಲ್ಲಾ ವ್ಯವಸಾಯ ಸಂಘದವರ ಸಭೆಗಳು ಈ ತಿಂಗಳ ತಾ 22ರಲ್ಲಿ ಕಲೆಕ್ಟರರವರ ಆಫೀಸಿನಲ್ಲಿ ಜರಗುವವು.

ಇಲ್ಲಿಯ ಆಕ್ಟಿಂಗ್ ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರಾದ ಮ. ರಾ. ರಾ. ಕುಂಜ [illegible] ರಾಮನ್ನರವರು [illegible] ಜರಿ ಟ್ರೈನಿಂಗ್ ಯಾ ಖಜಾನಾ ತರಬೇತಿಯನ್ನು 6 ವಾರಗಳ ವರೇಗೆ ಪಡಿಯುವರು. ಕಡೆ ಎರಡು ವಾರಗಳಲ್ಲಿ ಇವರ ಚಾರ್ಜನ್ನು ಖಜಾನಾ ಡಿಪ್ಯುಟಿ ಕಲೆಕ್ಟರ್ ಮ. ರಾ. ರಾ. ರಗತೆ ರಾಮರಾಯರವರು ನೋಡುವರು.

ಈ ತಿಂಗಳ ತಾ. 20ರಲ್ಲಿ ಜಿಲ್ಲಾ [illegible] ಸ್ಥಳಗಳಲ್ಲಿ ತಹಸೀಲ್ದಾರ ಮತ್ತು ಡಿಪ್ಯುಟಿ ತಹಸೀಲ್ದಾರ [illegible] ಮುಂದೆ ಯಾ ಜಿಲ್ಲಾ ಪಟ್ಟಣದಲ್ಲಿ ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರವರ ಸಮಕ್ಷಮದಲ್ಲಿ ಮೇ. ಕೃಷ್ಣನಾಯರರ ಬದಲಿಗೆ ಆರಿಸಲ್ಪಡಬೇಕಾದ ನ್ಯಾಯವಿಧಾಯಕ ಸಭೆಯ ಮೆಂಬರುತನದ ಬಗ್ಗೆ ಉಮೇದ್ವಾರರವರ ನೇಮಕವು ಹಗಲು ಘಂಟೆ 12ರಿಂದ 2ರ ತನಕ ಮಾಡಲ್ಪಡುವುದು. ಬರುವ ತಿಂಗಳ ತಾ 3ರಲ್ಲಿ ಈ ನೇಮಕ ಪತ್ರಗಳ ತನಿಖೆ ಮಾಡಲ್ಪಟ್ಟು ತಾ 12ಕ್ಕೆ ಮೆಂಬರರ ಚುನಾವಣೆ ಬಗ್ಗೆ ವೋಟುಗಳು ಕೊಡಲ್ಪಡುವವು. ತಾ. 16ರಲ್ಲಿ ಆಯಾ ಉಮೇದ್ವಾರರ ವೋಟುಗಳು ಎಣಿಸಲ್ಪಟ್ಟು ನಂತರದಲ್ಲಿ ಚುನಾಯಿಸಲ್ಪಟ್ಟವರ ಹೆಸರು ಪ್ರಕಟಿಸಲ್ಪಡುವುದು.

ರೋಮನ್ ಕೆಥೋಲಿಕ್ ಗುರು ಶ್ರೇಷ್ಠರಾದ ಪೋಪ ಸಾಹೇಬರ [illegible]ನೇ ವರುಷದ ವರ್ಧಂತಿಯು ಕೆಲವು ದಿವಸಗಳ ಹಿಂದೆ ರೋಮಾ ಪಟ್ಟಣದಲ್ಲಿ ಆಚರಿಸಲ್ಪಟ್ಟಿತಾಗಿ ಕೇಳುತ್ತೇವೆ.

ಇಲ್ಲಿಯ ಸೈಂಟ್ ಅಲೋಸಿಯಸ್ ಕೊಲೇಜಿನ ರೆಕ್ಟರರಾಗಿ ಫಾದರ್ [illegible] ನಂತರ ಪಾದರ್ ಫೆಜ್ಜಿಯವರಿಗೆ ಆ ಪದವಿಯು ದೊರಕುವ ಸಂಭವವಿರುವುದೆಂತ ಪ್ರಕಟಿಸಿತ್ತು. ಪಾದರ್ [illegible] ಯವರೊಂದಿಗೆ 'ಜಂಟ್ಲಮನ್ ಸೂಪರಿಂ[illegible]ನ ತಿಕರರಾದ ಪಾದರ್ ಫೆರಾಚಿಯವರೂ ಪಾದರ್ ಪೆರ್ರಿಯವರೂ ಈ ಪದವಿಗೆ ಉಮೇದ್ವಾರರಾಗುವ ಸಂಭವವಿರುವುದಂತೆ.

ಕಂಕನಾಡಿಯ ಆಸ್ಪತ್ರೆಯ ಸ್ಥಾಪಕರಾದ ಫಾದರ್ ಮುಲ್ಲರರವರು [illegible] ಸ್ವಲ್ಪ ಗುಣ ಹೊಂದಿದವರಾಗಿ ತಿಳಿಸಲು ಸಂತೋಷಪಡುತ್ತೇವೆ. ಫಾದರ್ ಮುಲ್ಲರರವರು ತಮ್ಮ ಆಸ್ಪತ್ರೆ ಮೊದಲಾದವುಗಳನ್ನು ಜೆಜುಯಿಟ್ [illegible] ಕೊಟ್ಟಿರುವರಂತೆ. 'ಕಲ್ಲಿಕೋಟೆಯಿಂದ [illegible] ಫಾದರ್ [illegible]ಸಿಯವರು ಈ ಆಸ್ಪತ್ರೆ ಮೊದಲಾದವುಗಳ [illegible] ವಹಿಸಿಕೊಂಡಿರುವರು.

ಪುಟ 10 ನ್ನು ನೋಡಿರಿ.

ಲಾಭ! ಹೊಸ ಪುಸ್ತಕ!!

ಸಚಿತ್ರ ಕಲಾರಂಗ I ನೇ ಭಾಗ

~~~~~~

[illegible] ಈ ಪತ್ರಿಕೆಯ ಚಂದಾದಾರರಿಗೂ, ಸ್ಕೂಲು [illegible]ರಿಗೂ, ಮತ್ತು ವಿದ್ಯಾರ್ಥಿಗಳಿಗೆ ಒಂದು ರೂಪಾಯಿಗೆ ದೊರೆಯುವುದು. ಇತರರಿಗೆ ರೂಪಾಯಿ 1—4—0

ಎಂ ಕೆ ವಲ್ಲಭ ಐಯಂಗಾರ್,
ಬೀರೂರು.

~~~~~~

ಜೀವಸುಗಳ ಧಾರಣೆ, ಮಂಗಳೂರು (ರುಪಾಂ)

ಕೂಳೂರು ಮಸ್ಸತಿ ಅಕ್ಕಿ ..	4—13—0
ಗುಡ್ಡು ಮಸ್ಸತಿ ..	4—8—0
ಮಸ್ಸತಿ ಮ[illegible]	4—8—0
ವಕ್ಷ ಸುಗ್ಗಿ	4—7—0
ಸುಗ್ಗಿ ದ[illegible] ..	4—4—0
ಮಸ್ಸತಿ ಬೆಳ್ತಿ ..	5—11—0
ರಂಗೂನ್ ಬೆಳ್ತಿಗೆ ಗೋಣಿ	7—15—0
ಸುರುಳಿ ಗೋಣಿ [illegible] ಮುಡಿ 2ರ	6—2—0
ಉಪ್ಪು ಗೋಣಿ 1ರ	3—12—0
ಮೊಸ ಹಿಂಡಿ 1ರ	110—0—0
ಕೊಪ್ಪರಿ ಎಣ್ಣೆ ಮಣ	7—0—0
ಕಾಪಿ ಹಿಂಡಿ 1ರ	175—0—0
ಕಾಳು ಮೆಣಸು ಹಿಂಡಿ	127—8—0
ಹೊಸ ಬಿಳಿ ಗೋಟು ಅಡಿಕೆ	78—0—0
ಕರಿ ಗೋಟು	62—0—0
ಏಲಕ್ಕಿ ಮಣ 1ರ	28—0—0

[illegible] ಪುಸ್ತಕಗಳು [illegible]

1.	[illegible] (ಕನ್ನಡ ಟೀಕು) …	0—2—0
2.	ನಕ್ಷತ್ರ [illegible] … …	0—4—0
3.	ಬಾಲಗ್ರಹ ಚಿಕಿತ್ಸೆ (ಮಕ್ಕಳ ವೈದ್ಯ)	0—2—0
4.	63 [illegible]ರ ಕಥೆ.	1—8—0
5.	[illegible] …	0-12—0
6.	ರಾಜಶೇಖರ ವಿಲಾಸ	0—8—0
7.	ವೀರಶೈವ ಮತಸಾರ	0—6—0
8.	[illegible]ಶ್ವರ ವಚನಾ	0—6—0
9.	ಕೈವಲ್ಯ ಕಲ್ಪವಲ್ಲರಿ …	0-10—0
10.	ಅನುಭವಸಾರ	0—8—0
11.	ವೈದ್ಯಸಾರ ಸಂಗ್ರಹ ಅಪೂರ್ವವಾದ ಅತ್ಯುಪಯೋಗವಾದ ಗ್ರಂಥ (ಕ ಟಿ)	3—0—0
12.	ಶ್ರೀವಿಷ್ಣುಸಹಸ್ರನಾಮ ಸ್ತೋತ್ರ (ತ್ರಿಮತ ಟೀಕಾ ತಾತ್ಪರ್ಯ)	3—0—0
13.	ಶಿವಾನಂದಲಹರಿ (ಕನ್ನಡ ಟೀಕು ತಾತ್ಪರ್ಯ ಸಹಿತ)	0—6—0
14.	ಉದಕಶಾಂತಿ ಮಂತ್ರ	0—2—0
15.	ಕಾಲಾಮೃತ (ಕ ಟಿ) ಉತ್ತಮ	0 12—0
	,, ,, ಸಾದಾ	0—8—0

ಇವುಗಳಲ್ಲದೆ ಇನ್ನೂ ನೂರಾರು ಇತರ ಪುಸ್ತಕಗಳು ದೊರೆಯುವವು

ವಿಳಾಸ — ಮ್ಯಾನೇಜರ್,

ಕನ್ನಡ ಪ್ರಕಾಶಿಕಾ ಪುಸ್ತಕಶಾಲೆ,

ಬೆಂಗಳೂರು ಸಿಟಿ

ಅಜಮಾಯಿಷಿ ಮಾಡಿ ನೋಡಿರಿ, ಧಾರಣಿ ಸುಲಭ

ನಾವು ಉತ್ತಮವಾದ ಕೆಂಪು ರಬ್ಬರಿನಲ್ಲಿ ತಯ್ಯಾರಿಸಿದ, ಫೂಟ್‌ಬೋಲ್ ಬ್ಲ್ಯಾಡರ್‌ಗಳನ್ನು ಮತ್ತು ನಯವಾಗಿಯೂ ಮಜಬೂತಾಗಿಯೂ ಮಾಡಿರುವ ಕವರುಗಳನ್ನು ನೇರವಾಗಿ ವಿಲಾಯತಿಯಿಂದ ತರಿಸುತ್ತೇವೆ

1ನೇ ನಂ. ಫೂಟ್‌ಬೋಲ್ 1ಕ್ಕೆ 2—8—0 ಖಾಲಿ ಬ್ಲ್ಯಾಡರ್ 1ಕ್ಕೆ 1—0—0
2 ,, ,, ,, 1ಕ್ಕೆ 3—0—0, ,, ,, 1ಕ್ಕೆ 1—4—0
3 ,, ,, ,, 1ಕ್ಕೆ 4—0—0, ,, ,, 1ಕ್ಕೆ 1—8—0
4 ,, ,, ,, 1ಕ್ಕೆ 4-12—0, ,, ,, 1ಕ್ಕೆ 1-12—0
5 ,, ,, ,, 1ಕ್ಕೆ 5-12—0, ,, ,, 1ಕ್ಕೆ 2—0—0

ಫೂಟ್‌ಬೋಲ್ ಇನ್‌ಪ್ಲಾಟರುಗಳು 1ಕ್ಕೆ 1-4 0, 1 8 0, 1 12-0, 2—4—0, 2—8—0, 3—0—0, 3—8—0, 4—0—0

ಛಳಿಕಾಲಕ್ಕೆ ಶಾಖವಾಗಿಯೂ, ಬಹಳ ನಯವಾಗಿಯೂ, ಬಹುಕಾಲ ಬಾಳಿಕೆ ಬರುವ ವಿಲಾಯಿತಿ ಉಲನ್ ರಗ್ಸ್

	ಸೈಜು	60×100	62′×110
K	ನಂಬ್ರ	6—8—0,	7—0—0
R	ನಂಬ್ರ	8-12—0,	9—8—0
S	ನಂಬ್ರ	12—8—0,	13—8—0
J	ನಂಬ್ರ	13—8—0,	14—8—0
L	ನಂಬ್ರ	16—8—0,	18—0—0

ಬಹಳ ನಯವಾಗಿ ನೇದಿರುವ ರಂಗುವಾರಿ ಚಿತ್ರಗಳುಳ್ಳ (ಬೇಲ್ದಾರಿ, ಬುಟ್ಟಾದಾರಿ) ಒಂಟೇ ಕೂದಲು ರಗ್ಸ್

A. ನಂಬ್ರ 1ಕ್ಕೆ 12—14—0 60×90″
E. ನಂಬ್ರ 1ಕ್ಕೆ 16—10—0, 60′×90′
[illegible] 17— 0—0, 60′×″ ಬಹಳ ನಯವಾದದ್ದು.
F. ನಂಬ್ರ 1ಕ್ಕೆ 22—0—0, 60″×90′

ನಮ್ಮಲ್ಲಿ ಅಲ್ಯೂಮಿನಿಯಮ್ ಪಾತ್ರೆಗಳು ಬಹಳ ರಖಂ ಉಂಟು. ಗಂಜಿಪಾತ್ರೆಗಳು, ಡಿಕ್ಸಾಗ್ಗಳು, ಲೋಟಾಗಳು, ಕೊಂಬು ಲೋಟಾಗಳು, ಸಾದ ಟಂಬ್ಲರುಗಳು, ಕೈಪ್ಲೆ ಕೂಜಾಗಳು, ತಟ್ಟೆಗಳು ವಗೈರೆ ಸಾಮಾನುಗಳು ಬಹಳವಾಗಿವೆ.

ಆವಲ್ ರಖಂ ಪೌಂಡು ತೂಕಕ್ಕೆ 1 10—0
ಮಧ್ಯಂ 1—7—0.
ಸಾಧಾರಣ 1—4—0.

[illegible]

ಬೆಂಗಳೂರು ಸಿಟಿ

[illegible] ವಿಗ್ರಹಗಳು

1ಕ್ಕೆ ರೂಪಾಯಿ 2—0—0, 2—8—0, 3—0—0.

ಅನಂತನ ದಾರಗಳು

ರೂಪಾಯಿ 1ಕ್ಕೆ 4, 6, 8, 10, 12, 16 ಜೊತೆಗಳು ಹಾಸಲು ಪ್ರತ್ಯೇಕ.

ಹೆಚ್ ಎನ್ ರಾವ್ ಬ್ರದರ್ಸ್,

ಚಿಕ್ಕಪೇಟೆ ಬೆಂಗಳೂರು ಸಿಟಿ.

"ವಿದ್ಯಾನಂದ" ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಭಾತ್ಪರ್ಯ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ತಿ ಪ್ರಿಂಟಾಗಿ ಸಿದ್ಧವಾಗಿದೆ ಬೆಲೆ 1—0—0

ಮುಕುಂದಮಾಲಾ ಸ್ತೋತ್ರ

ಹೆಚ್ಚು ಪಾಠಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಇರುತ್ತದೆ ಬೆಲೆ 0—4—0

ವಿಳಾಸ - ಮ್ಯಾನೇಜರ್,

ವಿದ್ಯಾನಂದ ಆಫೀಸು,

ಚಿಕ್ಕಪೇಟೆ ಬೆಂಗಳೂರು ಸಿಟಿ

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು

ಮೈಮೆನ್‌ಸಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಿದ್ದಾರೆ

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸ ಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವುದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ, ಸುಗಂಧವುಳ್ಳದ್ದಾದ್ದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಇರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. 6 ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ್ ಕೆ. ಸಿ. ಸೆನ್, ಎಲ್. ಎಮ್. ಎಸ್.,

2 ಕಾರ್ನ್‌ವಾಲಿಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ [illegible]—ಎಲ್. ಪಿ. ಘುವಾಲ್ ಎಂಡ್ ಕೊ.,

[illegible] ಪೇಟೆ—ಬೆಂಗಳೂರು

[illegible]ಗೆ ಏಜೆಂಟರು:—ಮ॥ ರಾ॥ ರಾ॥ ಸಿ. [illegible]

ಅನುಭವಸಿದ್ಧವಾದ ವನೌಷಧಗಳು

೧. **ಕುಂತಳಾನಂದ ತೈಲವು** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ ೧೦ ಆಣೆ.

೨ ಪ್ರಮೇಹಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ

೩. **ಕಾಮೇಶ್ವರ ಮಾತ್ರೆ** ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ **ನಪುಂಸಕತ್ವ** ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ

೪. **ಪಂಚಜೀರಕ ಪಾಕ.** ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷ**ಗಳನ್ನೂ** ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ

೫. **ಸೂರಣಾವಲೇಹ.** ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ **ಮೇಲೆ** ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ

೬. **ಪ್ಲೀಹೋದರಾರಿ ಚೂರ್ಣ** ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ **ದಾರುಣವಾದ** ಜ್ವರದ ಗೆಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ**ಪಡಿಸುವದು.** ತಿಂಗಳ ಔಷಧಕ್ಕೆ ಒಟ್ಟು ೩ ರೂ ೮ ಆಣೆ

೭. **ಜಗನ್ಮೋಹನ ದಂತಮಂಜನ** ದಂತ ಸಂಬಂಧವಾದ ಸರ್ವ ಬಾಧೆ**ಗಳನ್ನು** ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ **ವನೌಷಧಗಳಿಂದ** ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ

೮ **ಸರಳಭೇದಿ ಮಾತ್ರೆ** ಅಯಾಸವನ್ನುಂಟುಮಾಡದ ಸುಖ ವಿರೇಚಕವು **ತೊಲೆಗೆ** ೨ ರೂ

೯ **ಮಹಾಜ್ವರಾಂಕುಶ ಮಾತ್ರೆ** ಚಳಿಜ್ವರ, ಮರಿಸಲು [illegible] ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವಲೇಹ. ಕೆಮ್ಮು, ಗುಲ್ಮ, ಶ್ವಾಸ, ಕಫ, **ಕ್ಷಯಗಳ ಮೇಲೆ** ರಾಮಬಾಣವು. ರಾತಲಿಗೆ ೨ ರೂ

೧೧ ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ **ಧಾತುಪತನ,** ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು **ಹೋಗ**ಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. **ರಾತಲಿಗೆ ೨ ರೂ.**

೧೨ ವಾತಮುರಾರಿ ಬಾಮ್. ತಲೆನೋವು, ಎದೆನೋವು, **ಸೊಂಟ**ನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. **ಬಾಟ್ಲಿಗೆ** ೮ ಆಣೆ. ೩ ಬಾಟ್ಲಿಗೆ ೧ ರೂ ೬ ಆಣೆ

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ, **ಮುಂ**ತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. **ಉರಿಯು** ಇಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ. ೩ ಕರಡಿಗೆಗೆ ೧೧ **ಆಣೆ.**

೧೪ ಸಪ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು **ಪರಿಹರಿಸಿ** ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, **ಉಗ್ಗು ಮಾ**ತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು **ಬೆಳೆಯಿಸುವದು;** ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿ**ರಿಸುವದು.** ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. **ನಮ್ಮಲ್ಲಿ ಶಾಸ್ತ್ರೀಯ**ವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ **ದೊಡ್ಡ ಕನ್ನಡ** ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ **ರೋಗ** ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ **ಕನ್ನಡದಿಂದ**ಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ —

B. M. Nathu & Co.,
Ayurvedic Chemists,
Vepery Post, MADRAS.

ಕಮ್ಮಿ ಕ್ರಯ! ಸಪ್ಟಂಬ್ರ 30ನೇ ತಾ [illegible] ಅರ್ಧ ಕ್ರಯ!
ಅತ್ತರುಗಳಲ್ಲಿ ಪರಿಮಳವುಳ್ಳ ಅತ್ತರು ಯಾವದು?

ಮನೋಹರ ಅತ್ತರು.

ಸುವಾಸಿಕ ಪರಿಮಳ ಉಳ್ಳದ್ದೂ ಬಹುಕಾಲ ಬಟ್ಟೆಗಳಲ್ಲಿ ಇರುವ ಸರ್ವೋತ್ತಮ ಸುಗಂಧ ದ್ರವ್ಯವು. **ಬಾಟ್ಲಿ** ಒಂದರ 0—10—0 [illegible] ಬಾಟ್ಲಿಗಳಿಗೆ 1—13—0 [illegible] ಬಾಟ್ಲಿಗಳಿಗೆ 3—4—0 [illegible]

ಕೆ. ಗೋಪಾಲ್ ರಾವ್,
ನಂಬ್ರ 3 ಕಂಟ್ರಾಕ್ಟರ್ಸ್ ಬಿಲ್ಡಿಂಗ್
ಗಿರಗಾಂ ಮುಂಬಯಿ

Royal Indian Balm Depot.

ರೊಯಲ್ ಇಂಡಿಯನ್ ಬಾಮ್.

ವಾತದ ನಿವಾರಣೆಯಲ್ಲಿ ಅಗ್ರಸ್ಥಾನ ಹೊಂದಿದೆ!
ತಲೆನೋವು, ಸಂಧಿವಾತ ಮೊದಲಾದುದಕ್ಕೆ ಮುಖ್ಯೌಷಧ!
ಎದೆನೋವು, ಸೊಂಟದನೋವು ಇವುಗಳಿಗೆಲ್ಲಾ ಸುಖದಾಯಕ!
ಉಳುಕು, ಜಖಮು, ಚೇಳ್ಕುಕಡತ ಮೊದಲಾದುದಕ್ಕೆ ದಿವ್ಯೌಷಧ!

ಈ ನಮ್ಮ ರೊಯಲ್ ಇಂಡಿಯನ್ ಬಾಮಿನಿಂದ ಎಲ್ಲಾ ತರದ ನೋವುಗಳು ಮಾತ್ರಿಯಿಂದ ನಿಲ್ಲುವದು. ಬಾಟ್ಲಿ ಒಂದರ ಕಿಮ್ಮತು 0—[illegible]—[illegible]. 3 ಬಾಟ್ಲಿಗಳಿಗೆ 1—6—0. 6 ಬಾಟ್ಲಿಗಳಿಗೆ 2—10—0. ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು.

ಏಜಂಟರು, [illegible] ಕಂಪೆನಿ, ಗಿರಗಾಂ ಮುಂಬಯಿ.
Sole agent for M. Taluq.
[illegible]
ಬೇಕಲ ವೆಂಕಟ ರಾವ್, [illegible]
ಕೆ. ಎಸ್. [illegible] ಕಂಪೆನಿ, [illegible]

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, [illegible], ಅರ್ಧಾಂಗವಾಯು, ವಾತ, ಸಂದುವಾತ, ಶೀತ, ಕೆಮ್ಮು, ಗಂಟ್ಲುನೋವು, [illegible], ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ [illegible] ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು. ಡಬ್ಬಿ ೧ರ ಕ್ರಯ 0—8—0.
ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ 2—8—0.

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ.
ವಿ. ಪಿ. ಖರ್ಚು ಪ್ರತ್ಯೇಕ.

ಟಿ. ಬಾಬುರಾಯರು,
ಆಯುರ್ವೇದಿಕ್ ಔಷಧಾಲಯ,
[illegible] ರಸ್ತೆ, ಮಂಗಳೂರು, ದ. ಕ.

ನೇತ್ರಬಿಂದು



ಇದು ಕಣ್ಣಿನ ದೃಷ್ಟಿ ಮಾಂದ್ಯ, ಕಣ್ಣೀರು [illegible] ಹೊಗೆ, ಕೆಂಗಣ್ಣು, ರೆಪ್ಪೆ ಉದುರುವಿಕೆ ಈ ಮೊದಲಾದ ರೋಗಗಳಿಗೆ ಸಿದ್ಧೌಷಧವು. ಕ್ರಯ • ಬಾಟ್ಲಿ ೧ರ ರೂ. 0—8—0 ವಿ. ಪಿ. 0—4—0.

ಸಿದ್ಧಲಕ್ಷ್ಮೀವಿಲಾಸ—ಇದು [illegible] ರಕ್ತಶುದ್ಧಿ ಮಾಡುತ್ತದೆ. ಕ್ರಯ ಬಾಟ್ಲಿ ೧ರ 0-12-0 ವಿ. ಪಿ. 0—4—0

ಇದು ವಿನಹ [illegible]ಗಳೂ, ಅರಿಷ್ಟಗಳೂ, ಘೃತಗಳೂ, ಲೇಹಗಳೂ, [illegible]ಗಳೂ, ತೈಲ್ಯಗಳೂ, ಮಾತ್ರೆಗಳೂ, ಭಸ್ಮಗಳೂ [illegible] ದೊರೆಯುತ್ತವೆ.

ವಿಳಾಸ— ಧನ್ವಂತರಿ ಆಯುರ್ವೇದಿಕ್ ಔಷಧಾಲಯ,
ಮಂಗಳೂರು.

[illegible] Press Mangalore